ಕೂಹುಂಡಿನಾಡಿನ ಶಾಸನಗಳು: ಸಾಂಸ್ಕೃತಿಕ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು:

ಆರ್.ಬಿ. ಕೊಕಟನೂರ
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಕಾಲೇಜು,
ಮೂಡಲಗಿ

ಮಾರ್ಗದರ್ಶಕರು:

ಡಾ. ಆರ್.ಬಿ. ಚಿಲುಮಿ
ಸಹ ಪ್ರಾಧ್ಯಾಪಕರು,
ಎಸ್.ವಿ.ಇ.ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಹಾರೂಗೇರಿ

ಬಿ.ಆರ್. ದರೂರ ಸಂಶೋಧನ ಕೇಂದ್ರ, ಹಾರೂಗೇರಿ
ತಾಲ್ಲೂಕು : ರಾಯಬಾಗ ಜಿಲ್ಲೆ : ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೨

ಕೂಹುಂಡಿನಾಡಿನ ಶಾಸನಗಳು: ಸಾಂಸ್ಕೃತಿಕ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು :

ಆರ್.ಬಿ. ಕೊಕಟನೂರ

ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ ಪ್ರಥಮ ದರ್ಜೆ ಕಾಲೇಜು,
ಮೂಡಲಗಿ

ಮಾರ್ಗದರ್ಶಕರು:

ಡಾ. ಆರ್.ಬಿ. ಚಿಲುಮಿ

ಸಹ ಪ್ರಾಧ್ಯಾಪಕರು,
ಎಸ್.ವಿ.ಇ.ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಹಾರೂಗೇರಿ

ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ, ಹಾರೂಗೇರಿ

ತಾಲ್ಲೂಕು : ರಾಯಬಾಗ   ಜಿಲ್ಲೆ : ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ

೨೦೧೨

ಸಂಶೋಧಕನ ಪ್ರಮಾಣ ಪತ್ರ

"ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ"ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ಡಾ. ಆರ್.ಬಿ. ಚಿಲುಮಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಚರಿತ್ರೆ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮುಖಾಂತರ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ.
ದಿನಾಂಕ :

(ಆರ್.ಬಿ. ಕೊಕಟನೂರ)
ಎಂ.ಎ., ಎಂ.ಫಿಲ್., ಡಿಪ್.ಇನ್. ಎಪಿಗ್ರಫಿ
ಇತಿಹಾಸ ಸಹಾಯಕ ಪ್ರಾಧ್ಯಾಪಕರು,
ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರಕಾರಿ

ಮಾರ್ಗದರ್ಶಕರ ದೃಢೀಕರಣ ಪ್ರಮಾಣ ಪತ್ರ

ಶ್ರೀ ಆರ್.ಬಿ. ಕೊಕಟನೂರ ಅವರು **"ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುವರು. ಚರಿತ್ರೆ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮುಖಾಂತರ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವರು. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :

(ಡಾ. ಆರ್.ಬಿ. ಚಿಲುಮಿ)
ಎಂ.ಎ., ಪಿಎಚ್.ಡಿ.
ಕನ್ನಡ ಪ್ರಾಧ್ಯಾಪಕರು
ಎಸ್.ವ್ಹಿ.ಇ.ಎಸ್. ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಹಾರೂಗೇರಿ

ಸಂಶೋಧನ ಕೇಂದ್ರದ ನಿರ್ದೇಶಕರ ದೃಢೀಕರಣ ಪತ್ರ

ಶ್ರೀ ಆರ್.ಬಿ. ಕೊಕಟನೂರ ಅವರು **"ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ಡಾ. ಆರ್.ಬಿ. ಚಿಲುಮಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಚರಿತ್ರೆ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮುಖಾಂತರ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವರು. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :

(ಡಾ. ವ್ಹಿ.ಎಸ್. ಮಾಳಿ)
ಎಂ.ಎ., ಪಿಎಚ್.ಡಿ.
ನಿರ್ದೇಶಕರು ಮತ್ತು ಕನ್ನಡ ಪ್ರಾಧ್ಯಾಪಕರು,
ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ
ಎಸ್.ವ್ಹಿ.ಇ.ಎಸ್. ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಹಾರೂಗೇರಿ

ಕೃತಜ್ಞತೆಗಳು.

"ಕೂಹುಂಡಿ ನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನೆಯನ್ನು ಕೈಕೊಂಡು ಪ್ರಬಂಧವನ್ನು ಬರೆಯುವ ಆರಂಭದಿಂದ ಕೊನೆಯವರೆಗೂ ನಾನು ಅನೇಕ ಸಂಘ–ಸಂಸ್ಥೆಗಳ, ವಿದ್ವಾಂಸರ, ಗೆಳೆಯರ ಹಾಗೂ ಜನರ ನೆರವು ಪಡೆದಿದ್ದೇನೆ. ಅವರಿಗೆಲ್ಲರಿಗೂ ನನ್ನ ಕೃತಜ್ಞತೆಯನ್ನು ಹೇಳುವುದು ನನ್ನ ಆಧ್ಯ ಕರ್ತವ್ಯವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ ಹಾಗೂ ಎಂ.ಫಿಲ್ ಪದವಿಯನ್ನು ಪಡೆದು 2007ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ಶ್ರೀ ಬಿ.ಆರ್. ಸಂಶೋಧನಾ ಕೇಂದ್ರ, ಹಾರೂಗೇರಿ ಇಲ್ಲಿ ಸಂಶೋಧನೆಯನ್ನು ಕೈಕೊಳ್ಳಬೇಕೆಂಬ ಆಸೆಯಿಂದ ಪಿ.ಎಚ್‌ಡಿ ಸಂಶೋಧನಾ ವ್ಯಾಸಂಗ ಕೈಕೊಳುವ ಇಚ್ಚೆಯಿಂದ ಡಾ. ಆರ್.ಬಿ.ಚಿಲುಮಿ ಇವರಲ್ಲಿ ನನ್ನ ಇಚ್ಚೆಯನ್ನು ವ್ಯಕ್ತಪಡಿಸಿ, ಅವರಿಗೆ ತಾವು ಮಾರ್ಗದರ್ಶಕರಾಗಬೇಕೆಂದು ಕೇಳಿಕೊಂಡಾಗ ಅವರು ಸ್ವ–ಸಂತೋಷದಿಂದ ಒಪ್ಪಿಕೊಂಡರು. ವಿಷಯ ಆಯ್ಕೆಯಲ್ಲಿ ನನ್ನಿಚ್ಚೆಗೆ ಸ್ವಾತಂತ್ರ್ಯ ಕೊಟ್ಟು ಅವರು ಅಧ್ಯಯನ ಆರಂಭಿಕ ಹಂತದಲ್ಲಿ ಶಾಸನಗಳನ್ನು ಓದುವುದರಿಂದ ಹಿಡಿದು, ಅವುಗಳನ್ನು ಅರ್ಥೈಸುವುದು, ಅವುಗಳಲ್ಲಿಯ ವಿಷಯಗಳನ್ನು ಪಟ್ಟಿಕೆಗಳಲ್ಲಿ ಬರೆದುಕೊಳ್ಳುವುದು ಅನಂತರ ವಿಷಯಗಳನ್ನು ಬೇರೆ ಬೇರೆಯಾಗಿ ವಿಭಜಿಸಿಕೊಂಡು ಬರವಣಿಗೆಗೆ ತೊಡಗುವ ಹಂತದವರೆಗೂ ತಾವು ದುಡಿಯುವುದರ ಜೊತೆಗೆ ನನ್ನನ್ನೂ ದುಡಿಸಿ ಅಧ್ಯಯನದ ಪ್ರತಿ ಹಂತವನ್ನು ಪರಿಶೀಲಿಸಿ ಈ ಮಹಾಪ್ರಬಂಧ ಹೊರ ಬರಲು ಕಾರಣರಾದ ಅವರಿಗೆ ಮೊದಲು ನನ್ನ ಶಿರಸಾಷ್ಟಾಂಗ ನಮಸ್ಕಾರಗಳು.

ಈ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ವ್ಹಿ.ಎಸ್.ಮಾಳಿ ಅವರಿಗೂ ನನ್ನ ಪ್ರಣಾಮಗಳು. ಇನ್ನುಳಿದಂತೆ ಶ್ರೀ ವೃಷಭೇಂದ್ರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಧ್ಯಾಪಕ ವೃಂದದವರಿಗೂ ಭೋಧಕೇತರ ಸಿಬ್ಬಂದಿಯವರಿಗೂ ನನ್ನ ಹೃದಯದ ಅಭಿನಂದನೆಗಳು.

ಮೂಡಲಗಿ ಗ್ರಾಮದ ಶ್ರೀ ಶಿವಭೋಧರಂಗ ಸಿದ್ಧ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀಪಾದಬೋಧ ಸ್ವಾಮೀಜಿಯವರಿಗೂ ನನ್ನಶಿರಸಾಸ್ಟಾಂಗ ನಮಸ್ಕಾರಗಳು. ನಮ್ಮ ಮಹಾವಿದ್ಯಾಲಯದ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೂ ನನ್ನ ನಮನಗಳು.

ಈ ಪ್ರಬಂಧದ ರಚನೆಯ ಪ್ರತಿ ಹಂತದಲ್ಲಿಯೂ ಸಲಹೆ, ಸ್ಫೂರ್ತಿ ನೀಡಿದ ತಂದೆ–ತಾಯಿ, ಚಿಕ್ಕಪ್ಪ ಬಾಬು ಚಿಕ್ಕಮ್ಮಾ ಶಾಂತಕ್ಕ, ಚಿಕ್ಕಪ್ಪ ಶ್ರೀ ಆಯ್.ಆರ್.ಕೊಕಟನೂರ ಹಾಗೂ ಚಿಕ್ಕಮ್ಮಾ ಶ್ರೀಮತಿ ಶಿವಲೀಲಾ ಆಯ್.ಕೊಕಟನೂರ, ಹಾಗೂ ಎಲ್ಲ ಸಹೋದರರಾದ ರಾವಸಾಹೇಬ, ಶ್ರೀಕಾಂತ, ಬ್ರಹ್ಮಾನಂದ, ರಮೇಶ ಹಾಗೂ ರಾಘವೇಂದ್ರ ಎಲ್ಲರಿಗೂ ಕೃತಜ್ಞತೆಗಳು. ಪ್ರಭಂದ

ರಚನೆಯ ಪ್ರತಿ ಹಂತದಲ್ಲಿಯೂ ಅಮೂಲ್ಯವಾದ ಸಲಹೆ ಸೂಚನೆ ನೀಡಿದ ಡಾ. ಅಪ್ಪಣ್ಣ ಹಂಜೆಯವರನ್ನು ನೆನೆಯದೆ ಇರಲಾರೆನು.

ನಮ್ಮ ಮಹಾವಿದ್ಯಾಲಯದ ಸಹೋದ್ಯೋಗಿ ಮಿತ್ರರಾದ ಶ್ರೀ ಪಿ.ಎ. ಘಂಟಿ, ಶ್ರೀ ರವಿ ಗಡದನ್ನವರ, ನಾಗಸುರೇಶ, ಶ್ರೀಧರ, ಆದಿನಾಥ ಉಪಾಧ್ಯೆ, ಎಸ್.ಎನ್. ಕೊಕಟನೂರ ಶ್ರೀಮತಿ ಕಲ್ಪನಾ ಪೈನಗೋನಿ, ಶ್ರೀಮತಿ ಶಿವಲೀಲಾ, ವೀಣಾ ಮೂಗನೂರ, ಯಶೋಧಾ, ಸುರೇಶ ಹನಗಂಡಿ, ಯರಿಯಪ್ಪ, ಕು.ಶೋಭಾ ತಪಸಿ, ಪ್ರಕಾಶ ಕುಂದರಗಿ, ಮಹಾಂತೇಶ ಘಟ್ಟಿಗನೂರ, ದಯಾನಂದ ಮಟ್ಟಿಕಲ್ಲಿ, ಎಸ್.ಎಮ್. ನದಾಫ್, ಶ್ರೀನಿವಾಸ ಆಜೂರೆ, ಪ್ರಕಾಶ ವಡ್ರಾಳೆ, ಎಸ್.ಎಮ್. ನಿಂಗನೂರ, ಮಹಾದೇವ ಪೋತರಾಜ, ಕೆ.ಆರ್.ದೊನವಾಡ, ಎ.ಜಿ.ಗಿರೆನ್ನವರ, ಅಡವೆಪ್ಪ ನಸಬಿ, ಶಿವಾಜಿ ಮುಳಿಕ, ಲತಾ ಮಂದ್ರೋಳಿ, ಶ್ರೀಮತಿ ಎಸ್.ಎಚ್. ಮಾಸ್ತಿ, ವಸಂತ ನಾನಪ್ಪಗೊಳ, ಅರುಣ ಕಡಾಡಿ, ಸದಾಶಿವ ಹೊಸಮನಿ ಇನ್ನುಳಿದ ಎಲ್ಲ ಸಹೋದ್ಯೋಗಿಗಳಿಗೆ ಹಾಗೂ ಮಹಾವಿದ್ಯಾಲಯದ ಎಲ್ಲ ವಿದ್ಯಾರ್ಥಿ/ನೀಯರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

ನನ್ನ ಸಂಶೋಧನೆಗೆ ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಿತ್ರರಿಗೆ, ಪೋಟೋ ತೆಗೆಯಲು ಸಹಕರಿಸಿದ ಸಿದ್ದು ಸವದಿ, ಮಲ್ಲಿಕಾರ್ಜುನ ಬಾಗೇವಾಡಿ, ಇತಿಹಾಸ ಪ್ರಾಧ್ಯಾಪಕರಿಗೆ ಹಾಗೂ ಎಲ್ಲ ಗುರು ಹಿರಿಯರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪರಿವಿಡಿ

ಅನುಬಂಧಗಳು

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧.೫. ಅಧ್ಯಯನದ ಪ್ರಧಾನ ಆಕರಗಳು

೧.೬. ಅಧ್ಯಯನದ ವಿಧಾನ

೧.೭. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಪೀಠಿಕೆ

೨೦ನೆಯ ಶತಮಾನದಿಂದೀಚೆಗೆ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನದ ಅರ್ಥ, ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ ಮತ್ತು ಅಧ್ಯಯನದ ವಿಷಯಗಳ ಹರವು ವಿಸ್ತಾರವಾಗುತ್ತ ನಡೆದಿದೆ. ಅಂದರೆ ಅರಸು ಮನೆತನಗಳು, ಆಳರಸರಾದಿ ಅಧಿಕಾರಿಗಳ ಜೀವನ ಮತ್ತು ರಾಜಕೀಯ ಅಧ್ಯಯನದ ಜೊತೆಗೆ ಸಮಕಾಲೀನ ಭೌಗೋಳಿಕ ಪರಿಸರ, ಅಧಿಕಾರಿಗಳು, ಆಡಳಿತ, ಧರ್ಮಗಳು, ಸಮಾಜ, ಅರ್ಥವ್ಯವಸ್ಥೆ, ಸಾಹಿತ್ಯ, ಭಾಷೆ, ಶಿಕ್ಷಣ, ಸಂಸ್ಕೃತಿ, ವಾಸ್ತುಕಲೆ, ಶಿಲ್ಪಕಲೆ, ಚಿತ್ರಕಲೆ, ಶಾಸನಗಳು, ಸ್ಮಾರಕಗಲ್ಲುಗಳು, ಮೇರೆಗಲ್ಲುಗಳು, ಸಂಸ್ಥಾನಗಳು, ಬುಡಕಟ್ಟು ಜನಾಂಗಗಳು, ದೇಸಗತಿ ಮನೆತನಗಳು, ವಾಡೆಗಳು ಮೊದಲಾದ ಆಯಾಮಗಳಲ್ಲಿಯೂ ಚರಿತ್ರೆ ಅಧ್ಯಯನದ ಸ್ವರೂಪವು ವೈಜ್ಞಾನಿಕ ನೆಲೆಗಟ್ಟಿನಲ್ಲಿ ವಿಶ್ಲೇಷಣಾತ್ಮಕ, ವಿಮರ್ಶಾತ್ಮಕ ಕ್ರಮಗಳನ್ನು ಮತ್ತು ತತ್ವಗಳನ್ನು ಬಳಸಿಕೊಳ್ಳುತ್ತ ವಸ್ತುನಿಷ್ಠ ದೃಷ್ಟಿಯಿಂದ ವಿಸ್ತೃತವಾಗುತ್ತಿದೆ. ಜೊತೆಗೆ ಚರಿತ್ರೆಯ ರಂಗದಲ್ಲಿ ನೂತನ ಶಾಖೆಗಳು ತಲೆ ಎತ್ತಿಕೊಂಡಿವೆ. ಪ್ರಾದೇಶಿಕ ನಾಡು-ನುಡಿಗಳಿಗೆ ಸಂಬಂಧಿಸಿದಂತೆ ಚರಿತ್ರೆಗಳೂ ಬಹು ಮುಖ್ಯವೆನಿಸುತ್ತಿವೆ.

ಒಂದು ನಾಡು ಅಥವಾ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿ ಸಮಗ್ರವಾಗಿ ರೂಪುಗೊಳ್ಳುವಲ್ಲಿ ಪ್ರಾದೇಶಿಕ ಅಧ್ಯಯನಗಳ ಪಾತ್ರ ತುಂಬಾ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ ಕನ್ನಡನಾಡಿನ ಪ್ರಾಚೀನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಹೊಸ ಹೊಸ ದೃಷ್ಟಿಕೋನಗಳು ಮತ್ತು ವಿಧಾನಗಳಿಂದ ಗಮನಿಸುವ ಅಧ್ಯಯನಗಳು ಕಳೆದ ಶತಮಾನದಿಂದೀಚೆಗೆ ಹಲವು ಬಗೆಯಲ್ಲಿ ನಿರಂತರವಾಗಿ ನಡೆಯುತ್ತ ಬಂದಿವೆ. ಹೀಗಾಗಿ ಈ ನಾಡಿನ ಪ್ರಾಚೀನ ಮತ್ತು ಅರ್ವಾಚೀನ ಚರಿತ್ರೆ ಹಾಗೂ ಸಂಸ್ಕೃತಿಯ ವಿವಿಧ ಆಯಾಮಗಳ ಹೊಸ ಹೊಸ ಸಾಂಸ್ಕೃತಿಕ ವಿಚಾರಗಳು ಬೆಳಕು ಕಾಣುತ್ತಿವೆ. ಅಂತಹ ಅಧ್ಯಯನ ವಿಧಾನದಲ್ಲಿ ಪ್ರಾಚೀನ ಆಡಳಿತ ವಿಭಾಗಗಳನ್ನು ಗಮನಿಸುವ ದೃಷ್ಟಿಕೋನ ಗಮನಾರ್ಹವಾದ ರೀತಿಯಲ್ಲಿ ಬದಲಾವಣೆಯನ್ನು ಪಡೆಯುತ್ತಿದೆ. ಒಂದು ಆಡಳಿತ ವಿಭಾಗವನ್ನು ಕೇಂದ್ರವಾಗಿಟ್ಟುಕೊಂಡು ಕೈಗೊಳ್ಳುವ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂಶೋಧನ ಅಧ್ಯಯನವು ಆ ಆಡಳಿತ ವಿಭಾಗದಲ್ಲಿ ಆಳ್ವಿಕೆ ಕೈಗೊಂಡಿದ್ದ ಅಥವಾ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳ ರಾಜಕೀಯ ಹಿನ್ನೆಲೆ, ಸಮಕಾಲೀನ ಆಡಳಿತ ಸ್ವರೂಪ, ಆಡಳಿತವರ್ಗ, ಧರ್ಮಗಳು, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ, ಸಾಂಸ್ಕೃತಿಕ ಜೀವನ, ಸಾಹಿತ್ಯ, ಸಂಸ್ಕೃತಿ, ವಾಸ್ತುಕಲೆ, ಶಿಲ್ಪಕಲೆ ಮೊದಲಾದವುಗಳನ್ನು ವಸ್ತುನಿಷ್ಠವಾಗಿ ಗುರುತಿಸಲು ಸಾಧ್ಯವಾಗುತ್ತದೆ.

ಮಗಧದ ನಂದ ಮನೆತನದಿಂದ ವಿಜಯನಗರೋತ್ತರ ಕಾಲದವರೆಗೂ ಕನ್ನಡನಾಡನ್ನಾಳಿದ ಮತ್ತು ಇಲ್ಲಿ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಬಹುತೇಕ ಅರಸು ಮನೆತನಗಳು ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ರಾಜ್ಯ, ಮಂಡಲ, ವಿಷಯ, ದೇಶ,

ಸೀಮೆ, ನಾಡು, ಕಂಪಣ, ಭೋಗ (ಭಾಗ/ಭುಕ್ತಿ), ಸುಭಾ, ಮಹಲ್, ಸರಕಾರ್, ಪರಗಣ ಮೊದಲಾದ ಪ್ರಧಾನ ಮತ್ತು ಉಪ ಆಡಳಿತ ವಿಭಾಗಗಳಲ್ಲಿ ವಿಂಗಡಿಸಿ ಆಳ್ವಿಕೆ ಮಾಡಿರುವುದು ಸಮಕಾಲೀನ ಶಾಸನಗಳಾದಿ ಸಾಹಿತ್ಯಿಕ ಆಕರಗಳಿಂದ ತಿಳಿಯುತ್ತದೆ. ಪ್ರಾರಂಭದಲ್ಲಿ ಆಡಳಿತ ವಿಭಾಗಗಳನ್ನು ಅರಸು ಮನೆತನದ ಹೆಸರಿನಲ್ಲಿ (ರಟ್ಟಪಾಡಿ, ಗಂಗಮಂಡಲ, ಸೇವುಣದೇಶ, ನೊಳಂಬವಾಡಿನಾಡು, ಸಾಂತಳಿಗೆನಾಡು, ಕದಂಬಳಿಗೆನಾಡು, ಸಿಂದವಾಡಿನಾಡು ಇತ್ಯಾದಿ), ಕೇಂದ್ರ ಪಟ್ಟಣದ ಹೆಸರಿನಲ್ಲಿ (ಕೂಹುಂಡಿನಾಡು, ತರ್ದವಾಡಿನಾಡು, ಪುಲಿಗೆರೆನಾಡು, ವೆಂಗಿಮಂಡಲ, ಮಾರಜವಾಡಿನಾಡು, ಸಿಂದವಾಡಿನಾಡು, ಮುಳುಗುಂದನಾಡು, ಕುರುವಲಿಗೆನಾಡು, ಮಾಸವಾಡಿನಾಡು, ಮಾಹಳಿಗೆನಾಡು, ಕಳವರನಾಡು, ಆಸಂದಿನಾಡು ಇತ್ಯಾದಿ) ಮತ್ತು ಭೌಗೋಳಿಕ ಪರಿಸರದ ಸೂಚನೆಯಿಂದ (ಕುಂತಳನಾಡು, ಬೆಳ್ವೊಲನಾಡು, ಗೊಂಕನಾಡು, ಸಗರನಾಡು, ಅಟ್ಟಳೆನಾಡು, ತರಿಕಾಡನಾಡು ಇತ್ಯಾದಿ) ಗುರುತಿಸಲಾಗುತ್ತಿತ್ತು. ಕಾಲಕ್ರಮೇಣ ಆಯಾ ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿದ್ದ ಗ್ರಾಮಗಳ ಸಂಖ್ಯೆಯನ್ನು ಆಯಾ ವಿಭಾಗದ ಮುಂದೆ ಬಳಸುವುದು (ಕುಂತಲ ಸಪ್ತಾರ್ಧಲಕ್ಷ, ಗಂಗವಾಡಿ ತೊಂಭತ್ತಾರುಸಾವಿರ, ಪಲಸಿಗೆ ಪನ್ನಿರ್ಚ್ಛಾಸಿರ, ನೊಳಂಬವಾಡಿ ಮೂವತ್ತಿರ್ಚ್ಛಾಸಿರ, ಬೆಳ್ವೊಲ ಮುನ್ನೂರು, ಪುಲಿಗೆರೆ ಮುನ್ನೂರು, ಕೂಹುಂಡಿ ಮೂರುಸಾವಿರ ಇತ್ಯಾದಿ) ಪ್ರಾರಂಭವಾಯಿತು.[೧] ಇಂತಹ ಆಡಳಿತ ವಿಭಾಗಗಳಲ್ಲಿ ಕೂಹುಂಡಿನಾಡಿನ (ಕುಣ್ಡಿದೇಶ, ಕುಹುಣ್ಡಿವಿಷಯ, ಕೂಷ್ಮಾಂಡಿವಿಷಯ, ಕೂಹುಂಡಿ ಸಾಸಿರ, ಕೂಹುಂಡಿ-೩೦೦೦ ಆಡಳಿತ ವಿಭಾಗ) ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಗಮನಾರ್ಹವಾಗಿವೆ. ಕನ್ನಡನಾಡಿನ ಪ್ರಾದೇಶಿಕ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಕೂಹುಂಡಿನಾಡಿನ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳ ಕೊಡುಗೆ ಅಪಾರವಾಗಿದೆ. ಈ ನಾಡಿನ ಸಮಗ್ರವಾದ ವಸ್ತುನಿಷ್ಠ ಅಧ್ಯಯನ ಇದುವರೆಗೂ ಅಪೂರ್ಣವಾಗಿಯೇ ಉಳಿದಿದೆ. ಹಾಗಾಗಿ ಈ ನಾಡಿನ ವ್ಯಾಪ್ತಿಯಲ್ಲಿರುವ ಶಾಸನಗಳನ್ನು ಪ್ರಧಾನವಾಗಿಟ್ಟುಕೊಂಡು "ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಲ್ಲಿ ಈ ನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನದ ಮೇಲೆ ಹೊಸ ಬೆಳಕನ್ನು ಚೆಲ್ಲುವುದು ಈ ಸಂಶೋಧನ ಅಧ್ಯಯನದ ಮುಖ್ಯ ಗುರಿಯಾಗಿದೆ.

೧.೨. ಅಧ್ಯಯನದ ಉದ್ದೇಶ

ಇಂದಿನ ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟ ಮತ್ತು ದಕ್ಷಿಣ ಮಹಾರಾಷ್ಟ್ರದ ಕೊಲ್ಲಾಪುರ, ಸಾತಾರ, ಸಾಂಗಲಿ ಜಿಲ್ಲೆಗಳ ಪ್ರದೇಶದಲ್ಲಿ ವಿಸ್ತಾರವಾಗಿದ್ದ ಕೂಹುಂಡಿನಾಡಿನ ಭೌಗೋಳಿಕ ಸ್ವರೂಪ, ಚರಿತ್ರೆ, ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ, ವಾಸ್ತುಕಲೆ, ಶಿಲ್ಪಕಲೆ, ಸಂಸ್ಕೃತಿ ಮೊದಲಾದವುಗಳ ಅಧ್ಯಯನವು ಸ್ವಾರಸ್ಯಪೂರ್ಣ ಮತ್ತು ಅರ್ಥಪೂರ್ಣವಾಗಿದೆ. ಕನ್ನಡನಾಡಿನ ಇತರ ಪ್ರದೇಶಗಳಂತೆ ಕೂಹುಂಡಿನಾಡಿನ ಪ್ರದೇಶವೂ ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಬನವಾಸಿಯ ಕದಂಬರ ತರುವಾಯ ಉತ್ತರ ಕರ್ನಾಟಕದಲ್ಲಿ ರಾಜಕೀಯ ರಂಗವನ್ನು ಪ್ರವೇಶಿಸಿದ ಬಾದಾಮಿಯ ಚಲುಕ್ಯರು ಕಾಲಕ್ರಮೇಣ ತಮ್ಮ ಸಾಮ್ರಾಜ್ಯವನ್ನು ಇಂದಿನ

ಕನ್ನಡನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಒಡಿಸ್ಸಾ, ಗುಜರಾತ ಪ್ರದೇಶಗಳಲ್ಲಿ ವಿಸ್ತರಿಸಿದರು. ಹೀಗೆ ವಿಶಾಲವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಕೆಲವು 'ವಿಷಯ'ಗಳಲ್ಲಿ ವಿಂಗಡಿಸಿದ್ದರು. ಅಂತಹ ವಿಷಯಗಳಲ್ಲಿ 'ಕುಹುಣ್ಡಿವಿಷಯ' ಒಂದಾಗಿತ್ತು. ಅಲ್ಲಿಂದ ಪ್ರಾರಂಭಗೊಂಡ ಕೂಹುಂಡಿನಾಡಿನ ಚರಿತ್ರೆ ಕ್ರಿ.ಶ. ಸುಮಾರು ೧೩ನೆಯ ಶತಮಾನದವರೆಗೂ ಹಲವು ವೈಶಿಷ್ಟ್ಯತೆಗಳಿಂದ ಸಾಗಿ ಬಂದಿದೆ. ಮಳಖೇಡದ ರಾಷ್ಟ್ರಕೂಟರ ಸಾಮ್ರಾಜ್ಯವು ದಕ್ಷಿಣದಲ್ಲಿ ಕಾವೇರಿ ನದಿಯಿಂದ ಉತ್ತರದಲ್ಲಿ ನರ್ಮದಾ ನದಿಯವರೆಗೂ ವಿಸ್ತಾರವಾಗಿತ್ತು. ಈ ಕಾಲದಲ್ಲಿ ಕುಹುಣ್ಡಿವಿಷಯ ಎಂಬ ಆಡಳಿತ ವಿಭಾಗವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲಾಗಿತ್ತು.

ಕಲ್ಯಾಣದ ಚಾಳುಕ್ಯರ ಸಾಮ್ರಾಜ್ಯವು ಇಂದಿನ ಕರ್ನಾಟಕದಷ್ಟೇ ಸಹಜವಾಗಿ ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ವ್ಯಾಪಿಸಿತ್ತು. ಚಾಳುಕ್ಯರ ಆಳ್ವಿಕೆಯ ಸಂದರ್ಭದಲ್ಲಿ ಕೂಹುಂಡಿನಾಡಿನ ಪಶ್ಚಿಮ ಭಾಗದಲ್ಲಿ ಕೊಲ್ಲಾಪುರದ ಶಿಲಾಹಾರರು ಇವರ ಮಹಾಸಾಮಂತರಾಗಿ ಮತ್ತು ಕೆಲವು ಕಾಲ ಮಹಾಮಂಡಳೇಶ್ವರರಾಗಿ ಆಳ್ವಿಕೆ ಮಾಡಿದ್ದಾರೆ. ಹಾಗೆಯೇ ಮಂಗಲವೇಡದ ಕಲಚೂರಿಗಳು ಪ್ರಾರಂಭದಲ್ಲಿ ಚಾಳುಕ್ಯರ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಇವರು ಕ್ರಮೇಣ ಚಾಳುಕ್ಯರನ್ನು ಬದಿಗೊತ್ತಿ ಕಲ್ಯಾಣವನ್ನು ವಶಪಡಿಸಿಕೊಂಡು ಸ್ವತಂತ್ರರಾಗಿ ಆಳ್ವಿಕೆ ಪ್ರಾರಂಭಿಸಿದರು. ಈ ಮನೆತನದ ಇಮ್ಮಡಿ ಬಿಜ್ಜಳನು ಅಧಿಕಾರಕ್ಕೆ ಬರುವ ಮುನ್ನವೇ ಮಹಾಮಂಡಳೇಶ್ವರನಾಗಿ ಕೈಗೊಂಡ ವಿವಿಧ ಯುದ್ಧಗಳ ವಿವರಣೆಯೂ ಇಲ್ಲಿಯ ಶಾಸನಗಳಲ್ಲಿ ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಸಂಶೋಧನ ಅಧ್ಯಯನವು ಈ ಕೆಳಗಿನ ಮಹತ್ವದ ಉದ್ದೇಶಗಳನ್ನು ಹೊಂದಿದೆ.

* ಇದುವರೆಗೂ ಗೌಣವಾಗಿದ್ದ ಕೂಹುಂಡಿನಾಡಿನ ಚರಿತ್ರೆಯನ್ನು ಬೆಳಕಿಗೆ ತರುವುದು.
* ಕೂಹುಂಡಿನಾಡಿನ ಸಂಸ್ಕೃತಿಯನ್ನು ಪ್ರಸ್ತುತ ಸಂದರ್ಭದೊಂದಿಗೆ ತೌಲನಿಕವಾಗಿ ಅವಲೋಕನ ಮಾಡುವುದು.
* ಕೂಹುಂಡಿನಾಡಿನ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಸಮಕಾಲೀನ ಶಾಸನಗಳ ಮೂಲಕ ಅನಾವರಣಗೊಳಿಸುವುದು.
* ಕೂಹುಂಡಿನಾಡು ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಗಡಿಭಾಗದಲ್ಲಿ ವಿಸ್ತಾರವಾಗಿತ್ತು. ಹೀಗಾಗಿ ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳ ಇತಿಹಾಸಕಾರರ ನಿರ್ಲಕ್ಷಕ್ಕೆ ತುತ್ತಾಗಿದ್ದನ್ನು ಬೆಳಕಿಗೆ ತರುವುದು.
* ಕೂಹುಂಡಿನಾಡಿನ ಕುರಿತು ಇದುವರೆಗೂ ತಲಸ್ಪರ್ಶಿಯಾದ ಅಧ್ಯಯನಗಳಾಗಿರಲಿಲ್ಲ. ಇದನ್ನು ಬೆಳಕಿಗೆ ತರುವುದು.
* ಕೂಹುಂಡಿನಾಡು ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ರಾಜ್ಯಗಳಲ್ಲಿ ವಿಸ್ತಾರವಾಗಿತ್ತು. ಇದನ್ನು ಒಂದುಗೂಡಿಸಿ ಅಧ್ಯಯನ ಮಾಡುವುದು.
* ಕನ್ನಡ ನಾಡಿನಲ್ಲಿದ್ದು ಇಲ್ಲದಂತಾಗಿರುವ ಆಡಳಿತ ವಿಭಾಗಗಳಲ್ಲಿ ಒಂದಾಗಿರುವ

ಕೂಹುಂಡಿನಾಡಿನ ಹಿರಿಮೆ ಮತ್ತು ಇದರ ಭೌಗೋಳಿಕ ವಿಸ್ತಾರ, ಚರಿತ್ರೆ, ಸಂಸ್ಕೃತಿಯನ್ನು ಸಮಕಾಲೀನ ಶಾಸನಗಳ ಆಧಾರಗಳಿಂದ ಗುರುತಿಸುವುದು.

* ಪ್ರಸ್ತುತ ಶಿಕ್ಷಕರು, ಹವ್ಯಾಸಿ ಇತಿಹಾಸಕಾರರು, ಓದುಗರು, ಸಂಶೋಧಕರು, ವಿದ್ಯಾರ್ಥಿಗಳಿಗೆ ಕೂಹುಂಡಿನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಕುರಿತು ತಿಳುವಳಿಕೆ ನೀಡುವುದು.
* ಹರಿದು ಹಂಚಿ ಹೋಗಿದ್ದ ಕೂಹುಂಡಿನಾಡಿನ ಶಾಸನಗಳು, ಸ್ಮಾರಕಗಳು, ಶಿಲ್ಪಗಳನ್ನು ಒಂದೆಡೆ ಕಲೆಹಾಕಿ ವೈಜ್ಞಾನಿಕವಾಗಿ ಅಧ್ಯಯನಕ್ಕೊಳಪಡಿಸುವುದು.
* ಒಂದು ನಾಡು ಅಥವಾ ಆಡಳಿತ ವಿಭಾಗವನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡುವುದರಿಂದ ಬೆಳಕಿಗೆ ಬರುವ ಪ್ರಾದೇಶಿಕ ಚರಿತ್ರೆ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಕಂಡುಕೊಳ್ಳುವುದು.
* ಕೂಹುಂಡಿನಾಡಿನಲ್ಲಿ ಆಡಳಿತ ನಡೆಸಿದ ಹಲವು ಅರಸು ಮನೆತನಗಳ ಚರಿತ್ರೆ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಸಮಕಾಲೀನ ಶಾಸನಾಧಾರಗಳಿಂದ ಗುರುತಿಸುವುದು.
* ಒಟ್ಟಾರೆ ಇದುವರೆಗೂ ಮರೆಯಾಗಿದ್ದ ಕೂಹುಂಡಿನಾಡಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಬೆಳಕಿಗೆ ತಂದು ಕನ್ನಡನಾಡಿನ ಸಮಗ್ರ ಇತಿಹಾಸವನ್ನು ಕಟ್ಟಿಕೊಡಲು ಪ್ರಾದೇಶಿಕ ಅಧ್ಯಯನಗಳ ಮಹತ್ವವನ್ನು ಗುರುತಿಸುವುದು.

ಹೀಗೆ ಪ್ರಸ್ತುತ ಉದ್ದೇಶಗಳ ಹಿನ್ನೆಲೆಯಲ್ಲಿ ಕೂಹುಂಡಿನಾಡಿನ ವ್ಯಾಪ್ತಿಯಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೭೨ ಮತ್ತು ಈ ನಾಡಿನ ಪ್ರಸ್ತಾಪವಿರುವ ಇತರೆಡೆಯ ೧೨ ಶಾಸನಗಳು ಒಟ್ಟು ೧೮೪ ಶಾಸನಗಳನ್ನು ಪ್ರಧಾನವಾಗಿಟ್ಟುಕೊಂಡು ಈ ನಾಡಿನ ವ್ಯಾಪ್ತಿ, ಈ ಪ್ರದೇಶವನ್ನಾಳಿದ ಅರಸು ಮನೆತನಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನದಿಂದ ಕನ್ನಡನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಕೂಹುಂಡಿನಾಡು ವಹಿಸಿದ ಪಾತ್ರದ ಮೇಲೆ ಬೆಳಕು ಚೆಲ್ಲುವುದು ಈ ಸಂಶೋಧನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

(ಪ್ರಸ್ತುತ ಸಂಶೋಧನ ಅಧ್ಯಯನದ ವ್ಯಾಪ್ತಿಯು ಕೂಹುಂಡಿ-೩೦೦೦ ಆಡಳಿತ ವಿಭಾಗದ ಪ್ರದೇಶಕ್ಕೆ ಸೀಮಿತವಾಗಿದೆ.) ಈ ವಿಭಾಗದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನವನ್ನು ಅಂದಿನ ಶಾಸನಗಳ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ. ಪ್ರಮುಖವಾಗಿ ಬಾದಾಮಿಯ ಚಲುಕ್ಯ ಮನೆತನದಿಂದ ದೇವಗಿರಿಯ ಸೇವುಣ ಮನೆತನದವರೆಗಿನ ರಾಜಕೀಯ ವ್ಯವಸ್ಥೆ, ಆಡಳಿತ ಸ್ವರೂಪ, ಧಾರ್ಮಿಕ ವ್ಯವಸ್ಥೆ, ಸಾಮಾಜಿಕ ಪರಿಸ್ಥಿತಿ, ಆರ್ಥಿಕ ಸ್ಥಿತಿಗತಿಗಳು, ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು, ವಾಸ್ತುಕಲೆಯ ಅಭಿವೃದ್ಧಿ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ಮೊದಲಾದವುಗಳನ್ನು ವಸ್ತುನಿಷ್ಠವಾಗಿ ಗುರುತಿಸುವುದಾಗಿದೆ. ಅಂತಾಗಿ ಕ್ರಿ.ಶ. ಸುಮಾರು ೭ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಶಾಸನಗಳ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಕೆಲವು ಸಂದರ್ಭದಲ್ಲಿ ವಿಷಯದ ವಿಶ್ಲೇಷಣೆಯ ದೃಷ್ಟಿಯಿಂದ ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯವಾಗುವ

See page 13
4-11

ಇತರೆಡೆಯ ಶಾಸನಗಳಾದಿ ವಿವಿಧ ಪುರಾತತ್ವ ಹಾಗೂ ಸಾಹಿತ್ಯಿಕ ಕುರುಹುಗಳನ್ನೂ ಪೂರಕವಾಗಿಟ್ಟುಕೊಂಡು ಅಧ್ಯಯನದ ವ್ಯಾಪ್ತಿ ಮತ್ತು ಕಾಲಾವಧಿಯನ್ನು ವಿಸ್ತರಿಸಿಕೊಳ್ಳಲಾಗಿದೆ.

೧.೪. ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕೂಹುಂಡಿನಾಡು ವಿಸ್ತಾರವಾಗಿದ್ದ ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ, ಸಾತಾರ, ಸಾಂಗಲಿ ಜಿಲ್ಲೆಗಳ ಪ್ರದೇಶದ ರಾಜಕೀಯ ಹಿನ್ನೆಲೆ, ಆಡಳಿತ ಸ್ವರೂಪ, ಧಾರ್ಮಿಕ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ, ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಕೋಟೆ–ಕೊತ್ತಲುಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳು, ಸಾಹಿತ್ಯ, ಸಂಸ್ಕೃತಿ ಮೊದಲಾದ ಅಂಶಗಳನ್ನು ಪೂರಕವಾಗಿಟ್ಟುಕೊಂಡು ಇದುವರೆಗೂ ಹಲವು ವಿದ್ವಾಂಸರು ಮತ್ತು ಸಂಶೋಧಕರು ತಮ್ಮ ಅಧ್ಯಯನದ ಪರಿಮಿತಿಯಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಈ ನಿಟ್ಟಿನಲ್ಲಿ ಅನೇಕ ಕೃತಿಗಳು, ಲೇಖನಗಳು ಮತ್ತು ಪ್ರಬಂಧಗಳು ಪ್ರಕಟವಾಗಿವೆ. ಹಾಗೆಯೇ ಕನ್ನಡನಾಡು ಮತ್ತು ಮಹಾರಾಷ್ಟ್ರದ ಚರಿತ್ರೆ, ಸಂಸ್ಕೃತಿಯ ಕುರಿತಾಗಿ ಇದುವರೆಗೂ ಸಾಕಷ್ಟು ಅಧ್ಯಯನಗಳು ನಡೆದಿವೆ. ಇವುಗಳಲ್ಲಿ ಕೆಲವು ಕೃತಿಗಳು, ಲೇಖನಗಳು, ಪ್ರಬಂಧಗಳಲ್ಲಿ ಕೂಹುಂಡಿನಾಡಿನ ಸಾಂಸ್ಕೃತಿಕ ಅಧ್ಯಯನದ ಮೇಲೆ ಕೆಲವು ನೇರವಾಗಿ ಮತ್ತೆ ಕೆಲವು ಪರೋಕ್ಷವಾಗಿ ಬೆಳಕು ಚೆಲ್ಲುತ್ತವೆ.

ಎಂ. ಚಿದಾನಂದಮೂರ್ತಿ ಅವರ *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (೧೯೭೯) ಕೃತಿಯಲ್ಲಿ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ೧೩ನೆಯ ಶತಮಾನದವರೆಗಿನ ಕನ್ನಡ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಕರ್ನಾಟಕದ ಸಾಂಸ್ಕೃತಿಕ ಆಯಾಮಗಳನ್ನು ಅವಲೋಕಿಸಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶದ ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದ ಕೆಲವು ಕನ್ನಡ ಶಾಸನಗಳನ್ನೂ ಗಮನಿಸಲಾಗಿದೆ. ಈ ಕೃತಿ ಕೂಹುಂಡಿನಾಡಿನ ಸಾಂಸ್ಕೃತಿಕ ಹಿನ್ನೆಲೆಯ ಅಧ್ಯಯನಕ್ಕೆ ಪರೋಕ್ಷ ಆಕರವಾಗಿದೆ. ಎಚ್. ತಿಪ್ಪೇರುದ್ರಸ್ವಾಮಿ ಅವರ *ಕರ್ನಾಟಕ ಸಂಸ್ಕೃತಿ ಸಮೀಕ್ಷೆ* (೧೯೮೭) ಕೃತಿಯಲ್ಲಿ ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳ ಹಿನ್ನೆಲೆಯಲ್ಲಿ ಕರ್ನಾಟಕದ ಚರಿತ್ರೆ ಮತ್ತು ಸಂಸ್ಕೃತಿಯ ಸ್ವರೂಪವನ್ನು ಚಿತ್ರಿಸಲಾಗಿದೆ. ಇದರಲ್ಲಿ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಲಚೂರಿಯರು, ದೇವಗಿರಿಯ ಸೇವುಣರು ಮೊದಲಾದ ಮನೆತನಗಳು ಮತ್ತು ಇವುಗಳ ಅಧೀನದಲ್ಲಿ ಪ್ರಾದೇಶಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತ ಮನೆತನಗಳ ಕುರಿತು ಪರಿಚಯವಿದೆ. ಇದು ಕೂಹುಂಡಿನಾಡಿನ ಚಾರಿತ್ರಿಕ ಅಧ್ಯಯನಕ್ಕೆ ಪೂರಕವಾಗಿದೆ. ಎಚ್.ಎಸ್. ಗೋಪಾಲರಾವ್ ಅವರ *ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣದ ಚಾಲುಕ್ಯರ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ* (೧೯೯೩) ಕೃತಿಯಲ್ಲಿ ಕಲ್ಯಾಣದ ಚಾಳುಕ್ಯರ ಶಾಸನಗಳನ್ನು ಪ್ರಧಾನವಾಗಿಟ್ಟುಕೊಂಡು, ಈ ಶಾಸನಗಳಲ್ಲಿ ಉಲ್ಲೇಖಿತ ದೇವಾಲಯಗಳು, ಬಸದಿಗಳ ನಿರ್ಮಾತೃರು, ದಾನ–ದತ್ತಿಗಳು, ಇವುಗಳ ಸಂಕ್ಷಿಪ್ತ ವಾಸ್ತುಕಲೆಯ ಕುರಿತು ಅಧ್ಯಯನ ನಡೆದಿದೆ. ಇದರಲ್ಲಿ ಕೂಹುಂಡಿನಾಡಿನ ವ್ಯಾಪ್ತಿಯಲ್ಲಿನ ಕಲ್ಯಾಣದ ಚಾಳುಕ್ಯರು

ಮತ್ತು ಇವರ ಅಧೀನದಲ್ಲಿ ಆಳ್ವಿಕೆ ಕೈಗೊಂಡಿದ್ದ ಮಹಾಮಂಡಳೇಶ್ವರ ಮನೆತನಗಳ ಕೆಲವು ಶಾಸನಗಳು ಮತ್ತು ದೇವಾಲಯಗಳು, ಬಸದಿಗಳ ಪರಿಚಯವಿದೆ. ಈ ಕೃತಿ ಕೂಹುಂಡಿನಾಡಿನ ಧಾರ್ಮಿಕ ವ್ಯವಸ್ಥೆ ಮತ್ತು ದೇವಾಲಯಗಳ ಕುರಿತಾದ ಅಧ್ಯಯನದ ಮೇಲೆ ಬೆಳಕು ಚೆಲ್ಲುತ್ತದೆ. ಎಸ್.ಎಸ್. ಒಡೆಯರ ಅವರು ಪ್ರಕಾಶಿಸಿರುವ *ಕರ್ನಾಟಕ ಮತ್ತು ಜೈನ ಸಂಸ್ಕೃತಿ* (೧೯೭೫) ಕೃತಿಯಲ್ಲಿ ವಿವಿಧ ಲೇಖಕರು ಬರೆದಿರುವ ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ರಾಜಾಶ್ರಯವನ್ನು ಕೊಡಮಾಡಿದ ಅರಸು ಮನೆತನಗಳು, ಬಸದಿಗಳು, ಶಿಲ್ಪಗಳು, ಸಮಾಜ, ಸಂಸ್ಕೃತಿ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಲೇಖನಗಳಿವೆ. ಇದರಲ್ಲಿ ಕೂಹುಂಡಿನಾಡಿನ ಬೆಳಗಾವಿ, ಕಲ್ಲೊಳೆ, ಯಕ್ಸಂಬಾ ಮೊದಲಾದೆಡೆಯ ಕೆಲವು ಜೈನ ಶಾಸನಗಳಾದಿ ಬಸದಿಗಳು, ಸಮಾಜ, ಸಂಸ್ಕೃತಿಯ ಆಯಾಮಗಳು ಪರೋಕ್ಷವಾಗಿ ಪ್ರಸ್ತಾಪವಾಗಿವೆ. ಈ ಕೃತಿ ಕೂಹುಂಡಿನಾಡಿನ ಪ್ರದೇಶದ ಜೈನ ಧರ್ಮದ ಕುರಿತು ಅಧ್ಯಯನಕ್ಕೆ ಮಾಧ್ಯಮಿಕ ಆಕರವಾಗಿದೆ.

ಪಾಂಡುರಂಗರಾವ್ ದೇಸಾಯಿ ಅವರ *ಕರ್ನಾಟಕದ ಕಲಚೂರಿಗಳು* (೧೯೮೩) ಕೃತಿಯಲ್ಲಿ ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಪ್ರದೇಶದಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ತರುವಾಯ ಕೆಲವು ಕಾಲ ಸ್ವತಂತ್ರವಾಗಿ ಆಳ್ವಿಕೆ ಮಾಡಿದ ಕಲಚೂರಿ ಮನೆತನದ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಮಕಾಲೀನ ಸಾಹಿತ್ಯಿಕ ಕುರುಹುಗಳ ಹಿನ್ನೆಲೆಯಲ್ಲಿ ಈ ಮನೆತನದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಕೂಹುಂಡಿನಾಡಿನ ಪ್ರದೇಶವೂ ಕೆಲಕಾಲ ಕಲಚೂರಿಯರ ಆಳ್ವಿಕೆಯ ಪ್ರಭಾವದಲ್ಲಿತ್ತು. ಈ ಕೃತಿ ಕೂಹುಂಡಿನಾಡಿನಲ್ಲಿ ಕಲಚೂರಿಯರ ಚಾರಿತ್ರಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಎಸ್. ರಾಜಶೇಖರ ಅವರ *ಕರ್ನಾಟಕದ ವಾಸ್ತು, ಶಿಲ್ಪ ಮತ್ತು ಚಿತ್ರಕಲೆ* (೧೯೮೮) ಕೃತಿಯಲ್ಲಿ ಕರ್ನಾಟಕವನ್ನಾಳಿದ ವಿವಿಧ ಅರಸು ಮನೆತನಗಳ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳು, ಶಿಲ್ಪಗಳ ಪ್ರತಿಮಾ ಲಕ್ಷಣಗಳು, ಚಿತ್ರಕಲೆಯ ಹಿರಿಮೆಯನ್ನು ಅವಲೋಕಿಸಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶದ ಬೆಳಗಾವಿ, ಕಲ್ಲೊಳೆ ಮೊದಲಾದೆಡೆಯ ಕೆಲವು ದೇವಾಲಯಗಳು ಮತ್ತು ಬಸದಿಗಳ ಪ್ರಸ್ತಾಪಗಳಿವೆ. ಚನ್ನಕ್ಕ ಪಾವಟೆ ಅವರ *ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ* (೧೯೯೦) ಕೃತಿಯಲ್ಲಿ ಕರ್ನಾಟಕದ ಶಾಸನಗಳಲ್ಲಿ ಉಲ್ಲೇಖಿತ ಸ್ತ್ರೀಯರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶವನ್ನಾಳಿದ ಸವದತ್ತಿಯ ರಟ್ಟರ ಶಾಸನಗಳಲ್ಲಿ ಪ್ರಸ್ತಾಪಿತ ಸ್ತ್ರೀಯರ ನಿರೂಪಣೆಗಳಿವೆ.

ಲಕ್ಷ್ಮಣ್ ತೆಲಗಾವಿ ಅವರ *ಮೌರ್ಯ ಮತ್ತು ಶಾತವಾಹನ ಯುಗ* (೨೦೦೪) ಕೃತಿಯಲ್ಲಿ ಮೌರ್ಯರು ಮತ್ತು ಶಾತವಾಹನರ ಕಾಲಾವಧಿಯ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳನ್ನು ಕೇಂದ್ರವಾಗಿಟ್ಟುಕೊಂಡು ಸಮಕಾಲೀನ ಚರಿತ್ರೆ ಮತ್ತು ಸಂಸ್ಕೃತಿಯ ವಿವಿಧ ಆಯಾಮಗಳನ್ನು ವಿಶ್ಲೇಷಿಸಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶದ ವಡಗಾಂವ-ಮಾಧವಪುರ ಮೊದಲಾದ ಕೆಲವು ಶಾತವಾಹನರ ಕಾಲಾವಧಿಯ ನೆಲೆಗಳನ್ನೂ ಗಮನಿಸಲಾಗಿದೆ. ಈ ಕೃತಿ ಕೂಹುಂಡಿನಾಡಿನ

ಪ್ರದೇಶದ ಪ್ರಾರಂಭದ ಚಾರಿತ್ರಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಎ.ವಿ. ನರಸಿಂಹಮೂರ್ತಿ ಅವರ *ಕರ್ನಾಟಕದ ಸೇವುಣರ ಇತಿಹಾಸ* (೧೯೭೧) ಕೃತಿಯಲ್ಲಿ ಇಂದಿನ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ದೇವಗಿರಿಯ ಸೇವುಣರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಚಿತ್ರಣವಿದೆ. ಇದರಲ್ಲಿ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳ ಪ್ರದೇಶದಲ್ಲಿನ ಸೇವುಣರ ಶಾಸನಗಳನ್ನೂ ಬಳಸಿಕೊಳ್ಳಲಾಗಿದೆ. ಜೆ.ಎಂ. ನಾಗಯ್ಯ ಅವರ *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಸಾಂಸ್ಕೃತಿಕ ಅಧ್ಯಯನ* (೧೯೯೨) ಕೃತಿಯಲ್ಲಿ ಕಲ್ಯಾಣದ ಚಾಲುಕ್ಯ ಮನೆತನದ ಪ್ರಸಿದ್ಧ ಅರಸ ೬ನೆಯ ವಿಕ್ರಮಾದಿತ್ಯನ ಕಾಲಾವಧಿಯ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ವಿಕ್ರಮಾದಿತ್ಯನ ಜೀವನ, ರಾಜಕೀಯ ಚಟುವಟಿಕೆಗಳು, ಆಡಳಿತ ವಿಭಾಗಗಳು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು ಮತ್ತು ಸಮಕಾಲೀನ ಅಧಿಕಾರಿಗಳ ಕಾರ್ಯಚಟುವಟಿಕೆಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ೬ನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಕೂಹುಂಡಿನಾಡಿನ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲಚೂರಿಯರ ಆಳರಸರು ಮತ್ತು ಆಡಳಿತ ವಿಭಾಗಗಳ ಸಂಕ್ಷಿಪ್ತ ಪರಿಚಯವಿದೆ.

ಬಿ.ಆರ್. ಹಿರೇಮಠ ಅವರ *ಕರ್ನಾಟಕದ ಶಾಸನಗಳಲ್ಲಿ ವರ್ತಕರು* (೧೯೮೬) ಕೃತಿಯಲ್ಲಿ ಕರ್ನಾಟಕದ ಶಾಸನಗಳಲ್ಲಿ ಉಲ್ಲೇಖಿತ ವಿವಿಧ ವ್ಯಾಪಾರ ಸಂಘಗಳು, ವ್ಯಾಪಾರಿಗಳ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ವಿಶ್ಲೇಷಣೆಯಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶದ ಬೆಳಗಾವಿ, ಬೇಡಕಿಹಾಳ, ಯಕ್ಸಂಬಾ, ಕಲ್ಲೊಳೆ, ನೇಸರಗಿ, ಬೆಳವಡಿ, ವಣ್ಣೂರು, ಹಣ್ಣಿಕೇರಿ ಮೊದಲಾದೆಡೆಯ ಹಲವು ಶಾಸನಗಳು, ವ್ಯಾಪಾರ ಸಂಘಗಳನ್ನೂ ಗಮನಿಸಲಾಗಿದೆ. ಕೆ.ಬಿ. ಶಿವತಾರಕ್ ಅವರ *ಕರ್ನಾಟಕದ ಪುರಾತತ್ವ ನೆಲೆಗಳು* (೨೦೦೧) ಕೃತಿಯಲ್ಲಿ ಕರ್ನಾಟಕದಲ್ಲಿ ಬೆಳಕಿಗೆ ಬಂದಿರುವ ಹಳೆಯ ಶಿಲಾಯುಗದಿಂದ ಇತಿಹಾಸ ಆರಂಭ ಕಾಲಾವಧಿಯ ಮಾನವ ವಸತಿ ನೆಲೆಗಳ ವಿವರಗಳಿವೆ. ಇದರಲ್ಲಿ ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಪ್ರದೇಶದ ಕೆಲವು ವಸತಿ ನೆಲೆಗಳನ್ನೂ ಅವಲೋಕಿಸಲಾಗಿದೆ. ಇದು ಕೂಹುಂಡಿನಾಡಿನ ಪ್ರದೇಶದ ಇತಿಹಾಸಪೂರ್ವ ಮತ್ತು ಇತಿಹಾಸ ಆರಂಭ ಕಾಲಾವಧಿಯ ವಿವಿಧ ಶಿಲಾಯುಗ ಸಂಸ್ಕೃತಿಗಳ ಅಧ್ಯಯನಕ್ಕೆ ಮಾಧ್ಯಮಿಕ ಆಕರವಾಗಿದೆ. ಹಂಪ ನಾಗರಾಜಯ್ಯ ಅವರ *ಯಾಪನೀಯ ಸಂಘ* (೧೯೯೯) ಕೃತಿಯಲ್ಲಿ ಕರ್ನಾಟಕದ ಸಂದರ್ಭದಲ್ಲಿ ಕ್ರಿ.ಶ. ಸುಮಾರು ೨ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಜೈನ ಧರ್ಮದ ಯಾಪನೀಯ ಸಂಘದ (ಪಂಥ) ಪ್ರಾಚೀನತೆ, ಆಚಾರ್ಯರು, ತತ್ವ-ಸಿದ್ಧಾಂತಗಳು, ಕೇಂದ್ರಗಳು, ಈ ಸಂಘದಲ್ಲಿದ್ದ ವಿವಿಧ ಗಣಗಳು, ಗಚ್ಛಗಳು, ಅನ್ವಯಗಳು, ಬಳಿಗಳು ಕುರಿತು ಸಮಕಾಲೀನ ಜೈನ ಶಾಸನಗಳು ಮತ್ತು ಸಾಹಿತ್ಯಿಕ ಆಕರಗಳ ಹಿನ್ನೆಲೆಯಲ್ಲಿನ ಚರ್ಚೆಯಿದೆ. ಯಾಪನೀಯ ಸಂಘವು ಕೂಹುಂಡಿನಾಡಿನ ಪ್ರದೇಶದಲ್ಲಿ ಪ್ರಬಲವಾಗಿತ್ತು. ಈ ನಾಡಿನ ಮೈಳಾಪತೀರ್ಥವು (ಇಂದಿನ ಸವದತ್ತಿಯ ಎಲ್ಲಮ್ಮದೇವಿ ದೇವಾಲಯದ ಪರಿಸರ) ಈ ಸಂಘದ ಆಚಾರ್ಯರ ಪ್ರಧಾನ ಕೇಂದ್ರವಾಗಿತ್ತು. ಈ ಕೃತಿ ಪ್ರಸ್ತುತ

ಪ್ರದೇಶದಲ್ಲಿ ಜೈನ ಧರ್ಮದ ಕುರಿತು ಅಧ್ಯಯನಕ್ಕೆ ಉಪಯುಕ್ತವಾಗಿದೆ. ಸುರೇಂದ್ರರಾವ್ ಬಿ. ಅವರು ಸಂಪಾದಿಸಿರುವ *ಕರ್ನಾಟಕ ಚರಿತ್ರೆ ಸಂಪುಟ–೨* (೧೯೯೭) ಕೃತಿಯಲ್ಲಿ ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಲಚೂರಿಯರು, ದೇವಗಿರಿಯ ಸೇವುಣರ ರಾಜಕೀಯ ಇತಿಹಾಸದ ಪರಿಚಯವಿದೆ. ಈ ಎಲ್ಲ ಮನೆತನಗಳ ಆಳ್ವಿಕೆಗೆ ಕೂಹುಂಡಿನಾಡಿನ ಪ್ರದೇಶವು ಒಳಪಟ್ಟಿತ್ತು. ಹೀಗಾಗಿ ಈ ಕೃತಿ ಕೂಹುಂಡಿನಾಡಿನ ಚಾರಿತ್ರಿಕ ಹಿನ್ನೆಲೆಯ ಅಧ್ಯಯನಕ್ಕೆ ಪೂರಕವಾಗಿದೆ.

ಬಿ.ಆರ್. ಗೋಪಾಲ ಅವರ *ದಿ ಚಾಳುಕ್ಯಾಸ್ ಆಫ್ ಕಲ್ಯಾಣ ಅಂಡ್ ದಿ ಕಲಚೂರಿಯಸ್* (೧೯೮೧) ಕೃತಿಯಲ್ಲಿ ಕಲ್ಯಾಣದ ಚಾಳುಕ್ಯರು ಮತ್ತು ಕಲಚೂರಿಯರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಆಯಾಮಗಳ ಅವಲೋಕನವಿದೆ. ಇದರಲ್ಲಿ ಪ್ರಸ್ತುತ ಮನೆತನಗಳಿಗೆ ಸಂಬಂಧಿಸಿದಂತೆ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದ ಕೆಲವು ಶಾಸನಗಳನ್ನು ಬಳಸಿಕೊಳ್ಳಲಾಗಿದೆ. ಎ.ಎಸ್. ಅಲ್ತೇಕರ್ ಅವರ *ರಾಷ್ಟ್ರಕೂಟಾಸ್ ಅಂಡ್ ದೆಯರ್ ಟೈಮ್ಸ್* (೧೯೬೭) ಕೃತಿಯಲ್ಲಿ ರಾಷ್ಟ್ರಕೂಟರ ಮೂಲ, ಆಳರಸರು, ಸಾಂಸ್ಕೃತಿಕ ಕೊಡುಗೆಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ಪ್ರದೇಶದಲ್ಲಿರುವ ರಾಷ್ಟ್ರಕೂಟರು ಮತ್ತು ಇವರ ಅಧೀನದ ಆಳರಸರ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳನ್ನೂ ಗಮನಿಸಲಾಗಿದೆ. ಶ್ರೀನಿವಾಸ ರಿತ್ತಿ ಅವರ *ದಿ ಸೇವುಣಾಸ್ (ದಿ ಯಾದವಾಸ್ ಆಫ್ ದೇವಗಿರಿ–೧೯೭೭)* ಕೃತಿಯಲ್ಲಿ ದೇವಗಿರಿಯ ಸೇವುಣ ಮನೆತನದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಶಾಸನಗಳಾದಿ ಸಾಹಿತ್ಯಿಕ ಆಕರಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳ ಪ್ರದೇಶಗಳೂ ಸೇವುಣರ ಆಳ್ವಿಕೆಯ ಪ್ರಭಾವದಲ್ಲಿದ್ದವು. ದಿನಕರ ದೇಸಾಯಿ ಅವರ *ದಿ ಮಹಾಮಂಡಳೇಶ್ವರಾಸ್ ಅಂಡರ್ ದಿ ಚಾಳುಕ್ಯಾಸ್ ಆಫ್ ಕಲ್ಯಾಣ* (೧೯೫೧) ಕೃತಿಯಲ್ಲಿ ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಸಮಕಾಲೀನ ಆಡಳಿತ ವಿಭಾಗಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಹಾಮಂಡಳೇಶ್ವರರನ್ನು ಚರ್ಚಿಸಲಾಗಿದೆ. ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು ಮೊದಲಾದ ಕೆಲವು ಮಹಾಮಂಡಳೇಶ್ವರರು, ಮಹಾಸಾಮಂತರು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಕೂಹುಂಡಿನಾಡಿನ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಕೃತಿ ಕೂಹುಂಡಿನಾಡಿನ ಚಾರಿತ್ರಿಕ ಹಿನ್ನೆಲೆಯ ಅಧ್ಯಯನಕ್ಕೆ ಪೂರಕವಾಗಿದೆ.

ಪಿ.ಬಿ. ದೇಸಾಯಿ ಅವರ *ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಸಮ್ ಜೈನ ಎಪಿಗ್ರಾಫ್ಸ್* (೧೯೫೭) ಕೃತಿಯಲ್ಲಿ ಇಂದಿನ ಕರ್ನಾಟಕವನ್ನು ಕೇಂದ್ರ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ಜೈನ ಧರ್ಮದ ಪ್ರಾಚೀನತೆ, ರಾಜಾಶ್ರಯ, ಮುನಿ ಪರಂಪರೆ, ಬಸದಿಗಳು, ಶಿಲ್ಪಗಳು, ಶಾಸನಗಳು, ಸಾಹಿತ್ಯ, ಸಮಾಜ, ಸಂಸ್ಕೃತಿ ಮೊದಲಾದವುಗಳನ್ನು ಚರ್ಚಿಸಲಾಗಿದೆ. ಈ ಕೃತಿಯಲ್ಲಿ ಕೂಹುಂಡಿನಾಡಿನ ಪ್ರದೇಶದ ಬೆಳಗಾವಿ, ಕಲ್ಲೊಳೆ, ಯಕ್ಸಂಬಾ, ಹಣ್ಣಿಕೇರಿ, ತೇರದಾಳ, ಸವದತ್ತಿ, ರಾಯಬಾಗ ಮೊದಲಾದೆಡೆಯ ಕೆಲವು ಜೈನ ಶಾಸನಗಳಾದಿ ಬಸದಿಗಳು, ಶಿಲ್ಪಗಳು, ಮುನಿಗಳು, ಕವಿಗಳ ಪ್ರಸ್ತಾಪಗಳಿವೆ. ಕೆ.ಆರ್. ಬಸವರಾಜ ಅವರ *ಆಡ್ಮಿನಿಸ್ಟ್ರೇಶನ್ ಅಂಡರ್ ದಿ ಚಾಳುಕ್ಯಾಸ್ ಆಫ್ ಕಲ್ಯಾಣ* (೧೯೮೩) ಕೃತಿಯಲ್ಲಿ

ಕಲ್ಯಾಣದ ಚಾಳುಕ್ಯ ಮನೆತನದ ಆಡಳಿತ ವ್ಯವಸ್ಥೆಯನ್ನು ಸಮಕಾಲೀನ ಶಾಸನಗಳು ಮತ್ತು ಸಾಹಿತ್ಯಿಕ ಆಕರಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಈ ನಿಟ್ಟಿನಲ್ಲಿ ಕೂಹುಂಡಿನಾಡಿನ ಪ್ರದೇಶದಲ್ಲಿರುವ ಕಲ್ಯಾಣದ ಚಾಳುಕ್ಯರು ಮತ್ತು ಇವರ ಅಧೀನದಲ್ಲಿ ಆಳ್ವಿಕೆ ಮಾಡುತ್ತಿದ್ದ ಮಹಾಮಂಡಳೇಶ್ವರರ ಕೆಲವು ಶಾಸನಗಳನ್ನೂ ಅವಲೋಕಿಸಲಾಗಿದೆ. ಗೆರಾರ್ಡ ಪೋಕೆಮಾ ಅವರ *ಚಾಳುಕ್ಯ ಆರ್ಕಿಟೆಕ್ಚರ್ ಸಂಪುಟ-೧* (೨೦೦೩) ಕೃತಿಯಲ್ಲಿ ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಕೂಹುಂಡಿನಾಡಿನ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸವದತ್ತಿಯ ರಟ್ಟರ ಕಾಲಾವಧಿಯಲ್ಲಿ ನಿರ್ಮಾಣವಾದ ಬೆಳಗಾವಿ, ನೇಸರಗಿ ಮೊದಲಾದೆಡೆಯ ಕೆಲವು ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳ ಪರಿಚಯವಿದೆ.

ಎಂ. ಮರಿಯಪ್ಪ ಭಟ್ಟ ಅವರು ಸಂಪಾದಿಸಿರುವ *ಪಾರ್ಶ್ವಪಂಡಿತ ವಿರಚಿತಂ ಶ್ರೀ ಪಾರ್ಶ್ವನಾಥ ಪುರಾಣಂ* (೧೯೫೪) ಕೃತಿಯು ಕೂಹುಂಡಿನಾಡಿನ ಪ್ರದೇಶವನ್ನಾಳುತ್ತಿದ್ದ ಸವದತ್ತಿಯ ರಟ್ಟರ ಆಶ್ರಯದಲ್ಲಿದ್ದ ಜೈನಕವಿ ಪಾರ್ಶ್ವಪಂಡಿತನ ಜೀವನ ಮತ್ತು ಈತನು ರಚಿಸಿರುವ ಪಾರ್ಶ್ವನಾಥ ಪುರಾಣದ ಅಧ್ಯಯನಕ್ಕೆ ಉಪಯುಕ್ತವಾಗಿದೆ. ಎಂ.ವಿ. ಶ್ರೀನಿವಾಸ್ ಅವರ *ಸೌಂದತ್ತಿಯ ರಟ್ಟರು* (೧೯೭೨) ಕೃತಿಯಲ್ಲಿ ಸವದತ್ತಿಯ ರಟ್ಟರ ಆಳರಸರು ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳ ಸಂಕ್ಷಿಪ್ತ ಪರಿಚಯವಿದೆ ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ *ಬೆಳ್ಗಮ್ ಡಿಸ್ಟ್ರಿಕ್ಟ್ ಗೆಜೆಟಿಯರ್* (೧೯೮೭) ಕೃತಿಯಲ್ಲಿ ಕೂಹುಂಡಿನಾಡಿನ ಭಾಗವಾಗಿದ್ದ ಬೆಳಗಾವಿ ಜಿಲ್ಲೆಯ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆಯ ಅವಲೋಕನಕ್ಕೆ ಉಪಯುಕ್ತವಾಗಿದೆ. ವೆಂಕಟರಂಗೊ ಕಟ್ಟಿ ಅವರು ಸಂಪಾದಿಸಿರುವ *ಧಾರವಾಡ, ಬೆಳ್ಗಮ್, ಬಿಜಾಪುರ, ಕಾನಡಾ ಡಿಸ್ಟ್ರಿಕ್ಟ್ಸ ಗೆಜೆಟಿಯರ್* (೧೯೮೪) ಕೃತಿಯುಲ್ಲಿ ಬೆಳಗಾವಿ ಮತ್ತು ಬಾಗಲಕೋಟ ಜಿಲ್ಲೆಗಳ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ಗಮನಿಸಲಾಗಿದೆ. ಮದನ ಎಸ್. ದೊಡ್ಡಮನಿ ಅವರ *ಚಿಕ್ಕೋಡಿ ತಾಲ್ಲೂಕು ದರ್ಶನ (೧೯೮೬)*, ದು.ನಿಂ. ಬೆಳಗಲಿ ಅವರ *ಜಮಖಂಡಿ ತಾಲ್ಲೂಕು ದರ್ಶನ (೧೯೮೬)*, ಆರ್.ಆರ್. ಮುತಾಲೀಕ ಅವರ *ಹುಕ್ಕೇರಿ ತಾಲ್ಲೂಕು ದರ್ಶನ (೧೯೮೭)*, ಮನೋಜ ಪಾಟೀಲ ಅವರ *ಬೆಳಗಾವಿ ಜಿಲ್ಲಾ ಮಾರ್ಗದರ್ಶಿ* (೧೯೮೭) ಕೃತಿಗಳಲ್ಲಿ ಕೂಹುಂಡಿನಾಡಿನ ಭಾಗಗಳಾಗಿದ್ದ ಆಯಾ ತಾಲ್ಲೂಕು ಮತ್ತು ಜಿಲ್ಲೆಯ ಪ್ರದೇಶದ ಹಿನ್ನೆಲೆಯ ಸಂಕ್ಷಿಪ್ತ ಪರಿಚಯಗಳಿವೆ. ಶಿ.ಬಾ. ಪಾಟೀಲ ಅವರ ಕೂಹೂಂಡಿನಾಡು (೧೯೮೯) ಚಿಕ್ಕ ಕೃತಿಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಹಿನ್ನೆಲೆಯಲ್ಲಿ ಕೂಹುಂಡಿನಾಡನ್ನು ಗಮನಿಸಲಾಗಿದೆ.

ಆರ್. ಗೋಪಾಲ್ ಅವರು ಸಂಪಾದಿಸಿರುವ *ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ* (೨೦೧೦) ಕೃತಿಯಲ್ಲಿರುವ ಎಚ್.ಎಸ್. ಗೋಪಾಲರಾವ ಅವರ *"ಬೆಳಗಾವಿ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರು"* ಲೇಖನದಲ್ಲಿ ಬೆಳಗಾವಿ ಜಿಲ್ಲೆಗೆ ಸೀಮಿತವಾದಂತೆ ಕಲ್ಯಾಣದ ಚಾಳುಕ್ಯರ ರಾಜಕೀಯ ಇತಿಹಾಸದ ಪರಿಚಯವಿದೆ. ಡಿ.ಎಂ. ನಾಗರಾಜು ಅವರ *"ಬೆಳಗಾವಿ ಜಿಲ್ಲೆಯ ಕಲ್ಯಾಣ ಚಾಲುಕ್ಯರ ಶೈವ ಧಾರ್ಮಿಕ ಶಾಸನಗಳು"* ಲೇಖನದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲಾವಧಿಯ

ಕೆಲವು ಶೈವ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಯ ಶೈವ ಧರ್ಮದ ವೈಶಿಷ್ಟ್ಯತೆಯನ್ನು ಗಮನಿಸಲಾಗಿದೆ. ಎಸ್.ಕೆ. ಕೊಪ್ಪ ಅವರ *"ರಾಯಬಾಗ ತಾಲೂಕಿನ ಶಾಸನಗಳು"* ಲೇಖನದಲ್ಲಿ ರಾಯಬಾಗ ತಾಲ್ಲೂಕಿನ ಪ್ರಕಟಿತ ಶಾಸನಗಳ ಮಹತ್ವವನ್ನು ತಿಳಿಸಲಾಗಿದೆ. ಎಸ್.ಕೆ. ಮೇಲಕಾರ ಅವರ *"ಗೋಕಾಕ ತಾಲೂಕಿನ ಶಾಸನಗಳು"* ಲೇಖನದಲ್ಲಿ ಗೋಕಾಕ ತಾಲ್ಲೂಕಿನ ಕೆಲವು ಮಹತ್ವದ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸಲಾಗಿದೆ. ಕೆ.ಎಸ್. ಪಾಟೀಲ ಅವರ *"ಸವದತ್ತಿ ತಾಲೂಕಿನ ಶಾಸನಗಳು"* ಲೇಖನದಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳ ಸಾರಾಂಶವನ್ನು ಸಂಗ್ರಹಿಸಲಾಗಿದೆ. ರಮಾ ಜಿ. ಗುಂಡುರಾವ ಮತ್ತು ಎಸ್.ಕೆ. ಮೇಲಕಾರ ಅವರ *"ಚಿಕ್ಕೋಡಿ ತಾಲೂಕಿನ ಶಾಸನಗಳು"* ಲೇಖನದಲ್ಲಿ ಚಿಕ್ಕೋಡಿ ತಾಲ್ಲೂಕಿನ ಕೆಲವು ಪ್ರಕಟಿತ ಶಾಸನಗಳ ಸಾಂಸ್ಕೃತಿಕ ಮಹತ್ವವನ್ನು ಅವಲೋಕಿಸಲಾಗಿದೆ. ಎಸ್.ಎಂ. ನಾಗಭೂಷಣ ಅವರ *"ಬೆಳಗಾವಿ ತಾಲೂಕಿನ ಪ್ರಾಚೀನ ದೇವಾಲಯ ವಾಸ್ತು ಶಿಲ್ಪಗಳು"* ಲೇಖನದಲ್ಲಿ ಬೆಳಗಾವಿ ತಾಲ್ಲೂಕಿನ ಕೆಲವು ದೇವಾಲಯಗಳ ವಾಸ್ತು ಲಕ್ಷಣಗಳು ಮತ್ತು ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಪರಿಚಯಿಸಲಾಗಿದೆ.

ಸಿ.ಎನ್. ಕೋಳಿಗುಡ್ಡ ಅವರ *"ಚಿಕ್ಕೋಡಿ ತಾಲೂಕಿನ ದೇವಾಲಯಗಳು ಮತ್ತು ಶಿಲ್ಪಗಳು"* ಲೇಖನದಲ್ಲಿ ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಕೆಲವು ಮಹತ್ವದ ಶಾಸನಗಳು ಮತ್ತು ದೇವಾಲಯಗಳನ್ನು ಗಮನಿಸಲಾಗಿದೆ. ಕೆ.ಎಸ್. ಪಾಟೀಲ ಅವರ *"ಸವದತ್ತಿ ತಾಲೂಕಿನ ದೇವಾಲಯ ಮತ್ತು ಶಿಲ್ಪಗಳು"* ಲೇಖನದಲ್ಲಿ ಸವದತ್ತಿ ತಾಲ್ಲೂಕಿನ ಕೆಲವು ಅಪರೂಪದ ದೇವಾಲಯಗಳ ವಾಸ್ತು ಲಕ್ಷಣಗಳು ಮತ್ತು ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಅವಲೋಕಿಸಲಾಗಿದೆ. ರಮೇಶ ಎಸ್. ಸತ್ಯಾಯಿಗೋಳ ಅವರ *"ಹುಕ್ಕೇರಿ ತಾಲೂಕಿನ ದೇವಾಲಯಗಳು"* ಲೇಖನದಲ್ಲಿ ಹುಕ್ಕೇರಿ ತಾಲ್ಲೂಕಿನ ಕೆಲವು ಮಹತ್ವದ ದೇವಾಲಯಗಳನ್ನು ಪರಿಚಯಿಸಲಾಗಿದೆ. ಎಸ್.ಜಿ. ಚಲವಾದಿ ಅವರ *"ಬೆಳಗಾವಿ ಜಿಲ್ಲೆಯ ಜೈನ ಕೇಂದ್ರಗಳು"* ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಸಂಕೇಶ್ವರ, ಸವದತ್ತಿ, ರಾಯಬಾಗ ಇತ್ಯಾದಿ ಕೆಲವು ಜೈನ ಕೇಂದ್ರಗಳ ಮಾಹಿತಿಯಿದೆ. ಪಿ.ವಿ. ಕೃಷ್ಣಮೂರ್ತಿ ಅವರ *"ಬೆಳಗಾವಿ ಜಿಲ್ಲೆಯ ಪ್ರಾಚೀನ ಆಡಳಿತ ಘಟಕಗಳು"* ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಪ್ರದೇಶವು ಒಳಪಟ್ಟಿದ್ದ ಆಡಳಿತ ವಿಭಾಗಗಳ ಸಂಕ್ಷಿಪ್ತ ಪರಿಚಯವಿದೆ. ಬಿ. ರಾಜಶೇಖರಪ್ಪ ಅವರ *"ಬೆಳಗಾವಿ ಜಿಲ್ಲೆಯ ಪ್ರಾಚೀನ ಕವಿಗಳು"* ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಪಾರ್ಶ್ವಪಂಡಿತ, ರುದ್ರಭಟ್ಟ, ಕಮಲಾದಿತ್ಯ ಮೊದಲಾದ ಕೆಲವು ಕವಿಗಳ ಸಂಕ್ಷಿಪ್ತ ಪರಿಚಯವಿದೆ. ಈ ಎಲ್ಲ ಲೇಖನಗಳು ಕೂಹುಂಡಿನಾಡಿನ ಪ್ರದೇಶದ ಮಧ್ಯಭಾಗವಾಗಿದ್ದ ಇಂದಿನ ಬೆಳಗಾವಿ ಜಿಲ್ಲೆಯ ಪ್ರದೇಶದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನಕ್ಕೆ ಮಾರ್ಗಸೂಚಿಗಳಾಗಿವೆ.

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳು *ಎನ್ಯುವಲ್ ರಿಪೋರ್ಟ್ಸ್ ಆನ್ ಸೌತ್ ಇಂಡಿಯನ್ ಎಪಿಗ್ರಫಿ ೧೯೨೭–೨೮, ೧೯೨೮–೨೯, ೧೯೪೦–೪೧, ೧೯೪೨–೪೩, ೧೯೪೪–*

೪೫, ೧೯೪೫-೪೬, ೧೯೫೧-೫೨, ೧೯೫೨-೫೩, ೧೯೫೬-೫೭, ೧೯೫೯-೬೦, ೧೯೬೧-೬೨, ೧೯೬೩-೬೪, ೧೯೭೩-೭೪. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್ ಸಂಪುಟ-೧೦, ೧೧-೧, ೧೫, ೨೦. ಇಂಡಿಯನ್ ಎಂಟಿಕ್ವೇರಿ ಸಂಪುಟ-೨, ೬, ೧೦, ೧೪, ೧೮, ೧೯. ಎಪಿಗ್ರಫಿಯಾ ಇಂಡಿಕಾ ಸಂಪುಟ-೧೩, ೨೧. ಕರ್ನಾಟಕ ಇನ್ಸ್‌ಕ್ರಿಪ್ಶನ್ಸ್ ಸಂಪುಟ-೧, ೫, ೬. ಜರ್ನಲ್ ಆಫ್ ಬಾಂಬೆ ಬ್ರ್ಯಾಂಚ್ ಆಫ್ ರಾಯಲ್ ಏಶಿಯಾಟಿಕ್ ಸೊಸೈಟಿ ಸಂಪುಟ-೧೦, ೧೩. ಕನ್ನಡ ರಿಸರ್ಚ್ ಇನ್ಸಿಟ್ಯೂಟ್ ಎನ್ಯುವಲ್ ರಿಪೋರ್ಟ್ ೧೯೪೬-೪೭ ವಾರ್ಷಿಕ ವರದಿಗಳು ಮತ್ತು ಶಾಸನ ಸಂಪುಟಗಳಲ್ಲಿ ಪ್ರಕಟವಾಗಿವೆ. ಕೆ.ಜಿ. ಕುಂದಣಗಾರ ಅವರು ಸಂಪಾದಿಸಿರುವ *ಇನ್ಸ್‌ಕ್ರಿಪ್ಶನ್ಸ್ ಇನ್ ನಾರ್ದನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್* (೧೯೩೯) ಕೃತಿಯಲ್ಲಿ ರಾಯಬಾಗ, ಹಣ್ಣಿಕೇರಿ ಶಾಸನಗಳ ಪಾಠಗಳನ್ನು ಸಂಗ್ರಹಿಸಲಾಗಿದೆ. ಬಿ.ಆರ್. ಹಂದೂರ ಅವರು ಸಂಪಾದಿಸಿರುವ *ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು* (೨೦೧೦) ಕೃತಿಯಲ್ಲಿ ಇದುವರೆಗೂ ಬೆಳಗಾವಿ ಜಿಲ್ಲೆಯಲ್ಲಿ ಬೆಳಕಿಗೆ ಬಂದಿರುವ ಜೈನ ಶಾಸನಗಳ ಪಾಠಗಳ ಸಂಗ್ರಹವಿದೆ. ಜಿ.ಎನ್. ಉಪಾಧ್ಯ ಮತ್ತು ದೇವರಕೊಂಡಾರೆಡ್ಡಿ ಅವರು ಸಂಪಾದಿಸಿರುವ *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೬ : ಮಹಾರಾಷ್ಟ್ರದ ಕನ್ನಡ ಶಾಸನಗಳು* (೨೦೦೧) ಎಂಬ ಸಂಪುಟದಲ್ಲಿ ಕೊಲ್ಲಾಪುರ, ಸಾಂಗಲಿ ಜಿಲ್ಲೆಯ ಕೆಲವು ಕನ್ನಡ ಶಾಸನಗಳ ಪಾಠಗಳನ್ನು ಸಂಗ್ರಹಿಸಲಾಗಿದೆ. ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ *ವಿಜಾಪುರ ಜಿಲ್ಲೆಯ ಶಾಸನಸೂಚಿ (೧೯೭೬), ಮಹಾರಾಷ್ಟ್ರದ ಕನ್ನಡ ಶಾಸನಗಳು (೧೯೮೭)*, ಶ್ರೀನಿವಾಸ ರಿತ್ತಿ ಮತ್ತು ಅನಂತ ಬಿ. ಕರವೀಕರ ಅವರು ಸಂಪಾದಿಸಿರುವ *ಕೊಲ್ಲಾಪುರ ಜಿಲ್ಲೆಯ ಶಾಸನಗಳು* (೨೦೦೦) ಕೃತಿಗಳಲ್ಲಿ ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಿವೆ. ಈ ಎಲ್ಲ ಶಾಸನಗಳನ್ನು ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರಾಥಮಿಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಈ ಎಲ್ಲ ಶಾಸನಗಳು ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಆಕರಗಳಾಗಿವೆ.

ಕೂಹುಂಡಿನಾಡಿನ ಕೆಲವು ಗ್ರಾಮಗಳಲ್ಲಿ ಹಲವು ವಿದ್ವಾಂಸರು ಮತ್ತು ಸಂಶೋಧಕರು ಕೆಲವು ಶಾಸನಗಳನ್ನು ಬೆಳಕಿಗೆ ತಂದು ಅವುಗಳನ್ನು ವಿವಿಧ ನಿಯತಕಾಲಿಕೆಗಳಲ್ಲಿ ಸಂಶೋಧನ ಲೇಖನಗಳ ರೂಪದಲ್ಲಿ ಪ್ರಕಟಿಸಿದ್ದಾರೆ. ಇವುಗಳಲ್ಲಿ ಆರ್.ಎನ್. ಗುರವ ಅವರ *"ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ"* ಲೇಖನಗಳಲ್ಲಿ ಆಯಾ ಶಾಸನಗಳ ಪಾಠ ಮತ್ತು ಅವುಗಳ ಸಾಂಸ್ಕೃತಿಕ ಆಯಾಮಗಳನ್ನು ಅಧ್ಯಯನ ಮಾಡಲಾಗಿದೆ. ಎಸ್.ಎಚ್. ರಿತ್ತಿ ಅವರ *"ಬೆಳವಡಿಯಲ್ಲಿಯ ಶಿಲಾಲಿಪಿಗಳು"*, ಎಂಬ ಲೇಖನದಲ್ಲಿ ಬೆಳವಡಿಯ ನಾಲ್ಕು ಶಾಸನಗಳ ಪಾಠ ಮತ್ತು ಇವುಗಳ ಚಾರಿತ್ರಿಕ ಮಹತ್ವವನ್ನು ಅವಲೋಕಿಸಲಾಗಿದೆ. ಎಂ.ಬಿ. ನೇಗಿನಹಾಳ ಅವರ *"ಒಂದನೆಯ ಸೋಮೇಶ್ವರನ ಮುಗಟಖಾನ ಹುಬ್ಬಳ್ಳಿ ಶಾಸನ", "ಉಳ್ಳಾಗಡ್ಡಿ ಖಾನಾಪುರ ಶಾಸನಗಳು"* ಎಂಬ ಲೇಖನಗಳಲ್ಲಿ ಆಯಾ ಶಾಸನಗಳ ಪಾಠ ಮತ್ತು ಇವುಗಳ ಮಹತ್ವವನ್ನು ಗಮನಿಸಲಾಗಿದೆ. ಆರ್.ಎಂ. ಷಡಕ್ಷರಯ್ಯ ಅವರ *"ಬೆಳಗಾವಿ*

ಜಿಲ್ಲೆಯ ಶಾಸನಗಳು", "ಕರೋಶಿಯಲ್ಲಿ ಜೈನ ಸಿಂಹಪೀಠ ಶಾಸನ ಪತ್ತೆ" ಎಂಬ ಲೇಖನಗಳಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಯಕ್ಸಂಬಾ, ಕಲ್ಲೊಳೆ, ಸವದತ್ತಿ, ಬೈಲಹೊಂಗಲ, ಹಣ್ಣಿಕೇರಿ, ರಾಯಬಾಗ, ಬೆಳವಡಿ ಮೊಲದಾದ ಕೆಲವು ಶಾಸನಗಳ ಸಾಂಸ್ಕೃತಿಕ ಮಹತ್ವವನ್ನು ಹಾಗೂ ಕರೋಶಿಯಲ್ಲಿ ಬೆಳಕಿಗೆ ಬಂದಿರುವ ಜೈನ ಸಿಂಹಪೀಠದ ಲಕ್ಷಣಗಳನ್ನು ಗಮನಿಸಲಾಗಿದೆ.

ಅಪ್ಪಣ್ಣ ಎನ್. ಹಂಜೆ ಅವರ "ರಾಯಬಾಗದ ವೀರಗಲ್ಲು ಶಾಸನ", "ಪಾಶ್ಚಾಪುರದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ", "ಉಗರಗೋಳದ ಜೈನ ಸಿಂಹಪೀಠ ಶಾಸನ" ಲೇಖನಗಳಲ್ಲಿ ಆಯಾ ಶಾಸನದ ಪಾಠ, ಸಾರಾಂಶ ಮತ್ತು ಸಾಂಸ್ಕೃತಿಕ ಮಹತ್ವವನ್ನು ಚರ್ಚಿಸಲಾಗಿದೆ. ಚಂದ್ರಶೇಖರ ತಬೋಜಿ ಅವರ "ಕೊಣ್ಣೂರಿನ ಜಿನಬಿಂಬ ಶಾಸನ", "ಗೋಕಾಕದ ಜಿನಬಿಂಬ ಶಾಸನ" ಲೇಖನಗಳಲ್ಲಿ ಆಯಾ ಶಾಸನಗಳ ಪಾಠ ಮತ್ತು ಮಹತ್ವವನ್ನು ಪರಿಚಯಿಸಲಾಗಿದೆ. ಹನುಮಾಕ್ಷಿ ಗೋಗಿ ಅವರ "ಹುಕ್ಕೇರಿ ತಾಲೂಕಿನ ಶಾಸನಗಳು", "ಸವದತ್ತಿ ತಾಲೂಕಿನ ಅಪ್ರಕಟಿತ ಶಾಸನಗಳು" ಲೇಖನಗಳಲ್ಲಿ ಆಯಾ ತಾಲ್ಲೂಕಿನಲ್ಲಿ ಬೆಳಕಿಗೆ ಬಂದಿರುವ ಕೆಲವು ಶಾಸನಗಳ ಪಾಠ ಮತ್ತು ಅವುಗಳ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಲಾಗಿದೆ. ಮಹಾಂತೇಶ ಎಂ. ಅಕ್ಕಿ ಅವರ "ಯಡ್ರಾವಿಯ ಹನ್ನೊಂದು ಹೊಸ ಶಾಸನಗಳು" ಲೇಖನದಲ್ಲಿ ಪ್ರಸ್ತುತ ಶಾಸನಗಳ ಪಾಠ ಮತ್ತು ಸಾರಾಂಶವನ್ನು ಸಂಗ್ರಹಿಸಲಾಗಿದೆ. ಹನುಮಾಕ್ಷಿ ಗೋಗಿ ಮತ್ತು ವಿ.ಎಸ್. ಮಾಳಿ ಅವರ "ರಟ್ಟರ ಕಾಲದ ಶಾಸನ ಪತ್ತೆ" ಲೇಖನದಲ್ಲಿ ಜಮಖಂಡಿ ತಾಲ್ಲೂಕಿನ ಸಸಾಲಟ್ಟಿ ಗ್ರಾಮದಲ್ಲಿ ಬೆಳಕಿಗೆ ಬಂದಿರುವ ಸವದತ್ತಿ ರಟ್ಟ ಮನೆತನದ ಕಾರ್ತವೀರ್ಯನ ಆಳ್ವಿಕೆಯ ಕಾಲಾವಧಿಯ ಶೈವ ಶಾಸನದ ಮಹತ್ವವನ್ನು ವರದಿ ಮಾಡಲಾಗಿದೆ.

ಹನುಮಾಕ್ಷಿ ಗೋಗಿ ಅವರ "ಕುಹುಂಡಿ ಪಟ್ಟಣ ಎಲ್ಲಿದೆ?" ಲೇಖನದಲ್ಲಿ ಆದಾಗಲೇ ಕೆಲವು ಸಂಶೋಧಕರು ಕೂಹುಂಡಿನಾಡಿನ ಕೇಂದ್ರ ಪಟ್ಟಣವನ್ನು ಗುರುತಿಸುವ ನಿಟ್ಟಿನಲ್ಲಿ ಮಾಡಿದ ಅಧ್ಯಯನಗಳು ಮತ್ತು ಹಲವು ಶಾಸನಗಳನ್ನು ಪೂರಕವಾಗಿಟ್ಟುಕೊಂಡು ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವೇ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಎಂದು ಗುರುತಿಸಿದ್ದಾರೆ. ಅಪ್ಪಣ್ಣ ಎನ್. ಹಂಜೆ ಅವರ "ಬೆಳಗಾವಿ ಜಿಲ್ಲೆಯ ಬಸದಿಗಳು ಮತ್ತು ಶಿಲ್ಪಗಳು", "ಗೋಕಾಕ ಪರಿಸರದ ಬಸದಿಗಳು" ಲೇಖನಗಳಲ್ಲಿ ಬೆಳಗಾವಿ ಜಿಲ್ಲೆಯ ಜೈನ ಶಾಸನಗಳಲ್ಲಿ ಉಲ್ಲೇಖಿತ ಬಸದಿಗಳು, ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ. ಬಿ.ಆರ್. ಹಂದೂರ ಅವರ "ಬೆಳಗಾವಿ ಜಿಲ್ಲೆಯ ಪುರಾತನ ಜಿನಾಲಯಗಳು" ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ರಾಯಬಾಗ, ಅಮ್ಮಣಗಿ, ಕಲ್ಲೊಳೆ ಮೊದಲಾದ ಕೆಲವು ಜೈನ ಕೇಂದ್ರಗಳಲ್ಲಿರುವ ಬಸದಿಗಳ ಸಂಕ್ಷಿಪ್ತ ವಿವರಗಳಿವೆ. ಬಸವರಾಜ ಅಮ್ಮಣಗಿ ಅವರ "ರಾಯಬಾಗದ ಸಾಂಸ್ಕೃತಿಕ ಅಧ್ಯಯನ" ಲೇಖನದಲ್ಲಿ ರಾಯಬಾಗದ ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ರಾಜಾದಿತ್ಯ ಕವಿಯ ವಿವರಗಳಿವೆ. ಶಿವಗೌಡ ಪಾಟೀಲ ಅವರ "ರಾಜಾದಿತ್ಯ" ಲೇಖನದಲ್ಲಿ ಸವದತ್ತಿಯ ರಟ್ಟರ ಆಶ್ರಯದಲ್ಲಿದ್ದ ಜೈನಕವಿ ರಾಜಾದಿತ್ಯನ ಕಾವ್ಯಗಳನ್ನು ಪರಿಚಯಿಸಲಾಗಿದೆ. ಶ್ರೀನಿವಾಸ ಪಾಡಿಗಾರ ಅವರ "ಬೆಳಗಾವಿ ಜಿಲ್ಲಾ ಪ್ರದೇಶದ ದೇವಾಲಯ ವಾಸ್ತು" ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಕೆಲವು

ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳನ್ನು ಅಧ್ಯಯನ ಮಾಡಿಲಾಗಿದೆ. ಅ. ಸುಂದರ ಅವರ *"ಸಮ್ ಜೈನ ಟೆಂಪಲ್ಸ್ ಇನ್ ನಾರ್ಥ್ ಕರ್ನಾಟಕ ದೆಯರ್ ಡಿಸ್ಟಿನಿಕ್ಟಿವ್ ಫ್ಯೂಚರ್ಸ್"* ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಕೆಲವು ದೇವಾಲಯಗಳ ವಿಶೇಷ ಲಕ್ಷಣಗಳನ್ನು ಅವಲೋಕಿಸಲಾಗಿದೆ. ಸ್ಮಿತಾ ಸುರೇಬಾನಕರ ಅವರ *"ಬೆಳಗಾವಿ ಪರಿಸರದ ಶಾಸನೋಕ್ತ ತೆರಿಗೆ ಸಂಗ್ರಹಕಾರ ಅಧಿಕಾರಿವರ್ಗ"* ಲೇಖನದಲ್ಲಿ ಬೆಳಗಾವಿ ತಾಲ್ಲೂಕಿನ ಕೆಲವು ಶಾಸನಗಳಲ್ಲಿ ಉಲ್ಲೇಖಿತ ತೆರಿಗೆಗಳು ಮತ್ತು ಇವುಗಳನ್ನು ಸಂಗ್ರಹಿಸುತ್ತಿದ್ದ ಅಧಿಕಾರಿಗಳ ಕುರಿತು ಚರ್ಚಿಸಲಾಗಿದೆ. ರಾಜಶೇಖರ ಇಚ್ಚಂಗಿ ಅವರ *"ಕವಿಳಾಸಪುರ ಮತ್ತು ಬಸವಣ್ಣನವರ ವಂಶಾವಳಿ : ಅರ್ಜುನವಾಡ ಶಾಸನ-ಕ್ರಿ.ಶ. ೧೨೬೫* ಲೇಖನದಲ್ಲಿ ಬಸವಣ್ಣನವರ ಪೂರ್ವಜರಿಗೆ ಸಂಬಂಧಿಸಿದಂತೆ ಹುಕ್ಕೇರಿ ತಾಲ್ಲೂಕಿನ ಅರ್ಜುನವಾಡದಲ್ಲಿರುವ ಶಾಸನದ ಮಹತ್ವವನ್ನು ಪರಿಚಯಿಸಲಾಗಿದೆ. ಈ ಎಲ್ಲ ಲೇಖನಗಳು ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಪರೋಕ್ಷ ಆಕರಗಳಾಗಿವೆ.

ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳ ಪ್ರದೇಶದ ಅರಸು ಮನೆತನಗಳು, ದೇವಾಲಯಗಳು, ಬಸದಿಗಳು, ಧರ್ಮಗಳು, ಶಾಸನಗಳು, ಕವಿಗಳು, ಆಡಳಿತ ವಿಭಾಗಗಳು, ಕೋಟೆ-ಕೊತ್ತಲುಗಳ ಕುರಿತಾಗಿ ಇದುವರೆಗೂ ಕೈಗೊಳ್ಳಲಾಗಿರುವ ಕೆಲವು ಪಿಎಚ್.ಡಿ. ಮತ್ತು ಎಂ.ಫಿಲ್. ಸಂಶೋಧನ ಅಧ್ಯಯನಗಳು ಕೂಹುಂಡಿನಾಡಿನ ಶಾಸನಗಳ ಸಾಂಸ್ಕೃತಿಕ ಆಯಾಮಗಳ ಅಧ್ಯಯನಕ್ಕೆ ಮಾಧ್ಯಮಿಕ ಆಕರಗಳಾಗಿವೆ. ಶಿ.ಬಾ. ಪಾಟೀಲ ಅವರ *ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ* (೧೯೬೩) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಮಳಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಕೂಹುಂಡಿನಾಡಿನ ಸುಗಂಧವರ್ತಿ ಹನ್ನೆರಡು ಮತ್ತು ವೇಣುಗ್ರಾಮ ಏಪ್ಪತ್ತು ಆಡಳಿತ ವಿಭಾಗಗಳ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸವದತ್ತಿಯ ರಟ್ಟರ ಕಾಲಾವಧಿಯ ಕೆಲವು ಶಾಸನಗಳನ್ನು ಪೂರಕವಾಗಿಟ್ಟುಕೊಂಡು, ಈ ಮನೆತನದ ಆಳರಸರ ಸಾಧನೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಚಯಿಸಲಾಗಿದೆ. ಜಿ.ಎನ್. ಉಪಾಧ್ಯ ಅವರ *ಮಹಾರಾಷ್ಟ್ರದ ಕನ್ನಡ ಶಾಸನಗಳು : ಒಂದು ಸಾಂಸ್ಕೃತಿಕ ಅಧ್ಯಯನ* (೧೯೯೯) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಇಂದಿನ ಮಹಾರಾಷ್ಟ್ರ ರಾಜ್ಯದಲ್ಲಿ ಲಭ್ಯವಿರುವ ಕನ್ನಡ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಸಮಕಾಲೀನ ಅರಸು ಮನೆತನಗಳು ಮತ್ತು ಅವುಗಳ ಆಡಳಿತ ವ್ಯವಸ್ಥೆಯನ್ನು ಅಧ್ಯಯನ ಮಾಡಲಾಗಿದೆ. ಇದರಲ್ಲಿ ಕೂಹುಂಡಿನಾಡಿನ ವ್ಯಾಪ್ತಿಯ ಇಂದಿನ ಕೊಲ್ಲಾಪುರ ಮತ್ತು ಸಾಂಗಲಿ ಜಿಲ್ಲೆಗಳ ಪ್ರದೇಶದ ಚಾರಿತ್ರಿಕ ಹಿನ್ನೆಲೆಯ ಅಧ್ಯಯನಕ್ಕೆ ಪೂರಕವಾಗಿದೆ. ಬಿ.ಆರ್. ಹಂದೂರ ಅವರ *ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ* (೨೦೦೩) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಬೆಳಗಾವಿ ಜಿಲ್ಲೆಯ ಪ್ರದೇಶದಾದ್ಯಂತದ ಜೈನಾವಶೇಷಗಳನ್ನು ವರದಿ ಮಾಡಲಾಗಿದೆ. ರಾಜಶೇಖರ ಇಚ್ಚಂಗಿ ಅವರ *ಪಾರ್ಶ್ವನಾಥ ಪುರಾಣ : ಒಂದು ತೌಲನಿಕ ಅಧ್ಯಯನ* (೨೦೦೦) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಸವದತ್ತಿಯ ರಟ್ಟರ ಆಶ್ರಯದಲ್ಲಿದ್ದ ಪಾರ್ಶ್ವಪಂಡಿತನ ಜೀವನ ಮತ್ತು ಈತನು ರಚಿಸಿದ ಪಾರ್ಶ್ವನಾಥ ಪುರಾಣವನ್ನು ಇತರೆ ಪಾರ್ಶ್ವನಾಥ

ಪುರಾಣಗಳೊಂದಿಗೆ ತೌಲನಿಕವಾಗಿ ಗಮನಿಸಲಾಗಿದೆ.

ಸಂಗಮೇಶ ಜಿ. ಚಲವಾದಿ ಅವರ *ಬೆಳಗಾವಿ ಜಿಲ್ಲೆಯ ಜೈನ ವಾಸ್ತು-ಶಿಲ್ಪಕಲೆ* (೨೦೦೨) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿರುವ ಕೆಲವು ಜೈನ ಬಸದಿಗಳು ಮತ್ತು ಶಿಲ್ಪಗಳನ್ನು ಕೇಂದ್ರವಾಗಿಟ್ಟುಕೊಂಡು ಇಲ್ಲಿಯ ಜೈನ ವಾಸ್ತು-ಶಿಲ್ಪ ಕಲೆಯ ಲಕ್ಷಣಗಳನ್ನು ಅವಲೋಕಿಸಲಾಗಿದೆ. ಸಿ.ಎನ್. ಕೋಳಿಗುಡ್ಡ ಅವರ *ಆರ್ಕಿಯಾಲಜಿ ಆಫ್ ಚಿಕ್ಕೋಡಿ ಅಂಡ್ ಗೋಕಾಕ್ ತಾಲೂಕ್ಸ್* (೨೦೦೫) ಪಿಎಚ್.ಡಿ. ಮಹಾಪ್ರಬಂಧದಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ಗೋಕಾಕ ತಾಲ್ಲೂಕುಗಳಲ್ಲಿ ಲಭ್ಯವಿರುವ ಶಾಸನಗಳು, ದೇವಾಲಯಗಳು, ಶಿಲ್ಪಗಳು ಇತ್ಯಾದಿ ಪುರಾತತ್ವ ಅವಶೇಷಗಳನ್ನು ವರದಿ ರೂಪದಲ್ಲಿ ಅಧ್ಯಯನ ಮಾಡಲಾಗಿದೆ. ಇವೆರಡೂ ತಾಲ್ಲೂಕುಗಳು ಕೂಹುಂಡಿನಾಡಿನ ವ್ಯಾಪ್ತಿಯಲ್ಲಿದ್ದು, ಪ್ರಸ್ತುತ ಮಹಾಪ್ರಬಂಧವು ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಮಾಧ್ಯಮಿಕ ಆಕರವಾಗಿದೆ. ಸಂಜಯ ಎನ್. ಹಂಜೆ ಅವರ *ಗೋಕಾಕ ತಾಲೂಕು ಮತ್ತು ಜೈನಧರ್ಮ* (೨೦೦೯) ಎಂ.ಫಿಲ್. ಪ್ರಬಂಧದಲ್ಲಿ ಗೋಕಾಕ ತಾಲ್ಲೂಕಿನ ಗೋಕಾಕ, ಕಲ್ಲೊಳೆ, ಯಾದವಾಡ, ಕುಲಗೋಡು, ಕೊಣ್ಣೂರು ಮೊದಲಾದ ಕೆಲವು ಗ್ರಾಮಗಳಲ್ಲಿರುವ ಜೈನ ಶಾಸನಗಳು, ಬಸದಿಗಳು, ಶಿಲ್ಪಗಳನ್ನು ಕೇಂದ್ರವಾಗಿಟ್ಟುಕೊಂಡು, ಈ ಪ್ರದೇಶದಲ್ಲಿ ಜೈನ ಧರ್ಮಕ್ಕೆ ರಾಜಾಶ್ರಯವನ್ನು ಕೊಡಮಾಡಿದ ಆಳರಸರು, ಬಸದಿಗಳ ವಾಸ್ತು ಲಕ್ಷಣಗಳು, ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಅಧ್ಯಯನ ಮಾಡಲಾಗಿದೆ. ಈ ಎಲ್ಲ ಪ್ರಬಂಧಗಳು ಸಂಬಂಧಿಸಿದ ಪ್ರದೇಶಕ್ಕೆ ಮತ್ತು ವಿಷಯಕ್ಕೆ ಸೀಮಿತವಾದ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳನ್ನು ಕೇಂದ್ರವಾಗಿಟ್ಟುಕೊಂಡು ಕೈಗೊಂಡ ಅಧ್ಯಯನಗಳಾಗಿವೆ. ಪ್ರಸ್ತುತ ಮಹಾಪ್ರಬಂಧದ ಬರವಣಿಗೆಯಲ್ಲಿ ಈ ಎಲ್ಲ ಪ್ರಬಂಧಗಳನ್ನು ಸಂದರ್ಭಾನುಸಾರವಾಗಿ ಮಾಧ್ಯಮಿಕ ಆಕರಗಳನ್ನಾಗಿ ಬಳಸಿಕೊಂಡು ಕೂಹುಂಡಿನಾಡಿನ ಸಮಗ್ರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಲು ಪ್ರಯತ್ನಿಸಲಾಗಿದೆ.

ಈ ಮೇಲಿನ ಎಲ್ಲ ಕೃತಿಗಳು, ಲೇಖನಗಳು, ಪ್ರಬಂಧಗಳಲ್ಲಿ ಕೂಹುಂಡಿನಾಡನ್ನು ಸಮಗ್ರವಾಗಿ ಪರಿಗಣನೆಗೆ ತೆಗೆದುಕೊಳ್ಳದೇ ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದ ಒಂದೊಂದು ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಕೈಗೊಂಡ ಸ್ವತಂತ್ರವಾದ ಅಧ್ಯಯನಗಳಾಗಿವೆ. ಆದರೂ ಇವುಗಳು ಕೂಹುಂಡಿನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲು ಮಾರ್ಗದರ್ಶಿಯಾಗಿ ಮುನ್ನಡೆಸಿವೆ. ಈ ಮೇಲಿನ ಎಲ್ಲ ಅಧ್ಯಯನಗಳ ಸಮೀಕ್ಷೆಯ ಹಿನ್ನೆಲೆಯಲ್ಲಿ "ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯ ಕುರಿತು ಪ್ರತ್ಯೇಕ ಅಧ್ಯಯನದ ಅಗತ್ಯವನ್ನು ಅರಿತು ಈ ವಿಷಯವನ್ನು ಆಯ್ದುಕೊಳ್ಳಲಾಗಿದೆ.

೧.೫. ಅಧ್ಯಯನದ ಪ್ರಧಾನ ಆಕರಗಳು

ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನದಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಪ್ರಶಸ್ತಿ ಶಾಸನಗಳು, ದಾನ-ದತ್ತಿ ಶಾಸನಗಳು,

ನಿಷಿಧಿಶಾಸನಗಳು, ವೀರಗಲ್ಲು ಶಾಸನಗಳು, ಮಹಾಸತಿ ಶಾಸನಗಳು, ಪಾದಪೀಠ ಶಾಸನಗಳು ಮೊದಲಾದ ಶಾಸನಗಳು ಪ್ರಧಾನ ಆಕರಗಳಾಗಿವೆ. ಈ ನಿಟ್ಟಿನಲ್ಲಿ ಇದುವರೆಗೂ ೧೭೨ಕ್ಕೂ ಹೆಚ್ಚು ಶಾಸನಗಳು ಬೆಳಕಿಗೆ ಬಂದಿವೆ. ಹಾಗೆಯೇ ಕೂಹುಂಡಿನಾಡಿನ ಹೊರಭಾಗದ ೧೨ ಶಾಸನಗಳಲ್ಲಿ ಈ ನಾಡಿನ ಹೆಸರು, ಈ ನಾಡಿನ ವ್ಯಾಪ್ತಿಯಲ್ಲಿ ಬಳಕೆಯಲ್ಲಿದ್ದ ಕೂಹುಂಡಿಕೋಲು ಎಂಬ ಅಳತೆ ಪಟ್ಟಿ, ಇಲ್ಲಿಯ ವ್ಯಾಪಾರಿಗಳು ಇತರೆಡೆಯಲ್ಲಿ ನಿರ್ಮಿಸಿರುವ ದೇವಾಲಯಗಳು, ಬಸದಿಗಳು, ಕೊಟ್ಟಿರುವ ದಾನ-ದತ್ತಿಗಳು ಮೊದಲಾದವುಗಳ ನಿರೂಪಣೆಗಳು ಗೋಚರಿಸುತ್ತವೆ. ಹೀಗೆ ಕೂಹುಂಡಿನಾಡಿನ ಸಮಕಾಲೀನ ಅರಸರು, ರಾಣಿಯರು, ಯುವರಾಜರು, ಅಧಿಕಾರಿಗಳು, ಆಡಳಿತ ವಿಭಾಗಗಳು, ಧರ್ಮಗಳು, ಸಾಮಾಜಿಕ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿ, ದೇವಾಲಯಗಳು ಮತ್ತು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ, ಶೈಕ್ಷಣಿಕ ವ್ಯವಸ್ಥೆ, ಶೈವ ಆಚಾರ್ಯರು, ವೈಷ್ಣವ ಆಚಾರ್ಯರು, ಜೈನ ಆಚಾರ್ಯರು, ಕವಿಗಳು, ಸ್ಥಳನಾಮಗಳು, ಶಾಸನ ರೂವಾರಿಗಳು, ಭೌಗೋಳಿಕ ಸ್ವರೂಪ ಮೊದಲಾದ ವಿಚಾರಗಳ ಅಧ್ಯಯನಕ್ಕೆ ಇದುವರೆಗೂ ಒಟ್ಟು ೧೮೪ ಶಾಸನಗಳು ಲಭ್ಯವಾಗಿವೆ. ಈ ಶಾಸನಗಳ ಜೊತೆಗೆ ಸಮಕಾಲೀನ ದೇವಾಲಯಗಳು, ಬಸದಿಗಳು, ಶಿಲ್ಪಗಳು, ಕೋಟೆ-ಕೊತ್ತಲುಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳೂ ಪೂರಕ ಆಕರಗಳಾಗಿವೆ. ಹಾಗೆಯೇ ಕೂಹುಂಡಿನಾಡಿನ ಆಳರಸರ ಆಶ್ರಯದಲ್ಲಿದ್ದ ಕವಿಗಳು ರಚಿಸಿದ ಕೃತಿ-ಕಾವ್ಯಗಳನ್ನೂ ಈ ಅಧ್ಯಯನದಲ್ಲಿ ಸಂದರ್ಭಾನುಸಾರವಾಗಿ ಬಳಸಿಕೊಳ್ಳಲಾಗಿದೆ. ಈ ಎಲ್ಲ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳು ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಮೂಲಾಧಾರಗಳಾಗಿವೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಬೈಲಹೊಂಗಲ ತಾಲ್ಲೂಕಿನ ಕಲಬಾವಿ, ನಾಗನೂರು, ನೇಸರಗಿ, ಬೆಳವಡಿ, ಬೈಲಹೊಂಗಲ, ಮುಗಟಖಾನ ಹುಬ್ಬಳ್ಳಿ, ವಣ್ಣೂರು, ಸವದತ್ತಿ ತಾಲ್ಲೂಕಿನ ಅಸುಂಡಿ, ಇಂಚಲ, ಚಿಕ್ಕುಂಬಿ, ಯಡ್ರಾವಿ, ಸತ್ತಿಗೇರಿ, ಸವದತ್ತಿ, ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು, ಕರೋಶಿ, ಜಗನೂರು, ಯಕ್ಸಂಬಾ, ಹುಕ್ಕೇರಿ ತಾಲ್ಲೂಕಿನ ಅಮ್ಮಣಗಿ, ಎಲಿಮುನವಳ್ಳಿ, ಕಣಗಲಾ, ಬೆಲ್ಲದ ಬಾಗೇವಾಡಿ, ರಾಯಬಾಗ ತಾಲ್ಲೂಕಿನ ನಂದಿಕುರಳಿ, ಮುಗಳಖೋಡ, ರಾಯಬಾಗ, ಸಸಾಲಟ್ಟಿ, ಗೋಕಾಕ ತಾಲ್ಲೂಕಿನ ಕೊಣ್ಣೂರು, ಬೆಳಗಾವಿ ತಾಲ್ಲೂಕಿನ ಅಂಬೇವಾಡಿ, ಗೋಜಗ, ಬೆಳಗಾವಿ, ಮುಧೋಳ ತಾಲ್ಲೂಕಿನ ಮಂಟೂರು, ರೂಗಿ ಗ್ರಾಮಗಳಲ್ಲಿ ತುಂಡು ಶಾಸನ ಶಿಲೆಗಳು, ಪಾದಪೀಠ ಶಾಸನಗಳು, ನಿಷಿಧಿಶಾಸನಗಳು, ವೀರಗಲ್ಲು ಶಾಸನಗಳನ್ನೊಳಗೊಂಡಂತೆ ಒಟ್ಟು ೩೮ ಶಾಸನಗಳು ಬೆಳಕಿಗೆ ಬಂದಿವೆ. ಈ ಎಲ್ಲ ಶಾಸನಗಳೂ ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಮಹತ್ವದ ಆಕರಗಳಾಗಿವೆ. ಕೂಹುಂಡಿನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಅಂದರೆ ಈಗಾಗಲೇ ಪ್ರಕಟವಾಗಿರುವ ೧೩೪ ಶಾಸನಗಳು, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೆಳಕಿಗೆ ಬಂದಿರುವ ೩೮ ಶಾಸನಗಳು ಮತ್ತು ಕೂಹುಂಡಿನಾಡಿನ ಪ್ರಸ್ತಾಪವಿರುವ ಇತರೆಡೆಯ ೧೨

ಶಾಸನಗಳನ್ನೊಳಗೊಂಡಂತೆ ಒಟ್ಟು ೧೮೪ ಶಾಸನಗಳಲ್ಲಿ ೧೧ ತಾಮ್ರಪಟ ಶಾಸನಗಳಿವೆ. ಇವುಗಳಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಅಧಿಕವಾಗಿವೆ. ನಂತರದ ಎರಡು ಮತ್ತು ಮೂರನೆಯ ಸ್ಥಾನಗಳು ಕ್ರಮವಾಗಿ ಶೈವ ಮತ್ತು ವೈಷ್ಣವ ಧರ್ಮಗಳಿಗೆ ಸಂಬಂಧಿಸಿದ ಶಾಸನಗಳಿಗೆ ಸಲ್ಲುತ್ತವೆ.

ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಇದುವರೆಗೂ ಲಭ್ಯವಾಗಿರುವ ೧೮೪ ಶಾಸನಗಳಲ್ಲಿ ಬಹುತೇಕ ಶಾಸನಗಳು ಕನ್ನಡ ಲಿಪಿ ಮತ್ತು ಭಾಷೆಯಲ್ಲಿವೆ. ೧೮ ಶಾಸನಗಳು (ನಾಗನೂರು, ಕೋಟೂರು, ಬಡ್ಲಿ, ಯಕ್ಕೇರಿ, ಸವದತ್ತಿ, ಬೇಡಕಿಹಾಳ, ಗೋಕಾಕ, ಮಮದಾಪುರ, ಕೊಲ್ಲಾಪುರ, ಚೋಳಚಗುಡ್ಡ, ನೇರೂರು, ಎಲಾಪುರ, ಬಾಮಣಿ, ಮೀರಜ) ಕನ್ನಡ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ೫ ಶಾಸನಗಳು (ಮುಗಟಖಾನ ಹುಬ್ಬಳ್ಳಿ, ಪಟ್ಟಣಕೋಡಿ, ಸದಲಗಾ, ಬೆಳಗಾವಿ) ದೇವನಾಗರೀ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ಹಾಗೆಯೇ ಕೆಲವು ಕನ್ನಡ ಶಾಸನಗಳಲ್ಲಿ ಪ್ರಾರ್ಥನಾ ಮತ್ತು ಶಾಪಾಶಯ ಪದ್ಯಗಳು ಸಂಸ್ಕೃತ ಭಾಷೆಯಲ್ಲಿವೆ. ಈ ಎಲ್ಲ ಶಾಸನಗಳಲ್ಲಿ ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಬಾದಾಮಿ ಚಲುಕ್ಯ ಮನೆತನದ ೧ನೆಯ ಪುಲಕೇಶಿಯ ಮಹಾರಾಷ್ಟ್ರದ ಕೊಲ್ಲಾಪುರದ ಕ್ರಿ.ಶ. ೪೮೯-೪೯೦ರ ತಾಮ್ರಪಟ ಶಾಸನವು ಅತ್ಯಂತ ಪ್ರಾಚೀನ ಮತ್ತು ದೇವಗಿರಿಯ ಸೇವುಣ ಮನೆತನದ ಕನ್ನರದೇವನ ಹುಕ್ಕೇರಿ ತಾಲ್ಲೂಕಿನ ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನವು ಅರ್ವಾಚೀನವಾಗಿದೆ. ಕೂಹುಂಡಿನಾಡಿಗೆ ಸಂಬಂಧಿಸಿದ ಇತರೆಡೆಯ ಶಾಸನಗಳಲ್ಲಿ ಬಾದಾಮಿ ಚಲುಕ್ಯ ಮನೆತನದ ಮಂಗಳೇಶನ ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಕುದಾಲ ತಾಲ್ಲೂಕಿನ ನೇರೂರದ ಕ್ರಿ.ಶ. ಸುಮಾರು ೭ನೆಯ ಶತಮಾನದ ತಾಮ್ರಪಟ ಶಾಸನವು (ಇದು ಈಗ ಇಂಗ್ಲೆಂಡಿನ ಲಂಡನ್ ನಗರದಲ್ಲಿರುವ ಭಾರತೀಯ ಗ್ರಂಥಾಲಯದ ಕಾರ್ಯಾಲಯದಲ್ಲಿದೆ) ಅತ್ಯಂತ ಪ್ರಾಚೀನ ಮತ್ತು ಕೊಲ್ಲಾಪುರದ ಶಿಲಾಹಾರ ಮನೆತನದ ವಿಜಯಾದಿತ್ಯದೇವನ ಬಾಮಣಿಯ ಕ್ರಿ.ಶ. ೧೧೫೦ರ ಶಾಸನವು ಅರ್ವಾಚೀನವಾಗಿದೆ.

೧.೬. ಅಧ್ಯಯನದ ವಿಧಾನ

ಕೂಹುಂಡಿನಾಡು ವಿಸ್ತಾರವಾಗಿದ್ದ ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದಲ್ಲಿ ಕೈಗೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮತ್ತು ಮಹಾಪ್ರಬಂಧದ ಬರವಣಿಗೆಯಲ್ಲಿ ಪ್ರಸ್ತುತ ಪ್ರಚಲಿತದಲ್ಲಿರುವ ಚರಿತ್ರೆ ಅಧ್ಯಯನದ ವಿಧಿ-ವಿಧಾನಗಳನ್ನು ಅನುಸರಿಸಲಾಗಿದೆ. ಪ್ರಸ್ತುತ ಅಧ್ಯಯನವನ್ನು ಆರಂಭಿಸುವ ಮುನ್ನ ಕೂಹುಂಡಿನಾಡಿನ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಕುರಿತು ಈಗಾಗಲೇ ಪ್ರಕಟವಾಗಿರುವ ಗೆಜೆಟಿಯರುಗಳು, ಶಾಸನ ಸಂಪುಟಗಳು, ಸಂಶೋಧನ ಕೃತಿಗಳು, ಲೇಖನಗಳು, ಪಿಎಚ್.ಡಿ. ಮತ್ತು ಎಂ.ಫಿಲ್. ಸಂಶೋಧನ ಪ್ರಬಂಧಗಳ ಸೂಚಿಯನ್ನು ತಯಾರಿಸಿ ಅಧ್ಯಯನ ವಿಷಯಗಳ ಸಮೀಕ್ಷೆ ನಡೆಸಲಾಯಿತು. ಇದುವರೆಗೆ ನಡೆದ ಮತ್ತು ನಡೆಯಬೇಕಾದ ಅಧ್ಯಯನಗಳನ್ನು ಹಲವು ವಿದ್ವಾಂಸರೊಂದಿಗೆ ಚರ್ಚಿಸಿ ಪ್ರಸ್ತುತ ವಿಷಯವನ್ನು ಅಧ್ಯಯನ ಯೋಗ್ಯವೆಂದು ತಿಳಿದು ಆಯ್ದುಕೊಳ್ಳಲಾಯಿತು. ವಿಷಯದ ಆಯ್ಕೆಯು ಅಧಿಕೃತವಾದ ತರುವಾಯ ಇದರ ಬಗೆಗೆ ನಡೆದ ಅಧ್ಯಯನಗಳತ್ತ ದೃಷ್ಟಿಹರಿಸಿ "ಕೂಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ ಅಧ್ಯಯನ"ದಲ್ಲಿ

ಯಾವ ಯಾವ ಅಂಶಗಳು ಒಳಗೊಳ್ಳಬೇಕೆಂಬುದರ ಪಟ್ಟಿ ತಯಾರಿಸಲಾಯಿತು. ತರುವಾಯ ಕೂಹುಂಡಿನಾಡಿನ ಪ್ರದೇಶದ ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದ ಕುರಿತು ನಡೆದಿರುವ ಅಧ್ಯಯನಗಳನ್ನು ಗಮನಿಸಿ, ಅವುಗಳಲ್ಲಿ ಅಧ್ಯಯನ ಯೋಗ್ಯವಾದ ಅಂಶಗಳನ್ನು ಮಾಹಿತಿ ಸಂಗ್ರಹಣಾ ಪಟ್ಟಿಕೆಗಳಲ್ಲಿ ವಿಷಯ ಮತ್ತು ಕಾಲಾನುಕ್ರಮಗಳಿಗೆ ಅನುಗುಣವಾಗಿ ದಾಖಲಿಸಿಕೊಳ್ಳಲಾಯಿತು.

ಈ ಸಂಶೋಧನ ಅಧ್ಯಯನವು ಶಾಸನಗಳಿಗೆ ಸಂಬಂಧಪಟ್ಟಿರುವುದರಿಂದ ಕೂಹುಂಡಿನಾಡಿನ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಗ್ರಾಮದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ದೊರೆತ ಪ್ರತಿಯೊಂದು ಶಾಸನಗಳ ಪಡಿಯಚ್ಚುಗಳನ್ನು ಸಂಗ್ರಹಿಸಿ, ಇವುಗಳಲ್ಲಿ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳನ್ನು ಗುರುತಿಸುವುದರೊಂದಿಗೆ ಇವುಗಳನ್ನು ಕಾಲಾನುಕ್ರಮದಲ್ಲಿ ಹೊಂದಿಸಿಕೊಳ್ಳಲಾಯಿತು. ಈ ಶಾಸನಗಳನ್ನು ಅಂತರಶಿಸ್ತು ಮತ್ತು ಬಹುಶಿಸ್ತು ಅಧ್ಯಯನದ ಮೂಲಕ ಇವುಗಳಲ್ಲಿ ನಿರೂಪಿತವಾದ ವಿಷಯಗಳನ್ನು ರಾಜಕೀಯ, ಆಡಳಿತ, ಸಾಮಾಜಿಕ, ಸಾಹಿತ್ಯಿಕ, ಆರ್ಥಿಕ, ಧಾರ್ಮಿಕವಾಗಿ ವಿಂಗಡಿಸಿಕೊಂಡು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇಲ್ಲಿ ಬಹುಶಿಸ್ತು ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಲಾಗಿದೆ.

ಕೂಹುಂಡಿನಾಡಿನ ಶಾಸನಗಳಲ್ಲಿ ಉಲ್ಲೇಖಿತವಾದ ದೇವಾಲಯಗಳು, ಬಸದಿಗಳು, ಶಿಲ್ಪಗಳನ್ನು ವ್ಯವಸ್ಥಿತವಾದ ಅಧ್ಯಯನಕ್ಕಾಗಿ ಆಯಾ ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಅವುಗಳ ವಾಸ್ತುವಿನ್ಯಾಸ, ಶೈಲಿ, ವಾಸ್ತು ಲಕ್ಷಣಗಳು, ಪ್ರತಿಮಾ ಲಕ್ಷಣಗಳ ವಿವರಪೂರ್ಣವಾದ ದಾಖಲಾತಿಯೊಂದಿಗೆ ಅವುಗಳ ರೇಖಾಚಿತ್ರ ಮತ್ತು ಛಾಯಾಚಿತ್ರಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಹೀಗೆ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಶಾಸನಗಳಾದಿ ದೇವಾಲಯಗಳು, ಶಿಲ್ಪಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳು ಮೊದಲಾದ ಪುರಾತತ್ವ ಅವಶೇಷಗಳು, ಸಮಕಾಲೀನ ಕೃತಿ–ಕಾವ್ಯಗಳು (ಕರ್ಣಪಾರ್ಯನ ನೇಮಿನಾಥ ಪುರಾಣ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ, ರಾಜಾದಿತ್ಯನ ವ್ಯವಹಾರ ಗಣಿತ, ನೇಮಿಚಂದ್ರನ ಲೀಲಾವತಿ ಪ್ರಬಂಧ ಮತ್ತು ನೇಮಿನಾಥ ಪುರಾಣ, ಇಮ್ಮಡಿ ಗುಣವರ್ಮನ ಪುಷ್ಪದಂತ ಪುರಾಣ, ಬಿಲ್ಹಣನ ವಿಕ್ರಮಾಂಕದೇವ ಚರಿತ, ಪಾರ್ಶ್ವಕವಿಯ ನಿಂಬಸಾಮಂತ ಚರಿತೆ ಇತ್ಯಾದಿ) ಮತ್ತು ಈಗಾಗಲೇ ಈ ಪ್ರದೇಶದ ಕುರಿತಾಗಿ ಪ್ರಕಟವಾಗಿರುವ ಕೃತಿಗಳು, ಲೇಖನಗಳು, ಪ್ರಬಂಧಗಳು ಒದಗಿಸುವ ವಿವರಗಳನ್ನೆಲ್ಲವನ್ನೂ ಪ್ರತ್ಯೇಕವಾದ ಪಟ್ಟಿಕೆಗಳಲ್ಲಿ ಸಂಗ್ರಹಿಸಿ, ವಿಷಯಕ್ಕನುಗುಣವಾಗಿ ಹೊಂದಿಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ವ್ಯವಸ್ಥಿತವಾದ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

೧.೭. ಅಧ್ಯಯನದ ಸ್ವರೂಪ

ಕೂಹುಂಡಿನಾಡಿನ ಪ್ರದೇಶದ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ಹಲವು ವಿಧಾನಗಳನ್ನು ಅನುಸರಿಸಿ ಪ್ರತ್ಯೇಕಿಸಲಾದ ವಸ್ತು–ವಿಷಯಗಳನ್ನು ವ್ಯವಸ್ಥಿತವಾದ ವಿಶ್ಲೇಷಣೆ ಮತ್ತು ನಿರೂಪಣೆಯ

ದೃಷ್ಟಿಯಿಂದ ಪ್ರಸ್ತುತ ಮಹಾಪ್ರಬಂಧದ ಸ್ವರೂಪವನ್ನು ಈ ಕೆಳಗಿನಂತೆ ಎಂಟು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ.

ಒಂದನೆಯ ಅಧ್ಯಾಯ 'ಪ್ರಸ್ತಾವನೆ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಕನ್ನಡನಾಡಿನಲ್ಲಿ ಚರಿತ್ರೆ ಮತ್ತು ಸಾಂಸ್ಕೃತಿಕ ಅಧ್ಯಯನ ಸಾಗಿಬಂದ ರೀತಿ, ಪ್ರಸ್ತುತ ಮಹಾಪ್ರಬಂಧದ ವಿಷಯ, ಅಧ್ಯಯನದ ಅವಶ್ಯಕತೆ, ಉದ್ದೇಶ, ವ್ಯಾಪ್ತಿ, ವಿಧಾನ, ಈವರೆಗೆ ಕೂಹುಂಡಿನಾಡಿನ ಪ್ರದೇಶಕ್ಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳ ಸಮೀಕ್ಷೆ, ಪ್ರಾಥಮಿಕ ಮತ್ತು ಪೂರಕ (ಮಾಧ್ಯಮಿಕ) ಆಕರ ಸಾಮಗ್ರಿಗಳು ಹಾಗೂ ಮಹಾಪ್ರಬಂಧದ ಸ್ವರೂಪವನ್ನು ವಿಶದಪಡಿಸಲಾಗಿದೆ.

ಎರಡನೆಯ ಅಧ್ಯಾಯ 'ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಕನ್ನಡನಾಡಿನ ಭೌಗೋಳಿಕ ಸ್ವರೂಪವನ್ನು ಗಮನಿಸುತ್ತ, ಕೂಹುಂಡಿನಾಡಿನ ಭೌಗೋಳಿಕ ಸಂಪನ್ಮೂಲಗಳನ್ನು ಪರಿಚಯಿಸಲಾಗಿದೆ. ಹಾಗೆಯೇ ಕೂಹುಂಡಿನಾಡಿನ ವ್ಯಾಪ್ತಿ, ಮೇರೆಗಳು, ಉಪ ಆಡಳಿತ ವಿಭಾಗಗಳು, ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಿತವಾದ ಪಟ್ಟಣಗಳು, ಗ್ರಾಮಗಳ ಪ್ರಾಚೀನತೆ ಮತ್ತು ಈ ಸ್ಥಳನಾಮಗಳ ಭಾಷಿಕ ಬದಲಾವಣೆ, ಸಾಂಸ್ಕೃತಿಕ ಹಿರಿಮೆಗಳನ್ನು ವಿಸ್ತಾರವಾಗಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯ 'ರಾಜಕೀಯ ಮತ್ತು ಆಡಳಿತ ವ್ಯವಸ್ಥೆ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದ ಪೂರ್ವದಲ್ಲಿ ಆಳ್ವಿಕೆ ಕೈಗೊಂಡಿದ್ದ ಮತ್ತು ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಮಗಧದ ನಂದರು, ಮೌರ್ಯರು, ಶಾತವಾಹನರು ಬನವಾಸಿ ಕದಂಬರು ಮೊದಲಾದ ಅರಸು ಮನೆತನಗಳನ್ನು ಸಂಕ್ಷಿಪ್ತವಾಗಿ ಗಮನಿಸಲಾಗಿದೆ. ಕೂಹುಂಡಿನಾಡಿನ ಪ್ರದೇಶವನ್ನಾಳಿದ ಮತ್ತು ಈ ಪ್ರದೇಶದಲ್ಲಿ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣ ಮನೆತನಗಳ ಅರಸರು, ರಾಣಿಯರು, ಯುವರಾಜರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ಅಧಿಕಾರಿಗಳು, ಆಡಳಿತ ವ್ಯವಸ್ಥೆ, ಕೂಹುಂಡಿನಾಡಿನಲ್ಲಿದ್ದ ಆಡಳಿತ ವಿಭಾಗಗಳ ಸ್ವರೂಪ ಮೊದಲಾದ ಅಂಶಗಳನ್ನು ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯ 'ಸಾಮಾಜಿಕ ವ್ಯವಸ್ಥೆ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಪ್ರಾಚೀನ ಕಾಲಾವಧಿಯ ಸಾಮಾಜಿಕ ವ್ಯವಸ್ಥೆಯ ಸ್ವರೂಪವನ್ನು ಗಮನಿಸುತ್ತ, ಕೂಹುಂಡಿನಾಡಿನ ಶಾಸನಗಳ ಹಿನ್ನೆಲೆಯಲ್ಲಿ ಸಮಕಾಲೀನ ಚಾತುರ್ವರ್ಣ ವ್ಯವಸ್ಥೆ, ವೃತ್ತಿ ಆಧಾರಿತ ಜಾತಿಗಳು, ಸ್ತ್ರೀಯರ ಸ್ಥಾನಮಾನಗಳು, ನಂಬುಗೆ ಮತ್ತು ಸಂಪ್ರದಾಯಗಳು, ಹಬ್ಬ-ಹರಿದಿನಗಳು, ಆಹಾರ-ಪಾನೀಯಗಳು, ಸಾರ್ವಜನಿಕ ಚಟುವಟಿಕೆಗಳು ಮೊದಲಾದವುಗಳನ್ನು ಸವಿಸ್ತಾರವಾಗಿ ಅವಲೋಕಿಸಲಾಗಿದೆ.

ಐದನೆಯ ಅಧ್ಯಾಯ 'ಶಿಕ್ಷಣ ಮತ್ತು ಸಾಹಿತ್ಯ'ದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಪ್ರಾಚೀನ ಕಾಲಾವಧಿಯ ಶೈಕ್ಷಣಿಕ ವ್ಯವಸ್ಥೆಯನ್ನು ಗಮನಿಸುತ್ತ, ಕೂಹುಂಡಿನಾಡಿನ ಶಾಸನಗಳಲ್ಲಿ ಉಲ್ಲೇಖಿತವಾದ

ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು, ಮಠಗಳನ್ನು ಸವಿಸ್ತಾರವಾಗಿ ಚರ್ಚಿಸಲಾಗಿದೆ. ಹಾಗೆಯೇ ಅಂದು ಇಲ್ಲಿಯ ತ್ರಿಕೂಟಾಚಲ ತಲವಿನ್ಯಾಸದ ಬಹುತೇಕ ದೇವಾಲಯಗಳು ಮತ್ತು ಬಸದಿಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಜೊತೆಗೆ ಕೆಲವು ದೇವಾಲಯಗಳು ಮತ್ತು ಬಸದಿಗಳಿಗೆ ಹೊಂದಿಕೊಂಡಂತೆ ದಾನಶಾಲೆಗಳಿದ್ದವು. ಇವುಗಳ ಕುರಿತಾಗಿಯೂ ವಿವೇಚಿಸಲಾಗಿದೆ. ಈ ಎಲ್ಲ ಶಿಕ್ಷಣ ಕೇಂದ್ರಗಳ ಸ್ವರೂಪ, ಗುರುಗಳು ಮತ್ತು ಶಿಷ್ಯರು, ವಿದ್ಯಾಭ್ಯಾಸದ ವಿಧಾನ ಮತ್ತು ಬೋಧನಾ ವಿಷಯಗಳು, ಸಮಕಾಲೀನ ಆಳರಸರಾದಿಯಾಗಿ ಅಧಿಕಾರಿಗಳು ಮತ್ತು ಪ್ರಜೆಗಳು ಶಿಕ್ಷಣ, ಸಾಹಿತ್ಯಕ್ಕೆ ಕೊಡಮಾಡಿದ ಪ್ರೋತ್ಸಾಹ ಮತ್ತು ದಾನ–ದತ್ತಿಗಳನ್ನು ಗಮನಿಸಲಾಗಿದೆ. ಶಾಸನಗಳಲ್ಲಿ ಉಲ್ಲೇಖಿತವಾದ ಕವಿಗಳು ಮತ್ತು ಸ್ಥಾನಾಚಾರ್ಯರ ಸಾಹಿತ್ಯಿಕ ಚಟುವಟಿಕೆಗಳನ್ನು ವಿಮರ್ಶಾತ್ಮಕವಾಗಿ ವಿವೇಚಿಸಲಾಗಿದೆ. ಹಾಗೆಯೇ ಇಲ್ಲಿಯ ಶಾಸನಗಳ ರೂವಾರಿಗಳು ಮತ್ತು ಶಾಸನ ಸಾಹಿತ್ಯವನ್ನೂ ಗಮನಿಸಲಾಗಿದೆ.

ಆರನೆಯ ಅಧ್ಯಾಯ 'ಆರ್ಥಿಕ ಪರಿಸ್ಥಿತಿ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಪ್ರಾಚೀನ ಕಾಲಾವಧಿಯ ಆರ್ಥಿಕ ವ್ಯವಸ್ಥೆಯ ಸ್ವರೂಪವನ್ನು ಗಮನಿಸುತ್ತ, ಕೂಹುಂಡಿನಾಡಿನ ಆರ್ಥಿಕ ವ್ಯವಸ್ಥೆಯ ವಿವಿಧ ಆಯಾಮಗಳನ್ನು ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಪ್ರಮುಖವಾಗಿ ಅಂದಿನ ಭೂಮಿ ಮತ್ತು ಭೂಮಿಯ ಪ್ರಕಾರಗಳು, ಭೂ ಒಡೆತನ, ಕೃಷಿ ಮತ್ತು ಬೆಳೆಗಳು, ನೀರಾವರಿ ವ್ಯವಸ್ಥೆ, ದನ–ಕರುಗಳು, ಕೈಗಾರಿಕೆಗಳು, ವ್ಯಾಪಾರ ಮತ್ತು ವಾಣಿಜ್ಯ, ವರ್ತಕರು ಮತ್ತು ವರ್ತಕ ಸಂಘಗಳು, ನಾಣ್ಯ ವ್ಯವಸ್ಥೆ, ತೆರಿಗೆಗಳು, ಅಳತೆ ಮಾಪನಗಳು, ಸಾರಿಗೆ ಮತ್ತು ಸಂಪರ್ಕ ಮೊದಲಾದವುಗಳನ್ನು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯ 'ಧಾರ್ಮಿಕ ವ್ಯವಸ್ಥೆ'ಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಪ್ರಾಚೀನ ಕಾಲಾವಧಿಯ ಧಾರ್ಮಿಕ ವ್ಯವಸ್ಥೆಯ ಸ್ವರೂಪವನ್ನು ಗಮನಿಸುತ್ತ, ಕೂಹುಂಡಿನಾಡಿನಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ, ಸೌರ, ಶಾಕ್ತ, ಗಾಣಪತ್ಯ ಮೊದಲಾದ ಧರ್ಮ ಮತ್ತು ಪಂಥಗಳ ಸ್ಥಿತಿಗತಿಗಳು, ಶಾಸನಗಳಲ್ಲಿ ಉಲ್ಲೇಖಿತ ಶೈವಾಚಾರ್ಯರು, ವೈಷ್ಣವಾಚಾರ್ಯರು, ಜೈನಾಚಾರ್ಯರು, ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು, ಜೈನ ಬಸದಿಗಳು, ದೇವಾಲಯಗಳು ಮತ್ತು ಬಸದಿಗಳ ಖಂಡಸ್ಫುಟಿತ ಜೀರ್ಣೋದ್ಧಾರ ಮತ್ತು ಅಂಗಭೋಗ, ರಂಗಭೋಗ, ನಂದಾದೀವಿಗೆ, ಅಷ್ಟವಿಧಾರ್ಚನೆ, ಸ್ಥಾನಾಚಾರ್ಯರ ಆಹಾರದಾನ ಇತ್ಯಾದಿ ಧಾರ್ಮಿಕ–ಸಾಮಾಜಿಕ ಚಟುವಟಿಕೆಗಳಿಗೆ ಆಳರಸರು, ರಾಣಿಯರು, ಅಧಿಕಾರಿಗಳು, ಪ್ರಜೆಗಳು ಕೊಡಮಾಡಿದ ದಾನ–ದತ್ತಿಗಳು, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ, ಸಮಕಾಲೀನ ಧರ್ಮಗಳಲ್ಲಿ ಸಮನ್ವಯತೆ ಮೊದಲಾದವುಗಳನ್ನು ಇಲ್ಲಿಯ ಶಾಸನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಹಾಗೆಯೇ ಈ ಪ್ರದೇಶದ ಶಾಸನಗಳಲ್ಲಿ ಉಲ್ಲೇಖಿತವಾದ ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳು ಹಾಗೂ ಶಿಲ್ಪಗಳ ಪ್ರತಿಮಾ ಲಕ್ಷಣಗಳನ್ನು ಚರ್ಚಿಸಲಾಗಿದೆ.

ಎಂಟನೆಯ ಅಧ್ಯಾಯ 'ಸಮಾರೋಪ'ದಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನದಿಂದ ಬೆಳಕಿಗೆ ಬಂದಿರುವ ಫಲಿತಗಳು ಮತ್ತು ಹೊಸ ಅಂಶಗಳನ್ನು ಸಂಗ್ರಹಿಸಲಾಗಿದೆ. ಈ ಮೂಲಕ ಕನ್ನಡನಾಡಿನ

ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಕೂಹುಂಡಿನಾಡಿನ ಪ್ರದೇಶದ ಕೊಡುಗೆಯನ್ನು ಗುರುತಿಸಲಾಗಿದೆ. ಹಾಗೆಯೇ ಕೂಹುಂಡಿ-೩೦೦೦ ಆಡಳಿತ ವಿಭಾಗವು ಕನ್ನಡನಾಡಿನ ಇತರೆ ಆಡಳಿತ ವಿಭಾಗಗಳಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನೂ ಸ್ಪಷ್ಟಪಡಿಸಲಾಗಿದೆ. ಮುಖ್ಯವಾಗಿ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣ ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ಕೂಹುಂಡಿನಾಡಿನ ಭೌಗೋಳಿಕ ಪರಿಸರ, ರಾಜಕೀಯ ಸ್ವರೂಪ, ಸಾಮಾಜಿಕ ವ್ಯವಸ್ಥೆ, ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು, ಧಾರ್ಮಿಕ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿ, ವಾಸ್ತು-ಶಿಲ್ಪ ಕಲೆಗಳ ಅಭಿವೃದ್ಧಿ ಮೊದಲಾದವುಗಳನ್ನು ಸಮಕಾಲೀನ ಶಾಸನಗಳ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಈ ಮಹಾಪ್ರಬಂಧದ ಕೊನೆಯಲ್ಲಿ ಅನುಬಂಧ : ಒಂದು *ಕೂಹುಂಡಿನಾಡಿನ ಶಾಸನಗಳು*, ಅನುಬಂಧ : ಎರಡು *ಕೂಹುಂಡಿನಾಡಿನ ಪ್ರಸ್ತಾಪವಿರುವ ಇತರೆಡೆಯ ಶಾಸನಗಳು*, ಅನುಬಂಧ : ಮೂರು *ಕೂಹುಂಡಿನಾಡಿನ ಶಾಸನಗಳೋಕ್ತ ಕವಿಗಳು*, ಅನುಬಂಧ : ನಾಲ್ಕು *ಕೂಹುಂಡಿನಾಡಿನ ಶಾಸನಗಳೋಕ್ತ ಶೈವ, ವೈಷ್ಣವ, ಜೈನ ಆಚಾರ್ಯರು*, ಅನುಬಂಧ : ಐದು *ಕೂಹುಂಡಿನಾಡಿನ ಶಾಸನಗಳೋಕ್ತ ಶೈವ, ವೈಷ್ಣವ ದೇವಾಲಯಗಳು ಮತ್ತು ಜೈನ ಬಸದಿಗಳು*, ಅನುಬಂಧ : ಆರು *ಆಧಾರ ಗ್ರಂಥಗಳು*, ಅನುಬಂಧ : ಏಳು *ಸಂಕೇತ ಸೂಚಿ*, ಅನುಬಂಧ : ಎಂಟು *ಕೂಹುಂಡಿನಾಡಿನ ನಕ್ಷೆಗಳು ಮತ್ತು ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಸ್ಮಾರಕಗಲ್ಲುಗಳ ಆಯ್ದ ಛಾಯಾಚಿತ್ರಗಳು* ಎಂಬ ಎಂಟು ಅನುಬಂಧಗಳಿವೆ.

ಹೀಗೆ ಕೂಹುಂಡಿನಾಡಿನ ಪ್ರದೇಶದ ಶಾಸನಗಳ ಹಿನ್ನೆಲೆಯಲ್ಲಿ ಕೈಗೊಂಡ ಪ್ರಸ್ತುತ ಸಂಶೋಧನ ಅಧ್ಯಯನದ ಮಹಾಪ್ರಬಂಧಕ್ಕೆ ಒಂದು ಉದ್ದೇಶವನ್ನಿಟ್ಟುಕೊಂಡು ನಿರ್ದಿಷ್ಟ ವ್ಯಾಪ್ತಿಯಲ್ಲಿ ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಕರಗಳನ್ನೆಲ್ಲವನ್ನೂ ಸಂಗ್ರಹಿಸಿ ವ್ಯವಸ್ಥಿತವಾದ ವಿಧಾನಗಳನ್ನನುಸರಿಸಿ ಎಂಟು ಅಧ್ಯಾಯಗಳಲ್ಲಿ ವಸ್ತುನಿಷ್ಠವಾಗಿ ವಿನ್ಯಾಸಗೊಳಿಸಿ ಇದರ ನಿರೂಪಣಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.

ಅಡಿಟಿಪ್ಪಣಿಗಳು

೧. ಕಲಬುರ್ಗಿ ಎಂ.ಎಂ. (ಸಂ.), ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೧ (೧೯೯೯), ಪು. ೮.

ಅಧ್ಯಾಯ : ಎರಡು

ಕೂಹುಂಡಿನಾಡಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಪೀಠಿಕೆ

೨.೨. ಭೌಗೋಳಿಕ ಹಿನ್ನೆಲೆ

೨.೩. ಚಾರಿತ್ರಿಕ ಹಿನ್ನೆಲೆ

೨.೪. ಪ್ರಾಚೀನತೆ, ವ್ಯಾಪ್ತಿ ಮತ್ತು ಹಿರಿಮೆ

೨.೫. ಶಾಸನಗಳೋಕ್ತ ಸ್ಥಳನಾಮಗಳು

೨.೬. ಶಾಸನಗಳೋಕ್ತ ಇತರೆಡೆಯ ಸ್ಥಳನಾಮಗಳು

೨.೭. ಶಾಸನಗಳೋಕ್ತ ನದಿ, ಹಳ್ಳ, ಕೆರೆಗಳು

ಅಧ್ಯಾಯ : ಎರಡು

ಕೂಹುಂಡಿನಾಡಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಪೀಠಿಕೆ

ಯಾವುದೇ ಒಂದು ನಾಡು ಅಥವಾ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿ ಅಲ್ಲಿನ ಭೌಗೋಳಿಕ ಪರಿಸರ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಹಿನ್ನೆಲೆಯಿಂದ ಹೆಚ್ಚು ಪ್ರಭಾವಿತವಾಗಿರುತ್ತವೆ. ಅಂದರೆ ಆಯಾ ನಾಡು ಅಥವಾ ಪ್ರದೇಶದ ಹವಾಮಾನ, ನದಿಗಳು, ಪರ್ವತಗಳು, ಪ್ರಸ್ಥಭೂಮಿ, ಮರಳುಗಾಡು, ತೀರಪ್ರದೇಶ, ಶಿಲಾಸಂಪತ್ತು, ಖನಿಜಸಂಪತ್ತು, ಅರಣ್ಯಸಂಪತ್ತು, ಸಸ್ಯಪಂಪತ್ತು, ಪ್ರಾಣಿಸಂಪತ್ತು ಮೊದಲಾದ ನೈಸರ್ಗಿಕ ಸಂಪನ್ಮೂಲಗಳು ಅಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ರೂಪುಗೊಳಿಸುವಲ್ಲಿ ಮಹತ್ವದ ಪಾತ್ರವಹಿಸಿರುತ್ತವೆ. ಇತಿಹಾಸಪೂರ್ವ ಕಾಲಾವಧಿಯ ಮಾನವನು ಸ್ವಾಭಾವಿಕವಾಗಿ ನೈಸರ್ಗಿಕ ಸಂಪನ್ಮೂಲಗಳನ್ನೇ ಅವಲಂಬಿಸಿದ್ದನು. ಹಾಗೆಯೇ ಇತಿಹಾಸ ಕಾಲಾವಧಿಯ ಅರಸು ಮನೆತನಗಳೂ ಆರ್ಥಿಕ ವ್ಯವಸ್ಥೆಯ ಸುಭದ್ರತೆ, ಸ್ಮಾರಕಗಳ ನಿರ್ಮಾಣ, ಸಾಮ್ರಾಜ್ಯದ ರಕ್ಷಣೆ ಇತ್ಯಾದಿ ಉದ್ದೇಶಗಳಿಂದ ಫಲವತ್ತಾದ ಭೂಸಂಪತ್ತು, ಜಲಸಂಪತ್ತು, ಶಿಲಾಸಂಪತ್ತು ಮೊದಲಾದ ಭೌಗೋಳಿಕ ಸಂಪನ್ಮೂಲಗಳೆಡೆಗೆ ಹೆಚ್ಚು ಲಕ್ಷ್ಯವಹಿಸಿದ್ದವು. ಅಂತಾಗಿ ಅಂದಿನ ಜನಜೀವನ ಮತ್ತು ಸಂಸ್ಕೃತಿಯ ಮೇಲೆ ಭೌಗೋಳಿಕ ಸಂಪನ್ಮೂಲಗಳ ಪ್ರಭಾವ ದಟ್ಟವಾಗಿ ಗೋಚರಿಸುತ್ತದೆ. ಇದರಿಂದ ಆಯಾ ಪ್ರದೇಶದ ಭೌಗೋಳಿಕ ಸಂಪನ್ಮೂಲಗಳು ಅಲ್ಲಿಯ ಚರಿತ್ರೆ ಮತ್ತು ಸಂಸ್ಕೃತಿಯೊಂದಿಗೆ ಬಹು ನಿಕಟವಾದ ಸಂಬಂಧವನ್ನು ಹೊಂದಿರುವುದು ತಿಳಿಯುತ್ತದೆ. ಹೀಗಾಗಿ ಯಾವುದೇ ಒಂದು ಪ್ರದೇಶದ ಭೌಗೋಳಿಕ ಸಂಪನ್ಮೂಲಗಳನ್ನು ಮರೆತು ಆ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಆಯಾಮಗಳನ್ನು ಅವಲೋಕಿಸಲು ಪ್ರಾರಂಭಿಸಿದರೆ, ಆ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿ ರೂಪುಗೊಳ್ಳುವ ಒಂದು ಪ್ರಧಾನ ನೆಲೆಯನ್ನೇ ಉಪೇಕ್ಷಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಾಯದಲ್ಲಿ ಕೂಹುಂಡಿನಾಡಿನ ಪ್ರದೇಶದ (ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶ) ಭೌಗೋಳಿಕ ಸಂಪನ್ಮೂಲಗಳ ವೈಶಿಷ್ಟ್ಯಗಳು ಮತ್ತು ಚಾರಿತ್ರಿಕ ಹಿನ್ನೆಲೆಯನ್ನು (ಕೂಹುಂಡಿನಾಡಿನ ಪ್ರಾಚೀನತೆ, ವ್ಯಾಪ್ತಿ, ಹಿರಿಮೆ, ಶಾಸನಗಳೋಕ್ತ ಸ್ಥಳನಾಮಗಳು, ನದಿಗಳು, ಹಳ್ಳಗಳು, ಕೆರೆಗಳು, ಕೊಳ್ಳಗಳು, ನಾಲಾಗಳು ಇತ್ಯಾದಿ) ಗಮನಿಸಲಾಗಿದೆ.

೨.೨. ಭೌಗೋಳಿಕ ಹಿನ್ನೆಲೆ

ಪ್ರತಿಯೊಂದು ಪ್ರದೇಶವು ಸಾಮಾನ್ಯವಾಗಿ ವೈವಿಧ್ಯಮಯವಾದ ಭೌಗೋಳಿಕ ವೈಶಿಷ್ಟ್ಯತೆಗಳಿಂದ ಕೂಡಿರುತ್ತದೆ. ಆಯಾ ಪ್ರದೇಶದ ಜನಾಂಗದ ಚರಿತ್ರೆ, ಸಂಸ್ಕೃತಿ ಮತ್ತು ಜೀವನವು ಅಲ್ಲಿಯ ಭೌಗೋಳಿಕ ಪರಿಸರ ಹಾಗೂ ಸಂಪನ್ಮೂಲಗಳಿಂದ ಪ್ರಭಾವಿತವಾಗಿರುತ್ತವೆ. ಹಾಗೆಯೇ ಪ್ರಾಚೀನ ಕಾಲಾವಧಿಯ ಪ್ರತಿಯೊಂದು ಅರಸು ಮನೆತನಗಳು ವಿಸ್ತಾರವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಹಲವು ಉಪ ಆಡಳಿತ ವಿಭಾಗಗಳಲ್ಲಿ ವಿಂಗಡಿಸುವ ಸಂದರ್ಭದಲ್ಲಿ ನೈಸರ್ಗಿಕ

ಅಂಶಗಳನ್ನವಲಂಬಿಸಿರುವುದು ಆಯಾ ಪ್ರದೇಶದ ತಲಸ್ಪರ್ಶಿ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ಪರ್ಯಾಯ ದ್ವೀಪದ ಪ್ರಮುಖ ಪ್ರದೇಶವಾದ ಕನ್ನಡನಾಡನ್ನು ಮೇಲ್ಮೈ ಲಕ್ಷಣಗಳಿಗನುಗುಣವಾಗಿ ಪಶ್ಚಿಮದ ಕರಾವಳಿ ಪ್ರದೇಶ, ಪಶ್ಚಿಮ ಘಟ್ಟಗಳಿಂದ ಕೂಡಿದ ಮಲೆನಾಡು ಪ್ರದೇಶ, ಮಧ್ಯಂತರ ಪಟ್ಟಿ, ಉತ್ತರ ಕರ್ನಾಟಕದ ಮೈದಾನ ಪ್ರದೇಶ, ದಕ್ಷಿಣ ಕರ್ನಾಟಕದ ಮೈದಾನ ಪ್ರದೇಶ ಎಂದು ಐದು ಭಾಗಗಳಲ್ಲಿ ವಿಂಗಡಿಸಲಾಗಿದೆ. ಉತ್ತರ ಕರ್ನಾಟಕದ ಮೈದಾನ ಪ್ರದೇಶದ ವಾಯವ್ಯ ಭಾಗದಲ್ಲಿರುವ ಕೂಹುಂಡಿನಾಡಿನ ಪ್ರದೇಶವು ೧೫,೭೯೦ ಚ.ಕಿ.ಮೀ. ವಿಸ್ತೀರ್ಣತೆಯನ್ನು ಹೊಂದಿದೆ. ಈ ಪ್ರದೇಶದ ಪೂರ್ವ ಭಾಗವು ಬಯಲು ಸೀಮೆಯಲ್ಲಿದ್ದು, ಪಶ್ಚಿಮ ಭಾಗವು ಮಲೆನಾಡು ಸೀಮೆಯಲ್ಲಿದೆ. ಪೂರ್ವಭಾಗವು ಸಮುದ್ರಮಟ್ಟದಿಂದ ಸುಮಾರು ಐದುನೂರು ಮೀಟರ್ ಮತ್ತು ಪಶ್ಚಿಮಭಾಗವು ಸುಮಾರು ಒಂಭತ್ತುನೂರು ಮೀಟರ್ ಎತ್ತರದಲ್ಲಿವೆ.

೨.೨.೧. ಭೌಗೋಳಿಕ ವಿಂಗಡಣೆ

ಕೂಹುಂಡಿನಾಡಿನ ಪ್ರದೇಶವು ಪೂರ್ವ ರೇಖಾಂಶ ೭೪°-೫' ರಿಂದ ೭೫°-೨೮' ಮತ್ತು ೧೫°-೨೩' ರಿಂದ ೧೬°-೫೮' ಉತ್ತರ ಅಕ್ಷಾಂಶದ ಮಧ್ಯೆ ವಿಶಾಲವಾಗಿದೆ. ಈ ಪ್ರದೇಶದ ಪಶ್ಚಿಮ ಭಾಗದಲ್ಲಿ ಸಹ್ಯಾದ್ರಿ ಪರ್ವತಗಳು ಹಬ್ಬಿಕೊಂಡಿವೆ. ಇಲ್ಲಿಯ ಭೂರಚನೆ ಮತ್ತು ಹವಾಮಾನದ ಹಿನ್ನೆಲೆಯಲ್ಲಿ ಇದನ್ನು ಮೂರು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ. ಸಾತಾರ, ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳ ಕೆಲವು ಪ್ರದೇಶವು ಗುಡ್ಡಗಾಡು ವಲಯದಲ್ಲಿದೆ. ಬೆಳಗಾವಿ, ಚಿಕ್ಕೋಡಿ, ಬೈಲಹೊಂಗಲ ತಾಲ್ಲೂಕುಗಳ ಪ್ರದೇಶವು ಅರೆಮಲೆನಾಡು ವಲಯದಲ್ಲಿದೆ. ಹುಕ್ಕೇರಿ, ರಾಯಬಾಗ, ಗೋಕಾಕ, ಸವದತ್ತಿ, ರಾಮದುರ್ಗ, ಜಮಖಂಡಿ, ಮುಧೋಳ, ಬಾಗಲಕೋಟ ತಾಲ್ಲೂಕುಗಳ ಪ್ರದೇಶವು ಶುಷ್ಕ ವಲಯದಲ್ಲಿದೆ.[9]

ರಾಯಬಾಗ, ರಾಮದುರ್ಗ, ಗೋಕಾಕ, ಸವದತ್ತಿ ತಾಲ್ಲೂಕುಗಳ ಪ್ರದೇಶವು ಉತ್ತರದ ಒಣವಲಯದಲ್ಲಿ ಸೇರುತ್ತದೆ. ಇಲ್ಲಿ ಸಾರಜನಕಯುಕ್ತ ಕಪ್ಪು ಮಣ್ಣಿನ ಭೂಮಿಯಿದೆ. ಇದು ಜೋಳ, ಗೋಧಿ, ಕಬ್ಬು, ಹತ್ತಿ, ಗೋವಿನಜೋಳ, ನೆಲಗಡಲೆ, ತೆಂಗು ಮೊದಲಾದ ಬೆಳೆಗಳನ್ನು ಬೆಳೆಯಲು ತುಂಬಾ ಉಪಯುಕ್ತವಾಗಿದೆ. ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ, ಬೆಳಗಾವಿ, ಜಮಖಂಡಿ, ಮುಧೋಳ, ಬಾಗಲಕೋಟ ತಾಲ್ಲೂಕುಗಳ ಪ್ರದೇಶವು ಉತ್ತರದ ಮಧ್ಯವಲಯದಲ್ಲಿ ಸೇರುತ್ತದೆ. ಇಲ್ಲಿಯ ಭೂಮಿಯು ಕಪ್ಪು, ಮರಳುಮಿಶ್ರಿತ ಮತ್ತು ಕೆಂಪು ಮಸಾರಿ ಮಣ್ಣನ್ನು ಹೊಂದಿದೆ. ಮುಂಗಾರು ಮಳೆಯನ್ನವಲಂಬಿಸಿರುವ ಈ ಮಣ್ಣು ಭತ್ತ, ರಾಗಿ, ಶೇಂಗಾ, ಜೋಳ, ಕಬ್ಬು, ತಂಬಾಕು ಮೊದಲಾದ ಬೆಳೆಗಳನ್ನು ಬೆಳೆಯಲು ತುಂಬಾ ಉಪಯುಕ್ತವಾಗಿದೆ. ಸಾತಾರ, ಕೊಲ್ಲಾಪುರ, ಸಾಂಗಲಿ ಜಿಲ್ಲೆಗಳ ಕೆಲವು ಪ್ರದೇಶ ಗುಡ್ಡಗಾಡು ವಲಯದಲ್ಲಿ ಸೇರುತ್ತದೆ. ಸಾರಜನಕಯುಕ್ತವಾದ ಫಲವತ್ತಾದ ಮಣ್ಣನ್ನು ಹೊಂದಿರುವ ಇಲ್ಲಿಯ ಭೂಮಿಯು ಭತ್ತ, ಕಬ್ಬು ಮೊದಲಾದ ಬೆಳೆಗಳನ್ನು ಬೆಳೆಯಲು ಉಪಯುಕ್ತವಾಗಿದೆ.

೨.೨.೨. ಹವಾಮಾನ ಮತ್ತು ಮಳೆ

ಕೂಹುಂಡಿನಾಡಿನ ಪ್ರದೇಶವು ಹವಾಮಾನದ ದೃಷ್ಟಿಯಿಂದ ಹಿತಕರವಾಗಿದೆ. ಆದಾಗ್ಯೂ ಇದನ್ನು

ಶೀತಪ್ರದೇಶ, ಮಧ್ಯಮ ಪ್ರದೇಶ, ಒಣಹವೆ ಪ್ರದೇಶವೆಂದು ಗುರುತಿಸಬಹುದು. ಈ ಪ್ರದೇಶದಲ್ಲಿ ಫೆಬ್ರುವರಿ ಮಾಹೆಯ ತರುವಾಯ ಉಷ್ಣತೆಯ ಪ್ರಮಾಣ ಅತಿ ಶೀಘ್ರವಾಗಿ ಏರುತ್ತದೆ. ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಅತಿ ಹೆಚ್ಚು ಉಷ್ಣತೆ ಇರುತ್ತದೆ. ದೈನಂದಿನ ಸರಾಸರಿ ಗರಿಷ್ಟ ಉಷ್ಣತೆಯು ೩೭.೫° ರಿಂದ ೪೨° ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣತೆಯು ೨೦° ರಿಂದ ೧೮° ಸೆಲ್ಸಿಯಸ್ ಗೋಚರಿಸುತ್ತದೆ. ಇದು ಉತ್ತಮ ಹವಾಮಾನದ ಲಕ್ಷಣವಾಗಿದೆ. ಡಿಸೆಂಬರ್ ಮಾಹೆಯಿಂದ ಫೆಬ್ರುವರಿ ಮಾಹೆಯವರೆಗೂ ಈ ಪ್ರದೇಶದಾದ್ಯಂತ ಚಳಿ ಇರುತ್ತದೆ. ಈ ಪ್ರದೇಶದಲ್ಲಿ ನೈಋತ್ಯ ಮಾರುತಗಳು ಹೆಚ್ಚಾಗಿ ಮಳೆಯನ್ನು ಸುರಿಸಲು ಜೂನ್ ಮಾಹೆಯ ಆದಿಯಲ್ಲಿ ಪ್ರಾರಂಭಿಸುತ್ತವೆ. ಇಲ್ಲಿಯ ವಾರ್ಷಿಕ ಮಳೆಯ ಪ್ರಮಾಣ ಸರಾಸರಿ ಸುಮಾರು ೭೮೪.೭ ಮಿ.ಮೀ.ರಷ್ಟಾಗಿದೆ.

೨.೨.೩. ಖನಿಜ ಸಂಪತ್ತು

ಕೂಹುಂಡಿನಾಡಿನ ಪ್ರದೇಶದಲ್ಲಿ ಮ್ಯಾಂಗನೀಜ್(ಬೈಲಹೊಂಗಲ ತಾಲ್ಲೂಕಿನ ಕೆಲವು ಪ್ರದೇಶ), ಸೀಸ, ಬಾಕ್ಸೈಟ್ (ಬೆಳಗಾವಿ ತಾಲ್ಲೂಕಿನ ಕೆಲವು ಪ್ರದೇಶ), ಕಬ್ಬಿಣ, ಜೇಡಿಶಿಲೆ, ಸುಣ್ಣದಶಿಲೆ (ಗೋಕಾಕ, ರಾಮದುರ್ಗ, ಜಮಖಂಡಿ ತಾಲ್ಲೂಕುಗಳ ಕೆಲವು ಪ್ರದೇಶ), ಬೆಣಚುಶಿಲೆ, ತಾಮ್ರ, ಮರಳು (ಮಲಪ್ರಭಾ, ಘಟಪ್ರಭಾ, ಕೃಷ್ಣಾ ನದಿಗಳ ತೀರ ಪ್ರದೇಶ ಮತ್ತು ಕೆಲವು ಹಳ್ಳಗಳು) ಮೊದಲಾದ ಆರ್ಥಿಕವಾಗಿ ಲಾಭ ತರುವ ಖನಿಜ ಸಂಪತ್ತು ಲಭ್ಯವಿದೆ. ಹಾಗೆಯೇ ಕೆಲವೆಡೆಗಳಲ್ಲಿ ವಿವಿಧ ಬಗೆಯ ಬಣ್ಣ ಬಣ್ಣದ ಗ್ರಾನೈಟ್ ಕಲ್ಲುಗಳು, ಡೆಕ್ಕನ್ ಟ್ರ್ಯಾಪ್‌ನ ಕರಿಕಲ್ಲು, ಧಾರವಾಡ ಟ್ರ್ಯಾಪ್‌ನ ಕೆಂಪು ಬಿಳಿಕಲ್ಲು, ಕಪ್ಪು ಡೆಕ್ಕನ್ ಬಸಾಲ್ಟ್ ಗಟ್ಟಿಕಲ್ಲುಗಳು, ಕಲಾದಗಿ ಗುಂಪಿನ ಶಿಲೆ (ಬೆಳಗಾವಿ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ, ಜಮಖಂಡಿ ತಾಲ್ಲೂಕಗಳ ಕೆಲವು ಪ್ರದೇಶ), ಕೆಂಪುಮಿಶ್ರಿತ ಸ್ಯಾಂಡ್‌ಸ್ಟೋನ್ ಶಿಲೆಗಳು (ಗೋಕಾಕ, ರಾಮದುರ್ಗ ತಾಲ್ಲೂಕುಗಳ ಕೆಲವು ಪ್ರದೇಶ), ಪೆನಿಸ್ಸುಲಾರ ನೇಸ್ ಶಿಲೆಗಳು, ಕ್ಲೋರೈಟ್ ಸಿಸ್ಟಗಳು, ಶೇಲ ಮತ್ತು ಗ್ರೇವ್ಯಾಕ್ ಶಿಲೆಗಳು, ಕ್ವಾರ್ಟಜೈಟ್, ಲೈಮಸ್ಟೋನ್, ಡೋಲೊಮೈಟ್ (ಸವದತ್ತಿ, ರಾಮದುರ್ಗ, ಗೋಕಾಕ ತಾಲ್ಲೂಕುಗಳ ಕೆಲವು ಪ್ರದೇಶ) ಮೊದಲಾದ ಶಿಲೆಗಳು ಗೋಚರಿಸುತ್ತವೆ. ಬೆಳಗಾವಿ, ರಾಮದುರ್ಗ, ಗೋಕಾಕ ತಾಲ್ಲೂಕುಗಳ ಪ್ರದೇಶದಲ್ಲಿ ಬಾಕ್ಸೈಟ್ ನಿಕ್ಷೇಪಗಳು ಹೆಚ್ಚು ಕಂಡುಬಂದಿವೆ. ಸವದತ್ತಿ ತಾಲ್ಲೂಕಿನಲ್ಲಿ ಮಲಪ್ರಭಾ ನದಿಯ ತೀರದಲ್ಲಿ ಎರಕದ ಮರಳುಶಿಲೆ ಹೇರಳವಾಗಿ ಲಭ್ಯವಿದೆ. ಬೈಲಹೊಂಗಲ ತಾಲ್ಲೂಕಿನ ದೇಶನೂರು ಬೆಟ್ಟದ ಪ್ರದೇಶಗಳಲ್ಲಿ ಯುರೇನಿಯಂ ಮುಂತಾದ ಖನಿಜಗಳ ಸಂಶೋಧನೆ ನಡೆದಿದೆ. ಇಲ್ಲಿ ಉತ್ತಮ ಫಲಿತಾಂಶ ಸಿಕ್ಕುವುದೆಂಬ ನಿರೀಕ್ಷೆಯಿದೆ.

೨.೨.೪. ಜಲಸಂಪತ್ತು

ಕೂಹುಂಡಿನಾಡಿನ ಪ್ರದೇಶದಲ್ಲಿ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಮಾರ್ಕಂಡೇಯ, ದೂಧಗಂಗಾ, ವೇದಗಂಗಾ, ಹಿರಣ್ಯಕೇಶಿ ಮೊದಲಾದ ಕೆಲವು ನದಿಗಳು ಹರಿದಿವೆ. ಹೀಗಾಗಿ ಈ ಪ್ರದೇಶದ ಜಲಸಂಪತ್ತು ಸಮೃದ್ಧವಾಗಿದೆ. ಈ ಪ್ರದೇಶವು ಪೂರ್ವಕ್ಕೆ ಇಳಿಜಾರಾಗಿದ್ದು, ಅಂತಾಗಿ ನೀರ್ಗಾಲುವೆ ವ್ಯವಸ್ಥೆ ಪಶ್ಚಿಮದಿಂದ ಪೂರ್ವಾಭಿಮುಖವಾಗಿದೆ. ಮಲಪ್ರಭಾ ನದಿಯು ಖಾನಾಪುರ ತಾಲ್ಲೂಕಿನ ಪಶ್ಚಿಮದ

ಗುಡ್ಡಗಾಡು ಹಸಿರು ಅರಣ್ಯ ಪ್ರದೇಶವಾದ ಜಾಂಬೋಟಿ ಗ್ರಾಮದ ಪಶ್ಚಿಮಕ್ಕಿರುವ ಕಣಕುಂಬಿ ಗ್ರಾಮದ ಹತ್ತಿರ ೭೯೩ ಮೀಟರ್ ಎತ್ತರವಾದ ಸಹ್ಯಾದ್ರಿ ಬೆಟ್ಟಗಳ ಸಾಲಿನಲ್ಲಿ ಉಗಮವಾಗಿದೆ. ಇದು ಅಲ್ಲಿಂದ ಮುಂದೆ ಪೂರ್ವಕ್ಕೆ ಹರಿದು ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ ತಾಲ್ಲೂಕುಗಳ ಪ್ರದೇಶಗಳಲ್ಲಿ ಕ್ರಮಿಸುತ್ತದೆ. ಇದಕ್ಕೆ ಸೊಗಲದ ಉಪನದಿಯೂ ಸೇರಿ ಮುನವಳ್ಳಿ ಹತ್ತಿರ ಸುಂದರ ಸಂಗಮ ದಬದಬೆಯನ್ನು ಸೃಷ್ಟಿಸಿ ಕ್ವಾರ್ಟಜೈಟ್ ಶಿಲೆಗಳನ್ನು ಪಾರುಮಾಡಿ ಕುಂಗಾರಿ ಗ್ರಾಮದ ಮೂಲಕ ಮುಂದುವರೆಯುತ್ತದೆ. ಈ ಚಿಕ್ಕ ದಬದಬೆ ಬಹಳ ರಮಣೀಯವಾಗಿದೆ. ಹೀಗಾಗಿ ಸೊಗಲು ಪ್ರವಾಸಿಗರ ಆಕರ್ಷಣೀಯ ತಾಣವಾಗಿದೆ. ಈ ನದಿಗೆ ನವಿಲುತೀರ್ಥ ಎಂಬಲ್ಲಿ ಎರಡು ಗುಡ್ಡಗಳಿಗೆ ಅಡ್ಡಲಾಗಿ ೧೯೭೩ರಲ್ಲಿ ೧೫೫ ಮೀ. ಉದ್ದವಾದ ಅಣೆಕಟ್ಟೆಯನ್ನು ಕಟ್ಟಿ, ನಲವತ್ತು ಟಿಎಂಸಿ ಅಡಿ ನೀರನ್ನು ಸಂಗ್ರಹಿಸಲಾಗಿದೆ. ಇದರಿಂದ ಅನೇಕ ನಗರಗಳು, ಗ್ರಾಮಗಳಿಗೆ (ಧಾರವಾಡ, ಹುಬ್ಬಳ್ಳಿ, ಸವದತ್ತಿ, ನರಗುಂದ, ನವಲಗುಂದ ಇತ್ಯಾದಿ) ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹಾಗೆಯೇ ಈ ಅಣೆಕಟ್ಟಿನ ಬಲದಂಡೆ ಮತ್ತು ಎಡದಂಡೆ ಕಾಲುವೆಗಳ ಮೂಲಕ ಸವದತ್ತಿ, ಗೋಕಾಕ, ರಾಮದುರ್ಗ, ನರಗುಂದ, ನವಲಗುಂದ ತಾಲ್ಲೂಕುಗಳ ಕೆಲವು ಪ್ರದೇಶದ ಭೂಮಿಗೆ ನೀರುಣಿಸುವ ಮೂಲಕ ರೈತರ ಜೀವನಾಡಿಯಾಗಿದೆ. ಈ ನದಿಯು ಕೂಡಲಸಂಗಮದ ಹತ್ತಿರ ಕೃಷ್ಣಾ ನದಿಯನ್ನು ಸೇರಿ ಬಂಗಾಲ ಮಹಾಸಾಗರದಲ್ಲಿ ವಿಲೀನವಾಗುತ್ತದೆ.

ಕೃಷ್ಣಾ ನದಿಯು ಮಹಾರಾಷ್ಟ್ರದ ಮಹಾಬಳೇಶ್ವರ ಗಿರಿಧಾಮದ ಉತ್ತರದಲ್ಲಿ ಉಗಮವಾಗಿ ಕೂಹುಂಡಿನಾಡಿನ ಉತ್ತರದಂಚಿನುದ್ದಕೂ ಕ್ರಮಿಸುತ್ತದೆ. ವೇದಗಂಗಾ ನದಿಯು ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಕ್ರಮಿಸುತ್ತ ಬಾರವಾಡ ಗ್ರಾಮದ ಹತ್ತಿರ ದೂಧಗಂಗಾ ನದಿಯನ್ನು ಕೂಡುತ್ತದೆ. ದೂಧಗಂಗಾ ನದಿಯು ಚಿಕ್ಕೋಡಿ ತಾಲ್ಲೂಕಿನ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಕಲ್ಲೋಳ ಗ್ರಾಮದ ಸಮೀಪದಲ್ಲಿ ಕೃಷ್ಣಾ ನದಿಯನ್ನು ಕೂಡುತ್ತದೆ. ಘಟಪ್ರಭಾ ನದಿಯು ಖಾನಾಪುರ ತಾಲ್ಲೂಕಿನ ಅಂಬೋಲಿ ಗ್ರಾಮದ ಹತ್ತಿರ ಪಶ್ಚಿಮ ಸಹ್ಯಾದ್ರಿ ಘಟ್ಟದಲ್ಲಿ ಉಗಮವಾಗಿ ಪೂರ್ವಾಭಿಮುಖವಾಗಿ ಹರಿಯುತ್ತ ವಿಜಾಪುರ ಜಿಲ್ಲೆಯ ಚಿಮ್ಮಲಗಿ ಹತ್ತಿರ ಕೃಷ್ಣಾ ನದಿಯನ್ನು ಕೂಡುತ್ತದೆ. ಈ ನದಿಗೆ ೧೮೯೭ರಲ್ಲಿ ಗೋಕಾಕ ತಾಲ್ಲೂಕಿನ ಧೂಪದಾಳದ ಹತ್ತಿರ ಮತ್ತು ೧೯೪೮ರಲ್ಲಿ ಹುಕ್ಕೇರಿ ತಾಲ್ಲೂಕಿನ ಹಿಡಕಲ್ಲದ ಹತ್ತಿರ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಹಿಡಕಲ್ಲ ಅಣೆಕಟ್ಟು ಸುಮಾರು ೧೬೩ ಅಡಿ ಎತ್ತರ ಮತ್ತು ಎಡಬಲದಲ್ಲಿ ಸುಮಾರು ೨೨ ಕಿ.ಮೀ. ಉದ್ದವಾಗಿದೆ. ಹಿರಣ್ಯಕೇಶಿ, ತಾಮ್ರಪರ್ಣಿ ಮತ್ತು ಮಾರ್ಕಂಡೇಯ ನದಿಗಳು ಘಟಪ್ರಭಾ ನದಿಯ ಉಪನದಿಗಳಾಗಿವೆ.

ತಾಮ್ರಪರ್ಣಿ ನದಿಯು ದಡ್ಡಿ ಗ್ರಾಮದ ಹತ್ತಿರ ಘಟಪ್ರಭಾ ನದಿಯನ್ನು ಕೂಡುತ್ತದೆ. ಹಿರಣ್ಯಕೇಶಿ ನದಿಯು ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ತಾಲ್ಲೂಕು ಕೇಂದ್ರ ಅಜರಾ ಪಟ್ಟಣದ ಹತ್ತಿರ ಉಗಮವಾಗಿ ಪೂರ್ವಾಭಿಮುಖವಾಗಿ ಹರಿದು ಇಂಗಳಿಯ ಹತ್ತಿರ ಘಟಪ್ರಭಾ ನದಿಯನ್ನು ಕೂಡುತ್ತದೆ. ಪಂಚಗಂಗಾ ನದಿಯು ಚಿಕ್ಕೋಡಿ ತಾಲ್ಲೂಕಿನ ಉತ್ತರದ ಮೇರೆಯಾಗಿ ಪಶ್ಚಿಮದಿಂದ ಪೂರ್ವಕ್ಕೆ

ಹರಿಯುತ್ತದೆ. ಹಾಗೆಯೇ ಕೂಹುಂಡಿನಾಡಿನ ಪ್ರದೇಶದ ಕೆಲವೆಡೆಯಲ್ಲಿರುವ ಸರಸ್ವತಿಕೊಳ್ಳ, ಹೊಳಿಸಿದ್ಧನಕೊಳ್ಳ, ಸಂಗನಕೊಳ್ಳ, ಬೆನಕಟ್ಟೆ ಹಳ್ಳ, ಹಾಲಹಳ್ಳ, ಬಳ್ಳಾರಿಹಳ್ಳ, ಇಂದ್ರವೇಣಿಹಳ್ಳ, ಕರ್ಪೂರಹಳ್ಳ ಹುಕ್ಕೇರಿಹಳ್ಳ, ಸಂಕೇಶ್ವರಹಳ್ಳ, ಚಿಕುತ್ರಾನಾಲಾ ಮೊದಲಾದ ಕೊಳ್ಳಗಳು, ಹಳ್ಳಗಳು, ನಾಲಾಗಳು, ಕೆರೆಗಳು, ಬಾವಿಗಳು ಪ್ರಾದೇಶಿಕ ನೀರಿನಾಸರೆಗಳಾಗಿವೆ. ಕರ್ನಾಟಕ ಸರ್ಕಾರವು ಮಲಪ್ರಭಾ ಮತ್ತು ಘಟಪ್ರಭಾ ಜಲಾನಯನ ಪ್ರದೇಶಕ್ಕೆಂದೇ ಪ್ರತ್ಯೇಕವಾದ ಅಭಿವೃದ್ಧಿ ಯೋಜನೆಯೊಂದನ್ನು ೧೯೭೩ರಲ್ಲಿ ರೂಪಿಸಿದೆ. ಇದನ್ನು 'ಕಮಾಂಡ್ ಏರಿಯಾ ಡೆವಲಪಮೆಂಟ್ ಅಥಾರಿಟಿ' ಎಂದು ಕರೆಯಲಾಗುತ್ತದೆ.

೨.೨.೫. ಸಸ್ಯಸಂಪತ್ತು

ಕೂಹುಂಡಿನಾಡಿನ ಪ್ರದೇಶದ ಸ್ವಾಭಾವಿಕ ಸಸ್ಯಸಂಪತ್ತು ಗಮನಾರ್ಹವಾಗಿದೆ. ನೈಋತ್ಯ ಭಾಗದಲ್ಲಿ ನಿತ್ಯ ಹರಿದ್ವರ್ಣ ಕಾಡುಗಳಿವೆ. ಅಲ್ಲಿಂದ ಪೂರ್ವದೆಡೆಗೆ ಮಿಶ್ರಕಾಡುಗಳಿವೆ. ಉಳಿದ ಭಾಗವು ಕುರುಚಲು ಅರಣ್ಯದಿಂದ ಕೂಡಿದೆ. ಒಟ್ಟು ೧,೯೨,೪೨೪ ಹೆಕ್ಟೇರ ಪ್ರದೇಶದಲ್ಲಿ ಅರಣ್ಯವಿದೆ. ಅಂದರೆ ಪ್ರತಿಶತ ೧೫ರಷ್ಟು ಅರಣ್ಯ ಪ್ರದೇಶವಿದೆ. ಈ ಪ್ರದೇಶವನ್ನು ಅವಲೋಕಿಸಿದಾಗ ಚಂದಗಡ, ಶಿರೋಳ, ಗಡಹಿಂಗ್ಲಜ, ಬೆಳಗಾವಿ ತಾಲ್ಲೂಕುಗಳ ಪ್ರದೇಶಗಳು ಅತಿ ಹೆಚ್ಚು ಅರಣ್ಯವನ್ನು ಹೊಂದಿವೆ. ಚಿಕ್ಕೋಡಿ ತಾಲ್ಲೂಕಿನ ಪ್ರದೇಶವು ಕಡಿಮೆ ಅರಣ್ಯವನ್ನು ಹೊಂದಿದೆ. ಇಲ್ಲಿಯ ಅರಣ್ಯದಲ್ಲಿ ಬಿದಿರು, ಸಾಗವಾನಿ, ಶಿವನಿ, ಮತ್ತಿ, ನಂದಿ, ಹೊನ್ನೆ, ತೇಗ, ಬೀಟೆ, ಕರಿಮರ, ನೇರಳೆ, ಜಾಲಿ, ರೋಸ್‌ವುಡ್, ಫೈರ್‌ವುಡ್ ಮೊದಲಾದ ಮರಗಳು ಹಾಗೂ ಚಿಗರೆ, ಮೊಲ, ಹಂದಿ ಇತ್ಯಾದಿ ಪ್ರಾಣಿಗಳು ಗೋಚರಿಸುತ್ತವೆ.

೨.೨.೬. ಶಿಲಾಸಂಪತ್ತು

ಕೂಹುಂಡಿನಾಡಿನ ಪ್ರದೇಶದ ಶಿಲಾಸಂಪತ್ತು ಸಮೃದ್ಧವಾಗಿದೆ. ಕೃಷ್ಣಾ ನದಿಯ ತೀರದುದ್ದಕ್ಕೂ ಡೆಕ್ಕನ್ ಬಸಾಲ್ಟ್ ಕಪ್ಪು ಶಿಲೆಗಳು, ಘಟಪ್ರಭಾ ನದಿಯ ತೀರದುದ್ದಕ್ಕೂ ಕೆಂಪುಮಿಶ್ರಿತ ಸ್ಯಾಂಡ್‌ಸ್ಟೋನ್ ಶಿಲೆಗಳು, ಮಲಪ್ರಭಾ ನದಿಯ ತೀರದುದ್ದಕ್ಕೂ ಕ್ವಾರ್ಟಜೈಟ್ ಶಿಲೆಗಳು ಹೆಚ್ಚಿನ ಪ್ರಮಾಣದಲ್ಲಿ ಗೋಚರಿಸುತ್ತವೆ. ಹಾಗೆಯೇ ಈ ನಾಡಿನ ಚಂದಗಡ, ಅಜರಾ, ಶಿರೋಳ, ಬೆಳಗಾವಿ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ, ಜಮಖಂಡಿ, ಮುಧೋಳ, ಬಾಗಲಕೋಟ ತಾಲ್ಲೂಕುಗಳ ಪ್ರದೇಶದಲ್ಲಿ ಬಸಾಲ್ಟ್ ಶಿಲೆಗಳು, ಸವದತ್ತಿ ಬೈಲಹೊಂಗಲ ತಾಲ್ಲೂಕುಗಳ ಪ್ರದೇಶದಲ್ಲಿ ಕ್ಲೋರೈಟ್ ಸಿಸ್ಟ್ ಶಿಲೆಗಳು, ರಾಮದುರ್ಗ, ಗೋಕಾಕ ತಾಲ್ಲೂಕುಗಳ ಪ್ರದೇಶದಲ್ಲಿ ಸ್ಯಾಂಡ್‌ಸ್ಟೋನ್, ಕ್ವಾರ್ಟಜೈಟ್, ಲೈಮಸ್ಟೋನ್, ಡೋಲೋಮೈಟ್ ಶಿಲೆಗಳು ಕಾಣುತ್ತವೆ. ಗೋಕಾಕ, ರಾಮದುರ್ಗ ತಾಲ್ಲೂಕುಗಳ ಪ್ರದೇಶದಲ್ಲಿ ಸುಣ್ಣದ ಶಿಲೆಗಳು ಕಂಡುಬರುತ್ತವೆ. ಈ ಎಲ್ಲ ಶಿಲೆಗಳು ಆಯಾ ಪ್ರದೇಶದ ಶಾಸನಗಳು, ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದಲ್ಲಿ ಬಳಕೆಯಾಗಿವೆ. ಕೆಲವು ದೇವಾಲಯಗಳ ದ್ವಾರಬಂಧಗಳು, ಸ್ತಂಭಗಳು ಮತ್ತು ಶಿಲ್ಪಗಳಿಗೆ ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಗಳನ್ನು ಉಪಯೋಗಿಸಲಾಗಿದೆ. ಇಂತಹ ಶಿಲೆಗಳು ಈ ಪ್ರದೇಶದಲ್ಲಿ ಕಾಣುವುದಿಲ್ಲ. ಹಾಗಾಗಿ ಇವುಗಳನ್ನು ಬೇರೆಡೆಯಿಂದ ತರಿಸಿಕೊಂಡಿರುವಂತೆ ತೋರುತ್ತದೆ.

ಬೆಳಗಾವಿಯ ಕಮಲ ಬಸದಿ, ತೇರದಾಳದ ಗೋಂಕ ಜೀನಾಲಯ, ಅಮ್ಮಣಗಿಯ ಪಾರ್ಶ್ವನಾಥ ಬಸದಿ, ರಾಯಬಾಗದ ಆದಿನಾಥ ಬಸದಿ, ಸೋಮೇಶ್ವರ ದೇವಾಲಯ, ನೇಸರಗಿಯ ವೀರಭದ್ರ ದೇವಾಲಯ (ಇದು ಮೂಲತಃ ಜೈನ ಬಸದಿ), ನೇಸರಗಿಯ ಜೋಡುಗುಡಿ, ಸೊಗಲದ ಸೋಮೇಶ್ವರ ದೇವಾಲಯ, ಗೋಕಾಕ ಫಾಲ್ಸ್‌ದ ಮಹಾಲಿಂಗೇಶ್ವರ ದೇವಾಲಯ, ಸವದತ್ತಿಯ ಅಂಕೇಶ್ವರ ದೇವಾಲಯ, ಕೊಣ್ಣೂರದ ಪಾರ್ಶ್ವನಾಥ ಬಸದಿ, ಕಲ್ಲೊಳೆಯ ತ್ರಿಕೂಟ ಮಂಡಿತ ಪಾರ್ಶ್ವನಾಥ ಬಸದಿ ಮೊದಲಾದ ಕೆಲವು ಸ್ಮಾರಕಗಳ ನಿರ್ಮಾಣದಲ್ಲಿ ಕಪ್ಪು ಶಿಲೆಯನ್ನು ಬಳಸಲಾಗಿದೆ. ಈ ನಾಡಿನ ಬಹುತೇಕ ಶಿಲ್ಪಗಳು ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಕಂಡರಿಸಲ್ಪಟ್ಟಿವೆ. ದೊಡವಾಡ, ನೇಸರಗಿ, ಬೆಳವಡಿ, ವಣ್ಣೂರು, ಹಣ್ಣಿಕೇರಿ, ಬಡ್ಲಿ, ಮುನವಳ್ಳಿ, ಬೆಳಗಾವಿ, ಸವದತ್ತಿ, ಯಕ್ಸಂಬಾ, ಅರ್ಜುನವಾಡ, ರಾಯಬಾಗ, ಕಲ್ಲೊಳೆ, ಕೊಣ್ಣೂರು, ತೇರದಾಳ, ಮಮದಾಪುರ, ತೇರ್ಣಿ ಮೊದಲಾದೆಡೆಯ ಕೆಲವು ಶಾಸನಗಳಿಗೆ ಕಪ್ಪು ಶಿಲೆಯನ್ನು ಬಳಸಿಕೊಳ್ಳಲಾಗಿದೆ. ಸಸಾಲಟ್ಟಿ, ಕಿರಸೂರು, ಮುಧೋಳ, ಮಂಟೂರು, ಅಂಬೇವಾಡಿ, ಕುಂದರಗಿ, ಮುಗಳಖೋಡ, ಬೆಳವಿ, ಕೋಚರಿ, ಉಳ್ಳಾಗಡ್ಡಿ ಖಾನಾಪುರ, ಅಮ್ಮಣಗಿ, ಜಗನೂರು, ಕೆರೂರು, ಉಮರಾಣಿ, ಸತ್ತಿಗೇರಿ, ಯಡ್ರಾವಿ, ಮುನವಳ್ಳಿ, ಚುಳಕಿ, ಅಸುಂಡಿ ಮೊದಲಾದೆಡೆಯ ಕೆಲವು ಶಾಸನಗಳನ್ನು ಮರಳು ಮಿಶ್ರಿತ ಶಿಲೆಯಲ್ಲಿ ಕಂಡರಿಸಲಾಗಿದೆ. ಇದರಿಂದ ಈ ಪ್ರದೇಶದಲ್ಲಿ ಸ್ಥಳೀಯವಾಗಿ ಲಭ್ಯವಾಗುವ ಶಿಲೆಗಳನ್ನೂ ಆಯಾ ಪ್ರದೇಶದ ದೇವಾಲಯಗಳ ನಿರ್ಮಾಣ ಮತ್ತು ಶಾಸನಗಳಿಗೆ ಬಳಸಿಕೊಂಡಿರುವುದು ಗೋಚರಿಸುತ್ತದೆ.

೨.೩. ಚಾರಿತ್ರಿಕ ಹಿನ್ನೆಲೆ

ಕೂಹುಂಡಿನಾಡಿನ ಪ್ರದೇಶದ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳು ಇಲ್ಲಿಯ ಚಾರಿತ್ರಿಕ ಹಿನ್ನೆಲೆಯ ಮೇಲೆ ದಟ್ಟವಾದ ಪ್ರಭಾವ ಬೀರಿವೆ. ಹೀಗಾಗಿ ಈ ಪ್ರದೇಶದಲ್ಲಿ ಇತಿಹಾಸಪೂರ್ವ (ಪ್ರಾಗೈತಿಹಾಸಿಕ) ಮತ್ತು ಇತಿಹಾಸ ಆರಂಭ ಕಾಲಾವಧಿಯ ಸಂಸ್ಕೃತಿಗಳು ವೈವಿಧ್ಯಮಯವಾಗಿ ಬೆಳೆದು ಬಂದಿವೆ. ಅವುಗಳ ಅಧ್ಯಯನ ಈ ಕೆಳಗಿನಂತಿದೆ.

೨.೩.೧. ಇತಿಹಾಸಪೂರ್ವ ಸಂಸ್ಕೃತಿ

ಇತಿಹಾಸಪೂರ್ವ ಕಾಲಾವಧಿಯ ವಿವಿಧ ಮಾನವ ಸಂಸ್ಕೃತಿಗಳ ಹಂತವನ್ನು ಸಮಕಾಲೀನ ಪ್ರಾಚ್ಯಾವಶೇಷಗಳು, ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೧೦,೦೦೦ ವರ್ಷಗಳಿಂದ ೪ ಲಕ್ಷ ವರ್ಷಗಳಷ್ಟು ಪೂರ್ವ), ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೨,೫೦೦ ವರ್ಷದಿಂದ ೧೦,೦೦೦ ವರ್ಷಗಳಷ್ಟು ಪೂರ್ವ), ನೂತನ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೨,೦೦೦ ರಿಂದ ೧,೦೦೦), ಶಿಲಾ–ತಾಮ್ರಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೨,೩೦೦ ರಿಂದ ೧,೦೦೦), ಲೋಹಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೨,೧೦೦ ರಿಂದ ೧,೫೦೦), ಬೃಹತ್ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ. ಸುಮಾರು ೧,೨೦೦ ರಿಂದ ೧,೦೦೦) ಎಂದು ವರ್ಗೀಕರಿಸಲಾಗಿದೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಆರ್.ವಿ.

ಜೋಶಿ, ಆರ್.ಡಿ. ಬ್ಯಾನರ್ಜಿ, ಆರ್.ಎಸ್. ಪಂಚಮುಖಿ, ಆರ್.ಎಸ್. ಪಪ್ಪು, ಅ. ಸುಂದರ, ಶ್ರೀನಿವಾಸ ಪಾಡಿಗಾರ, ಕೆ. ಪದ್ದಯ್ಯ, ರವಿ ಕೋರಿಶೆಟ್ಟರ, ಎಚ್.ಎಸ್. ಕಾಂಬಳೆ, ಆರ್.ಎಂ. ಷಡಕ್ಷರಯ್ಯ, ಬಿ. ನರಸಿಂಹಯ್ಯ, ಸಿ.ಬಿ. ಹೊಂಡದಕಟ್ಟಿ, ಸ್ಮಿತಾ ಸುರೇಬಾನಕರ ಮೊದಲಾದ ಅನೇಕ ಸಂಶೋಧಕರು, ವಿದ್ವಾಂಸರು ಇತಿಹಾಸಪೂರ್ವ ಕಾಲಾವಧಿಯ ಹಲವು ನೆಲೆಗಳನ್ನು ಬೆಳಕಿಗೆ ತಂದುದ್ದರ ಫಲವಾಗಿ ಈ ಪ್ರದೇಶದ ಚಾರಿತ್ರಿಕ ಅಧ್ಯಯನವು ಹೊಸ ಹೊಸ ತಿರುವುಗಳನ್ನು ಪಡೆದುಕೊಂಡಿದೆ.

ಆರ್.ವಿ. ಜೋಶಿ ಅವರು ೧೯೫೫ರಲ್ಲಿ ಮಲಪ್ರಭಾ ಮತ್ತು ಘಟಪ್ರಭಾ ನದಿಗಳ ಕೊಳ್ಳಗಳಲ್ಲಿ ಕೈಗೊಂಡ ವೈಜ್ಞಾನಿಕ ಸಂಶೋಧನೆಯಿಂದಾಗಿ ಇತಿಹಾಸಪೂರ್ವ ಕಾಲಾವಧಿಯ ಹಲವು ನೆಲೆಗಳ ಶೋಧನೆಯ ಜೊತೆಗೆ ಪ್ಲೀಸ್ಟೋಸಿನ್‌ಯುಗದ ಅಧ್ಯಯನಕ್ಕೆ ಮಹತ್ವ ಲಭಿಸಿ, ಉತ್ತರ ಕರ್ನಾಟಕದ ಇತಿಹಾಸಪೂರ್ವ ಕಾಲಾವಧಿಯ ಸಂಸ್ಕೃತಿಗಳ ಅಧ್ಯಯನಕ್ಕೆ ಚಾಲನೆ ದೊರೆಯಿತು. ಆರ್.ಡಿ. ಬ್ಯಾನರ್ಜಿ ಅವರು ೧೯೫೭ರಲ್ಲಿ ಘಟಪ್ರಭಾ, ಮಲಪ್ರಭಾ, ಕೃಷ್ಣಾ ನದಿಗಳ ಕೊಳ್ಳಗಳಲ್ಲಿ ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿಯ ವಿಶಿಷ್ಟ ಶಿಲೋಪಕರಣಗಳನ್ನು ಬೆಳಕಿಗೆ ತಂದಿದ್ದಾರೆ. ಆರ್.ಎಸ್. ಪಪ್ಪು ಅವರು ೧೯೭೪ರಲ್ಲಿ ಕೃಷ್ಣಾ ನದಿಯ ಮೇಲ್ದಂಡೆ ಪ್ರದೇಶದಲ್ಲಿ ಇತಿಹಾಸಪೂರ್ವ ಕಾಲಾವಧಿಯ ಅನೇಕ ನೆಲೆಗಳನ್ನು ಶೋಧಿಸಿದ್ದಾರೆ. ಅ. ಸುಂದರ ಅವರು ೧೯೭೫ರಲ್ಲಿ ಈ ಪ್ರದೇಶದ ಕೆಲವೆಡೆಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ (ಕಬ್ಬಿಣಯುಗ) ವಿಭಿನ್ನ ಮಾದರಿಯ ಕಲ್ಗೋರಿಗಳನ್ನು ಬೆಳಕಿಗೆ ತಂದಿದ್ದಾರೆ. ಕೆ. ಪದ್ದಯ್ಯ ಅವರು ೧೯೭೩ರಲ್ಲಿ ಭೀಮಾ–ಕೃಷ್ಣಾ ನದಿಗಳ ಪಾತ್ರದಲ್ಲಿ ಬೆಳಕಿಗೆ ತಂದ ಇತಿಹಾಸಪೂರ್ವ ಸಂಸ್ಕೃತಿಯ ನೆಲೆಗಳಿಂದ ಸಮಕಾಲೀನ ಮಾನವನ ಜೀವನ ಕ್ರಮದ ಬಗೆಗೆ ತಿಳಿಯಲು ಸಹಾಯಕವಾಗಿದೆ.

ರವಿ ಕೋರಿಶೆಟ್ಟರ ಅವರು ಕೃಷ್ಣಾ ನದಿಯ ಪಾತ್ರದಲ್ಲಿ ಇತಿಹಾಸಪೂರ್ವ ಕಾಲಾವಧಿಯ ನೆಲೆಗಳು, ಭೂವಿಜ್ಞಾನ, ಪ್ರಾಣಿ–ಸಸ್ಯವರ್ಗದ ಬಗೆಗೆ ಅಧ್ಯಯನ ನಡೆಸಿರುವರು. ಎಚ್.ಎಸ್. ಕಾಂಬಳೆ ಅವರು ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳ ಶೋಧನೆಯನ್ನು ಕೈಗೊಂಡು ಸಮಕಾಲೀನ ಹೊಸ ಹೊಸ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ.[೨] ಆರ್.ಎಂ. ಷಡಕ್ಷರಯ್ಯ ಅವರು ಈ ಪ್ರದೇಶದ ನೈಋತ್ಯ ಭಾಗದಲ್ಲಿರುವ ಖಾನಾಪುರ ತಾಲ್ಲೂಕಿನ ಹಲಸಿಯಲ್ಲಿ ಇತ್ತೀಚೆಗೆ ಉತ್ಖನನ ಕೈಗೊಂಡು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಾಲಾವಧಿಯ ಉಪಕರಣಗಳನ್ನು ಶೋಧಿಸಿದ್ದಾರೆ. ಅ. ಸುಂದರ ಅವರ ಸಂಶೋಧನೆಯಿಂದ ಹಲಸಿಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿಗಳ ಪುರಾವೆಗಳು ಇದ್ದುದನ್ನು ತಿಳಿಯಲಾಗಿದೆ. ಅ. ಸುಂದರ ಮತ್ತು ಶ್ರೀನಿವಾಸ ಪಾಡಿಗಾರ ಅವರು ೨೦೦೫ರಲ್ಲಿ ರಾಯಬಾಗ ತಾಲ್ಲೂಕಿನ ಕುಡಚಿ ಗ್ರಾಮದ ಠಿಕಾಣಹಾಳದಲ್ಲಿ ನೂತನ–ತಾಮ್ರಯುಗ ಸಂಸ್ಕೃತಿಯ ಅಂತ್ಯ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಪೂರ್ವ ಹಂತದ ಬೂದಿದಿಬ್ಬ ನೆಲೆಯಲ್ಲಿ ಉತ್ಖನನವನ್ನು ಕೈಗೊಂಡು ಸಮಕಾಲೀನ ಬೂದು ಬಣ್ಣದ ಮೃತ್ ಪಾತ್ರೆಗಳನ್ನು ಬೆಳಕಿಗೆ ತಂದಿದ್ದಾರೆ.

ಈ ಮೇಲಿನ ಸಂಶೋಧಕರು ಮತ್ತು ವಿದ್ವಾಂಸರು ಕೈಗೊಂಡ ಸಂಶೋಧನೆಗಳು ಹಾಗೂ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳ ಪ್ರದೇಶಗಳಿಗೆ ಸಂಬಂಧಿಸಿದಂತೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಕುರಿತು ಎಂ.ಫಿಲ್., ಪಿಎಚ್.ಡಿ. ಸಂಶೋಧನ ಅಧ್ಯಯನಗಳನ್ನು ಕೈಗೊಂಡಿರುವ ಕೆಲವು ಯುವ ಸಂಶೋಧಕರ ಪ್ರಯತ್ನದ ಫಲವಾಗಿ ಕೂಹುಂಡಿನಾಡಿನ ಪ್ರದೇಶದ ಕೆಲವೆಡೆಗಳಲ್ಲಿ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ೨೬ ನೆಲೆಗಳು, ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿಯ ೪೨ ನೆಲೆಗಳು, ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ೯ ನೆಲೆಗಳು, ನೂತನ ಶಿಲಾಯುಗ ಸಂಸ್ಕೃತಿಯ ೬ ನೆಲೆಗಳು, ಶಿಲಾ-ತಾಮ್ರಯುಗ ಸಂಸ್ಕೃತಿಯ ೨೮ ನೆಲೆಗಳು, ಬೃಹತ್ ಶಿಲಾಯುಗ ಸಂಸ್ಕೃತಿಯ ೩೯ ನೆಲೆಗಳು ಬೆಳಕಿಗೆ ಬಂದಿವೆ.[೩] ಈ ಎಲ್ಲ ನೆಲೆಗಳಲ್ಲಿ ದೊರೆತ ಪ್ರಾಚ್ಯಾವಶೇಷಗಳಿಂದ ಸಮಕಾಲೀನ ಚಾರಿತ್ರಿಕ ಹಿನ್ನೆಲೆ ಮತ್ತು ಆಯಾ ಸಂಸ್ಕೃತಿಯ ವಿವಿಧ ಆಯಾಮಗಳು (ಲಕ್ಷಣಗಳು) ಸ್ಪಷ್ಟವಾಗುತ್ತವೆ.

ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಹಂತದಲ್ಲಿ ಕಲ್ಲಿನಿಂದ ಕಲ್ಲಿಗೆ ಬಡಿಯುವ ವಿಧಾನ, ಕಲ್ಲು-ಸುತ್ತಿಗೆ ವಿಧಾನ, ಲಘು ಸುತ್ತಿಗೆ ವಿಧಾನ ಎಂಬ ಮೂರು ವಿಧಾನಗಳನ್ವಯದಂತೆ ಉಪಕರಣಗಳನ್ನು ರೂಪಿಸುತ್ತಿದ್ದುದು ತಿಳಿಯುತ್ತದೆ. ಪ್ರಾಣಿಗಳ ಬೇಟೆ, ಅಲೆಮಾರಿ ಜೀವನ ಈ ಹಂತದ ಪ್ರಮುಖ ಲಕ್ಷಣಗಳಾಗಿವೆ. ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿಯ ಉಪಕರಣಗಳು ಚಕ್ಕೆಕಲ್ಲಿನವುಗಳಾಗಿವೆ. ಉಪಕರಣಗಳ ತಯಾರಿಕೆಯಲ್ಲಿ ಮೂಲ ತಾಂತ್ರಿಕತೆಯ ಜೊತೆಗೆ ಲೆವಾಲ್ವಾ, ಕ್ಲಾಕ್ಟನ್, ಮಸ್ಟೂರ್ ತಂತ್ರಗಳನ್ನು ಬಳಸಿ ಚಕ್ಕೆ ತೆಗೆದು ನಿಶ್ಚಿತ ರೂಪವನ್ನು ಕೊಡಲಾಗುತ್ತಿತ್ತು. ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿಯ ಉಪಕರಣಗಳ ಗಾತ್ರ ಚಿಕ್ಕದ್ದಾಗಿದೆ. ಇವುಗಳನ್ನು ಪರೋಕ್ಷ ಒತ್ತಡ, ವಕ್ಷಸ್ಥಲ ಒತ್ತಡ, ನೇರ ಒತ್ತಡ ಎಂಬ ಮೂರು ತಂತ್ರಗಳನ್ವಯದಂತೆ ಹಲವು ಕಾರ್ಯಗಳಿಗಾಗಿ ಬಳಸುವಂತೆ ರೂಪಿಸಿಕೊಳ್ಳಲಾಗುತ್ತಿತ್ತು. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಕಾಲಾವಧಿಯ ನೀಳಚಕ್ಕೆ, ಹೆರೆಚಕ್ಕೆ, ಮೊನೆ, ಬಾಣ, ಕೊರೆಗ, ಕೊರೆಯುಳಿ, ಅರ್ಧಚಂದ್ರಾಕೃತಿ, ದಬ್ಬಳ ಮೊದಲಾದ ಮಾದರಿಯ ಶಿಲೋಪಕರಣಗಳು ಅತಿ ಕಿರುಗಾತ್ರದವುಗಳಾಗಿವೆ. ಈ ಹಂತದಲ್ಲಿ ಜನರು ಪರಸ್ಪರ ತಿಳುವಳಿಕೆಯಿಂದ ವ್ಯವಸ್ಥಿತ ಸಮಾಜವನ್ನು ರೂಪಿಸತೊಡಗಿದರು.

ಮಾನವನ ಜೀವನ ವಿಕಾಸದಲ್ಲಿ ಕ್ರಾಂತಿಕಾರಕವಾದ ನೂತನ ಶಿಲಾಯುಗ ಸಂಸ್ಕೃತಿಯ ಕಾಲಾವಧಿಯ ಶಿಲೋಪಕರಣಗಳಲ್ಲಿ ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೊಡಲಿ-ಸುತ್ತಿಗೆ, ಅರೆಯುವ ಕಲ್ಲು (ಕೆತ್ತುಳಿ ಉಜ್ಜುಗ), ಕವಣೆಕಲ್ಲು, ಉಂಗುರಕಲ್ಲು ಮೊದಲಾದ ಏಪ್ಪತ್ತೆಂಟು ಪ್ರಕಾರದ ಉಪಕರಣಗಳು ಪ್ರಮುಖವಾಗಿವೆ. ವೈವಿಧ್ಯಮಯವಾದ ಶಿಲೋಪಕರಣಗಳು, ಮಣ್ಣಿನ ಪಾತ್ರೆಗಳು, ಶವಸಂಸ್ಕಾರ ಪದ್ಧತಿ, ಕಲೆಗಾರಿಕೆ, ಚಕ್ರದ ಶೋಧನೆ, ವ್ಯವಸಾಯ, ಪಶುಸಂಗೋಪನೆ, ಸಾಮೂಹಿಕ ಸ್ಥಿರ ಜೀವನ, ಜೊಂಡುಹುಲ್ಲು ಮರಮುಟ್ಟು ಮಣ್ಣಿನಿಂದ ಗುಡಿಸಲುಗಳ ನಿರ್ಮಾಣ, ಅಲಂಕಾರ ಸಾಧನಗಳ ಬಳಕೆ, ಧಾರ್ಮಿಕ ನಂಬಿಕೆ, ಸುಸಂಸ್ಕೃತ ಜೀವನ ಈ ಹಂತದ ಪ್ರಮುಖ ಲಕ್ಷಣಗಳಾಗಿವೆ. ಶಿಲಾ-ತಾಮ್ರಯುಗ ಸಂಸ್ಕೃತಿಯ

ಕಾಲಾವಧಿಯ ಲಕ್ಷಣಗಳಲ್ಲಿ ತಾಮ್ರದ ಅದಿರಿನ ಜ್ಞಾನ, ನೀಳಚಕ್ಕೆಗಳ ಉಪಯೋಗ, ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿ, ಸೌಂದರ್ಯ ಪ್ರಜ್ಞೆ, ಮಡಕೆಗಳು ಮತ್ತು ಬಯಲು ಬಂಡೆಗಳ ಮೇಲೆ ವರ್ಣಚಿತ್ರಗಳ ರಚನೆ, ಬೂದಿದಿಬ್ಬಗಳ ಪರಂಪರೆ, ಕೃಷಿ ಮತ್ತು ಪಶುಸಂಗೋಪನೆ, ಮೀನುಗಾರಿಕೆ, ಸುಧಾರಿತ ಶವಸಂಸ್ಕಾರ ಪದ್ಧತಿ, ಮಾತೃದೇವತಾರಾಧನೆ ಮೊದಲಾದವುಗಳು ಪ್ರಮುಖವಾಗಿವೆ. ಇತಿಹಾಸ ಕಾಲಾರಂಭದ ಮುನ್ಸೂಚನೆಯಾದ ಬೃಹತ್ ಶಿಲಾಯುಗ ಸಂಸ್ಕೃತಿಯ ಲಕ್ಷಣಗಳಲ್ಲಿ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳ ನಿರ್ಮಾಣ, ಕಬ್ಬಿಣದ ಬಳಕೆ, ವಿವಿಧ ವರ್ಣಗಳ ಮಡಕೆಗಳ ಉಪಯೋಗ, ಸಾಮೂಹಿಕ ಸ್ಥಿರ ಜೀವನ, ವ್ಯವಸಾಯ ಮೊದಲಾದವುಗಳು ಪ್ರಮುಖವಾಗಿವೆ.[೪]

೨.೩.೨. ಇತಿಹಾಸ ಆರಂಭ ಸಂಸ್ಕೃತಿ

ಮಾನವನು ವಿವಿಧ ಸಂಸ್ಕೃತಿಗಳ ಹಂತದಿಂದ ಲಿಪಿಯ ಬಳಕೆಗೆ ಬಂದ ಹಂತವನ್ನು ಇತಿಹಾಸ ಆರಂಭ ಸಂಸ್ಕೃತಿ ಎಂದು ಗುರುತಿಸಲಾಗುತ್ತದೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಆರ್.ಎಸ್. ಪಂಚಮುಖಿ, ಅ. ಸುಂದರ, ಬಿ.ಕೆ. ಗುರುರಾಜರಾವ್, ಆರ್.ಎಂ. ಷಡಕ್ಷರಯ್ಯ ಮೊದಲಾದವರು ಇತಿಹಾಸ ಆರಂಭ ಸಂಸ್ಕೃತಿಯ ಕಾಲಾವಧಿಯ (ಕ್ರಿ.ಶ. ಸುಮಾರು ೧ನೆಯ ಶತಮಾನದಿಂದ ೩ನೆಯ ಶತಮಾನ) ಕೆಲವು ಜನವಸತಿ ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಈ ಎಲ್ಲ ನೆಲೆಗಳು ಪ್ರಸ್ತುತ ನಾಶವಾಗಿದ್ದು, ವ್ಯವಸಾಯಕ್ಕೊಳಪಟ್ಟಿವೆ. ಅ. ಸುಂದರ ಅವರು ೧೯೭೨ ರಿಂದ ೧೯೭೮ರ ಅವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಪರವಾಗಿ ಬೆಳಗಾವಿ ನಗರದ ಹೊರವಲಯದಲ್ಲಿರುವ ವಡಗಾಂವ-ಮಾಧವಪುರ ಗ್ರಾಮಗಳ ಪರಿಸರದಲ್ಲಿ ಪೈಠಣದ ಶಾತವಾಹನ ಮನೆತನದ ಕಾಲಾವಧಿಯ ಅಪರೂಪದ ನೆಲೆಯನ್ನು ಶೋಧಿಸಿ ಅಧ್ಯಯನ ಮಾಡಿದ್ದಾರೆ. ಇದರಿಂದ ಮೊಟ್ಟಮೊದಲಿಗೆ ಶಾತವಾಹನರ ಕಾಲಾವಧಿಯ ಕೆಲವು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಾಹಿತಿಗಳು ಮತ್ತು ಸಮಕಾಲೀನ ನಗರಾವಸ್ಥೆಯನ್ನು ತಿಳಿಯಲು ಸಾಧ್ಯವಾಗಿದೆ. ಕೂಹುಂಡಿನಾಡಿನ ಪ್ರದೇಶದ ನೈಋತ್ಯ ಭಾಗದಲ್ಲಿರುವ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿಯೂ ಶಾತವಾಹನ ಮನೆತನದ ಕಾಲಾವಧಿಯ ಕೆಲವು ಪುರಾವೆಗಳು ದೊರೆತಿವೆ.[೫]

ಕೂಹುಂಡಿನಾಡಿನ ಪ್ರದೇಶದ ಕರೋಶಿ, ಕಡೋಲಿ, ವಡಗಾಂವ-ಮಾಧವಪುರ, ಹಳೆ ಬೆಳಗಾವಿ, ಕುಡಚಿ, ಖೇಮಲಾಪುರ, ಕೊಟಬಾಗಿ, ಅಮ್ಮಣಗಿ, ಆಸಂಗಿ, ಕಲ್ಲೋಳೆ, ಶಿರಗುಪ್ಪಿ, ಹನಗಂಡಿ, ಹಿಪ್ಪರಗಿ, ಕಿರಸೂರು, ಕೆಸನೂರು, ಬೆನಕಟ್ಟಿ, ಹೆರಕಲ್ಲ ಮೊದಲಾದೆಡೆಗಳಲ್ಲಿ ಬೆಳಕಿಗೆ ಬಂದಿರುವ ಇತಿಹಾಸ ಆರಂಭ ಸಂಸ್ಕೃತಿಯ ಕಾಲಾವಧಿಯ ನೆಲೆಗಳಲ್ಲಿ ಕೆಂಪು ಹೊಳಪುಳ್ಳ ಮೃತ್ ಪಾತ್ರೆಗಳು, ಅರೆಟೈನ್ ಮಾದರಿ ಮದ್ಯದ ಜಾಡಿಗಳು, ನಕ್ಷಾಂಕಿತ ಪಾತ್ರೆಗಳು, ಕೆಂಪು ಲೇಪನದಡಿ ಬಿಳಿವರ್ಣ ಚಿತ್ರಗಳುಳ್ಳ ಮಡಕೆ ಭಾಗಗಳು ಕಂಡುಬಂದಿವೆ. ಇವು ದೊರಕುವ ಸಾಂದ್ರತೆಯನ್ನನುಸರಿಸಿ ಇಂತಹ ನೆಲೆಗಳು ಪಟ್ಟಣಗಳೇ ಅಥವಾ ಗ್ರಾಮಗಳೇ ಎಂಬುದನ್ನು ನಿರ್ಧರಿಸಬಹುದಾಗಿದೆ.[೬]

೨.೪. ಕೂಹುಂಡಿನಾಡಿನ ಪ್ರಾಚೀನತೆ, ವ್ಯಾಪ್ತಿ ಮತ್ತು ಹಿರಿಮೆ

ಕುಂತಳದೇಶದಲ್ಲಿದ್ದ (ಕುಂತಳನಾಡು/ಕುಂತಲ) ಹಲವು ಆಡಳಿತ ವಿಭಾಗಗಳಲ್ಲಿ ಕೂಹುಂಡಿನಾಡು ಪ್ರಮುಖ ವಿಭಾಗವಾಗಿತ್ತು. ಶಾಸನಗಳಲ್ಲಿ 'ದೇಶಂಗಳೊಳಗೆ ಕುಂತಳ ದೇಶಮೇ ಮಿಗಿಲ್' ಎಂದು ವರ್ಣಿತವಾಗಿರುವ ಕುಂತಳದೇಶವು ಎಲ್ಲಿಂದ ಎಲ್ಲಿಯವರೆಗೆ ವ್ಯಾಪಿಸಿತ್ತು ಎಂಬ ಬಗೆಗೆ ಸ್ಪಷ್ಟವಾದ ಸಾಕ್ಷ್ಯಾಧಾರಗಳು ಇದುವರೆಗೂ ದೊರಕಿಲ್ಲ. ಕರ್ನಾಟಕಕ್ಕೆ ಮತ್ತೊಂದು ಪರ್ಯಾಯನಾಮ 'ಕುಂತಲ' ಎಂಬ ಅಭಿಪ್ರಾಯವು ವಿದ್ವಾಂಸ ವಲಯದಲ್ಲಿದೆ. ಈ ನಿಟ್ಟಿನಲ್ಲಿ ಆರ್.ಸಿ. ಹಿರೇಮಠ ಅವರು "ಕುಂತಲ ಎಂಬುದು ಕರ್ನಾಟಕದ ಇನ್ನೊಂದು ಹೆಸರಾಗಿದ್ದಿತ್ತು. ಕ್ರಿ.ಶ. ಆರಂಭ ಕಾಲದಿಂದ ಈ ಶತಮಾನದ ಮಧ್ಯಭಾಗದವರೆಗೆ ಡೆಕ್ಕನ್ ಪ್ರಸ್ಥಭೂಮಿ ಈಗೀನ ಕರ್ನಾಟಕ ಮಹಾರಾಷ್ಟ್ರವನ್ನು ಒಳಗೊಂಡ ಪ್ರದೇಶ ಒಂದೇ ಆಳ್ವಿಕೆಗೆ ಒಳಪಡುತ್ತ ಬಂದಿದೆ. ಈ ಸಮಗ್ರ ಪ್ರಸ್ಥಭೂಮಿಗೆ ಕುಂತಳವೆಂಬ ಸಾಮಾನ್ಯ ಹೆಸರಿದೆ. ಈ ಕುಂತಲವೇ ಬಾದಾಮಿ ಚಾಳುಕ್ಯ ಮನೆತನದ ಇಮ್ಮಡಿ ಪುಲಕೇಶಿ ಆಳಿದ ದಕ್ಷಿಣಾಪಥ, ಬೃಹತ್ ಕರ್ನಾಟಕ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆಯೇ ಆರ್.ಸಿ. ಹಿರೇಮಠ ಮತ್ತು ಎಂ.ಎಂ. ಕಲಬುರ್ಗಿ ಅವರು "ಕುಂತಳದೇಶ ಪ್ರಾಚೀನ ಕರ್ನಾಟಕದ ಇನ್ನೊಂದು ಹೆಸರು. ಇದು ಕವಿರಾಜಮಾರ್ಗ ಹೇಳುವ ಕಾವೇರಿಯಿಂದ ಗೋದಾವರಿವರಮಿರ್ದ ನಾಡು. ಏಳುವರೆ ಲಕ್ಷ ಗ್ರಾಮಗಳ ಪ್ರದೇಶವಿದು. ಕಾರಣ ಕುಂತಳ ಸಪ್ತಾರ್ಧಲಕ್ಷವೆಂದು ಕರೆಯುವ ರೂಢಿ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಪೈಠಣದ ಶಾತವಾಹನರು ಕುಂತಲದೇಶವನ್ನು ಆಳಿದ್ದಾರೆ. ಬಾದಾಮಿ ಚಲುಕ್ಯರನ್ನು ಸಮಕಾಲೀನ ಶಾಸನಗಳು 'ಕುಂತಲಾಧೀಶ್ವರರು' ಎಂದು ಕರೆದಿವೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದ ಪ್ರಾಚೀನ ಹಲವು ಶಾಸನಗಳು ಮತ್ತು ಸಮಕಾಲೀನ ಕೆಲವು ಕೃತಿ–ಕಾವ್ಯಗಳಲ್ಲಿ (ಬಿಲ್ಹಣನ ವಿಕ್ರಮಾಂಕದೇವ ಚರಿತೆ, ವಾತ್ಸಾಯನನ ಕಾಮಸೂತ್ರ, ಸಿಂಗಿರಾಜನ ಸಿಂಗಿರಾಜಪುರಾಣ ಇತ್ಯಾದಿ) ಕುಂತಳದೇಶದ ಸೊಗಸಾದ ವರ್ಣನೆಗಳಿವೆ.[೭]

ಗದಗ ತಾಲ್ಲೂಕಿನ ಕಣವಿಯ ಕ್ರಿ.ಶ. ೧೧೦೫ರ ಶಾಸನದಲ್ಲಿ–

ವಾರಿಧಿವೇಷ್ಠಿತಾಖಿಲಟಿಧರಾತಳ ಮಧ್ಯದೊಳಾದಮೊಪ್ಪುಗುಂ
ಮೇರುಕಳಕ್ಕೆ ಮೇಟಿಯವೊಕನಕಾದ್ರಿಯ ದಕ್ಷಿಣಾದಿಶೆಯೊಳು
ಭಾರತವರ್ಷಮುಂಟದಱೊಳಿಪ್ಪುದು ಕುಂತಳದೇಶ....... ‖

'ಸಮುದ್ರವು ಸುತ್ತುವರೆಯಲ್ಪಟ್ಟ ಭೂಮಂಡಲದ ಮಧ್ಯದಲ್ಲಿ ಮೇರುಪರ್ವತವು ಕಣದಲ್ಲಿಯ ಮೇಟಿಯಂತೆ ಶೋಭಿಸುತ್ತಿತ್ತು' ಎಂದು ಕುಂತಳದೇಶದ ವರ್ಣನೆಯಿದೆ.[೮] ಜಮಖಂಡಿ ತಾಲ್ಲೂಕಿನ ತೇರದಾಳದ ಕ್ರಿ.ಶ. ೧೧೨೫ರ ಶಾಸನದಲ್ಲಿ–

ಕ್ಷಿತಭೃತ್ರಾಣ ಪ್ರಭಾವೋತ್ಕರಕ ಕಿಮಕರೋದ್ಯತ್ರಯುಕ್ತಾಬ್ಧಿ
ವಳಾವೃತ ಜಂಬೂದ್ವೀಪ ಮಧ್ಯೋದ್ಭವಕನಕನಗಕ್ಕೀಕ್ಷಿಸಲು
ದಕ್ಷಿಣಾಶಾಕ್ಷಿತಿ ಕಣ್ಗೊಪ್ಪಿಪ್ಪುದೆತ್ತಂ ಭರತವಿಷಯ

ಮಾದೇಶದೊಳು ಕುಂತಳೋದ್ಯತ್‌ಕ್ಷಿತಿ ತೋರ್ಕ್ಕುಂ ಚಲ್ವಿನಿಂ
ತದ್ಧರಣಿಯೊಳೆಸೆಗುಂ ಕೂಂಡಿನಾಮೋದ್ಧದೇಶಂ ॥

ಎಂದು ಕುಂತಳದೇಶದ ಭೌಗೋಳಿಕ ವ್ಯಾಪ್ತಿ ಸೊಗಸಾಗಿ ಮೂಡಿಬಂದಿದೆ. ಇದೇ ರೀತಿ ಕುಂತಳದೇಶವು 'ಭೂಮಿಯೆಂಬ ವಧುವಿನ ಮುಂಗುರುಳಿನಂತೆ ಶೋಭಾಯಮಾನವಾಗಿತ್ತು', 'ಭೂಲತಾಂಗಿಯ ಮುಖವಾಗಿತ್ತು', 'ಅನೇಕ ದೇವತೆಗಳು ಆದರಪೂರ್ವಕವಾಗಿ ಒಂದೆಡೆ ಸೇರುವ ದೇಶವಾಗಿತ್ತು' ಇತ್ಯಾದಿ ವರ್ಣನೆಗಳು ಸಮಕಾಲೀನ ಶಾಸನಗಳಲ್ಲಿ ನಿರೂಪಿತವಾಗಿವೆ.[೧೦] ಕಲ್ಯಾಣದ ಕಲಚೂರಿ ಮನೆತನದ ಸೋಯಿದೇವನ ಉಮ್ರಾಣಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ-

ಸ್ಫುರದಂಬೋನಿಧಿವೇಷ್ಟಿತ
ವರ ಜಂಬೂದ್ವೀಪ ಮಧ್ಯ ಮೇರುಗೆ ತೆಂಕಲ್
ಭರತಕ್ಷೇತ್ರಂ ಬಾಸುರ
ತರವನ್ತಾ ಕ್ಷೇತ್ರದಲ್ಲಿ ಕುಂತಳದೇಶಂ ॥
ಹಿರಿದುಂ ರಂಜಿಪುದದರೊಳ್
ಭರತಂ ತರಿಕಾಡುನಾಡು ತದ್ವಷಯಕ್ಕಾ
ಭರಣಂ ಮಂಗಳಿವಾಡಂ
ಪುರರತ್ನಂ ತತುಪುರೇಶ ನೃಪರಂನ್ವಯದೊಳ್ ॥

ಎಂದು ಜಂಬೂದ್ವೀಪದ ಭರತ ಕ್ಷೇತ್ರದಲ್ಲಿದ್ದ ಕುಂತಳದೇಶದಲ್ಲಿ ತರಿಕಾಡುನಾಡು, ಮಂಗಳಿವೇಡ ಮೊದಲಾದ ಆಡಳಿತ ವಿಭಾಗಗಳು ಸಮಾವೇಶವಾಗಿದ್ದವೆಂದು ಪ್ರಸ್ತಾಪವಿದೆ. ಇದೇ ಗ್ರಾಮದ ಕ್ರಿ.ಶ. ೧೧೭೪ರ ಶಾಸನದಲ್ಲಿ-

ಕುಂತಲದೇಶದೊಳ್ಕರಹಡಂ ನಾಲ್ಸಾಯಿರಂ
ಶೋಭೆಯಿಂ ಪಡೆದಿರ್ದ್ದೊಪ್ಪ ಮಹಾ ಮಹಾ ವಿಷಯ
ಕಾಂತಾವಕ್ತ್ರದಂತೀ ಕಳಂಬಡೆ ನಾಡಿಪ್ಪುದದಕ್ಕೆ
ನೇತ್ರ ಕುಮುದಾಕಾರಾಭಿರಾಮತ್ವವಂಗೆಡೆ
ಗೊಂಡುಂಬರವಾಣಿ ರಂಜಿಪುದು ಮೂವತ್ತಾರೆನಿಪ್ಪರ್ಗ್ಗಳಿಂ ॥

ಎಂದು ಕುಂತಳದೇಶದಲ್ಲಿದ್ದ ಕರಹಡ ನಾಲ್ಕು ಸಾವಿರ ವಿಭಾಗದಲ್ಲಿ ಕಳಂಬಡೆನಾಡು ಮತ್ತು ಮೂವತ್ತಾರೆನ್ನುವ ಗ್ರಾಮಗಳಿದ್ದವೆಂದು (ಉಂಬರವಾಣಿ-೩೬) ಉಲ್ಲೇಖವಿದೆ. ನಾಂದೇಡ ಜಿಲ್ಲೆಯ ದೆಗ್ಲೂರು ತಾಲ್ಲೂಕಿನ ಬಿಮ್ರಾದ ಶಾಸನದಲ್ಲಿ-

ಕುಂತಲದೇಶವಧೂಮೃದು
ಕುನ್ತಳದೇಶದವೊಲೆಸೆವ ಸಾಯಿರಬಾಡ
ಕ್ಕಂನ್ತೊಡವಿದೆನಿಸಿ ಕೂಡೆ ಬ
ಸ್ತನ ಮೆನಿಪ್ಪವರವಾಡಿಯೆಳ್ನೊರದರೊಳ್ ॥

ಎಂದು ವಿಶಾಲವಾದ ಕುಂತಳದೇಶದಲ್ಲಿಯ ಸಾಯಿರಬಾಡದ ಉಪವಿಭಾಗವಾಗಿ ಅವರವಾಡಿ-೭೦೦ ಇತ್ತೆಂದು ವರ್ಣನೆಯಿದೆ. ಗೋಕಾಕ ತಾಲ್ಲೂಕಿನ ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿಯೂ

ಕುಂತಳನಾಡಿನ ಉಲ್ಲೇಖವಿದೆ. ಮತ್ಸ್ಯಪುರಾಣ ಮತ್ತು ವಾತ್ಸಾಯನನ ಕಾಮಸೂತ್ರ ಮೊದಲಾದ ಪ್ರಾಚೀನ ಪುರಾಣಗಳು ಮತ್ತು ಕೃತಿ–ಕಾವ್ಯಗಳಲ್ಲಿಯೂ ಕುಂತಳದೇಶದ ಪ್ರಸ್ತಾಪಗಳಿವೆ. ಜಂಬೂದ್ವೀಪದ ಭರತವಿಷಯದಲ್ಲಿ ದಕ್ಷಿಣಕ್ಕಿರುವ ಮಹಿಷಕ (ಇಂದಿನ ಮೈಸೂರು ಪ್ರದೇಶ), ವನವಾಸಕ (ಇಂದಿನ ಬನವಾಸಿ ಪ್ರದೇಶ) ಎಂಬ ಪ್ರದೇಶದ ಉತ್ತರದ ಭಾಗವೇ (ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಪ್ರದೇಶ) ಕುಂತಳದೇಶ ಎಂದು ಕರೆಯಲ್ಪಡುತ್ತಿತ್ತು.[೧೧]

ಜೆ.ಎಫ್. ಫ್ಲೀಟ್ ಅವರು ಕುಂತಳದೇಶವು ದಕ್ಷಿಣಕ್ಕೆ ಉತ್ತರಕನ್ನಡ ಜಿಲ್ಲೆಯ ಬನವಾಸಿ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ, ದಾವಣಗೆರೆ ಜಿಲ್ಲೆಯ ಹರಿಹರ, ಬಳ್ಳಾರಿ ಜಿಲ್ಲೆಯ ಹಂಪಿ, ಉತ್ತರಕ್ಕೆ ಹಾವೇರಿ ಜಿಲ್ಲೆಯ ಹಾನಗಲ್ಲು, ಗದಗ ಜಿಲ್ಲೆಯ ಲಕ್ಷ್ಮೇಶ್ವರ, ಲಕ್ಕುಂಡಿ, ಗದಗ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಸವದತ್ತಿ, ಮುನವಳ್ಳಿ, ಕೊಣ್ಣೂರು, ಬಾಗಲಕೋಟ ಜಿಲ್ಲೆಯ ಪಟ್ಟದಕಲ್ಲು, ಐಹೊಳೆ, ಪೂರ್ವಕ್ಕೆ ತೇರದಾಳ, ವಿಜಾಪುರ, ಬೀದರ ಜಿಲ್ಲೆಯ ಬಸವಕಲ್ಯಾಣದವರೆಗೂ ವಿಸ್ತಾರವಾಗಿತ್ತೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೨] ಆದರೆ ಪ್ರಸ್ತುತ ಸೂಚಿತ ಪ್ರದೇಶದ ಹೊರಭಾಗದ ಅನೇಕ ಕನ್ನಡ, ಸಂಸ್ಕೃತ, ಮರಾಠಿ ಭಾಷೆಗಳ ಶಾಸನಗಳಲ್ಲಿಯೂ ಕುಂತಳದೇಶದ ಪ್ರಸ್ತಾಪಗಳು ಗೋಚರಿಸುತ್ತವೆ. ಹೀಗಾಗಿ ಕುಂತಳದೇಶವು ದಕ್ಷಿಣದಲ್ಲಿ ಕಾವೇರಿ ಅಥವಾ ತುಂಗಭದ್ರಾ ನದಿಯಿಂದ ಉತ್ತರದಲ್ಲಿ ನರ್ಮದಾ ನದಿವರೆಗೂ ವಿಸ್ತಾರವಾಗಿದ್ದಂತೆ ತೋರುತ್ತದೆ. ಈ ದೇಶದಲ್ಲಿ ಬನವಾಸಿ–೧೨೦೦೦, ಹಾನಗಲ್ಲು–೫೦೦, ಪುಲಿಗೆರೆ–೩೦೦, ಬೆಳ್ವೊಲ–೩೦೦, ಕೂಹುಂಡಿ–೩೦೦೦, ಮಿರಿಂಜೆ–೩೦೦೦, ವೇಣುಗ್ರಾಮ–೭೦, ತೊರಗಲ್ಲು–೬೦೦೦, ಕೆಳವಾಡಿ–೩೦೦, ಕಿಸುಕಾಡು–೭೦, ಬಾಗಡಿಗೆ–೭೦, ತರ್ದವಾಡಿ–೧೦೦೦, ಆಲಂದೆ–೧೦೦೦, ಅವರವಾಡಿ–೭೦೦, ಸಾಯಿರಬಾಡ (ಬಾಡ–೧೦೦೦), ಕಳಂಬಡೆ, ಕರಹಡ–೪೦೦೦, ಸಕ್ಕರಗೆ–೯೦, ಅಣಂದೂರು–೩೦೦, ತರಿಕಾಡನಾಡು–೩೦೦, ಬೋಧನ–೭೦೦, ಅಂಕುಲಗೆ–೮೦, ಸೇವುಣದೇಶ ಮೊದಲಾದ ಅನೇಕ ಆಡಳಿತ ವಿಭಾಗಗಳು ಸಮಾವೇಶವಾಗಿದ್ದವು. ಹೀಗಾಗಿ ಕುಂತಳ ಕರ್ನಾಟಕದ ಪರ್ಯಾಯನಾಮ ಎನ್ನುವುದಕ್ಕಿಂತ ದಕ್ಷಿಣ ಪ್ರಸ್ಥಭೂಮಿಗೆ ಇದ್ದ ಮತ್ತೊಂದು ಹೆಸರು ಎಂದು ಕರೆಯುವುದು ಹೆಚ್ಚು ಸಮಂಜಸವಾಗಿ ಕಾಣುತ್ತದೆ.

ಕುಂತಳದೇಶದಲ್ಲಿ ಪ್ರಮುಖ ವಿಭಾಗವಾಗಿದ್ದ ಕೂಹುಂಡಿನಾಡಿನ ಪ್ರದೇಶವು ಇಂದಿನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ (ಉತ್ತರಭಾಗ), ಸವದತ್ತಿ (ಉತ್ತರಭಾಗ), ರಾಮದುರ್ಗ (ಪಶ್ಚಿಮಭಾಗ), ರಾಯಬಾಗ, ಚಿಕ್ಕೋಡಿ, ಹುಕ್ಕೇರಿ, ಗೋಕಾಕ, ಬೆಳಗಾವಿ, ಬಾಗಲಕೋಟ ಜಿಲ್ಲೆಯ ಜಮಖಂಡಿ, ಮುಧೋಳ, ಬಾಗಲಕೋಟ ತಾಲ್ಲೂಕುಗಳ ಪಶ್ಚಿಮ ಭಾಗಗಳು, ಮಹಾರಾಷ್ಟ್ರದ ಕೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಸ್ತಾರವಾಗಿತ್ತು.[೧೩] ಅಂದರೆ ಉತ್ತರಕ್ಕೆ ಕೃಷ್ಣಾನದಿ (ಮಂಗಳವೇಡದ ಕಲಚೂರಿಯರ ಸಾಮ್ರಾಜ್ಯದ ಗಡಿ), ದಕ್ಷಿಣಕ್ಕೆ ಮಲಪ್ರಭಾ ನದಿ (ಗೋವೆಯ ಕಾದಂಬರ ಸಾಮ್ರಾಜ್ಯದ ಗಡಿ), ಪೂರ್ವಕ್ಕೆ ತೋರಗಲೆನಾಡು ಮತ್ತು ಬೆಳ್ವೊಲ ಮುನ್ನೂರು ಆಡಳಿತ ವಿಭಾಗಗಳ ಗಡಿ, ಪಶ್ಚಿಮಕ್ಕೆ ಕೊಲ್ಲಾಪುರದ ಶಿಲಾಹಾರರ ಸಾಮ್ರಾಜ್ಯದ ಗಡಿ ಕೂಹುಂಡಿನಾಡಿನ ಮೇರೆಗಳಾಗಿದ್ದವು.[೧೪]

ಕೂಹುಂಡಿನಾಡಿನ ಪ್ರದೇಶದಲ್ಲಿ ಬೆಳಕಿಗೆ ಬಂದಿರುವ ಬಾದಾಮಿಯ ಚಲುಕ್ಯರ ಆಳ್ವಿಕೆಯ ಕಾಲದಿಂದ ದೇವಗಿರಿ ಸೇವುಣರ ಅಂತ್ಯದವರೆಗೂ ಅಂದರೆ ಕ್ರಿ.ಶ. ಸುಮಾರು ೬ನೆಯ ಶತಮಾನದ ಉತ್ತರಾರ್ಧದಿಂದ ೧೩ನೆಯ ಶತಮಾನದ ಪೂರ್ವಾರ್ಧದವರೆಗಿನ ಅನೇಕ ಶಾಸನಗಳಲ್ಲಿ ಈ ನಾಡಿನ ಚರಿತ್ರೆ ಮತ್ತು ಸಾಂಸ್ಕೃತಿಕ ಹಿರಿಮೆಯ ಕುರಿತಾದ ಪ್ರಸ್ತಾಪಗಳಿವೆ.

ಕೂಹುಂಡಿನಾಡಿನ ಪ್ರದೇಶವು ಉತ್ತಮ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳಿಂದ ಸಂಪದ್ಭರಿತವಾಗಿತ್ತು. ಅಂತಾಗಿ ಈ ಪ್ರದೇಶದ ಶಾಸನಗಳು ಮತ್ತು ಸಮಕಾಲೀನ ಕೃತಿ-ಕಾವ್ಯಗಳು ಈ ನಾಡನ್ನು ವಿವಿಧ ಬಗೆಯಲ್ಲಿ ಬಣ್ಣಿಸಿವೆ. ಜಮಖಂಡಿ ತಾಲ್ಲೂಕಿನ ತೇರದಾಳದ ಕ್ರಿ.ಶ. ೧೧೮೧ರ ಶಾಸನವು-

ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡಮಡಂಬ
ದ್ರೋಣಾಮುಖಪತ್ತಣಂಗಳಿಂದಮನೇಕಮಾಟಕೂಟ
ಪ್ರಸಾದದೇವಾಯತನಂಗಳಿಂದಮೊಪ್ಪುವಗ್ರಹಾರ
ಪಟ್ಟಣಂಗಳಿಂದಮತಿಶಯವಪ್ಪ ಶ್ರೀಮತು ಕೂಂಡಿ
ಮೂಱುಸಾಸಿರದೊಳಗೆ..... ||

ಎಂದು ಕೂಹುಂಡಿನಾಡಿನ ಸಾಂಸ್ಕೃತಿಕ ವೈಭವವನ್ನು ಸೊಗಸಾಗಿ ವರ್ಣಿಸಿದೆ.[೧೫] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು-

ಜಂಬೂದ್ವೀಪದ ಭರತದೊಳಂಬುಜಭವಸಾರಸೃಷ್ಟಿ
ಕೂಂಡಿಮಹೀಚಕ್ರಂ ಬಗೆಗೊಳಿಪುದು ಸಕಳಜನಾಂಬಕಘನ
ಸುಕೃತಫಳವಿಲಾಸನಿವಾಸಂ ||

ಎಂದು ಬಣ್ಣಿಸಿದೆ.[೧೬] ಬೈಲಹೊಂಗಲ ತಾಲ್ಲೂಕಿನ ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ-

ಶ್ರೀಮಜ್ಜಂಬೂದ್ವೀಪದ ಭೂಮಧ್ಯ ಸ್ತಂಭವೆನಿಸಿ ಮಂದರಶೈಲಂ
ಆ ಮಂದರ ದಕ್ಷಿಣದಿಗ್ಭೂಮಂಡಳಮೆಸೆಗು ಭರತನಾಮದಿನೆಂದುಂ ||
ಅನ್ತನೇಕ ಮಣಿಗಣಭರಿತ ಭರತಕ್ಷೇತ್ರದೊಳು ಸಮಸ್ತವಸ್ತುವಿಸ್ತೀರ್ಣ್ನ
ನಾನಾಜನಪದಬ್ಯಾಕೀರ್ಣ್ನ ಗ್ರಾಮನಗರಖೇಡಖರ್ಬ್ಬಡಾದಿನಗರೀ
ಸಂಪೂರ್ಣ್ನ ತ್ರಿಸಹಸ್ರ ಕೂಂಡಿ ಮಂಡಳಮಧ್ಯಪ್ರದೇಶಮನಳಂಕರ್ಸಿ
ಪ್ರಾಜ್ಯರಾಜ್ಯಲಕ್ಷ್ಮೀವಿಳಾಸಾವಾಸಕಾಶ್ರಯವಾಗಿ ಸೊಗಯಿಸುವ
ವೇಣುಗ್ರಾಮಮಹಾಗ್ರಾಮದೊಳೂ ||

ಎಂದು ಕೂಹುಂಡಿನಾಡಿನ ವರ್ಣನೆಯಿದೆ.[೧೭] ಅದೇ ತಾಲ್ಲೂಕಿನ ನೇಸರಗಿಯ ಕ್ರಿ.ಶ. ೧೨೦೯ರ ಶಾಸನವು-

ಬೆಳೆಸೆಂದುಂ ಕುಂದದಂತಾ ವಿಪುಳಫಲಚಯಂ ಕ್ಷೇಮಧ್ಯಾನಂ
ಸ್ವಮಾರ್ಗ್ಗೋಜ್ವಳಧರ್ಮ್ಮಜ್ಯಾಯರೆಲ್ಲಂ ತಮತಮಗೆ
ನರರ್ಸ್ಸಾಶ್ವತೈಯ್ಯರ್ಯಭೋಗಾವಳಿ ಸತ್ಯತ್ಯಾಗಶೌರ್ಯ್ಯೋಂನತಿ
ಸತತವೊಂದಿರ್ಪ್ಪವೆಂದುಂ ತದುರ್ವ್ವೀತಳನಾಥರ್ಗ್ಗೆಂದದಾ

ಭೂಭುಜರ ಮಹಿಮೆಯಂ ಬಣ್ಣಿಸಲು ಬಲ್ಲನಾವಂ ॥

ಎಂದು ಕೊಂಡಾಡಿದೆ.[೧೮] ಗೋಕಾಕ ತಾಲ್ಲೂಕಿನ ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ವಿಳಸಿತವಿಪುಳಾಮೃತಗೋಕುಲದಿಂದಂ ಸಕಳಸಸ್ಯಸಂಪದದಿಂ
ನಿರ್ಮ್ಮಳವರ್ಣ್ಣದಿಂದೆ ವಿಧುಮಂಡಳೆದಂತಿರೆ ಕೂಂಡಿಮಂಡಳೆಂ
ಕಣ್ಗೊಳಿಕುಂ ॥

ಎಂದು ವರ್ಣಿಸಿದೆ.[೧೯] ಅದೇ ತಾಲ್ಲೂಕಿನ ಮಮದಾಪುರದ ಕ್ರಿ.ಶ. ೧೨೪೬ರ ಶಾಸನವು–

ತನಮದ್ಯೇ ಭಾತಿ ಮೇರುನೃಪಂ ಸುಮನೋಹರಮ್ಯಚಾರುರ
ದ್ವೀಪಸ್ಥದ ದಕ್ಷಿಣಾಶ್ಯಾಮಧೀ ವಸತಿಪುರಾಜಾತ ಜಂಬೂಸಮಾನಃ
ತಜ ಜಂಬೂದ್ವೀಪಮಧ್ಯೇ ವಿಳಸತಿ ಭರತಕ್ಷೇತ್ರ ಮಾನಂದಪಾತ್ರಂ
ತತ್ರಾಸ್ತೇ ಕುಂತಳೋರ್ಬ್ಬೇ ಜನಜನಿತಯುಳಶ್ರೀ ಸುಕಾಗಾರಗುರ್ಬ್ಬಿ ।
ತಸ್ಮಿನ ಸುಷ್ಮೇರಲಕ್ಷ್ಮೀಮುದಿತ ಜನಪದಾಗನ್ಯ ಪುಣ್ಯೈಕಕೋಶಃ
ಸಂಪತಸಂಪೂರಿತಾಶಃ ಸಜಯತಿ ಜಗತಿಮಂಡನಂ ಕೂಂಡಿದೇಶಃ ॥
ದೇಶೀತತ್ರಚರಾಸ್ತಿ ವಾಸ್ತವಾಜನ ಶ್ರೀ ವರ್ತ್ತನಂ ಪಟ್ಟಣಂ ಪೂರ್ಣನೇಕ
ತಟಾಕರೂಪ ಸರಸೀ ಸಂಪತ್ತಿ ಶೋಭಾಸ್ಪದಂ ।ಯತಸರ್ಬ್ಬತ್ರ ಲತಾಂತ
ಪಲ್ಲವಫಲ ಕ್ಷೋನಿರ್ಮ್ಯಬ್ಬರಂ ತ್ರಿಂಶದ ಗ್ರಾಮವರಾಧಿ ಗಿರಿನಾಮ
ಶ್ರೀಮತಾವ್ಯಶ್ರಯಃ ॥ ತದಿಹ ಕುರುಂಬೆಟ್ಟ ಮಯಿಲೆ ಪ್ರಖ್ಯಾತ
ಲೋಕಭಾಸ್ಯಾಯಾ ನಗರಂ ।

ಎಂದು ಕೂಹುಂಡಿನಾಡಿನ ಭೌಗೋಳಿಕ ವ್ಯಾಪ್ತಿ, ಹಿರಿಮೆ ಮತ್ತು ಇಲ್ಲಿದ್ದ ಆಡಳಿತ ವಿಭಾಗಗಳನ್ನು ಮನದುಂಬಿ ವರ್ಣಿಸಿದೆ.[೨೦]

ಕೂಹುಂಡಿನಾಡಿನ ಪೂವಿನಬಾಗೆಯ (ಇಂದಿನ ರಾಯಬಾಗ) ಪ್ರಸಿದ್ಧ ಗಣಿತಜ್ಞನಾದ ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರಗಣಿತ' (ಕ್ರಿ.ಶ. ೧೧೯೦) ಕಾವ್ಯದಲ್ಲಿ–

ವನತತಿಯಿಂನದಿನದ ಕುಭೃತ್ಕುಲದಿಂಧನಧಾನ್ಯವರ್ಗದಿಂ
ಜನಪದರಾಜಿಯಿಂ ಬೆಳೆವಕೆಯ್ವೊಲದಿಂದೆಸೆವೊರ್ಗಳಿಂಜಗ ।
ಜ್ಜನನುತಜೈನಧರ್ಮದ ನೆಗಟ್ತೆಯೊಳಿಂಬಿನ ಕೂಂಡಿಮಂಡಲ
ಕ್ಕನುಪಮರತ್ನ ಮಂಡನವೆನಿಪ್ಪುದು ಪೂವಿನಬಾಗೆ ಸಂತತಂ ॥

ಉದ್ಯಾನವನಗಳು, ಉನ್ನತವಾದ ಕುಲದವರು, ಧನ–ಧಾನ್ಯಗಳ ಸಂಪತ್ತನ್ನು ಹೊಂದಿದ ಕೂಹುಂಡಿನಾಡಿನ ಪ್ರಜೆಗಳು ಸಂತೋಷದಿಂದಿದ್ದರು. ಈ ನಾಡಿನಲ್ಲಿ ಜೈನ ಧರ್ಮದ ಪ್ರಭಾವವು ತುಂಬಿ ತುಳುಕುತ್ತಿತ್ತು ಎಂದು ವರ್ಣನೆ ಮಾಡುವುದರ ಜೊತೆಗೆ ಈ ನಾಡನ್ನು ನಾನು ಏನೆಂದು ಹೊಗಳಲಿ ಎಂದು ಕೂಂಡಿಮಂಡಲದ ಸಿರಿಯನ್ನು ಮನದುಂಬಿ ಬಣ್ಣಿಸಿದ್ದಾನೆ.[೨೧] ಜೈನಕವಿ ಬ್ರಹ್ಮಶಿವನು ತನ್ನ 'ಸಮಯಪರೀಕ್ಷೆ' (ಕ್ರಿ.ಶ. ೧೧೯೦) ಕಾವ್ಯದಲ್ಲಿ ಜೈನ ಆಚಾರ್ಯರು ಮತ್ತು ಐತಿಹಾಸಿಕ ವ್ಯಕ್ತಿಗಳನ್ನು ಸ್ತುತಿಸುತ್ತ–

ಪ್ರವಿಮಳಜಿನಶಾಸನದಿಂ
ಪ್ರವಿತ್ರಮೆನೆ ಮಾಡಿ ಕೂಂಡಿಮೂಸಾಸಿರಮಂ ।
ಭುವನನುತನಾದನಾತ್ಮೀ

ಯ ವಚೋಮೃತದಿಂದೆ ಪೇಳ್ದ ಪೆರ್ಗ್ಗಡೆ ಬೊಮ್ಮಂ ॥
ಆ ವಿಭುವಿನಗ್ರತನಯಂ
ಪಾವನ ಚರಿತಂ ವಿನೇಯಕಲ್ಪಮಹೀಜಂ ।
ಕೇವಳಮೆ ನಾಗದೇವಂ
ಭೂಮಿಶ್ರುತ ಕೀರ್ತಿಮಂಡಳೇಶ್ವರ ತಿಲಕಂ ॥

ಎಂದು ಕೂಹುಂಡಿನಾಡಿನ ಪೆರ್ಗ್ಗಡೆ ಬೊಮ್ಮ ಮತ್ತು ನಾಗದೇವ ಮಂಡಳೇಶ್ವರನನ್ನು ಕೊಂಡಾಡಿದ್ದಾನೆ.[೨] ಆದರೆ ಇವರಿಬ್ಬರ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಕ್ರಿ.ಶ. ಸುಮಾರು ೯ನೆಯ ಶತಮಾನದ ಉತ್ತರಾರ್ಧದಿಂದ ೧೩ನೆಯ ಶತಮಾನದ ಪೂರ್ವಾರ್ಧದವರೆಗಿನ ಅನೇಕ ಶಾಸನಗಳು ಮತ್ತು ಸಮಕಾಲೀನ ಕೆಲವು ಕೃತಿ–ಕಾವ್ಯಗಳಲ್ಲಿ (ರಾಜಾದಿತ್ಯನ ವ್ಯವಹಾರಗಣಿತ, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ, ಬ್ರಹ್ಮಶಿವನ ಸಮಯಪರೀಕ್ಷೆ ಇತ್ಯಾದಿ) ಕುಹುಣ್ಡಿವಿಷಯ, ಕೂಂಡಿಕಸಾಸಿರ, ಕಷ್ಮಾಂಡಿವಿಷಯ, ಕೂಂಡಿದೇಶ, ಕುಹುಣ್ಡಿದೇಶ, ಕೂಂಡಿಮಂಡಳ, ಕುಹುಣ್ಡಿಮಂಡಲ, ಕೂಹುಂಡಿಮಂಡಳ, ಕೂಂಡಿನಾಡು, ಕೂಹುಂಡಿನಾಡು, ಕೂಂಡಿಮೂಸಾಸಿರ, ಕೂಹುಂಡಿ ಮೂರುಸಾವಿರ, ಕೂಹುಂಡಿ ತ್ರಿಸಹಸ್ರ, ಕೂಹುಂಡಿ–೩೦೦೦ ಎಂದೆಲ್ಲ ದಾಖಲಾಗಿರುವ ಕೂಹುಂಡಿನಾಡಿನ ಹೆಸರಿನ ಹಿನ್ನೆಲೆ, ವ್ಯಾಪ್ತಿ, ಮತ್ತು ಕೇಂದ್ರ ಪಟ್ಟಣ ಯಾವುದೆಂಬ ವಿಚಾರವಾಗಿ ಮತ್ತು ಅದನ್ನು ಗುರುತಿಸಲು ಜೆ.ಎಫ್. ಫ್ಲೀಟ್, ಪಿ.ಬಿ. ದೇಸಾಯಿ, ಶ್ರೀನಿವಾಸ ರಿತ್ತಿ, ಎಸ್.ಸಿ. ನಂದಿಮಠ, ಎಚ್.ಎಸ್. ಥೊಸಾರ, ವಿ.ವಿ. ಮಿರಾಶಿ, ಎಂ.ಬಿ. ನೇಗಿನಹಾಳ, ಆರ್.ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ, ಹಂಪ ನಾಗರಾಜಯ್ಯ, ಹನುಮಾಕ್ಷಿ ಗೋಗಿ ಮೊದಲಾದ ಕೆಲವು ಸಂಶೋಧಕರು ಪ್ರಯತ್ನಿಸಿದ್ದಾರೆ.[೨೩] ಈ ನಿಟ್ಟಿನಲ್ಲಿ ಜೆ.ಎಫ್. ಫ್ಲೀಟ್ ಅವರು "There was a town named Kuhundipattana from which the country took its name. It is mentioned in an inscription of A.D. 1135 at Kolhapur. The record names among the persons who made the grant, the Heggade Ravasetti who was the Sasaniga of the Aditygriha of Kundipattana. The town has to be looked for in the Belgeum dist. in the Kolhapur territory. But I cannot as yet find it. And we shall probably eventually identify it with some place now posessing a totally different name. Any genuine tradition which might have helped us to identify and locate the town of Kuhundipattana seems to have been lost" ಎಂದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.[೨೪] ಪಿ.ಬಿ. ದೇಸಾಯಿ ಅವರು "ಇಂದಿನ ಬೆಳಗಾವಿ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶವು ಹಿಂದೆ ಕೂಂಡಿಮಂಡಲ ಅಥವಾ ಕೂಹುಂಡಿಮಂಡಲ ಎಂದು ಕರೆಯಲ್ಪಡುತ್ತಿತ್ತು. ಇಲ್ಲಿ ಜೈನ ಧರ್ಮಕ್ಕೆ ವಿಶೇಷ ಬೆಂಬಲ ನೀಡಿದ ಕೊಲ್ಲಾಪುರದ ಶಿಲಾಹಾರ ಮತ್ತು ಸವದತ್ತಿಯ ರಟ್ಟ ಮನೆತನಗಳ ಅರಸರು ಆಳುತ್ತಿದ್ದರು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೨೫] ಶಿಲಾಹಾರ ಮನೆತನದ ಶಾಸನಗಳನ್ನು

ಸಾಕಷ್ಟು ಅಧ್ಯಯನ ಮಾಡಿರುವ ವಿ.ವಿ. ಮಿರಾಶಿ ಅವರು " Kundi desha comprised the region round modern Belgaum. Kundi Pattana is probably Kundalapur in the Miraj Taluka" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಎಂ.ಎಂ. ಕಲಬುರ್ಗಿ ಅವರು "ಕುಹುಂಡಿಮೂಸಾಸಿರ, ಕುಹುಂಡಿವಿಷಯ, ಕೂಂಡಿತ್ರಿಸಹಸ್ರ ಇತ್ಯಾದಿ ಹೆಸರುಗಳಿಂದ ಶಾಸನಗಳಲ್ಲಿ ಪ್ರಸಿದ್ಧವಾದ ಕೂಹುಂಡಿನಾಡಿನ ಮುಖ್ಯ ಪಟ್ಟಣವಾದ ಕೂಹುಂಡಿ ಗೋಕಾಕ, ರಾಯಬಾಗ ತಾಲ್ಲೂಕುಗಳ ನಡುವೆ ಇದ್ದಿರಬಹುದು. ಇದನ್ನು ಗುರುತಿಸುವುದು ಇನ್ನೂ ಸಾಧ್ಯವಾಗಿಲ್ಲ. ಬಹುಶಃ ಚಿಕ್ಕೋಡಿ, ಹಿರೇಕೋಡಿ ಗ್ರಾಮಗಳ ಹೆಸರು ಚಿಕ್ಕಕುಹುಂಡಿ, ಹಿರಿಕುಹುಂಡಿ ಎಂದು ಬಿಡಿಸಿ, ಇವುಗಳಲ್ಲಿ ಒಂದು ಪ್ರಾಚೀನ ಕೂಹುಂಡಿ ಪಟ್ಟಣವಾಗಿರಬೇಕೆಂದು ಊಹಿಸಬಹುದಾಗಿದೆ. ಕೊಲ್ಲಾಪುರದ ಕ್ರಿ.ಶ. ೧೧೩೬ರ ಶಾಸನವು ಕೂಹುಂಡಿಪಟ್ಟಣದಲ್ಲಿ ಆದಿತ್ಯಗೃಹ ಎಂದರೆ ಸೂರ್ಯ ದೇವಾಲಯವಿದ್ದುದನ್ನು ಸೂಚಿಸುತ್ತದೆ. ಈ ಸೂಚನೆಯನ್ನು ಆಧಾರವಾಗಿಟ್ಟುಕೊಂಡು ಈ ನಗರವನ್ನು ಇನ್ನೂ ಖಚಿತವಾಗಿ ಹುಡುಕಬಹುದಾಗಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಇತ್ಯಾದಿ ಗ್ರಾಮಗಳಲ್ಲಿ ಶೋಧ ನಡೆಸಿ ರಾಜಧಾನಿ ಕೂಹುಂಡಿಯನ್ನು ಹುಡುಕಬೇಕಾಗಿದೆ" ಎಂದು ಸೂಚಿಸಿದ್ದಾರೆ.[೨೬] ದೇವೇಂದ್ರ ದೊಡ್ಡಣ್ಣವರ ಅವರು "ಕೂಹುಂಡಿನಾಡಿನ ಇಂದಿನ ಬೆಳಗಾವಿ ತಾಲ್ಲೂಕಿನ ಸುಳೇಬಾವಿ ರೈಲು ನಿಲ್ದಾಣದಿಂದ ಹುಕ್ಕೇರಿ ತಾಲ್ಲೂಕಿನ ಬೆಲ್ಲದಬಾಗೇವಾಡಿ ರೈಲು ನಿಲ್ದಾಣದವರೆಗಿನ ಪ್ರದೇಶ ಹಾಗೂ ಮಾರ್ಕಂಡೇಯ, ಹಿರಣ್ಯಕೇಶಿ, ಘಟಪ್ರಭಾ ನದಿಗಳ ಪೂರ್ವಭಾಗದ ಪ್ರದೇಶವನ್ನು 'ಕುಂದರನಾಡು' ಎಂದು ಕರೆಯಲಾಗುತ್ತದೆ. ಇದು ಜೈನ ಧರ್ಮದ ಕುಂದಕುಂದಾಚಾರ್ಯರು (ಕ್ರಿ.ಶ. 'ಸುಮಾರು ೧–೨ನೆಯ ಶತಮಾನ) ವಿಹಾರ ಮಾಡಿದ ಪ್ರದೇಶವಾದ್ದರಿಂದ 'ಕುಂದನಾಡು' ಅಥವಾ 'ಕುಂದರನಾಡು' ಎಂಬ ಹೆಸರು ಪಡೆದಿದೆ. ಕುಂದ>ಕುಂದರ>ಕುಂಡ>ಕೊಂಡ>ಕೂಹುಂಡಿ ಎಂದು ರೂಪಾಂತರವಾದ ಸಂದರ್ಭಗಳು ಹೆಚ್ಚಾಗಿರುವುದರಿಂದ ಪ್ರಸ್ತುತ ಪ್ರದೇಶದ ಸುತ್ತಮುತ್ತಲಿನ ಭಾಗದಲ್ಲಿ ಕೂಹುಂಡಿ ಪಟ್ಟಣ ಇರುವ ಸಾಧ್ಯತೆಗಳಿವೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೨೭]

ಈ ಮೇಲಿನ ಎಲ್ಲ ವಿದ್ವಾಂಸರ ಅಭಿಪ್ರಾಯಗಳು ಮತ್ತು ಸೂಚನೆಗಳನ್ವಯ ಕೂಹುಂಡಿ ಪಟ್ಟಣವನ್ನು ಗುರುತಿಸಲು ಕೊಲ್ಲಾಪುರದ ಪಾರ್ಶ್ವನಾಥ ಬಸದಿಯಲ್ಲಿರುವ ಶಿಲಾಹಾರ ಮನೆತನದ ಮಹಾಮಂಡಳೇಶ್ವರ ಗಂಡರಾದಿತ್ಯನ ಕ್ರಿ.ಶ. ೧೧೩೬ರ ಶಾಸನದಲ್ಲಿರುವ "ಕೂಂಡಿಪಟ್ಟಣದಾದಿತ್ಯಗೃಹದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯುಂ" ಎಂಬ ಸಾಲು ಏಕೈಕ ಆಧಾರವಾಗಿದೆ. ಈ ರಾವಸೆಟ್ಟಿಯು ಗಂಡರಾದಿತ್ಯನ ಮಹಾಸಾಮಂತನಾದ ನಿಂಬದೇವನು ಕವಡೆಳ್ಳಗೊದ ಬಳಿಯ ಸಂತೆಯ ಮುದ್ಗೊಡೆಯಲ್ಲಿ ಮಾಡಿಸಿದ ಪಾರ್ಶ್ವನಾಥ ಬಸದಿಯ ಪಾರ್ಶ್ವದೇವರ ಅಷ್ಟವಿಧಾರ್ಚನೆ, ಜೀರ್ಣೋದ್ಧಾರ, ಮುನಿಗಳ ಆಹಾರದಾನಕ್ಕೆ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛ ಪರಂಪರೆಯ ಕೊಲ್ಲಾಪುರದ ರೂಪನಾರಾಯಣ ಬಸದಿಯ ಸ್ಥಾನಾಚಾರ್ಯನಾದ ಶ್ರುತಕೀರ್ತಿತ್ರೈವಿಧ್ಯದೇವನ ಕಾಲುಗಳನ್ನು ತೊಳೆದು ದಾನ ಮಾಡಿದ್ದಾನೆ.[೨೮] ಹನುಮಾಕ್ಷಿ ಗೋಗಿ ಅವರು ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿ, ಕೋಡಿ ಪದಗಳಿಂದ

ಅಂತ್ಯವಾಗುವ ಹೆಸರುಗಳುಳ್ಳ ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪಟ್ಟಣಕುಡಿ ಗ್ರಾಮದ ವಿಠ್ಠಲ ದೇವಾಲಯದಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಆದಿತ್ಯ (ಸೂರ್ಯ) ಶಿಲ್ಪವನ್ನು ಪತ್ತೆಹಚ್ಚಿದ್ದಾರೆ. ಇದು ೧೯೧೫ರಲ್ಲಿ ಸ್ಥಳೀಯ ಶ್ರೀ ಮಾಲಗಾರ ಅವರ ಹೊಲದಲ್ಲಿ ವಿದ್ಯುತ್ ಕಂಬವನ್ನು ನಿಲ್ಲಿಸಲು ಅಗೆಯುತ್ತಿದ್ದ ಸಂದರ್ಭದಲ್ಲಿ ದೊರೆತಿದೆ.[೨೯] ಈ ಶಿಲ್ಪವೇ ಕೊಲ್ಲಾಪುರದ ಶಾಸನೋಕ್ತ ಕೂಂಡಿಪಟ್ಟಣದ ಆದಿತ್ಯ ದೇವಾಲಯದ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ಶಿಲ್ಪವಾಗಿದೆ. ಆ ದೇವಾಲಯವು ಇಂದು ಉಳಿದು ಬಂದಿಲ್ಲ. ಆದರೆ ಅದಕ್ಕೆ ಸಂಬಂಧಿಸಿದ ಕೆಲವು ಭಗ್ನ ವಾಸ್ತು ಅವಶೇಷಗಳು ಇಂದಿಗೂ ಉಳಿದು ಬಂದಿವೆ.

ಪಟ್ಟಣ ಎಂದರೆ ಸಂತೆ ನೆರೆಯುವ ಸ್ಥಳ ಮತ್ತು ಅಲ್ಲಿ ವ್ಯಾಪಾರ ಮಾಡುವವರು ಪಟ್ಟಣಸೆಟ್ಟಿಯರು ಎಂದು ಕರೆಸಿಕೊಳ್ಳುತ್ತಾರೆ. ಪ್ರಾಚೀನ ಬಹುತೇಕ ರಾಜಧಾನಿ ಅಥವಾ ಪ್ರಾಂತಗಳ ಕೇಂದ್ರಕ್ಕೆ 'ಪಟ್ಟಣ' ಎಂದು ಕರೆಯಲಾಗಿರುವುದು ಅನೇಕ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಪಟ್ಟಣ ಕೂಹುಂಡಿ ಅರ್ಥಾತ್ ರಾಜಧಾನಿ ಕೂಹುಂಡಿಯೇ ಪಟ್ಟಣಕುಡಿ ಎಂಬ ನಿರ್ಣಯಕ್ಕೆ ಬರಬಹುದಾಗಿದೆ. ಪಟ್ಟಣಕೋಡಿ ಎಂಬ ಹೆಸರನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಿದಾಗ ಕೂಹುಂಡಿ>ಕೂಂಡಿ>ಕೂಡಿ>ಕುಡಿ>ಕೋಡಿ ಎಂದಾಗಿರುವಂತೆ ತೋರುತ್ತದೆ. ಮೊದಲು ಮಧ್ಯದ ಅಕ್ಷರ ಲೋಪವಾಗಿ ಹಿಂದಿನ ಅಕ್ಷರ ದೀರ್ಘಾಕ್ಷರವಾಗಿ ನಂತರ ಹ್ರಸ್ವವಾಗಿದೆ. ಕಾಲಕ್ರಮೇಣ ಜನರ ಬಾಯಲ್ಲಿ ಉ>ಓ ಪರಿವರ್ತನೆಯಾಗಿ (ಕುಡು>ಕೊಡು ಆದಂತೆ) ಇಂದಿನ ಪಟ್ಟಣಕೋಡಿ ಎಂಬ ನಾಮರೂಪ ಸಿದ್ಧವಾಗುತ್ತದೆ. ಪ್ರತಿಯೊಂದು ಸ್ಥಳನಾಮದ ರಚನೆ ಸಾಮಾನ್ಯವಾಗಿ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ಆದರ್ಶವಾಚಿ, ನಿರ್ಮಾಣವಾಚಿಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ. ಈ ನಿಟ್ಟಿನಲ್ಲಿ 'ಕೂಹುಂಡಿ' ಸ್ಥಳನಾಮದ ವ್ಯುತ್ಪತ್ತಿಯನ್ನು ನಿಸರ್ಗವಾಚಿ ಮತ್ತು ವ್ಯಕ್ತಿವಾಚಿ ಹಿನ್ನೆಲೆಯಲ್ಲಿ ಗವುನಿಸಲು ಸಾಧ್ಯವಿದೆ. ಕುಪ್ಪೆ+ಗುಂಡಿ>ಕುಪ್ಪಗುಂಡಿ>ಕೂಹುಂಡಿ ಅಥವಾ ಕುಪ್ಪೆ+ಹುಂಡಿ>ಕುಪ್ಪಹುಂಡಿ> ಕೂಹುಂಡಿ ಎಂದು ನಿಸರ್ಗವಾಚಿಯಾಗಿ ಹಾಗೂ ಕುಪ್ಪಯನ+ಗುಂಡಿ>ಕುಪ್ಪಹುಂಡಿ>ಕೂಹುಂಡಿ ಎಂದು ಅಥವಾ ಕುಪ್ಪಯನ+ಹುಂಡಿ>ಕುಪ್ಪಹುಂಡಿ>ಕೂಹುಂಡಿ ಎಂದು ವ್ಯಕ್ತಿವಾಚಿಯಾಗಿ ಬಿಡಿಸಬಹುದಾಗಿದೆ. ಈ ಮೇಲಿನ ಎಲ್ಲ ಕಾವ್ಯಾಧಾರಗಳು, ಶಾಸನಾಧಾರಗಳು, ಭಾಷಾಶಾಸ್ತ್ರ, ಗ್ರಾಮನಾಮ ವಿವೇಚನೆ, ಶಿಲ್ಪಶಾಸ್ತ್ರ ಮತ್ತು ಪಟ್ಟಣಕೋಡಿ ಗ್ರಾಮದ ಪರಿಶೋಧನೆಯಿಂದ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವೆಂಬುದು ಸ್ಪಷ್ಟವಾಗುತ್ತದೆ.[೩೦]

ಈ ಮೇಲಿನ ಎಲ್ಲ ಸಂಶೋಧಕರ ಅಭಿಪ್ರಾಯಗಳು, ಕ್ಷೇತ್ರಕಾರ್ಯ ಅನ್ವೇಷಣೆಗಳು, ಶಾಸನಾಧಾರಗಳು, ವಾಸ್ತು-ಶಿಲ್ಪ ಕುರುಹುಗಳು ಮತ್ತು ಪ್ರಸ್ತುತ ಸಂಶೋಧನ ಅಧ್ಯಯನದ ಸಂದರ್ಭದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮದಿಂದಲೇ ಈ ಪ್ರದೇಶಕ್ಕೆ ಕುಹುಣ್ಡಿ, ಕೂಹುಂಡಿ ಎಂದು ಕರೆದಿರುವುದು ಮನದಟ್ಟಾಗುತ್ತದೆ. ಅಂದರೆ ಕುಹುಣ್ಡಿ (ಕೂಹುಂಡಿ) ಎಂಬ ಪಟ್ಟಣದಿಂದಲೇ ಈ ನಾಡನ್ನು ಅಥವಾ ಆಡಳಿತ ವಿಭಾಗವನ್ನು

ಕುಹುಣ್ಡಿವಿಷಯ, ಕೂಹುಂಡಿನಾಡು ಎಂದು ಕರೆಯಲಾಗಿದೆ. ಆದರೆ ಎಸ್.ಸಿ. ನಂದಿಮಠ ಅವರು ಕೂಹುಣ್ಡಿ ಪಟ್ಟಣವು ಇಂದಿನ ಬೈಲಹೊಂಗಲ ತಾಲ್ಲೂಕಿನ ಯಕ್ಕುಂಡಿ ಎಂತಲೂ, ಎಚ್.ಎಸ್. ಥೊಸಾರ ಅವರು ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಎಂತಲೂ, ಶ್ರೀನಿವಾಸ ರಿತ್ತಿ ಅವರು ರತ್ನಾಗಿರಿ ಜಿಲ್ಲೆಯ ಸಂಗಮೇಶ್ವರ ತಾಲ್ಲೂಕಿನ ಕುಂಡಿ ಎಂತಲೂ, ವಿ.ವಿ. ಮಿರಾಶಿ ಅವರು ಮಿರಜ ತಾಲ್ಲೂಕಿನ ಕುಂಡಲಪುರ ಎಂತಲೂ ಸೂಚಿಸಿದ್ದಾರೆ. ಕೂಹುಂಡಿನಾಡಿನ ಪ್ರದೇಶವನ್ನಾಳಿದ ಮತ್ತು ಇಲ್ಲಿ ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳು ಪಟ್ಟಣಕುಡಿ ಗ್ರಾಮವನ್ನು ರಾಜಧಾನಿ ಮಾಡಿಕೊಂಡಿರುವುದು, ಈ ಗ್ರಾಮದ ನೆಲೆವೀಡಿನಿಂದ ಆಳ್ವಿಕೆ ಮಾಡಿರುವುದು, ದಾನ-ದತ್ತಿಗಳನ್ನು ಕೊಟ್ಟಿರುವುದು ಇತ್ಯಾದಿ ಸಂಗತಿಗಳು ಸಮಕಾಲೀನ ಶಾಸನಗಳಾದಿ ಕೃತಿ-ಕಾವ್ಯಗಳಲ್ಲಿ ಕಾಣುವುದಿಲ್ಲ. ಕೂಹುಂಡಿನಾಡಿನ ಕೇಂದ್ರ ಪಟ್ಟಣವನ್ನು ಗುರುತಿಸಲು ಇದುವರೆಗೂ ನಡೆದಿರುವ ಅಧ್ಯಯನಗಳು, ವಿದ್ವಾಂಸರ ಅಭಿಪ್ರಾಯಗಳು ಮತ್ತು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವೇ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಎಂದು ಗುರುತಿಸಬಹುದಾಗಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಬಾದಾಮಿಯ ಚಲುಕ್ಯರು, ಮಾನಪುರದ ರಾಷ್ಟ್ರಕೂಟರು, ಅಲಕ್ತಕ ನಗರದ ಸೇಂದ್ರಕರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರು, ದೋರಸಮುದ್ರದ ಹೊಯ್ಸಳ ಮನೆತನಗಳ ಕಾಲಾವಧಿಯ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳು ಗೋಚರಿಸುತ್ತವೆ. ಬನವಾಸಿ ಕದಂಬರ ತರುವಾಯ ಉತ್ತರ ಕರ್ನಾಟಕದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ ಬಾದಾಮಿಯ ಚಲುಕ್ಯರು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಹಲವು ಆಡಳಿತ ವಿಭಾಗಗಳಲ್ಲಿ ವಿಂಗಡಿಸಿದ್ದರು. ಆ ವಿಭಾಗಗಳಲ್ಲಿ ಕುಹುಣ್ಡಿವಿಷಯ ಒಂದಾಗಿತ್ತು. ಹೀಗಾಗಿ ಕೂಹುಂಡಿನಾಡಿನ ಪ್ರದೇಶದ ಚರಿತ್ರೆ ಬಾದಾಮಿಯ ಚಲುಕ್ಯರ ಕಾಲದಿಂದಲೇ ಪ್ರಾರಂಭವಾಗುತ್ತದೆ. ಇವರ ಅಧೀನದಲ್ಲಿ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಾನಪುರದ ರಾಷ್ಟ್ರಕೂಟರು ಇಂದಿನ ಸಾತಾರ ಜಿಲ್ಲೆಯ ತಾಲ್ಲೂಕು ಕೇಂದ್ರ ಮಾನ ನಗರವನ್ನು ಮತ್ತು ಅಲಕ್ತಕ ನಗರದ ಸೇಂದ್ರಕರು ಇಂದಿನ ಕೊಲ್ಲಾಪುರ ಜಿಲ್ಲೆಯ ಅಲ್ತೆ ಗ್ರಾಮವನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದರು. ಚಲುಕ್ಯರ ತರುವಾಯ ಮಳಖೇಡದ ರಾಷ್ಟ್ರಕೂಟರ ಕಾಲದಲ್ಲಿ ಈ ಪ್ರದೇಶದ ಆಡಳಿತವನ್ನು ಅಲಕ್ತಕ ನಗರದ ಸೇಂದ್ರಕರು ಮತ್ತು ರಟ್ಟರು ನೋಡಿಕೊಳ್ಳುತ್ತಿದ್ದರು. ರಟ್ಟರು ಸುಗಂಧವರ್ತಿಯನ್ನು (ಇಂದಿನ ಸವದತ್ತಿ) ರಾಜಧಾನಿ ಮಾಡಿಕೊಂಡಿದ್ದರು. ರಾಷ್ಟ್ರಕೂಟರ ನಂತರ ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಈ ಪ್ರದೇಶದ ಆಡಳಿತವನ್ನು ಕೆಲವು ಯುವರಾಜರು ಮತ್ತು ರಟ್ಟರು, ಶಿಲಾಹಾರರು ನೋಡಿಕೊಳ್ಳುತ್ತಿದ್ದರು. ರಟ್ಟರು ಕ್ರಮೇಣ ತಮ್ಮ ರಾಜಧಾನಿಯನ್ನು ವೇಣುಗ್ರಾಮಕ್ಕೆ (ಇಂದಿನ ಬೆಳಗಾವಿ) ವರ್ಗಾಯಿಸಿದರು. ಶಿಲಾಹಾರರು ಕೊಲ್ಲಾಪುರವನ್ನು ರಾಜಧಾನಿ ಮಾಡಿಕೊಂಡಿದ್ದರು. ಕ್ರಿ.ಶ. ಸುಮಾರು ೧೨ನೆಯ

ಶತಮಾನದ ಉತ್ತರಾರ್ಧದಿಂದೀಚೆಗೆ ಈ ಪ್ರದೇಶದ ಪೂರ್ವದಲ್ಲಿ ಕಲ್ಯಾಣದ ಕಲಚೂರಿಯರು ಮತ್ತು ದೇವಗಿರಿಯ ಸೇವುಣರು ಹಾಗೂ ದಕ್ಷಿಣದಲ್ಲಿ ದೋರಸಮುದ್ರದ ಹೊಯ್ಸಳರ ಪ್ರಭಾವ ಕಾಣುತ್ತದೆ. ಹೀಗೆ ಬೇರೆ ಬೇರೆ ಅರಸು ಮನೆತನಗಳ ಆಳ್ವಿಕೆಯಲ್ಲಿ ಸಿಕ್ಕು ಕೂಹುಂಡಿನಾಡು ಆಗಾಗ ಹಿಗ್ಗಿ ಕುಗ್ಗಿರುವ ಸಾಧ್ಯತೆಯಿದೆ. ಕ್ರಿ.ಶ. ಸುಮಾರು ೧೩ನೆಯ ಶತಮಾನದ ಉತ್ತರಾರ್ಧದಿಂದೀಚೆಗೆ ಈ ಪ್ರದೇಶದ ಶಾಸನಗಳಲ್ಲಿ ಕೂಹುಂಡಿನಾಡಿನ ಪ್ರಸ್ತಾಪಗಳು ಗೋಚರಿಸುವುದಿಲ್ಲ.

ದೇವಗಿರಿಯ ಸೇವುಣ ಮನೆತನದ ಆಳ್ವಿಕೆಯ ಉತ್ತರಾರ್ಧದ ಕಾಲಾವಧಿಯಿಂದೀಚೆಗೆ ಕೂಹುಂಡಿನಾಡಿನ ಪೂರ್ವಭಾಗದಲ್ಲಿದ್ದ 'ತೊರಗಲೆನಾಡು' ವಿಸ್ತಾರವಾಗುತ್ತ 'ತೊರಗಲೆ-೬೦೦೦' ಆಡಳಿತ ವಿಭಾಗವಾಗಿರುವುದು ಗಮನಾರ್ಹವಾಗಿದೆ. ಇಂದಿನ ರಾಮದುರ್ಗ ತಾಲ್ಲೂಕಿನ ತೋರಗಲ್ಲ ಗ್ರಾಮವು ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ಆಡಳಿತ ವಿಭಾಗದಲ್ಲಿ ಕಾಲಕ್ರಮೇಣ ಕೂಹುಂಡಿನಾಡಿನ ಪೂರ್ವ ಮತ್ತು ದಕ್ಷಿಣ ಭಾಗದ ಸತ್ತಿಗೇರಿ, ಹುಲಕುಂದ, ದಾಡೆಭಾವಿ, ಗೊರವನೂರು, ಜಂಗವಾಡ, ಮುದಲೂರು, ಸಿಂಧವಿಗೆ, ಅಗನೂರು, ನಾಗರಪುರ, ಮುನಿಪುರ ಮೊದಲಾದ ಹಲವು ಗ್ರಾಮಗಳು ಸೇರ್ಪಡೆಯಾದವು. ಇದನ್ನು ಸವದತ್ತಿ ತಾಲ್ಲೂಕಿನ ಮುನವಳ್ಳಿಯ ಕ್ರಿ.ಶ. ೧೨೨೨ ಮತ್ತು ಕ್ರಿ.ಶ. ೧೨೫೨ರ ಶಾಸನಗಳು_

ವಾರಿಧಿವೇಷ್ಟಿತಮೆನಿಪೇಧಾರಿಣಿಗೆತಿಸೇಬ್ಯ ಮೇರುವಿಂದದಕ್ಷಿಣದೊಳು
ಸಾರಂ ಜಂಬೂದ್ವೀಪದೊಳೋರಂತೆಸೆದೊಪ್ಪಿತೋರ್ಪ್ಪ ಭರತಕ್ಷೇತ್ರಂ ॥
ಭರತಾವನಿಗೊಪ್ಪುದು ಸುರಚಿರ ಧರ್ಮ್ಮಲ್ಲದಂತೆ ಕುಂತಳಕತಿವಿಸ್ತರಮೆನೆ
ತೋಱಗಲೆನಾಡಿನ ಸಿರೀಕರುವೆನಿಸಿದುದು ಮುನಿಪುರಂ ಕಡುರಮ್ಯಂ ॥
ಮಿಱುಗುವ ನಂದನಾವಳಿಗಳಿಂ ಬೆಳದೊಪ್ಪುವ ಕೆಯ್ಯೊಲಂಗಳಿಂ
ತುಱುಗಿದ ದೇವತಾಬವನದಿಂದೆಸೆದಿರ್ಪ್ಪ ಸುವಸ್ತು ವರ್ಗ್ಗದಿಂ
ತೊಱುಗಲೆಯಾಱುಸಾಸಿರಮೆನಿಪ್ಪ ಸುದೇಸದೊಳೊಳ್ಪುವೆತ್ತಣಂ
ಮೆಱೆವ ಮುನೀಂದ್ರವಳ್ಳಿಗೆ ಸಮಂಬರೆ ಪತ್ತನಮುಂಟೆ ಧಾತ್ರಿಯೊಳು ॥

ಎಂದು ಸಮರ್ಥಿಸುತ್ತವೆ.[೧೧] ಹೀಗಾಗಿಯೇ ಕೂಹುಂಡಿ-೩೦೦೦ ಆಡಳಿತ ವಿಭಾಗವು ಕ್ರಿ.ಶ. ಸುಮಾರು ೧೩ನೆಯ ಶತಮಾನದ ಪೂರ್ವಾರ್ಧದ ಹೆಚ್ಚಿನ ಶಾಸನಗಳಲ್ಲಿ ಮೂರುಸಾವಿರದ ಬದಲಾಗಿ ಕೂಂಡಿಮಂಡಲ, ಕೂಂಡಿದೇಶ, ಕೂಂಡಿವಿಷಯ ಎಂದು ಮಾತ್ರ ಉಲ್ಲೇಖವಾಗಿದೆ. ತೊರಗಲೆ-೬೦೦೦ ಆಡಳಿತ ವಿಭಾಗದಲ್ಲಿ ಇಂದಿನ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ನಾಲ್ವೆ ತಾಲ್ಲೂಕು, ಕೊಲ್ಲಾಪುರ ಮತ್ತು ಸಾಂಗಲಿ ಜಿಲ್ಲೆಗಳ ಕೆಲವು ಭಾಗಗಳು, ಬೆಳಗಾವಿ ಜಿಲ್ಲೆಯ ರಾಮದುರ್ಗ, ಗೋಕಾಕ, ಚಿಕ್ಕೋಡಿ, ಬೈಲಹೊಂಗಲ, ಸವದತ್ತಿ ತಾಲ್ಲೂಕುಗಳು, ಬಾಗಲಕೋಟ ಜಿಲ್ಲೆಯ ಬಾಗಲಕೋಟ, ಮುಧೋಳ, ಜಮಖಂಡಿ ತಾಲ್ಲೂಕುಗಳ ಕೆಲವು ಗ್ರಾಮಗಳು ಸೇರ್ಪಡೆಯಾಗಿದ್ದವು.[೧೨]

ದೇವಗಿರಿಯ ಸೇವುಣ ಮನೆತನದ ದಂಡನಾಯಕ ಬೀಚಣನು ಕ್ರಿ.ಶ. ಸುಮಾರು ೧೩ನೆಯ ಶತಮಾನದ ಉತ್ತರಾರ್ಧದಲ್ಲಿ ರಟ್ಟರನ್ನು ಸದೆಬಡಿದು ಕೂಹುಂಡಿನಾಡಿನ ಪ್ರದೇಶವನ್ನು ತನ್ನ ನೃಪತಿಯಾದ ಕನ್ನರದೇವನಿಗೆ ಒಪ್ಪಿಸಿದನು. ಕ್ರಿ.ಶ. ಸುಮಾರು ೧೪ನೆಯ ಶತಮಾನದಿಂದೀಚೆಗೆ ಕೂಹುಂಡಿನಾಡಿನ

ಪ್ರದೇಶವು ಕ್ರಮವಾಗಿ ವಿಜಯನಗರದ ಅರಸರು, ದೆಹಲಿಯ ಸುಲ್ತಾನರು (ಖಿಲ್ಜಿ ಮತ್ತು ತುಘಲಕ್ ಮನೆತನಗಳು), ಬಹಮನಿಯ ಸುಲ್ತಾನರು, ವಿಜಾಪುರದ ಆದಿಲ್‌ಷಾಹಿಗಳು, ಮೊಘಲರು, ಮರಾಠರ ಶಿವಾಜಿ, ಪೇಶ್ವೆಗಳು, ಪಟವರ್ಧನರು, ಸಂಸ್ಥಾನಗಳು (ಕಿತ್ತೂರು, ಬೆಳವಡಿ, ಜಮಖಂಡಿ, ಮುಧೋಳ, ರಾಮದುರ್ಗ, ವಂಟಮುರಿ, ನಿಪ್ಪಾಣಿ, ಪಟ್ಟಣಕೋಡಿ, ಖಡಕಲಾಟ, ನಾಗರಮುನ್ನೊಳ್ಳಿ, ಸಾಂಗಲಿ, ಕೊಲ್ಲಾಪುರ ಇತ್ಯಾದಿ), ಬ್ರಿಟಿಷರ ಆಳ್ವಿಕೆಗೊಳಪಟ್ಟಿತು. ಬ್ರಿಟಿಷರು ೧೮೩೬ರಲ್ಲಿ ಧಾರವಾಡ ಜಿಲ್ಲೆಯ ಪ್ರದೇಶವನ್ನು ಉತ್ತರ-ದಕ್ಷಿಣ ಎಂದು ವಿಂಗಡಿಸಿ ಉತ್ತರ ಭಾಗಕ್ಕೆ ಬೆಳಗಾವಿಯನ್ನು ಕೇಂದ್ರವನ್ನಾಗಿ ಮಾಡಿದರು. ೧೯೫೬ರವರೆಗೂ ಮುಂಬೈ ಪ್ರಾಂತದಲ್ಲಿದ್ದ ಈ ಪ್ರದೇಶವು ಅನಂತರ ಕರ್ನಾಟಕದ ಬೆಳಗಾವಿ, ವಿಜಾಪುರ (ಇಂದಿನ ಬಾಗಲಕೋಟ), ಮತ್ತು ಮಹಾರಾಷ್ಟ್ರದ ಕೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳಾಗಿ ಅಭಿವೃದ್ಧಿಯಾಯಿತು.

೨.೫. ಕೂಹುಂಡಿನಾಡಿನ ಶಾಸನಗಳೋಕ್ತ ಸ್ಥಳನಾಮಗಳು

ಬಾದಾಮಿ ಚಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಕೂಹುಂಡಿನಾಡಿನ ಪ್ರದೇಶದ ವ್ಯಾಪ್ತಿಯಲ್ಲಿ ಒಂದುಸಾವಿರ ಮತ್ತು ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಮೂರುಸಾವಿರ ಗ್ರಾಮಗಳಿದ್ದವು. ಆದರೆ ಈ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಸುಮಾರು ೧೭೨ ಶಾಸನಗಳಲ್ಲಿ ಕೆಲವು ಗ್ರಾಮಗಳ ಉಲ್ಲೇಖಗಳು ಮಾತ್ರ ಉಪಲಬ್ಧವಾಗಿವೆ. ಇನ್ನುಳಿದ ಗ್ರಾಮಗಳ ಕುರಿತಾಗಿ ಯಾವುದೇ ವಿವರಗಳು ಲಭ್ಯವಾಗಿಲ್ಲ. ಈ ಪ್ರದೇಶದ ಭಾಷೆ ಮತ್ತು ಈ ಭಾಷೆಯ ಉಚ್ಚಾರಣೆ, ಅಕ್ಷರಗಳಲ್ಲಿ (ಪ>ಹ, ಱ>ರ, ೞ>ಳ ಸಾದೃಶ್ಯಲೋಪ, ವ-ಮ-ಹ-ಪ ಭೇದ, ಸ>ಚ ಸಮರೂಪಧಾರಣೆ, ಕಕಾರ ತಾಲವ್ಯೀಕರಣ, ಇ>ಎ, ಉ>ಒ ವ್ಯತ್ಯಾಸ) ಕಾಲಾಂತರದಲ್ಲಾದ ಬದಲಾವಣೆಗಳಿಂದ ಇಲ್ಲಿಯ ಸ್ಥಳನಾಮಗಳ ರೂಪ, ಆಕಾರ, ಉಚ್ಚಾರಣೆ, ಅರ್ಥಗಳಲ್ಲಿಯೂ ಬದಲಾವಣೆ ಗೋಚರಿಸುತ್ತದೆ. ಹೀಗಾಗಿ ಇಲ್ಲಿಯ ಭಾಷೆಯ ಧ್ವನಿ ನಿಯಮ, ಧ್ವನಿ ವ್ಯತ್ಯಾಸವನ್ನು ಅವಲೋಕಿಸಿದಾಗ ಮಾತ್ರ ಈ ಸ್ಥಳನಾಮಗಳು ರೂಪುಗೊಂಡಿರಬಹುದಾದ ಪಾಮರ ನಿಷ್ಪತ್ತಿ (ಐತಿಹ್ಯ), ಪಂಡಿತ ನಿಷ್ಪತ್ತಿ (ಪುರಾಣ), ನಿಜ ನಿಷ್ಪತ್ತಿಯನ್ನು (ಚರಿತ್ರೆ) ಸ್ಪಷ್ಟವಾಗಿ ಗುರುತಿಸಬಹುದು. ಹಾಗೆಯೇ ಈ ಸ್ಥಳನಾಮಗಳು ನಿಸರ್ಗವಾಚಿ, ವಸತಿವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ಆದರ್ಶವಾಚಿ, ನಿರ್ಮಾಣವಾಚಿ, ಕೃಷಿವಾಚಿ ಹಿನ್ನೆಲೆಯಲ್ಲಿಯೂ ರಚನೆಯಾಗಿರುವಂತೆ ತೋರುತ್ತದೆ.

ಸಾಮಾನ್ಯವಾಗಿ ದ್ರಾವಿಡ ಮೂಲದ ಕನ್ನಡ ಸ್ಥಳನಾಮಗಳು ಎರಡು ಆಕೃತಿಮಾಗಳನ್ನು ಪಡೆದಿರುತ್ತವೆ. ಇದರಲ್ಲಿ ಪೂರ್ವಭಾಗವು (ಪೂರ್ವಪದ) ವಿಶಿಷ್ಟವಾದ ನಿರ್ದಿಷ್ಟ ಲಕ್ಷಣವನ್ನು ಸೂಚಿಸುವುದರಿಂದ ನಿರ್ದಿಷ್ಟ ಆಕೃತಿಮಾವೆಂದೂ, ಉತ್ತರಭಾಗವು (ಉತ್ತರಪದ) ಹೆಸರಿನ ಸಾಮಾನ್ಯ ವರ್ಗವನ್ನು ಪ್ರತಿನಿಧಿಸುವುದರಿಂದ ಅದನ್ನು ವಾರ್ಗಿಕ ಆಕೃತಿಮಾವೆಂದೂ ಕರೆಯಲಾಗುತ್ತದೆ.[೩೩] ಕೂಹುಂಡಿನಾಡಿನ ಬಹುತೇಕ ಸ್ಥಳನಾಮಗಳು ಅಚ್ಚ ದ್ರಾವಿಡ ಮೂಲದವುಗಳಾಗಿವೆ. ಊರ್, ಊರು, ಕೇರಿ, ಗೇರಿ, ಗ್ರಾಮ, ಗಾವ, ತಾಣ, ನಾಡು, ಹಟ್ಟಿ, ಪಟ್ಟಣ, ಹಾಳ, ಬಾಳ, ಪುರ, ಬಾಡ, ವಾಡ,

ವಾರ, ಹಳ್ಳಿ ಎಂದು ಅಂತ್ಯವಾಗುವ ಅಚ್ಚ ದ್ರಾವಿಡ ಮೂಲದ ಸ್ಥಳನಾಮಗಳು ವಸತಿವಾಚಿ (ಇರುವಿಕೆ, ನೆಲಸುವಿಕೆ), ಗಲ್, ಕುಂದ, ಗುಂದ, ಗುಡ್ಡ, ಕುಪ್ಪ, ಕುಳಿ, ಕೋಡ, ಗೋಡ ಎಂದು ಅಂತ್ಯವಾಗುವ ಸ್ಥಳನಾಮಗಳು ನಿಸರ್ಗವಾಚಿ ಹಿನ್ನೆಲೆಯಲ್ಲಿ ರಚನೆಯಾಗಿವೆ.

ಕೂಹುಂಡಿನಾಡಿನ ಕೆಲವು ಸ್ಥಳನಾಮಗಳಲ್ಲಿ ನೈಸರ್ಗಿಕ, ಜನಾಂಗಿಕ, ವ್ಯಕ್ತಿಗತ, ಐತಿಹಾಸಿಕ ಘಟನೆಗಳು ಎಡೆಪಡೆದಿರುವ ಪ್ರವೃತ್ತಿ ಎದ್ದು ಕಾಣುತ್ತದೆ. ಯಾವುದೋ ಒಂದು ಗ್ರಾಮ ಸಹಜ ಇಲ್ಲವೆ ಉದ್ದೇಶಪೂರ್ವಕವಾಗಿ ನಿರ್ಮಾಣವಾಗಿರುತ್ತದೆ. ಗ್ರಾಮಗಳಿಗೆ ಹೆಸರಿಡುವ ಇತಿಹಾಸದಲ್ಲಿ ಸಹಜ ನಿರ್ಮಾಣದ ಘಟ್ಟ ನೈಸರ್ಗಿಕ ಸ್ಥಿತಿಯನ್ನವಲಂಬಿಸಿದರೆ, ಉದ್ದೇಶಪೂರ್ವಕ ನಿರ್ಮಾಣದ ಘಟ್ಟ ಜನಾಂಗ ಇಲ್ಲವೆ ವ್ಯಕ್ತಿಗಳನ್ನವಲಂಬಿಸಿರುತ್ತದೆ. ನಿಸರ್ಗವಾಚಿ ಸ್ಥಳನಾಮಗಳು ಗ್ರಾಮ ಉದಯದೊಂದಿಗಿನ ಸಹಜ ಹೆಸರುಗಳಾದುದರಿಂದ ಅವು ತುಂಬಾ ಪ್ರಾಚೀನ ಗ್ರಾಮಗಳೆನ್ನಬಹುದು. ಕೆಲವು ವ್ಯಕ್ತಿಗಳು ಗ್ರಾಮ ನಿರ್ಮಾಣಕ್ಕೆ ಕಾರಣರಾದುದರಿಂದ ಅವರ ಹೆಸರಿನಲ್ಲಿ ಹಲವು ಸ್ಥಳನಾಮಗಳು ಗೋಚರಿಸುತ್ತವೆ. ಸಾಮಾನ್ಯವಾಗಿ ಸ್ಥಳನಾಮಗಳ ಮಧ್ಯದಲ್ಲಿರುವ 'ರ' ಜನಾಂಗವಾಚಿ ಸೂಚನೆಯಾಗಿರುತ್ತದೆ. ಕೆಲವು ಸ್ಥಳನಾಮಗಳು ಆಯಾ ಸ್ಥಳದ ದೇವಾಲಯ ಮತ್ತು ದೇವರ ಹೆಸರು ಸೂಚಿಯಾಗಿವೆ. ಯಾವುದೇ ಒಂದು ಗ್ರಾಮ ಅಭಿವೃದ್ಧಿಯಾಗಿ ಪ್ರಸಿದ್ಧಿ ಪಡೆದಂತೆ ಅದರ ಸಮೀಪದಲ್ಲಿರುವ ಗ್ರಾಮ ಕೆಲವು ಸಾಪೇಕ್ಷ ಪದಗಳನ್ನು ಇಲ್ಲವೆ ಪ್ರತ್ಯಯಗಳನ್ನು ಹಚ್ಚಿಕೊಂಡು ಅದೇ ಹೆಸರಿನಿಂದ ಗುರುತಿಸಲ್ಪಡುತ್ತದೆ. ಒಮ್ಮೊಮ್ಮೆ ಇಲ್ಲಿನ ಹೆಸರುಗಳು ಆಯಾ ನೈಸರ್ಗಿಕ ಸಮಾನ ಗುಣಧರ್ಮದಿಂದ ಹುಟ್ಟಿರಬಹುದಾದರೂ ಒಂದರಿಂದ ಮತ್ತೊಂದನ್ನು ಬೇರ್ಪಡಿಸಲು ಅಲ್ಲಿನ ವಿಶಿಷ್ಟತೆಗಳು ಸಹಾಯಕವಾದಂತೆ ತೋರುತ್ತದೆ. ಒಮ್ಮೊಮ್ಮೆ ಕೆಲವು ಸ್ಥಳನಾಮಗಳಿಗೆ ಒಂದಕ್ಕಿಂತ ಹೆಚ್ಚು ರೂಪಗಳು ಬಳಕೆಯಲ್ಲಿರುವುದು ಕಾಣುತ್ತದೆ. ಇದರಲ್ಲಿ ಜನಪ್ರಿಯ ವ್ಯವಹಾರ ರೂಪ, ಸ್ಥಳೀಯರ ಆಡುಮಾತಿನ ರೂಪ, ವಿದ್ವಾಂಸರಿಂದ ಸಂಸ್ಕೃತೀಕರಣವಾದ ರೂಪಗಳೂ ಸೇರಿರುತ್ತವೆ. ಎರಡಕ್ಕಿಂತ ಹೆಚ್ಚು ಆಕೃತಿಮಾಗಳುಳ್ಳ ಅಥವಾ ಒಂದೇ ಆಕೃತಿಮಾಗಳುಳ್ಳ ಕೆಲವು ಸ್ಥಳನಾಮಗಳೂ ಗೋಚರಿಸುತ್ತವೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಆಕೃತಿಮಾಗಳುಳ್ಳ ಸ್ಥಳನಾಮಗಳು ಆಯಾ ಸ್ಥಳ ವೈಶಿಷ್ಟ್ಯದ ವಿವರಣಾತ್ಮಕ ಗುಣವನ್ನು ಪಡೆದಿರುವುದರಿಂದ ಅಲ್ಲಿನ ಸಮಸ್ತ ಪದದಲ್ಲಿ ಸಂಬಂಧವಾಚಕ ಮಧ್ಯ ಪ್ರತ್ಯಯಗಳು ಅಪರೂಪವಾಗಿ ನುಸುಳಿರುತ್ತವೆ. ಇಂತಹ ಪ್ರತ್ಯಯಗಳು ಸಾಮಾನ್ಯವಾಗಿ ಸಂಬಂಧಕಾರಕವಾಗಿರುತ್ತವೆ.[೪೪]

ಒಟ್ಟಾರೆ ಪ್ರಸ್ತುತ ಕೂಹುಂಡಿನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಸ್ಥಳನಾಮಗಳು ಇಲ್ಲಿಯ ಭೌಗೋಳಿಕ ಸ್ವರೂಪ ಮತ್ತು ಈ ಸ್ಥಳಗಳಲ್ಲಿ ಲಭ್ಯವಿರುವ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳು ಕೂಹುಂಡಿನಾಡಿನ ರಾಜಕೀಯ, ಆಡಳಿತ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವಾಸ್ತುಕಲೆ, ಶಿಲ್ಪಕಲೆ ಮೊದಲಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನಕ್ಕೆ ಬಹು ಮಹತ್ವದ ಮಾಹಿತಿಯನ್ನು ಒದಗಿಸುತ್ತವೆ. ಇವುಗಳಲ್ಲಿ ತುಂಬಾ

ಮಹತ್ವವಾದ ಕೆಲವು ಸ್ಥಳನಾಮಗಳ ಪ್ರಾಚೀನತೆ, ಸಾಂಸ್ಕೃತಿಕ ಮತ್ತು ಭಾಷಿಕ ವಿಶ್ಲೇಷಣೆ, ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ, ಅವುಗಳ ವಾರ್ಗಿಕಗಳ ಆವರ್ತನೆಯನ್ನು ಇಲ್ಲಿ ಗಮನಿಸಲಾಗಿದೆ.

೨.೫.೧. ಅಮಣಗೆಯೂರು

ಅಮ್ಮಣಗಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಅಮಣಗೆಯೂರು ಸ್ಥಳದ ನಿರೂಪಣೆಯಿದೆ.[೩೫] ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಅಮ್ಮಣಗಿ ಗ್ರಾಮವಾಗಿದೆ. ಅಮ್ಮಣ್ಣನ+ಊರು>ಅಮಣಗೆಯೂರು>ಅಮಣಗೆ>ಅಮ್ಮಣಗಿ ಎಂದು ಪರಿವರ್ತನೆವಾಗಿದೆ. ಅಮ್ಮಣ್ಣ ಎಂಬಾತನು ಈ ಸ್ಥಳದ ಮೂಲಪುರುಷನೋ ಅಥವಾ ಇಲ್ಲಿ ಅಧಿಕಾರಗೈದವನೋ ಎಂಬುದು ಸ್ಪಷ್ಟವಿಲ್ಲ. ಆತನ ಹೆಸರಿನಲ್ಲಿ ನಿರ್ಮಾಣದ ಈ ಗ್ರಾಮವು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಪಾರ್ಶ್ವನಾಥ ಬಸದಿಯಿದೆ. ನಕ್ಷತ್ರಾಕಾರದ ತಲವಿನ್ಯಾಸವನ್ನು ಹೊಂದಿರುವ ಈ ಬಸದಿ ಕೂಹುಂಡಿನಾಡಿನ ಜೈನ ವಾಸ್ತುಕಲೆಯ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ. ಬಸದಿಯಲ್ಲಿ ಪ್ರತಿಷ್ಠಾಪಿತವಾಗಿರುವ ಕಾಯೋತ್ಸರ್ಗ ಪಾರ್ಶ್ವನಾಥ, ಪದ್ಮಾವತಿಯಕ್ಷಿ, ಕೂಷ್ಮಾಂಡಿನಿಯಕ್ಷಿ (ಅಂಬಿಕಾಯಕ್ಷಿ), ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಆದಿನಾಥನ ಶಿಲ್ಪಗಳು ಪ್ರತಿಮಾ ಲಕ್ಷಣಗಳ ದೃಷ್ಟಿಯಿಂದ ಗಮನೀಯವಾಗಿದೆ.

೨.೫.೨. ಆಲ್ಗೋಡು

ಉಳ್ಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೪೪ರ ಶಾಸನದಲ್ಲಿ ಆಲ್ಗೋಡು ಸ್ಥಳದ ನಿರೂಪಣೆಯಿದೆ.[೩೬] ಇಲ್ಲಿದ್ದ ಬೃಹತ್ತಾದ ಆಲದ ಮರದಿಂದ ಇದನ್ನು ಆಲ್ಗೋಡು ಎಂದು ಕರೆಯಲಾಗಿದೆ. ಆಲದ+ಕೊಡು (ಹಳ್ಳಿ) = ಆಲ್ಗೋಡು ಎಂದಾಗಿದೆ. ಪ್ರಸ್ತುತ ಹೆಸರಿನ ಗ್ರಾಮದ ಅಸ್ತಿತ್ವ ಇಂದು ಕಾಣಸಿಗುವುದಿಲ್ಲ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಗ್ರಾಮದ ಸುಮತಿಯಣ್ಣನು ಉಳ್ಳಾಗಡ್ಡಿ ಖಾನಾಪುರದಲ್ಲಿ ಬಾಹುಬಲಿಯ ಬಸದಿಯನ್ನು ನಿರ್ಮಿಸಿದ ಕುರಿತು ಶಾಸನಧಾರವಿದೆ. ಆದರೆ ಆ ಬಸದಿ ಇಂದು ಉಳಿದು ಬಂದಿಲ್ಲ.

೨.೫.೩. ಉಚ್ಚುಗಾವೆ, ಉತ್ಸುಗ್ರಾಮೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಚ್ಚುಗಾವೆ ಸ್ಥಳದ ನಿರೂಪಣೆಯಿದೆ.[೩೭] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಉಚಗಾವಿ ಗ್ರಾಮವಾಗಿದೆ. ಉಚ್ಚು ಎಂಬುದು ಶ್ರೇಷ್ಠ, ಗಾವೆ (ಮರಾಠಿ ಪದ) ಎಂಬುದು ಊರು ಎಂದರ್ಥ. ಈ ಗ್ರಾಮವು ಎತ್ತರವಾದ ಪ್ರದೇಶದಲ್ಲಿದೆ. ಉಚ್ಚುಗಾವೆ>ಉಚ್ಚಗಾವೆ>ಉಚಗಾವಿ ಎಂದು ಪರಿವರ್ತನೆಯಾಗಿದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಅಗ್ರಹಾರವಾಗಿದ್ದ ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾದ ಕಲ್ಮೇಶ್ವರ ದೇವಾಲಯವಿದೆ. ಇದು

ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ. ಈ ದೇವಾಲಯದ ಹತ್ತಿರವಿರುವ ಜೈನ ಸಿಂಹಪೀಠವು ಗಮನಾರ್ಹವಾಗಿದೆ. ಗಣೇಶನ ದೇವಾಲಯದ ಹತ್ತಿರ ಜೈನ ವೀರಗಲ್ಲುವಿದೆ.

೨.೫.೪. ಉಂಬರವಾಣಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಂಬರವಾಣಿ ಸ್ಥಳದ ಪ್ರಸ್ತಾಪವಿದೆ.[೩೮] ಆಲದ ಮರವನ್ನು ಮರಾಠಿಯಲ್ಲಿ ಉಂಬರಾಚೆ ಜಾಡ ಎಂದು ಕರೆಯಲಾಗುತ್ತದೆ. ಇಲ್ಲಿದ್ದ ಆಲದ ಮರದಿಂದಲೇ ಇದನ್ನು ಮರಾಠಿಯ ಪ್ರಭಾವದಿಂದ ಉಂಬರವಾಣಿ ಎಂದು ಕರೆಯಲಾಗಿದೆ. ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮವಾಗಿದೆ. ಉಂಬರವಾಣಿ>ಉಮರವಾಣಿ> ಉಮ್ರಾಣಿ> ಉಮರಾಣಿ ಎಂದು ಪರಿವರ್ತನೆಯಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಬಿಡಿ ವಾಸ್ತು-ಶಿಲ್ಪಾವಶೇಷಗಳು ಹರಡಿಕೊಂಡಿವೆ. ಇದರಿಂದ ಸವದತ್ತಿ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಇಲ್ಲಿ ದೇವಾಲಯವೊಂದು ನಿರ್ಮಾಣವಾಗಿದ್ದಂತೆ ತೋರುತ್ತದೆ.

೨.೫.೫. ಎಕ್ಕಸಂಬುಗೆ

ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಎಕ್ಕಸಂಬುಗೆ ಸ್ಥಳದ ನಿರೂಪಣೆಯಿದೆ.[೩೯] ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾ ಗ್ರಾಮವಾಗಿದೆ. ಮೂಲತಃ ಇದು ಯಕ್ಷಸಂಬುಗೆ ಎಂದಾಗಿದೆ. ಇದು ಯಕ್ಷ ದೇವತೆಯ ಸ್ಥಳವಾಗಿದೆ. ಕುರುಬ ಸಂಪ್ರದಾಯದ ಆರಾಧಕನಾದ ಬೀರಪ್ಪನನ್ನು ಎಕ್ಕಪ್ಪ ಎಂತಲೂ ಕರೆಯಲಾಗುತ್ತದೆ. ಈಗಲೂ ಇಲ್ಲಿ ಬೀರಪ್ಪನ ದೇವಾಲಯವಿದೆ. ಎಕ್ಕಸಂಬುಗೆ>ಎಕ್ಕಸಂಬುಗಾ> ಎಕ್ಕಸಂಬಾ>ಎಕ್ಸಂಬಾ>ಯಕ್ಸಂಬಾ ಎಂದು ರೂಪಾಂತರವಾಗಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಕೂಹುಂಡಿನಾಡಿನ ಕೊರವಳ್ಳಿ ಕಂಪಣದಲ್ಲಿ ಸೇರ್ಪಡೆಯಾಗಿತ್ತು. ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನದಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿದ್ದ ಈ ಗ್ರಾಮದಲ್ಲಿ ಕೊಲ್ಲಾಪುರದ ಶಿಲಾಹಾರ ಮನೆತನದ ಇಮ್ಮಡಿ ವಿಜಯಾದಿತ್ಯದೇವನ ಪಡೆವಳನಾದ ಕಾಳಿಯಣ್ಣನು ಕ್ರಿ.ಶ. ೧೧೫೫ರಲ್ಲಿ ನೇಮಿನಾಥ ಬಸದಿಯನ್ನು ನಿರ್ಮಿಸಿದ್ದಾನೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿದೆ. ಹಾಗೆಯೇ ಈ ಗ್ರಾಮದಲ್ಲಿ ಕಲಚೂರಿ ಮನೆತನದ ಇಮ್ಮಡಿ ಬಿಜ್ಜಳನ ಶಾಸನ, ವೀರಗಲ್ಲುಗಳಿವೆ.

೨.೫.೬. ಎಳರಾಮೆ, ಎಳರಾವೆ

ಯಡ್ರಾವಿಯ ಕ್ರಿ.ಶ. ೯೦೯ ಮತ್ತು ೧೨ನೆಯ ಶತಮಾನದ, ಸವದತ್ತಿಯ ಕ್ರಿ.ಶ. ೧೨೨೮ರ ಶಾಸನಗಳಲ್ಲಿ ಎಳರಾಮೆ, ಎಳರಾವೆ ಸ್ಥಳದ ನಿರೂಪಣೆಯಿದೆ.[೪೦] ಇದು ಇಂದಿನ ಸವದತ್ತಿ ತಾಲ್ಲೂಕಿನಲ್ಲಿರುವ ಯಡ್ರಾವಿ ಗ್ರಾಮವಾಗಿದೆ. ಇಲ್ಲಿದ್ದ ಏಳುರಾಮ ಎನ್ನುವ ವಿಶೇಷ ದೇವತೆ ಅಥವಾ ವ್ಯಕ್ತಿಯ ಹೆಸರಿನಲ್ಲಿ

ಇದು ಎಳರಾಮೆ ಎಂದು ಕರೆಯಲ್ಪಟ್ಟಿದೆ. ಎಳರಾಮೆ>ಎಡರಾಮೆ>ಎಳರಾವೆ>ಎಳರಾವ>ಯಡರಾವ>ಯಡ್ರಾವ>ಯಡ್ರಾವಿ ಎಂದು ರೂಪಾಂತರವಾಗಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಗ್ರಾಮದಲ್ಲಿ ಬ್ರಹ್ಮದೇವಾಲಯ ಮತ್ತು ಬಸದಿಯೊಂದು ನಿರ್ಮಾಣವಾಗಿದ್ದವು. ಆದರೆ ಅವು ಇಂದು ಉಳಿದು ಬಂದಿಲ್ಲ. ಈ ಗ್ರಾಮದ ಪರಿಸರದಲ್ಲಿ ಇದುವರೆಗೂ ಹದಿನೈದು ಶಾಸನಗಳು ಬೆಳಕಿಗೆ ಬಂದಿವೆ. ಇವುಗಳೆಲ್ಲವೂ ಭೂದಾನಕ್ಕೆ ಸಂಬಂಧಿಸಿವೆ.

೨.೫.೭. ಒರ್ಣಣೂರು

ವಣ್ಣೂರದ ಕ್ರಿ.ಶ. ೧೧೧೪ರ ಶಾಸನದಲ್ಲಿ ಒರ್ಣನೂರು ಸ್ಥಳದ ನಿರೂಪಣೆಯಿದೆ.[೪೧] ಇದೇ ಗ್ರಾಮದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಇದನ್ನು ಹಿರಿಒರ್ಣಣೂರು ಎಂತಲೂ ಕರೆಯಲಾಗಿದೆ. ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮವಾಗಿದೆ. ಈ ಗ್ರಾಮವು ಅಂದು ಕುನ್ದುರಗೆ ಎಪ್ಪತ್ತು ವಿಭಾಗದಲ್ಲಿ ಸೇರ್ಪಡೆಯಾಗಿತ್ತು. ಒರ್ಣ ಎಂಬುದು ಬಣ್ಣ ಎಂದರ್ಥ. ಇಲ್ಲಿ ಬಣ್ಣದ ಶಿಲೆಗಳು ಹೆಚ್ಚಾಗಿದ್ದರಿಂದ ಇದನ್ನು ಒರ್ಣನೂರು ಎಂದು ಕರೆಯಲಾಗಿದೆ. ಒರ್ಣಣೂರು>ವರಣಣೂರು>ವಣಣೂರು>ವಣ್ಣೂರು ಎಂದು ರೂಪಾಂತರವಾಗಿದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಸವದತ್ತಿ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಕಲ್ಮೇಶ್ವರ ದೇವಾಲಯವಿದೆ. ಪ್ರಸ್ತುತ ಗರ್ಭಗೃಹ ಮತ್ತು ಅಂತರಾಳ ಮಾತ್ರ ಉಳಿದಿವೆ. ಈ ದೇವಾಲಯದ ಹತ್ತಿರ ತೀರ್ಥಂಕರನ ಭಗ್ನ ಶಿಲ್ಪವಿದೆ.

೨.೫.೮. ಕಣ್ಣಗಾವೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಣ್ಣಗಾವೆ ಸ್ಥಳದ ಉಲ್ಲೇಖವಿದೆ.[೪೨] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ (ಕಮಲ ಬಸದಿ) ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಖನಗಾವಿ ಗ್ರಾಮವಾಗಿದೆ. ಕಣ್ಣ ಎಂಬ ವ್ಯಕ್ತಿ ಇಲ್ಲಿ ಅಧಿಕಾರಗೈದನೋ ಅಥವಾ ಪ್ರಮುಖನಾಗಿದ್ದನೋ ಎಂಬುದು ಸ್ಪಷ್ಟವಿಲ್ಲ. ಆತನ ಹೆಸರಿನಿಂದಲೇ ಇದು ಕಣ್ಣಗಾವೆ ಎಂದು ಕರೆಯಲ್ಪಟ್ಟಿದೆ. ಕಣ್ಣಗಾವೆ>ಕಣ್ಣಗಾವಿ>ಕನಗಾವಿ>ಖನಗಾವಿ ಎಂದು ಪರಿವರ್ತನೆಯಾಗಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಅವಶೇಷಗಳು ಕಾಣುವುದಿಲ್ಲ.

೨.೫.೯. ಕಣಗಿಳೆ

ತೇರದಾಳದ ಕ್ರಿ.ಶ. ೧೧೮೧ರ, ಕಣಗಲಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಜಿನಬಿಂಬ ಪಾದಪೀಠ ಶಾಸನದಲ್ಲಿ ಕಣಗಿಳೆ ಸ್ಥಳದ ಉಲ್ಲೇಖವಿದೆ.[೪೩] ಇದು ಇಂದಿನ ಹುಕ್ಕೇರಿ ತಾಲ್ಲೂಕಿನ ಕಣಗಲಾ ಗ್ರಾಮವಾಗಿದೆ. ಇಲ್ಲಿ ಕಣಗಿಳೆ ಹೂವಿನ ಗಿಡಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಕಣಗಿಳೆ>ಕಣಗಳಾ>ಕಣಗಲಾ ಎಂದು ಪರಿವರ್ತಿತವಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಇಂದಿಗೂ ಇಲ್ಲಿ ಕಣಗಿಳೆ ಹೂವಿನ ಗಿಡಗಳು ಅಧಿಕವಾಗಿ ಗೋಚರಿಸುತ್ತವೆ. ರೈತರು ಕೃಷಿಯಲ್ಲಿ

ಬಳಸುವ ವಿವಿಧ ಉಪಕರಣಗಳಲ್ಲಿ ಕೂರಗಿ ಎಂಬುದು ಒಂದಾಗಿದೆ. ಕೃಷಿ ಚಟುವಟಿಕೆಗಳು ಮುಗಿದ ತರುವಾಯ ಕೂರಗಿಯನ್ನು ಕಣಗಿಳೆ ಇತ್ಯಾದಿ ಹೂವುಗಳಿಂದ ಪೂಜಿಸುವುದು ರೂಢಿಯಲ್ಲಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಮುಖ ಜೈನ ಕೇಂದ್ರವಾಗಿದ್ದ ಈ ಗ್ರಾಮದಲ್ಲಿ ಅಂದು ಬಸದಿಯೊಂದು ನಿರ್ಮಾಣವಾಗಿತ್ತು. ಆದರೆ ಅದು ಇಂದು ಉಳಿದು ಬಂದಿಲ್ಲ. ಆ ಬಸದಿಯಲ್ಲಿ ಪ್ರತಿಷ್ಠಾಪಿತವಾಗಿದ್ದ ತೀರ್ಥಂಕರನ ಶಿಲ್ಪವು ಇಂದಿಗೂ ಉಳಿದು ಬಂದಿದೆ.

೨.೫.೧೦. ಕನಂಬುರಿಗೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕನಂಬುರಿಗೆ ಸ್ಥಳದ ಪ್ರಸ್ತಾಪವಿದೆ.[೪೪] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ४ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಕಣಬುರ್ಗಿ ಗ್ರಾಮವಾಗಿದೆ. ಇಲ್ಲಿ ಕನಬರು ಎಂಬ ಜನಾಂಗ ವಾಸವಾಗಿತ್ತು. ಕನಬರು ನೆಲೆನಿಂತ ಊರು ಕನಂಬುರಿಗೆ ಎಂದಾಗಿದೆ. ಕನಂಬುರಿಗೆ>ಕಣಂಬರಿಗೆ>ಕಣಬರಗೆ>ಕಣಬುರ್ಗಿ ಎಂದು ರೂಪಾಂತರವಾಗಿದೆ. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಇಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಬಿಡಿ ವಾಸ್ತು–ಶಿಲ್ಪಾವಶೇಷಗಳು ಹರಡಿಕೊಂಡಿವೆ. ಇದರಿಂದ ಅಂದು ಈ ಗ್ರಾಮದಲ್ಲಿ ದೇವಾಲಯವೊಂದು ನಿರ್ಮಾಣವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೮೬೦ರಲ್ಲಿ ಉಪಾಧ್ಯಾಯನೊಬ್ಬನು ಈ ಗ್ರಾಮದಲ್ಲಿ ಬಾಹುಬಲಿ ಶಿಲ್ಪವನ್ನು ಪ್ರತಿಷ್ಠಾಪಿಸಿದ ಶಾಸನಾಧಾರವಿದೆ. ಈ ಶಿಲ್ಪವು ಈಗ ಇತ್ತೀಚೆಗೆ ನಿರ್ಮಿಸಲಾದ ಬಸದಿಯಲ್ಲಿದೆ.

೨.೫.೧೧. ಕಬ್ಬೂರು

ಬೆಳಗಾವಿಯ ಕ್ರಿ.ಶ. ೧೨೦೪, ಕಬ್ಬೂರದ ಕ್ರಿ.ಶ. ೧೨೦೪, ಜಗನೂರದ ಕ್ರಿ.ಶ. ೧೨೦೬ರ ಶಾಸನಗಳಲ್ಲಿ ಕಬ್ಬೂರು ಸ್ಥಳದ ಉಲ್ಲೇಖವಿದೆ.[೪೫] ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮವಾಗಿದೆ. ಈ ಪರಿಸರದಲ್ಲಿ ಕಬ್ಬು ಹೆಚ್ಚು ಬೆಳೆಯಲಾಗುತ್ತಿತ್ತು. ಈ ಗ್ರಾಮದ ಸಮೀಪದ ಬೆಲ್ಲದ ಬಾಗೇವಾಡಿಯಲ್ಲಿ ಬೆಲ್ಲವನ್ನು ತಯಾರಿಸಲಾಗುತ್ತಿತ್ತು. ಕಬ್ಬು ಬೆಳೆಯುವ ಸ್ಥಳವು, ಕಬ್ಬು+ಊರು>ಕಬ್ಬೂರು>ಕರಬ್ಬೂರು>ಕಬ್ಬೂರು ಎಂದು ಪರಿವರ್ತನೆಯಾಗಿದೆ. ಈ ಗ್ರಾಮವು ಕೂಹುಂಡಿನಾಡಿನಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಇಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಕಲ್ಮೇಶ್ವರ ದೇವಾಲಯವಿದೆ. ಇದು ಭಾಗಶಃ ನಾಶವಾಗಿದ್ದು, ಹೀಗಾಗಿ ಇದರ ವಾಸ್ತು ಲಕ್ಷಣಗಳು ಸ್ಪಷ್ಟವಾಗುವುದಿಲ್ಲ.

೨.೫.೧೨. ಕಲ್ಯಾಣಪುರ

ತೇರದಾಳದ ಕ್ರಿ.ಶ. ೧೧೨೩, ಉಳ್ಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಕಲ್ಯಾಣಪುರ ಸ್ಥಳದ ಪ್ರಸ್ತಾಪವಿದೆ.[೪೬] ಪುಷ್ಕರಣಿಯನ್ನು ಕಲ್ಯಾಣಿ ಎಂತಲೂ ಕರೆಯಲಾಗುತ್ತದೆ. ಕಲ್ಯಾಣಿ>ಕಲ್ಯಾಣಪುರ>ಕಲ್ಯಾಣ ಎಂದಾಗಿದೆ. ಇದು ಜಲವಾಚಿ ಸ್ಥಳನಾಮವಾಗಿದೆ. ಈ ಸ್ಥಳವು

ಇಂದಿನ ಬೀದರ ಜಿಲ್ಲೆಯ ತಾಲ್ಲೂಕು ಕೇಂದ್ರ ಬಸವಕಲ್ಯಾಣ ಪಟ್ಟಣವಾಗಿದೆ. ಇದು ಚಾಳುಕ್ಯರ ರಾಜಧಾನಿಯಾಗಿತ್ತು. ರಾಷ್ಟ್ರಕೂಟರ ಆಳ್ವಿಕೆಯ ಕಾಲಾವಧಿಯಲ್ಲಿ ಕಲ್ಯಾಣ ಪರಿಸರದಲ್ಲಿ ಚಾಳುಕ್ಯ ಮನೆತನದ ತೈಲಪರಸನು ಮಹಾಮಂಡಳೇಶ್ವರ ಗೈಯುತ್ತಿದ್ದನು. ಈತನು ರಾಷ್ಟ್ರಕೂಟರನ್ನು ಬದಿಗೊತ್ತಿ ಸ್ವತಂತ್ರವಾದ ಸಾಮ್ರಾಜ್ಯವನ್ನು ಸ್ಥಾಪಿಸಿದನು. ತರುವಾಯದ ಆಳರಸರು ಇದನ್ನು ರಾಜಧಾನಿ ಮಾಡಿಕೊಂಡು ಆಳಿದರು. ಚಾಳುಕ್ಯರನ್ನು ಬದಿಗೊತ್ತಿ ಕಲಚೂರಿ ಮನೆತನದ ಇಮ್ಮಡಿ ಬಿಜ್ಜಳನು ಕಲ್ಯಾಣದಿಂದ ಸ್ವತಂತ್ರವಾದ ಆಳ್ವಿಕೆಯನ್ನು ಪ್ರಾರಂಭಿಸಿದನು. ಚಾಳುಕ್ಯರು ಮತ್ತು ಕಲಚೂರಿಯರ ಆಳ್ವಿಕೆಯ ಕಾಲಾವಧಿಯಲ್ಲಿ ಇದು ಪ್ರಸಿದ್ಧ ಶೈವ ಕೇಂದ್ರವಾಗಿತ್ತು. ಜಗದ್ಗುರು ಬಸವಣ್ಣನವರು ಇಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ, ಸಾವಿರಾರು ಶರಣ–ಶರಣೆಯರ ಮೂಲಕ ಸಮಕಾಲೀನ ಸಮಾಜವನ್ನು ಜಾಗೃತಗೊಳಿಸಿದರು. ಹಾಗಾಗಿ ಇದನ್ನು ಬಸವಕಲ್ಯಾಣ ಎಂದು ಕರೆಯಲಾಗಿದೆ.

೨.೫.೧೩. ಕಲ್ಹೊಳಿ

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಲ್ಹೊಳಿ ಸ್ಥಳದ ಉಲ್ಲೆಖವಿದೆ.[೪೭] ಇದು ಇಂದಿನ ಗೋಕಾಕ ತಾಲ್ಲೂಕಿನ ಕಲ್ಲೊಳೆ (ಕಲ್ಲೊಳಿ) ಗ್ರಾಮವಾಗಿದೆ. ಮೂಲತಃ ಇದು ಕಲ್ಲಹೊಳಿ ಆಗಿರುವುದು. ಈ ಗ್ರಾಮದ ಪರಿಸರದಲ್ಲಿ ಇಂದ್ರವೇಣಿ ಹಳ್ಳ ಹರಿದಿದೆ. ಇದರಲ್ಲಿ ಪದರು ಶಿಲೆಗಳು ಯಥೇಚ್ಛವಾಗಿವೆ. ಅಂತಾಗಿ ಈ ಗ್ರಾಮವು ಕಲ್ಲು+ಹೊಳೆ>ಕಲ್ಹೊಳೆ>ಕಲ್ಲೊಳೆ>ಕಲ್ಲೊಳಿ ಎಂದು ಪರಿವರ್ತನೆಯಾಗಿದೆ. ಇದು ಶಿಲಾವಾಚಿ ಸ್ಥಳನಾಮವಾಗಿದೆ. ಇದು ಕೂಹುಂಡಿನಾಡಿನ ಕುರುಂಬೆಟ್ಟ ಕಂಪಣದಲ್ಲಿ ಸೇರ್ಪಡೆಯಾಗಿತ್ತು. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿದ್ದ ಇಲ್ಲಿ ೪ನೆಯ ಕಾರ್ತವೀರ್ಯನ ಮಾವನಾದ ಹಗರಟಗೆನಾಡಿನ ಮಹಾಮಂಡಳೇಶ್ವರ ರಾಜರಸನು ಕ್ರಿ.ಶ. ೧೨೦೬ರಲ್ಲಿ ತ್ರಿಕೂಟ ಮಂಡಿತ ಶಾಂತಿನಾಥ ಬಸದಿಯನ್ನು ನಿರ್ಮಿಸಿದ್ಧಾನೆ. ಈ ಬಸದಿ ಕೂಹುಂಡಿನಾಡಿನ ಜೈನ ವಾಸ್ತುಕಲೆಯ ಅಧ್ಯಯನದಲ್ಲಿ ಅಪರೂಪದ ಆಕರವಾಗಿದೆ. ಇದರಲ್ಲಿ ಪ್ರತಿಷ್ಠಾಪಿತವಾಗಿರುವ ಶಾಂತಿನಾಥ, ನೇಮಿನಾಥ, ಪಾರ್ಶ್ವನಾಥ, ಚಂದ್ರಪ್ರಭನಾಥನ ಶಿಲ್ಪಗಳು ಪ್ರಮಾಣ ಬದ್ಧವಾಗಿದ್ದು, ರಟ್ಟರ ಕಾಲಾವಧಿಯ ಜೈನ ಶಿಲ್ಪಕಲೆಗೆ ಉತ್ತಮ ನಿದರ್ಶನಗಳಾಗಿವೆ. ಇಲ್ಲಿರುವ ಕ್ರಿ.ಶ. ೧೨೦೬ರ ಶಾಸನವನ್ನು ಪಾರ್ಶ್ವನಾಥ ಪುರಾಣದ ಕರ್ತೃ ಪಾರ್ಶ್ವಪಂಡಿತನು ರಚಿಸಿದ್ದಾನೆ.

೨.೫.೧೪. ಕವಿಳಾಸಪುರ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಕವಿಳಾಸಪುರ ಸ್ಥಳದ ಪ್ರಸ್ತಾಪವಿದೆ.[೪೮] ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿ ಹಿರಣ್ಯಕೇಶಿ ನದಿಯ ದಡದಲ್ಲಿದ್ದ ಈ ಗ್ರಾಮವು ಯಾವುದೋ ಒಂದು ಕಾಲಘಟ್ಟದಲ್ಲಿ ನಾಶವಾಗಿದೆ. ಈ ಸ್ಥಳವಿದ್ದ ಕುರುಹುಗಳು ಇಂದಿಗೂ ಉಳಿದು ಬಂದಿವೆ. ಪ್ರಸ್ತುತ ಶಾಸನವು ಈ ಸ್ಥಳವನ್ನು–

> ನೂಲೆನಾಡೊಳಗಿನಮನಿತನದಿ ಕವಿಳಲಸತೀರ್ತ್ಥಂ ನಾಲ್ಕುಯುಗದ
> ಪುರಾಣೋಕ್ತದಿಂ ಬಂದ ಕ್ಷೇತ್ರವದೆಂತೆಂದದೆ ಕ್ರಿತಯುಗದಲ್ಲಿ

> ಕವಿಳಾಸಮುನಿ ಕವಿಳಾಸನಾಥ ತ್ರತೆಯಲ್ಲಿ ಅಂಕರಾಜಮುನಿ
> ಅಂಕನಾಥ ದ್ವಾಪರದಲ್ಲಿ ಮಹಾರಾಜಮುನಿ ಮಹಲಿಂಗದೇವ
> ಕಲಿಯುಗದಲ್ಲಿ ಕಲಿರಾಜಮುನಿ ಕಲಿದೇವನಾಮ ಈ ಮುನಿಗಳು
> ಮುಖ್ಯ ಸಮಸ್ತ ಗಣೇಸ್ವರರು ಆರಾಧಿಸಿ........ ||

ಎಂದು ವರ್ಣಿಸಿದೆ. ಅಂತಾಗಿ ಈ ಸ್ಥಳವು ಪುರಾಣಗಳ ಕಾಲದಿಂದಲೂ ಅಸ್ತಿತ್ವದಲ್ಲಿದ್ದು, ಪ್ರಸಿದ್ಧ ಶೈವ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಗ್ರಾಮವು ನೂಲೆನಾಡು ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿತ್ತು. ಇದು ಪುರಾಣಗಳ ಕಾಲದಿಂದಲೂ ಮುನಿಗಳು ತಪಸ್ಸು ಮಾಡಿದ ಸ್ಥಳ ಎಂದು ಜನಜನಿತವಾಗಿದೆ. ಹಾಗೆಯೇ ಈ ಪರಿಸರದಲ್ಲಿ ಅನೇಕ ಕವಿಗಳು ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಹೀಗಾಗಿ ಈ ಸ್ಥಳವು ಕವಿಳಾಸಪುರ ಎಂದು ಕರೆಯಲ್ಪಟ್ಟಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಪ್ರಸ್ತುತ ಶಾಸನವು ಜಗದ್ಗುರು ಬಸವಣ್ಣನವರ ವಂಶಾವಳಿಯ ಮೇಲೆ ಬೆಳಕು ಚೆಲ್ಲುತ್ತದೆ. ಇಲ್ಲಿ ಕೆಲವು ಶೈವ ದೇವಾಲಯಗಳು ನಿರ್ಮಾಣವಾಗಿದ್ದ ಕುರಿತು ಈ ಶಾಸನದಲ್ಲಿ ಪ್ರಸ್ತಾಪವಿದೆ. ಆದರೆ ಅವು ಇಂದು ಉಳಿದು ಬಂದಿಲ್ಲ.

೨.೫.೧೫. ಕಷ್ಮಾಂಡಿ, ಕೂಹುಂಡಿ

ಮಾನಪುರದ ರಾಷ್ಟ್ರಕೂಟ ಮನೆತನದ ದೆಜ್ಜಮಹಾರಾಜನ (ಇಮ್ಮಡಿ ದೇವರಾಜ) ಗೋಕಾಕದ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ ಕಷ್ಮಾಂಡಿ ಮತ್ತು ನೇಸರಗಿಯ ಕ್ರಿ.ಶ. ೧೨೯೯, ರಾಯಬಾಗದ ೧೦೪೦, ತೇರ್ಣಿಯ ೧೦೬೨ರ ಮೊದಲಾದ ಶಾಸನಗಳಲ್ಲಿ ಕೂಹುಂಡಿ ಸ್ಥಳದ ಉಲ್ಲೇಖಗಳಿವೆ.[೪೯] ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿ ಗ್ರಾಮವಾಗಿದೆ. ಇಂದಿನ ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ಪ್ರಾಚೀನ ಕಾಲದಿಂದಲೂ ಜೈನ ಧರ್ಮದ ೨೨ನೆಯ ತೀರ್ಥಂಕರ ನೇಮಿನಾಥನ ಯಕ್ಷಿ ಕೂಷ್ಮಾಂಡಿನಿದೇವಿಯ (ಅಂಬಿಕಾಯಕ್ಷಿ) ಆರಾಧನೆ ಜನಪ್ರಿಯವಾಗಿತ್ತು. ಸವದತ್ತಿ ತಾಲ್ಲೂಕಿನ ಎಲ್ಲಮ್ಮದೇವಿ (ರೇಣುಕಾದೇವಿ) ದೇವಾಲಯವು ಮೂಲತಃ ಜೈನ ಬಸದಿಯಾಗಿರುವುದು ಈ ದೇವಾಲಯದ ದ್ವಾರಬಂಧದ ಲಲಾಟಪಟ್ಟಿ ಮತ್ತು ಶಿಖರದಲ್ಲಿರುವ ಜಿನಬಿಂಬಗಳು ಹಾಗೂ ಅಧಿಷ್ಠಾನದ ಪಟ್ಟಿಕೆಯಲ್ಲಿರುವ ಜೈನ ಶಾಸನದಿಂದ ಸ್ಪಷ್ಟವಾಗುತ್ತದೆ. ಇದು ಸವದತ್ತಿಯ ರಟ್ಟ ಮನೆತನದ ಪಟ್ಟಜಿನಾಲಯವಾಗಿತ್ತು. ಮೂಲತಃ ಈ ಬಸದಿಯಲ್ಲಿ ಕೂಷ್ಮಾಂಡಿನಿದೇವಿಯ ಶಿಲ್ಪ ಪ್ರತಿಷ್ಠಾಪಿತವಾಗಿತ್ತು. ಅಂತಾಗಿ ಕೂಷ್ಮಾಂಡಿ ಎಂಬ ಸಂಸ್ಕೃತ ರೂಪವು ಕಷ್ಮಾಂಡಿ>ಕೂಷ್ಮಾಂಡಿ>ಕೂಹುಂಡಿ ಎಂಬ ಹೆಸರಿನ ನಾಡು ಅಥವಾ ಆಡಳಿತ ವಿಭಾಗದ ರೂಪಕ್ಕೆ ಮೂಲವಾಗಿದೆ ಎಂದು ಹಂಪ ನಾಗರಾಜಯ್ಯ ಅವರು ಅಭಿಪ್ರಾಯ ಪಟ್ಟಿದ್ದಾರೆ.[೫೦] ಆದರೆ ಕೂಹುಂಡಿನಾಡು ಎಂಬ ಹೆಸರಿಗೆ ಇಂದಿನ ಪಟ್ಟಣಕುಡಿ ಗ್ರಾಮವೇ ಮೂಲವಾಗಿದೆ ಎಂಬುದು ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳಿಂದ ದೃಢಪಟ್ಟಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೦ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಮತ್ತು ಸೂರ್ಯ ಇತ್ಯಾದಿ ಶಿಲ್ಪಗಳಿವೆ.

೨.೫.೧೬. ಕಾರ್ತವೀರ್ಯಪುರ

ಬಡ್ಲಿಯ ಕ್ರಿ.ಶ. ೧೨೪೬ರ ಶಾಸನದಲ್ಲಿ ಕಾರ್ತವೀರ್ಯಪುರ ಸ್ಥಳದ ನಿರೂಪಣೆಯಿದೆ.[೫೧] ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಶಿ.ಬಾ. ಪಾಟೀಲ ಅವರು ಸೊಗಲ ಗುಡ್ಡದ ಪೂರ್ವದಲ್ಲಿರುವ ಇಂದಿನ ಕಾರ್ಲಕಟ್ಟಿ ತಾಂಡಾದ ಪರಿಸರವು ಕಾರ್ತವೀರ್ಯಪುರ ಆಗಿರಬಹುದೆಂದು ಊಹೆ ಮಾಡಿದ್ದಾರೆ.[೫೨] ಆದರೆ ಈ ತಾಂಡಾದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಅವಶೇಷಗಳು ಕಾಣುವುದಿಲ್ಲ. ಪ್ರಾಯಶಃ ಇದು ಇಂದಿನ ಸವದತ್ತಿ ತಾಲ್ಲೂಕಿನ ಬಡ್ಲಿ ಗ್ರಾಮವಾಗಿರುವಂತೆ ತೋರುತ್ತದೆ. ಸವದತ್ತಿ ರಟ್ಟ ಮನೆತನದ ಇಮ್ಮಡಿ ಕಾರ್ತವೀರ್ಯನ ಆಳ್ವಿಕೆಯ ಕಾಲಾವಧಿಯಲ್ಲಿ ಬಡ್ಲಿ ಗ್ರಾಮವು ಪ್ರಸಿದ್ಧ ಅಗ್ರಹಾರವಾಗಿತ್ತು. ಇಲ್ಲಿಯ ಜೈನಧರ್ಮೀಯರು ಅಗ್ರಹಾರದ ಮಹಾಜನರ ಸಹಾಯದಿಂದ ಇಲ್ಲಿ ಬ್ರಹ್ಮಜಿನಾಲಯವನ್ನು ನಿರ್ಮಿಸಿದ ಶಾಸನಾಧಾರವಿದೆ. ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದಿಗೂ ಉಳಿದು ಬಂದಿರುವ ಜಿನಾಲಯವು ಕೂಹುಂಡಿನಾಡಿನಲ್ಲಿ ವೈಷ್ಣವರು ಮತ್ತು ಜೈನರ ಸಂಬಂಧಗಳ ಕುರಿತು ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ. ಈಗ ಈ ಜಿನಾಲಯವನ್ನು ಚಿದಂಬರೇಶ್ವರ ದೇವಾಲಯ ಎಂದು ಕರೆಯಲಾಗುತ್ತಿದೆ. ಇಲ್ಲಿರುವ ನಾರಾಯಣ ದೇವಾಲಯವು ಕ್ರಿ.ಶ. ಸುಮಾರು ೧೩ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ.

೨.೫.೧೭. ಕಾರೆಯಬಾಗು

ಸವದತ್ತಿಯ ಕ್ರಿ.ಶ. ೧೦೯೮ರ ಶಾಸನದಲ್ಲಿ ಕಾರೆಯಬಾಗು ಸ್ಥಳದ ನಿರೂಪಣೆಯಿದೆ.[೫೩] ಪಸ್ತುತ ಶಾಸನವು ತುಂಬಾ ತ್ರುಟಿತವಾಗಿರುವುದರಿಂದ ಈ ಸ್ಥಳದ ಕುರಿತು ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಪ್ರಾಯಶಃ ಇದು ಇಂದಿನ ತಾಲ್ಲೂಕು ಕೇಂದ್ರ ರಾಯಬಾಗ ಆಗಿರುವಂತೆ ತೋರುತ್ತದೆ. ತೋಟ ಎಂಬುದು ಮರಾಠಿಯಲ್ಲಿ ಭಾಗ ಎಂದಾಗುತ್ತದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ.

೨.೫.೧೮. ಕುಕ್ಕುಂಬಾಳ

ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ಕುಕ್ಕುಂಬಾಳ ಸ್ಥಳದ ಪ್ರಸ್ತಾಪವಿದೆ.[೫೪] ಇದು ಇಂದಿನ ಸವದತ್ತಿ ತಾಲ್ಲೂಕಿನಲ್ಲಿರುವ ಕುಕ್ಕಬಾಳ ಗ್ರಾಮವಾಗಿದೆ. ಮೂಲತಃ ಇದು ಕುಕ್ಕುಟಪಾಳ್ಯ ಆಗಿರುವುದು ಕುಕ್ಕುಟಪಾಳ್ಯ ಸಣ್ಣ ಹಳ್ಳಿಯನ್ನು ಸೂಚಿಸುತ್ತದೆ. ಕುಕ್ಕುಟ ಎಂಬುದು ಕೋಳಿ ಎಂದರ್ಥ. ಇದು ಪ್ರಾಣಿವಾಚಿ ಸ್ಥಳನಾಮವಾಗಿದೆ. ಇಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಹರಡಿಕೊಂಡಿವೆ.

೨.೫.೧೯. ಕುಟುಕವಾಡ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕುಟುಕವಾಡ ಸ್ಥಳದ ಪ್ರಸ್ತಾಪವಿದೆ.[೫೫] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಕುಟ್ಟಲವಾಡಿ ಗ್ರಾಮವಾಗಿದೆ. ಇಲ್ಲಿ ಕುಟುಕರು ವಾಸವಾಗಿದ್ದರು. ಕುಟುಕ ಎಂಬುದು

ಅನ್ಯಾಯ ಎಂದರ್ಥ. ಮೂಲತಃ ಇದು ಕುಟುಕಲೂರು ಎಂದಾಗಿತ್ತು. ಮರಾಠಿಯ ಪ್ರಭಾವದಿಂದ ಕುಟಕವಾಡ>ಕುಟ್ಟಲವಾಡಿ ಎಂದು ಪರಿವರ್ತನೆಯಾಗಿದೆ. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಅವಶೆಷಗಳು ಕಾಣುವುದಿಲ್ಲ.

೨.೫.೨೦. ಕುರುಂಬೆಟ್ಟ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಕುರುಂಬೆಟ್ಟ ಸ್ಥಳದ ಉಲ್ಲೇಖವಿದೆ.[೫೬] ಇದು ಇಂದಿನ ಗೋಕಾಕ ತಾಲ್ಲೂಕಿನ ಮಮದಾಪುರ ಗ್ರಾಮವಾಗಿದೆ. ಕುರು ಎಂಬುದು ಸುಂದರ ಎಂದರ್ಥ. ಇಲ್ಲಿಯ ಬೆಟ್ಟವು ಸುಂದರವಾಗಿತ್ತು. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಇದು ಕೂಹುಂಡಿನಾಡಿನ ಕುರುಂಬೆಟ್ಟ ಕಂಪಣದ ಕೇಂದ್ರ ಪಟ್ಟಣವಾಗಿತ್ತು. ಕಾಲಾಂತರದಲ್ಲಿ ಮರಾಠಿಯ ಪ್ರಭಾವದಿಂದ ಮಮದಾಪುರ ಎಂದು ಕರೆಯಲ್ಪಟ್ಟಿದೆ. ಈ ಗ್ರಾಮದಲ್ಲಿ ದೇವಗಿರಿಯ ಸೇವುಣರ ಕನ್ನರದೇವನ ದಂಡನಾಯಕನಾದ ಚಾಮುಂಡನು ತನ್ನ ಗುರು ಸೋಮನಾಥನ ಅನುಗ್ರಹದಿಂದ ತ್ರಿಕೂಟಪ್ರಾಸಾದ (ತ್ರೈಪುರುಷ) ದೇವಾಲಯವನ್ನು ನಿರ್ಮಿಸಿ ಭೂದಾನ ಮಾಡಿದ್ದಾನೆ. ಈ ದೇವಾಲಯವು ಕೂಹುಂಡಿನಾಡಿನ ಪ್ರದೇಶದ ಶೈವ ವಾಸ್ತುಕಲೆಯ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ.

೨.೫.೨೧. ಕುಱುವನಿಗೆ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಕುಱುವನಿಗೆ ಸ್ಥಳದ ಪ್ರಸ್ತಾಪವಿದೆ.[೫೭] ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಕುರಣಿ ಗ್ರಾಮವಾಗಿದೆ. ಪ್ರಸ್ತುತ ಶಾಸನದಲ್ಲಿ ಇದನ್ನು 'ಕುಱುವನಿಗೆ ತಳವಿರ್ತಿ ಅಂಕವಲ ಕೂಂಡಿನಾಡೊಳು' ಎಂದು ಕರೆಯಲಾಗಿದೆ. ಇದರಿಂದ ಈ ಗ್ರಾಮವು ಕೂಹುಂಡಿನಾಡಿನ ನೂಲೆನಾಡು ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಕುರುವನಿಗೆ>ಕುರುವನಿ>ಕುರನಿ>ಕುರಣಿ ಎಂದು ರೂಪಾಂತರವಾಗಿದೆ. ಕುಱು ಎಂದರೆ ಸುಂದರವಾದ ಹಳ್ಳಿ ಎಂದರ್ಥ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ.

೨.೫.೨೨. ಕುಳಿಯವಾಳಿಗೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕುಳಿಯವಾಳಿಗೆ ಸ್ಥಳದ ನಿರೂಪಣೆಯಿದೆ.[೫೮] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಕೋಳಿವಾಡ ಗ್ರಾಮವಾಗಿದೆ. ಕುಳಿ ಎಂಬುದು ತಗ್ಗು ಎಂದರ್ಥ. ತಗ್ಗಾದ ಪ್ರದೇಶದಲ್ಲಿದ್ದ ಊರು ಕುಳಿಯವಾಳಿಗೆ ಆಗಿರುವುದು. ಕುಳಿಯವಾಳಿಗೆ>ಕುಳಿಯವಾಡಿಗೆ>ಕುಳಿಯವಾಡ>ಕೊಳಿಯವಾಡ>ಕೋಳಿವಾಡ ಎಂದು ಪರಿವರ್ತನೆಯಾಗಿದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಕುರುಹುಗಳು ಲಭ್ಯವಿಲ್ಲ.

೨.೫.೨೩. ಕೊಣೊಳೂರು

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕೊಣೊಳೂರು ಸ್ಥಳದ ನಿರೂಪಣೆಯಿದೆ.[೫೯] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ (ಕಮಲ ಬಸದಿ) ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಕೋಣಕೇರಿ ಗ್ರಾಮವಾಗಿದೆ. ಈ ಗ್ರಾಮವು ದಟ್ಟವಾದ ಅರಣ್ಯದಲ್ಲಿದೆ. ಅಂದು ಇಲ್ಲಿ ಕಾಡುಕೋಣಗಳು ಹೆಚ್ಚಾಗಿದ್ದವು. ಕೋಣ ಇರುವ ಊರು ಕೊಣೊಳೂರು ಎಂದು ಕರೆಯಲ್ಪಟ್ಟಿದೆ. ಇದು ಪ್ರಾಣಿವಾಚಿ ಸ್ಥಳನಾಮವಾಗಿದೆ. ಕೊಣೊಳೂರು>ಕೋಣಕೇರಿ ಎಂದು ಪರಿವರ್ತನೆಯಾಗಿದೆ.

೨.೫.೨೪. ಕೊತ್ತಸಿ, ಕಚ್ಚಗೋಡಿ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಕೊತ್ತಸಿ, ಕಚ್ಚಗೋಡಿ ಸ್ಥಳದ ಉಲ್ಲೇಖವಿದೆ.[೬೦] ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಕೋಚರಿ ಗ್ರಾಮವಾಗಿದೆ. ಕೊತ್ತಸಿ>ಕೊಚ್ಚಗೋಡಿ>ಕಚ್ಚಗೋಡಿ> ಕೋಚರಿ ಎಂದು ರೂಪಾಂತರವಾಗಿದೆ. ಈ ಸ್ಥಳದಲ್ಲಿ ಕೊಚ್ಚರು ವಾಸವಾಗಿದ್ದರು. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಕೂಹುಂಡಿನಾಡಿನ ನೂಲೆನಾಡು ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿತ್ತು.

೨.೫.೨೫. ಕೊರವಳ್ಳಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕೊರವಳ್ಳಿ ಸ್ಥಳದ ಉಲ್ಲೆಖವಿದೆ.[೬೧] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಜೋಡುಕುರಲಿ ಗ್ರಾಮವಾಗಿದೆ. ಕೊರವರು ನೆಲೆನಿಂತ ಊರು ಕೊರವಳ್ಳಿ ಆಗಿರುವುದು. ಕೊರವರ+ವಳ್ಳಿ>ಕೊರವಳ್ಳಿ>ಕೊರಳ್ಳಿ>ಕುರಳ್ಳಿ>ಕುರಲಿ>ಜೋಡುಕುರಲಿ ಎಂದು ಪರಿವರ್ತನೆಯಾಗಿದೆ. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಕೂಹುಂಡಿನಾಡಿನ ಕೊರವಳ್ಳಿ ಕಂಪಣ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾದ ಶೈವ ದೇವಾಲಯವಿದೆ. ಆದರೆ ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳು ಸ್ಪಷ್ಟವಿಲ್ಲ. ಈ ದೇವಾಲಯದ ಪರಿಸರದಲ್ಲಿ ಸಮಕಾಲೀನ ಶಿವಲಿಂಗ, ನಂದಿ ಇತ್ಯಾದಿ ಭಗ್ನ ಶಿಲ್ಪಾವಶೇಷಗಳಿವೆ.

೨.೫.೨೬. ಕೋಡನಪೂರ್ವದವಳ್ಳಿ

ಹುಣಸಿಕಟ್ಟಿಯ ಕ್ರಿ.ಶ. ೧೧೩೧ರ ಶಾಸನದಲ್ಲಿ ಕೋಡನಪೂರ್ವದವಳ್ಳಿ ಸ್ಥಳದ ಪ್ರಸ್ತಾಪವಿದೆ.[೬೨] ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ಖೋದಾನಪುರ ಗ್ರಾಮವಾಗಿದೆ. ಇಲ್ಲಿಯ ಕೋಡ ಎಂಬುದು ಒಂದು ಗ್ರಾಮವಾಗಿದೆ. ಈ ಗ್ರಾಮದ ಪೂರ್ವಕ್ಕಿರುವ ಹಳ್ಳಿ ಎಂಬರ್ಥದಲ್ಲಿ ಕೋಡನಪೂರ್ವದವಳ್ಳಿ ದಾಖಲಾಗಿದೆ. ಇದು ದಿಕ್‌ವಾಚಿ ಸ್ಥಳನಾಮವಾಗಿದೆ. ಕೋಡ ಎಂಬ ಗ್ರಾಮ ಯಾವುದೆಂಬುದು ಸ್ಪಷ್ಟವಿಲ್ಲ.

೨.೫.೨೭. ಕಂಕಣನೂರು

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಕಂಕಣನೂರು ಸ್ಥಳದ ಪ್ರಸ್ತಾಪವಿದೆ.[೬೩] ಇದು ಇಂದಿನ ರಾಯಬಾಗ ತಾಲ್ಲೂಕಿನ ಕಂಕಣವಾಡಿ ಗ್ರಾಮವಾಗಿದೆ. ಕಂಕಣ್ಣ ಎಂಬಾತನ ಊರು ಕಂಕಣನೂರು ಎಂದಾಗಿದೆ. ಈತನು ಇಲ್ಲಿಯ ಅಧಿಕಾರಿಯೋ ಅಥವಾ ಗಾವುಂಡನೋ ಆಗಿದ್ದನು. ಕ್ರಮೇಣ ಇಲ್ಲಿ ಮರಾಠಿಯ ಪ್ರಭಾವದಿಂದ ಊರು ವಾಡಿ ಎಂದಾಗಿದೆ. ಹಾಗೆಯೇ ಇಲ್ಲಿ ದೇಸಾಯಿಯವರ ವಾಡೆ ಇರುವುದು. ಕಂಕಣ್ಣ+ಊರು>ಕಂಕಣನೂರು>ಕಂಕನೂರು>ಕಂಕಣವಾಡೆ>ಕಂಕಣವಾಡಿ ಎಂದು ಪರಿವರ್ತಿತವಾಗಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಇದು ಕೂಹುಂಡಿನಾಡಿನ ಕುರುಂಬೆಟ್ಟ ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿತ್ತು. ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಅಧಿಕಾರಿ ಪ್ರಭು ಬಾಚರಸನು ಈ ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ಪುತ್ರ ಶ್ರೀಕಾಂತ ಹೆಮ್ಮಣಯ್ಯನು ಅತ್ಯಂತ ಪರಾಕ್ರಮಿಯಾಗಿದ್ದನು. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದಲ್ಲಿ ನಿರ್ಮಾಣವಾದ ಬಸವೇಶ್ವರ ದೇವಾಲಯವಿದೆ. ಆದರೆ ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ. ಈ ದೇವಾಲಯದ ಪರಿಸರದಲ್ಲಿ ಸಮಕಾಲೀನ ಬಿಡಿ ವಾಸ್ತು-ಶಿಲ್ಪಾವಶೇಷಗಳು ಹರಡಿಕೊಂಡಿವೆ.

೨.೫.೨೮. ಕಂದರಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಂದರಿ ಸ್ಥಳದ ಪ್ರಸ್ತಾಪವಿದೆ.[೬೪] ತಗ್ಗಾದ ಪ್ರದೇಶದಲ್ಲಿದ್ದ ಈ ಸ್ಥಳವು ಕಂದರಿ ಎಂದು ಕರೆಯಲ್ಪಟ್ಟಿದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಆದರೆ ಇದು ಇಂದಿನ ಯಾವ ಗ್ರಾಮ ಅಥವಾ ಸ್ಥಳವೆಂಬುದು ಸ್ಪಷ್ಟವಿಲ್ಲ. ಹೀಗಾಗಿ ಇದರ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೨.೫.೨೯. ಕೊಂಡನೂರು

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಕೊಂಡನೂರು ಸ್ಥಳದ ಪ್ರಸ್ತಾಪವಿದೆ.[೬೫] ಇದು ಇಂದಿನ ಗೋಕಾಕ ತಾಲ್ಲೂಕಿನ ಕೊಣ್ಣೂರು ಗ್ರಾಮವಾಗಿದೆ. ಇದು ಮೂಲತಃ ಕೊಳನೂರು ಆಗಿರುವುದು. ಕೊಳ್ಳ+ಊರು>ಕೊಳ್ಳಣೂರು>ಕೊಂಡನೂರು>ಕೊಣ್ಣೂರು ಎಂದು ಪರಿವರ್ತನೆಯಾಗಿದೆ. ಇದು ಜಲವಾಚಿ ಸ್ಥಳನಾಮವಾಗಿದೆ. ಈ ಗ್ರಾಮದ ಹೊರಭಾಗದಲ್ಲಿರುವ ಬೃಹತ್ ಶಿಲಾಯುಗದ ಕಂಡಿಕೋಣೆ ಪ್ರಕಾರದ ಗೋರಿಗಳಲ್ಲಿ ಜೈನ ಪರಂಪರೆಯ ಪಂಚಮ ಶ್ರುತಕೇವಲಿ ಭದ್ರಬಾಹು ಭಟ್ಟಾರಕರು ತಪಸ್ಸುಗೈದರೆಂದು ಪ್ರತೀತಿಯಿದೆ. ಹೀಗಾಗಿ ಕಾಲಾಂತರದಲ್ಲಿ ಆಚಾರ್ಯಶ್ರೀ ಶಾಂತಿಸಾಗರ ಮಹಾರಾಜರನ್ನೊಳಗೊಂಡಂತೆ ಅನೇಕ ಜೈನ ಮುನಿಗಳು ಇವುಗಳನ್ನು ತಮ್ಮ ಏಕಾಂತ ಕಠಿಣ ತಪಸ್ಸಿಗೆ ಬಳಸಿಕೊಳ್ಳುತ್ತ ಬಂದಿದ್ದಾರೆ. ಈ ಗ್ರಾಮವು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಇಲ್ಲಿ ಗಾವುಂಡಗೈಯುತ್ತಿದ್ದ ನಿಧಿಯಮಗಾವುಂಡನು ಕ್ರಿ.ಶ. ೧೦೮೭ರಲ್ಲಿ ಪಾರ್ಶ್ವನಾಥ ಬಸದಿಯನ್ನು

ನಿರ್ಮಿಸಿದ್ದಾನೆ. ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಕೆಲವು ಮೂಲ ವಾಸ್ತು ಲಕ್ಷಣಗಳನ್ನು ಬದಲಿಸಿಕೊಂಡಿರುವ ಈ ಬಸದಿಯ ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ (ಕದಂಬನಾಗರ) ಶೈಲಿಯ ಶಿಖರವಿದೆ. ಈ ಗ್ರಾಮದ ಹನುಮಾನ ದೇವಾಲಯದ ಮುಂಭಾಗದಲ್ಲಿ ಜೈನ ವೀರಗಲ್ಲುವಿದೆ.

೨.೫.೩೦. ಗುತ್ತಲ

ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಗುತ್ತಲ ಸ್ಥಳದ ನಿರೂಪಣೆಯಿದೆ.[೬೬] ಇದು ಇಂದಿನ ಬೆಳಗಾವಿ ತಾಲ್ಲೂಕಿನ ಗುತ್ತಿ ಗ್ರಾಮವಾಗಿದೆ. ಇಲ್ಲಿ ಹಾವಿನ ಹುತ್ತಗಳು ಅಧಿಕವಾಗಿದ್ದವು. ಹಾಗಾಗಿ ಇದು ಹುತ್ತ+ಹಳ್ಳಿ=ಹುತ್ತದ ಹಳ್ಳಿ>ಹುತ್ತಲ>ಗುತ್ತಲ ಎಂದು ಕರೆಯಲ್ಪಟ್ಟಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಈ ಗ್ರಾಮದ ಹನುಮಾನ ದೇವಾಲಯದ ಹತ್ತಿರ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಕಾಯೋತ್ಸರ್ಗ ತೀರ್ಥಂಕರನ ಶಿಲ್ಪವಿದೆ. ಇದರಿಂದ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಇಲ್ಲಿ ಬಸದಿಯೊಂದು ನಿರ್ಮಾಣವಾಗಿದ್ದು, ಕಾಲಾಂತರದಲ್ಲಿ ಸಮೂಲನಾಶವಾಗಿರುವಂತೆ ತೋರುತ್ತದೆ.

೨.೫.೩೧. ಗೋಕಾಗೆ

ತೇರದಾಳದ ಕ್ರಿ.ಶ. ೧೧೮೧ರ ಶಾಸನದಲ್ಲಿ ಗೋಕಾಗೆ ಸ್ಥಳದ ನಿರೂಪಣೆಯಿದೆ.[೬೭] ಇದು ಇಂದಿನ ತಾಲ್ಲೂಕು ಕೇಂದ್ರ ಗೋಕಾಕ ಪಟ್ಟಣವಾಗಿದೆ. ಇದು ಮೂಲತಃ ಗೋಕಾವಿ ಆಗಿರುವುದು. ಘಟಪ್ರಭಾ ನದಿಯ ತೀರದಲ್ಲಿರುವ ಇಲ್ಲಿ ಗೌಳಿಗರು ಗೋವುಗಳು (ಆಕಳುಗಳು) ಕಟ್ಟಿಕೊಂಡು ಹೈನುಗಾರಿಕೆಯಲ್ಲಿ ನಿರತರಾಗಿದ್ದರು. ಗೋಕಾವಿ>ಗೋಕಾಗೆ>ಗೋಕಾಕ ಎಂದಾಗಿರುವುದು. ಈಗಲೂ ಹಳ್ಳಿಯ ಜನರು ಇದನ್ನು ಗೋಕಾವಿ ಎಂತಲೇ ಕರೆಯುತ್ತಾರೆ. ಇದು ಪ್ರಾಣಿವಾಚಿ ಸ್ಥಳನಾಮವಾಗಿದೆ. ಇಲ್ಲಿ ರಾಷ್ಟ್ರಕೂಟರ ಕಾಲಾವಧಿಯಿಂದಲೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿಬಂದಿವೆ. ಸವದತ್ತಿಯ ರಟ್ಟರ ಎರಗನು ಇಲ್ಲಿ ಸುಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ್ದಾನೆ. ಆದರೆ ಆ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಅಂದಿನ ಸುಪಾರ್ಶ್ವನಾಥ, ಚೌವ್ವೀಸ ತೀರ್ಥಂಕರರ ಪ್ರಭಾವಳಿಯುಳ್ಳ ಆದಿನಾಥ ಇತ್ಯಾದಿ ಶಿಲ್ಪಗಳು ಇಂದಿಗೂ ಉಳಿದು ಬಂದಿವೆ. ಈ ನಗರದಲ್ಲಿ ಜನಿಸಿದ ಆಚಾರ್ಯಶ್ರೀ ಪಾಯಸಾಗರ ಮಹಾರಾಜರು ೨೦ನೆಯ ಶತಮಾನದಲ್ಲಿ ಕನ್ನಡನಾಡಿನಾದ್ಯಂತ ಜೈನ ಧರ್ಮದ ಪ್ರಸಾರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ನೀಡಿ ಇಂದಿಗೂ ಜನಮನದಲ್ಲಿ ಅಜರಾಮರರಾಗಿದ್ದಾರೆ. ಅವರು ಇಲ್ಲಿಯ ಬೆಟ್ಟದ ಗುಹೆಯಲ್ಲಿ ಏಕಾಂತ ತಪಸ್ಸು ಮಾಡುತ್ತಿದ್ದರು. ಪ್ರಸ್ತುತ ಈ ಗುಹೆಯಲ್ಲಿ ಅವರ ಪರೋಕ್ಷ ವಿನಯಾರ್ಥವಾಗಿ ಪಾದುಕೆಗಳನ್ನು ಪ್ರತಿಷ್ಠಾಪಿಸಿ ಇದನ್ನು ಪಾಯಸಾಗರ ಗುಂಫಾ ಎಂದು ಕರೆಯಲಾಗುತ್ತಿದೆ. ಇಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ತೀರ್ಥಂಕರರ ಶಿಲ್ಪಗಳಿವೆ.

೨.೫.೩೨. ಗೊಂಯ್ವೆಗಟ್ಟಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಗೊಂಯ್ವೆಗಟ್ಟಿ ಸ್ಥಳದ ಪ್ರಸ್ತಾಪವಿದೆ.[೮] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ಬೆನಕಟ್ಟಿ ಗ್ರಾಮವಾಗಿದೆ. ಇಲ್ಲಿ ಗೊಂಟಿಕಾಯಿ ಸಸ್ಯಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಗೊಂಯ್ವೆಗಟ್ಟಿ> ಗೊನಯೆಟ್ಟಿಗಟ್ಟಿ>ಬೊನಯಟ್ಟಿಗಟ್ಟಿ>ಬೆನಯಟ್ಟಿಗಟ್ಟಿ>ಬೆನಟ್ಟಗಟ್ಟಿ>ಬೆನಕಟ್ಟಿ ಎಂದು ಪರಿವರ್ತನೆಯಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ. ಇದರಿಂದ ಇಲ್ಲಿ ದೇವಾಲಯವೊಂದು ನಿರ್ಮಾಣವಾಗಿದ್ದು, ಯಾವುದೋ ಒಂದು ಕಾಲದಲ್ಲಿ ಸಮೂಲನಾಶವಾಗಿರುವಂತೆ ತೋರುತ್ತದೆ.

೨.೫.೩೩. ಚಚ್ಚಕ್ಕಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಚಚ್ಚಕ್ಕಿ ಸ್ಥಳದ ನಿರೂಪನೆಯಿದೆ.[೯] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ (ಕಮಲ ಬಸದಿ) ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮವಾಗಿದೆ. ಚಚ್ಚಕ್ಕಿ ಎಂಬುದು ಅಕ್ಕಿಯ ಹಲವು ಪ್ರಕಾರದಲ್ಲಿ ಒಂದಾಗಿದೆ. ಇಲ್ಲಿ ಈ ಪ್ರಕಾರದ ಅಕ್ಕಿಯ ಭತ್ತ ಹೆಚ್ಚಾಗಿ ಬೆಳೆಯುತ್ತಿತ್ತು. ಚಚ್ಚಕ್ಕಿ>ಚಚ್ಚಡಿ>ಚಚಡಿ ಎಂದು ಪರಿವರ್ತನೆಯಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಇಲ್ಲಿಯ ಅಂಗನವಾಡಿ ಕೇಂದ್ರದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪವಿದೆ. ಇದರಿಂದ ಈ ಗ್ರಾಮದಲ್ಲಿ ಪಾರ್ಶ್ವನಾಥ ಬಸದಿಯಿತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಅದು ಇಂದು ಉಳಿದು ಬಂದಿಲ್ಲ. ಇಲ್ಲಿರುವ ಕಲ್ಮೇಶ್ವರ ದೇವಾಲಯವು ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾವಾಗಿದೆ. ಇದು ಕೂಹುಂಡಿನಾಡಿನ ಶೈವ ವಾಸ್ತುಕಲೆಯ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ. ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಪರಿಸರದ ಕಂದಾಯವನ್ನು ಸಂಗ್ರಹಿಸುತ್ತಿದ್ದ ಜೈನ ದೇಸಾಯಿಗಳು ಇಲ್ಲಿ ವಾಡೆಯನ್ನು ನಿರ್ಮಿಸಿದ್ದಾರೆ. ಈ ವಾಡೆಯ ಪರಿಸರದಲ್ಲಿ ಒಂದು ಶೈವ ದೇವಾಲಯ ಮತ್ತು ಒಂದು ಜೈನ ಬಸದಿಯಿದೆ. ಬಸದಿ ಹಾಳಾಗಿದ್ದು, ಸ್ತಂಭಗಳು ಮಾತ್ರ ಉಳಿದಿವೆ.

೨.೫.೩೪. ಚುಳುಕಿ

ಬೆಳವಡಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಚುಳುಕಿ ಸ್ಥಳದ ಪ್ರಸ್ತಾಪವಿದೆ. ಇದು ಇಂದಿನ ಸವದತ್ತಿ ತಾಲ್ಲೂಕಿನ ಚುಳಕಿ ಗ್ರಾಮವಾಗಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದಲೂ ಚುಳಕಿ ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಿರುವುದು ವಿಶೇಷವಾಗಿದೆ. ಇಲ್ಲಿ ಚುಲಕ ಎಂಬ ಮುನಿಯೊಬ್ಬನು ತಪಸ್ಸು ಮಾಡಿದ್ದಾನೆ. ಹೀಗಾಗಿ ಇದನ್ನು ಆತನ ಹೆಸರಿನಿಂದಲೇ ಚುಳುಕಿ ಎಂದು

ಕರೆಯಲಾಗಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಶೈವ ದೇವಾಲಯವಿದೆ. ಆದರೆ ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ. ಈ ದೇವಾಲಯದ ಪರಿಸರದಲ್ಲಿ ಸಮಕಾಲೀನ ಶಿವಲಿಂಗ, ನಂದಿ ಇತ್ಯಾದಿ ಶಿಲ್ಪಗಳಿವೆ.

೨.೫..೩೫. ಚಿಂಚುಣಿಕೆ

ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನದಲ್ಲಿ ಚಿಂಚುಣಿಕೆ ಸ್ಥಳದ ಪ್ರಸ್ತಾಪವಿದೆ.[೭೧] ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ಹಣ್ಣಿಕೇರಿ ಗ್ರಾಮವಾಗಿದೆ. ಹುಣಸೆ ಗಿಡಗಳ ಕೇರಿ ಹಣ್ಣಿಕೇರಿ ಆಗಿರುವುದು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಮರಾಠಿಯ ಪ್ರಭಾವದಿಂದ ಹುಣಸೆ (ಹುಂಚಿ) ಚಿಂಚು ಎಂದಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಮಹಾಪ್ರಭು ಮುರಿಯರ ಕಲ್ಲಗಾವುಂಡನು ಇಲ್ಲಿ ಕ್ರಿ.ಶ. ೧೨೮೯ರಲ್ಲಿ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ್ದಾನೆ. ಕಾಲಾಂತರದಲ್ಲಿ ಇಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಆಚಾರ್ಯರು ಈ ಬಸದಿಯ ಮೇಲೆ ತಮ್ಮ ಹಿಡಿತವನ್ನು ಸಾಧಿಸಿ ಇದನ್ನು ಶೈವ ಧರ್ಮದ ದೇವಾಲಯವಾಗಿ ರೂಪಾಂತರಿಸಿದರು. ಪ್ರಸ್ತುತ ಈ ಬಸದಿಯ ಗರ್ಭಗೃಹದಲ್ಲಿ ಶಿವಲಿಂಗ ಪ್ರತಿಷ್ಠಾಪಿತವಾಗಿದೆ.

೨.೫.೩೬. ಚಿಂಚೋಳಿ

ರಾಯಬಾಗದ ಕ್ರಿ.ಶ. ೧೨೦೨ರ ಶಾಸನದಲ್ಲಿ ಚಿಂಚೋಳಿ ಸ್ಥಳದ ಉಲ್ಲೇಖವಿದೆ.[೭೨] ಇದು ಇಂದಿನ ರಾಯಬಾಗ ತಾಲ್ಲೂಕಿನಲ್ಲಿರುವ ಚಿಂಚಲಿ ಗ್ರಾಮವಾಗಿದೆ. ಇದು ಮೂಲತಃ ಚಿಂಚವಳ್ಳಿ ಆಗಿರುವುದು. ಇಲ್ಲಿ ಹುಣಸೆ ಗಿಡಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಮರಾಠಿಯ ಪ್ರಭಾವದಿಂದ ಹುಣಸೆ ಎಂಬುದು ಚಿಂಚು ಆಗಿರುವುದು. ಚಿಂಚು+ವಳ್ಳಿ=ಚಿಂಚುವಳ್ಳಿ>ಚಿಂಚೋಳಿ>ಚಿಂಚೋಲಿ>ಚಿಂಚಲಿ ಎಂದು ರೂಪಾಂತರವಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲದಿಂದಲೂ ಶಕ್ತಿ ಕೇಂದ್ರವಾಗಿರುವ ಈ ಗ್ರಾಮದಲ್ಲಿ ಮಾಯಕ್ಕನ ದೇವಾಲಯವಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ.

೨.೫.೩೭. ಜಳಾರಗ್ರಾಮ

ಗೋಕಾಕದ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ ಜಳಾರಗ್ರಾಮ ಸ್ಥಳದ ಉಲ್ಲೇಖವಿದೆ.[೭೩] ಜಳಾರ ಎಂಬುದು ಜಳ್ಳನೆ (ಬೆಳ್ಳನೆ) ಹರಿಯುವ ನೀರು ಎಂದರ್ಥ. ಪ್ರಾಯಶಃ ನದಿಯ ಅಥವಾ ಹಳ್ಳದ ಪಕ್ಕದಲ್ಲಿದ್ದ ಈ ಸ್ಥಳವು ಜಳಾರಗ್ರಾಮ ಎಂದು ಕರೆಯಲ್ಪಟ್ಟಿದೆ. ಇದು ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ. ಇದು ಜಲವಾಚಿ ಸ್ಥಳನಾಮವಾಗಿದೆ.

೨.೫.೩೮. ತೇರಿದಾಳ

ತೇರದಾಳದ ಕ್ರಿ.ಶ. ೧೧೨೩, ೧೧೮೧, ೧೧೮೭, ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನಗಳಲ್ಲಿ ತೇರಿದಾಳ ಸ್ಥಳದ ನಿರೂಪಣೆಯಿದೆ.[೭೪] ಇದು ಇಂದಿನ ಜಮಖಂಡಿ

ತಾಲ್ಲೂಕಿನ ತೇರದಾಳ ಗ್ರಾಮವಾಗಿದೆ. ಸ್ಥಳೀಯ ದೇವತೆಯ ಜಾತ್ರೆಯಲ್ಲಿ ತೇರನ್ನು ಎಳೆಯಲಾಗುತ್ತಿತ್ತು. ಹೀಗಾಗಿ ತೇರಿದಾಳ (ತೇರು+ಪಾಳ (ದಾಳ) = ತೇರಿದಾಳ) ಎಂದು ಕರೆಯಲಾಗಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ತೇರದಾಳವು ತೇರಿದಾಳ ಪನ್ನೆರಡು ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಗೋಂಕರಸನು ಇಲ್ಲಿ ತನ್ನ ಹೆಸರಿನಲ್ಲಿ ಗೋಂಕಜಿನಾಲಯವನ್ನು ನಿರ್ಮಿಸಿ ಇದರಲ್ಲಿ ನೇಮಿನಾಥ ತೀರ್ಥಂಕರನ ಶಿಲ್ಪವನ್ನು ಪ್ರತಿಷ್ಠಾಪಿಸಿದ್ದಾನೆ. ಈ ಬಸದಿ ಕಾಲಾಂತರದಲ್ಲಿ ಕೊಲ್ಲಾಪುರದ ರೂಪನಾರಾಯಣ ಬಸದಿಗೆ ಪ್ರತಿಬದ್ಧವಾಗಿತ್ತು. ಆ ಸಂದರ್ಭದಲ್ಲಿ ಸ್ಥಳೀಂಯ ಕಾಳಾಮುಖ ಶೈವರು (ಎಳ್ಕೋಟಿ ಯುವಸಂಖ್ಯಾತಗಣಗಳು) ಈ ಬಸದಿಯ ಮೇಲೆ ತಮ್ಮ ಹಿಡಿತವನ್ನು ಸಾಧಿಸಿ ಇದನ್ನು ಸ್ಥಳೀಯ ಮೂಲಸ್ಥಾನ ಕಲದೇವಸ್ವಾಮಿಗೆ ಪ್ರತಿಬದ್ಧಮಾಡಿ ಬಸದಿಯ ಸ್ಥಾನಾಚಾರ್ಯ ಪ್ರಭಾಚಂದ್ರಪಂಡಿತದೇವನಿಗೆ ಜೋಗವಟ್ಟಿಗೆಯನ್ನು ಕೊಟ್ಟು, ಬಸದಿಯ ಮೇಲೆ ಶೂದ್ರಕ, ಸಿಂಹ, ಚಕ್ರ ಚಿಹ್ನೆಗಳು, ತ್ರಿಶೂಲ, ಘಂಟೆಯನ್ನು ನಿಲ್ಲಿಸಿದ ಕುರಿತು ಶಾಸನಾಧಾರವಿದೆ. ಈ ಬಸದಿ ಅಂದು ಶೈವ ಮತ್ತು ಜೈನರ ಮಧ್ಯದಲ್ಲಿದ್ದ ಸಂಬಂಧಗಳ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ.

೨.೫.೩೯. ದಿಗ್ಗಜವಾಡ

ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನದಲ್ಲಿ ದಿಗ್ಗಜವಾಡ ಸ್ಥಳದ ಪ್ರಸ್ತಾಪವಿದೆ.[೮೫] ಇದು ಇಂದಿನ ರಾಯಬಾಗ ತಾಲ್ಲೂಕಿನಲ್ಲಿರುವ ದಿಗ್ಗೇವಾಡಿ ಗ್ರಾಮವಾಗಿದೆ. ದಿಗ್ಗಜ ಎಂದರೆ ಶ್ರೇಷ್ಠರು ಎಂದರ್ಥ. ಇಲ್ಲಿಯ ವೀರರು ಶ್ರೇಷ್ಠರಾಗಿದ್ದರು. ಪ್ರಸ್ತುತ ವೀರಗಲ್ಲು ಶಾಸನವೂ ಇದನ್ನು ದೃಢಪಡಿಸುತ್ತದೆ. ದಿಗ್ಗಜರ+ವಾಡ (ಊರು/ಹಳ್ಳಿ) >ದಿಗ್ಗಜವಾಡ>ದಿಗ್ಗೇವಾಡಿ ಎಂದು ರೂಪಾಂತರವಾಗಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೫ನೆಯ ಶತಮಾನದ ಶಿವಲಿಂಗ, ನಂದಿ ಇತ್ಯಾದಿ ಶಿಲ್ಪಾವಶೇಷಗಳಿವೆ. ಇಲ್ಲಿ ಶೈವ ದೇವಾಲಯವೊಂದಿದ್ದು, ಕಾಲಾಂತರದಲ್ಲಿ ಸಮೂಲನಾಶವಾಗಿರುವುದನ್ನು ದೃಢಪಡಿಸುತ್ತವೆ.

೨.೫.೪೦. ದೇರಿದಾಳ

ತೇರ್ಣಿಯ ಕ್ರಿ.ಶ. ೧೦೬೨ರ ಶಾಸನದಲ್ಲಿ ದೇರಿದಾಳ ಸ್ಥಳದ ಉಲ್ಲೇಖವಿದೆ.[೮೬] ಇದು ಇಂದಿನ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ ತಾಲ್ಲೂಕಿನಲ್ಲಿದೆ. ದೇವರ+ಹಾಳ=ದೇರಿಹಾಳ>ದೇರಿದಾಳ ಎಂದು ರೂಪಾಂತರವಾಗಿದೆ. ಇದು ದೈವವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕೊಲ್ಲಾಪುರದ ಶಿಲಾಹಾರ ಮನೆತನದ ಕಾಲಾವಧಿಯಲ್ಲಿ ನಿರ್ಮಾಣವಾದ ಕಲ್ಮೇಶ್ವರ ದೇವಾಲಯವಿದೆ. ಇದು ಸಮಕಾಲೀನ ಶೈವ ವಾಸ್ತು ಕಲೆಯ ಅಧ್ಯಯನಕ್ಕೆ ಅಪರೂಪದ ಆಕರವಾಗಿದೆ.

೨.೫.೪೧. ನಾಗನೂರು

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ನಾಗನೂರು ಸ್ಥಳದ ಪ್ರಸ್ತಾಪವಿದೆ.[೮೭] ಇದು ಗೋಕಾಕ ತಾಲ್ಲೂಕಿನಲ್ಲಿರುವ ನಾಗನೂರು ಗ್ರಾಮವಾಗಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದಲೂ

ನಾಗನೂರು ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಿರುವುದು ವಿಶೇಷವಾಗಿದೆ. ಇಲ್ಲಿ ನಾಗದೇವತೆಯ ಆರಾಧನೆ ವಿಶೇಷವಾಗಿತ್ತು. ಇದು ದೈವವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಮುಖ ಜೈನ ಕೇಂದ್ರವಾಗಿತ್ತು. ಇಲ್ಲಿಯ ಹನುಮಾನ ದೇವಾಲಯದ ಹತ್ತಿರ ಕ್ರಿ.ಶ. ಸುಮಾರು ೧೨ನೆಯ ಶತಮಾನದ ತೀರ್ಥಂಕರನ ಭಗ್ನ ಶಿಲ್ಪವಿದೆ.

೨.೫.೪೨. ನಿಟ್ಟೂರು

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ನಿಟ್ಟೂರು ಸ್ಥಳದ ಉಲ್ಲೇಖವಿದೆ.[೭೮] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಖಾನಾಪುರ ತಾಲ್ಲೂಕಿನ ನಿಟ್ಟೂರು ಗ್ರಾಮವಾಗಿದೆ. ನಿಡಿದಾದ+ಊರು=ನಿಟ್ಟೂರು ಎಂದು ಕರೆಯಲ್ಪಟ್ಟಿದೆ. ಈ ಗ್ರಾಮವು ಬೆಟ್ಟದ ಇಳಿಜಾರು ಪ್ರದೇಶದಲ್ಲಿದೆ. ಇದು ಪ್ರಾಚೀನ ಕಾಲದಿಂದಲೂ ನಿಟ್ಟೂರು ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಿರುವುದು ವಿಶೇಷವಾಗಿದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ಇದು ಗೋವೆಯ ಕಾದಂಬರ ಆಳ್ವಿಕೆಯ ಕಾಲಾವಧಿಯಲ್ಲಿ ಪಲಸಿಗೆ ಪನ್ನಿರ್ಚ್ಛಾಸಿರ ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿತ್ತು.

೨.೫.೪೩. ನೂಲೆ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ನೂಲೆ ಸ್ಥಳದ ಉಲ್ಲೇಖವಿದೆ.[೭೯] ಇದು ಇಂದಿನ ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ ತಾಲ್ಲೂಕಿನಲ್ಲಿರುವ ನೂಲಿ ಗ್ರಾಮವಾಗಿದೆ. ನೂಲು ಎಂದರೆ ಬಟ್ಟೆಯನ್ನು ನೂಲುವುದು ಎಂದರ್ಥ. ಅಂದು ನೂಲಿ ಗ್ರಾಮವು ಬಟ್ಟೆಯನ್ನು ನೂಲುವುದಕ್ಕೆ ಹೆಸರುವಾಸಿಯಾಗಿತ್ತು. ಅಂತಾಗಿ ಇದನ್ನು ನೂಲೆ>ನೂಲಿ ಎಂದು ಕರೆಯಲಾಗಿದೆ. ಈ ಗ್ರಾಮವು ಕೂಹುಂಡಿನಾಡಿನ ನೂಲೆನಾಡು ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಬಿಡಿ ವಾಸ್ತು-ಶಿಲ್ಪಾವಶೇಷಗಳು ಹರಡಿಕೊಂಡಿವೆ.

೨.೫.೪೪. ನೇಸರಿಗೆ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ನೇಸರಿಗೆ ಸ್ಥಳದ ಉಲ್ಲೇಖವಿದೆ.[೮೦] ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮವಾಗಿದೆ. ನೇಸರಿಗೆ>ನೇಸರಿಗಿ ಎಂದು ಪರಿವರ್ತನೆಯಾಗಿದೆ. ನೇಸರ ಎಂಬುದು ಸೂರ್ಯ ಎಂದರ್ಥ. ಸೂರ್ಯನು ಹುಟ್ಟುವ ಊರು ಅಥವಾ ಪೂರ್ವಕ್ಕಿರುವ ಹಳ್ಳಿ ಎಂಬರ್ಥದಲ್ಲಿ ಇದು ನೇಸರಿಗೆ ಎಂದು ಕರೆಯಲ್ಪಟ್ಟಿದೆ. ಇದು ದಿಕ್‌ವಾಚಿ ಸ್ಥಳನಾಮವಾಗಿದೆ. ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಹಿರಿಯ ಅಗ್ರಹಾರವಾಗಿತ್ತು. ಇಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾದ ಜೈನ ಬಸದಿಯಿದೆ. ಇದು ಯಾವುದೋ ಕಾಲದಲ್ಲಿ ಶೈವ ಧರ್ಮದ ವೀರಭದ್ರ ದೇವಾಲಯವಾಗಿ ಪರಿವರ್ತನೆಯಾಗಿದೆ. ಇದರ ಹೊರಭಾಗವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗಿದ್ದು, ಒಳಭಾಗವು ಮೂಲ ಸ್ವರೂಪದಲ್ಲಿ ಉಳಿದು ಬಂದಿದೆ.

ಇದು ರಟ್ಟರ ಕಾಲಾವಧಿಯ ಜೈನ ವಾಸ್ತುಕಲೆಗೆ ಉತ್ತಮ ನಿದರ್ಶನವಾಗಿದೆ. ಪ್ರಸ್ತುತ ದೇವಾಲಯದ ಹತ್ತಿರ ಸಮಕಾಲೀನ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪವಿದೆ. ಇದು ಮೂಲತಃ ಬಸದಿಯ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ಶಿಲ್ಪವಾಗಿದೆ. ಹೀಗಾಗಿ ಇಲ್ಲಿಯ ಬಸದಿಯು ಪಾರ್ಶ್ವನಾಥನದ್ದಾಗಿತ್ತೆಂದು ದೃಢಪಡುತ್ತದೆ. ಹಾಗೆಯೇ ಇಲ್ಲಿಯ ಶಾಸನದಲ್ಲಿ ಬಾಚೆಯನಾಯಕನ ಧರ್ಮಪತ್ನಿ ಮಾಯಾದೇವಿ ಮಾಣಿಕೇಶ್ವರ ಮತ್ತು ಮಹೇಶ್ವರ ದೇವಾಲಯಗಳನ್ನು ನಿರ್ಮಿಸಿದ ಪ್ರಸ್ತಾಪವಿದೆ. ಇಲ್ಲಿಯ ಕಲ್ಮೇಶ್ವರ ದೇವಾಲಯವೇ ಶಾಸನೋಕ್ತ ಮಹೇಶ್ವರ ದೇವಾಲಯವಾಗಿರುವಂತೆ ತೋರುತ್ತದೆ.

೨.೫.೪೫. ಪಸಣಕಾಗೆ

ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಪಸಣಕಾಗೆ ಸ್ಥಳದ ಪ್ರಸ್ತಾಪವಿದೆ.[೮೧] ಇದು ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ. ಪ್ರಾಯಶಃ ರಾಯಬಾಗದ ಪ್ರಾಚೀನ ಹೂವಿನಬಾಗೆ ಅಥವಾ ಪೂವಿನಬಾಗೆ ಎಂಬ ಹೆಸರೇ ತಪ್ಪಾಗಿ ಪಸಣಕಾಗೆ ಎಂದು ದಾಖಲಾಗಿರುವಂತೆ ತೋರುತ್ತದೆ.

೨.೫.೪೬. ಪಸುಂಡಿ, ಹಸುಂಡಿ

ಅಸುಂಡಿಯ ಕ್ರಿ.ಶ. ೧೦೯೩, ಸವದತ್ತಿಯ ಕ್ರಿ.ಶ. ೧೨೨೮ ಮತ್ತು ಬೆಳವಡಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಪಸುಂಡಿ ಸ್ಥಳದ ಉಲ್ಲೇಖವಿದೆ.[೮೨] ಇದನ್ನು ಹಸುಂಡಿ ಎಂತಲೂ ಕರೆಯಲಾಗಿದೆ. ಇದು ಇಂದಿನ ಸವದತ್ತಿ ತಾಲ್ಲೂಕಿನಲ್ಲಿರುವ ಅಸುಂಡಿ ಗ್ರಾಮವಾಗಿದೆ. ಪಶುಗಳು (ಹಸುಗಳು) ನೀರು ಕುಡಿಯುವ ತಾಣವೇ ಪಸು(ಹಸು)+ಗುಂಡಿ>ಪಸುಂಡಿ>ಹಸುಂಡಿ>ಅಸುಂಡಿ ಎಂದು ಪರಿವರ್ತನೆಯಾಗಿದೆ. ಇದು ಪ್ರಾಣಿವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಸಿದ್ಧ ಅಗ್ರಹಾರವಾಗಿದ್ದ ಈ ಗ್ರಾಮದ ಹಾಳೂರದಲ್ಲಿ (ಮಲಪ್ರಭಾ ನದಿಯ ತೀರದಲ್ಲಿ) ಕ್ರಿ.ಶ. ಸುಮಾರು ೧೧ನೆಯ ಶತಮಾನದ ದೇವಾಲಯಗಳ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ. ಬನಶಂಕರಿ ದೇವಾಲಯದ ಹತ್ತಿರ ಜೈನ ಶಾಸನದ ತುಂಡು ಶಿಲೆಯಿದೆ. ಇಲ್ಲಿಯ ಶ್ರೀ ಅಡಿವೆಪ್ಪ ಬಾಳಪ್ಪ ಜೈನರ ಅವರ ಮನೆಯ ಹತ್ತಿರ ಯಾವುದೋ ಕಾರ್ಯಕ್ಕಾಗಿ ಅಗೆಯುತ್ತಿದ್ದ ಸಂದರ್ಭದಲ್ಲಿ ದೊರೆತ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಕಿತ್ತೂರಿನ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆ. ಈ ಎಲ್ಲ ಕುರುಹುಗಳು ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ಪಾರ್ಶ್ವನಾಥ ಬಸದಿ ಇತ್ತೆಂಬುದನ್ನು ದೃಢಪಡಿಸುತ್ತದೆ.

೨.೫.೪೭. ಪುಲಿಗೆರೆವಳ್ಳಿ

ಸವದತ್ತಿಯ ಕ್ರಿ.ಶ. ೧೦೯೮ರ ಶಾಸನದಲ್ಲಿ ಪುಲಿಗೆರೆವಳ್ಳಿ ಸ್ಥಳದ ಉಲ್ಲೇಖವಿದೆ.[೮೩] ಇದು ಇಂದಿನ ಸವದತ್ತಿ ತಾಲ್ಲೂಕಿನ ಹುಲಿಕಟ್ಟಿ ಗ್ರಾಮವಾಗಿದೆ. ಇಲ್ಲಿ ಹೂಲಿಯ ಗಿಡಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಸಾಮಾನ್ಯವಾಗಿ ಈ ಗಿಡಗಳನ್ನು ಬುಟ್ಟಿಯನ್ನು ಹೆಣೆಯಲು ಬಳಸಲಾಗುತ್ತದೆ.

ಹೂಲಿಯವಳ್ಳಿ>ಪುಲಿಗೆರೆವಳ್ಳಿ> ಪುಲಿಗೆರೆ>ಹುಲಿಗೇರಿ>ಹುಲಿಕೇರಿ>ಹುಲಿಕಟ್ಟಿ ಎಂದು ರೂಪಾಂತರವಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ. ಹೀಗಾಗಿ ಇಲ್ಲಿ ದೇವಾಲಯವೊಂದು ನಿರ್ಮಾಣವಾಗಿದ್ದು, ಯಾವುದೋ ಕಾಲದಲ್ಲಿ ಸಮೂಲನಾಶವಾದಂತೆ ತೋರುತ್ತದೆ.

೨.೫.೪೮. ಪೂಲಿ

ಸವದತ್ತಿಯ ಕ್ರಿ.ಶ. ೧೦೮೭, ೧೨೨೮ರ ಮತ್ತು ಹೂಲಿಯ ಕ್ರಿ.ಶ. ೧೦೪೫ರ ಶಾಸನಗಳಲ್ಲಿ ಪೂಲಿ ಸ್ಥಳದ ಪ್ರಸ್ತಾಪವಿದೆ.[೮೪] ಇದನ್ನು ಪುಲಿಪುರ, ಪುಲಿಗ್ರಾಮ, ಪೂವಳ್ಳಿ, ಹೂಲಿ ಎಂತಲೂ ಕರೆಯಲಾಗಿದೆ. ಇದು ಇಂದಿನ ಸವದತ್ತಿ ತಾಲ್ಲೂಕಿನಲ್ಲಿರುವ ಹೂಲಿ ಗ್ರಾಮವಾಗಿದೆ. ಇಲ್ಲಿ ಹೂವಿನ ತೋಟಗಳು ಯಥೇಚ್ಛವಾಗಿದ್ದವು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಕೂಹುಂಡಿನಾಡಿನ ಆಗ್ನೇಯ ಭಾಗದ ಮೇರೆಯಲ್ಲಿತ್ತು. ಚಾಳುಕ್ಯ ಚಕ್ರವರ್ತಿ ಮಹಾ ಅಗ್ರಹಾರವಾಗಿದ್ದ ಇದು ನೇರವಾಗಿ ಅರಸನ ಪ್ರೋತ್ಸಾಹದಲ್ಲಿತ್ತು. ಬೆಳ್ವೊಲನಾಡಿನಲ್ಲಿ (ಬೆಳ್ವೊಲ-೩೦೦) ಸೇರ್ಪಡೆಯಾಗಿದ್ದ ಈ ಗ್ರಾಮವು ಆ ನಾಡಿನ ಹದಿನೆಂಟು ಅಗ್ರಹಾರಗಳಿಗೆ ಮುಕುಟವಾಗಿತ್ತು. ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನದಲ್ಲಿ ಜೈನ, ಶೈವ, ವೈಷ್ಣವ ಧರ್ಮಗಳ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು.[೮೫] ಈ ಗ್ರಾಮದ ಪರಿಸರದಲ್ಲಿ ಹೂಲಿ ಗಿಡಗಳು ಯಥೇಚ್ಛವಾಗಿದ್ದರಿಂದ ಪೂಲಿ>ಹೂಲಿ ಎಂದು ರೂಪಾಂತರವಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಬಾದಾಮಿ ಚಲುಕ್ಯರ ಕಾಲದಿಂದಲೂ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಪಡೆದಿರುವ ಈ ಗ್ರಾಮದಲ್ಲಿ ಸವದತ್ತಿ ರಟ್ಟ ಮನೆತನದ ಮಹಾರಾಣಿ ಲಚ್ಚಿಯಬ್ಬರಸಿ ಕ್ರಿ.ಶ. ೧೦೪೫ರಲ್ಲಿ ಅಗ್ರಹಾರ ಹೂಲಿಯ ಊರೊಡೆಯರಾದ ಸಾವಿರ ಮಹಾಜನರ (ಅಗ್ರಹಾರದ ಬ್ರಾಹ್ಮಣರು) ಪಾದಗಳನ್ನು ತೊಳೆದು ವಿನಂತಿಸಿ ಅವರಿಂದ ಭೂಮಿಯನ್ನು ಪಡೆದು ಬಸದಿಯನ್ನು ಮಾಡಿಸಿದ ಕುರಿತು ಶಾಸನಾಧಾರವಿದೆ. ಆ ಬಸದಿಯೇ ಇಂದಿನ ಪಂಚಲಿಂಗೇಶ್ವರ ದೇವಾಲಯವಾಗಿದೆ. ಇದು ಕನ್ನಡನಾಡಿನಲ್ಲಿ ಜೈನ ವಾಸ್ತುಕಲೆಯ ಅಧ್ಯಯನದಲ್ಲಿ ಮೇರುಕೃತಿಯಾಗಿದೆ.

೨.೫.೪೯. ಬಮ್ಮಣವಾಡ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಬಮ್ಮಣವಾಡ ಸ್ಥಳದ ಉಲ್ಲೇಖವಿದೆ.[೮೬] ಇದು ಇಂದಿನ ಬೆಳಗಾವಿ ತಾಲ್ಲೂಕಿನ ಬಮ್ಮಣವಾಡವಾಗಿದೆ. ಇಲ್ಲಿ ಬ್ರಹ್ಮನ ಆರಾಧನೆ ಇಂದಿಗೂ ಮುಂದುವರೆದು ಬಂದಿದೆ. ಹೀಗಾಗಿ ಇದು ಮೂಲತಃ ಬ್ರಹ್ಮನಪಾಳ್ಯವಾಗಿದ್ದು, ಮರಾಠಿಯ ಪ್ರಭಾವದಿಂದ ಬಮ್ಮಣ+ವಾಡ=ಬಮ್ಮಣವಾಡ ಎಂದಾಗಿರುವುದು. ಇದು ದೈವವಾಚಿ ಸ್ಥಳನಾಮವಾಗಿದೆ. ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು.

೨.೫.೫೦. ಬಾಗೇವಾಡಿ

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೨೪೯ರ ಶಾಸನದಲ್ಲಿ ಬಾಗೇವಾಡಿ ಸ್ಥಳದ ನಿರೂಪಣೆಯಿದೆ.[೮೭] ಇದು ಇಂದಿನ ಬೆಳಗಾವಿ ತಾಲ್ಲೂಕಿನ ಹಿರೆಬಾಗೇವಾಡಿ ಗ್ರಾಮವಾಗಿದೆ. ಇದು ಮೂಲತಃ ಭಾಗ್ಯವಾಡಿ ಎಂದಾಗಿದೆ. ಇದು ವಸತಿವಾಚಿ ಸ್ಥಳನಾಮವಾಗಿದೆ. ಕ್ರಮೇಣ ಇಲ್ಲಿಯ ಕೆಲವು ಜನರು ಬೇರೆಡೆಗೆ ವಲಸೆ ಹೋಗಿ ನೆಲೆಸಿದರು. ಅದು ಚಿಕ್ಕಬಾಗೇವಾಡಿ ಎಂದು ಕರೆಯಲ್ಪಡುತ್ತಿದೆ. ಹಿರೆಬಾಗೇವಾಡಿ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೧–೧೨ನೆಯ ಶತಮಾನದ ಬಿಡಿ ವಾಸ್ತು–ಶಿಲ್ಪಾವಶೇಷಗಳು ಹರಡಿಕೊಂಡಿವೆ. ಇದರಿಂದ ಇಲ್ಲಿ ಅಂದು ದೇವಾಲಯವೊಂದು ನಿರ್ಮಾಣವಾಗಿದ್ದು, ಯಾವುದೋ ಕಾಲದಲ್ಲಿ ನಾಶವಾದಂತೆ ತೋರುತ್ತದೆ.

೨.೫.೫೧. ಬಾಮಿನಾಳ

ಜಗನೂರದ ಕ್ರಿ.ಶ. ೧೧೬೭ರ ಶಾಸನದಲ್ಲಿ ಬಾಮಿನಾಳ ಸ್ಥಳದ ಪ್ರಸ್ತಾಪವಿದೆ.[೮೮] ಇಲ್ಲಿದ್ದ ಬಾವಿಯ ಹಿನ್ನೆಲೆಯಲ್ಲಿ ಇದು ಬಾಮಿನಾಳ (ಬಾವಿನ+ಪಾಳ (ನಾಳ) = ಬಾಮಿನಾಳ) ಎಂದು ಕರೆಯಲ್ಪಟ್ಟಿದೆ. ಇದು ಜಲವಾಚಿ ಸ್ಥಳನಾಮವಾಗಿದೆ. ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ.

೨.೫..೫೨. ಬೆಟ್ಟಸುರ

ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಬೆಟ್ಟಸುರ ಸ್ಥಳದ ಉಲ್ಲೇಖವಿದೆ.[೮೯] ಇದು ಇಂದಿನ ಸವದತ್ತಿ ತಾಲ್ಲೂಕಿನಲ್ಲಿರುವ ಬೆಟಸೂರು ಗ್ರಾಮವಾಗಿದೆ. ಬೆಟ್ಟದ ಬದಿಯಲ್ಲಿರುವ ಊರು ಬೆಟ್ಟಸುರ ಆಗಿರುವುದು. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ.

೨.೫.೫೩. ಬೆಲ್ಗೊಡ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಬೆಲ್ಗೊಡ ಸ್ಥಳದ ಉಲ್ಲೇಖವಿದೆ.[೯೦] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಬೆಳಗುಂದಿ ಗ್ರಾಮವಾಗಿದೆ. ಬೆಳ್+ಕೊಡ=ಬೆಲ್ಗೊಡ ಎಂಬುದು ಬಿಳಿಯ ಗುಡ್ಡ (ಬೆಟ್ಟ) ಎಂದರ್ಥ. ಬೆಲ್ಗೊಡ>ಬೆಳಗುಂದಿ ಎಂದು ಪರಿವರ್ತನೆಯಾಗಿದೆ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಇಲ್ಲಿ ಕಲ್ಮೇಶ್ವರ ದೇವಾಲಯ ನಿರ್ಮಾಣವಾಗಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಸ್ವರೂಪವು ಸ್ಪಷ್ಟವಾಗುವುದಿಲ್ಲ.

೨.೫.೫೪. ಬೆಳಗಲೆ

ಮಂಟೂರದ ಕ್ರಿ.ಶ. ೧೦೩೩ (ವೀರಗಲ್ಲು), ಬೆಳಗಾವಿಯ ಕ್ರಿ.ಶ. ೧೨೦೪, ಕಲ್ಲೋಳೆಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ ಬೆಳಗಲೆ ಸ್ಥಳದ ಉಲ್ಲೇಖವಿದೆ.[೯೧] ಇದು ಇಂದಿನ ಮುಧೋಳ ತಾಲ್ಲೂಕಿನಲ್ಲಿರುವ ಬೆಳಗಲಿ ಗ್ರಾಮವಾಗಿದೆ. ಬೆಳ್ (ಬಿಳಿಯ)+ಕೊಳ್=ಬೆಳಗಲೆ ಆಗಿರುವುದು. ಇಲ್ಲಿಯ

ನೀರಿನಾಸರೆಯ ಹಿನ್ನೆಲೆಯಲ್ಲಿ ಇದು ಬೆಳಗಲೆ ಎಂದು ಕರೆಯಲ್ಪಟ್ಟಿದೆ. ಬಿಳಿಯಕೊಳ್ಳ>ಬೆಳಗಲೆ>ಬೆಳಗಲಿ ಎಂದು ಪರಿವರ್ತನೆಯಾಗಿದೆ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಇಲ್ಲಿ ಸವದತ್ತಿಯ ರಟ್ಟರ ಕಾಲಾವಧಿಯ ತ್ರುಟಿತ ಶಾಸನಗಳಾದಿ ಬಿಡಿ ವಾಸ್ತು-ಶಿಲ್ಪಾವಶೇಷಗಳು ಚದುರಿಕೊಂಡಿವೆ.

೨.೫.೫೫. ಬೆಳ್ವಬ್ಬೆ

ಬೆಳವಿಯ ಕ್ರಿ.ಶ. ೧೦೫೩ರ ಶಾಸನದಲ್ಲಿ ಬೆಳ್ವಬ್ಬೆ ಸ್ಥಳದ ಉಲ್ಲೇಖವಿದೆ.[೬೨] ಇದನ್ನು ಬೆಳ್ಳಂಬಿ ಎಂತಲೂ ಕರೆಯಲಾಗಿದೆ. ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಬೆಳವಿ ಗ್ರಾಮವಾಗಿದೆ. ಇಲ್ಲಿಯ ಬೆಳವಬ್ಬೆ ಎಂಬಾತಳು ಮಹಾಸತಿಯಾಗಿದ್ದಾಳೆ. ಅವಳನ್ನು ಸ್ಥಳೀಯರು ತಾಯಿ ರೂಪದಲ್ಲಿ ಗೌರವಿಸಿದ್ದಾರೆ. ಇಲ್ಲಿರುವ ಮಹಾಸತಿಗಲ್ಲುಗಳು ಇದನ್ನು ದೃಢಪಡಿಸುತ್ತವೆ. ಬೆಳವಬ್ಬೆ>ಬೆಳ್ವಬ್ಬೆ>ಬೆಳವಿ ಎಂದು ರೂಪಾಂತರವಾಗಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಇಲ್ಲಿ ಇತ್ತೀಚೆಗೆ ನಿರ್ಮಾಣವಾದ ಬಸದಿಯಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪವಿದೆ. ಇದರಿಂದ ಈ ಗ್ರಾಮದಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪಾರ್ಶ್ವನಾಥನ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ.

೨.೫.೫೬. ಬೆಳ್ವಾಡಿ, ಬೆಳ್ವಡಿ

ಬೆಳವಡಿಯ ಕ್ರಿ.ಶ. ೧೦೭೦ ಮತ್ತು ೧೦೭೫ರ ಶಾಸನಗಳಲ್ಲಿ ಬೆಳ್ವಾಡಿ, ಬೆಳ್ವಡಿ ಸ್ಥಳದ ನಿರೂಪಣೆಯಿದೆ.[೬೩] ಇದು ಇಂದಿನ ಬೈಲಹೊಂಗಲ ತಾಲ್ಲೂಕಿನ ಬೆಳವಡಿ ಗ್ರಾಮವಾಗಿದೆ. ಬಿಳಿಯ+ವಾಡಿ=ಬೆಳ್ವಾಡಿ (ಬೆಳ್ವಡಿ) ಆಗಿರುವುದು. ವಾಡಿ ಎಂಬುದು ಮರಾಠಿ ಪದವಾಗಿದೆ. ಬೆಳ್ವಡಿ>ಬೆಳ್ವಾಡಿ>ಬೆಳವಾಡಿ>ಬೆಳವಡಿ ಎಂದು ರೂಪಾಂತರವಾಗಿದೆ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ನಿರ್ಮಾಣವಾದ ವೀರಭದ್ರ ದೇವಾಲಯವಿದೆ. ಇದು ಮೂಲತಃ ಜೈನ ಬಸದಿಯಾಗಿದೆ. ಇದನ್ನು ಸವದತ್ತಿಯ ರಟ್ಟ ಮನೆತನದ ಕನ್ನಕೈರನು ನಿರ್ಮಿಸಿದ್ದಾನೆ. ಸ್ಥಳೀಯ ಶಾಸನಗಳಲ್ಲಿ ಇದು ಸಹಸ್ರಕೂಟ ಜಿನಾಲಯ ಎಂದು ಕರೆಯಲ್ಪಟ್ಟಿದೆ. ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವ ಈ ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದ್ದ ಕುರುಹುಗಳಿವೆ.

೨.೫.೫೭. ಮತ್ತಿವಾಡ

ಭೈರಾಪುರದ ಕ್ರಿ.ಶ. ೧೨೩೭ರ ಶಾಸನದಲ್ಲಿ ಮತ್ತಿವಾಡ ಸ್ಥಳದ ಉಲ್ಲೇಖವಿದೆ.[೬೪] ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಮತ್ತಿವಾಡ ಗ್ರಾಮವಾಗಿದೆ. ಇಲ್ಲಿ ಮತ್ತಿಯ ಮರಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಈಗಲೂ ಇಲ್ಲಿ ಮತ್ತಿಯ ಮರಗಳು ಕಾಣುತ್ತವೆ. ಮೂಲತಃ ಇದು ಮತ್ತಿಯೂರು ಆಗಿರುವುದು. ಮರಾಠಿಯ ಪ್ರಭಾವದಿಂದ ಮತ್ತಿವಾಡ ಎಂದಾಗಿರುವುದು. ಇದು ಸಸ್ಯವಾಚಿ ಸ್ಥಳನಾಮವಾಗಿದೆ.

೨.೫.೫೮. ಮುಗುಳಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಮುಗುಳಿ ಸ್ಥಳದ ಪ್ರಸ್ತಾಪವಿದೆ.[೯೫] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ (ಕಮಲ ಬಸದಿ) ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಮುಗಳಿ ಗ್ರಾಮವಾಗಿದೆ. ಮೂಲತಃ ಇದು ಮುಗಳವಳ್ಳಿ ಆಗಿರುವುದು. ಇಲ್ಲಿಯ ಗಿಡಗಳು ಯಾವಾಗಲೂ ಮುಗಳದಿಂದ (ಚಿಗುರು) ಕೂಡಿರುತ್ತಿದ್ದವು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದಲೂ ಮುಗಳಿ ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಿರುವುದು ವಿಶೇಷವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ. ಇವು ಇಲ್ಲಿ ದೇವಾಲಯ ಇತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ.

೨.೫.೫೯. ಮುದುವೊಳಲು

ಮುಧೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಮುದುವೊಳಲು ಸ್ಥಳದ ನಿರೂಪಣೆಯಿದೆ.[೯೬] ಇದು ಇಂದಿನ ತಾಲ್ಲೂಕು ಕೇಂದ್ರ ಮುಧೋಳ ಪಟ್ಟಣವಾಗಿದೆ. ಇದು ಮೂಲತಃ ಮುದ್ದುಪೊಲಳ್ ಎಂದಾಗಿದೆ. ಮುದ್ದು+ಪೊಲಳ್=ಸುಂದರವಾದ ಹಳ್ಳಿ ಎಂದರ್ಥ. ಮುದುವೊಳಲು>ಮುದೊಳಲು>ಮುಧೋಳ ಎಂದು ಪರಿವರ್ತನೆಯಾಗಿದೆ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಕವಿಚಕ್ರವರ್ತಿ ರನ್ನನ ಜನ್ಮಸ್ಥಳವಾದ ಇಲ್ಲಿ ಬಾದಾಮಿಯ ಚಲುಕ್ಯರ ಕಾಲದಿಂದಲೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿ ಬಂದಿರುವುದಕ್ಕೆ ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳು ನಿದರ್ಶನಗಳಾಗಿವೆ.

೨.೫.೬೦. ಮೂಲವಳ್ಳಿ, ಮುನಿಪುರ, ಮುನೀಂದ್ರವಳ್ಳಿ, ಮುನಿವಳ್ಳಿ

ಬೆಳಗಾವಿಯ ಕ್ರಿ.ಶ. ೧೨೦೪, ಸವದತ್ತಿಯ ಕ್ರಿ.ಶ. ೧೨೨೮ರ ಶಾಸನಗಳಲ್ಲಿ ಮೂಲವಳ್ಳಿ ಸ್ಥಳದ ನಿರೂಪಣೆಯಿದೆ.[೯೭] ಹಾಗೆಯೇ ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಮುನಿಪುರ ಮತ್ತು ಕ್ರಿ.ಶ. ೧೨೫೨ರ ಶಾಸನದಲ್ಲಿ ಮುನೀಂದ್ರವಳ್ಳಿ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಷಿಧಿ ಶಾಸನಗಳಲ್ಲಿ ಮುನಿವಳ್ಳಿ ಸ್ಥಳಗಳ ಪ್ರಸ್ತಾಪಗಳಿವೆ.[೯೮] ಈ ನಾಲ್ಕೂ ಸ್ಥಳನಾಮಗಳು ಇಂದಿನ ಸವದತ್ತಿ ತಾಲ್ಲೂಕಿನ ಮುನವಳ್ಳಿ ಗ್ರಾಮದ ಪ್ರಾಚೀನ ಹೆಸರುಗಳಾಗಿವೆ. ಜೈನ ಧರ್ಮದ ಪ್ರಭಾವ ಸೂಚಕದ ಇದು ಮುನಿಗಳಿರುವ+ಹಳ್ಳಿ> ಮುನೀಂದ್ರವಳ್ಳಿ>ಮುನಿಪುರ>ಮೂಲವಳ್ಳಿ>ಮುನಿವಳ್ಳಿ>ಮುನವಳ್ಳಿ ಎಂದು ಪರಿವರ್ತನೆಯಾಗಿದೆ. ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಮುನಿಪುರವು ತೆಂಗು, ಕಂಗು, ಜಂಬುರಸ, ಮಾಧುಫಲ, ಪಮಸಾಂಬ್ರ, ನಿಂಬೆ, ಲವಂಗ, ವೀಳ್ಯದೆಲೆ ಮೊದಲಾದ ತೋಟಗಳಿಂದ ಕಂಗೊಳಿಸುತ್ತಿತ್ತೆಂಬ ವರ್ಣನೆಯಿದೆ. ಇಲ್ಲಿ ಕೊಲ್ಲಾಪುರದ ಶಿಂಧೆ ಸರದಾರನು ಕೋಟೆಯನ್ನು ಕಟ್ಟಿಸಿದ್ದಾನೆ. ಹೀಗಾಗಿ ಇದನ್ನು ಸಿಂಧ್ಯಾ ಮುನವಳ್ಳಿ, ಸಿಂಧ್ಯಾ ಮುನ್ನೊಳ್ಳಿ ಎಂತಲೂ ಕರೆಯಲಾಗುತ್ತದೆ. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಇಲ್ಲಿ ಪಂಚಲಿಂಗೇಶ್ವರ

ಬೆಳಗಾವಿ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಸೊರಟೂರು, ಬಂಕಾಪುರ ಮೊದಲಾದ ಅನೇಕ ಜೈನ ಕೇಂದ್ರಗಳಿಗೆಲ್ಲ ಉಪಾಸನೆಯ ಸ್ಥಳವಾಗಿತ್ತು.[೧೦೧] ಇಲ್ಲಿರುವ ಎಲ್ಲಮ್ಮದೇವಿ ದೇವಾಲಯವು ಮೂಲತಃ ಸವದತ್ತಿಯ ರಟ್ಟ ಮನೆತನದ ಪಟ್ಟಜಿನಾಲಯವಾಗಿತ್ತು.

೨.೫.೬೩. ಮೊಸರಗುತ್ತಿ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಮೊಸರಗುತ್ತಿ ಸ್ಥಳದ ನಿರೂಪಣೆಯಿದೆ.[೧೦೨] ಇದು ಇಂದಿನ ಹುಕ್ಕೇರಿ ತಾಲ್ಲೂಕಿನಲ್ಲಿರುವ ಮಸರಗುಪ್ಪಿ ಗ್ರಾಮವಾಗಿದೆ. ಈ ಸ್ಥಳದಲ್ಲಿ ಗೌಳಿಗರು ವಾಸವಾಗಿದ್ದು, ಹೈನುಗಾರಿಕೆಯಲ್ಲಿ ನಿರತರಾಗಿದ್ದರು. ಈಗಲೂ ಈ ಗ್ರಾಮವು ಹೈನುಗಾರಿಕೆಗೆ ಪ್ರಸಿದ್ಧವಾಗಿದೆ. ಮೊಸರು+ಗುತ್ತಿ (ದಿನ್ನೆ/ಬೆಟ್ಟ)>ಮೊಸರಗುಪ್ಪಿ>ಮಸರಗುಪ್ಪಿ ಎಂದು ರೂಪಾಂತರವಾಗಿದೆ. ಇದು ವೃತ್ತಿವಾಚಿ ಸ್ಥಳನಾಮವಾಗಿದೆ. ಇಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಬಿಡಿ ವಾಸ್ತು-ಶಿಲ್ಪಾವಶೇಷಗಳು ಹರಡಿಕೊಂಡಿವೆ. ಇದರಿಂದ ಈ ಗ್ರಾಮದಲ್ಲಿ ದೇವಾಲಯವೊಂದು ನಿರ್ಮಾಣವಾಗಿದ್ದು, ಅದು ಕಾಲಾಂತರದಲ್ಲಿ ಸಮೂಲನಾಶವಾಗಿರುವಂತೆ ತೋರುತ್ತದೆ.

೨.೫.೬೪. ಮೋದಿಣಿ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಮೋದಿಣಿ ಸ್ಥಳದ ನಿರೂಪಣೆಯಿದೆ.[೧೦೩] ಇದು ಇಂದಿನ ರಾಯಬಾಗ ತಾಲ್ಲೂಕಿನ ಮೊರಬ ಗ್ರಾಮವಾಗಿದೆ. ಮೋದಿಣಿ>ಮೊರಗಾ>ಮೊರಬ ಎಂದು ರೂಪಾತರವಾಗಿದೆ. ಇಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಕುರುಹುಗಳು ಗೋಚರಿಸುವುದಿಲ್ಲ.

೨.೫.೬೫. ಮಂಟೂರು

ಮಂಟೂರದ ಕ್ರಿ.ಶ. ೧೦೩೩ರ ವೀರಗಲ್ಲು ಶಾಸನದಲ್ಲಿ ಮಂಟೂರು ಸ್ಥಳದ ಉಲ್ಲೆಖವಿದೆ.[೧೦೪] ಇದು ಇಂದಿನ ಮುಧೋಳ ತಾಲ್ಲೂಕಿನ ಮಂಟೂರು ಗ್ರಾಮವಾಗಿದೆ. ಇದು ವಸತಿವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಮುಖ ಪಟ್ಟಣವಾಗಿತ್ತು.

೨.೫.೬೬. ರಾಜಧಾನಿ ರೂವಿಗೆ

ರೂಗಿಯ ಕ್ರಿ.ಶ. ೧೨೧೮ರ ಶಾಸನದಲ್ಲಿ ರಾಜಧಾನಿ ರೂವಿಗೆ ಸ್ಥಳದ ಉಲ್ಲೇಖವಿದೆ.[೧೦೫] ಇದು ಇಂದಿನ ಮುಧೋಳ ತಾಲ್ಲೂಕಿನ ರೂಗಿ ಗ್ರಾಮವಾಗಿದೆ. ಇದು ಮೂಲತಃ ರೂಹುಗೆ ಆಗಿರುವುದು. ರೂಹು ಎಂಬುದು ಗುರುತು (ಚಿಹ್ನೆ) ಎಂದರ್ಥ. ಇದು ದೈವವಾಚಿ(?) ಸ್ಥಳನಾಮವಾಗಿದೆ. ದೇವಗಿರಿಯ ಸೇವುಣರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಗ್ರಾಮವು ಸಮಕಾಲೀನ ಉಪ ಆಡಳಿತ ವಿಭಾಗವೊಂದರ ಕೇಂದ್ರ ಪಟ್ಟಣವಾಗಿತ್ತು.

೨.೫.೬೭. ಲಟ್ಟೆ

ಖಡಕಲಾಟದ ಕ್ರಿ.ಶ. ೧೧೪೭ರ ಶಾಸನದಲ್ಲಿ ಲಟ್ಟೆ ಸ್ಥಳದ ನಿರೂಪಣೆಯಿದೆ.[೧೦೬] ಇದು ಇಂದಿನ ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ ಗ್ರಾಮವಾಗಿದೆ. ರಟ್ಟ>ಲಟ್ಟ ಎಂಬುದು ಲಾಟ ಎಂದು, ಲಾಟಕ್ಕೆ ಹಿಂದೆ ಖಡಕ (ಕಲ್ಲುಮಿಶ್ರಿತ ಮಣ್ಣು) ಪದ ಸೇರಿಕೊಂಡು ಖಡಕಲಾಟ ಎಂದು

ರೂಪಾಂತರವಾಗಿದೆ. ಇದು ಶಿಲಾವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಕೂಹುಂಡಿನಾಡಿನಲ್ಲಿ ಪ್ರಸಿದ್ಧ ಅಗ್ರಹಾರವಾಗಿತ್ತು. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಪಾರ್ಶ್ವನಾಥ ಬಸದಿ ನಿರ್ಮಾಣವಾಗಿದೆ. ಗರ್ಭಗೃಹದಲ್ಲಿ ಪಾರ್ಶ್ವನಾಥನ ಕಾಯೋತ್ಸರ್ಗ ಶಿಲ್ಪವಿದೆ. ಈ ಬಸದಿ ಮತ್ತು ಶಿಲ್ಪ ಸಮಕಾಲೀನ ಜೈನ ವಾಸ್ತು-ಶಿಲ್ಪಕಲೆಯ ಅಧ್ಯಯನಕ್ಕೆ ಅಪರೂಪದ ಆಕರಗಳಾಗಿವೆ.

೨.೫.೬೮. ವೇಣುಗ್ರಾಮ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ ವೇಣುಗ್ರಾಮ ಸ್ಥಳದ ನಿರೂಪಣೆಯಿದೆ.[೧೦೭] ಇದನ್ನು ವೇಣುಗ್ರಾಮೆ ಎಂತಲೂ ಕರೆಯಲಾಗಿದೆ. ಇದು ಇಂದಿನ ಜಿಲ್ಲಾ ಕೇಂದ್ರ ಬೆಳಗಾವಿ ನಗರವಾಗಿದೆ. ಇದು ಕೂಹುಂಡಿನಾಡಿನ ವೇಣುಗ್ರಾಮೆ ಎಪ್ಪತ್ತು ಉಪ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪೂರ್ವಾರ್ಧದಿಂದ ೧೩ನೆಯ ಶತಮಾನದ ಉತ್ತರಾರ್ಧದವರೆಗೂ ಸವದತ್ತಿಯ ರಟ್ಟ ಮನೆತನದ ರಾಜಧಾನಿಯಾಗಿತ್ತು. ಈ ನಗರದ ಪರಿಸರದಲ್ಲಿ ಬಿದಿರು ಅಧಿಕವಾಗಿದ್ದರಿಂದ ವೇಣು(ಬಿದಿರು)ಗ್ರಾಮ>ವೇಳುಗ್ರಾಮ>ಬೇಳುಗ್ರಾಮ>ಬೆಳಗಾವ>ಬೆಳಗಾವಿ ಎಂದು ಪರಿವರ್ತನೆಯಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಕಾಲಾಂತರದಲ್ಲಿ ಇದು ಮರಾಠಿ ಭಾಷೆಯ ಪ್ರಭಾವದಿಂದ ಬೆಳಗಾಂವ>ಬೆಳಗಾಂವಿ ಎಂದೂ, ಇಂಗ್ಲಿಷ ಭಾಷೆಯ ಪ್ರಭಾವದಿಂದ ಬೆಳಗಾಮ್ ಎಂದೂ ಕರೆಯಲ್ಪಟ್ಟಿದೆ. ಇಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ಕ್ರಿ.ಶ. ೧೨೦೪ರಲ್ಲಿ ನೇಮಿನಾಥ ಬಸದಿಯನ್ನು ನಿರ್ಮಿಸಿ ಭೂದಾನ ಮಾಡಿದ್ದಾನೆ. ಪ್ರಸ್ತುತ ಕೋಟೆಯ ಆವರಣದಲ್ಲಿರುವ ಈ ಬಸದಿಯ ಮಹಾಮಂಟಪದಲ್ಲಿ ಚಿತ್ತಾಕರ್ಷಕವಾದ ಕಮಲಧ (ಪದ್ಮ) ಕೆತ್ತನೆಯಿದೆ. ಹೀಗಾಗಿ ಈ ಬಸದಿ ಕಮಲ ಬಸದಿ ಎಂದು ಜನಜನಿತವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಕೋಟೆಯನ್ನು ವಿಜಾಪುರದ ಆದಿಲ್‌ಷಾಹಿ ಮನೆತನದ ಸರದಾರ ಅಸದಖಾನನು ಕ್ರಿ.ಶ. ೧೫೧೧ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದಾನೆ. ಕಮಲ ಬಸದಿಯ ಆವರಣದಲ್ಲಿ ಮತ್ತೊಂದು ಬಸದಿಯಿದೆ. ಆದರೆ ಇದರಲ್ಲಿ ಯಾವುದೇ ಶಿಲ್ಪಗಳು ಇರುವುದಿಲ್ಲ. ಹೀಗಾಗಿ ಇದು ಯಾವ ತೀರ್ಥಂಕರನ ಬಸದಿ ಎಂಬುದು ಸ್ಪಷ್ಟವಿಲ್ಲ.

೨.೫.೬೯. ಸುಗಂಧವರ್ತಿ

ಸವದತ್ತಿಯ ಕ್ರಿ.ಶ. ೮೭೫-೭೬, ೯೮೦, ೧೦೮೭, ೧೨೨೮, ಯಡ್ರಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಸುಗಂಧವರ್ತಿ (ಸುಗನ್ಧವರ್ತ್ತಿ) ಸ್ಥಳದ ನಿರೂಪಣೆಯಿದೆ.[೧೦೮] ಸವದತ್ತಿಯ ಶಾಸನದಲ್ಲಿ ಈ ಸ್ಥಳದ ನೈಸರ್ಗಿಕ ಸೌಂದರ್ಯವನ್ನು-

> ಹೊಳವೊಳಲೋಳ್ವರಾಜಿಸುವಚೂತವನಂ ಗಿರಿಸಂಕುಳಂ
> ಫಳಂದಿರಿಗಿದನಾಳಿಕೇರವನುಪ್ಪುವಶೋಕವನಂ ಶಿವಾಲಯಂ
> ಮಿರಿಪಜಿನೇಂದ್ರಗೇಹಮನಿಪಿಂತಿವರಿನ್ದನಶೇಷ ಸೌಖ್ಯದೊಳ್ನೆರೆದು
> ಸುಗನ್ದವರ್ತಿಸಲೆ ಕೂಂಡಿಮಹಿತಿದೊಳ್ ವಿರಾಜಿಕುಂ ॥

ಎಂದು ಬಣ್ಣಿಸಲಾಗಿದೆ. ಎಲ್ಲಮ್ಮದೇವಿ ದೇವಾಲಯದ ಗುಡ್ಡದ ಹಿಂಬದಿಯಲ್ಲಿ ನಿರಂತವಾಗಿ ಹರಿಯುವ ಸುಗಂಧ ವಾಸನೆಯ ನೀರಿನ ವರತಿಯಿಂದ ಈ ಸ್ಥಳಕ್ಕೆ ಸುಗಂಧವರ್ತಿ ಎಂಬ ಹೆಸರು ಬಂದಿರುವಂತೆ ತೋರುತ್ತದೆ. ಇದು ಇಂದಿನ ತಾಲ್ಲೂಕು ಕೇಂದ್ರವಾದ ಸವದತ್ತಿ ಪಟ್ಟಣವಾಗಿದೆ. ಆದರೆ ಸವದತ್ತಿ ಎಂಬುದು ಸಂಸ್ಕೃತದ ಸುಗಂಧವರ್ತಿ ಪದದಿಂದ ಬಂದ ತದ್ಭವ ರೂಪವಲ್ಲ. ವಾಸ್ತವವಾಗಿ ಇದರ ತದ್ವಿರುದ್ಧ ಭಾಷಿಕ ಪ್ರಕ್ರಿಯೆಯಾಗಿದೆ. ಸವದತ್ತಿ ಎಂಬುದನ್ನು ಸಂಸ್ಕೃತಗೊಳಿಸಿದ ರೂಪವೆ ಸುಗಂಧವರ್ತಿಯಾಗಿದೆ. ಇದರ ಮೂಲ ಶಬ್ಧ ಸವಣದತ್ತಿ ಎಂಬುದಾಗಿದೆ. ಜೈನ ಧರ್ಮದ ಮುನಿಗಳನ್ನು ಸಂಸ್ಕೃತದಲ್ಲಿ ಶ್ರಮಣರು ಮತ್ತು ಪ್ರಾಕೃತದಲ್ಲಿ ಸವಣರು ಎಂದು ಕರೆಯಲಾಗುತ್ತದೆ. ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ಇಂದಿನ ಎಲ್ಲಮ್ಮದೇವಿ ದೇವಾಲಯದ ಗುಡ್ಡದ ಪರಿಸರವು ಯಾಪನೀಯ ಸಂಘದ ಕಾರೆಯಗಣದ ಮೈಳಾಪತೀರ್ಥ (ಮೈಳಾಪಾನ್ವಯ) ಪರಂಪರೆಯ ಮುನಿಗಳ ಪ್ರಧಾನ ಕೇಂದ್ರವಾಗಿತ್ತು. ಎಲ್ಲಮ್ಮದೇವಿ ದೇವಾಲಯವು ಮೂಲತಃ ರಟ್ಟರ ಪಟ್ಟಜಿನಾಲಯವಾಗಿತ್ತು.

ಮಳಖೇಡದ ರಾಷ್ಟ್ರಕೂಟ ಮತ್ತು ರಟ್ಟ ಮನೆತನದ ಆಳರಸರಾದಿ ಅಧಿಕಾರಿಗಳು ಹಾಗೂ ಸಮಕಾಲೀನ ಪ್ರಜೆಗಳು ಮೈಳಾಪತೀರ್ಥದ ಮುನಿಗಳಿಗೆ ದಾನ-ದತ್ತಿಯಾಗಿ ಕೊಡಲ್ಪಟ್ಟ ಸ್ಥಳವೇ ಸವಣದತ್ತಿಯಾಗಿದೆ. ಇದನ್ನು ಸವದತ್ತಿಯ ಕ್ರಿ.ಶ. ೧೩೨೮ರ ಶಾಸನದಲ್ಲಿಯ 'ಸವಂದತ್ತಿಯ ಸವಣಬೊಲದ....' ಎಂಬ ನಿರೂಪಣೆಯೂ ದೃಢಪಡಿಸುತ್ತದೆ. ಅಂತಾಗಿ ಸವಣದತ್ತಿ ಎಂಬ ಶಬ್ದರೂಪ ಕ್ರಮೇಣ ಜನರ ಉಚ್ಚಾರಣೆಗೆ ಅನುಕೂಲವಾಗುವಂತೆ ಹೊರಳುತ್ತ ಸುಗನ್ಧವರ್ತಿ>ಸುಗಂಧವರ್ತಿ> ಸವಣದತ್ತಿ>ಸಂವದತ್ತಿ >ಸೌಂದತ್ತಿ>ಸೌದತ್ತಿ>ಸವದತ್ತಿ ಎಂಬ ಸ್ವನ ವ್ಯತ್ಯಾಸಗಳನ್ನು ಪಡೆದಿರುವುದು ಮನದಟ್ಟಾಗುತ್ತದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ. ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಭಾಗವೆಲ್ಲವೂ ಜೈನಧರ್ಮೀಯರ ನೆಲೆವೀಡಾಗಿತ್ತು. ಸುಗಂಧವರ್ತಿ ರಟ್ಟ ಮನೆತನದ ಪ್ರಾರಂಭದ ರಾಜಧಾನಿಯಾಗಿತ್ತು.[೧೦೯] ಸ್ಥಳೀಯ ಶಾಸನದಲ್ಲಿ 'ಲಕ್ಷ್ಮಿದೇವರಸಂ ಧಾರಾಪೂರ್ವಕಂ ಕೊಟ್ಟ ಸವದತ್ತಿಯ ಸಣದಾರಿಯಿಂದ ಪಡುವಲ್' ಎಂಬ ಪ್ರಸ್ತಾಪದಿಂದ ಇದು ರಟ್ಟರ ಕಾಲಾವಧಿಯಲ್ಲಿಯೇ ಸವದತ್ತಿ ಎಂದು ಕರೆಯಲ್ಪಡುತ್ತಿತ್ತೆಂದು ಸ್ಪಷ್ಟವಾಗುತ್ತದೆ.[೧೧೦] ರಟ್ಟರ ಅವನತಿಯ ತರುವಾಯ ಮೈಳಾಪತೀರ್ಥದ ಕೂಷ್ಮಾಂಡಿನಿದೇವಿಯ ಬಸದಿ ರೇಣುಕಾದೇವಿಯ (ಎಲ್ಲಮ್ಮದೇವಿ) ದೇವಾಲಯವಾಗಿ ಪರಿವರ್ತಿತವಾಗಿದೆ. ಕ್ರಿ.ಶ. ಸುಮಾರು ೧೭ನೆಯ ಶತಮಾನದಲ್ಲಿ ಸುಗಂಧವರ್ತಿ ಪ್ರದೇಶವು ಮರಾಠರ ಶಿವಾಜಿಯ ಆಡಳಿತಕ್ಕೊಳಪಟ್ಟ ತರುವಾಯ ಆತನ ಅಧಿಕಾರಿಗಳು ಇಲ್ಲಿ ರಟ್ಟ ಮನೆತನದ ೧ನೆಯ ಕಾರ್ತವೀರ್ಯನು ಕ್ರಿ.ಶ. ೯೮೦ರಲ್ಲಿ ಕಟ್ಟಿಸಿದ್ದ ಕೋಟೆಯನ್ನು ಜೀರ್ಣೋದ್ಧಾರ ಮಾಡಿಸಿ ಇದಕ್ಕೆ ಪರಶುರಾಮನ ಸ್ಮರಣಾರ್ಥವಾಗಿ ಪರಸಗಡ ಎಂದು ಹೆಸರಿಟ್ಟರು. ಅಂತಾಗಿ ಇದು ೧೯ನೆಯ ಶತಮಾನದವರೆಗೂ ಪರಸಗಡ ಎಂದು ಕರೆಯಲ್ಪಟ್ಟಿದೆ.[೧೧೧]

೨.೫.೭೦. ಸೆಳ್ಳಸರಳಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಸೆಳ್ಳಸರಳಿ ಸ್ಥಳದ ನಿರೂಪಣೆಯಿದೆ.[೨] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ (ಕಮಲ ಬಸದಿ) ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಸುಳಗಾ ಗ್ರಾಮವಾಗಿದೆ. ಸೆಳ್ಳಸರಳಿ>ಸುಳಗಾ ಎಂದು ಪರಿವರ್ತನೆಯಾಗಿದೆ.

೨.೫.೭೧. ಸೊಗಲ

ಸೊಗಲದ ಕ್ರಿ.ಶ. ೯೮೦, ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಸೊಗಲ ಸ್ಥಳದ ಪ್ರಸ್ತಾಪವಿದೆ.[೧೧೩] ಇದು ಇಂದಿನ ಸವದತ್ತಿ ತಾಲ್ಲೂಕಿನ ಸೊಗಲ ಗ್ರಾಮವಾಗಿದೆ. ಸೊಗೆ ಎಂಬುದು ಕಬ್ಬಿನ ಹೂವು ಎಂದರ್ಥ. ಈ ಪರಿಸರದಲ್ಲಿ ಕಬ್ಬು ಹೆಚ್ಚು ಬೆಳೆಯುತ್ತಿತ್ತು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಗ್ರಾಮವು ಪ್ರಾಚೀನ ಕಾಲದಿಂದಲೂ ಸೊಗಲ ಎಂಬ ಹೆಸರಿನಿಂದಲೇ ಕರೆಯಲ್ಪಡುತ್ತಿರುವುದು ವಿಶೇಷವಾಗಿದೆ. ಪ್ರಸ್ತುತ ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ ಈ ಸ್ಥಳವು ಮಾವು, ಕುಸುಮ, ನೇರಲೆ, ಬಾಳೆ ಇತ್ಯಾದಿ ಬನಗಳಿಂದ ಕಂಗೊಳಿಸುತ್ತಿತ್ತೆಂಬ ವರ್ಣನೆಯಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಗ್ರಾಮವು ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿತ್ತು.

೨.೫.೭೨. ಸಿಂದಿಕೆವೆಟ್ಟ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಸಿಂದಿಕೆವೆಟ್ಟ ಸ್ಥಳದ ಪ್ರಸ್ತಾಪವಿದೆ.[೧೪] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಆದರೆ ಇದು ಇಂದಿನ ಗೋಕಾಕ ತಾಲ್ಲೂಕಿನ ಸಿಂಧಿಕುರುಬೆಟ್ಟ ಗ್ರಾಮವಾಗಿದೆ. ಇಲ್ಲಿ ಸಿಂಧಿ ಮರಗಳು ಯಥೇಚ್ಚವಾಗಿ ಬೆಳೆಯುತ್ತಿದ್ದವು. ಇದು ಸಸ್ಯವಾಚಿ ಸ್ಥಳನಾಮವಾಗಿದೆ.

೨.೫.೭೩. ಹಂದ್ರಿಗುಂತಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹಂದ್ರಿಗುಂತಿ ಸ್ಥಳದ ಪ್ರಸ್ತಾಪವಿದೆ.[೫] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ ತಾಲ್ಲೂಕಿನ ಹಂದಿಗೂಡು ಗ್ರಾಮವಾಗಿದೆ. ಗುಂತಿ ಎಂಬುದು ದಿನ್ನೆ, ಬೆಟ್ಟ ಎಂಬರ್ಥ. ಹಂದಿಗಳು ಹೆಚ್ಚು ಇರುವ ಸ್ಥಳವು ಹಂದಿಗುಂತಿ ಎಂದು ಕರೆಯಲ್ಪಟ್ಟಿದೆ. ಹಂದ್ರಿಗುಂತಿ>ಹಂದಿಗುಂತಿ>ಹಂದಿಗೂಡು ಎಂದು ಪರಿವರ್ತನೆಯಾಗಿದೆ. ಇದು ಪ್ರಾಣಿವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಅವಶೇಷಗಳು ಗೋಚರಿಸುವುದಿಲ್ಲ.

೨.೫.೭೪. ಹರಿಗಬ್ಬೆಯಾಲೂರು

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಶಾಸನದಲ್ಲಿ ಹರಿಗಬ್ಬೆಯಾಲೂರು ಸ್ಥಳದ

ಉಲ್ಲೇಖವಿದೆ.[೧೧೬] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಮೂಲತಃ ಆಲೂರು ಎಂದಾಗಿತ್ತು. ಇಲ್ಲಿ ಹರಿಯ (ವಿಷ್ಣು) ದೇವಾಲಯ ನಿರ್ಮಾಣವಾದ ತರುವಾಯ ಇದು ಹರಿಗಬ್ಬೆಯಾಲೂರು ಎಂದು ಕರೆಯಲ್ಪಟ್ಟಿದೆ. ಆದರೆ ಇದು ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ. ಇದು ದೈವವಾಚಿ ಸ್ಥಳನಾಮವಾಗಿದೆ.

೨.೫.೭೫. ಹಲಸಿಗೆ

ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ ಹಲಸಿಗೆ ಸ್ಥಳದ ಉಲ್ಲೇಖವಿದೆ.[೧೧೭] ಇದನ್ನು ಪಲಸಿಗೆ, ಪಲಸಿ ಎಂತಲೂ ಕರೆಯಲಾಗಿದೆ. ಇದು ಇಂದಿನ ಖಾನಾಪುರ ತಾಲ್ಲೂಕಿನಲ್ಲಿರುವ ಹಲಸಿ ಗ್ರಾಮವಾಗಿದೆ. ಇದನ್ನು ಪಲಸಿ ಎಂತಲೂ ಕರೆಯಲಾಗಿದೆ. ಇಲ್ಲಿ ಹಲಸಿನ ಮರಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಇದು ಬನವಾಸಿ ಕದಂಬರ ಎರಡನೆಯ ರಾಜಧಾನಿಯಾಗಿತ್ತು. ಪಲಸಿಗೆ ಪನ್ನಿರ್ಚ್ಛಾಸಿರ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿದ್ದ ಇಲ್ಲಿ ಬನವಾಸಿ ಕದಂಬರ ಆಳ್ವಿಕೆಯ ಕಾಲಾವಧಿಯಿಂದಲೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿ ಬಂದಿವೆ. ಗೋವೆಯ ಕಾದಂಬರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಗ್ರಾಮದ ಪರಿಸರದಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣವಾಗಿವೆ. ಇವು ಸಮಕಾಲೀನ ವಾಸ್ತುಕಲೆಯ ದೃಷ್ಟಿಯಿಂದ ಅಪರೂಪದ್ದಾಗಿವೆ. ಇತ್ತೀಚೆಗೆ ಇಲ್ಲಿಯ ಬೆಟ್ಟದ ಪರಿಸರದಲ್ಲಿ ಡಾ. ಆರ್.ಎಂ. ಷಡಕ್ಷರಯ್ಯ ಅವರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಸಹಯೋಗದಲ್ಲಿ ಉತ್ಖನನವನ್ನು ಕೈಗೊಂಡು ಬನವಾಸಿಯ ಕದಂಬರ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಇಟ್ಟಿಗೆ ದೇವಾಲಯಗಳ ತಲಪಾಯಗಳನ್ನು ಬೆಳಕಿಗೆ ತಂದಿದ್ದಾರೆ.

೨.೫.೭೬. ಹಾರುನಗೇರಿ

ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ ಹಾರುನಗೇರಿ ಸ್ಥಳದ ಪ್ರಸ್ತಾಪವಿದೆ.[೧೧೮] ಇದು ಇಂದಿನ ರಾಯಬಾಗ ತಾಲ್ಲೂಕಿನಲ್ಲಿರುವ ಹಾರೂಗೇರಿ ಗ್ರಾಮವಾಗಿದೆ. ಇದು ಮೂಲತಃ ಹಾರ್ವಗೇರಿ ಆಗಿರುವುದು. ಮಹಾಜನರನ್ನು (ಬ್ರಾಹ್ಮಣರು) ಹಾರೂರು ಎಂತಲೂ ಕರೆಯಲಾಗುತ್ತದೆ. ಈ ಗ್ರಾಮದಲ್ಲಿ ಹಾರೂರ ಸಂಖ್ಯೆ ಅಧಿಕವಾಗಿತ್ತು. ಹೀಗಾಗಿ ಇದನ್ನು ಹಾರುವರ+ಕೇರಿ>ಹಾರುರಕೇರಿ>ಹಾರುನಗೇರಿ>ಹಾರೂರಗೇರಿ>ಹಾರೂಗೇರಿ ಎಂದು ಕರೆಯಲಾಗಿದೆ. ಪ್ರಾಯಶಃ ಇದು ಅಂದು ಅಗ್ರಹಾರವಾಗಿದ್ದಂತೆ ತೋರುತ್ತದೆ. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಕೆಲವು ಬಿಡಿ ವಾಸ್ತು–ಶಿಲ್ಪಾವಶೇಷಗಳು ಗೋಚರಿಸುತ್ತವೆ.

೨.೫.೭೭. ಹುಲಗನಗುತ್ತಿ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹುಲಗನಗುತ್ತಿ ಸ್ಥಳದ ಪ್ರಸ್ತಾಪವಿದೆ.[೧೧೯] ಬೆಳಗಾವಿಯಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಬೆಳಗಾವಿ

ತಾಲ್ಲೂಕಿನ ಹೂಲಿಕಟ್ಟಿ ಗ್ರಾಮವಾಗಿದೆ. ಈ ಪ್ರದೇಶದಲ್ಲಿ ಹೂಲಿ ಗಿಡಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಹುಲಗನಗುತ್ತಿ>ಹುಲಗನಗತ್ತಿ>ಹುಲಗನಗಟ್ಟಿ>ಹುಲಗಟ್ಟಿ>ಹುಲಿಕಟ್ಟಿ>ಹೂಲಿಕಟ್ಟಿ ಎಂದು ಪರಿವರ್ತನೆಯಾಗಿದೆ. ಈ ಗ್ರಾಮದಲ್ಲಿ ಶಾಸನಗಳಾದಿ ಯಾವುದೇ ಪುರಾತತ್ವ ಕುರುಹುಗಳು ಗೋಚರಿಸುವುದಿಲ್ಲ.

೨.೫.೭೮. ಹೂವಿನಬಾಗೆ, ಪೂವಿನಬಾಗೆ

ರಾಯಬಾಗದ ಕ್ರಿ.ಶ. ೧೦೪೦, ೧೧೨೭, ೧೧೩೯, ೧೨ನೆಯ ಶತಮಾನದ ಶಾಸನಗಳಲ್ಲಿ ಹೂವಿನಬಾಗೆ ಸ್ಥಳದ ಪ್ರಸ್ತಾಪವಿದೆ.[೧೨೦] ಇದು ಇಂದಿನ ತಾಲ್ಲೂಕು ಕೇಂದ್ರ ರಾಯಬಾಗ ಪಟ್ಟಣವಾಗಿದೆ. ಇದನ್ನು ಪೂವಿನಬಾಗೆ, ಕುಂತಣಬಾಗೆ ಎಂತಲೂ ಕರೆಯಲಾಗಿದೆ. ಸವದತ್ತಿಯ ರಟ್ಟ ಮನೆತನದ ಆಶ್ರಯದಲ್ಲಿದ್ದ ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರಗಣಿತ' (ಕ್ರಿ.ಶ. ೧೧೯೦) ಎಂಬ ಕಾವ್ಯದಲ್ಲಿ ಈ ಪಟ್ಟಣವನ್ನು–

ವನತತಿಯಿಂನದಿನದ ಕುಭೃತ್ಕುಲದಿಂಧನಧಾನ್ಯವರ್ಗದಿಂ ।
ಜನಪದ ರಾಜಿಯಿಂಬೆಳೆವಕೆಯ್ವೊಲದಿಂದೆ ಸೆವೊರ್ಗಳಿಂಜಗ ॥
ಜ್ಜನನುತ ಜೈನಧರ್ಮದನೆಗಟ್ಟಿಯೊಳಿಂಬಿನಕೊಂಡಿಮಂಡಲ ।
ಕ್ಕನುಪಮನರತ್ನ ಮಂಡನವೆನಿಪ್ಪುದು ಪೂವಿನಬಾಗೆ ಸಂತತಂ ॥
ಪೊಸಪೊಂಗೆದಗೇಜಾಜಿಪಾದರಿಸತ್ಸೇವಂತಿ ನೀಲಾಬ್ಜಮು ।
ದ್ವಸರೋಜಂಸುರಹೊನ್ನೆ ಸಂಪಿಗೆನವೋದ್ಯನ್ಮಲ್ಲಿ ಕಾಪ್ರಸೂ ॥
ನಸಮೂಹಂತನಿಗಂಪನೆಣ್ಣೆಸೆಗೆನಿಚ್ಚಂಬಿಟಲನ್ವರ್ಥಮಾ ।
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ॥
ವಿನುತರ್ ನೀತಿವಿದರ್ ಕರ ।
ಮನುನಯದಿಂದ ದಾನಧರ್ಮ ವಿವಿದಾಕಾರರ್ ॥
ಧನಕನಕ ಸಮೃದ್ಧರ್ ಪೂ ।
ವಿನಬಾಗೆಯ ವಿಪ್ರವೈಶ್ಯ ಶೂದ್ರಾದಿಜಂ ॥
ಜಾಗದ ಚಲದ ನೆಗೞ್ತೆಯ ।
ಭೋಗದ ಮಾನ್ಯತೆಯ ಜೈನಮತದ ಮಹತ್ವ ॥
ಕ್ಕಾಗರಮೆನೆಗಾರ್ಹಸ್ಥ್ಯಂ ।
ಬಾಗೆ ನಿಜಾನ್ವಯದ ಜನ್ಮಭೂಮಿಯೆನಿಕ್ಕುಂ ॥

ಎಂದು ಪೂವಿನಬಾಗೆಯ ಹಿರಿಮೆಯನ್ನು ಕೊಂಡಾಡಿದ್ದಾನೆ.[೧೨೧] ಇಲ್ಲಿದ್ದ ಹೂವಿನ ತೋಟಗಳಿಂದಾಗಿಯೇ ಇದು ಪೂವಿನಬಾಗೆ (ಪೂವು>ಹೂವು, ಬಾಗೆ>ತೋಟ) ಎಂದು ಕರೆಯಲ್ಪಟ್ಟಿದೆ. ತರುವಾಯ ಇದು ಕೊಲ್ಲಾಪುರದ ಶಾಹು ಮಹಾರಾಜರ ಆಡಳಿತದ ಕೇಂದ್ರವಾಗಿತ್ತು. ಅಂತಾಗಿ ಇದು ರಾಯರ+ಬಾಗ=ರಾಯಬಾಗ ಎಂದು ಕರೆಯಲ್ಪಟ್ಟಿದೆ. ಈ ಪಟ್ಟಣದ ಸುತ್ತಮುತ್ತಲಿನ ಜನಸಾಮಾನ್ಯರು ಇದನ್ನು ಬಾಗಿ, ಬಾಗೆ ಎಂತಲೂ ಕರೆಯುತ್ತಾರೆ. ಈ ಪಟ್ಟಣವು ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಮಹಾ ಘಟಿಕಾಸ್ಥಾನ ಮತ್ತು ಅಗ್ರಹಾರವಾಗಿತ್ತು. ಪ್ರಸ್ತುತ ಶಾಸನಗಳಲ್ಲಿ ಪೂವಿನಬಾಗೆಯು ಕೆರೆಗಳು, ಬಾವಿಗಳು, ಸತ್ರಗಳು, ಅರವಟ್ಟಿಗೆಗಳಿಂದ ಕಂಗೊಳಿಸುತ್ತಿತ್ತೆಂಬ ವರ್ಣನೆಯಿದೆ.

ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಈ ಪಟ್ಟಣದಲ್ಲಿ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಆದಿನಾಥ, ಮಹಾವೀರ ಬಸದಿಗಳು, ಸೋಮೇಶ್ವರ, ನರಸಿಂಹ ದೇವಾಲಯಗಳಿವೆ. ಇವು ಸಮಕಾಲೀನ ವಾಸ್ತುಕಲೆಯ ಅಧ್ಯಯನಕ್ಕೆ ಅಪರೂಪದ ಆಕರಗಳಾಗಿವೆ. ಇತ್ತೀಚೆಗೆ ಈ ಪಟ್ಟಣದ ಪಶ್ಚಿಮದಲ್ಲಿ ಮನೆಯ ನಿರ್ಮಾಣಕ್ಕಾಗಿ ಪಾಯವನ್ನು ತೊಡುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ. ಸುಮಾರು ೧೭–೧೮ನೆಯ ಶತಮಾನದ ಮೂವತ್ತೇಳು ಲೋಹದ ಜೈನ ಪ್ರತಿಮೆಗಳು ಬೆಳಕಿಗೆ ಬಂದಿವೆ.

೨.೫.೭೯. ಹಿಂಗಲಜೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹಿಂಗಲಜೆ ಸ್ಥಳದ ಪ್ರಸ್ತಾಪವಿದೆ.[೨೨] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಸಂಸ್ಕೃತದ ಇಂಗ ಎಂಬುದು ಕನ್ನಡದಲ್ಲಿ ಬೆಂಕಿ ಎಂದರ್ಥ. ಹಿಂಗುಲಾಂಬೆ ಪುರಾಣ ದೇವತೆಯಾಗಿದ್ದಾಳೆ. ಇವಳ ದೇವಾಲಯ ಅಥವಾ ಶಿಲ್ಪ ಇರುವ ಊರು ಹಿಂಗಲಜೆ ಆಗಿರುವುದು. ಇದು ದೈವವಾಚಿ ಸ್ಥಳನಾಮವಾಗಿದೆ. ಆದರೆ ಇದು ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ.

೨.೫.೮೦. ಹುಂಜಿಕೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹುಂಜಿಕೆ ಸ್ಥಳದ ನಿರೂಪಣೆಯಿದೆ.[೨೩] ಬೆಳಗಾವಿಯಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ನಿರ್ಮಿಸಿದ ನೇಮಿನಾಥ ಬಸದಿಗೆ ದಾನ ಕೊಟ್ಟ ಭೂಮಿಯು ಈ ಗ್ರಾಮದವರೆಗೂ ವಿಸ್ತರಿಸಿತ್ತು. ಇದು ಇಂದಿನ ಖಾನಾಪುರ ತಾಲ್ಲೂಕಿನ ಗುಂಜಿ ಗ್ರಾಮವಾಗಿದೆ. ಹುಂಜಗಳು ಇರುವಿಕೆಯಿಂದ ಹುಂಜಿಕೆ ಆಗಿರುವುದು. ಹುಂಜಿಕೆ>ಪುಂಜಿಕೆ>ಗುಂಜಿಕೆ>ಗುಂಜಿ ಎಂದು ಪರಿವರ್ತನೆಯಾಗಿದೆ. ಈ ಗ್ರಾಮದ ಪರಿಸರವು ಯಥೇಚ್ಛವಾಗಿ ಜವುಗು ಮತ್ತು ರಾಡಿಯಿಂದ ಕೂಡಿದ್ದು, ಅಂತಾಗಿ ಇದನ್ನು ಗರ್ಲಗುಂಜಿ ಎಂತಲೂ ಕರೆಯಲಾಗುತ್ತದೆ. ಇದು ನಿಸರ್ಗವಾಚಿ ಸ್ಥಳನಾಮವಾಗಿದೆ.

೨.೫.೮೧. ಹೊಂಗಲ

ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಹೊಂಗಲ ಸ್ಥಳದ ನಿರೂಪಣೆಯಿದೆ.[೨೪] ಇದು ಇಂದಿನ ತಾಲ್ಲೂಕು ಕೇಂದ್ರ ಬೈಲಹೊಂಗಲ ಪಟ್ಟಣವಾಗಿದೆ. ಈ ಪಟ್ಟಣದ ಪರಿಸರದಲ್ಲಿ ನೀರಿನ ಕೊಳವಿತ್ತು. ಇದನ್ನು ಹೊನ್+ಕೊಳ=ಬಂಗಾರದ ಕೊಳ್ಳ ಎಂದು ಕರೆಯಲಾಗುತ್ತಿತ್ತು. ಅಂತಾಗಿ ಇದು ಪೊನ್ನ+ಕೊಳ>ಪೊನ್ನಕೊಳ>ಪೊನ್ನಗೊಳ>ಹೊಂಗಲ ಎಂದು ರೂಪಾಂತರವಾಗಿದೆ. ಇದರ ಹಿಂದೆ ಬಳಸಿದ ಬೈಲ ಎಂಬ ಪದವು ಬೈಲಿನಲ್ಲಿದ್ದ ಕೊಳ (ಕೆರೆ) ಎಂಬುದನ್ನು ಸಂಕೇತಿಸುತ್ತದೆ. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಇಲ್ಲಿ ರಾಮಲೀಂಗೇಶ್ವರ ದೇವಾಲಯ ಮತ್ತು ಬಸದಿಯೊಂದು ನಿರ್ಮಾಣವಾಗಿದ್ದ ಕುರಿತು ಶಾಸನಾಧಾರಗಳಿವೆ. ರಾಮಲಿಂಗೇಶ್ವರ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದಿಗೂ ಉಳಿದು

ಬಂದಿದೆ. ಆದರೆ ಬಸದಿಯು ಯಾವುದೋ ಕಾಲದಲ್ಲಿ ಸಮೂಲನಾಶವಾಗಿದೆ.

೨.೬. ಕೂಹುಂಡಿನಾಡಿನ ಶಾಸನಗಳೋಕ್ತ ಇತರೆಡೆಯ ಸ್ಥಳನಾಮಗಳು

ಕೂಹುಂಡಿನಾಡಿನ ಪ್ರದೇಶದ ಶಾಸನಗಳಲ್ಲಿ ಇತರೆಡೆಯ ಕೆಲವು ಸ್ಥಳನಾಮಗಳು, ಆಡಳಿತ ವಿಭಾಗಗಳ ಪ್ರಸ್ತಾಪಗಳಿವೆ. ಅವುಗಳ ವಿವರಗಳು ಈ ಕೆಳಗಿನಂತಿವೆ.

೨.೬.೧. ಅಣ್ಣಿಗೇರಿ

ಕಲಬಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಅಣ್ಣಿಗೇರಿ ಸ್ಥಳದ ಪ್ರಸ್ತಾಪವಿದೆ.[೧೨೫] ಇದು ಇಂದಿನ ನವಲಗುಂದ ತಾಲ್ಲೂಕಿನ ಅಣ್ಣಿಗೇರಿ ಪಟ್ಟಣವಾಗಿದೆ. ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಮಾಸವಾಡಿ-೧೪೦ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ವಾಜಿವಂಶದ ಅಣ್ಣಿಗದೇವನು ಇಲ್ಲಿ ಕೆರೆಯನ್ನು ಕಟ್ಟಿಸಿದ್ದಾನೆ. ಹೀಗಾಗಿ ಇದು ಆತನ ಹೆಸರಿನಿಂದಲೇ ಅಣ್ಣಿಗೇರಿ ಎಂದು ಕರೆಯಲ್ಪಟ್ಟಿದೆ. ಇದು ವ್ಯಕ್ತಿವಾಚಿ ಸ್ಥಳನಾಮವಾಗಿದೆ. ಬೆಳ್ವೊಲ ಮುನ್ನೂರು ಆಡಳಿತ ವಿಭಾಗದ ರಾಜಧಾನಿಯಾಗಿತ್ತು. ಇಲ್ಲಿ ಬಾದಾಮಿ ಚಲುಕ್ಯರ ಕಾಲದಿಂದಲೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿ ಬಂದಿವೆ. ಪ್ರಾಯಶಃ ಅಂದು ಈ ಸ್ಥಳವು ಜೇಬುಳಗೇರಿ ಎಂದು ಕರೆಯಲ್ಪಡುತ್ತಿತ್ತು. ಇಲ್ಲಿರುವ ಪಾರ್ಶ್ವನಾಥ ಬಸದಿ ಮತ್ತು ಅಮೃತೇಶ್ವರ ದೇವಾಲಯ ವಾಸ್ತುಕಲೆಯ ದೃಷ್ಟಿಯಿಂದ ಅಪರೂಪವಾಗಿವೆ. ಆದಿಕವಿ ಪಂಪನ ಜನ್ಮಸ್ಥಳವಾದ ಇಲ್ಲಿ ಆತನ ವಂಶಸ್ಥರಾದ ದೇಶಪಾಂಡೆ ಮನೆತನದ ವಾಡೆಯಿದೆ.

೨.೬.೨. ಅಯ್ಯಾವೊಳೆ

ಬೇಡಕಿಹಾಳದ ಕ್ರಿ.ಶ. ೧೦೦೦ (ತಾಮ್ರಪಟ), ಖಡಕಲಾಟದ ಕ್ರಿ.ಶ. ೧೧೪೭, ತೇರದಾಳದ ಕ್ರಿ.ಶ. ೧೧೮೧ರ ಶಾಸನಗಳಲ್ಲಿ ಅಯ್ಯಾವೊಳೆ ಸ್ಥಳದ ಪ್ರಸ್ತಾಪವಿದೆ.[೧೨೬] ಇದು ಇಂದಿನ ಹುನಗುಂದ ತಾಲ್ಲೂಕಿನ ಐಹೊಳೆ ಗ್ರಾಮವಾಗಿದೆ. ಈ ಗ್ರಾಮದ ಪಕ್ಕದಲ್ಲಿ ಮಲಪ್ರಭಾ ನದಿ ಹರಿಯುತ್ತಿದೆ. ಈ ನದಿಯಿಂದಾಗಿಯೇ ಈ ಗ್ರಾಮಕ್ಕೆ ಐಹೊಳೆ ಎಂಬ ಹೆಸರು ಪ್ರಾಪ್ತವಾಗಿದೆ. ಇದು ಜಲವಾಚಿ ಸ್ಥಳನಾಮವಾಗಿದೆ. ಬಾದಾಮಿಯ ಚಲುಕ್ಯರ ಕಾಲಾವದಿಯಿಂದಲೂ ಸಾಂಸ್ಕೃತಿಕ ಕೇಂದ್ರವಾಗಿ ಮೆರೆದಿದೆ. ಅಯ್ಯಾವೊಳೆಯ ವ್ಯಾಪಾರಿ ಸಂಘದ ಸದಸ್ಯರು ಕೂಹುಂಡಿನಾಡಿನ ಪ್ರದೇಶದೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಹಾಗೆಯೇ ಇಲ್ಲಿಯ ಕೆಲವು ದೇವಾಲಯಗಳು ಮತ್ತು ಬಸದಿಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ.

೨.೬.೩. ಕೊಲ್ಲಾಪುರ

ತೇರದಾಳದ ಕ್ರಿ.ಶ. ೧೧೨೩, ೧೧೮೧ರ ಶಾಸನಗಳಲ್ಲಿ ಕೊಲ್ಲಾಪುರ ಸ್ಥಳದ ಉಲ್ಲೇಖವಿದೆ.[೧೨೭] ಇದು ಇಂದಿನ ಮಹಾರಾಷ್ಟ್ರ ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಕೊಲ್ಲಾಪುರ ನಗರವಾಗಿದೆ. ಇದು ಮೂಲತಃ ಕ್ಷುಲ್ಲಕಪುರವಾಗಿದೆ. ಪ್ರಸಿದ್ಧ ಜೈನ ಕೇಂದ್ರವಾಗಿದ್ದ ಇಲ್ಲಿ ಕ್ಷುಲ್ಲಕ (ದಿಗಂಬರ ಮುನಿಯ ಪೂರ್ವದ ಹಂತ) ಮುನಿಗಳು ಧರ್ಮಪ್ರಸಾರಗೈದಿದ್ದಾರೆ. ಇದು ದೈವವಾಚಿ ಸ್ಥಳನಾಮವಾಗಿದೆ.

ಕೊಲ್ಲಾಪುರದ ಶಿಲಾಹಾರರ ರಾಜಧಾನಿಯಾಗಿತ್ತು. ಇಲ್ಲಿರುವ ರೂಪನಾರಾಯಣ ಬಸದಿಗೆ ತೇರದಾಳದ ಗೋಂಕಜಿನಾಲಯವು ಪ್ರತಿಬದ್ಧವಾಗಿತ್ತು. ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನದಲ್ಲಿ ಕೊಲ್ಲಾಪುರಕ್ಕೂ ತೇರದಾಳಕ್ಕೂ ಇದ್ದ ಸಾಂಸ್ಕೃತಿಕ ಸಂಬಂಧವು ಗಮನಾರ್ಹವಾಗಿದೆ. ಇವೆರಡೂ ಅಂದು ಪ್ರಸಿದ್ಧ ಜೈನ ಕೇಂದ್ರಗಳಾಗಿದ್ದವು.

೨.೬.೪. ಜಯಂತಿಪುರ

ವಣ್ಣೂರದ ಕ್ರಿ.ಶ. ೧೧೧೪ರ ಶಾಸನದಲ್ಲಿ ಜಯಂತಿಪುರ ಸ್ಥಳದ ಪ್ರಸ್ತಾಪವಿದೆ.[೧೨೮] ಇದು ಇಂದಿನ ಉತ್ತರಕನ್ನಡ ಜಿಲ್ಲೆಯ ಬನವಾಸಿ ಗ್ರಾಮವಾಗಿದೆ. ಇದನ್ನು ವನವಾಸಿ ಎಂತಲೂ ಕರೆಯಲಾಗಿದೆ. ಇದು ವಸತಿವಾಚಿ ಸ್ಥಳನಾಮವಾಗಿದೆ. ದಕ್ಷಿಣ ಭಾರತದಲ್ಲಿ ಶಾತವಾಹನರ ತರುವಾಯ ಕದಂಬರು ಸ್ವತಂತ್ರವಾದ ಸಾಮ್ರಾಜ್ಯವನ್ನು ಸ್ಥಾಪಿಸಿ ಬನವಾಸಿ ನೆಲೆವೀಡಿನಿಂದ ಆಳ್ವಿಕೆ ಮಾಡಿದ್ದಾರೆ. ಇದು ಅಂದು ಬನವಾಸಿ ಪನ್ನಿರ್ಚ್ಛಾಸಿರ ಆಡಳಿತ ವಿಭಾಗದ ರಾಜಧಾನಿಯಾಗಿತ್ತು. ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿ ಇಲ್ಲಿಗೆ ಬೌದ್ಧ ಧರ್ಮದ ಪ್ರಸಾರಕರನ್ನು ಕಳುಹಿಸಿದ್ದನು. ಇಲ್ಲಿರುವ ಶಾತವಾಹನರ ಕಾಲಾವಧಿಯ ನಾಗಶಿಲ್ಪ, ಕ್ರಿ.ಶ. ಸುಮಾರು ೧೧ನೆಯ ಶತಮಾನದ ಮಧುಕೇಶ್ವರ ದೇವಾಲಯ ಗಮನೀಯವಾಗಿವೆ.

೨.೬.೫. ಧಾರಾನಗರ

ರಾಯಬಾಗದ ಕ್ರಿ.ಶ. ೧೦೭೭ರ ವೀರಗಲ್ಲು ಶಾಸನದಲ್ಲಿ ಧಾರಾನಗರ ಸ್ಥಳದ ಪ್ರಸ್ತಾಪವಿದೆ.[೧೨೯] ಇದು ಇಂದಿನ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಚಂದಗಡ ತಾಲ್ಲೂಕಿನಲ್ಲಿರುವ ರಾಧಾನಗರವಾಗಿದೆ. ಧಾರೇಶ್ವರ ಎಂಬ ದೇವತೆಯ ಹಿನ್ನೆಲೆಯಲ್ಲಿ ಇದು ಧಾರಾನಗರವಾಗಿದೆ. ದೈವವಾಚಿ ಸ್ಥಳನಾಮ ಎಂದೆನಿಸುತ್ತದೆ.

೨.೬.೬ ಬಳೆಯಪಟ್ಟಣ

ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಬಳೆಯಪಟ್ಟಣ ಸ್ಥಳದ ಉಲ್ಲೇಖವಿದೆ.[೧೩೦] ಇದು ಇಂದಿನ ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯ ಕಾರೆಪಟ್ಟಣ ಗ್ರಾಮವಾಗಿದೆ. ಇಲ್ಲಿ ಜೈನ ಬಳೆಗಾರಗಣ ಪರಂಪರೆಯ ಬಳೆಯನ್ನು ಮಾರುವ ಜನಾಂಗ ವಾಸವಾಗಿತ್ತು. ಇದು ಜನಾಂಗವಾಚಿ ಸ್ಥಳನಾಮವಾಗಿದೆ. ಇದು ಕೊಲ್ಲಾಪುರದ ಶಿಲಾಹಾರರ ಆಳ್ವಿಕೆಯ ಕಾಲಾವಧಿಯಲ್ಲಿ ಸಾಂಸ್ಕೃತಿಕ ಕೇಂದ್ರವಾಗಿತ್ತು.

೨.೬.೭. ಮಲೆಯಾಳ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಮಲೆಯಾಳ ಸ್ಥಳದ ನಿರೂಪಣೆಯಿದೆ.[೧೩೧] ಇದು ಇಂದಿನ ಕೇರಳ ರಾಜ್ಯದ ಪ್ರದೇಶವಾಗಿದೆ. ಮಲೆಯಾಳ ಪ್ರದೇಶದ ಅನೇಕ ವರ್ತಕರು ಕೂಹುಂಡಿನಾಡಿನ ಪ್ರದೇಶದೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು.

೨.೬.೮. ಮುದಗಾಲು

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೨೪೯ರ ಶಾಸನದಲ್ಲಿ ಮುದಗಾಲು ಸ್ಥಳದ ಉಲ್ಲೇಖವಿದೆ.[೧೩೨] ಇದು ಇಂದಿನ ರಾಯಚೂರು ಜಿಲ್ಲೆಯ ಮುದಗಲ್ಲು ಗ್ರಾಮವಾಗಿದೆ. ಮುದ್ದು+ಕಲ್ಲು=ಮುದಗಲ್ಲು

ಎಂದಾಗಿದೆ. ಇಲ್ಲಿಯ ಬೆಟ್ಟದಲ್ಲಿ ಮುದ್ದಾದ (ಮೃದುವಾದ) ಕಲ್ಲುಗಳು ಕಾಣುತ್ತವೆ. ಇದು ಶಿಲಾವಾಚಿ ಸ್ಥಳನಾಮವಾಗಿದೆ.

೨.೬.೯. ಮುಳಗುಂದ

ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಮುಳಗುಂದ ಸ್ಥಳದ ಪ್ರಸ್ತಾಪವಿದೆ.[೧೩೩] ಇದು ಇಂದಿನ ಗದಗ ತಾಲ್ಲೂಕಿನ ಮುಳುಗುಂದ ಗ್ರಾಮವಾಗಿದೆ. ಈ ಗ್ರಾಮದ ಬೆಟ್ಟದಲ್ಲಿ ಮುಳ್ಳಿನ ಕಂಟಿಗಳು ಯಥೇಚ್ಛವಾಗಿ ಬೆಳೆಯುತ್ತಿದ್ದವು. ಮುಳ್ಳಕುಂದ>ಮುಳಗುಂದ>ಮುಳುಗುಂದ ಎಂದಾಗಿದೆ. ಇದು ಸಸ್ಯವಾಚಿ ಸ್ಥಳನಾಮವಾಗಿದೆ. ಬಾದಾಮಿಯ ಚಲುಕ್ಯರ ಕಾಲದಿಂದಲೂ ಈ ಗ್ರಾಮದಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಸಾಗಿ ಬಂದಿವೆ. ಅಂದು ಬೆಳ್ವೊಲನಾಡಿನ ಮುಳುಗುಂದ ಪನ್ನೆರಡು ಉಪ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇಲ್ಲಿರುವ ಬೆಟ್ಟದ ಮೇಲ್ಭಾಗದ ಜೈನ ಬಸದಿಗಳು ಮತ್ತು ಗ್ರಾಮದ ದಕ್ಷಿಣ ಭಾಗದಲ್ಲಿರುವ ಸಿದ್ಧೇಶ್ವರ ದೇವಾಲಯ ಸಮಕಾಲೀನ ವಾಸ್ತುಕಲೆಯ ಅಧ್ಯಯನದ ದೃಷ್ಟಿಯಿಂದ ಗಮನಾರ್ಹವಾಗಿವೆ. ಸವದತ್ತಿಯ ರಟ್ಟ ಮನೆತನದ ಪೃಥ್ವೀರಾಮನು ಸುಗಂಧವರ್ತಿಯಲ್ಲಿ (ಇಂದಿನ ಸವದತ್ತಿ) ಕಟ್ಟಿಸಿದ ಜಿನೇಂದ್ರಭವನಕ್ಕೆ ಕಣ್ಣ ಎಂಬಾತನು ಮುಳಗುಂದದಲ್ಲಿ ಭೂದಾನ ಮಾಡಿದ ಶಾಸನಾಧಾರವಿದೆ.

೨.೬.೧೦. ವಳವಾಡ

ಯಕ್ಸಂಬಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ವಳವಾಡ ಸ್ಥಳದ ಪ್ರಸ್ತಾಪವಿದೆ.[೧೩೪] ಇದು ಇಂದಿನ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಚಂದಗಡ ತಾಲ್ಲೂಕಿನ ರಾಧಾನಗರ ಸಮೀಪವಿರುವ ವಳವಡೆ ಗ್ರಾಮವಾಗಿದೆ. ಮರಾಠಿ ಭಾಷೆಯ ವಳಕ ಎಂಬುದು ಕನ್ನಡದಲ್ಲಿ ಗುರುತು ಎಂದರ್ಥ. ವಳವಾಡವು (ವಳ (ಗುರುತು) + ವಾಡ (ಊರು) = ವಳವಾಡ) ಕೊಲ್ಲಾಪುರ ಶಿಲಾಹಾರ ಮನೆತನದ ರಾಜಧಾನಿಯಾಗಿತ್ತು. ಇದು ಸೌಂದರ್ಯವಾಚಿ ಸ್ಥಳನಾಮವಾಗಿದೆ.

೨.೬.೧೧. ಹಗರಟಗೆನಾಡು

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹಗರಟಗೆನಾಡಿನ ಪ್ರಸ್ತಾಪವಿದೆ.[೧೩೫] ಹಗರಟಗೆನಾಡು ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನೈಋತ್ಯಭಾಗ, ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಉತ್ತರಭಾಗ, ಸಿಂದಗಿ ತಾಲ್ಲೂಕಿನ ದಕ್ಷಿಣಭಾಗದ ಪ್ರದೇಶವನ್ನೊಳಗೊಂಡಂತೆ ಒಟ್ಟು ಮುನ್ನೂರು ಗ್ರಾಮಗಳ ಆಡಳಿತ ವಿಭಾಗವಾಗಿತ್ತು. ಸುರಪುರ ತಾಲ್ಲೂಕಿನ ಇಂದಿನ ಹಗರಟಗಿ ಗ್ರಾಮವು ಈ ವಿಭಾಗದ ಕೇಂದ್ರ ಪಟ್ಟಣ ಮತ್ತು ರಾಜಧಾನಿಯಾಗಿತ್ತು. ಇದು ಕ್ರಿ.ಶ. ಸುಮಾರು ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಕುಂತಳನಾಡಿನಲ್ಲಿ ಒಂದು ಪ್ರಮುಖ ಆಡಳಿತ ವಿಭಾಗವಾಗಿತ್ತು. ಕಲ್ಯಾಣದ ಚಾಳುಕ್ಯ, ಕಲಚೂರಿ, ದೇವಗಿರಿಯ ಸೇವುಣ (ಯಾದವ) ಮನೆತನಗಳ ಆಳ್ವಿಕೆಗಳ ಸಂದರ್ಭದಲ್ಲಿ ಈ ವಿಭಾಗದಲ್ಲಿ ಯದುವಂಶದ (ಹೈಹಯವಂಶ?) ಮಹಾಮಂಡಳೇಶ್ವರರು ಆಳ್ವಿಕೆ ಮಾಡುತ್ತಿದ್ದರು. ಸವದತ್ತಿಯ ರಟ್ಟ ಮನೆತನದ ಲಕ್ಷ್ಮಿದೇವನು ಈ ಮಹಾಮಂಡಳೇಶ್ವರ

ಮನೆತನದ ಇಮ್ಮಡಿ ರಾಜರಸ ಮತ್ತು ಮೈಳಲದೇವಿ ದಂಪತಿಗಳ ಪುತ್ರಿ ಚಂದ್ರಿಕಾದೇವಿಯನ್ನು ವಿವಾಹನಾಗಿದ್ದನು. ಹಾಗಾಗಿ ಈ ಎರಡೂ ಮನೆತನಗಳಲ್ಲಿ ಪರಸ್ಪರ ಸಾಂಸ್ಕೃತಿಕ ಸಂಬಂಧಗಳಿದ್ದವು. ಹಗರಟಗೆನಾಡಿನ ಅರಸರು ಕೂಹುಂಡಿನಾಡಿನ ಕೆಲವೆಡೆಗಳಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ರಟ್ಟ ಮನೆತನದ ಲಕ್ಷ್ಮಿದೇವನ ಪುತ್ರ ನಾಲ್ಕನೆಯ ಕಾರ್ತವೀರ್ಯನ ಆಳ್ವಿಕೆಯ ಕಾಲದಲ್ಲಿ ಇಮ್ಮಡಿ ರಾಜರಸನು ಕಲ್ಲೋಳೆಯಲ್ಲಿ ಕ್ರಿ.ಶ. ೧೨೦೪ರಲ್ಲಿ ತ್ರಿಕೂಟಮಂಡಿತ ಶಾಂತಿನಾಥ ಬಸದಿಯನ್ನು ನಿರ್ಮಿಸಿ ಬಂಗಾರದ ಕಳಸ, ಮಕರತೋರಣ, ಮಾನಸ್ತಂಭ ಮೊದಲಾದವುಗಳನ್ನು ಮಾಡಿಸಿ ಇದನ್ನು ತನ್ನ ಗುರುಗಳಾದ ಶುಭಚಂದ್ರ ಭಟ್ಟಾರಕರ ಸನ್ನಿಧಿಗೆ ಒಪ್ಪಿಸಿದನು. ಹಗರಟಗೆನಾಡಿನ ಆಳರಸರು ಜೈನರಾಗಿದ್ದರೂ ಸರ್ವಧರ್ಮಗಳ ಪೋಷಕರಾಗಿ ಧರ್ಮಸಹಿಷ್ಣುತೆಯನ್ನು ಮೆರೆದಿದ್ದಾರೆ.[೩೬]

೨.೬.೧೨. ಲತ್ತನೂರು

ಸವದತ್ತಿಯ ರಟ್ಟರು ತಮ್ಮ ಬಿರುದಾವಳಿಗಳಲ್ಲಿ ತಮ್ಮನ್ನು ಲತ್ತನೂರು ಪುರವರಾಧೀಶ್ವರರು ಎಂದು ಕರೆದುಕೊಂಡಿದ್ದಾರೆ.[೧೩೭] ಇದು ಇಂದಿನ ಮಹಾರಾಷ್ಟ್ರದ ಜಿಲ್ಲಾ ಕೇಂದ್ರ ಲಾತೂರು ನಗರವಾಗಿದೆ. ರಾಷ್ಟ್ರ>ರಟ್ಟ>ಲತ್ತ+ನೂರು=ಲತ್ತನೂರು ಎಂದಾಗಿದೆ. ಇದು ಭೌಗೋಳಿಕವಾಚಿ ಸ್ಥಳನಾಮವಾಗಿದೆ. ಪ್ರಾಯಶಃ ಸವದತ್ತಿಯ ರಟ್ಟರು ಲಾತೂರು ಮೂಲದವರಾಗಿರುವಂತೆ ತೋರುತ್ತದೆ. ಮಳಖೇಡದ ರಾಷ್ಟ್ರಕೂಟರೂ ಲಾತೂರು ಮೂಲದವರೆಂಬ ಅಭಿಪ್ರಾಯವೂ ಇರುವುದು.

೨.೬.೧೩. ಇತರೆ ಸ್ಥಳನಾಮಗಳು

ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಸತ್ತಿಗೇರಿ, ಹುಲಕುಂದ, ದಾಡೆಭಾವಿ, ಗೊರವನೂರು, ಜಂಗವಾಡ, ಮದಲೂರು, ಸಿಂಧವಿಗೆ, ಅಗನೂರು, ನಾಗಪುರ ಸ್ಥಳನಾಮಗಳ ಉಲ್ಲೇಖಗಳಿವೆ.[೧೩೮] ಈ ಎಲ್ಲ ಗ್ರಾಮಗಳು ದೇವಗಿರಿಯ ಸೇವುಣ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ತೋರಗಲ್ಲ ಆರುಸಾವಿರ ಆಡಳಿತ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು.

೨.೭. ಕೂಹುಂಡಿನಾಡಿನ ಶಾಸನಗಳೋಕ್ತ ನದಿ, ಹಳ್ಳ, ಕೆರೆಗಳು

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ನದಿಗಳು, ಹಳ್ಳಗಳು, ತೊರೆಗಳು, ಕೆರೆಗಳು ಮೊದಲಾದವುಗಳ ಪ್ರಸ್ತಾಪಗಳಿವೆ.

೨.೭.೧. ಆನೆಯಕೆರೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಆನೆಯ ಕೆರೆಯ ನಿರೂಪಣೆಯಿದೆ.[೧೩೯] ಇಂದಿನ ಬೆಳಗಾವಿ ನಗರದ ಕೋಟೆಯ ಉತ್ತರ ಬದಿಯಲ್ಲಿರುವ ಕೆರೆಯೇ ಆನೆಯ ಕೆರೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟದ್ದಾರೆ.[೧೪೦] ಆದರೆ ಆನೆಗೋಳ (ಇಂದಿನ ಆನಿಗೋಳ) ಎಂಬ ಪ್ರಾಚೀನ ಕೊಳವೊಂದು ನಾಗಝರಿಯ ದಕ್ಷಿಣಕ್ಕೆ ಮೊದಲಲ್ಲಿ ಇತ್ತೆಂಬುದನ್ನು ಗಮನಿಸಬಹುದು.

೨.೭.೨. ಇಂಗುಣಿಕೆರೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಇಂಗುಣಿಕೆರೆಯ ಉಲ್ಲೇಖವಿದೆ.[೧೪೧] ಇದು

ಇಂದಿನ ಬೆಳಗಾವಿ ತಾಲ್ಲೂಕಿನ ಕುಟ್ಟಲವಾಡಿ ಗ್ರಾಮದ ಪರಿಸರದಲ್ಲಿರುವ ಕೆರೆಯಾಗಿದೆ. ಇದು ಇಂದಿಗೂ ಉಳಿದು ಬಂದಿದೆ.

೨.೭.೩. ಕಿರುದೊರೆ

ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಕಿರುದೊರೆ ಎಂಬ ನದಿಯ ಪ್ರಸ್ತಾಪವಿದೆ.[೧೪೨] ಕಿರುದೊರೆ ಎಂಬುದು ಚಿಕ್ಕ ನದಿಯನ್ನು ಸೂಚಿಸುತ್ತದೆ. ಈ ಗ್ರಾಮದ ಉತ್ತರಕ್ಕೆ ಎರಡು ಕಿ.ಮೀ. ಅಂತರದಲ್ಲಿ ಪೂರ್ವಾಭಿಮುಖವಾಗಿ ಹರಿದಿರುವ ಪಂಚಗಂಗಾ ನದಿಯೇ ಕಿರುದೊರೆಯಾಗಿರುವ ಸಾಧ್ಯತೆಯಿದೆ.

೨.೭.೪. ಕೆರೆ

ರಾಯಬಾಗದ ಕ್ರಿ.ಶ. ೧೧೨೭ರ ಶಾಸನದಲ್ಲಿ ಕೆರೆಯ ಪ್ರಸ್ತಾಪವಿದೆ.[೧೪೩] ಈ ಕೆರೆಯ ಏರಿಯ ಮೇಲೆ ಕೇಶವೇಶ್ವರ ದೇವಾಲಯವಿತ್ತು. ಆದರೆ ಆ ಕೆರೆ ಮತ್ತು ಅಲ್ಲಿದ್ದ ಕೇಶವೇಶ್ವರ ದೇವಾಲಯ ಇಂದು ಉಳಿದು ಬಂದಿಲ್ಲ.

೨.೭.೫. ನಾಗರಕೆರೆ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ನಾಗರಕೆರೆಯ ಪ್ರಸ್ತಾಪವಿದೆ.[೧೪೪] ಇಂದಿನ ಬೆಳಗಾವಿ ನಗರದ ರೈಲು ನಿಲ್ದಾಣದ ಉತ್ತರ ಬದಿಯಲ್ಲಿ, ದಂಡಿನ ಶಿಬಿರದ ಪೂರ್ವದಲ್ಲಿ ಪ್ರಸ್ತುತ ಶಾಸನೋಕ್ತ ಕೆರೆ ಅಸ್ತಿತ್ವದಲ್ಲಿತ್ತು. ಈಗಿರುವ ರೈಲು ಸೇತುವೆಯು ಪ್ರಸ್ತುತ ಕೆರೆಯ ಪೂರ್ವ ಏರಿಯ ಮೇಲೆಯೇ ನಿರ್ಮಾಣವಾಗಿದೆ. ಗೋವಾ ಅಗಸಿಯ ಬಸ್ ನಿಲ್ದಾಣದ ಸಮೀಪದಿಂದ ಈ ಕೆರೆಯ ಒಂದು ಕೋಡಿ ಈಗಲೂ ಹರಿಯುತ್ತಿರುವುದು. ಈ ಕೆರೆ ಪಶ್ಚಿಮದಲ್ಲಿ ಒಂದು ಕಿ.ಮೀ. ಪಸರಿಸಿತ್ತು. ಪಶ್ಚಿಮದಲ್ಲಿರುವ ಇಂದಿನ ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆಗೆ ಈಗಲೂ ನಾಗಝರಿ ಶಾಲೆ ಎಂದು ಕರೆಯಲಾಗುತ್ತದೆ. ಈಗ್ಗೆ ಸುಮಾರು ಒಂದು ನೂರು ವರ್ಷಗಳ ಹಿಂದೆ ಹನ್ನೆರಡೂ ತಿಂಗಳು ನೀರು ಚಿಮ್ಮುವ ಝರಿಯೊಂದು ಅಲ್ಲಿ ಇದ್ದುದೇ ಹೀಗೆ ಹೆಸರಾಗಲು ಕಾರಣವಾಗಿದೆ. ಇಷ್ಟು ದೊಡ್ಡದಾದ ಕೆರೆ ಮತ್ತು ಅದಕ್ಕೆ ತಾಗಿದ ಪೂರ್ವಕ್ಕಿರುವ ಪ್ರಾಚೀನ ವಸತಿಸ್ಥಾನ ಇವು ಶಾತವಾಹನರ ಕಾಲಾವಧಿಗಿಂತ ಪೂರ್ವದವುಗಳಾಗಿವೆ. ಬಹುಶಃ ಇವು ನಾಗರ ಸಂಸ್ಕೃತಿಗೆ ಸಂಬಂಧಪಟ್ಟವುಗಳಾಗಿರಬಹುದು ಎಂದು ಎಂ.ಬಿ. ನೇಗಿನಹಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೪೫]

೨.೭.೬. ನಾಗರಕೆರೆ

ಯಡ್ರಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ನಾಗರಕೆರೆಯ ಉಲ್ಲೇಖವಿದೆ.[೧೪೬] ಇದು ಇಂದಿನ ಸವದತ್ತಿ ಪಟ್ಟಣದ ಪರಿಸರದಲ್ಲಿತ್ತು. ಆದರೆ ಅದು ಯಾವುದೆಂಬುದು ಸ್ಪಷ್ಟವಿಲ್ಲ.

೨.೭.೭. ಬೆಳಗಲೆ ಹಳ್ಳ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಬೆಳಗಲೆ ಹಳ್ಳದ ಉಲ್ಲೇಖವಿದೆ.[೧೪೭] ಇದು ಇಂದಿನ

ಮುಧೋಳ ತಾಲ್ಲೂಕಿನಲ್ಲಿರುವ ಬೆಳಗಲಿ ಗ್ರಾಮದ ಹತ್ತಿರ ಹರಿದಿರುವ ಹಳ್ಳವಾಗಿದೆ.

೨.೭.೮. ಮಳಪ್ರಹಾರೀ ನದಿ

ಸವದತ್ತಿಯ ಕ್ರಿ.ಶ. ೧೦೮೭ರ ಶಾಸನಗಳಲ್ಲಿ ಮಲಪ್ರಹಾರೀ ಎಂಬ ನದಿಯ ನಿರೂಪಣೆಗಳಿವೆ.[೧೪೮] ಇದನ್ನು ಮಳಹಾರೀ, ಮಳಪಹಾರಿ, ಮಲಪಹಾರಿಣಿ, ಮಾಲಿನಿ ಎಂತಲೂ ಕರೆಯಲಾಗಿದೆ. ಇದು ಇಂದಿನ ಮಲಪ್ರಭಾ ನದಿಯಾಗಿದೆ.

೨.೭.೯. ಮುಗುಳಿಹಳ್ಳ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಮುಗುಳಿ ಹಳ್ಳದ ಪ್ರಸ್ತಾಪವಿದೆ.[೧೪೯] ಇದು ಇಂದಿನ ಬೆಳಗಾವಿ ತಾಲ್ಲೂಕಿನ ಮುಗಳಿ ಗ್ರಾಮದ ಪರಿಸರದಲ್ಲಿದೆ. ಇದು ಇಂದಿಗೂ ಉಳಿದು ಬಂದಿದೆ.

೨.೭.೧೦. ರಟ್ಟಸಮುದ್ರಕೆರೆ

ಮಂಟೂರದ ಕ್ರಿ.ಶ. ೧೦೪೧ರ ಶಾಸನದಲ್ಲಿ ರಟ್ಟಸಮುದ್ರಕೆರೆಯ ಪ್ರಸ್ತಾಪವಿದೆ.[೧೫೦] ಇದು ಇಂದಿನ ಮುಧೋಳ ತಾಲ್ಲೂಕಿನ ಮಂಟೂರು ಗ್ರಾಮದಲ್ಲಿದೆ. ಇದು ಇಂದಿಗೂ ಉಳಿದು ಬಂದಿದೆ.

ಹೀಗೆ ಕೂಹುಂಡಿನಾಡಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯ ಅವಲೋಕನವು ಇಲ್ಲಿ ಇತಿಹಾಸಪೂರ್ವ ಕಾಲದಿಂದಲೂ ಮಾನವ ಸಂಸ್ಕೃತಿ ವೈವಿಧ್ಯಮಯವಾಗಿ ಬೆಳೆದು ಬಂದಿರುವುದನ್ನು ದೃಢಪಡಿಸುತ್ತದೆ. ಆ ಸಂಸ್ಕೃತಿ ಇತಿಹಾಸ ಆರಂಭ ಕಾಲದಿಂದೀಚೆಗೆ ಸ್ಪಷ್ಟತೆಯನ್ನು ಪಡೆದಿರುವುದು ಕಾಣುತ್ತದೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೭೨ ಮತ್ತು ಈ ನಾಡಿನ ಪ್ರಸ್ತಾಪವಿರುವ ಇತರೆಡೆಯ ೧೨ ಒಟ್ಟು ೧೮೪ ಶಾಸನಗಳು ಈ ನಾಡಿನ ವ್ಯಾಪ್ತಿ, ಇಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳ ಕೇಂದ್ರ ಪಟ್ಟಣಗಳು ಮತ್ತು ಈ ನಾಡಿನಲ್ಲಿದ್ದ ಆಡಳಿತ ವಿಭಾಗಗಳನ್ನು ಗುರುತಿಸಲು ಸಹಾಯಕವಾಗಿವೆ. ಹಾಗೆಯೇ ಈ ಶಾಸನಗಳಲ್ಲಿ ಉಲ್ಲೇಖಿತ ಸ್ಥಳನಾಮಗಳು, ನದಿಗಳು, ಹಳ್ಳಗಳು, ಕೆರೆಗಳು ಸಮಕಾಲೀನ ಪ್ರಾದೇಶಿಕ ಸಾಂಸ್ಕೃತಿಕ ಆಯಾಮಗಳ ಅಧ್ಯಯನಕ್ಕೆ ಅಪರೂಪದ ಮಾಹಿತಿಗಳನ್ನು ಒದಗಿಸಿವೆ. ಈ ಶಾಸನಗಳೋಕ್ತ ಕೆಲವು ಸ್ಥಳಗಳು ಕಾಲನದವಡೆಯಲ್ಲಿ ನಾಶವಾಗಿವೆ. ಮತ್ತೆ ಕೆಲವುಗಳ ಹೆಸರುಗಳು ಜನರ ಬಾಯಿಯಿಂದ ಬಾಯಿಗೆ ಹರಿದುಬರುವಲ್ಲಿ ವ್ಯತ್ಯಾಸವಾಗಿವೆ. ಈ ಬದಲಾವಣೆಗೆ ಕಾರಣ ಹುಡುಕಲು ಸ್ಥಳನಾಮಗಳ ಭಾಷಿಕ ಅಧ್ಯಯನ ಸಹಾಯಕಾರಿಯಾಗುತ್ತದೆ. ಈ ಸ್ಥಳನಾಮಗಳು ಪ್ರಾದೇಶಿಕ ಅಧ್ಯಯನದಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ ಬಹುಶಾಸ್ತ್ರೀಯ ಹಿನ್ನೆಲೆಯಲ್ಲಿ ಇವು ಸ್ವತಂತ್ರ ಅಧ್ಯಯನವಾಗಿ ಬೆಳೆದು ನಿಲ್ಲಬಲ್ಲವುಗಳಾಗಿವೆ. ಇಲ್ಲಿಯ ಶಾಸನಗಳಲ್ಲಿ ನಿರೂಪಿತವಾದ ನದಿಗಳು, ಹಳ್ಳಗಳು, ಕೆರೆಗಳು ಸಮಕಾಲೀನ ನೀರಾವರಿ ವ್ಯವಸ್ಥೆಯ ಅಧ್ಯಯನದಲ್ಲಿ ಬಹು ಮಹತ್ವವಾದ ಪಾತ್ರವಹಿಸಿವೆ.

ಅಡಿಟಿಪ್ಪಣಿಗಳು

೧. ಕಾಮತ್ ಸೂರ್ಯನಾಥ (ಸಂ.), ಬೆಳಗಾವಿ ಜಿಲ್ಲೆಯ ಗೆಜೆಟಿಯರ್ (೧೯೮೭), ಪು. ೧–೩೫. ಹರಿಹರ ಶ್ರೀನಿವಾಸರಾವ್, "ಬೆಳಗಾವಿ ಜಿಲ್ಲೆಯ ಜಲವಿಜ್ಞಾನ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೭೭೯–೭೮೫. ಚೌಶೆಟ್ಟಿ ವಿಶ್ವನಾಥ, "ಬೆಳಗಾವಿ ಜಿಲ್ಲೆಯ ಭೌಗೋಲಿಕ/ಭೂ ವೈಜ್ಞಾನಿಕ ಪರಿಸರ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೭೮೬–೭೯೩.

೨. ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು (೨೦೦೧), ಪು. ೩–೨೧.

೩. ಅದೇ, ಪು. ೫೦೧–೫೩೨ ಮತ್ತು ೩೮೦–೪೧೭. ಸುಂದರ ಅ., "ಬೆಳಗಾವಿ ಜಿಲ್ಲಾ ಪ್ರದೇಶದಲ್ಲಿಯ ಪೂರ್ವಭಾವಿ ಇತಿಹಾಸ ಸಂಸ್ಕೃತಿಗಳು : ಕೆಲವು ಮುಖ್ಯ ಸಮಸ್ಯೆಗಳು ಮತ್ತು ಸೂಚನೆಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೨೬–೩೩.

೪. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು. ೩–೨೦.

೫. ಷಡಕ್ಷರಯ್ಯ ಆರ್.ಎಂ., "ಅಧ್ಯಕ್ಷರ ಭಾಷಣ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫–೧೬.

೬. ಶಿವತಾರಕ್ ಕೆ.ಬಿ., ಪೂರ್ವೋಕ್ತ, ಪು. ೫೦೧–೫೩೨ ಮತ್ತು ೩೮೦–೪೧೭.

೭. ಬೆಳ್ಳಾವೆ ವೆಂಕಟನಾರಾಯಣಪ್ಪ (ಸಂ.), ಪಂಪಭಾರತ, ಪು. ೧–೫೩.

೮. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೧೫೬.

೯. ಕೆ.ಆಯ್. ಸಂ. V, ಶಾ.ಸಂ. ೨೧.

೧೦. ಹಾಜವಗೋಳ ಧನವಂತ, ಮುಳುಗುಂದನಾಡು : ಒಂದು ಅಧ್ಯಯನ (೨೦೦೪), ಪು. ೭.

೧೧. ಕನ್ನಡ ವಿಷಯ ವಿಶ್ವಕೋಶ, ಪು. ೮೬.

೧೨. ಎಸ್.ಆಯ್.ಆಯ್. ಸಂ. I, ಪು. ೬೩.

೧೩. ಪಾಟೀಲ ಶಿ.ಬಾ., ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ (೧೯೯೫), ಪು. ೨೪–೩೩. ಗೋಗಿ ಹನುಮಾಕ್ಷಿ, "ಕುಹುಂಡಿ ಪಟ್ಟಣ ಎಲ್ಲಿದೆ?", ಅನುಶಾಸನ (೨೦೦೨), ಪು. ೩೩–೩೮.

೧೪. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೭೪), ಪು. ೧೨೪.

೧೫. ಕೆ.ಆಯ್. ಸಂ. V, ಶಾ.ಸಂ. ೯೮, ಪು. ೨೯೬–೨೯೯.

೧೬. ಇ.ಆಯ್. ಸಂ. XIII, ಶಾ.ಸಂ. ೩/ಬಿ, ಪು. ೨೭–೩೬.

೧೭. ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೨, ಪು. ೯೯–೧೦೫.

೧೮. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೬೦.

೧೯. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೩ (ಜನೇವರಿ–೧೯೭೪), ಪು. ೪೩–೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨೦. ಇ.ಆಯ್. ಸಂ. XIX, ಪು. ೧೯-೨೬.

೨೧. ಮರಿಯಪ್ಪಭಟ್ಟ ಎಂ. (ಸಂ.), ರಾಜಾದಿತ್ಯನ ವ್ಯವಹಾರಗಣಿತ (೧೯೫೫), ಮುನ್ನುಡಿ, ಪು. ೨.

೨೨. ಕುಲಕರ್ಣಿ ಬಿ.ಎಸ್. (ಸಂ.), ಸಮಯಪರೀಕ್ಷೆ (೧೯೫೮), ಪು. ೮.

೨೩. ಗೋಗಿ ಹನುಮಾಕ್ಷಿ, "ಕುಹುಂಡಿ ಪಟ್ಟಣ ಎಲ್ಲಿದೆ?", ಅನುಶಾಸನ (೨೦೦೨), ಪು. ೩೩-೩೮.

೨೪. ಫ್ಲೀಟ್ ಜೆ.ಎಫ್., "ದಿ ಕೂಂಡಿ ಕಂಟ್ರಿ", ಇಂಡಿಯನ್ ಎಂಟಿಕ್ವೇರಿ ಸಂ. XXIX, ಪು. ೨೭೮-೨೮೦.

೨೫. ದೇಸಾಯಿ ಪಿ.ಬಿ., ಜೈನಿಸಂ ಇನ್ ಸೌಥ್ ಇಂಡಿಯಾ ಅಂಡ್ ಸಮ್ ಜೈನ ಎಪಿಗ್ರಾಫ್ಸ್ (೧೯೫೭), ಪು. ೧೦೯-೧೧೦.

೨೬. ಕಲಬುರ್ಗಿ ಎಂ.ಎಂ. (ಸಂ.), ಶಾಸನ ಸಂಪದ (ದ್ವಿತಿಯ ಮುದ್ರಣ-೧೯೭೨), ಟಿಪ್ಪಣಿಗಳು. ಮಹಾರಾಷ್ಟ್ರದ ಕನ್ನಡ ಶಾಸನಗಳು (೧೯೮೭), ಪು. ೨೦. ಕನ್ನಡ ಸಂಶೋಧನಾ ಶಾಸ್ತ್ರ, ಪು. ೧೧೫.

೨೭. ದೊಡ್ಡಣ್ಣವರ ದೇವೇಂದ್ರ ಬ., ಮಧ್ಯಯುಗೀನ ಜೈನ ಧರ್ಮಾಚಾ ಉತ್ಕರ್ಷ ವ ಮಹಾನ್ ಸಾಧು ಸಂತ (೧೯೯೦), ಪು. ೨೫.

೨೮. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ೨೬, ಪು. ೩೯-೪೧.

೨೯. ಗೋಗಿ ಹನುಮಾಕ್ಷಿ, ಪೂರ್ವೋಕ್ತ.

೩೦. ಅದೇ.

೩೧. ಕೆ.ಆಯ್. ಸಂ. I, ಶಾ.ಸಂ. ೩೩.

೩೨. ಕೃಷ್ಣಮೂರ್ತಿ ಪಿ.ವಿ., "ಬೆಳಗಾವಿ ಜಿಲ್ಲೆಯ ಪ್ರಾಚೀನ ಆಡಳಿತ ವಿಭಾಗಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೪೬೧.

೩೩. ಕೊಪ್ಪಾ ಎಸ್.ಕೆ., ತರ್ದವಾಡಿನಾಡು : ಒಂದು ಅಧ್ಯಯನ (೧೯೯೦), ಪು. ೨೭.

೩೪. ಅದೇ, ಪು. ೩೮-೪೨.

೩೫. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೭.

೩೬. ನೇಗಿನಹಾಳ ಎಂ.ಬಿ., ಪೂರ್ವೋಕ್ತ, ಶಾ.ಸಂ. ೪.

೩೭ ಇ.ಆಯ್. ಸಂ. XIII, ಶಾ.ಸಂ. ೩/ಬಿ.

೩೮. ಅದೇ.

೩೯. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಪೂರ್ವೋಕ್ತ, ಪು. ೧೬೬-೧೬೮. ಕೆ.ಆಯ್. ಸಂ. VI, ಶಾ.ಸಂ. ೭೩.

೪೦. ಅಪ್ರಕಟಿತ ಶಾಸನ.

೪೧. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೪೨. ಕೆ.ಆಯ್. ಸಂ. V, ಶಾ.ಸಂ. ೯೮. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೦೯.

೪೩. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೪೪. ಅದೇ, ಶಾ.ಸಂ. ೩/ಎ.

೪೫. ಅದೇ, ಶಾ.ಸಂ. ೩/ಬಿ

೪೬. ಕೆ.ಆಯ್. ಸಂ. V, ಶಾ.ಸಂ. ೨೧. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ–೨೦೦೨), ಶಾ.ಸಂ. ೫, ಪು. ೫೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೪೭. ಗುರವ ಆರ್.ಎನ್., ಪೂರ್ವೋಕ್ತ.

೪೮. ಇ.ಆಯ್. ಸಂ. XXI, ಶಾ.ಸಂ. ೪೩.

೪೯. ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪು. ೬೯–೭೦.

೫೦. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೦೧–೧೦೪.

೫೧. ಕೆ.ಆಯ್. ಸಂ. I, ಶಾ.ಸಂ. ೧೩.

೫೨. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೩೧.

೫೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.

೫೪. ಅದೇ, ಪು. ೧೮.

೫೫. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೫೬. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೦೧–೧೦೪.

೫೭. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೫೮. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೫೯. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೦೧–೧೦೪.

೬೦. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೬೧. ಆಯ್.ಎ. ಸಂ. X, ಪು. ೧೩೧.

೬೨. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೬೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೬೪. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೬೫. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೬೬. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೨–೧೬೩.

೬೭. ಕೆ.ಆಯ್. ಸಂ. V, ಶಾ.ಸಂ. ೯೮.

೬೮. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೬೯. ಅದೇ.

೭೦. ರಿತ್ತಿ ಎಸ್.ಎಚ್., ಪೂರ್ವೋಕ್ತ, ಪು. ೧೬–೧೮.

೭೧. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೭೨. ಎ.ಆರ್.ಎಸ್.ಆಯ್.ಇ. ೧೯೫೬–೫೭, ಶಾ.ಸಂ. ೨೪.

೭೩. ಇ.ಆಯ್. ಸಂ. XXI, ಶಾ.ಸಂ. ೪೩.

೭೪. ಕೆ.ಆಯ್. ಸಂ. V, ಶಾ.ಸಂ. ೨೧, ೯೮, ೯೯. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., ಪೂರ್ವೋಕ್ತ.

೭೫. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., ಪೂರ್ವೋಕ್ತ.

೭೬. ಉಪಾಧ್ಯ ಜಿ,ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೨, ಪು. ೬೯–೭೧.

೭೭. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೭೮. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೭೯. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೦೧–೧೦೪.

೮೦. ಅಪ್ರಕಟಿತ ಶಾಸನ.

೮೧. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೩೨, ಪು. ೫೪–೫೫.

೮೨. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೨, ಪು. ೨೪೦. ಕೆ.ಆಯ್. ಸಂ. VI, ಶಾ.ಸಂ. ೭೩. ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ–೧೬೭೮–೧೯೭೮ (೧೯೭೯), ಪು. ೧೬–೧೮.

೮೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.

೮೪. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭ ಕೆ.ಆಯ್. ಸಂ. VI, ಶಾ.ಸಂ. ೭೩. ಎಸ್.ಆಯ್.ಆಯ್. ಸಂ. V, ಶಾ.ಸಂ. ೮೪೯.

೮೫. ಪಾಟೀಲ ಕೆ.ಎಸ್., ಹೂಲಿ ಮತ್ತು ಲಕ್ಕುಂಡಿ ದೇವಾಲಯಗಳು : ಒಂದು ತೌಲನಿಕ ಅಧ್ಯಯನ (೨೦೧೦), ಪು. ೧೦, ೩೪, ೨೧೨.

೮೬. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೮೭. ಅಪ್ರಕಟಿತ ಶಾಸನ.

೮೮. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೬.

೮೯. ಕೆ.ಆಯ್. ಸಂ. VI, ಶಾ.ಸಂ. ೭೩.

೯೦. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೯೧. ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೩೭. ಇ.ಆಯ್. ಸಂ. XIII, ಶಾ.ಸಂ. ೩/ಬಿ. ಗುರುವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ

೯೨. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೧–೧೬೨.

೯೩. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೩೬. ಗುರವ ಆರ್.ಎನ್.,"ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯–೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೯೪. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೦.

೯೫. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೯೬. ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೧೩.

೯೭. ಅದೇ. ಕೆ.ಆಯ್. ಸಂ. VI, ಶಾ.ಸಂ. ೭೩.

೯೮. ಕೆ.ಆಯ್. ಸಂ. I, ಶಾ.ಸಂ. ೩೦, ೩೧. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩ ಮತ್ತು ೬೪.

೯೯. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೦೦. ಆಯ್.ಎ. ಸಂ. IV, ಪು. ೧೧೫–೧೧೬. ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ೩೩, ಪು. ೧೨. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೪. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೨.

೧೦೧. ಹಂಪ ನಾಗರಾಜಯ್ಯ, ಪೂರ್ವೋಕ್ತ, ಪು. ೨೭–೩೦.

೧೦೨. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ, ಪು. ೧೦೧–೧೦೪.

೧೦೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೧೦೪. ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೩೭.

೧೦೫. ಅದೇ, ಶಾ.ಸಂ. ೪೫.

೧೦೬. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ.

೧೦೭. ಇ.ಆಯ್. ಸಂ. XIII, ಶಾ.ಸಂ. ೩/ಎ ಮತ್ತು ಬಿ.

೧೦೮. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩, ೧೮, ೨, ೪೭. ಕೆ.ಆಯ್. ಸಂ. VI, ಶಾ.ಸಂ. ೭೩. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೯.

೧೦೯. ಹಂಪ ನಾಗರಾಜಯ್ಯ, ಪೂರ್ವೋಕ್ತ.

೧೧೦. ಕೆ.ಆಯ್. ಸಂ. I, ಶಾ.ಸಂ. ೮೦.

೧೧೧. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೨೮–೨೯.

೧೧೨. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೧೩. ಅದೇ.

೧೧೪. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೨–೧೬೩.

೧೧೫. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೧೬. ಎ.ಇ. ಸಂ. XVI, ಪು. ೧. ಕೆ.ಆಯ್. ಸಂ. VI, ಶಾ.ಸಂ. ೭೩.

೧೧೭. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೧೮. ಅದೇ.

೧೧೯. ಅದೇ.

೧೨೦. ಕೆ.ಆಯ್. ಸಂ. V, ಶಾ.ಸಂ. ೨೧.

೧೨೧. ಅದೇ.

೧೨೨. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೨೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬, ೧೨. ಕೆ.ಆಯ್. ಸಂ. V, ಶಾ.ಸಂ. ೨೫. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೩೨, ಪು. ೫೪-೫೫.

೧೨೪. ಮರಿಯಪ್ಪಭಟ್ಟ ಎಂ. (ಸಂ.), ಪೂರ್ವೋಕ್ತ, ಪು. ೧-೨.

೧೨೫. ಅಪ್ರಕಟಿತ ಶಾಸನ.

೧೨೬. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೧-೧೫೭. ಕೆ.ಆಯ್. ಸಂ. V, ಶಾ.ಸಂ. ೯೮.

೧೨೭. ಕೆ.ಆಯ್. ಸಂ. V, ಶಾ.ಸಂ. ೨೧, ೯೮.

೧೨೮. ಅಪ್ರಕಟಿತ ಶಾಸನ.

೧೨೯. ಎ.ಆರ್.ಎಸ್.ಆಯ್.ಇ. ೧೯೫೬-೫೭, ಶಾ.ಸಂ. ೧೫೫.

೧೩೦. ಗುರವ ಆರ್.ಎನ್., ಪೂರ್ವೋಕ್ತ.

೧೩೧. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೩೨. ಅಪ್ರಕಟಿತ ಶಾಸನ.

೧೩೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೧೩೪. ಅನುಬಂಧ : ಒಂದು, ಸವದತ್ತಿಯ ರಟ್ಟ ಮನೆತನದ ಶಾಸನಗಳು.

೧೩೫. ಎ.ಆರ್.ಎಸ್.ಆಯ್.ಇ. ೧೯೫೯-೬೦, ಶಾ.ಸಂ. ೩೯೬, ಪು. ೮೭.

೧೩೬. ಗುರುವ ಆರ್.ಎನ್., ಪೂರ್ವೋಕ್ತ.

೧೩೭. ಗೋಗಿ ಹನುಮಾಕ್ಷಿ, "ಹಗರಟಗಿನಾಡು ಮತ್ತು ಹಗರಟಗಿಯ ಶಾಸನಗಳು" ಮತ್ತು "ಹಗರಟಗಿಯ ಅಪ್ರಕಟಿತ ಶಾಸನಗಳು", ಅನುಶಾಸನ (೨೦೦೨), ಪು. ೫೦-೭೪ ಮತ್ತು ೨೧೩-೨೧೫.

೧೩೮. ಕೆ.ಆಯ್. ಸಂ. I, ಶಾ.ಸಂ. ೩೦.

೧೩೯. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೪೦. ನೇಗಿನಹಾಳ ಎಂ.ಬಿ., "ಬೆಳಗಾವಿ ಪ್ರದೇಶದ ಪ್ರಾಚೀನ ಇತಿಹಾಸ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೫೯-೬೨.

೧೪೧. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೪೨. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೧೪೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೧೪೪. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೪೫. ನೇಗಿನಹಾಳ ಎಂ.ಬಿ., ಪೂರ್ವೋಕ್ತ.

೧೪೬. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಪೂರ್ವೋಕ್ತ, ಪು. ೧೬೯.

೧೪೭ ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೪೮. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೧೪೯. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೧೫೦. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

❖❖❖

ಅಧ್ಯಾಯ : ಮೂರು

ಕೂಹುಂಡಿನಾಡಿನ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

೩.೧. ಪೀಠಿಕೆ

೩.೨. ಅರಸು, ಮಹಾಮಂಡಳೇಶ್ವರ, ಮಹಾಸಾಮಂತ ಮನೆತನಗಳು

೩.೨.೧. ಬಾದಾಮಿಯ ಚಲುಕ್ಯರು

೩.೨.೨. ಮಳಖೇಡದ ರಾಷ್ಟ್ರಕೂಟರು

೩.೨.೩. ಕಲ್ಯಾಣದ ಚಾಳುಕ್ಯರು

೩.೨.೪. ಸವದತ್ತಿಯ ರಟ್ಟರು

೩.೨.೫. ಕೊಲ್ಲಾಪುರದ ಶಿಲಾಹಾರರು

೩.೨.೬. ದಕ್ಷಿಣ ಕೊಂಕಣದ ಶಿಲಾಹಾರರು

೩.೨.೭. ಕಲ್ಯಾಣದ ಕಲಚೂರಿಗಳು

೩.೨.೮. ದೇವಗಿರಿಯ ಸೇವುಣರು

೩.೨.೯. ದೋರಸಮುದ್ರದ ಹೊಯ್ಸಳರು

೩.೨.೧೦. ಮಹಾಮಂಡಳೇಶ್ವರರು

೩.೨.೧೧. ಮಹಾಸಾಮಂತರು

೩.೨.೧೨. ಪ್ರಭುಗಾವುಂಡರು

೩.೨.೧೩. ಗಾವುಂಡರು

೩.೩. ಹೊಯ್ಸಳರ ನಂತರದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

೩.೪. ಆಡಳಿತಾಧಿಕಾರಿಗಳು

೩.೪.೧. ದಂಡನಾಯಕರು

೩.೪.೨. ಪೆರ್ಗಡೆಗಳು

೩.೪.೩. ಪಡೆವಳರು

೩.೪.೪. ಸೇನಬೋವರು

೩.೫. ಕೂಹುಂಡಿನಾಡಿನ ಉಪ ಆಡಳಿತ ವಿಭಾಗಗಳು

ಅಧ್ಯಾಯ : ಮೂರು
ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

೩.೧. ಪೀಠಿಕೆ

ಕನ್ನಡನಾಡಿನ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಾವಧಿಯ ಪ್ರಾದೇಶಿಕ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯ ಅಧ್ಯಯನದಲ್ಲಿ ಕೂಹುಂಡಿನಾಡಿನ ಪ್ರದೇಶದ ಶಾಸನಗಳ ಕೊಡುಗೆ ಗಮನಾರ್ಹವಾಗಿದೆ. ಈ ಪ್ರದೇಶದಲ್ಲಿ ಮಗಧದ ನಂದ ಮನೆತನದಿಂದ ಸ್ವಾತಂತ್ರ್ಯದ ಪೂರ್ವದವರೆಗೂ ಉತ್ತರ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಮತ್ತು ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಬಹುತೇಕ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ, ದೇಸಗತಿಗಳು, ಬ್ರಿಟಿಷರು ಮೊದಲಾದವರ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯ ಕುರುಹುಗಳೂ ಇಲ್ಲಿ ಕಾಣುತ್ತವೆ. ಈ ಪ್ರದೇಶದಲ್ಲಿ ಮಗಧದ ನಂದರು, ಮೌರ್ಯರು, ಶಾತವಾಹನರು, ಚಂದಾವರದ ಭೋಜರು, ಬನವಾಸಿ ಕದಂಬರು, ಮಾನಪುರದ ರಾಷ್ಟ್ರಕೂಟರು, ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ತಲಕಾಡಿನ ಗಂಗರು, ಕಲ್ಯಾಣದ ಚಾಳುಕ್ಯರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರು, ಸವದತ್ತಿಯ ರಟ್ಟರು, ಗೋವೆಯ ಕದಂಬರು, ದೆಹಲಿಯ ಸುಲ್ತಾನರು (ಖಿಲ್ಜಿ ಮತ್ತು ತುಘಲಕ್), ವಿಜಯನಗರದ ಅರಸರು, ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು, ಮೊಗಲರು, ಮರಾಠರು, ಪೇಶ್ವೆಗಳು, ಸಂಸ್ಥಾನಿಕರು (ದೇಸಗತಿಗಳು), ಬ್ರಿಟಿಷರು ಮತ್ತು ಸ್ವಾತಂತ್ರ್ಯ ಹೋರಾಟಗಾರರ ರಾಜಕೀಯ ಚಟುವಟಿಕೆಗಳು ಕಾಣುತ್ತವೆ.

ಉತ್ತರ ಕರ್ನಾಟಕದಲ್ಲಿ ಮರಾಠರು ಮತ್ತು ಬ್ರಿಟಿಷರ ಆಳ್ವಿಕೆಯ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಅನೇಕ ದೇಸಗತಿ, ಇನಾಮದಾರ ಮನೆತನಗಳು ಆಳ್ವಿಕೆ ಮಾಡುತ್ತಿದ್ದವು. ಪ್ರಸ್ತುತ ಅಧ್ಯಾಯದಲ್ಲಿ ಕೂಹುಂಡಿನಾಡಿನ ಪ್ರದೇಶದಲ್ಲಿ ಬಾದಾಮಿಯ ಚಲುಕ್ಯರ ಪೂರ್ವದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳು, ಕೂಹುಂಡಿನಾಡಿನಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಆಳ್ವಿಕೆ ಮಾಡಿದ ಅರಸು ಮನೆತನಗಳು (ಬಾದಾಮಿಯ ಚಲುಕ್ಯರ ಕಾಲದಿಂದ ದೇವಗಿರಿಯ ಸೇವುಣರವರೆಗೆ) ಮತ್ತು ಆಡಳಿತಾಧಿಕಾರಿಗಳು ಹಾಗೂ ದೇವಗಿರಿಯ ಸೇವುಣರ ತರುವಾಯ ಅಂದರೆ ಕ್ರಿ.ಶ. ಸುಮಾರು ೧೩ನೆಯ ಶತಮಾನದಿಂದ ಸ್ವಾತಂತ್ರ್ಯದ ಪೂರ್ವದವರೆಗಿನ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ ಹಾಗೂ ಕೂಹುಂಡಿನಾಡಿನಲ್ಲಿದ್ದ ಆಡಳಿತ ವಿಭಾಗಗಳ ಕುರಿತು ಇದವರೆಗೂ ಈ ಪ್ರದೇಶದಲ್ಲಿ ಬೆಳಕಿಗೆ ಬಂದಿರುವ ೧೭೨ ಶಾಸನಗಳು ಮತ್ತು ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಇತರೆಡೆಯಲ್ಲಿ ದೊರೆಯುವ ೧೨ ಶಾಸನಗಳು ಒಟ್ಟು ೧೮೪ ಶಾಸನಗಳನ್ನು ಪ್ರಧಾನವಾಗಿಟ್ಟುಕೊಂಡು ಪ್ರಸ್ತುತ ಅಧ್ಯಾಯವನ್ನು ಕಟ್ಟಲಾಗಿದೆ.

ಕನ್ನಡನಾಡಿನ ಇನ್ನಿತರ ಕಡೆಗಳಂತೆ ಕೂಹುಂಡಿನಾಡಿನ ಪ್ರದೇಶದ ಚರಿತ್ರೆ ಮಗಧದ ನಂದರು ಮತ್ತು ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ನಂದರು ಕ್ರಿ.ಪೂ. ಸುಮಾರು ೪ನೆಯ ಶತಮಾನದಲ್ಲಿ

ಪಾಟಲಿಪುತ್ರದಿಂದ (ಇಂದಿನ ಬಿಹಾರ ರಾಜ್ಯದ ಪಾಟ್ನಾ) ಆಳ್ವಿಕೆ ಮಾಡುತ್ತಿದ್ದರು. ಕನ್ನಡನಾಡಿನ ಉತ್ತರಭಾಗವೆಂದು ಗುರುತಿಸಿರುವ 'ಕುಂತಳನಾಡು' ಆ ಮನೆತನದ ಆಳ್ವಿಕೆಗೊಳಪಟ್ಟಿತ್ತೆಂಬುದು ಸಿಂಗಿರಾಜನ 'ಸಿಂಗಿರಾಜಪುರಾಣ' ಕಾವ್ಯದಲ್ಲಿ ಪ್ರಸ್ತಾಪವಿದೆ.[೧] ಮೌರ್ಯ ಮನೆತನದ ಚಂದ್ರಗುಪ್ತನು ಕೌಟಿಲ್ಯನ ಸಹಾಯದಿಂದ ನಂದರನ್ನು ನಾಶಮಾಡಿ ಮಗಧವನ್ನು ವಶಪಡಿಸಿಕೊಂಡನು. ಅನಂತರ ಕುಂತಳನಾಡಿನಲ್ಲಿದ್ದ ಕೂಹುಂಡಿನಾಡಿನ ಪ್ರದೇಶವು ಮೌರ್ಯರ ವಶವಾಯಿತು. ಚಂದ್ರಗುಪ್ತನು ತನ್ನ ಜೀವನದ ಕೊನೆಗಾಲದಲ್ಲಿ ಜೈನ ಧರ್ಮದ ಪಂಚಮ ಶ್ರುತಕೇವಲಿ ಭದ್ರಬಾಹು ಭಟ್ಟಾರಕನ ಪ್ರೇರಣೆಯಿಂದ ಜೈನ ಧರ್ಮವನ್ನು ಸ್ವೀಕರಿಸಿ ಬೆಳಗಾವಿ ಜಿಲ್ಲೆಯ ಪ್ರದೇಶದ (ಇಂದಿನ ಗೋಕಾಕ ತಾಲ್ಲೂಕಿನ ಕೊಣ್ಣೂರು, ಜಮಖಂಡಿ ತಾಲ್ಲೂಕಿನ ಹಳಿಂಗಳಿ ಇತ್ಯಾದಿ) ಮುಖಾಂತರ ಶ್ರವಣಬೆಳಗೊಳಕ್ಕೆ ಆಗಮಿಸಿ ಇಲ್ಲಿಯ ಚಂದ್ರಗಿರಿ ಬೆಟ್ಟದ ಮೇಲ್ಭಾಗದಲ್ಲಿ ಸಲ್ಲೇಖನ ವ್ರತದಿಂದ ಸಮಾಧಿಮರಣ ಹೊಂದಿದನು.[೨] ಈತನ ಮೊಮ್ಮಗ ಅಶೋಕನ ಆಳ್ವಿಕೆಯ ಕಾಲಾವಧಿಯ ಅಂದರೆ ಕ್ರಿ.ಪೂ. ಸುಮಾರು ೩ನೆಯ ಶತಮಾನದ ಹದಿನೇಳು ಶಾಸನಗಳು ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ, ನಿಟ್ಟೂರು, ಉದೆಯಗೊಳಂ, ಕೊಪ್ಪಳ, ಸನ್ನತಿ, ಮಸ್ಕಿಯಲ್ಲಿ ದೊರೆತಿವೆ. ಕನ್ನಡನಾಡಿನಲ್ಲಿ ಅಶೋಕನ ಶಾಸನಗಳೇ ಪ್ರಾಚೀನ ಶಾಸನಗಳಾಗಿವೆ. ಸನ್ನತಿಯು ಮೌರ್ಯರ ದಕ್ಷಿಣಾಪಥದ ರಾಜಧಾನಿಯಾಗಿತ್ತು. ಇದರಲ್ಲಿ 'ಇಸಿಲ' ಎಂಬುದು ಪ್ರಮುಖ ಆಡಳಿತ ವಿಭಾಗವಿತ್ತು. ಭಾರತದಲ್ಲಿ ಗೌತಮ ಬುದ್ಧನ ಸ್ಮರಣೆಗಾಗಿ ನಿರ್ಮಾಣವಾಗಿದ್ದ ಕೆಲವು ಸ್ತೂಪಗಳಲ್ಲಿ ಒಂದು ಸನ್ನತಿಯಲ್ಲಿತ್ತೆಂಬುದು ಗಮನೀಯವಾಗಿದೆ. ಇಲ್ಲಿ ಅಶೋಕ ಮತ್ತು ಈತನ ಪರಿವಾರದ ಉಬ್ಬುಶಿಲ್ಪಗಳಿರುವ ಪಟ್ಟಿಕೆ ದೊರೆತಿದೆ. ಹೀಗಾಗಿ ಕನ್ನಡನಾಡಿನ ಚರಿತ್ರೆಯ ಪ್ರಾರಂಭದ ಘಟ್ಟವನ್ನು ಮೌರ್ಯರ ಕಾಲದಿಂದ ಗುರುತಿಸಲಾಗುತ್ತದೆ.[೩] ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಕೂಹುಂಡಿನಾಡಿನ ಪ್ರದೇಶವೂ ಈ ಮನೆತನಗಳ ಆಳ್ವಿಕೆಯ ಪ್ರಭಾವದಲ್ಲಿತ್ತೆಂಬುದನ್ನು ತರ್ಕಿಸಬಹುದು.

ಮೌರ್ಯರ ತರುವಾಯ ದಕ್ಷಿಣ ಭಾರತದ ಪಶ್ಚಿಮ ಭಾಗದಲ್ಲಿ ಅಧಿಕಾರ ಸ್ಥಾಪಿಸಿದ ಶಾತವಾಹನರು (ಕ್ರಿ.ಪೂ. ೨೨೦–೨೩೦) ಕ್ರಮೇಣ ಪೂರ್ವ ಮತ್ತು ದಕ್ಷಿಣದ ಕಡೆಗೆ ತಮ್ಮ ರಾಜಕೀಯ ಚಟುವಟಿಕೆಗಳನ್ನು ವಿಸ್ತರಿಸಿದರು. ಅವರು ಕನ್ನಡನಾಡಿನ ಉತ್ತರ ಭಾಗದಲ್ಲಿ ತಮ್ಮ ರಾಜಕೀಯ ಪ್ರಭುತ್ವವನ್ನು ಹೊಂದಿದ್ದರೆಂಬುದನ್ನು ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳು ದೃಢಪಡಿಸುತ್ತವೆ. ಬನವಾಸಿ, ಸನ್ನತಿ, ಚಂದ್ರವಳ್ಳಿ, ನರಗುಂದ ತಾಲ್ಲೂಕಿನ ವಾಸನ ಮತ್ತು ಬೆಳಗಾವಿ ತಾಲ್ಲೂಕಿನ ವಡಗಾಂವ–ಮಾಧವಪುರ ನೆಲೆಗಳು ಆ ಕಾಲದ ಪ್ರಮುಖ ಆಡಳಿತ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಆ ಕಾಲದ ೨೫೦ಕ್ಕೂ ಹೆಚ್ಚು ನೆಲೆಗಳು ನಾಡಿನಾದ್ಯಂತ ಬೆಳಕು ಕಂಡಿವೆ.[೪] ಕೂಹುಂಡಿನಾಡಿನ ಬೆಳಗಾವಿ ತಾಲ್ಲೂಕಿನ ವಡಗಾಂವ–ಮಾಧವಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಾತವಾಹನರ ಕಾಲಾವಧಿಯ ಅವಶೇಷಗಳು ಕಂಡುಬಂದಿವೆ. ಹೀಗಾಗಿ ಕೂಹುಂಡಿನಾಡು ಪ್ರದೇಶವೂ ಅವರ ಆಳ್ವಿಕೆಯ ಪ್ರಭಾವಕ್ಕೆ ಒಳಪಟ್ಟಿತ್ತೆಂಬುದು ಸ್ಪಷ್ಟವಾಗುತ್ತದೆ. ಕೂಹುಂಡಿನಾಡಿನ ಪ್ರದೇಶ ಮತ್ತು

ಇದರ ಸುತ್ತಮುತ್ತಲಿನ ಪ್ರದೇಶಗಳು ಕೆಲವು ಕಾಲ ಚಂದಾವರದ ಹೈಹಯ ವಂಶದ ಭೋಜರ ಆಳ್ವಿಕೆಗೆ ಒಳಪಟ್ಟಿದ್ದವು. ಅವರು ಇಂದಿನ ಉತ್ತರಕನ್ನಡ ಜಿಲ್ಲೆಯ ಚಂದಾವರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾರೆ. ಖಾನಾಪುರ ತಾಲ್ಲೂಕಿನ ಕಪೋಲಿಯ ತಾಮ್ರಪಟ ಶಾಸನದಲ್ಲಿರುವ ಅಶಂಕಿತವರ್ಮ ಪಲಾಶಿಕ ವಿಷಯದ (ಇಂದಿನ ಹಲಸಿ) ಸೊಲ್ಲುಂದೂರಕ-೭೦ ಆಡಳಿತ ವಿಭಾಗದ ವಂಸಾವಾಟಕ ಗ್ರಾಮವನ್ನು ರಾಜನ ಅನುಮತಿಯಿಂದ ದಾನ ಮಾಡಿದ ವಿವರ ಅಪರೂಪದ್ದಾಗಿದೆ.[೫] ಈ ಮನೆತನದ ರಾಜ್ಯವು ಇಂದಿನ ಗೋವಾ-ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಿಂದ ಬೆಳಗಾವಿ ಜಿಲ್ಲೆಯ ಖಾನಾಪುರ ಮತ್ತು ಬೈಲಹೊಂಗಲ ತಾಲ್ಲೂಕುಗಳ ಕೆಲವು ಪ್ರದೇಶದವರೆಗೂ ವಿಸ್ತರಿಸಿದ್ದಂತೆ ತೋರುತ್ತದೆ.

ಶಾತವಾಹನರ ತರುವಾಯ ಕೂಹುಂಡಿನಾಡಿನ ಪ್ರದೇಶವು ಬನವಾಸಿ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಇಂದಿನ ಖಾನಾಪುರ ತಾಲ್ಲೂಕಿನ ಹಲಸಿ ಗ್ರಾಮವು 'ಪಲಾಶಿಕ' ಎಂಬ ಹೆಸರಿನಿಂದ ಕದಂಬರ ಮತ್ತೊಂದು ರಾಜಧಾನಿ ಪಟ್ಟಣವಾಗಿತ್ತು. ಈ ಮನೆತನದ ಕಾಕುಸ್ಥವರ್ಮನು ಯುವರಾಜನಾಗಿ ಪಲಾಶಿಕದಿಂದ ಆಳ್ವಿಕೆ ನಡೆಸಿದ್ದನು. ಇದು ಸುಮಾರು ಒಂದು ನೂರು ವರ್ಷಗಳ ಹಿಂದೆ ಹಲಸಿಯಲ್ಲಿ ಬೆಳಕಿಗೆ ಬಂದಿರುವ ಏಳು ಜೈನ ತಾಮ್ರಪಟ ಶಾಸನಗಳಿಂದ ತಿಳಿಯುತ್ತದೆ.[೬] ಈ ಶಾಸನಗಳು ಕಾಕುಸ್ಥವರ್ಮ, ಮೃಗೇಶವರ್ಮ, ರವಿವರ್ಮ ಮತ್ತು ಹರಿವರ್ಮನ ಆಳ್ವಿಕೆಯ ಕಾಲದ್ದಾಗಿವೆ. ಅ. ಸುಂದರ ಅವರು ಕದಂಬರ ಕಾಲದ ಜನವಸತಿ ನಿವೇಶನ ಮತ್ತು ಒಂದು ನರಸಿಂಹನ ವಿಗ್ರಹವನ್ನು ಹಲಸಿಯಲ್ಲಿ ಪತ್ತೆ ಹಚ್ಚಿದ್ದಾರೆ. ಇವುಗಳಲ್ಲದೆ ಹಲಸಿಯಲ್ಲಿ ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನದವರೆಗಿನ ಸುಮಾರು ಆರು ದೇವಾಲಯಗಳು ಮತ್ತು ಅನೇಕ ಶಿಲ್ಪಗಳನ್ನು ಅವರು ಅಧ್ಯಯನ ಮಾಡಿದ್ದಾರೆ. ಹಲಸಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಸಂಯುಕ್ತವಾಗಿ ಉತ್ಖನನ ಮಾಡಿವೆ. ಈ ಉತ್ಖನನದಲ್ಲಿ ಕದಂಬರ ಕಾಲಾವಧಿಯ ಹಲವು ದೇವಾಲಯಗಳ ಇಟ್ಟಿಗೆಯ ತಲಪಾಯಗಳು ಬೆಳಕಿಗೆ ಬಂದಿವೆ.

೩.೨. ಅರಸು, ಮಹಾಮಂಡಳೇಶ್ವರ, ಮಹಾಸಾಮಂತ ಮನೆತನಗಳು

ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಆಳ್ವಿಕೆ ಮಾಡಿದ ಮತ್ತು ಆಳ್ವಿಕೆಯ ಪ್ರಭಾವವನ್ನು ಹೊಂದಿದ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ ಮನೆತನಗಳ ರಾಜಕೀಯ ಚಟುವಟಿಕೆಗಳು ಈ ಕೆಳಗಿನಂತಿವೆ.

೩.೨.೧. ಬಾದಾಮಿಯ ಚಲುಕ್ಯರು

ಬನವಾಸಿ ಕದಂಬರನ್ನು ಬದಿಗೊತ್ತಿ ರಾಜಕೀಯ ರಂಗವನ್ನು ಪ್ರವೇಶಿಸಿದ ಬಾದಾಮಿಯ ಚಲುಕ್ಯರ ಕಾಲದಿಂದಲೇ ಕೂಹುಂಡಿನಾಡಿನ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ ಪ್ರಾರಂಭವಾಗುತ್ತದೆ. ಈ ಮನೆತನದ ೧ನೆಯ ಪುಲಕೇಶಿ (ಕ್ರಿ.ಶ. ೫೪೩-೫೬೬) ಸಮಕಾಲೀನ ಅರಾಜಕತೆಯನ್ನು ಸದುಪಯೋಗಪಡಿಸಿಕೊಂಡು ಕ್ರಿ.ಶ. ೫೪೩ರಲ್ಲಿ ಅಶ್ವಮೇಧ, ಬಹುಸುವರ್ಣ ಮೊದಲಾದ ವೈದಿಕ

ಯಜ್ಞ-ಯಾಗಾದಿಗಳನ್ನು ಮಾಡಿ ಬಾದಾಮಿಯಲ್ಲಿ ಅಭೇದ್ಯ ಗಿರಿದುರ್ಗವನ್ನು ನಿರ್ಮಿಸಿ, ಇದನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದನು. ಈತನ ಅಜ್ಜ ಜಯಸಿಂಹ (ಕ್ರಿ.ಶ. ೫೦೦-೫೨೦) ಮತ್ತು ತಂದೆ ರಣರಾಗನ (ಕ್ರಿ.ಶ. ೫೨೦-೫೪೩) ಕುರಿತು ಮಹಾಕೂಟ, ಐಹೊಳೆಯ ಶಾಸನಗಳಲ್ಲಿ ಪ್ರಸ್ತಾಪವಿದೆಯಾದರೂ ಇವರ ರಾಜಕೀಯ ಸಾಧನೆಗಳ ಕುರಿತಾಗಿ ಸ್ಪಷ್ಟತೆಯಿಲ್ಲ. ಇವರಿಬ್ಬರೂ ಪ್ರಾಯಶಃ ಕದಂಬರ ಸೈನ್ಯಾಧಿಕಾರಿಗಳಾಗಿ ಐಹೊಳೆಯಲ್ಲಿ ಆಡಳಿತ ನಡೆಸಿರಬಹುದು. ೧ನೆಯ ಪುಲಕೇಶಿ ಕಾಲದಿಂದ ಮುಂದೆ ಕನ್ನಡನಾಡಿನ ಅಭಿಜಾತಯುಗದ ಕರ್ತೃಗಳಾಗಿ ಇನ್ನೂರು ವರ್ಷಗಳಿಗೂ ಹೆಚ್ಚು ಕಾಲ ಆಳ್ವಿಕೆ ಮಾಡಿದ ಈ ಮನೆತನದ ಆಳರಸರು ಕನ್ನಡ ಭಾಷೆ, ಸಂಸ್ಕೃತಿ, ವಾಸ್ತು, ಶಿಲ್ಪ, ಚಿತ್ರಕಲೆ ಮೊದಲಾದ ಕ್ಷೇತ್ರಗಳಲ್ಲಿ ಅವಿಸ್ಮರಣೀಯ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಹಾಗೆಯೇ ಕನ್ನಡನಾಡಿನ ಸುತ್ತಣ ಪ್ರದೇಶಗಳಲ್ಲಿ ಕನ್ನಡ ಸಂಸ್ಕೃತಿಯನ್ನು ಪ್ರಸಾರ ಮಾಡಿದ್ದಾರೆ. ಹೀಗಾಗಿ ಇವರ ಆಳ್ವಿಕೆಯ ಕಾಲವನ್ನು ಈ ನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಸುವರ್ಣಯುಗ ಎಂದು ಕರೆಯಲಾಗಿದೆ. ೧ನೆಯ ಪುಲಕೇಶಿಯ ಪುತ್ರ ೧ನೆಯ ಕೀರ್ತಿವರ್ಮನು (ಕ್ರಿ.ಶ. ೫೬೬-೫೯೧) ನಳವಾಡಿಯ ನಳರು, ಕೊಂಕಣದ ಮೌರ್ಯರು, ಬನವಾಸಿಯ ಕದಂಬರನ್ನು ಬಲಪ್ರಯೋಗದಿಂದ ತನ್ನ ಅಧೀನರನ್ನಾಗಿ ಮಾಡಿದನು. ತೀವ್ರತರವಾಗಿ ಗಂಗ, ಸೇಂದ್ರಕ, ಆಳುಪ ಮೊದಲಾದ ವಿವಿಧ ಮನೆತನಗಳ ಆಳರಸರು ತಮ್ಮ ವಿಧೇಯತೆಯನ್ನು ಚಲುಕ್ಯರಿಗೆ ಮೀಸಲಾಗಿರಿಸಿದರು. ಕೀರ್ತಿವರ್ಮನ ಕಾಲದಿಂದಾಗಲೇ ವಾಸ್ತುಕಲಾ ಚಟುವಟಿಕೆಗಳು ಪ್ರೋತ್ಸಾಹದೊಂದಿಗೆ ಚಿಗುರಿದವು.[೭]

ಕೀರ್ತಿವರ್ಮನ ಪುತ್ರರು ಅಪ್ರಾಪ್ತವಾಗಿದ್ದರಿಂದ ಈತನ ತರುವಾಯ ಮಲಸಹೋದರ ಮಂಗಲೀಶನು (ಕ್ರಿ.ಶ. ೫೯೧-೬೧೦) ಉತ್ತರಾಧಿಕಾರಿಯಾಗಿ ರಾಜ್ಯವಿಸ್ತರಿಸುವ ಕಾರ್ಯವನ್ನು ಮುಂದುವರಿಸಿದನು. ಈತನ ಸೈನಿಕ ಕಾರ್ಯಾಚರಣೆಗಳಿಂದಾಗಿ ಚಲುಕ್ಯ ಸಾಮ್ರಾಜ್ಯವು ಪೂರ್ವ-ಪಶ್ಚಿಮ ಸಮುದ್ರಗಳವರೆಗೂ ವಿಸ್ತಾರವಾಗಿ ಒಂದು ನಿಜ ಸಾಮ್ರಾಜ್ಯದ ಸ್ವರೂಪವನ್ನು ಪಡೆಯಿತು. ಮಂಗಲೀಶನು ಕೀರ್ತಿವರ್ಮನ ಪುತ್ರ ಇಮ್ಮಡಿ ಪುಲಕೇಶಿಗೆ ರಾಜ್ಯಭಾರವನ್ನು ಹಸ್ತಾಂತರಿಸುವ ಬದಲು ತನ್ನ ಸಂತತಿಯನ್ನೇ ಚಲುಕ್ಯ ಸಿಂಹಾಸನದ ಮೇಲಿರಿಸುವ ವಿಚಾರವನ್ನು ಮಾಡತೊಡಗಿದ್ದನು. ಇಂತಹ ಪರಿಸ್ಥಿತಿಯನ್ನು ನಿರೀಕ್ಷಿಸಿದ್ದ ಇಮ್ಮಡಿ ಪುಲಕೇಶಿಯು (ಕ್ರಿ.ಶ. ೬೧೦-೬೪೨) ಇದನ್ನು ಸಹಿಸದೇ ಮಂಗಲೀಶನನ್ನು ಸೋಲಿಸುವ ಮೂಲಕ ಸಿಂಹಾಸನವೇರಿದನು. ಈತನು ತನ್ನ ಸಾಮರ್ಥ್ಯವನ್ನು ಜಾಹೀರುಪಡಿಸಲು ಗಂಗರು, ಆಳುಪರು, ಕದಂಬರು, ಕೊಂಕಣದ ಮೌರ್ಯರು, ಉತ್ತರಭಾರತದ ವರ್ಧನರು (ಹರ್ಷವರ್ಧನ), ಕೋಸಲದ ಕಲಿಂಗರು, ಕಂಚಿಯ ಪಲ್ಲವರು, ಚೋಳರು, ಪಾಂಡ್ಯರು, ಚೇರರು ಮೊದಲಾದವರನ್ನು ಸದೆಬಡಿದು ಸಕಲ ದಕ್ಷಿಣಾಪಥೇಶ್ವರನೆನಿಸಿದನು. ಈತನ ಕಾಲದಲ್ಲಿ ನರ್ಮದಾ ನದಿಯಿಂದ ಕಾವೇರಿ ನದಿಯವರೆಗಿನ ಭೂಭಾಗವು ಚಲುಕ್ಯರ ಅಧಿಪತ್ಯಕ್ಕೆ ಸೇರಿತು. ಇದರಿಂದ ಇಂದಿನ ಮಹಾರಾಷ್ಟ್ರ, ಕನ್ನಡನಾಡು, ಆಂಧ್ರಪ್ರದೇಶ ರಾಜ್ಯಗಳನ್ನೊಳಗೊಂಡ ೯೯,೦೦೦ ಗ್ರಾಮಗಳಿದ್ದ ಮೂರು ಮಹಾರಾಷ್ಟ್ರಗಳಿಗೆ ಚಲುಕ್ಯರು ಅಧಿಪತಿಗಳಾದರು. ಇಮ್ಮಡಿ ಪುಲಕೇಶಿಯಿಂದ

ಸೋತು ರಾಜ್ಯದ ಕೆಲವು ಭಾಗವನ್ನು ಕಳೆದುಕೊಂಡು ಅವಮಾನದಿಂದ ಉರಿಯುತ್ತಿದ್ದ ಕಂಚಿಯ ಪಲ್ಲವ ಮನೆತನದ ೧ನೆಯ ನರಸಿಂಹ ಮಾಮಲ್ಲನು ಕ್ರಿ.ಶ. ೬೪೨ರಲ್ಲಿ ಇಮ್ಮಡಿ ಪುಲಕೇಶಿಯನ್ನು ಸೋಲಿಸಿ ಬಾದಾಮಿಯನ್ನು ಆಕ್ರಮಿಸಿದನು. ಹನ್ನೆರಡು ವರ್ಷಗಳ ಕಾಲ ಚಲುಕ್ಯ ರಾಜ್ಯ ಅತಂತ್ರ ಸ್ಥಿತಿಯನ್ನು ಕಂಡಿತು. ಪ್ರಾಯಶಃ ಈ ಅವಧಿಯಲ್ಲಿ ಇಮ್ಮಡಿ ಪುಲಕೇಶಿಯ ಹಿರಿಯ ಪುತ್ರ ಆದಿತ್ಯವರ್ಮ ಮತ್ತು ಈತನ ಪುತ್ರ ಅಭಿನವಾದಿತ್ಯ ಕ್ರಮವಾಗಿ ಆಳಿದರು. ಆದರೆ ಇಮ್ಮಡಿ ಪುಲಕೇಶಿಯ ಇನ್ನೊಬ್ಬ ಪುತ್ರ ೧ನೆಯ ವಿಕ್ರಮಾದಿತ್ಯನು (ಕ್ರಿ.ಶ. ೬೫೫-೬೮೧) ಸಡಿಲಾಗಿದ್ದ ಚಲುಕ್ಯರ ಹಿಡಿತವನ್ನು ವ್ಯವಸ್ಥಿತವಾಗಿ ಮತ್ತೊಮ್ಮೆ ಸ್ಥಾಪಿಸಿ, ಪಲ್ಲವರನ್ನು ಚಲುಕ್ಯ ರಾಜ್ಯದಿಂದ ಹೊರದೂಡುವದರಲ್ಲಿ ಮತ್ತೊಮ್ಮೆ ಯಶಸ್ವಿಯಾದನು.[೮]

೧ನೆಯ ವಿಕ್ರಮಾದಿತ್ಯನ ಪುತ್ರ ವಿನಯಾದಿತ್ಯನು (ಕ್ರಿ.ಶ. ೬೮೧-೬೯೬) ಉತ್ತರ ಭಾರತದಲ್ಲಿ ಸೈನಿಕ ಕಾರ್ಯಾಚರಣೆಗಳನ್ನು ಕೈಗೊಂಡು ಮರಳಿ ಬರುವಾಗ ಗಂಗಾ, ಯಮುನಾ, ಪಾಲಿಧ್ವಜ, ಢಕ್ಕಾ ಮೊದಲಾದ ರಾಜಚಿಹ್ನೆಗಳನ್ನು ಕಸಿದು ತಂದು ತನ್ನ ತಂದೆಗೆ ಒಪ್ಪಿಸಿದನು. ವಿನಯಾದಿತ್ಯನ ತರುವಾಯ ಈತನ ಪುತ್ರ ವಿಜಯಾದಿತ್ಯನು (ಕ್ರಿ.ಶ. ೬೯೬-೭೩೩) ಚಲುಕ್ಯ ಸಿಂಹಾಸನವನ್ನೇರಿ ಸುದೀರ್ಘ ಅವಧಿಯವರೆಗೆ ಆಳ್ವಿಕೆ ಮಾಡಿದನು. ಈತನ ಆಳ್ವಿಕೆ ಶಾಂತವೂ, ಸಾಂಸ್ಕೃತಿಕ ಅಭಿವೃದ್ಧಿಯ ಸುವರ್ಣಕಾಲವೂ ಆಯಿತು. ಈ ಕಾಲದಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ಮೊದಲಾದ ಧರ್ಮಗಳು ಉದ್ಧಾರವಾದವು. ದೀನದಲಿತರ ಏಳ್ಗೆಗೆ ಸತ್ರಾದಿಗಳು ಸ್ಥಾಪಿತವಾದವು. ಹೊಸ ಕೆರೆಗಳು ತೋಡಿಸಲ್ಪಟ್ಟವು. ವಿಜಯಾದಿತ್ಯನ ಪುತ್ರ ಇಮ್ಮಡಿ ವಿಕ್ರಮಾದಿತ್ಯನು (ಕ್ರಿ.ಶ. ೭೩೩-೭೪೪) ದಕ್ಷಿಣದಲ್ಲಿ ಪಲ್ಲವ, ಚೋಳ, ಪಾಂಡ್ಯ ಮೊದಲಾದ ಮನೆತನಗಳ ಅರಸರುಗಳು ಚಲುಕ್ಯ ಚಕ್ರಾಧಿಪತ್ಯವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ತನ್ನ ನಾಡಿನಲ್ಲಿ ಸ್ವತಃ ಹಲವು ಹೊಸ ದೇವಾಲಯಗಳನ್ನು ಕೆತ್ತಿಸಿದನು. ಇವು ದಾಕ್ಷಿಣಾತ್ಯ ಮತ್ತು ಔತ್ತರೇಯ ದೇಗುಲವಾಸ್ತು ಲಕ್ಷಣಗಳನ್ನು ಬೆರೆಸುವಲ್ಲಿ ಯಶಸ್ವೀ ಪ್ರಯೋಗಗಳಾಗಿವೆ. ಚಲುಕ್ಯರ ಕೊನೆಯ ಅರಸ ಇಮ್ಮಡಿ ಕೀರ್ತಿವರ್ಮನನ್ನು (ಕ್ರಿ.ಶ. ೭೪೪-೭೫೭) ರಾಷ್ಟ್ರಕೂಟ ಮನೆತನದ ದಂತಿದುರ್ಗನು ಸೋಲಿಸಿ ಸ್ವತಂತ್ರ ಅಧಿಪತ್ಯವನ್ನು ಸ್ಥಾಪಿಸಿದನು.[೯]

ಚಲುಕ್ಯರ ಕಾಲದಲ್ಲಿ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ದೇಶ, ನಾಡು, ಮಂಡಲ, ರಾಷ್ಟ್ರ, ವಿಷಯ, ಆಹಾರ, ಭೋಗ ಎಂದಿತ್ಯಾಗಿ ವಿಂಗಡಿಸಲಾಗಿತ್ತು. ಇವುಗಳಲ್ಲಿ 'ವಿಷಯ'ವೇ ಪ್ರಧಾನ ಆಡಳಿತ ವಿಭಾಗವಾಗಿತ್ತು. ಪ್ರಾಂತಾಡಳಿತಗಾರರು ಅಧಿಕಾರ ಹೊಂದಿದ್ದ ಪ್ರದೇಶಗಳ ವ್ಯಾಪ್ತಿಯಲ್ಲಿ ಹಲವು ವಿಷಯಗಳು ಸೇರಿದ್ದವು. ಆಯಾ ಪ್ರದೇಶದ ಅಧಿಕಾರವನ್ನು ಅವರುಗಳೇ ಅರಸರಿಗೆ ಸಹಾಯಕರಾಗಿ ನಿರ್ವಹಿಸುತ್ತಿದ್ದರು. ಇಂತಹ ಹಲವು ವಿಷಯಗಳಲ್ಲಿ ಕುಹುಣ್ಡಿವಿಷಯ ಒಂದಾಗಿದೆ.[೧೦] ೧ನೆಯ ಪುಲಕೇಶಿ, ಇಮ್ಮಡಿ ಪುಲಕೇಶಿ, ೧ನೆಯ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯರ ಕಾಲಾವಧಿಯ ಕೊಲ್ಲಾಪುರದ ಕ್ರಿ.ಶ. ೪೮೯-೪೯೦ರ ತಾಮ್ರಪಟ, ಬಾದಾಮಿ ತಾಲ್ಲೂಕಿನ ಚೋಳಚಗುಡ್ಡದ ಕ್ರಿ.ಶ. ೭೦೫ರ ತಾಮ್ರಪಟ, ರತ್ನಾಗಿರಿ ಜಿಲ್ಲೆಯ ನೇರೂರದ ಕ್ರಿ.ಶ. ಸುಮಾರು ೭ನೆಯ ಶತಮಾನದ

ತಾಮ್ರಪಟ ಶಾಸನ, ಸಾತಾರ ಜಿಲ್ಲೆಯ ಎಲಾಪುರದ ಕ್ರಿ.ಶ. ೭೦೩ರ ತಾಮ್ರಪಟ ಶಾಸನಗಳಲ್ಲಿ ಕುಹುಣ್ಡಿವಿಷಯದ ಪ್ರಸ್ತಾಪಗಳಿವೆ.[೧೧] ಈ ವಿಷಯದಲ್ಲಿ ಇಂದಿನ ಕೊಲ್ಲಾಪುರ, ಸಾಂಗಲಿ, ಸಾತಾರ, ಬೆಳಗಾವಿ ಜಿಲ್ಲೆಗಳ ಕೆಲವು ಪ್ರದೇಶಗಳು ಸೇರ್ಪಡೆಯಾಗಿದ್ದವು. ಮಾನಪುರದ ರಾಷ್ಟ್ರಕೂಟರು ಮತ್ತು ಅಲಕ್ತಕ ನಗರದ ಸೇಂದ್ರಕರು ಚಲುಕ್ಯರ ಅಧೀನದಲ್ಲಿ ಕುಹುಣ್ಡಿವಿಷಯದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ವಿಜಯಾದಿತ್ಯನು ಕುಹುಣ್ಡಿನಗರದ ನೆಲೆವೀಡಿನಲ್ಲಿದ್ದ ಸಂದರ್ಭದಲ್ಲಿ ಈತನ ಸಹೋದರಿ ಕುಂಕುಮದೇವಿಯ ಕೋರಿಕೆಯಂತೆ ಮಲ್ಲಗ್ರಾಮ–೩೦ ಆಡಳಿತ ವಿಭಾಗದಲ್ಲಿನ ಲೋಹಗಜ್ಜವಾಟಕ ಗ್ರಾಮವನ್ನು (ಇಂದಿನ ವಿಜಾಪುರ ಸಮೀಪದ ಲೋಹಗಾಂವ) ಭುವನಶರ್ಮನ ಮೊಮ್ಮಗನೂ, ದೇವಶರ್ಮನ ಪುತ್ರನೂ ಆದ ಹಾರಿತಿಗೋತ್ರದ ಸೋಮಶರ್ಮನಿಗೆ ದತ್ತಿ ಕೊಟ್ಟಿದ್ದಾನೆ.[೨]

೩.೨.೨. ಮಳಖೇಡದ ರಾಷ್ಟ್ರಕೂಟರು

ಕೂಹುಂಡಿನಾಡಿನ ಪ್ರದೇಶವು ಚಲುಕ್ಯರ ತರುವಾಯ ಮಳಖೇಡದ ರಾಷ್ಟ್ರಕೂಟರ ಅಧೀನಕ್ಕೊಳಪಟ್ಟಿತ್ತು. ಗೋಕಾಕದ ಕ್ರಿ.ಶ. ೫೩೨–೩೩ರ ಜೈನ ತಾಮ್ರಪಟ ಶಾಸನವು ದಕ್ಷಿಣ ಭಾರತದಲ್ಲೇ ಮಾನಪುರದ ರಾಷ್ಟ್ರಕೂಟ ಮನೆತನದ ಪ್ರಾಚೀನ ಶಾಸನವೆನ್ನಲಾಗಿದೆ. ಈ ಶಾಸನದಲ್ಲಿ ದೆಜ್ಜಮಹಾರಾಜನ (ಮುಮ್ಮಡಿ ದೇವರಾಜ/ಕ್ರಿ.ಶ. ೫೩೦–೫೫೦) ಆಳ್ವಿಕೆಯ ಸಂದರ್ಭದಲ್ಲಿ ಸೇಂದ್ರಕ ಮನೆತನದ ಇಂದ್ರನಂದಿ ಅರಸನು ತನ್ನ ಹಾಗೂ ತನ್ನ ಪೂರ್ವಜರ ಪುಣ್ಯಗೊಸ್ಕರ ಕಷ್ಮಾಂಡಿವಿಷಯದಲ್ಲಿನ ಜಳಾರ ಗ್ರಾಮದಲ್ಲಿ ಅರಹಂತ ತೀರ್ಥಂಕರನ ಪೂಜೆಗೆ, ಶಿಕ್ಷಕರಿಗೆ, ರೋಗಿಗಳಿಗೆ, ವೃದ್ಧರಿಗೆ ಮತ್ತು ತಪಸ್ವಿಗಳಿಗೆ ಜಂಬೂಖಂಡಗಣ ಪರಂಪರೆಯ ಆರ್ಯನಂದಿ ಆಚಾರ್ಯನಿಗೆ ಐವತ್ತು ನಿವರ್ತನ ಭೂಮಿಯನ್ನು ದಾನ ಮಾಡಿದ ಪ್ರಸ್ತಾಪವಿದೆ.[೩] ಇವರಿಬ್ಬರೂ ಚಲುಕ್ಯರ ಸಾಮಂತರಾಗಿ ಕುಹುಣ್ಡಿವಿಷಯದ ಪರಿಸರದಲ್ಲಿ ಆಳುತ್ತಿದ್ದರು. ಮಳಖೇಡದ ರಾಷ್ಟ್ರಕೂಟ ಮನೆತನದ ದಂತಿದುರ್ಗನೂ (ಕ್ರಿ.ಶ. ೭೩೫–೭೫೭) ಚಲುಕ್ಯರ ಸಾಮಂತನಾಗಿ ಆಳುತ್ತಿದ್ದನು. ಈತನು ಚಲುಕ್ಯರ ಕೊನೆಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಕ್ರಿ.ಶ. ೭೫೭ರಲ್ಲಿ ಸೋಲಿಸಿ ಮಾನ್ಯಖೇಟದಲ್ಲಿ ಸ್ವತಂತ್ರ ಅಧಿಪತ್ಯವನ್ನು ಸ್ಥಾಪಿಸಿದನು. ಈತನ ತರುವಾಯ ಈತನ ಚಿಕ್ಕಪ್ಪನಾದ ೧ನೆಯ ಕೃಷ್ಣನು (ಕ್ರಿ.ಶ. ೭೫೭–೭೭೫) ರಾಷ್ಟ್ರಕೂಟ ಸಿಂಹಾಸನವನ್ನೇರಿದನು. ಈತನು ತನ್ನ ಶಕ್ತಿ–ಸಾಮರ್ಥ್ಯವನ್ನು ಸ್ಥಾಪಿಸಲು ಕಾರ್ಯಪ್ರವೃತ್ತನಾಗಿ ಹಲವು ದಂಡಯಾತ್ರೆಗಳ ಮೂಲಕ ಕೊಂಕಣ, ಗಂಗರು, ವೆಂಗಿನಾಡು ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿದನು.

೧ನೆಯ ಕೃಷ್ಣನ ತರುವಾಯ ಈತನ ಹಿರಿಯ ಪುತ್ರ ಇಮ್ಮಡಿ ಗೋವಿಂದನು (ಕ್ರಿ.ಶ. ೭೭೫–೭೮೦) ಅಧಿಕಾರಕ್ಕೆ ಬಂದನು. ಸುಖ–ಭೋಗಗಳಲ್ಲಿಯೇ ಮೈಮರೆತ ಈತನ ಕಾಲದಲ್ಲಿ ಸಾಮ್ರಾಜ್ಯದಲ್ಲಿ ಅರಾಜಕತೆಯುಂಟಾಯಿತು. ಹೀಗಾಗಿ ಈತನ ಸಹೋದರ ಧ್ರುವನು (ಕ್ರಿ.ಶ. ೭೮೦–೭೯೩) ಈತನನ್ನು ಅಧಿಕಾರದಿಂದ ಹೊರತಳ್ಳಿ ಸಾಮ್ರಾಜ್ಯದ ಅಧಿಪತ್ಯ ವಹಿಸಿಕೊಂಡನು. ಈತನು ತನ್ನ ಪುತ್ರರಾದ ಗೋವಿಂದ ಮತ್ತು ಇಂದ್ರನ ನೆರವಿನಿಂದ ಸೈನ್ಯ ಸಂಘಟಿಸಿ ಬಲಾಢ್ಯ ಸೈನ್ಯದೊಂದಿಗೆ

ಉತ್ತರದ ಗೂರ್ಜರ ಪ್ರತಿಹಾರರು, ಬೆಂಗಾಲದ ಪಾಲರು, ವೆಂಗಿಯ ಚಾಳುಕ್ಯರನ್ನು ಸೋಲಿಸುವ ಮೂಲಕ ಉತ್ತರದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಹಾಗೆಯೇ ದಕ್ಷಿಣದಲ್ಲಿ ಗಂಗರು, ಪಲ್ಲವರನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಈತನ ತರುವಾಯ ಸಿಂಹಾಸನವನ್ನೇರಿದ ಮುಮ್ಮಡಿ ಗೋವಿಂದನು (ಕ್ರಿ.ಶ. ೭೯೩-೮೧೪) ತಂದೆಯಂತೆ ಉತ್ತರದಲ್ಲಿ ದಂಡಯಾತ್ರೆಗಳನ್ನು ಕೈಗೊಂಡು ಪಾಲರು, ಪ್ರತಿಹಾರರು ಮೊದಲಾದವರು ತನ್ನ ಅಧಿಪತ್ಯವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ನಂತರ ಹಿಮಾಲಯದವರೆಗೂ ತನ್ನ ವಿಜಯ ಯಾತ್ರೆಯನ್ನು ಮುಂದುವರೆಸಿ ನರ್ಮದಾ, ವೆಂಗಿಯ ಮೂಲಕ ರಾಜಧಾನಿಗೆ ಮರಳಿದನು. ದಕ್ಷಿಣದಲ್ಲಿ ತನ್ನ ಮೇಲೆ ಆಕ್ರಮಣ ಕೈಗೊಳ್ಳಲು ಗಂಗರು, ಚೇರರು, ಪಾಂಡ್ಯರು, ಪಲ್ಲವರು ಮಾಡಿಕೊಂಡ ಒಕ್ಕೂಟವನ್ನು ಸದೆಬಡಿದನು. ಸಿಂಹಳದಲ್ಲಿಯೂ ತನ್ನ ರಾಜಕೀಯ ಪ್ರಭಾವನ್ನು ಸ್ಥಾಪಿಸಿದನು. ಹೀಗೆ ತನ್ನ ಸಾವಮ್ರಾಜ್ಯವನ್ನು ಉತ್ತರದಲ್ಲಿ ಕನೌಜದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೂ, ಪೂರ್ವದಲ್ಲಿ ಬನಾರಸದಿಂದ ಪಶ್ಚಿಮದಲ್ಲಿ ಬರೂಚ್‌ದವರೆಗೂ ಸಾಮ್ರಾಜ್ಯವನ್ನು ವಿಸ್ತರಿಸಿದನು.[೧೪]

ಮುಮ್ಮಡಿ ಗೋವಿಂದನ ತರುವಾಯ ಈತನ ಪುತ್ರ ೧ನೆಯ ಅಮೋಘವರ್ಷ ನೃಪತುಂಗನು (ಕ್ರಿ.ಶ. ೮೧೪-೮೮೦) ತನ್ನ ೧೪ನೆಯ ವಯಸ್ಸಿನಲ್ಲಿ ಸಿಂಹಾಸನವನ್ನೇರಿ ದೀರ್ಘಕಾಲದವರೆಗೂ ಆಳ್ವಿಕೆ ಮಾಡಿದನು. ಈತನು ವೆಂಗಿ, ತಲಕಾಡು, ಅಂಗ, ವಂಗ, ಮಗಧ, ಮಾಳ್ವ ಮೊದಲಾದ ರಾಜ್ಯಗಳನ್ನು ಸೋಲಿಸುವ ಮೂಲಕ ಸಾಮ್ರಾಜ್ಯವನ್ನು ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ಪೂರ್ವದಲ್ಲಿ ವೆಂಗಿಯಿಂದ ಪಶ್ಚಿಮದಲ್ಲಿ ಬರೂಚವರೆಗೂ ವಿಸ್ತರಿಸಿದನು. ಈ ನಿಟ್ಟಿನಲ್ಲಿ ಈತನ ಮಹಾಸಾಮಂತರಾದ ಬಂಕಾಪುರದ ಚಲ್ಲಕೇತನರು ಮತ್ತು ಸವದತ್ತಿಯ ರಟ್ಟರ ಪಾತ್ರ ಗಮನಾರ್ಹವಾಗಿದೆ. ಈತನು ಕ್ರಿ.ಶ. ೮೭೮ರಲ್ಲಿ ಸಿಂಹಾಸನವನ್ನು ತ್ಯಜಿಸಿ ತನ್ನ ಪುತ್ರ ಇಮ್ಮಡಿ ಕೃಷ್ಣನನ್ನು (ಕ್ರಿ.ಶ. ೮೭೮-೯೧೪) ಪಟ್ಟಕ್ಕೆ ತಂದನು. ಈತನು ವೆಂಗಿಯ ಚಾಳುಕ್ಯರು, ಗೂರ್ಜರ ಪ್ರತಿಹಾರರು, ಚೋಳರನ್ನು ಎದುರಿಸಿದನು. ತರುವಾಯ ಈತನ ಮೊಮ್ಮಗ ಮುಮ್ಮಡಿ ಇಂದ್ರನು (ಕ್ರಿ.ಶ. ೯೧೪-೯೨೮) ಸಿಂಹಾಸನವನ್ನೇರಿ ವೆಂಗಿಯ ಚಾಳುಕ್ಯರ ಸಹಾಯದಿಂದ ಉತ್ತರ ಭಾರತದಲ್ಲಿ ದಂಡಯಾತ್ರೆಗಳನ್ನು ಕೈಗೊಂಡು ಗೂರ್ಜರು, ಬಾಣರು ಮೊದಲಾದವರು ತನ್ನ ಸ್ವಾಮಿತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಈತನ ನಂತರದಲ್ಲಿ ಪಟ್ಟಕ್ಕೆ ಬಂದ ಇಮ್ಮಡಿ ಅಮೋಘವರ್ಷ (ಕ್ರಿ.ಶ. ೯೨೮-೯೩೧), ೪ನೆಯ ಗೋವಿಂದ (ಕ್ರಿ.ಶ. ೯೩೧-೯೩೬), ಮುಮ್ಮಡಿ ಅಮೋಘವರ್ಷ (ಕ್ರಿ.ಶ. ೯೩೬-೯೩೯) ಕೆಲವೇ ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಮುಮ್ಮಡಿ ಅಮೋಘವರ್ಷನ ತರುವಾಯ ಈತನ ಪುತ್ರ ಮುಮ್ಮಡಿ ಕೃಷ್ಣನು (ಕ್ರಿ.ಶ. ೯೩೯-೯೬೭) ಸಿಂಹಾಸವನ್ನೇರಿ ಸುತ್ತಲಿನ ವೈರಿಗಳನ್ನು ಜಯಿಸಿ ಉತ್ತರದಲ್ಲಿಯೂ ತನ್ನ ಪ್ರಭುತ್ವ ಸ್ಥಾಪನೆ ಮಾಡಿ ರಾಷ್ಟ್ರಕೂಟ ಕೀರ್ತಿಯನ್ನು ಮತ್ತೊಮ್ಮೆ ಉತ್ತರದಲ್ಲಿ ಹಾರಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ತರುವಾಯ ಖೊಟ್ಟಿಗ (ಕ್ರಿ.ಶ. ೯೬೭-೯೭೨) ಮತ್ತು ಇಮ್ಮಡಿ ಕರ್ಕ (ಕ್ರಿ.ಶ. ೯೭೨-೯೭೩) ಆಳ್ವಿಕೆ ಮಾಡಿದರು. ಇಮ್ಮಡಿ ಕರ್ಕನು ಅಸಮರ್ಥನಾದ್ದರಿಂದ

ಕಲ್ಯಾಣದ ಚಾಳುಕ್ಯ ಮನೆತನದ ಇಮ್ಮಡಿ ತೈಲಪನು ಈತನನ್ನು ಬದಿಗೊತ್ತಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದನು.[೧೫]

ರಾಷ್ಟ್ರಕೂಟರು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಪ್ರಾಂತ, ರಾಷ್ಟ್ರ, ವಿಷಯ, ಮಂಡಲಗಳಲ್ಲಿ ವಿಂಗಡಿಸಿದ್ದರು. ಇವುಗಳಲ್ಲಿ ಮಹಾಮಂಡಳೇಶ್ವರರು, ಮಹಾಸಾಮಂತರು ಆಡಳಿತ ನಡೆಸುತ್ತಿದ್ದರು. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಕುಹುಣ್ಡಿವಿಷಯ ಪ್ರದೇಶದಲ್ಲಿ ಸವದತ್ತಿಯ ರಟ್ಟರು, ಭೈಸರು, ಕೊಲ್ಲಾಪುರದ ಶಿಲಾಹಾರರು ಮಹಾಸಾಮಂತರಾಗಿ ಆಳ್ವಿಕೆ ಮಾಡುತ್ತಿದ್ದರು. ಸವದತ್ತಿಯ ಕ್ರಿ.ಶ. ೮೭೫-೭೬ರ ಶಾಸನದಲ್ಲಿ-

ಸ್ವಸ್ತಿಸಮಸ್ತ ಭುವನಾಶ್ರಯಂ ಶ್ರೀಪೃಥ್ವೀವಲ್ಲಭ
ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ
ರಾಷ್ಟ್ರಕೂಟಕುಳತಿಳಕಂ ಶ್ರೀಮತ್ಕೃಷ್ಣರಾಜದೇವ
ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾ
ಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ॥

ಎಂದು ಇಮ್ಮಡಿ ಕೃಷ್ಣನ ವಿವಿಧ ಬಿರುದಾವಳಿಗಳು ಮತ್ತು ಆಳ್ವಿಕೆಯ ಪ್ರಸ್ತಾಪವಿದೆ.[೧೬] ಈತನ ಅಧೀನದಲ್ಲಿ ರಟ್ಟರ ಮೂಲ ಪುರುಷ ಮೇರಡ ಮತ್ತು ಈತನ ಪುತ್ರ ಪೃಥ್ವೀರಾಮರು ಸುಗಂಧವರ್ತಿ-೧೨ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಮುಮ್ಮಡಿ ಗೋವಿಂದನ ಚಂದಗಡ ತಾಲ್ಲೂಕಿನ ನೇಸರಿಕಾದ ಕ್ರಿ.ಶ. ೮೦೫ರ ತಾಮ್ರಪಟ ಶಾಸನದಲ್ಲಿ ಚಂದಘಡ ವಿಷಯದ ನೇಸರಿಕಾ ಗ್ರಾಮವನ್ನು ಇಕ್ಷುಗ್ರಾಮ ವಾಸಿಯಾದ ಭಾರದ್ವಾಜ ಗೋತ್ರದ ತೈತ್ತರೀಯ ಶಾಖೆಯ ಭಾರಿದಾಸ ಚತುರ್ವೇದಿಯ ಮೊಮ್ಮಗನೂ ಪರಿವಚ್ಚರ ಚತುರ್ವೇದಿಯ ಮಗನೂ ಆದ ಶಿವನಾಗಭಟ್ಟನಿಗೆ ದತ್ತಿ ನೀಡಿದ ವಿವರವಿದೆ.[೭] ೧ನೆಯ ಅಮೋಘವರ್ಷ ನೃಪತುಂಗನು ಕುಮುದವಾಡ-೩೦ ಕಂಪಣದ ಕೇಂದ್ರ ಪಟ್ಟಣ ಕಲ್ಲಬಾವಿ ಮತ್ತು ಕೊಲ್ಲಾಪುರಕ್ಕೆ ಭೇಟ್ಟಿನೀಡಿದ್ದನು. ಈತನ ಕಾಲದಲ್ಲಿ ಶ್ರೀವಿಜಯನು ರಚಿಸಿರುವ 'ಕವಿರಾಜಮಾರ್ಗ'ದಲ್ಲಿ-

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯವಿಲೀನವಿಶದವಿಷಯವಿಶೇಷಂ ॥
ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥

ಒಂಕುಂದವು (ಇಂದಿನ ಬೈಲಹೊಂಗಲ ತಾಲ್ಲೂಕಿನ ಒಕ್ಕುಂದ) ತಿರುಳಗನ್ನಡ ನಾಡಿನಲ್ಲಿದ್ದ ಪ್ರಮುಖ ನೆಲೆಗಳಲ್ಲೊಂದಾಗಿತ್ತೆಂಬ ಪ್ರಸ್ತಾಪವಿದೆ.

೩.೨.೩. ಕಲ್ಯಾಣದ ಚಾಲುಕ್ಯರು

ಕೂಹುಂಡಿನಾಡಿನ ಪ್ರದೇಶವು ರಾಷ್ಟ್ರಕೂಟರ ತರುವಾಯ ಕಲ್ಯಾಣದ ಚಾಲುಕ್ಯರ ಅಧೀನಕ್ಕೊಳಪಟ್ಟಿತ್ತು. ಇವರ ವಿಸ್ತೃತ ಆಳ್ವಿಕೆಯಿಂದ ಈ ನಾಡಿನ ಚರಿತ್ರೆ ಹೆಚ್ಚು ನಿಚ್ಚಳವಾಗಿ ಕಾಣುತ್ತದೆ. ಈ ಮನೆತನದ ಪ್ರಾರಂಭದ ಅರಸರು ರಾಷ್ಟ್ರಕೂಟರ ಸಾಮಂತರಾಗಿದ್ದರು. ಇಮ್ಮಡಿ ತೈಲಪನು (ಕ್ರಿ.ಶ. ೯೭೩–೯೯೭) ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನನ್ನು (ಕನ್ನರದೇವ) ಬದಿಗೊತ್ತಿ ಮಾನ್ಯಖೇಟದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಈತನು ಗಂಗರು, ಚೋಳರನ್ನು ಸದೆಬಡಿದು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಹಾಗೆಯೇ ಗುಜರಾತ, ಚೇದಿ, ನೇಪಾಳ, ಶಿಲಾಹಾರ ಮನೆತನದ ಅಪರಾಜಿತ ಮೊದಲಾದ ಅರಸರನ್ನು ಸೋಲಿಸಿ ಸಾಮ್ರಾಜ್ಯವನ್ನು ವಿಸ್ತರಿಸಿದನು. ಕೂಹುಂಡಿನಾಡಿನ ಏಣಗಿಯ ಕ್ರಿ.ಶ. ಸುಮಾರು ೧೦ನೆಯ ಶತಮಾನದ, ಸವದತ್ತಿಯ ಕ್ರಿ.ಶ. ೯೮೦ರ, ಸೊಗಲದ ಕ್ರಿ.ಶ. ೯೭೮ರ ಶಾಸನಗಳು–

> ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ
> ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ
> ಚಾಳುಕ್ಯಾಭರಣಂ ಶ್ರೀಭುಜಬಳಚಕ್ರವರ್ತ್ತಿ ನೂರ್ಮ್ಮಡಿತೈಲಪದೇವ
> ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕ
> ತಾರಂ ಸಲುತ್ತಮಿರೆ ॥

ಎಂದು ಈತನ ವಿವಿಧ ಪ್ರಶಸ್ತಿಗಳು ಮತ್ತು ಆಳ್ವಿಕೆಯನ್ನು ನಿರೂಪಿಸಿವೆ.[೧೮] ತರುವಾಯ ಈತನ ಪುತ್ರ ಇರಿವಬೆಡಂಗ ಸತ್ಯಾಶ್ರಯನು (ಕ್ರಿ.ಶ. ೯೯೭–೧೦೦೮) ಸಿಂಹಾಸವನ್ನೇರಿದನು. ಈತನು ಪಾರಮಾರರು, ಚೋಳರು, ವೆಂಗಿಯ ಚಾಳುಕ್ಯರು, ಉತ್ತರದ ಶಿಲಾಹಾರರು, ಕೊಂಕಣ, ಲಾಟ ಮೊದಲಾದವರನ್ನು ಸೋಲಿಸಿ, ಅವರೆಲ್ಲರೂ ತನ್ನ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಬೇಡಕಿಹಾಳದ ಕ್ರಿ.ಶ. ೧೦೦೦ರ ತ್ರಾಮಪಟ ಶಾಸನವು–

> ಸ್ವಸ್ತಿ ಸಮಸ್ತಭುವನಾಶ್ರೆಯ ಪ್ರಿಥಿವೀವಲ್ಲಭ ಮಹಾರಾಜಾಧಿರಾಜಂ
> ರಾಜಪರಮೇಶ್ವರಂ ಪರಮಭಟ್ಟಾರಕಂ ಚಾಳ್ಕ್ಯಾಭರಣಂ
> ತೈಲನ್ರಿಪಕುಳತಿಳಕಂ ಶ್ರೀಮತ್ಸತ್ಯಾಶ್ರೆಯದೇವರ್
> ಪ್ರಿಥಿವೀರಾಜ್ಯಂಗೆಯುತ್ತಮಿರೆ ॥

ಎಂದು ಈತನ ಆಳ್ವಿಕೆಯನ್ನು ಪ್ರಸ್ತಾಪಿಸಿದೆ.[೧೯] ಈತನ ತರುವಾಯ ಈತನ ಸಹೋದರ ದಶವರ್ಮನ ಪುತ್ರ ೫ನೆಯ ವಿಕ್ರಮಾದಿತ್ಯನು (ಕ್ರಿ.ಶ. ೧೦೦೮–೧೦೧೫) ಪಟ್ಟಕ್ಕೆ ಬಂದನು. ಈತನು ಚೋಳರನ್ನು ಸದೆಬಡಿದನು. ಈತನು ಕ್ರಿ.ಶ. ೧೦೧೫ರಲ್ಲಿ ಮರಣವನ್ನಪ್ಪಿದಾಗ ಈತನ ಸಹೋದರ ಅಯ್ಯಣನು ಪಟ್ಟಕ್ಕೆ ಬಂದು ಕೆಲವು ತಿಂಗಳು ಕಾಲ ಆಳ್ವಿಕೆ ಕೈಗೊಂಡು ರಾಜಕೀಯದಿಂದ ನಿವೃತ್ತನಾದನೆಂದು 'ಅಯ್ಯನವಂಶ ಚರಿತ' ಕಾವ್ಯದಿಂದ ತಿಳಿಯುತ್ತದೆ.

ಅಯ್ಯಣನ ತರುವಾಯ ಈತನ ಸಹೋದರ ಇಮ್ಮಡಿ ಜಯಸಿಂಹನು (ಕ್ರಿ.ಶ. ೧೦೧೫–

೧೦೪೪) ಸಿಂಹಾಸನವನ್ನೇರಿದನು. ಈತನು ವೆಂಗಿಯ ಚಾಲುಕ್ಯರು, ಚೋಳರನ್ನು ಸದೆಬಡಿದನು. ರಾಯಬಾಗದ ಕ್ರಿ.ಶ. ೧೦೪೧ರ, ಕೊಣ್ಣೂರದ ಕ್ರಿ.ಶ. ೧೦೩೭ರ, ಮಂಟೂರದ ಕ್ರಿ.ಶ. ೧೦೪೧ರ ಶಾಸನಗಳು–

ಓಮ್ ಸ್ವಸ್ತಿಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ
ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮಜ್ಜಗದೇಕಮಲ್ಲದೇವರ್ ಪೊಟ್ಟಳಕೆಱೆಯ
ನೆಲೆವೀಡಿನೊಳ್ಸುಖಸಂತತವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥

ಎಂದು ಈತನ ಆಳ್ವಿಕೆಯನ್ನು ಉಲ್ಲೇಖಿಸಿವೆ.[೨೦] ತರುವಾಯ ಈತನ ಸಹೋದರ ೧ನೆಯ ಸೋಮೇಶ್ವರನು (ಕ್ರಿ.ಶ. ೧೦೪೪–೧೦೬೮) ಸಿಂಹಾಸನವನ್ನೇರಿ ಮಾನ್ಯಖೇಟದಿಂದ ಕಲ್ಯಾಣಕ್ಕೆ ತನ್ನ ರಾಜಧಾನಿಯನ್ನು ವರ್ಗಾಯಿಸಿದನು. ಈತನ ಕಾಲದಲ್ಲಿ ದಕ್ಷಿಣ ಭಾರತವು ಚಾಲುಕ್ಯ–ಚೋಳರ ಸಂಘರ್ಷದಿಂದ ರಣರಂಗವಾಗಿ ಪರಿಣಮಿಸಿತು.[೨೧] ಬೈಲಹೊಂಗಲದ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೦೫೨ರ, ಸವದತ್ತಿಯ ಕ್ರಿ.ಶ. ೧೦೪೮ರ ಮತ್ತು ೧೦೮೭ರ, ಕೋಚರಿಯ ಕ್ರಿ.ಶ. ೧೦೫೬ರ, ತೇರ್ಣಿಯ ಕ್ರಿ.ಶ. ೧೦೬೨ರ ಶಾಸನಗಳು–

ಸ್ವಸ್ತಿಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ
ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮತ್ತ್ರೈಲೋಕ್ಯಮಲ್ಲದೇವರ ವಿಜಯರಾಜ್ಯ
ಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾ
ಚಂದ್ರಾರ್ಕತಾರಂಬರಂ ಸಲುತ್ತಮಿರೆ ॥

ಎಂದು ಈತನ ಬಿರುದಾವಳಿಗಳು ಮತ್ತು ಆಳ್ವಿಕೆಯನ್ನು ನಿರೂಪಿಸಿವೆ.[೨೨] ಈತನ ಪಟ್ಟದರಸಿ ದೀನಾನಾಥ ಚಿಂತಾಮಣಿ ಏಕವಾಕ್ಯೆ ಗುಣದಬೆಡಂಗಿ ಎಂದು ಪ್ರಸಿದ್ಧವಾಗಿದ್ದ ಅಕ್ಕಾದೇವಿಯು ಗೋಕಾಗೆಯ (ಇಂದಿನ ಗೋಕಾಕ) ನೆಲೆವೀಡಿನಲ್ಲಿದ್ದ ಸಂದರ್ಭದಲ್ಲಿ ವಿಕ್ರಮಪುರದ (ಇಂದಿನ ಹುನಗುಂದ ತಾಲ್ಲೂಕಿನ ಅರಸಿಬೀದಿ) ಗೊಣದ ಬೆಡಂಗಿಯ ಜಿನಾಲಯದ ವಿವಿಧ ಧಾರ್ಮಿಕ ಕಾರ್ಯಗಳಿಗೆ ಕಿಸಾಕಾಡು–೭೦ ಆಡಳಿತ ವಿಭಾಗದ ಬಳಿಯ ಗಾಣದ ಹೋಳೂರು ಗ್ರಾಮವನ್ನು ದತ್ತಿ ಕೊಟ್ಟಿದ್ದಾಳೆ.[೨೩]

೧ನೆಯ ಸೋಮೇಶ್ವರನ ತರುವಾಯ ಈತನ ಪುತ್ರ ಇಮ್ಮಡಿ ಸೋಮೇಶ್ವರನು (ಕ್ರಿ.ಶ. ೧೦೬೮–೧೦೭೬) ಸಿಂಹಾಸನವನ್ನೇರಿದನು. ಈತನು ಚೋಳರು, ಪಾರಮಾರರು ಮೊದಲಾದವರನ್ನು ಸದೆಬಡಿದನು. ಕ್ರಿ.ಶ. ೧೦೭೩ ರಿಂದ ೧೯೭೬ರವರೆಗೆ ಬಂಕಾಪುರವನ್ನು ತನ್ನ ಎರಡನೆಯ ರಾಜಧಾನಿಯಾಗಿ ಮಾಡಿಕೊಂಡಿದ್ದನು. ಬೆಳವಡಿಯ ಕ್ರಿ.ಶ. ೧೦೭೦ರ ಮತ್ತು ೧೦೭೫ರ, ಸವದತ್ತಿಯ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನಗಳು ಈತನ ವಿವಿಧ ಪ್ರಶಸ್ತಿಗಳು ಮತ್ತು ಆಳ್ವಿಕೆಯನ್ನು ಪ್ರಸ್ತಾಪಿಸಿವೆ.[೨೪] ತರುವಾಯ ಈತನ ಪುತ್ರ ೬ನೆಯ ವಿಕ್ರಮಾದಿತ್ಯನು (ಕ್ರಿ.ಶ. ೧೦೭೬–೧೧೨೭)

ಸಿಂಹಾಸವನ್ನೇರಿ ಚಾಳುಕ್ಯ ವಿಕ್ರಮಶಕೆಯನ್ನು ಆರಂಭಿಸಿದನು. ಈತನು ಚೋಳ, ಲಾಳ, ಮಾಳವ, ಸೌರಾಷ್ಟ್ರ, ಕಳಿಂಗ, ವಂಗ, ಮಗಧ, ಆಂಧ್ರ, ಆವಂತಿ, ಪಾಂಚಾಳ, ಗೂರ್ಜರ, ನೇಪಾಳ, ಗೌಡ, ಬರ್ಬರ, ಕರಹಾಟ, ಚೇದಿ, ಕಾಶ್ಮೀರ, ಸಿಂಧು, ತುರುಷ್ಕ ಮೊದಲಾದ ಅರಸರನ್ನು ಸೋಲಿಸಿ ಸಾಮ್ರಾಜ್ಯವನ್ನು ದಕ್ಷಿಣದಲ್ಲಿ ಕಾವೇರಿ ನದಿಯಿಂದ ಉತ್ತರದಲ್ಲಿ ಗೋದಾವರಿ ನದಿಯನ್ನು ದಾಟಿ ಇಂದಿನ ಮಧ್ಯಪ್ರದೇಶದವರೆಗೂ, ಪೂರ್ವ-ಪಶ್ಚಿಮಗಳಲ್ಲಿ ಸಮುದ್ರದವರೆಗೂ ವಿಸ್ತರಿಸಿದನು.[೨೫]

ಬೈಲಹೊಂಗಲದ ಕ್ರಿ.ಶ. ೧೧ನೆಯ ಶತಮಾನದ, ವಣ್ಣೂರದ ಕ್ರಿ.ಶ. ೧೧೧೪ರ, ಅರಟಗಲ್ಲದ ಕ್ರಿ.ಶ. ೧೧೦೦ರ, ಅಸುಂಡಿಯ ಕ್ರಿ.ಶ. ೧೦೯೩ರ, ಇಂಚಲದ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ಉಗರಗೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ನವಿಲುತೀರ್ಥದ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ಮದಲೂರದ ಕ್ರಿ.ಶ. ೧೦೯೨ರ, ಸವದತ್ತಿಯ ಕ್ರಿ.ಶ. ೧೦೯೮ರ, ಉಮರಾಣಿಯ ಕ್ರಿ.ಶ. ೧೧೨೩ರ, ಉಳ್ಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ರಾಯಬಾಗದ ಕ್ರಿ.ಶ. ೧೦೭೭ರ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ, ಕುಂದರಗಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ, ಕೊಣ್ಣೂರದ ಕ್ರಿ.ಶ. ೧೦೮೭ರ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ, ತೇರದಾಳದ ಕ್ರಿ.ಶ. ೧೧೨೩ರ, ಬೆಳಗಲಿಯ ಕ್ರಿ.ಶ. ೧೦೭೬ರ, ರೂಗಿಯ ಕ್ರಿ.ಶ. ೧೧೦೮ರ ಶಾಸನಗಳು_

ಸ್ವಸ್ತಿಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ
ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ
ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ
ಶ್ರೀಮತ್ರಿಭುವನಮಲ್ಲದೇವರ ವಿಜಯರಾಜ್ಯ
ಮುತ್ತರೋತ್ತರಾಭಿವೃದ್ಧಿ ಪ್ರವರ್ಧ್ಧಮಾನಮಾ
ಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ॥

ಎಂದು ೬ನೆಯ ವಿಕ್ರಮಾದಿತ್ಯನ ವಿವಿಧ ಬಿರುದಾವಳಿಗಳು ಮತ್ತು ಆಳ್ವಿಕೆಯನ್ನು ಪ್ರಸ್ತಾಪಿಸಿವೆ.[೨೬] ತರುವಾಯ ಈತನ ಪುತ್ರ ಮುಮ್ಮಡಿ ಸೋಮೇಶ್ವರನು (ಕ್ರಿ.ಶ. ೧೧೨೬-೧೧೩೮) ಸಿಂಹಾಸನವನ್ನೇರಿದನು. ಈ ಕಾಲಾವಧಿಯಲ್ಲಿ ಚೋಳರು ಮತ್ತು ಹೊಯ್ಸಳರು ಪ್ರಬಲರಾಗಿ ಚಾಳುಕ್ಯ ಸಾಮ್ರಾಜ್ಯದ ಕೆಲವು ಪ್ರದೇಶದ ಮೇಲೆ ಹಿಡಿತ ಸಾಧಿಸಿದರು. ಹುಣಸಿಕಟ್ಟಿಯ ಕ್ರಿ.ಶ. ೧೧೩೧ರ, ರಾಯಬಾಗದ ಕ್ರಿ.ಶ. ೧೧೨೭ರ, ಮುಧೋಳದ ಕ್ರಿ.ಶ. ೧೧೩೩ರ ಶಾಸನಗಳು ಈತನ ಪ್ರಶಸ್ತಿಗಳು ಮತ್ತು ಆಳ್ವಿಕೆಯನ್ನು ಉಲ್ಲೇಖಿಸಿವೆ.[೨೭] ಈತನ ತರುವಾಯ ಇಮ್ಮಡಿ ಜಗದೇಕಮಲ್ಲನು (ಕ್ರಿ.ಶ. ೧೧೩೮-೧೧೪೯) ಸಿಂಹಾಸನವನ್ನೇರಿದನು. ಈತನ ಆಳ್ವಿಕೆಯ ಕಾಲಾವಧಿಯಲ್ಲಿ ವೆಂಗಿಯ ಚಾಳುಕ್ಯರು, ಕಾಕತೀಯರು, ಗೋವೆಯ ಕದಂಬರು, ಹೊಯ್ಸಳರು, ಕಲಚೂರಿಗಳು ಮೊದಲಾದವರು ಸ್ವತಂತ್ರರಾಗಲು ಪ್ರಯತ್ನಿಸಿ ತಮ್ಮ ಶಕ್ತಿ ಸ್ಥಾಪಿಸುವತ್ತ ಮುನ್ನಡೆದರು. ಉಳ್ಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೪೪ರ, ರಾಯಬಾಗದ ಕ್ರಿ.ಶ. ೧೧೩೯ರ ಶಾಸನಗಳು ಈತನ ಪ್ರಶಸ್ತಿಗಳು ಮತ್ತು ಆಳ್ವಿಕೆಯನ್ನು ಪರಿಚಯಿಸಿವೆ.[೨೮] ತರುವಾಯ

ಇಮ್ಮಡಿ ಜಗದೇಕಮಲ್ಲನ ಸಹೋದರ ಮುಮ್ಮಡಿ ತೈಲನು (ಕ್ರಿ.ಶ. ೧೧೪೯–೧೧೬೨) ಸಿಂಹಾಸನವನ್ನೇರಿದನು. ಈತನ ಕಾಲದಲ್ಲಿ ಕಲಚೂರಿಗಳು, ಹೊಯ್ಸಳರು, ಕಾಕತೀಯರು ಸ್ವತಂತ್ರರಾಗಿ ತಮ್ಮ ಪ್ರಭುತ್ವ ವಿಸ್ತರಣೆಯಲ್ಲಿ ತೊಡಗಿದರು. ತರುವಾಯ ಸಿಂಹಾಸನವನ್ನೇರಿದ ೪ನೆಯ ಸೋಮೇಶ್ವರನ (ಕ್ರಿ.ಶ. ೧೧೬೨–೧೧೯೮) ಆಳ್ವಿಕೆಯ ಕಾಲಾವಧಿಯಲ್ಲಿ ಚಾಳುಕ್ಯ ಸಾಮ್ರಾಜ್ಯದ ಪ್ರದೇಶಗಳು ಕಾಕತೀಯರು, ಹೊಯ್ಸಳರು, ಕಲಚೂರಿಗಳು, ಸೇವುಣರಲ್ಲಿ ಹರಿದು ಹಂಚಿ ಹೋಗಿ ಈ ಮನೆತನವು ಅವನತಿಯಾಯಿತು.[೨೯]

ಚಾಳುಕ್ಯರು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಮಂಡಲ, ವಿಷಯ, ದೇಶ, ನಾಡು, ಕಂಪಣ, ಗ್ರಾಮ ಎಂದಿತ್ಯಾಗಿ ಪ್ರಧಾನ ಮತ್ತು ಉಪ ಆಡಳಿತ ವಿಭಾಗಗಳಲ್ಲಿ ವಿಂಗಡಿಸಿ, ಇವುಗಳ ಆಡಳಿತವನ್ನು ನೋಡಿಕೊಳ್ಳಲು ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರನ್ನು ನೇಮಿಸಿದ್ದರು. ಇವರ ಕಾಲಾವಧಿಯ ಅನೇಕ ನಾಡುಗಳಲ್ಲಿ ಕೂಹುಂಡಿನಾಡು ಒಂದಾಗಿದೆ. ಇವರು ರಾಷ್ಟ್ರಕೂಟರನ್ನು ಸೋಲಿಸಿದ ತರುವಾಯ ಕೂಹುಂಡಿನಾಡಿನ ಪ್ರದೇಶವು ಇವರ ಅಧೀನಕ್ಕೊಳಪಟ್ಟಿತ್ತು. ಹಾಗೆಯೇ ಈ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಆಳುತ್ತಿದ್ದ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು ಮೊದಲಾದ ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಇವರಿಗೆ ಕಪ್ಪವನ್ನು ನೀಡಿ ಇವರ ಅಡಿಯಲ್ಲಿ ಆಳುವುದಕ್ಕೆ ಅಧಿಕಾರ ಪಡೆದರು.

೩.೨.೪. ಸವದತ್ತಿಯ ರಟ್ಟರು

ಕೂಹುಂಡಿನಾಡಿನ ಪ್ರದೇಶದಲ್ಲಿ ರಾಷ್ಟ್ರಕೂಟರು, ಚಾಳುಕ್ಯರು, ಕಲಚೂರಿಯರು, ಸೇವುಣರ ಅಧೀನದಲ್ಲಿ ಕ್ರಿ.ಶ. ೯೩೦ ರಿಂದ ೧೨೩೦ರವರೆಗೂ ಆಳ್ವಿಕೆ ಮಾಡಿದ ಸವದತ್ತಿಯ ರಟ್ಟರ ರಾಜಕೀಯ ಇತಿಹಾಸವು ಈ ಪ್ರದೇಶದಲ್ಲಿ ಹಾಸುಹೊಕ್ಕಾಗಿದೆ. ರಟ್ಟರ ಮೂಲದ ಕುರಿತಾಗಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಇವರು ಮೂಲತಃ ಇಂದಿನ ಮಹಾರಾಷ್ಟ್ರದ ಲಾತೂರಿನವರು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಎ.ಎಸ್. ಅಲ್ತೇಕರ ಅವರು "ರಾಷ್ಟ್ರಕೂಟ ಎಂಬ ಪದವು ಯಾವುದೇ ವಂಶ ಅಥವಾ ಬುಡಕಟ್ಟಿನ ಸಂಕೇತವಲ್ಲ, ಅದು ಪ್ರಾಚೀನ ಕಾಲದಲ್ಲಿ ರಾಷ್ಟ್ರ ಎಂಬ ಪ್ರಾದೇಶಿಕ ವಿಭಾಗದ ಮುಖ್ಯಾಧಿಕಾರಿಗಳಿಗೆ ಕೊಟ್ಟಿದ್ದ ಹುದ್ದೆಯ ಅಂಕಿತವಾಗಿದೆ. ಈ ಅಧಿಕಾರಿಗಳು ಕೇಂದ್ರ ಸರ್ಕಾರಕ್ಕೆ ಅಧೀನರಾಗಿದ್ದರು. ಕೇಂದ್ರ ಸರ್ಕಾರದ ಬಲ ಕುಗ್ಗಿದಾಗ ಸ್ವತಂತ್ರರಾದರು. ಉಸ್ಮಾನಾಬಾದ ಜಿಲ್ಲೆಯ ಲಟ್ಟವೂರು (ಲಾತೂರು) ಇವರ ಮೂಲ ಸ್ಥಾನವಾಗಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೩೦] 'ರಟ್ಟ' ಪದವು ಕನ್ನಡದಲ್ಲಿ ತೋಳಬಲವನ್ನು ಸೂಚಿಸುವ 'ರಟ್ಟೆ' ಎಂಬ ಪದಕ್ಕೆ ಸಮಾನ ಅರ್ಥವನ್ನು ಸೂಚಿಸುತ್ತದೆ. ರಟ್ಟ ಮತ್ತು ಕೂಟ ಎನ್ನುವುದೇ ರಾಷ್ಟ್ರಕೂಟ ಎಂದಾಗಿದೆ" ಎಂದು ಎಂ.ವಿ. ಕೃಷ್ಣ ಮತ್ತು ಕೇಶವಭಟ್ಟ ಅವರು ಸೂಚಿಸಿದ್ದಾರೆ. ಮಹಾರಾಷ್ಟ್ರದ ಕರಾಡದ ಕ್ರಿ.ಶ. ಸುಮಾರು ೧೦ನೆಯ ಶತಮಾನದ ಶಾಸನದ ಆಧಾರದಿಂದ ಆಲೂರ ವೆಂಕಟರಾಯರು "ಮಳಖೇಡದ ರಾಷ್ಟ್ರಕೂಟರು

ರಟ್ಟ ವಂಶದವರೆಂದೂ, ರಟ್ಟರು ಮೊದಲಿನಿಂದಲೂ ದಕ್ಷಿಣ ಭಾರತದವರೆಂದೂ, ರಟ್ಟ ಪದವು ದ್ರಾವಿಡ ಭಾಷೆಯದೆಂದೂ, ರಟ್ಟರಿಂದ ರಾಷ್ಟ್ರಕೂಟವು ಹಬ್ಬಿತ್ತು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೩೧]

"ರಟ್ಟರು ರಾಷ್ಟ್ರಕೂಟರ ವಂಶದವರೆಂದೂ, ದಕ್ಷಿಣದ 'ರಠಿಕ' ಕುಟುಂಬಗಳಿಂದ 'ಮಹಾರಟ್ಟ' ಕುಟುಂಬದವರಾಗಿ ಕರ್ನಾಟಕಕ್ಕೆ ಸೇರಿದರು" ಎಂದು ಎ.ಎಂ. ಮುತ್ತಯ್ಯ ಅವರು ಅಭಿಪ್ರಾಯ ಪಟ್ಟಿದ್ದಾರೆ.[೩೨] ರಟ್ಟರು ಪ್ರಾರಂಭದಲ್ಲಿ ಮಳಖೇಡದ ರಾಷ್ಟ್ರಕೂಟರ ಮಾಂಡಳೀಕರಾಗಿ ಆಡಳಿತ ನಡೆಸಿದ್ದಾರೆ. ಆದ್ದರಿಂದ ಇವರು ರಾಷ್ಟ್ರಕೂಟ ವಂಶಕ್ಕೆ ಸೇರಿದವರೆಂಬುದು ಸ್ಪಷ್ಟವಾಗುತ್ತದೆ. ಇವರು 'ಯದುವಂಶದವರು' ಎಂದು ಶಂ.ಬಾ. ಜೋಶಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಆರ್.ಸಿ. ಮಜುಂದಾರ ಅವರು ರಟ್ಟರು 'ದ್ರಾವಿಡ ಜನಾಂಗದವರು' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಉಲ್ಲೇಖಿತ ಮೈಳಾಪತೀರ್ಥದ ಕಾರೆಯಗಣ ಪರಂಪರೆಯ ಪೃಥ್ವೀರಾಮನು ರಟ್ಟರ ಮೂಲ ಪುರುಷನಾಗಿದ್ದಾನೆ.[೩೩] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ ರಟ್ಟರ ಕುಲದೇವರು ನೇಮಿನಾಥ ತೀರ್ಥಂಕರ ಎಂದು ಪ್ರಸ್ತಾಪವಿದೆ.[೩೪] ಹೀಗಾಗಿ ಇವರು ಜೈನಧರ್ಮೀಯರೆಂಬುದು ದೃಢಪಡುತ್ತದೆ. ರಟ್ಟ ಮನೆತನದ ಶಾಖೆಗಳು ಅಮರ್ಧಪುರ, ಕೊಲ್ಲಾಪುರ, ಸವದತ್ತಿ ಪ್ರದೇಶದಲ್ಲಿ ಆಳ್ವಿಕೆ ಮಾಡಿವೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ರಟ್ಟರಲ್ಲಿ ಎರಡು ಶಾಖೆಗಳಿವೆ. ೧ನೆಯ ಶಾಖೆಯು 'ಮೇರಡ' ಎಂಬಾತನಿಂದ ಸ್ಥಾಪನೆಯಾಗಿದೆ. ೨ನೆಯ ಶಾಖೆಯು 'ನನ್ನ' ಎಂಬಾತನಿಂದ ಸ್ಥಾಪನೆಯಾಗಿದೆ.

ಮೇರಡನು ರಟ್ಟ ಮನೆತನದ ೧ನೆಯ ಶಾಖೆಯ ಮೂಲ ಪುರುಷನಾಗಿದ್ದಾನೆ. ಈತನಿಗೆ ಪೃಥ್ವೀರಾಮ ಎಂಬ ಮಗನಿದ್ದನು. ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ಈತನನ್ನು 'ಸತ್ಯರತ್ನಪ್ರರೋಹಾದ್ರಿಮೇರಡ' ಎಂದು ಕರೆಯಲಾಗಿದೆ.[೩೫] ಈತನು ಪ್ರಭಾವಶಾಲಿ ಅರಸನಾಗಿದ್ದನು. ವೈರಿಗಳಿಗೆ ಸಿಂಹಸ್ವಪ್ನನಾಗಿದ್ದನು. 'ಮೈಳಾಪತೀರ್ಥ' ಎಂಬ ಜೈನ ಗುರುವಿನ ಶಿಷ್ಯನಾಗಿದ್ದನು. ಮೇರಡನ ತರುವಾಯ ಪೃಥ್ವೀರಾಮನು ಅಧಿಕಾರಕ್ಕೆ ಬಂದನು. ಸಮಕಾಲೀನ ಶಾಸನಗಳು ಈತನನ್ನು ದಾನಶೂರಕರ್ಣನೂ, ದಾನಗುಣವಂತನೂ, ಪರಸ್ತ್ರೀ ಸಹೋದರನೂ, ಪರಧರ್ಮಸಹಿಷ್ಣನೂ, ಸ್ವಪತ್ನಿವ್ರತೋಧರನೂ ಎಂದು ಕೊಂಡಾಡಿವೆ. ಈತನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಮಹಾಸಾಮಂತನಾಗಿ ಸವದತ್ತಿಯನ್ನು ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾನೆ. ಜೈನಧರ್ಮೀಯನಾದ ಇವನು ಮೈಳಾಪತೀರ್ಥದ ಗುರುಕುಲದಲ್ಲಿ ಅಧ್ಯಯನ ಮಾಡಿದ್ದಾನೆ.[೩೬] ಯಾಪನೀಯ ಸಂಘದ ಮೈಳಾಪಾನ್ವಯ ಪರಂಪರೆಯ ಇಂದ್ರಕೀರ್ತಿ ಮುನಿಯ ಶಿಷ್ಯನಾಗಿದ್ದನು. ಸವದತ್ತಿಯ ಕ್ರಿ.ಶ. ೯೮೦ರ ಶಾಸನವು ಈತನ ಶೌರ್ಯ–ಪರಾಕ್ರಮವನ್ನು–

ಶ್ರೀಮಧಮರೇಂದ್ರವಿಭವೋದ್ಧಾಮಸಂ
ರಾಮರಾಮನೊರ್ಜ್ಜಿತ ತೇಜಂ
ಭೀಮಪರಾಕ್ರಮನೆಸೆದವ ನೀಮಹಿಯೊಳ್
ಪೃಥ್ವಿರಾಮನನುಪಮರೂಪಂ ||

ಇಂದ್ರನಂತೆ ಅಮರನೂ, ಸಾವಿಲ್ಲದವನೂ, ಇಂದ್ರನಂತೆ ವಿಲಾಸಿಯೂ, ಪರಾಕ್ರಮಿಯೂ, ಉದ್ಧಾಮನೂ, ಯುದ್ಧದಲ್ಲಿ ರಾಮನನ್ನು ಮೀರಿದವನೂ, ತೇಜೋಮಯನೂ, ಭೂಮಂಡಲದಲ್ಲಿ ಅತ್ಯಂತ ಪರಾಕ್ರಮಿಯಾದ ಭೀಮನನ್ನು ಮೀರಿಸುವವನೂ, ಸುಂದರನೂ ಎಂದು ಬಣ್ಣಿಸಿದೆ.[೩೭] ಇದರಿಂದ ಈತನು ಸಾಹಸಮಯ ವ್ಯಕ್ತಿತ್ವವನ್ನು ಹೊಂದಿದ್ದನೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ತನ್ನ ಆಸ್ಥಾನದಲ್ಲಿ ಕವಿಗಳಿಗೂ, ಕಲಿಗಳಿಗೂ, ವಿದ್ವಾಂಸರಿಗೂ ಆಶ್ರಯ ನೀಡಿದ್ದನು. ಕ್ರಿ.ಶ. ೯೮೦ರಲ್ಲಿ ಮೈಳಾಪತೀರ್ಥದಲ್ಲಿ ಬಸದಿಯನ್ನು ಕಟ್ಟಿಸಿದ್ದಾನೆ.[೩೮] ಇಂದಿನ ಎಲ್ಲಮ್ಮದೇವಿ ದೇವಾಲಯದ ಪರಿಸರವನ್ನು ಮೈಳಾಪತೀರ್ಥ ಎಂದು ಕರೆಯಲಾಗುತ್ತಿತ್ತು. ಹೀಗಾಗಿ ಈತನು ಕಟ್ಟಿಸಿದ್ದ ಬಸದಿಯು ಇಂದಿನ ಎಲ್ಲಮ್ಮದೇವಿ ದೇವಾಲಯವೇ ಆಗಿರುವ ಸಾಧ್ಯತೆಯಿದೆ. ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ–

ರಟ್ಟಕುಳಾನ್ವಯನೃಪರುಂ ಪಟ್ಟದ ತವರ್ಮ್ಮನೆಗಳೆನಿಪ
ಗಾವುಂಡುಗಳುಂ ಬಿಟ್ಟರ್ಜ್ಜಿನೇಂದ್ರನ ಪೂಜೆಗೆ
ಧಾನ್ಯಂಗಳೊಳಗೆವೊಂದಿದ ಕುಳಮಂ ರಟ್ಟರ
ಪಟ್ಟಜಿನಾಲಯಕ್ಕಿಟ್ಟವಾದಯ್ವತೊಕ್ಕಲ ಮಮತದಿಂದಂ
ಕೊಟ್ಟರ್ಜ್ಜಿನೇಂದ್ರಪೂಜೆಗೆ ನೆಟ್ಟನೆ ದೀಪಾವಳಿಯ
ಪರ್ವಕ್ಕೆದೇವರ ಸೊಡರರಿಗೆ ಗಾಣದಲೊಮ್ಮಾನೆಣ್ಣೆ ॥

ಈತನು ಕೈಗೊಂಡಿರುವ ಧಾರ್ಮಿಕ ಚಟುವಟಿಕೆಗಳ ಪರಿಚಯವಿದೆ.[೩೯]

ಪಿಟ್ಟಿಗನು ರಟ್ಟ ಮನೆತನದಲ್ಲಿ ಅತ್ಯಂತ ಪರಾಕ್ರಮಿ ಅರಸನಾಗಿದ್ದನು. ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ಈತನನ್ನು 'ಮಹಿಯೊಳ್ ಪೃಥ್ವಿರಾಮನನನುಪಮ ರೂಪಂತತ್ಸುತ ಪಿಟ್ಟಿಗಂಸಲೆನೆಗಳ್ದಂ' ಎಂದು ಬಣ್ಣಿಸಲಾಗಿದೆ. ಇದರಿಂದ ಈತನು ಪೃಥ್ವೀರಾಮನ ಪುತ್ರನೆಂದು ಸ್ಪಷ್ಟವಾಗುತ್ತದೆ. ಆತನ ನಂತರ ಈತನು ಪಟ್ಟಕ್ಕೆ ಬಂದನು. ಪ್ರಸ್ತುತ ಶಾಸನದಲ್ಲಿ ಈತನ ಪರಾಕ್ರಮದ ಕುರಿತು–

ಆರೂಢನತ್ತಸರಾಜನುದಾರಗುಣಂದಿನತಂದುಕಾದಿತ್ಯಂ ಶ್ರೀ
ನಾರೀಕಾನ್ತಂ ನಿರ್ಜ್ಜಿತವೈರಿಪ್ರಜನೆನಿಸಿದ ಪಿಟ್ಟಿಗಂಸಲೆ ನೆಗಳ್ದಂ ॥

ಕುದುರೆ ಸವಾರಿ ಮತ್ತು ಯುದ್ಧ ಕಲೆಯಲ್ಲಿ ಪರಿಣಿತನೂ, ಮೇಧಾವಿಯೂ, ದಾನಧರ್ಮದಲ್ಲಿ ಉದಾರಿಯೂ, ಆಶ್ರಯಕ್ಕೆ ಬಂದವರಿಗೆ ಆಶ್ರಯದಾತನೂ, ವಿಶಾಲ ಹೃದಯವಂತನೂ, ಸ್ತ್ರೀಲೋಲೂಪನೂ, ವೈರಿಗಳಿಗೆ ಸಿಂಹಸ್ವಪ್ನನೂ ಎಂದು ಬಣ್ಣನೆಯಿದೆ. ಹಾಗೆಯೇ–

ಅಂತಕನನ್ತೆ ಬಂದಿದಿರೊಳಾಂತಜವರ್ಮ್ಮನನೋಡಿ
ಸುತ್ತೆಮಹಾಶೂರನೇಕರಂತವಿಸಿವಸುಕಾನ್ತೆಯರಂತುರಂಗ
ಚಯಮಂಪಿಡಿದಿತ್ತೊಡೆಮೆಚ್ಚಿರಾಚಯಂ ದನ್ತಿಯನಿತ್ತನಂತ
ಮದುವೆ ಪೇಳವೆ ಪಿಟ್ಟಿಗನಿನ್ನೆಗೆಲ್ಲಮಂ ॥

ಎಂದು ವರ್ಣಿಸಲಾಗಿದೆ.[೪೦] ಈತನು ಅಜವರ್ಮ ಎಂಬ ಅರಸನ ಸೈನ್ಯವನ್ನು ಧೂಳಿಪಟ ಮಾಡಿದನು.

ಬನವಾಸಿ ಕದಂಬರ ೨ನೆಯ ಶಾಖೆಯ ಪ್ರಸಿದ್ಧ ಅರಸನಾದ ಕೃಷ್ಣವರ್ಮನ ಮಗನೇ ಅಜವರ್ಮನಾಗಿದ್ದಾನೆ. ಈತನು ಇಂದಿನ ಮುರಗೋಡ ಪ್ರದೇಶದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಈ ಶಾಖೆಯ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಪಿಟ್ಟಿಗನ ತರುವಾಯ ಈತನ ಪುತ್ರ ಶಾಂತಿವರ್ಮನು ಪಟ್ಟಕ್ಕೆ ಬಂದನು. ಈತನು ತಂದೆಯಂತೆ ಪರಾಕ್ರಮಿಯಾಗಿದ್ದನು. ಕಲ್ಯಾಣದ ಚಾಳುಕ್ಯರ ಇಮ್ಮಡಿ ತೈಲಪನ ಮಹಾಸಾಮಂತನಾಗಿದ್ದನು. ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ 'ಪಿಟ್ಟಿಗನ್ನಿನ್ನಗೆಲ್ಲಮಂ ತದಗ್ರಪತ್ನಿನೀಜಿಯಬ್ಬರಸಿ ತತ್ತನೂಜಶಾಂತಿನೃಪಾಳಂ' ಎಂದಿರುವುದರಿಂದ ಈತನು ಪಿಟ್ಟಿಗ ಮತ್ತು ನೀಜಿಯಬ್ಬರಸಿಯರ ಪುತ್ರನೆಂದು ಸ್ಪಷ್ಟವಾಗುತ್ತದೆ.[೪೧] ಈತನಿಗೆ 'ಚಂದಕಬ್ಬೆ' ಎಂಬಾತಳು ಹಿರಿಯ ಧರ್ಮಪತ್ನಿಯಿದ್ದಳು. ಈತನು ಸವದತ್ತಿಯನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು. ಪ್ರಸ್ತುತ ಶಾಸನದಲ್ಲಿ–

ಸಮಧಿಗತಪಂಚಮಹಾಶಬ್ದಮಹಾಸಾಮನ್ತಂ
ಸಮರವಿಜಯಲಕ್ಷ್ಮೀಕಾನ್ತಂ ಬೈಸಾನ್ವಯ ಸರೋಜವ
ನಮಾರ್ತ್ತಾಣ್ಡಂಹಯವತ್ಸರಾಜಂ ರೂ
ಪಮನೋಜಂಪರಳಸೂರೆಕಾರುವೈರಿಬಂಗಾರುಸರಸಮ
ಭೀಮಚಲದಂಕರಾಮಂಗಣ್ಣಡರಗಣ್ಡಂವೈರಿಭೇರಣ್ಡಪ್ರತಿಪ ॥

ಎಂದು ಈತನ ಶೌರ್ಯ–ಪರಾಕ್ರಮದ ವರ್ಣನೆಯಿದೆ.[೪೨] ಈತನನ್ನು ವರ್ಣಿಸಲು ಪದಗಳೇ ಸಾಲುವುದಿಲ್ಲವೆಂದು ಶಾಸನಕವಿ ಹೇಳಿರುವುದನ್ನು ಗಮನಿಸಿದರೆ, ಈತನ ಪರಾಕ್ರಮದ ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಈತನು ಸವದತ್ತಿಯಲ್ಲಿ ಬಸದಿಯನ್ನು ಕಟ್ಟಿಸಿದ್ದಾನೆ. ಇದನ್ನು 'ರಟ್ಟರ ಪಟ್ಟಜಿನಾಲಯ' ಎಂದು ಕರೆಯಲಾಗಿದೆ.

ನನ್ನನು (ಕ್ರಿ.ಶ. ೯೩೦–೯೮೦) ರಟ್ಟ ಮನೆತನದ ೨ನೆಯ ಶಾಖೆಯ ಮೂಲ ಪುರುಷನೆಂಬುದು ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದ 'ರಟ್ಟವಂಶೋದ್ಭವಃ ಖ್ಯಾತೋ ನನ್ನ ಭೂಪಸುನಂದನಃ' ಎಂಬ ಪ್ರಸ್ತಾಪದಿಂದ ಮನದಟ್ಟಾಗುತ್ತದೆ.[೪೩] ಈತನನ್ನು ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ ನನ್ನ, ನರೇಂದ್ರ, ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ ನನ್ನಭೂಪ, ನನ್ನನೃಪಾಳ, ನನ್ನಪಯ್ಯ, ರಾಣನನ್ನಷ್ಷ ನನ್ನನೃಪತಿ, ಕಂದೇಯ, ಭಾರದನನ್ನಪಯ್ಯ ಎಂದು ಕರೆಯಲಾಗಿದೆ. ಕಲ್ಯಾಣದ ಚಾಳುಕ್ಯರ ಆಹವಮಲ್ಲನ ಮಹಾಸಾಮಂತನಾಗಿದ್ದನು.[೪೪] ಸೊಗಲವನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು.[೪೫] ಸೊಗಲನ್ನು ರಾಜಧಾನಿ ಮಾಡಿಕೊಂಡಿದ್ದಕ್ಕೆ ಪ್ರಮುಖವಾಗಿ ಎರಡು ಕಾರಣಗಳಿರಬಹುದು. ಕುಟುಂಬದೊಂದಿಗಿನ ಭಿನ್ನಾಭಿಪ್ರಾಯದಿಂದ ಬೇರೆಯಾಗಿ ಇದನ್ನು ರಾಜಧಾನಿ ಮಾಡಿಕೊಂಡಿರುವ ಸಾಧ್ಯತೆಯಿದೆ. ಇಲ್ಲವೆ ಬೆಳಗಾವಿಯೆಡೆಗೆ ದಂಡೆತ್ತಿ ಬಂದು ಈ ಪ್ರದೇಶವನ್ನು ವಶಪಡಿಸಿಕೊಂಡ ನಂತರ ಇಲ್ಲಿನ ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗಿ ಇದನ್ನು ರಾಜಧಾನಿ ಮಾಡಿಕೊಂಡಿರಬಹುದು. ಕ್ರಿ.ಶ. ೧೦೮೭ರ ಸವದತ್ತಿಯ ಶಾಸನದಲ್ಲಿ–

ಶ್ರೀವಿಜಯಾಂಗನಾರಮಣನರ್ತ್ತನದಕ್ಷಿಣಬಾಹುವೀರವಿ

ದ್ರಾವಣನೊರ್ಜ್ಜಿತಪ್ರಬಳರಟ್ಟಕಳಾಂಬರತಿಗ್ಮರೋಚಿಲ
ಕ್ಷೀವನಿತಾವಿಭಾಸಿಶುಭಲಕ್ಷಣಲಕ್ಷ್ಮೀಮೂರ್ತ್ತಿವಿಶ್ವವಿ
ದ್ಯಾವಿನೆನ್ನುದಬಣ್ಣಿಪುದು ನನ್ನನೃಪಾಳನನೀಧರಾತಳಂ ॥

ಎಂದು ಈತನ ಪರಾಕ್ರಮವನ್ನು ಹಲವು ವಿಧವಾಗಿ ವರ್ಣಿಸಲಾಗಿದೆ.[೪೬] ಹಾಗೆಯೇ ಈತನನ್ನು ಪರಾಕ್ರಮದಲ್ಲಿ ದೇವಾಂಶ ಸಂಭೂತನಾದ ವಿಷ್ಣುವಿಗೆ ಸಮಾನನೂ, ರಟ್ಟಕುಲಕ್ಕೆ ಉನ್ನತ ಗೌರವ ತಂದುಕೊಟ್ಟ ಹೆಗ್ಗಳಿಕೆಗೆ ಪಾತ್ರನೂ, 'ರಟ್ಟವಂಶೋದ್ಭವಖ್ಯಾತೋ' ಎಂದು ಕರೆಯಲಾಗಿದೆ.

ನನ್ನರಸನ ಪುತ್ರನಾದ ೧ನೆಯ ಕಾರ್ತವೀರ್ಯನಿಗೆ ದಾಯಿಮ ಮತ್ತು ೧ನೆಯ ಕನ್ನಕೈರ ಎಂಬಿಬ್ಬರು ಪುತ್ರರಿದ್ದರು. ಈತನು ಕಲ್ಯಾಣದ ಚಾಳುಕ್ಯರ ಇಮ್ಮಡಿ ತೈಲಪನ ಸಾಮಂತನಾಗಿದ್ದನು.[೪೭] ಪ್ರಾರಂಭದಲ್ಲಿ ಸೊಗಲನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು. ತರುವಾಯ ರಾಜಧಾನಿಯನ್ನು ಸವದತ್ತಿಗೆ ವರ್ಗಾಯಿಸಿದನು. ಇದಕ್ಕೆ ನಿರ್ದಿಷ್ಟ ಕಾರಣ ಸ್ಪಷವಿಲ್ಲ. ಪ್ರಾಯಶಃ ಸವದತ್ತಿಯಲ್ಲಿ ಆಳುತ್ತಿರುವ ಸಂಬಂಧಿಗಳಲ್ಲಿನ ಅಸಮರ್ಥ ಆಡಳಿತವನ್ನು ಸುಧಾರಿಸಲು ತನ್ನ ರಾಜಧಾನಿಯನ್ನು ಸವದತ್ತಿಗೆ ವರ್ಗಾಯಿಸಿರುವಂತೆ ತೋರುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈತನನ್ನು ಸವದತ್ತಿಯ ಕ್ರಿ.ಶ. ೧೦೮೭ ಶಾಸನದಲ್ಲಿ_

ಶ್ರೀರಮಣನತುಳವಿಜಯ ಶ್ರೀರಮಣಂವಿಪುಳವಿಮಳ
ಸಮುದಿತಕೀರ್ತ್ತಿ ಶ್ರೀರಮಣಂಚತುವಚಃ ಶ್ರೀರಮಣಂ
ನನ್ನಭೂಪನನುಪಮರೂಪಂ ನನ್ನ ಭೂಪಸ್ಯ ನನ್ದನಃ ॥

ಎಂದು ವರ್ಣಿಸಲಾಗಿದೆ.[೪೮] ಈತನನ್ನು ಕತ್ತ, ಕಲಿಕತ್ತಭೂಪ, ವೀರಕತ್ತರಸ, ಕತ್ತಮದೇವ ಎಂತಲೂ ಕರೆಯಲಾಗಿದೆ. ತಂದೆಯೊಂದಿಗೆ ಯುದ್ಧದಲ್ಲಿ ಭಾಗವಹಿಸಿ ಪರಾಕ್ರಮ ಮತ್ತು ಅನುಭವ ಪಡೆದಿದ್ದನು. ಸೊಗಲದ ಕ್ರಿ.ಶ. ೯೮೦ರ ಶಾಸನವು ಈತನನ್ನು_

ಸ್ಥಿರನುಡಿವಂಕಲಿತನೆಯೊಳ್ಪೊರೆದಾಜಿಂ ಮುನ್ನಮಿರೆವನೆನ್ದಡೆ
ಸಕಳೋರ್ವ್ವರೊಳ್ ಕತ್ತನ ಸತ್ಯದ ದೊರೆಗಂ ಕಾರ್ಯದ
ಪಗಳ್ತೆಗಂ ನೋರೇ ॥

ಎಂದು ಬಣ್ಣಿಸಿದೆ.[೪೯] ಈತನು ತನ್ನ ಜೀವನದಲ್ಲಿ ಸತ್ಯವನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದನು. ಈತನ ಪರಾಕ್ರಮವನ್ನು 'ಸಹಸ್ರಬಾಹುರಿವಿಖ್ಯಾತಃ ಕಾರ್ತ್ಯವೀರ್ಯಪ್ರತಾಪನೆ' (ಸಾವಿರ ತೋಳುಗಳ ಬಲಿಷ್ಠ ಶಕ್ತಿಯನ್ನು ಹೊಂದಿದವನು) ಎಂದು ವರ್ಣಿಸಲಾಗಿದೆ. ಈತನು ಕ್ರಿ.ಶ. ೯೮೦ರಲ್ಲಿ ಸುಗಂಧವರ್ತಿಯಲ್ಲಿ ಕೋಟೆಯನ್ನು ನಿರ್ಮಿಸಿದನು. ಕೂಹುಂಡಿನಾಡಿನಲ್ಲಿ ಮಿನುಗು ನಕ್ಷತ್ರದಂತೆ ಶೋಭಾಯಮಾನವಾಗಿದ್ದನು. ಯುದ್ಧಪರಿಣಿತನೂ, ಪ್ರಜಾಪ್ರಿಯನೂ, ಸಾಹಿತ್ಯಪ್ರಿಯನೂ ಆಗಿದ್ದನು. ಆಸ್ಥಾನದಲ್ಲಿ ಕನ್ನಡದ ಶ್ರೇಷ್ಠಕವಿ ಕಮಳಾದಿತ್ಯನಿಗೆ ಆಶ್ರಯ ನೀಡುವ ಮೂಲಕ ಸಾಹಿತ್ಯ ಸರಸ್ವತಿಯ ಆರಾಧಕನೆನಿಸಿಕೊಂಡಿದ್ದನು. ಈತನು ಪೃಥ್ವೀರಾಮನು ಸವದತ್ತಿಯಲ್ಲಿ ಕಟ್ಟಿಸಿದ್ದ ಬಸದಿಗೆ ಭೂದಾನ ಮಾಡಿ ಧಾರ್ಮಿಕ ಔದಾರ್ಯತೆಯನ್ನು ಮೆರೆದಿದ್ದಾನೆ.

೧ನೆಯ ಕಾರ್ತವೀರ್ಯನ ತರುವಾಯ ಈತನ ಪುತ್ರ ದಾಯಿಮನು ಪಟ್ಟಕ್ಕೆ ಬಂದನು. ಶಾಸನಗಳಲ್ಲಿ ಈತನನ್ನು ದಾಯಿಮ, ಡಾಯಿಮ, ದಾಯಿಗ ಎಂತಲೂ ಕರೆಯಲಾಗಿದೆ. ಈತನ ಆಡಳಿತ ವ್ಯವಸ್ಥೆ ಜನಪರವಾಗಿತ್ತು. ರಟ್ಟ ಸಾಮ್ರಾಜ್ಯದ ವಿಸ್ತಾರದಲ್ಲಿ ಈತನ ಕೊಡುಗೆ ಅಪಾರವಾಗಿದೆ. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ–

ಮನುವಿಭನೆನ್ದು ಶೌರ್ಯನಿಧಿಯೆನ್ದುದಯಾಪರ
ನೆನ್ದುವಾರಕಾಮಿನಿಗೆಯನೆಜವೆನ್ದು ಬಹುವನ್ದಿ
ಆನಾಶ್ರಯನೆನ್ದುಕೂಡೆಮೇದುನಿಗೆಡೆಗೊಣ್ಡು
ಬಣ್ಣಿಪುರದುದಾಯಿಮಭೂಪನನುಗ್ರಕೋಪನಂ ॥

ಎಂದು ಈತನ ಪರಾಕ್ರಮವನ್ನು ಕೊಂಡಾಡಲಾಗಿದೆ.[೫೦] ಈತನು ಮೇರು, ಮಹೀಪಾಳ ಎಂಬ ಬಿರುದುಗಳನ್ನು ಪಡೆದಿದ್ದನು. ದಾಯಿಮನ ಆಳ್ವಿಕೆಯ ತರುವಾಯ ೧ನೆಯ ಕನ್ನಕೈರನು ಪಟ್ಟಕ್ಕೆ ಬಂದನು. ಸವದತ್ತಿ ಈತನ ರಾಜಧಾನಿಯಾಗಿತ್ತು. ಸವದತ್ತಿಯ ಕ್ರಿ.ಶ. ೧೦೯೮ರ ಶಾಸನದಲ್ಲಿ ಈತನನ್ನು–

ಸಹಸ್ರಬಾಹುರಿವಖ್ಯಾತ ಕಾರ್ತವೀರ್ಯ ಪ್ರತಾಪವಾಸ
ಕುಹುಣ್ಡಿದೇಶಯಾಸ್ಯಘಪಂಸಾಧಿತಂ ತೇನಭೂಭುಜ
ರಾಜನ್ಯತ್ಯಾಃ ಪ್ರಜಾಜಾರಂ ದಾವರಿ ನಾಮಭೂಭುಜಾ
ತಸ್ಯಾನುಜಂ ಪ್ರತಾಪೀನ್ಯಾತ್ ಕನ್ನರಕೈರೋ ಮಹಿಪತಿ ॥

ಎಂದು ವರ್ಣಿಸಲಾಗಿದೆ.[೫೧] ಈತನನ್ನು ಕನ್ನ, ಕನ್ನಕೈರೋ, ಕಲಿಕನ್ನಭೂಪ ಎಂತಲೂ ಕರೆಯಲಾಗಿದೆ.[೫೨] ಪರಾಕ್ರಮಿಯೂ ಜಿನಧರ್ಮ ಪರಿಪಾಲಕನೂ ಆಗಿದ್ದನು. ಕ್ರಿ.ಶ. ೧೦೩೦ರಲ್ಲಿ ಮರಣ ಹೊಂದಿದ್ದನೆಂಬುದು ಮಂಟೂರರದ ಕ್ರಿ.ಶ. ೧೦೪೧ರ ಶಾಸನದಿಂದ ತಿಳಿಯುತ್ತದೆ.[೫೩] ಬೆಳವಡಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಈತನು ಸಹಸ್ರಕೂಟ ಬಸದಿಯನ್ನು ಕಟ್ಟಿಸಿ, ಅದರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಭೂದಾನ ಮಾಡಿರುವುದರ ಪ್ರಸ್ತಾಪವಿದೆ.[೫೪] ಈತನಿಗೆ ಎರಗ ಮತ್ತು ಅಂಕ ಎಂಬಿಬ್ಬರು ಪುತ್ರರಿದ್ದರು.

೧ನೆಯ ಕನ್ನಕೈರನ ತರುವಾಯ ಈತನ ಹಿರಿಯ ಪುತ್ರ ಎರಗನು ರಾಜ್ಯಭಾರ ವಹಿಸಿಕೊಂಡನು. ಈತನು ಕಲ್ಯಾಣದ ಚಾಳುಕ್ಯರ ಇಮ್ಮಡಿ ಜಯಸಿಂಹನ ಮಹಾಸಾಮಂತನಾಗಿದ್ದನು. ಇದನ್ನು ಮಂಟೂರದ ಕ್ರಿ.ಶ. ೧೦೪೧ರ ಶಾಸನವು ಸ್ಪಷ್ಟಪಡಿಸುತ್ತದೆ. ಈತನನ್ನು ಎರಗ, ಎರೆಯಮ, ಎರಗಾಖ್ಯ, ಎರಗದೇವರಸ ಎಂತಲೂ ಕರೆಯಲಾಗಿದೆ.[೫೫] ಎರಗ ಮತ್ತು ಇಮ್ಮಡಿ ಜಯಸಿಂಹ ಇಬ್ಬರೂ ವಿಹಾರದ ಸಮಯದಲ್ಲಿದ್ದಾಗ ಎರಗನ ಮಹಾಪ್ರಧಾನ ದಂಡನಾಯಕನಾದ ಕಾಳಿದಾಸನು ಇವರಿಬ್ಬರ ಪ್ರಾಣವನ್ನು ಕಾಪಾಡಿದ್ದಾನೆ.[೫೬] ಎರಗನು ಗೋಕಾಕದಲ್ಲಿ ಸುಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ್ದಾನೆ.[೫೭] ಈತನು ವೈರಿ ಸಂಕುಲವನ್ನು ಸುಡುವ ಉಗ್ರ ಸೂರ್ಯನೂ, ವೈರಿಗಳನ್ನು ಹಿಮ್ಮೆಟ್ಟಿಸುವಂತಹ ಪರಾಕ್ರಮಶಾಲಿಯೂ ಆಗಿದ್ದನು.[೫೮] ತನ್ನ ಸಾಮ್ರಾಜ್ಯದ ಮೇರೆಯನ್ನು ವಿಸ್ತರಿಸುವಲ್ಲಿ ನಿಸ್ಸೀಮನಾಗಿದ್ದನು. ಈತನ ಶೌರ್ಯ, ಪರಾಕ್ರಮವನ್ನು ಕಂಡು ಇಮ್ಮಡಿ ಜಯಸಿಂಹನು ಈತನಿಗೆ 'ರಟ್ಟಮಾರ್ತಾಂಡ', 'ಸಿಂಗನಗರುಡ' ಎಂಬ ಬಿರುದುಗಳನ್ನು

ನೀಡಿ ಗೌರವಿಸಿದ್ದಾನೆ. ಸಂಗೀತ, ಸಾಹಿತ್ಯ, ಕಲೆಗಳಲ್ಲಿ ಆಸಕ್ತಿ ಹೊಂದಿದ್ದನು. ಈತನ ಸಂಗೀತ ಆಸಕ್ತಿಯನ್ನು ಸಂಕೇಶ್ವರದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನವು–

ವಾದ್ಯವಿದ್ಯಾದೋಭುವಿ ಎರಗಾಖ್ಯಮಹೀಪಃ ನಿರುಪಮ
ಸಮನ್ತಕೆಳೆಯೊಳ್ಸರಸಿಜಭವನೆಸೆವ ಮಾದ್ಯವಿದ್ಯಾಧರನೊಳ್ಸರ
ಸಂಕೇಶ್ವರಂ ಕರ್ಪುರಮರ್ಷನ್ದರೆಗೆನೆಗರ್ದ್ದನೆರ ಗಮಹೀಶ ॥

ಎಂದು ವರ್ಣಿಸಿದೆ. ಈತನಿಗೆ ಸೇನ ಎಂಬ ಪುತ್ರನಿದ್ದನು.[೫೯] ಈತನು ಸಮಸ್ತ ಕಲೆಗಳನ್ನು ಕರಗತ ಮಾಡಿಕೊಂಡಿದ್ದನು. ಕವಿಗಳು ಮತ್ತು ಕಲಾವಿದರ ಪ್ರೋತ್ಸಾಹಕನಾಗಿದ್ದನು. ಸಮಕಾಲೀನ ಪ್ರಸಿದ್ಧ ಕಲಾವಿದ 'ಮಧುಸೂದನಯ್ಯ'ನಿಗೆ ಭೂದಾನ ಮಾಡುವುದರ ಮೂಲಕ ಕಲಾ ಪೋಷಣೆಗೆ ಹೆಚ್ಚಿನ ಒತ್ತು ಕೊಟ್ಟಿದ್ದನು. ಮಂಟೂರದ ಕ್ರಿ.ಶ. ೧೦೪೧ರ ಶಾಸನದಲ್ಲಿ ಈತನನ್ನು 'ಸರಸ್ವತಿಯಕರ್ಣಕುಂಡಲ' ಎಂದು ಕರೆಯಲಾಗಿದೆ.[೬೦]

ಎರಗನ ತರುವಾಯ ಅಂಕರಸನು ಪಟ್ಟಕ್ಕೆ ಬಂದನು. ಈತನು ಕಲ್ಯಾಣದ ಚಾಳುಕ್ಯರ ೧ನೆಯ ಸೋಮೇಶ್ವರನ ಸಾಮಂತನಾಗಿ ಕೂಹುಂಡಿ-೩೦೦೦ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಲಚ್ಚಿಯಬ್ಬರಸಿ ಈತನ ಪಟ್ಟದರಸಿಯಾಗಿದ್ದಳು.[೬೧] ಈತನನ್ನು ಅಂಕ, ಅಂಕಮ, ಅಂಕಭೂಪ, ಅಂಕರಸ, ಅಂಕಿದೇವರಸ, ಅಂಕಮಹೀಪ, ಅಂಕಪಾಲ ಎಂತಲೂ ಕರೆಯಲಾಗಿದೆ. ಎರಗನ ಪುತ್ರ ೧ನೆಯ ಸೇನನು ಅಪ್ರಾಪ್ತ ವಯಸ್ಸಿನವನಾದ್ದರಿಂದ ಸಾಮ್ರಾಜ್ಯದ ಅಧಿಕಾರವನ್ನು ಅಂಕರಸನು ವಹಿಸಿಕೊಂಡನು. ಈತನು ಶೌರ್ಯವಂತನೂ, ಯುದ್ಧಕಲಾನಿಪುಣನೂ ಆಗಿದ್ದನು. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನವು ಈತನ ಪರಾಕ್ರಮವನ್ನು–

ಚೆಲದಿದಂಕಮಹೀಶನೊಳ್ಕಲುಸದಿಂ ಮಾರಂಪವಂಗುಂಟೆನೊ
ಳ್ವಲಮಿರ್ಪತ್ತೆಂಡಯುಕರಶಿರಂ ಶಲಾಯುದ್ದಂಕೊಟ್ಟಖ
ಳ್ವಲತಾಡಂಬರಮಬ್ದಿಮಧ್ಯಗತಕು...ಮತಾರಕಾಚಳಮಂಕಿ
ತ್ತಳವೀಜಗತ್ರಯಜಯಪ್ರಾರಂಭಕೋಳಾಹಳಂ ॥

ಎಂದು ಬಣ್ಣಿಸಿದೆ.[೬೨] ಯುದ್ಧದಲ್ಲಿ ಪರಾಕ್ರಮಿಯಾದ ಅಂಕರಸನು ತನ್ನ ಖಡ್ಗವನ್ನು ಒಂದು ಭಾರಿ ಪ್ರಯೋಗಿಸಿದರೆ ಇಪ್ಪತ್ತೆರಡು ರುಂಡಗಳು ತುಂಡರಿಸುತ್ತಿದ್ದವು. ಈತನು ಕೊಲ್ಲಾಪುರದ ಶಿಲಾಹಾರ ಮನೆತನದ ಮಾರಸಿಂಗನ ಸೈನ್ಯವನ್ನು ಹಿಮ್ಮೆಟ್ಟಿಸಿದ್ದನು. ಕ್ರಿ.ಶ. ೧೦೪೮ರಲ್ಲಿ ಸವದತ್ತಿಯಲ್ಲಿ ಅಂಕೇಶ್ವರ ದೇವಾಲಯವನ್ನು ಕಟ್ಟಿಸಿ, ಇದರ ಜೀರ್ಣೋದ್ಧಾರಕ್ಕೆ ಭೂದಾನ ಮಾಡಿದ್ದಾನೆ. ಈತನ ಪಟ್ಟದರಸಿ ಲಚ್ಚಿಯಬ್ಬರಸಿ ಕ್ರಿ.ಶ. ೧೦೪೩ರಲ್ಲಿ ಅಗ್ರಹಾರ ಹೂಲಿಯ ಸಾವಿರ ಮಹಾಜನರ ಪಾದಗಳನ್ನು ಆರಾಧಿಸಿ (ವಿನಂತಿಸಿ) ಅವರಿಂದ ಭೂಮಿಯನ್ನು (ನಿವೇಶನ) ಪಡೆದು, ಇದರಲ್ಲಿ ಬಸದಿಯನ್ನು ಮಾಡಿಸಿ, ಇದರ ವಿವಿಧ ಧಾರ್ಮಿಕ ಚಟುವಟಿಕೆಗಳಿಗೆ ಭೂದಾನ ಮಾಡಿದ್ದಾಳೆ.[೬೩]

ಅಂಕರಸನ ತರುವಾಯ ಎರಗನ ಹಿರಿಯ ಪುತ್ರ ೧ನೆಯ ಸೇನನು ಪಟ್ಟಕ್ಕೆ ಬಂದನು. ಸವದತ್ತಿಯ ಕ್ರಿ.ಶ. ೮೭೫-೭೬ರ ಶಾಸನದಲ್ಲಿ 'ಎರಗಾಖ್ಯ ಮಹೀಪಃ ವಾದ್ಯವಿದ್ಯಾಧರಸ್ಯಾಗ್ರಸೂನಃ

ಶ್ರೀಸೇನಭೂಪತಿ' ಎಂಬ ಪ್ರಸ್ತಾಪವಿದೆ.[೬೪] ಇದರಿಂದ ೧ನೆಯ ಸೇನನು ಎರಗನ ಹಿರಿಯ ಪುತ್ರನೆಂದು ಸ್ಪಷ್ಟವಾಗುತ್ತದೆ. ಮೈಳಲಾದೇವಿ ಈತನ ಪಟ್ಟದರಸಿಯಾಗಿದ್ದಳು. ಈತನನ್ನು ಸೇನ, ಶ್ರೀಸೇನ, ಸೇನಭೂಪಾ, ಸೇನಭೂಪತಿ, ಶ್ರೀಸೇನಭೂಪಾಳ, ಕಾಳಸೇನ ಎಂತಲೂ ಕರೆಯಲಾಗಿದೆ. ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಸಾಮಂತನಾಗಿದ್ದನು. ಈತನ ಶೌರ್ಯ, ಪರಾಕ್ರಮ, ರೂಪ, ಲಾವಣ್ಯಗಳ ಕುರಿತು ಸವದತ್ತಿಯ ಕ್ರಿ.ಶ. ೧೦೪೮ರ ಶಾಸನವು–

ಅಸುಹೃದ್ಭೂಪತಿತೋಚೆತಪ್ಪದವಿರಾಂಗನ್ನಾಲಿಂಗನೊ
ಲ್ಲಸಿತಾಂಗಂಹರಹಾಸಕಾಶಶವಿಕಾನ್ತಾಕಾಶಗಂಗಾಳಜಳ
ಪ್ರಸರಮೋಘದಗಂತಕೀರ್ತಿಘನಪ್ರದ್ಯೋತಸನ್ಮೂರ್ತಿಸಂ
ದಸುಜದ್ಗುಣದೀಪವರ್ತ್ತಿನೆಗರ್ದಂ ಶ್ರೀಸೇನಭೂಪಾಳಕ ॥

ಎಂದು ಅಭಿವ್ಯಕ್ತಿಸಿದೆ.[೬೫] ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನವು ಈತನನ್ನು 'ವಾದ್ಯವಿದ್ಯಾಧರ' ಎಂದು ವರ್ಣಿಸಿದೆ.[೬೬] ಇದನ್ನು ಗಮನಿಸಿದರೆ ಈತನು ಸ್ವತಃ ವಾದ್ಯ ನುಡಿಸುತ್ತಿದ್ದಂತೆ ಮತ್ತು ಸಾಹಿತ್ಯದಲ್ಲಿ ಆಸಕ್ತಿಯುಳ್ಳವನಾಗಿದಂತೆ ಭಾಸವಾಗುತ್ತದೆ. ಪ್ರಸ್ತುತ ಶಾಸನದಲ್ಲಿ–

ಸುಗನ್ಧವತ್ರ್ಯಾಹ್ವಕೇಗ್ರಾಮೇಧರ್ಮಜ್ಞಜನತಾವೃತೆ
ಶ್ರೀಕಾಳಸೇನಭೂಪೇನಕಾರಿತ ಜಿನಮನ್ದಿರಂ
ನಿವರ್ತಂದ್ವಾದಶಂಶತಸ್ಟೈ ಜಿನಗೇಹಾಯಭಕ್ತಿತಃ
ಬ್ರಹದ್ದಣ್ಡೇನಸಂದತ್ತಂ ನಸ್ಯ ಸೇನಭೂಭುಜಾ ॥

ಎಂಬ ಪ್ರಸ್ತಾಪವಿದೆ.[೬೭] ಇದರಿಂದ ಈತನು ಸವದತ್ತಿಯಲ್ಲಿ ಬಸದಿಯನ್ನು ನಿರ್ಮಿಸಿರುವ ವಿಷಯ ಸ್ಪಷ್ಟವಾಗುತ್ತದೆ. ಇದೇ ಬಸದಿಗೆ ಈತನ ಮೊಮ್ಮಗನಾದ ಇಮ್ಮಡಿ ಸೇನಭೂಪ, ಹಿರಿಯ ಪುತ್ರ ಇಮ್ಮಡಿ ಕನ್ನಕೈರ, ಈತನ ಪುತ್ರ ಇಮ್ಮಡಿ ಕಾರ್ತವೀರ್ಯ, ಈತನ ಪುತ್ರ ಇಮ್ಮಡಿ ಸೋಮ ಮತ್ತು ಪೆರ್ಮಾಡಿದೇವ ಮೊದಲಾದವರು ಭೂದಾನ ಮಾಡಿದ್ದಾರೆ. ಈತನಿಗೆ ಅರಿಭೂಪಾಳ, ಇಮ್ಮಡಿ ಕನ್ನಕೈರ, ಇಮ್ಮಡಿ ಕಾರ್ತವೀರ್ಯ ಎಂಬ ಮೂವರು ಪುತ್ರರಿದ್ದರು.

೧ನೆಯ ಸೇನನ ತರುವಾಯ ಈತನ ಹಿರಿಯ ಪುತ್ರ ಅರಿಭೂಪಾಳನು ಪಟ್ಟಕ್ಕೆ ಬಂದನು. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನವು ಈತನನ್ನು 'ಮಹಾಸಾಮನ್ತ ನೆರಗಭೂಪಾಳಾತ್ಮಜಂ' ಎಂದು ಕರೆದಿದೆ.[೬೮] ಈತನನ್ನು ಅರಿ, ಅರಿಭೂಪಾಳ, ಅರಿಭೂಪ ಎಂತಲೂ ಕರೆಯಲಾಗಿದೆ. ಸವದತ್ತಿಯ ಕ್ರಿ.ಶ. ೧೦೪೮ರ ಶಾಸನದಲ್ಲಿ–

ಅರಿಭೂಪಾಳಕೃತಾಂತನುದ್ದತರಿಪುಕ್ಷಾಪಾದಳ
ಸನ್ದೋಹಭೀಕರಕಾಳಾನಳ್ನನುನ್ನೆ.ತದಪ್ಪಭಯಂ
ಕರವದ್ದದ್ಮಹಿಪಾಳ ಮೇಘಾಲಯಕಾಳೋ
ತ್ಸಾವಾತಂಕ್ಷಿಲೇಶ್ವರ ಚೂಡಾಮಣಿ ॥

ಎಂದು ಈತನ ಶೌರ್ಯ, ಪರಾಕ್ರಮ, ಕೀರ್ತಿ ವರ್ಣಿತವಾಗಿದೆ.[೬೯] ಅರಿಭೂಪಾಳನ ತರುವಾಯ

ಈತನ ಸಹೋದರನಾದ ಇಮ್ಮಡಿ ಕನ್ನಕೈರನು ಪಟ್ಟಕ್ಕೆ ಬಂದನು. ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನವು ಈತನನ್ನು–

ಸೇನರಸಂಗಾನ್ತು..ಕರಂ ಮನಮೊಸೆದಿರ್ಪ್ಪಲಕ್ಷ್ಮೀಯಿ
ಮೈಳಲದೇವಿರಂಜಿಕುಂ ಆ ದಂಪತಿಗಳ್ಗೆ ಪುಟ್ಟಿ
ಅರಿಭೂಪಾಳ ಕೃತಾನ್ತನುದ್ದರಿತಂ ॥

ಎಂದು ಕರೆದಿದೆ.[೨೦] ಈತನನ್ನು ಕನ್ನ, ಶ್ರೀಕನ್ನ, ಶ್ರೀಕನ್ನಭೂಪಾಳ, ಕನ್ನಕೈರ, ಕನ್ನಕೈರನೃಪ ಎಂತಲೂ ಕರೆಯಲಾಗಿದೆ.[೨೧] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದನು.[೨] ಲಾಟರ ಮೇಲೆ ದಂಡೆತ್ತಿ ಹೋಗಿ ವಿಜಯ ಸಾಧಿಸಿದನು. ಈ ಯುದ್ಧ ಪರಾಕ್ರಮವನ್ನು ಮೆಚ್ಚಿದ ಲಾಟರ ಅರಸನು ಈತನಿಗೆ ತನ್ನ ರಾಜಕುವರಿಯನ್ನು ಮದುವೆ ಮಾಡಿಕೊಟ್ಟು ವೈವಾಹಿಕ ಸಂಬಂಧ ಬೆಳೆಸಿದನು. ನಿಡಗುಂದಿಯ ಕ್ರಿ.ಶ. ೧೦೮೨ರ ತಾಮ್ರಪಟ ಶಾಸನವು ಈತನನ್ನು 'ಲಾಟರಾಜ ಕುಮಾರಿಯ ಹೃದಯಕದ್ದ ಚೋರ' ಎಂದು ಬಣ್ಣಿಸಿದೆ. ಈತನು ಬೇಟೆ ಮತ್ತು ಕುದುರೆ ಸವಾರಿಯಲ್ಲಿ ಪರಿಣಿತನಾಗಿದ್ದನು. ವೈರಿಗಳಿಗೆ ನಡುಕು ಹುಟ್ಟಿಸುವ ಧೀರನಾಗಿದ್ದನು. ನೆರೆಯ ಕೆಂಬಾವಿ ಎಂಬ ಭಾಗದಲ್ಲಿ ರಾಜ್ಯವಾಳುತ್ತಿದ್ದ 'ರೇವಣದೇವ' ಎಂಬ ರಾಜನಂತೆ ಧೈರ್ಯಶಾಲಿಯಾಗಿದ್ದನು. 'ಮಹಾಮಂಡಳೇಶ್ವರ' ಎಂಬ ಬಿರುದನ್ನು ಧರಿಸಿದ್ದನು. ಈತನ ಆಳ್ವಿಕೆಯ ಕಾಲಾವಧಿಯು (ಕ್ರಿ.ಶ. ೧೦೮೨–೧೦೮೭) ಸುವರ್ಣಯುಗವಾಗಿತ್ತು. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನವು 'ಕ್ಷಿತೀಶ್ವರ ಚೂಡಾಮಣಿ ರಟ್ಟವಂಶತಿಳಕಂ ಶ್ರೀಕನ್ನಭೂಪಾಳಂ' ಎಂದು ವರ್ಣಿಸಿದೆ.[೨೩] ರಟ್ಟವಂಶಕ್ಕೆ ತಿಳಕಪ್ರಾಯನಾದ ಕನ್ನಭೂಪನು ರತ್ನಚೂಡಾಮಣಿಯಂತೆ ಕಂಗೊಳಿಸಿದ್ದಾನೆ. ಈತನು ತನ್ನ ಆಸ್ಥಾನದಲ್ಲಿ ಸಂಗೀತ, ಸಾಹಿತ್ಯ, ನೃತ್ಯಕಲೆ, ಕವಿಗಳು, ಕಲಾವಿದರಿಗೆ ರಾಜಾಶ್ರಯ ನೀಡಿದ್ದನು. ಅಂತಾಗಿಯೇ ಈತನನ್ನು 'ಕನ್ನಕೈರನೃಪಃ ಖ್ಯಾತೋನೃತ್ಯಗೀತಾದಿಕೋವಿದ' ಎಂದು ಕರೆಯಲಾಗಿದೆ.[೨೪] ಕನಕಪ್ರಭಸಿದ್ಧಾಂತದೇವ ಎಂಬ ಜೈನ ಆಚಾರ್ಯನ ಹತ್ತಿರ ಜೈನ ತತ್ವಶಾಸ್ತ್ರವನ್ನು ಅಧ್ಯಯನ ಮಾಡಿದ್ದನು. ಈತನು ಕ್ರಿ.ಶ. ೧೦೯೦ರಲ್ಲಿ ಮರಣವನ್ನಪ್ಪಿದನು.

ಇಮ್ಮಡಿ ಕನ್ನಕೈರನ ತರುವಾಯ ಈತನ ಸಹೋದರನಾದ ಇಮ್ಮಡಿ ಕಾರ್ತವೀರ್ಯನು ಪಟ್ಟಕ್ಕೆ ಬಂದನು. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನವು ಈತನನ್ನು 'ಶ್ರೀಕನ್ನಭೂಪಾಳಕಂ ತದನುಜಂಕತ್ತನೃಪಾಳಂ' ಎಂದು ಕರೆದಿದೆ.[೨೫] ಪ್ರಸ್ತುತ ಶಾಸನವು ಈತನ ಪಟ್ಟದರಸಿಯಾದ ಭಾಗಲದೇವಿಯನ್ನು–

ಆತನ ಕುಳಾಂಗನೆ ಶ್ರೀವನಿತೆತಾನೆಮಹೀವನಿತೆಗೆ
ತಿಳಕಮೆನಿಸಿ ಕತ್ತನವಕ್ಷಶ್ರೀವನಿತೆನೆಗರ್ದ್ದ ಭಾಗಲದೇವಿ
ಜಗಜ್ಜನನಿ ಸಜ್ಜನಾಗ್ರಣಿಯಿನಿಕು ॥

ಎಂದು ದಾಖಲಿಸಿದೆ.[೨೬] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಸಾಮಂತನಾಗಿದ್ದನು.[೨೭] ಆದರೆ ಸವದತ್ತಿಯ ಕ್ರಿ.ಶ. ೧೦೯೮ರ ಶಾಸನವು ಈತನು ಇಮ್ಮಡಿ

ಸೋಮೇಶ್ವರನ ಮಹಾಸಾಮಂತನಾಗಿದ್ದ ವಿಷಯವನ್ನು ತಿಳಿಸುತ್ತದೆ.[೭೮] ಕಡೂರಿನ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ_

ಕಾರ್ತ್ಯವೀರ್ಯ ಸಯ್ಯೊಳುಬೆತ್ತ ಬಾಲಿಯಂವೆಗಳ
ಸುಗ್ರೀವನುಮೆಯ್ದಿದರಾವಯಪೋಳಯಸಲಿಸಿ ಕಾಣದಕಲಿಗಳ್ ॥

ಎಂದು ೬ನೆಯ ವಿಕ್ರಮಾದಿತ್ಯ ಮತ್ತು ಇಮ್ಮಡಿ ಕಾರ್ತವೀರ್ಯರು 'ವಾಲಿ' ಮತ್ತು 'ಸುಗ್ರೀವ'ರಂತೆ ಪರಾಕ್ರಮಿಗಳೂ, ಸ್ನೇಹಿತರಾಗಿದ್ದರೆಂದು ನಿರೂಪಣೆಯಿದೆ.[೭೯] ಪ್ರಸ್ತುತ ಶಾಸನವು ಈತನ ಪರಾಕ್ರಮವನ್ನು ವಿವರಿಸುತ್ತ, ಬಾಹುಬಲದಲ್ಲಿ ಸಹಸ್ರಾರ್ಜುನನಂತಿದ್ದನು. ಯುದ್ಧದಲ್ಲಿ ಪ್ರವೀಣನಾಗಿದ್ದನು. ಅರ್ಜುನನು ಶಿವನಲ್ಲಿ ಅಸ್ತ್ರಗಳನ್ನು ಪಡೆದಂತೆ ಈತನೂ ಅಸ್ತ್ರಗಳನ್ನು ಪಡೆದನೆಂದು ವರ್ಣಿಸಿದೆ. ಈತನಿಗೆ 'ಸಾಹಸೋತ್ತುಂಗ', 'ಸೇನನಸಿಂಗ' ಎಂಬ ಬಿರುದುಗಳಿದ್ದವು.[೮೦] ಈತನ ಪಟ್ಟದರಸಿ ಭಾಗಲದೇವಿ ಸವದತ್ತಿಯಲ್ಲಿ ಅಂಕೇಶ್ವರ ದೇವಾಲಯಕ್ಕೆ ಭೂದಾನ ಮಾಡಿದ್ದಾಳೆ.[೮೧]

ಕೂಹುಂಡಿನಾಡಿನ ತೇರದಾಳ-೧೨ ಆಡಳಿತ ವಿಭಾಗದಲ್ಲಿ ಗೊಂಕದೇವರಸನು ಇಮ್ಮಡಿ ಕಾರ್ತವೀರ್ಯನ ಮಾಂಡಳೀಕನಾಗಿ ಆಡಳಿತ ನಡೆಸುತ್ತಿದ್ದನು. ಈತನು ಕಾರ್ತವೀರ್ಯನ ಆಜ್ಞೆಯ ಮೇರೆಗೆ ತೇರದಾಳದಲ್ಲಿ ಗೊಂಕ ಜಿನಾಲಯವನ್ನು ಕಟ್ಟಿಸಿ, ಇದರಲ್ಲಿ ನೇಮಿನಾಥ ತೀರ್ಥಂಕರನ ಶಿಲ್ಪವನ್ನು ಕಾರ್ತವೀರ್ಯನ ಸಮ್ಮುಖದಲ್ಲಿ ಪ್ರತಿಷ್ಠಾಪಿಸಿದ್ದಾನೆ. ಇಲ್ಲಿಗೆ ಕೊಲ್ಲಾಪುರದ ರೂಪನಾರಾಯಣ ಬಸದಿಯ ಮಂಡಳಾಚಾರ್ಯನಾದ ಮಾಘನಂದಿಯನ್ನು ಕರೆಸಿ ಆ ಸಂದರ್ಭವನ್ನು ಸಾಕ್ಷಿಕರಿಸಿದ್ದಾನೆ. ಆದರೂ ಈ ಬಸದಿಯನ್ನು ಕಟ್ಟಲು ಆಜ್ಞಾಪಿಸಿದ್ದರ ಕುರಿತು ಭಿನ್ನಾಭಿಪ್ರಾಯಗಳು ವ್ಯಕ್ತವಾದರೂ ಇಮ್ಮಡಿ ಕಾರ್ತವೀರ್ಯನೇ ಗೊಂಕ ಜಿನಾಲಯವನ್ನು ಕಟ್ಟಲು ಆಜ್ಞೆ ಮಾಡಿರುವಂತೆ ಶಾಸನದಿಂದ ಪರೋಕ್ಷವಾಗಿ ಸ್ಪಷ್ಟವಾಗುತ್ತದೆ. ಇಮ್ಮಡಿ ಕಾರ್ತವೀರ್ಯನು ತನ್ನ ಹಿರಿಯ ಸಹೋದರ ಇಮ್ಮಡಿ ಕನ್ನಕೈರನಿಗೆ ಆಡಳಿತದಲ್ಲಿ ಸಹಾಯ ಮಾಡುತ್ತಿದ್ದನು. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನವು_

ಸಿಡಿಲಂತಿರ್ಪ್ಪೊಯ್ಯಲುಂನಾಕರಿಯ
ನೆಡರುಸಲ್ಮೇರುವಂನೂಂಕಲುರ್ಕ್ಕುಂ
ತುಡುಕಲ್ ಸಂಸಾರಿಯುಂತಿಕ್ಕಿಸಲಿನಶಶಿಯಂಮೀಟಲುಂ
ಬೆಟ್ಟ ಕಡಲುಂಲ.. ಮೋರ್ಗ್ಗಣಲಣ್ಣಂನುಡಿಯಲು
ಮರ್ಕ್ಕೊಣ್ಣುಕಾದಲ್ ಸುಭಟರೊ... ಕತ್ತಿಗಂ ॥

ಎಂದು ಈತನ ಪರಾಕ್ರಮವನ್ನು ವರ್ಣಿಸಿದೆ.[೮೨] ಈತನು ಯುದ್ಧರಂಗದಲ್ಲಿ ತನ್ನ ಸಹೋದರ ಇಮ್ಮಡಿ ಕನ್ನಕೈರನಂತೆ ಪ್ರವೀಣನಾಗಿದ್ದನು. ವೈರಿಗಳ ಸೊಕ್ಕನ್ನಡಗಿಸುವಲ್ಲಿ ನಿಸ್ಸೀಮನಾಗಿದ್ದನು. ಮದಿಸಿದ ಆನೆಯ ಶಕ್ತಿಗೆ ಸಮಾನನಾದ ಈತನು ಎದುರಾಳಿ ಸೈನ್ಯವನ್ನು ಹಿಮ್ಮೆಟ್ಟಿಸುತ್ತಿದ್ದನು. ಈತನು ಕ್ರಿ.ಶ. ೧೦೯೫ರಲ್ಲಿ ಮರಣವನ್ನಪ್ಪಿದನು.

ಇಮ್ಮಡಿ ಕಾರ್ತವೀರ್ಯನ ತರುವಾಯ ಈತನ ಹಿರಿಯ ಪುತ್ರ ಇಮ್ಮಡಿ ಸೇನನು ಪಟ್ಟಕ್ಕೆ ಬಂದನು. ಸವದತ್ತಿಯ ಕ್ರಿ.ಶ. ೮೭೫-೭೬ರ ಶಾಸನವು_

ಶ್ರೀಕಾರ್ತ್ತವೀರ್ಯಲೋಕಾನಾಂ ಕಳ್ಪವೃಕ್ಷೋಸಿದಾನಃ
ತಸ್ಯಾಗ್ರನನ್ದಃ ಶ್ರೀಸೇನಭೂಪಂ ||

ಎಂದು ಪ್ರಸ್ತಾಪಿಸಿದೆ.[೮೩] ಈತನನ್ನು ಸೇನ, ಸೇನಭೂಭುಜ, ಕಲಿಸೇನ, ಸೇನಭೂಪ, ಸೇನಮಹೀಪ, ಸೇನಭೂಪಾಳ, ಸೇನಮಹೀಪ, ಸೇನಮಹೀಭೂಭುಜಂ ಎಂತಲೂ ಕರೆಯಲಾಗಿದೆ. ಈತನ ಪಟ್ಟದರಸಿ ಲಕ್ಷ್ಮೀದೇವಿಯು ಆಡಳಿತದಲ್ಲಿ ಸಹಾಯಕಳಾಗಿದ್ದಳು.[೮೪] ಪ್ರಸ್ತುತ ಶಾಸನದಲ್ಲಿ ಈತನನ್ನು–

ರಾಷ್ಟ್ರಕೂಟವಂಶ ಸರೋವರುಹವನ ರಾಜಹಂಸಸಿರಿ
ಯಂನಿಜಾನುಜೇಯ ಶಶಿತೇಜಕಾಂತಾಸೇನ
ನವಯುಕ್ತಿಕಹಾರಂ ಕೃಷ್ಣವಂಶರಾಜ ರಾಷ್ಟ್ರಕೂಟವಂಶ
ವಿಸ್ತಾರಕ ಯಶೋನಿಧಿಸರಿಕಾಂತಾಸೇನಸುರತೇಜ
ವಾಗ್ವಧೂಸೂದನಂ ಸುಯಶೋಭವಂ ನಿರ್ಮಳವದನಂ
ಮಂತ್ರಗುಣೋತ ಸ್ಸಾಹಶಕ್ತಿಸಂಪಣ್ಣಾದುಷ್ಟನಿಗ್ರಹ
ಶಿಷ್ಟಪರಿಪಾಳಕಂ ವಸುಧಾಧೀಶಂ ತ್ರೈಜಗತ್ಪಾದನಂ
ರಟ್ಟವಂಶತಿಳಕಂ ಪೆರ್ಮಾಡಿಭೂಪಂ ಪದ್ಮಾಭಿರಾಮಂ
ತೇಜೋನಿಧಿ ವಿಶ್ವಭೂಪಾಳರತ್ನಂ ||

ಎಂದು ಬಣ್ಣಿಸಲಾಗಿದೆ.[೮೫] ಈತನು ಕೂಹುಂಡಿನಾಡಿನ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ದ್ವಿತೀಯ ಪುತ್ರನಾದ ಜಯಕರ್ಣನ ಸಾಮಂತನಾಗಿದ್ದನು.

ಇಮ್ಮಡಿ ಸೇನನು ಸಿಂಧವಂಶದ ಇಮ್ಮಡಿ ಆಚುಗಿಯ ಸಹಾಯದಿಂದ ಹೊಯ್ಸಳರು, ಗೋವೆಯ ಕಾದಂಬರು, ಪಾಂಡ್ಯರು, ಕರಾಡದ ಶಿಲಾಹಾರರ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದಾನೆ. ಕಲ್ಯಾಣದ ಚಾಳುಕ್ಯರ ಜಯಕರ್ಣನ ಸೇನಾಪತಿ ಚಾಮುಂಡನೂ ಈತನಿಗೆ ಸೈನಿಕ ನೆರವನ್ನು ನೀಡಿದ್ದನು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ಸೇನಂಸಾಹಸ ಭೀಮಸೇನನ ಸಕೃದ್ವಿದ್ಯಾವಿಳಾ ಸೇನನಾ
ಜ್ಞಾನಾರೀ ಪ್ರಯವಲ್ಲಭಂಪೃಥು ಬಂತ್ರೀಬ್ರಾಂತು ತೇಜರ್ಪ್ರಭಂ
ನಾನಾದಾನಿ ದೃಢಾಭಿಮಾನಿರಣ ಭೂಸೇನಾನಿ ರಟ್ಟಾನ್ವಯ
ತ್ರೀನೇತ್ರಂಬುದ್ದ ಮಿತ್ರನುಜ್ವಳ ಯಶತರೂಪ್ತ್ರಂ ನೃಪರಂಜಿಪಂ ||

ಎಂದು ಈತನ ಶೌರ್ಯ–ಪರಾಕ್ರಮವನ್ನು ವರ್ಣಿಸಿದೆ.[೮೬] ಈ ಶಾಸನ ಕವಿಯು ತನ್ನ ಆಶ್ರಯದಾತನನ್ನು ಮಹಾಭಾರತದ ಭೀಮನಿಗೆ ಹೋಲಿಸಿ ಚಿತ್ರಿಸಿದ್ದಾನೆ. ವಿದ್ವಜನರ ಸಂಗಾತಿಯಾಗಿದ್ದ ಈತನು ಅವರೊಂದಿಗೆ ಸ್ನೇಹಪರನಾಗಿದ್ದನು. ಜಿನಾರಾಧಕನಾಗಿದ್ದ ಈತನು ಪ್ರಜಾಹಿತಾಕಾಂಕ್ಷಿಯಾದ ಆಡಳಿತ ನೀಡಿದ್ದಾನೆ. ರಣತಂತ್ರ ರೂಪಿಸುವ ನಿಪುಣನಾಗಿದ್ದನು. ರಾಜ್ಯದ ಜನತೆಯ ಸಂಪತ್ತನ್ನು ಉಳಿಸಿ, ಬೆಳೆಸುವ ಎದೆಗಾರಿಕೆ ಈತನಲ್ಲಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು–

ಸಿರಿಯಂನಿಜನುಜೇಯನಾದರದಿಂಶಶಿಯಿತ್ತು ರಾಜನಾದಂನಣ್ಪಂ
ಧರೆಮಿಸಿಮಿಕ್ಕಾಂತಾಸೇನರಾಜನೊರ್ಪೆಣಾಸಿರಾಜನೆನಿಪವನಾವಂ ||

ಎಂದು ಈತನನ್ನು ಕೊಂಡಾಡಿದೆ.[೮೭] ಸುಮಾರು ಮೂವತ್ತೈದು ವರ್ಷಗಳಷ್ಟು ಸುದೀರ್ಘ ರಾಜ್ಯಭಾರ

ಮಾಡಿದ ಈತನ ಆಳ್ವಿಕೆಯು ಕ್ರಿ.ಶ. ೧೧೨೬ರಲ್ಲಿ ಕೊನೆಗೊಂಡಿತು.

ಇಮ್ಮಡಿ ಸೇನನ ತರುವಾಯ ಮುಮ್ಮಡಿ ಕಾರ್ತವೀರ್ಯನು ಪಟ್ಟಕ್ಕೆ ಬಂದನು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು ಈತನನ್ನು 'ಆ ಸೇನಾವನಿಪಂಗಮಪ್ರತಿಮ ಲಕ್ಷ್ಮೀದೇವಿಗಂ ಪುಟ್ಟಿದಂ ಕತ್ತಮಂ' ಎಂದು ಕರೆದಿದೆ.[೬೮] ಈತನಿಗೆ ಪದ್ಮಲಾದೇವಿ ಎಂಬ ಪಟ್ಟದರಸಿ ಮತ್ತು ೧ನೆಯ ಲಕ್ಷ್ಮಿದೇವ ಎಂಬ ಪುತ್ರನಿದ್ದನು. ಈತನು ವೇಣುಗ್ರಾಮವನ್ನು ರಾಜಧಾನಿ ಮಾಡಿಕೊಂಡು ಕಲ್ಯಾಣದ ಕಲಚೂರಿಯರ ಸೋವಿದೇವನ ಮಹಾಸಾಮಂತನಾಗಿ ಆಳುತ್ತಿದ್ದನು. ಇಂದಿನ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಪಟ್ಟಣವು ಈತನ ಉಪರಾಜಧಾನಿಯಾಗಿತ್ತು.[೬೯] ಆಡಳಿತದ ಅನುಕೂಲಕ್ಕಾಗಿ ಈ ಪಟ್ಟಣವನ್ನು ಉಪರಾಜಧಾನಿ ಮಾಡಿಕೊಂಡಿರುವ ಸಾಧ್ಯತೆಯಿದೆ. ಈತನು ಕೊಲ್ಲಾಪುರದ ಶಿಲಾಹಾರರ ವಿಜಯಾದಿತ್ಯ ಮತ್ತು ಕಲ್ಯಾಣದ ಕಲಚೂರಿಯರ ಇಮ್ಮಡಿ ಬಿಜ್ಜಳರೊಂದಿಗೆ ಒಳ್ಳೆಯ ಸ್ನೇಹ ಹೊಂದಿದ್ದನೆಂಬುದು ಭೋಜದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಿಂದ ಸ್ಪಷ್ಟವಾಗುತ್ತದೆ. ಈತನು ರಾಜ್ಯದ ಬಲಹೀನರನ್ನು, ಶರಣಾಗತರಾದವರನ್ನು ರಕ್ಷಿಸಿ, ವೈರಿಪಡೆಯನ್ನು ಹಿಮ್ಮೆಟ್ಟಿಸುವ ಬಲ ಹೊಂದಿದ್ದನು. ಗೀತ, ನೃತ್ಯ, ಸಾಹಿತ್ಯಾಸಕ್ತನಾಗಿದ್ದು, ತನ್ನ ಆಸ್ಥಾನದಲ್ಲಿ ಅನೇಕ ಸಂಗೀತ ನೃತ್ಯಕಲಾವಿದರಿಗೆ ಆಶ್ರಯ ನೀಡಿದ್ದನು. ಇದು ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದ–

ಶ್ರೀಮನ್ ಮಹಾಮಂಡಳೇಸ್ವರಂ ಲತ್ತನೂಪುರವಾಧೀಶ್ವರ
ಗೀತನೃತ್ಯರತಿಉತತ ಘನಖಕ್ಷೀರವಾದ್ಯಲಯ
ಚಚ್ಚಪುಟಚಾಚಪುಟ ಪರಮೇಶ್ವ ||

ಎಂಬ ನಿರೂಪಣೆಯಿಂದ ಮನದಟ್ಟಾಗುತ್ತದೆ.[೭೦] ಈತನು ಕೈಗೊಂಡಿರುವ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಗಮನೀಯವಾಗಿವೆ. ಕೊಲ್ಲಾಪುರದ ಶಿಲಾಹಾರರ ವಿಜಯಾದಿತ್ಯನ ಸೈನ್ಯಾಧಿಕಾರಿ ಕಾಳಿಯಣ್ಣನು ಯಕ್ಸಂಬಾದಲ್ಲಿ ನಿರ್ಮಿಸಿದ ನೇಮಿನಾಥ ಬಸದಿಯ ಶಿಲ್ಪಸೌಂದರ್ಯವನ್ನು ಕಂಡು ನಿಬ್ಬೆರಗಾಗಿ ಈ ಬಸದಿಗೆ ಕಲ್ಲೊಳೆ ಗ್ರಾಮದಲ್ಲಿ ಭೂದಾನ ಮಾಡಿದ್ದಾನೆ.[೭೧] ಉಳಾಗಡ್ಡಿ ಖಾನಾಪುರದಲ್ಲಿ ಸುಮತಿಯಣ್ಣನು ಕ್ರಿ.ಶ. ೧೧೪೪ರಲ್ಲಿ ನಿರ್ಮಿಸಿದ ಬಾಹುಬಲಿ ಬಸದಿಗೆ ಭೂದಾನ ಮಾಡಿದ್ದಾನೆ.[೭೨] ಈತನನ್ನು ಕತ್ತಮ, ಕಾರ್ತವೀರ್ಯ, ಕತ್ತ ಎಂತಲೂ ಕರೆಯಲಾಗಿದೆ. ದುರ್ಧರವೈರಿಭೂಪ, ಸುರತೇಜೋನಿಧಿ, ಪದ್ಮಾಭಿರಾಮ, ವಾಗ್ವಿಳಾಸ, ದಕ್ಷಿಣಭುಜಂ. ದಿಟಕಾಂತ, ದಾನಸಂತೃಪ್ತಂ, ತಳಪ್ರಹಾರಿ, ಮಹಾಮಂಡಳೇಶ್ವರ, ಲತ್ತನೂರ್ಪುರವಾಧೀಶ್ವರ, ಉದಾರಮಾಹೇಶ್ವರ, ಸತ್ಯಪ್ರಭಾಷಣಂ, ಬುಧಪರಿತೃಪ್ತಕರಿಂಚನ, ಮಂಡಳಿಕಗಂಡಂ, ಬಪ್ಪನಸಿಂಗಂ, ಸಕಲಶಾಸ್ತ್ರಪಾರಂಗತ, ವಾದ್ಯವಿದ್ಯಾಧರ, ಚಚ್ಚಪುಟಮಾ ಚಪುಟಪುರವಾಧೀಶ್ವರ, ಬಪ್ಪನಸಿಂಗ ಎಂಬ ಬಿರುದುಗಳನ್ನು ಹೊಂದಿದ್ದನು.[೭೩]

ಮುಮ್ಮಡಿ ಕಾರ್ತವೀರ್ಯನ ತರುವಾಯ ೧ನೆಯ ಲಕ್ಷ್ಮೀದೇವನು ಪಟ್ಟಕ್ಕೆ ಬಂದನು. ಈತನು ಗೋವೆಯ ಕದಂಬರೊಡನೆ ಹೋರಾಡಿ ಅವರ ಅಧೀನದಲ್ಲಿದ್ದ ವೇಣುಗ್ರಾಮವನ್ನು ವಶಪಡಿಸಿಕೊಂಡು ಇದನ್ನು ತನ್ನ ರಾಜಧಾನಿ ಮಾಡಿಕೊಂಡು ಆಳಲಾರಂಭಿಸಿದನು. ಇಡೀ

ಕೂಹುಂಡಿಮಂಡಲ ಈತನ ಆಳ್ವಿಕೆಗೆ ಒಳಪಟ್ಟಿತ್ತು. ಈತನ ತಾಯಿ ಪದ್ಮಾವತಿ ಮತ್ತು ಪಟ್ಟದರಸಿ ಹಗರಟಗೆಯ ನಾಡಿನ ಯದುವಂಶದ ಚಂದಲದೇವಿಯರು ಆಡಳಿತದಲ್ಲಿ ಸಹಾಯಕರಾಗಿದ್ದರು. ಈತನಿಗೆ ೪ನೆಯ ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನ ಎಂಬಿಬ್ಬರು ಪುತ್ರರಿದ್ದರು. ಈತನು ಲಕ್ಷ್ಮೀಭೂಭುಜ, ಲಕ್ಷ್ಮೀದೇವ, ಲಕ್ಷ್ಮಭೂಪ, ಲಕ್ಷ್ಮೀಧರ, ಲಕ್ಷ್ಮಣ ಎಂಬ ಬಿರುದುಗಳನ್ನು ಹೊಂದಿದ್ದನು. ಈತನನ್ನು ಕ್ಷಿತಪತಿಭುಜ, ಕಾಯೋತ್ತಮ, ಸಮಸ್ತ ಗುಣಸಂಪನ್ನಂ, ಕವಿಸಂಕುಳಕಲ್ಪಭೂರುಹಂ, ಶ್ರೀವಿಷ್ಣುಪತಿ, ಭೂಪಾಳ, ನಾರಾಯಣಂ, ರಟ್ಟರಕಾಲ್ಗಾರಣಿಧರಮಿಪಟ್ಟಂ, ದಾನದೊಳೆಕೂಡಿವಾಮನರೂ ಪಂಧರಿಯಿಸಿದನೆಂದುನಗುಗುಂ, ರೂಪಕಂದರ್ಪ ಎಂದಿತ್ಯಾಗಿ ಕರೆಯಲಾಗಿದೆ. ಸವದತ್ತಿಯ ಕ್ರಿ.ಶ. ೧೨೨೮ರ ಶಾಸನವು ಈತನಿಗೆ ಕಂದರ್ಪ ಎಂಬ ಬಿರುದಿತ್ತೆಂದು ನಿರೂಪಿಸಿದೆ.[೪] ಈತನು ತನ್ನ ತಂದೆಯ ಆಡಳಿತದಲ್ಲಿ ಭಾಗಿಯಾಗಿ ನಾಗರಿಕ ಮತ್ತು ಯುದ್ಧ ಕ್ಷೇತ್ರಗಳಲ್ಲಿ ಅಪಾರ ಅನುಭವ ಪಡೆದಿದ್ದನು. ಜೊತೆಯಲ್ಲಿ ನ್ಯಾಯ, ಅನ್ಯಾಯಗಳ ಬಗೆಗೆ ತಂದೆಗೆ ಸಲಹೆಗಳನ್ನು ನೀಡುತ್ತಿದ್ದನು. ಹಣ್ಣಿಕೇರಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ–

> ರಟ್ಟಕುಳಾಗ್ರಣೀಧರಣೀ ಪಟ್ಟರ್ನಿಜನೇಸ
> ಲೊಳೆಸೆಯೆರಿಪುಸಂತತಿಯೊಳ್
> ಪಟ್ಟಮ್ಮನಂತಪುರದೊಳ್
> ಕಟ್ಟುವನೀಲಕ್ಷ್ಮೀದೇವನುದ್ಭವವೀರಂ ॥

ಎಂದು ಈತನ ವ್ಯಕ್ತಿತ್ವ, ಶೌರ್ಯ, ಪರಾಕ್ರಮ ಮತ್ತು ಸಾಹಿತ್ಯಾಸಕ್ತಿಯ ವರ್ಣನೆಯಿದೆ.[೫] ಈತನು ತನ್ನ ಆಸ್ಥಾನದಲ್ಲಿ ನೇಮಿಚಂದ್ರ ಮೊದಲಾದ ಅನೇಕ ಕವಿಗಳಿಗೆ ಆಶ್ರಯ ನೀಡಿದ್ದನು. ಹಾಗಾಗಿ ಈತನಿಗೆ 'ಕವಿಸಂಕುಳ ಕಲ್ಪಭೂರುಹಂ' ಎಂಬ ಬಿರುದಿತ್ತು. ನೇಮಿಚಂದ್ರನು 'ಲೀಲಾವತಿ ಪ್ರಬಂಧ' ಕಾವ್ಯದಲ್ಲಿ ಮತ್ತು ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ' ಕಾವ್ಯದಲ್ಲಿ ವಜ್ರನಾಭಿಯನ್ನು ಲಕ್ಷ್ಮೀಧರನಿಗೂ, ಆನಂದನನ್ನು ೪ನೆಯ ಕಾರ್ತವೀರ್ಯನಿಗೂ ಹೋಲಿಸಿದ್ದಾರೆ. ಇದು ಆ ಕವಿಗಳು ಅರಸರ ಮೇಲಿಟ್ಟಿದ್ದ ಗೌರವವನ್ನು ತೋರಿಸುತ್ತದೆ.

೧ನೆಯ ಲಕ್ಷ್ಮೀದೇವನ ತರುವಾಯ ಈತನ ಪುತ್ರ ೪ನೆಯ ಕಾರ್ತವೀರ್ಯನು ಪಟ್ಟಕ್ಕೆ ಬಂದನು. ಈತನಿಗೆ ಏಚಲಾದೇವಿ ಮತ್ತು ಮಹಾದೇವಿ ಎಂಬಿಬ್ಬರು ಪತ್ನಿಯರಿದ್ದರು.[೬] ಈತನಿಗೆ ಮಲ್ಲಿಕಾರ್ಜುನ ಎಂಬ ಸಹೋದರನಿದ್ದನು. ಇವರಿಬ್ಬರೂ ರಾಮ–ಲಕ್ಷ್ಮಣರಂತ್ತಿದ್ದರು. ಈತನನ್ನು ಕಾರ್ತವೀರ್ಯಮಹಿಪ, ಕಾರ್ತವೀರ್ಯಕ್ಷಿತಿಪತಿ, ಕಲಿಕಾರ್ತವೀರ್ಯ ಎಂತಲೂ ಕರೆಯಲಾಗಿದೆ.[೭] ಈತನಿಗೆ ಶ್ರೀನಿಧಿಕಾರ್ತ್ಯವೀರ್ಯ, ಬಪ್ಪನಸಿಂಗ, ಸಾಹಿತ್ಯವಿದ್ಯಾವಿರಿಂಚ, ರಟ್ಟನಾರಾಯಣ ಎಂಬ ಬಿರುದುಗಳಿದ್ದವು.[೮] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಈಕಮನೇಯವಾಜಿತಯಮೀಕಷಂಕುಳಮೀವಿಳಾಸಿನಿ
> ಲೋಕಮಿವೆಂಮವಾಕವಿಯಕಾಗದೊಳು ಬಯಲಾಜಿಯೊಳ್ಪುರಾ
> ಣೀಕದಯುದ್ಧದೋಳ್ಪಿಡಿದಸಿನ್ತಿವನಿಕಲಿಕಾರ್ತ್ತವೀರ್ಯನೆಂ

ದಾಕುಳಮಾಗಿನೋಡುವುದ ಬಂಧಶಾಲೆಯೊಳರ್ದರಿಬ್ರಜಂ ॥

ಎಂದು ಈತನ ಶೌರ್ಯ, ಪರಾಕ್ರಮ, ವ್ಯಕ್ತಿತ್ವವು ಅನಾವರಣಗೊಂಡಿವೆ.[೯೯] ಈತನು ತನ್ನ ಆಸ್ಥಾನದಲ್ಲಿ ಕವಿಕಂದರ್ಪ ಎಂಬ ಬಿರುದಾಂಕಿತನಾಗಿದ್ದ ಜೈನಾಚಾರ್ಯ ಬಾಳಚಂದ್ರದೇವನಿಗೆ ಆಶ್ರಯ ನೀಡಿದ್ದನು. ಈತನ ಮಂತ್ರಿಯಾದ ಬೀಚಿರಾಜನು ಬೆಳಗಾವಿಯಲ್ಲಿ ಕಟ್ಟಿಸಿದ ಶಾಂತಿನಾಥ ಬಸದಿಯ ಮುನಿಜನರ ಆಹಾರಕ್ಕೆ ಮತ್ತು ಬಸದಿಯ ಜೀರ್ಣೋದ್ಧಾರಕ್ಕೆ ಭೂದಾನ ಮಾಡಿದ್ದಾನೆ. ಹಗರಟಗೆ ನಾಡಿನ ಪ್ರಭು ಮತ್ತು ಈತನ ಮಾವನಾದ ರಾಜರಸನು ಕಲ್ಲೊಳೆಯಲ್ಲಿ ನಿರ್ಮಿಸಿದ ತ್ರಿಕೂಟಮಂಡಿತ ಶಾಂತಿನಾಥ ಬಸದಿಯ ಜೀರ್ಣೋದ್ಧಾರ, ಮುನಿಜನರ ಆಹಾರಕ್ಕಾಗಿ ಕೂಹುಂಡಿನಾಡಿನ ಕೊರವಳ್ಳಿ ಕಂಪಣದ ಉಂಬರವಾಡಿ ಗ್ರಾಮವನ್ನು ಉಂಬಳಿಯಾಗಿ ನೀಡಿದ್ದಾನೆ.[೧೦೦] ೪ನೆಯ ಕಾರ್ತವೀರ್ಯನ ತರುವಾಯ ಈತನ ಸಹೋದರ ಮಲ್ಲಿಕಾರ್ಜುನನು ಪಟ್ಟಕ್ಕೆ ಬಂದನು. ಈತನು ತನ್ನ ಸಹೋದರನ ಆಳ್ವಿಕೆಯ ಕಾಲದಲ್ಲಿ ಆಡಳಿತ ಮತ್ತು ಯುದ್ಧರಂಗದಲ್ಲಿ ಅಪಾರ ಅನುಭವ ಪಡೆದಿದ್ದನು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಕಾರ್ತವೀರ್ಯನನುಮಾದರ್ರೋದ್ಭವ ಸಾಮ್ರಾಜ್ಯರ
ಮಾಧಿಪಯುವರಾಜ ಕುಮಾರರಾತ್ಮಜರದ್ವ್ಜತೇಜದ
ಜನಮೆಲ್ಲಂ ಮೆಚ್ಚೆ ಚಲ್ಲಂ ಪಗೆವರುರದಸೆಲ್ಲಂ ಜಯ
ಶ್ರೀಗೆ ನಲ್ಲಂಮನುಮಾರ್ಗ್ಗಂ ಸತಿವರ್ಗ್ಗಂತನಗೆಸೆಯನಿಸರ್ಗ್ಗಂ ॥

ಎಂದು ಈತನ ಶೌರ್ಯ–ಪರಾಕ್ರಮದ ಪ್ರಸ್ತಾಪವಿದೆ.[೧೦೧] ಈತನು ಸುವ್ಯವಸ್ಥಿತವಾದ ಆಡಳಿತ ನೀತಿಯಿಂದ ರಾಜ್ಯದ ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದನು. ಈತನ ಆಳ್ವಿಕೆಯ ಕಾಲಾವಧಿಯಲ್ಲಿ ರಟ್ಟ ಮನೆತನದ ರಾಜಗುರು ಮುನಿಚಂದ್ರನು ಸುಗಂಧವರ್ತಿ–೩೦ರ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.

ಮಲ್ಲಿಕಾರ್ಜುನನ ತರುವಾಯ ಈತನ ಸಹೋದರ ಇಮ್ಮಡಿ ಲಕ್ಷ್ಮೀದೇವನು ಪಟ್ಟಕ್ಕೆ ಬಂದನು. ಈತನು ವೇಣುಗ್ರಾಮವನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು. ರಟ್ಟರಾಜ್ಯಪ್ರತಿಷ್ಠಾಪನಾಚಾರ್ಯ ಎಂದು ಬಿರುದಾಂಕಿತನಾದ ಮುನಿಚಂದ್ರನು ಈತನಿಗೆ ಶಸ್ತ್ರ–ಶಾಸ್ತ್ರ ಮತ್ತು ದೀಕ್ಷಾ ಗುರುವಾಗಿದ್ದನು.[೧೦೨] ಈ ಗುರುವಿನ ಹತ್ತಿರ ಬಿಲ್ವಿದ್ಯೆಯನ್ನು ಕಲಿತಿದ್ದನು. ಈತನು ತನ್ನ ತಂದೆಯ ಸ್ಮರಣಾರ್ಥವಾಗಿ ಸುಗಂಧವರ್ತಿಯ ನಾಗರ ಕೆರೆಯ ಹತ್ತಿರ ಮಲ್ಲಿನಾಥ ದೇವಾಲಯವನ್ನು ಕಟ್ಟಿಸಿ, ಶ್ರೀಶೈಲದಿಂದ ತಾನು ತಂದ ಶಿವಲಿಂಗವನ್ನು ಪ್ರತಿಷ್ಠಾಪಿಸಿದನು.[೧೦೩] ರಟ್ಟ ಮನೆತನದ ಕೊನೆಯ ಅರಸನಾದ ಈತನು ತನ್ನ ಗುರುವಿನ ಮಾರ್ಗದರ್ಶನದಲ್ಲಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ್ದಾನೆ. ಈತನ ಆಳ್ವಿಕೆಯ ಸಂದರ್ಭದಲ್ಲಿ ದೇವಗಿರಿಯ ಸೇವುಣರ ಸಿಂಘಣನು ಸಾಮ್ರಾಜ್ಯದ ವಿಸ್ತರಣೆಗಾಗಿ ಕೊಲ್ಲಾಪುರದ ಭೋಜನನ್ನು ಸೋಲಿಸಿದನು. ಕಾಲಕ್ರಮೇಣ ರಟ್ಟರು ಮತ್ತು ಸೇವುಣರ ಮಧ್ಯದಲ್ಲಿ ರಾಜಕೀಯ ಸಂಘರ್ಷಗಳು ಪ್ರಾರಂಭವಾದವು. ಇಮ್ಮಡಿ ಲಕ್ಷ್ಮೀದೇವನು ಸಿಂಘಣನೊಂದಿಗೆ ಒಪ್ಪಂದ ಮಾಡಿಕೊಂಡಿದ್ದನು. ನಂತರ ಇವರಿಬ್ಬರ ನಡುವೆ ವೈಮನಸ್ಸು ಬೆಳೆದು ಯುದ್ಧ ನಡೆಯಿತು.[೧೦೪] ಲಕ್ಷ್ಮೀದೇವನು ಸಿಂಘಣನಿಗೆ ಕಪ್ಪು–ಕಾಣಿಕೆ ನೀಡಿ ಶಾಂತಿ ಒಪ್ಪಂದ ಮಾಡಿಕೊಂಡನು. ನಂತರ

ಸಿಂಘಣನು ಉತ್ತರ ಭಾರತದತ್ತ ದಿಗ್ವಿಜಯ ಕೈಕೊಂಡ ಸಮಯವನ್ನು ಉಪಯೋಗಿಸಿಕೊಂಡು ಮತ್ತೆ ಸ್ವಾತಂತ್ರ್ಯ ಘೋಷಿಸಿಕೊಂಡನು. ಈ ವಿಷಯ ತಿಳಿದ ಸಿಂಘಣನು ತನ್ನ ದಂಡನಾಯಕನಾದ ಬೀಚಣ್ಣನ ನೇತೃತ್ವದಲ್ಲಿ ರಟ್ಟ ರಾಜ್ಯದ ಮೇಲೆ ದಾಳಿ ಮಾಡಲು ಕಳುಹಿಸಿದನು. ಈ ಯುದ್ಧದಲ್ಲಿ ಇಮ್ಮಡಿ ಲಕ್ಷ್ಮೀದೇವನಿಗೆ ಸೋಲುಂಟಾಯಿತು. ಸಿಂಘಣನ ನಂತರ ಇಮ್ಮಡಿ ಕೃಷ್ಣನು ಪಟ್ಟಕ್ಕೆ ಬಂದನು. ಈತನ ಕಾಲದಲ್ಲಿಯೂ ರಟ್ಟರು ಮತ್ತು ಸೇವುಣರ ಮಧ್ಯದಲ್ಲಿ ಮತ್ತೊಮ್ಮೆ ಘರ್ಷಣೆ ಉಂಟಾಯಿತು. ಈ ಘರ್ಷಣೆಯಲ್ಲಿ ಸೇವುಣ ಮನೆತನದ ಮಹಾಪ್ರಧಾನ ನಾಗರಸನು ಯುದ್ಧದ ನೇತೃತ್ವವನ್ನು ವಹಿಸಿದ್ದನು. ನಾಗರಸನು ಈ ಯುದ್ಧದಲ್ಲಿ ರಟ್ಟರನ್ನು ಸಂಪೂರ್ಣವಾಗಿ ಸದೆಬಡೆದು ಕೂಹುಂಡಿ ಪ್ರದೇಶವನ್ನು ವಶಪಡಿಸಿಕೊಂಡು ಸೇವುಣ ರಾಜ್ಯದ ಮೇರೆಯನ್ನು ವಿಸ್ತರಿಸಿದನು. ರಾಜ್ಯವನ್ನು ಕಳೆದುಕೊಂಡ ಇಮ್ಮಡಿ ಲಕ್ಷ್ಮೀದೇವನು ಸನ್ಯಾಸತ್ವವನ್ನು ಸ್ವೀಕರಿಸಿರಬಹುದು ಅಥವಾ ಬೇರೆ ಪ್ರದೇಶಕ್ಕೆ ಪಲಾಯನ ಮಾಡಿರುವ ಸಾಧ್ಯತೆಯಿದೆ. ಈತನ ಅಂತಿಮ ದಿನಗಳ ಕುರಿತು ಯಾವುದೇ ಮಾಹಿತಿಗಳು ಇದುವರೆಗೂ ಲಭ್ಯವಾಗಿಲ್ಲ. ಈತನ ಆಳ್ವಿಕೆಯ ಕೊನೆಯೊಂದಿಗೆ ಸವದತ್ತಿಯ ರಟ್ಟ ಸಾಮ್ರಾಜ್ಯವು ಅವನತಿಯಾಯಿತು.

೩.೨.೫. ಕೊಲ್ಲಾಪುರದ ಶಿಲಾಹಾರರು

ಕೂಹುಂಡಿನಾಡಿನ ಪಶ್ಚಿಮ–ಉತ್ತರ ಭಾಗದಲ್ಲಿ (ಇಂದಿನ ಮಹಾರಾಷ್ಟ್ರದ ಸಾತಾರ, ಸಾಂಗಲಿ, ಕೊಲ್ಲಾಪುರ ಮತ್ತು ಕನ್ನಡನಾಡಿನ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ರಾಯಬಾಗ ತಾಲ್ಲೂಕುಗಳ ಪ್ರದೇಶ) ಕೊಲ್ಲಾಪುರದ ಶಿಲಾಹಾರರು, ಮಳಖೇಡದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ನಿಷ್ಠಾವಂತ ಸಾಮಂತರಾಗಿ ಕ್ರಮವಾಗಿ ಕರಹಾಟ (ಇಂದಿನ ಸಾತಾರ ಜಿಲ್ಲೆಯ ಕರಾಡ) ಮತ್ತು ವಲಯವಾಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಬಹುಕಾಲ ರಾಜ್ಯಭಾರ ಮಾಡಿದ್ದಾರೆ. ಕೊಲ್ಲಾಪುರದ ಮಹಾಲಕ್ಷ್ಮೀಯ ವರಪ್ರಸಾದರಾದ ಇವರು ಕನ್ನಡಿಗರಾಗಿದ್ದರು. ಇವರ ಅನೇಕ ಕನ್ನಡ ಶಾಸನಗಳು ಉಪಲಬ್ಧವಾಗಿವೆ. ಈ ಮನೆತನದ ಪ್ರಾರಂಭದ ಅರಸರ ಕುರಿತು ಮತ್ತು ವಂಶಾವಳಿಯನ್ನು ನಿರೂಪಿಸುವ ಒಂದೆರಡು ಶಾಸನಗಳು ಲಭ್ಯವಿವೆ. ಆದರೂ ಇವರ ಸುದೀರ್ಘವಾದ ವಿವರಣೆ ಅಪೂರ್ಣವಾಗಿದೆ. ಬಿಲ್ಹಣನ ವಿಕ್ರಮಾಂಕದೇವ ಚರಿತ, ಕರ್ಣಪಾರ್ಯನ ನೇಮಿನಾಥ ಪುರಾಣ, ಪಾರ್ಶ್ವಕವಿಯ ನಿಂಬಸಾಮಂತ ಚರಿತೆ ಮೊದಲಾದ ಕೃತಿ–ಕಾವ್ಯಗಳಲ್ಲಿ ಈ ಮನೆತನದ ಆಳರಸರ ಸಾಧನೆಗಳ ವಿಸ್ತೃತವಾದ ವಿವರಣೆ ಗೋಚರಿಸುತ್ತದೆ.[೧೦೫]

ಕೊಲ್ಲಾಪುರದ ಶಿಲಾಹಾರ ಮನೆತನದಲ್ಲಿ ೧ನೆಯ ಜಟ್ಟಿಗ (ಕ್ರಿ.ಶ. ೯೪೦–೯೬೦), ನಾಯಿಮ (ಕ್ರಿ.ಶ. ೯೬೦–೯೮೦), ೧ನೆಯ ಚಂದ್ರಾದಿತ್ಯ (ಕ್ರಿ.ಶ. ೯೮೦–೧೦೦೦), ಇಮ್ಮಡಿ ಜಟ್ಟಿಗ (ಕ್ರಿ.ಶ. ೧೦೦೦–೧೦೨೦), ೧ನೆಯ ಗೊಂಕ, ೧ನೆಯ ಗುಹಾಲ, ಕೀರ್ತಿರಾಜ, ಇಮ್ಮಡಿ ಚಂದ್ರಾದಿತ್ಯ, ಮಾರಸಿಂಹ (ಕ್ರಿ.ಶ. ೧೦೫೦–೧೦೭೫), ಇಮ್ಮಡಿ ಗುಹಾಲ (ಕ್ರಿ.ಶ. ೧೦೭೫–೧೧೦೦), ಬಲ್ಲಾಳ (ಕ್ರಿ.ಶ. ೧೧೦೦–೧೧೦೮), ಇಮ್ಮಡಿ ಗೊಂಕ, ೧ನೆಯ ಭೋಜದೇವ (ಕ್ರಿ.ಶ. ೧೧೦೮–೧೧೩೮),

ಗಂಡರಾದಿತ್ಯ, ವಿಜಯಾದಿತ್ಯ (ಕ್ರಿ.ಶ. ೧೧೩೮-೧೧೭೫), ಇಮ್ಮಡಿ ಭೋಜದೇವ (ಕ್ರಿ.ಶ. ೧೧೭೫-೧೨೧೨) ಅರಸರು ಆಳ್ವಿಕೆ ಮಾಡಿದ್ದಾರೆ. ೧ನೆಯ ಗೊಂಕನ ಪೂರ್ವಜರ ಜೀವನ ಮತ್ತು ಸಾಧನೆಗಳ ಕುರಿತಾಗಿ ದಾಖಲೆಗಳು ಲಭ್ಯವಿಲ್ಲ. ೧ನೆಯ ಜಟ್ಟಿಗನು ತಲಕಾಡಿನ ಗಂಗ ಮನೆತನದ ಪೆರ್ಮಾನಡಿಯ ಮಾವನಾಗಿದ್ದನು. ಈತನಿಗೆ 'ಗೋಮಂತ ದುರ್ಗಾಧಿಪ' ಎಂಬ ಬಿರುದಿತ್ತು. ಈ ಗೋಮಾಂತದುರ್ಗ ಕನ್ನಡನಾಡಿನ ಇಂದಿನ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಶಿಲಾಹಾರರು ಆರಂಭದಲ್ಲಿ ತುಂಗಭದ್ರಾ ನದಿಯ ದಂಡೆಯಲ್ಲಿ ರಾಜ್ಯಭಾರ ಮಾಡುತ್ತಿದ್ದಿರಬೇಕು, ಅನಂತರ ಅವರು ಉತ್ತರದ ಕಡೆಗೆ ಬಂದಿರುವುದು ದೃಢಪಡುತ್ತದೆ.

ಜಟ್ಟಿಗನ ತರುವಾಯ ಸಿಂಹಾಸನವನ್ನೇರಿದ ನಾಯಿಮನಿಗೆ 'ಕರ್ಣಾಟಕುಚ ಕುಂಕಮಾಂಕಿತ' ಎಂಬ ಬಿರುದಿತ್ತು. ಮಿರಜದ ಕ್ರಿ.ಶ. ೧೦೫೮ರ ತಾಮ್ರಪಟ ಶಾಸನದಲ್ಲಿ–

> ಗಂಗಾಮಗ್ರಮುದೀರ್ಯ್ಯ ವೈರಿನಿಕರಸ್ಯಾತ್ಮೀಯತೀವ್ರಾಸಿನಾ
> ಭುಂಜಂ ತತ್ಕರಹಾಟ ಕುಂಡಿವಿಷಯಂ ಸ್ವಾಂಗೀಕೃತಂ
> ಸರ್ವ್ವದೋ ಮ್ಯೆರಿಂಜಾದೇಸಮುದಗ್ರಕೊಂಕಣಮಹಾದೇಸಂ
> ನಿಜತ್ರಾಸನಾದಭುಜಂ ನಿತ್ಯ ಮುದಾರ ವೀರನೃಪತಿಃ
> ಶ್ರೀ ಗೋಂಕರಾಜೋತ್ತಮಃ ॥

ಎಂದು ೧ನೆಯ ಗೊಂಕನು ಕರಹಾಟ, ಕುಂಡಿವಿಷಯ (ಕೂಹುಂಡಿನಾಡು), ಮಿರಿಂಜಾದೇಶ, ಕೊಂಕಣದೇಶ ವಿಷಯಗಳಲ್ಲಿ (ಆಡಳಿತ ವಿಭಾಗಗಳು) ಆಳ್ವಿಕೆ ಕೈಗೊಂಡಿದ್ದನೆಂದು ಪ್ರಸ್ತಾಪವಿದೆ.[೧೦೬] ತರುವಾಯ ಮಾರಸಿಂಹನು (ಕ್ರಿ.ಶ. ೧೦೫೦-೧೦೭೫) ಕಿಲಗಿಲ ನೆಲೆವೀಡಿನಿಂದ ಕೊಲ್ಲಾಪುರ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಆಳುತ್ತಿದ್ದನು. ನರಗುಂದದ ಕ್ರಿ.ಶ. ೧೦೭೪ರ ಶಾಸನದಲ್ಲಿ–

> ಅದಟರಿವರೆನಿಪ ಪಗೆವರನದಿರ್ಪ್ಪಿ ತನ್ನಾಜ್ಞೆಯಿಂ
> ಚತುರ್ವ್ವಾರ್ಧ್ಧಿಪರೀತಧರೆಯನಾಳ್ದನತ್ಯಭ್ಯುದಯ
> ಭುವನೈಕಮಲ್ಲನರ್ತ್ಥಿಗೆ ನಲ್ಲ ॥ ತತ್ಪಾದಪದ್ಮೋಪಜೀವಿ
> ಸಮಧಿಗತ ಪಂಚಮಹಾಶಬ್ದ ಮಹಾಮಣ್ಡಳೇಶ್ವರ
> ತಗರಪುರವರಾಧೀಶ್ವರ ಶಿಳಾಹಾರನರೇಂದ್ರ ಜೀಮೂತ
> ವಾಹನಾನ್ವಯಪ್ರಸೂತ ಸುವರ್ಣ್ನಗರುಡಧ್ವಜ ಮಱುವಕ್ಕಸರ್ಪ್ಪಂ
> ಗೂವಲನಸಿಂಗಂ ರಿಪುಮಣ್ಡಳಿಕಭೈರವಂ ವಿದ್ವಿಷ್ಟಗಜಕಣ್ಠೀರವ
> ನಿಡುವರಾದಿತ್ಯಂ ರೂಪನಾರಾಯಣಂ ಮಣ್ಡಳಿಕಮುಖದರ್ಪ್ಪಣಂ
> ಸಮರಸಂಘಟ್ಟೋ.....ಜಳಧಿನೀರ ಬಡವಾನಳಂ ವೈರಿಕಾಳಾನಳಂ
> ಗಿರಿದುರ್ಗ್ಗಲಂಘನ ಶನಿವಾರಸಿದ್ಧ ಸರಸ್ವತೀಕರ್ಣ್ನಾವತಂಸಂ
> ವಾಚಕವಾಚಸ್ಪತಿ ವಿವೇಕಬೃಹಸ್ಪತಿ ಕವಿ......ರಾಜಾವಳೀವಿರಾಜಿತರಪ್ಪ
> ಶ್ರೀಮನ್ಮಹಾಮಣ್ಡಳೇಶ್ವರ ಮಾರಸಿಂಹದೇವ ಕೂಂಡಿಮೂಸಾಸಿರಮುಮಂ
> ಮಿರಿಂಜೆಮೂಸಾಸಿರಮುಮಂ ಪದಿನೆಂಟು ಗ್ರಾಮಂಗಳುಮುಂ
> ಸುಖಸಂಕಥಾವಿನೋದದಿನಾಳುತ್ತಮಿರೆ ॥

ಎಂದು ಕಲ್ಯಾಣದ ಚಾಳುಕ್ಯರ ಇಮ್ಮಡಿ ಸೋಮೇಶ್ವರನ ಅಧೀನದಲ್ಲಿ ಈತನು ಕೂಂಡಿಮೂಸಾಸಿರ,

ಮಿರಿಂಜೆಮೂಸಾಸಿರ, ಹದಿನೆಂಟು ಗ್ರಾಮಗಳಲ್ಲಿ ಮಹಾಮಂಡಳೇಶ್ವರ ಗೈಯುತ್ತಿದ್ದನೆಂದು ಪ್ರಸ್ತಾಪವಿದೆ.[೧೯] ಈತನ ಪುತ್ರಿ ಚಂದ್ರಲೇಖಾಳನ್ನು (ಚಂದಲದೇವಿ) ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನು ವಿವಾಹನಾಗಿದ್ದನು. ಮಾರಸಿಂಹನ ಪುತ್ರ ೧ನೆಯ ಭೋಜದೇವನು ಗೋವೆಯ ಕದಂಬರ ಶಾಂತಿವರ್ಮನ ಶಿರವನ್ನು ಕತ್ತರಿಸಿ ತಂದು ೬ನೆಯ ವಿಕ್ರಮಾದಿತ್ಯನ ಪಾದಕ್ಕೆ ಒಪ್ಪಿಸಿದನೆಂದು ಕೊಲ್ಲಾಪುರದ ಕ್ರಿ.ಶ. ೧೧೧೫ರ ತಾಮ್ರಪಟ ಶಾಸನದಲ್ಲಿ ಪ್ರಸ್ತಾಪವಿದೆ. ಈತನು ಕೊಂಗಜನನ್ನು ಸದೆಬಡಿದನಲ್ಲದೇ ವೇಣುಗ್ರಾಮವನ್ನು (ಇಂದಿನ ಬೆಳಗಾವಿ) ನಾಶಮಾಡಿದನು. ಗೋವಿಂದನನ್ನು ಹತ್ತಿಕ್ಕಿದನು. ಕೊಂಕಣದ ಮೇಲೆ ದಂಡೆತ್ತಿ ಹೊಗಿ ಭಿಲ್ಲಮನನ್ನು ಬಿಡುಗಡೆ ಮಾಡಿದನು.[೧೦೮]

೧ನೆಯ ಭೋಜದೇವನ ತರುವಾಯ ಸಿಂಹಾಸನವನ್ನೇರಿದ ಮಹಾಮಂಡಳೇಶ್ವರ ಗಂಡರಾದಿತ್ಯನು (ಕ್ರಿ.ಶ. ೧೧೦೮–೧೧೩೮) ಆರಂಭದಲ್ಲಿ ರಾಜಧಾನಿ ಕಿಲಗಿಲದಿಂದ ತರುವಾಯ ವಲಯವಾಡದಿಂದ ಆಳ್ವಿಕೆ ಮಾಡಿದ್ದಾನೆ. ಕೊಲ್ಲಾಪುರದ ಕ್ರಿ.ಶ. ೧೧೧೫ರ ತಾಮ್ರಪಟ ಶಾಸನದಲ್ಲಿ ಈತನನ್ನು ತಗರ ಪುರವರಾಧೀಶ್ವರ, ಗಣಿಕಾ ಮನೋಜ, ಹಯವತ್ಸರಾಜ, ಸತ್ಯರಾಧೇಯ, ಶೌಚಗಾಂಗೇಯ ಎಂದೆಲ್ಲ ಕೊಂಡಾಡಲಾಗಿದೆ. ೬ನೆಯ ವಿಕ್ರಮಾದಿತ್ಯನ ಪ್ರೀತಿಗೆ ಪಾತ್ರನಾಗಿ, 'ನಿಸ್ಸಂಕಮಲ್ಲ' ಎಂಬ ಬಿರುದನ್ನು ಪಡೆದಿದ್ದನು. ಈತನು ಕೂಂಡಿದೇಶದ (ಕೂಹುಂಡಿನಾಡು) ದಂಡಬ್ರಹ್ಮನನ್ನು ಹತ್ತಿಕ್ಕಿದ್ದನು. ಕೊಲ್ಲಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು ಈತನ ವ್ಯಕ್ತಿತ್ವವನ್ನು–

ಶ್ರೀಯುವತೀ ಲತಾಲಲಿತ ಕಳ್ವಮಹಾಮಹಿಜಂಗೆ ಶೌಚಗಾಂ
ಗೇಯಧರಾಧಿಪಂಗೆ ಖಚರೇಂದ್ರಭವಂಗೆ ರೂಪನಾ
ರಾಯಣದೇವಭೂಪತಿಗೆ ಗಂಡರದೇವನೃಪಂಗೆ ರೂಪನಾ
ರಾಯಣದೇವ ನಾದಿಜಿನನಾದವ ಮಾಳ್ಕಭಿವಾಂಛಿತಾರ್ಥಮಂ ॥
ಮನುಸೂತ್ರಂ ನಿಜಸೂತ್ರಮೀ ಮನಸಿಜಾಕಾರಮೆಂ
ಬಿನಿತಲ್ ಸುತ್ತಲಳುಂಬವಂ ಬರಚರಪ್ರಸ್ತುತ್ಯ ಜೀಮೂತವಾ
ಹನವಶಂ ನಿಜವಂಶಮೆಂದೊಡೆ ಬಳಿಕ್ಕೀ ಗಂಡರಾದಿತ್ಯದೇ
ವನ ಸನ್ಮಾರ್ಗ್ಗದ ರೂಪಿನನ್ವಯದುದಾತ್ತಖ್ಯಾತಿ ಸಾಮಾನ್ಯವೇ ॥

ಎಂದು ಬಣ್ಣಿಸಿದೆ. ಕರ್ಣಪಾರ್ಯನು 'ನೇಮಿನಾಥ ಪುರಾಣ'ದಲ್ಲಿ ಈ ಅರಸನ ವ್ಯಕ್ತಿತ್ವವನ್ನು–

ಮನುಮಾರ್ಗಂ ಮರುವಕ್ಕಂ ಸರ್ಪನವನೀವಿಖ್ಯಾತ ಜೀಮೂತವಾ
ಹನ ವಿದ್ಯಾಧರ ಚಕ್ರಿವಂಶತಿಳಕಂ ಶ್ರೀಗಂಡರಾದಿತ್ಯ ಭೂ
ಪನುದಾತ್ತಂ ಪುರುಷೋತ್ತಮಂ ಕಿಳಕಿಳದುರ್ಗಾಧಿಪಂ
ಜನಸಂರಕ್ಷಣದಕ್ಷನೀ ಕ್ಷಿತಿನುತಂ ಗಾಂಭೀರ್ಯ ರತ್ನಾಕರಂ ॥

ಎಂದು ಕೊಂಡಾಡಿದ್ದಾನೆ. ಈತನ 'ದಕ್ಷಿಣ ಭುಜಾದಂಡ' ಎಂಬ ಖ್ಯಾತಿಗೆ ಪಾತ್ರನಾಗಿದ್ದ ಮಹಾಸಾಮಂತ ನಿಂಬದೇವನು ದಕ್ಷಿಣ ಮಹಾರಾಷ್ಟ್ರದ ಭಾಗದಲ್ಲಿ ಜೈನ ಧರ್ಮದ ಏಳಿಗೆಗಾಗಿ ವಿಶೇಷವಾಗಿ ದುಡಿದು ಇತಿಹಾಸ ಪ್ರಸಿದ್ಧನಾಗಿದ್ದಾನೆ. ಕೊಲ್ಲಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು–

ಪರಮಜಿನಂದ್ವಯಂ ನಾಕರಸಂ ಪತಿ ತನಯರುದ್ಭಯಶರ್ಭಿ

ಲ್ಲ ರಸಂನಿಂಬರಸಂ ಕಾವರಸರೆನಲ್ ಚಂಪಕಾಂಬಿಕೆಯನಾರ್ಪೋಲ್ಲರ್
ಅವರಸಿಯರು ಗಂಡರದೇವನ ಸತಿ ನಾಕಿರಾಜನಾತ್ಮ ಜೆಗರ್ಹ
ದ್ದೇವ ಪದಭಕ್ತೆ ಕರ್ಣಾದೇವಿಗೆ ಸರಿದೊರೆ ಸಮಾನವೇನಾದಪರೇ ॥
ಬರೆವರಾದಿತ್ಯಂ ಸುಕವಿಮಕರಧ್ವಜಂ... ಸಹಾಯ ನಿವನೇ
ಜಗದ್ದರಿದ್ರವಿದ್ರಾವಣಂ ನಿಲೆ ಮಾತಾಡುವನೇ ತೊಡರ್ಗ್ಗೆಡೆಗುಡಂ
ಚಾರಿತ್ರಸಂಪನ್ನನೇ ಕಲಿಕಾಲಕ್ಕೊರೆಗಟ್ಟಿದಂ ಶುಚಿಯೆ ಗಂಗಾಸೂನು
ಗಂಭೀರನೇ ಗೆಲೆವಂದಂ ಜಳರಾಶಿಯಿಂ ಪಿರಿಯರಾರ್ಸ್ಸಾಮಂತ
ನಿಂಬಂಬರ ॥

ಎಂದು ನಿಂಬದೇವನ ತಂದೆ ನಾಕರಸ, ತಾಯಿ ಚಂಪಕಾಂಬಿಕೆ, ಸಹೋದರರಾದ ಬಿಲ್ಲರಸ, ಕಾವರಸ ಹಾಗೂ ಈತನ ರಾಜಕೀಯ, ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳನ್ನು ನಿರೂಪಿಸಿದೆ. ಈತನು ಅನೇಕ ಬಸದಿಗಳನ್ನು ನಿರ್ಮಿಸಿ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾನೆ. ಇವುಗಳಲ್ಲಿ ಕೊಲ್ಲಾಪುರದ ರೂಪನಾರಾಯಣ ಬಸದಿಯೂ ಒಂದಾಗಿದೆ.[೧೦೯] ತೇರದಾಳದ ಕ್ರಿ.ಶ. ೧೧೮೧ರ ಶಾಸನದಲ್ಲಿ ಈತನ ಧಾರ್ಮಿಕ ಚಟುವಟಿಕೆಗಳ ಪ್ರಸ್ತಾಪವಿದೆ.[೧೧೦] ದೊನವಾಡದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಗಂಡರಾದಿತ್ಯನ (?) ಆಳ್ವಿಕೆಯ ಸಂದರ್ಭದಲ್ಲಿ ಗಾವುಂಡನೊಬ್ಬನು ಸ್ಥಳೀಯ ಕಲಿದೇವ ದೇವಾಲಯಕ್ಕೆ ದಾನ ಮಾಡಿದ ವಿವರಗಳಿವೆ.[೧೧೧]

ಗಂಡರಾದಿತ್ಯನ ತರುವಾಯ ಈತನ ಪುತ್ರ ವಿಜಯಾದಿತ್ಯನು (ಕ್ರಿ.ಶ. ೧೧೩೮–೧೧೭೫) ಸಿಂಹಾಸನವನ್ನೇರಿದನು. ಈತನು ವಲಯವಾಡದಿಂದ ಮಹಾಮಂಡಳೇಶ್ವರ ಗೈಯುತ್ತಿದ್ದನು. ಕೊಲ್ಲಾಪುರದ ಮಹಾಲಕ್ಷ್ಮೀಯ ಪರಮ ಭಕ್ತನಾಗಿದ್ದನು. ಯಕ್ಸಂಬಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಈತನ ಬಿರುದಾವಳಿಗಳು ಮತ್ತು ಆಳ್ವಿಕೆಯ ಪರಿಚಯವಿದೆ.[೧೧೨] ಈತನಿಗೆ 'ಕಲಿಯುಗದ ವಿಕ್ರಮಾದಿತ್ಯ' ಎಂಬ ಬಿರುದಿತ್ತು. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಈತನನ್ನು–

ತ್ರಿಜಗತ್ಪವಿತ್ರನೆನಲಿಂತು ಜನಸ್ತುತನಾದ ಗಂಡರಾದಿತ್ಯ
ಮಹೀಭುಜನಗ್ರ ಸೂನುವಿಗಳ್ದಂ ವಿಜಯರಮಣನೆಳೆಗೆ
ವಿಜಯಾದಿತ್ಯಂ ॥

ಎಂದು ಕರೆಯಲಾಗಿದೆ.[೧೧೩] ಈ ಶಾಸನದಲ್ಲಿ ಮಾರಸಿಂಹನಿಂದ ವಿಜಯಾದಿತ್ಯನವರೆಗಿನ ವಂಶಾವಳಿಯ ನಿರೂಪಣೆಯಿದೆ. ವಿಜಯಾದಿತ್ಯನು ಜೀಮೂತವಾಹನನೂ, ಶೂರನೂ, ಧೀರನೂ, ರೂಪದಲ್ಲಿ ನಾರಾಯಣನ ಸಮಾನನೂ, ಸದ್ಗುಣವುಳ್ಳವನೂ ಆಗಿದ್ದನು. ಈತನ ರಾಜ್ಯವು 'ವೇಣುರಾಜ'ನ ರಾಜ್ಯಕ್ಕಿಂತ ವಿಸ್ತಾರವಾಗಿತ್ತೆಂದು ಪ್ರಸ್ತುತ ಶಾಸನದಲ್ಲಿ ಉಲ್ಲೇಖವಾಗಿದೆ. ಇಲ್ಲಿ ಉಲ್ಲೇಖವಾಗಿರುವ 'ವೇಣುರಾಜ'ನು ಯಾರು ಎಂಬುದು ಸ್ಪಷ್ಟವಿಲ್ಲ. ಪ್ರಾಯಶಃ ಈ ವೇಣುರಾಜನು ವೇಣುಗ್ರಾಮವನ್ನು (ಇಂದಿನ ಬೆಳಗಾವಿ) ಆಳುತ್ತಿದ್ದ ಸವದತ್ತಿಯ ರಟ್ಟರ ಳನೆಯ ಕಾರ್ತವೀರ್ಯ ಅಥವಾ ಮಲ್ಲಿಕಾರ್ಜುನ ಅಥವಾ ಮುಮ್ಮಡಿ ಲಕ್ಷ್ಮೀದೇವ ಇದ್ದಿರಬಹುದು. ವಿಜಯಾದಿತ್ಯನ ಮಹಾಮಂತ್ರಿ ಕಾಳಿಯಣ್ಣನು ಕೂಹುಂಡಿನಾಡಿನ ಕೊರವಳ್ಳಿ ಕಂಪಣದ ಎಕ್ಕಸಂಬುಗೆ (ಇಂದಿನ ಯಕ್ಸಂಬಾ) ಗ್ರಾಮದಲ್ಲಿ ನೇಮಿನಾಥ

ಬಸದಿಯನ್ನು ನಿರ್ಮಿಸಿ, ತನ್ನ ಧರ್ಮಗುರುಗಳಾದ ಮಂಡಳಾಚಾರ್ಯ ಕುಮಾರಕೀರ್ತಿಪಂಡಿತದೇವನ ಶಿಷ್ಯ ವಿಜಯಕೀರ್ತಿಪಂಡಿತನ ಸನ್ನಿಧಿಯಲ್ಲಿ ಧಾರಾಪೂರ್ವಕವಾಗಿ ದಾನ ಮಾಡಿದ್ದಾನೆ.[೧೧೪] ಈ ವಿಷಯ ತಿಳಿದ ಸವದತ್ತಿಯ ರಟ್ಟರ ಮುಮ್ಮಡಿ ಕಾರ್ತವೀರ್ಯನು ಯಕ್ಸಂಬಾಕ್ಕೆ ಬಂದು ನೇಮಿನಾಥ ಬಸದಿಯ ಗೋಪುರವನ್ನು ಕಂಡು ಆಶ್ಚರ್ಯಚಕಿತನಾಗಿ, ಇಲ್ಲಿ ಜರುಗುವ ಪೂಜೆಗೆ, ಮುನಿಜನರ ಆಹಾರದಾನ, ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಕಲ್ಲೊಳೆಯಲ್ಲಿ ಎರಡು ಸಾವಿರ ಕಂಬಗಳ ಅಳತೆಯ ಭೂಮಿ ಮತ್ತು ಹೂದೋಟವನ್ನು ದಾನ ಮಾಡಿದ್ದಾನೆ.[೧೧೫] ಈ ಎಲ್ಲ ಶಾಸನಾಧಾರಗಳು ಮತ್ತು ವಾಸ್ತು-ಶಿಲ್ಪ ಕುರುಹುಗಳು ಕೂಹುಂಡಿನಾಡಿನ ಪಶ್ಚಿಮ-ಉತ್ತರ ಭಾಗದಲ್ಲಿ (ಇಂದಿನ ಕೊಲ್ಲಾಪುರ ಜಿಲ್ಲೆ ಮತ್ತು ಚಿಕ್ಕೋಡಿ, ಹುಕ್ಕೇರಿ, ಬೆಳಗಾವಿ ಪ್ರದೇಶ) ಕೊಲ್ಲಾಪುರದ ಶಿಲಾಹಾರರು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಆಳುತ್ತಿದ್ದರೆಂಬುದು ಮನದಟ್ಟಾಗುತ್ತದೆ.

೩.೨.೬. ದಕ್ಷಿಣ ಕೊಂಕಣದ ಶಿಲಾಹಾರರು

ಇಂದಿನ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ವಿವಿಧ ಶಿಲಾಹಾರ ಮನೆತನಗಳಲ್ಲಿ ದಕ್ಷಿಣ ಕೊಂಕಣದ ಶಿಲಾಹಾರ ಮನೆತನವೂ ಒಂದಾಗಿದೆ. ಈ ಶಾಖೆಯ ಅರಸರು ತಾವು ಸಿಂಹಳ ಅರಸರ ಸಂತತಿಯಿಂದ ಬಂದವರೆಂದು ಹೇಳಿಕೊಂಡಿದ್ದಾರೆ. ಇವರು ಮೂಲತಃ ಗೋವೆಯಿಂದ ಬಂದವರೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವರು ಕೆಲಕಾಲ ಬಾದಾಮಿಯ ಚಲುಕ್ಯರ ಸಾಮಂತರಾಗಿದ್ದರು. ಈ ಮನೆತನದ ಸಣಪುಲ್ಲನು ಮಳಖೇಡದ ರಾಷ್ಟ್ರಕೂಟರ ೧ನೆಯ ಕೃಷ್ಣನ ಪ್ರೀತಿಗೆ ಪಾತ್ರನಾಗಿದ್ದನು. ಇಂದಿನ ಮಹಾರಾಷ್ಟ್ರದ ಸಾವಂತವಾಡಿ, ರತ್ನಗಿರಿ ಮೊದಲಾದ ಪ್ರದೇಶಗಳು ಇವರ ಆಳ್ವಿಕೆಗೊಳಪಟ್ಟಿದ್ದವು.[೧೧೬] ಕೂಹುಂಡಿನಾಡಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕುಡಿಯ ಶ್ರೀ ತೊನ್ನಪ್ಪ ಪಾರಿಸ ಉಪಾಧ್ಯಾಯ ಅವರ ಮನೆಯಲ್ಲಿರುವ ಕ್ರಿ.ಶ. ೯೯೮ರ ದೇವನಾಗರಿ ಲಿಪಿ ಮತ್ತು ಸಂಸ್ಕೃತ ಭಾಷೆಯ ತಾಮ್ರಪಟ ಶಾಸನದಲ್ಲಿ ದಕ್ಷಿಣ ಕೊಂಕಣದ ಶಿಲಾಹಾರ ಮನೆತನದ ಇಮ್ಮಡಿ ಅವಸನನ (ಅಪರಾಜಿತ) ಆಳ್ವಿಕೆ ಮತ್ತು ವಂಶಾವಳಿಯ ವರ್ಣನೆಯಿದೆ.[೧೧೭] ಪ್ರಾಯಶಃ ಈ ತಾಮ್ರಪಟ ಶಾಸನವು ಯಾವುದೋ ಒಂದು ಕಾಲಘಟ್ಟದಲ್ಲಿ ಸಾವಂತವಾಡಿ ಅಥವಾ ರತ್ನಗಿರಿ ಪ್ರದೇಶದಿಂದ ಪಟ್ಟಣಕೋಡಿಗೆ ಸ್ಥಳಾಂತರವಾಗಿರುವ ಸಾಧ್ಯತೆಯಿದೆ.

೩.೨.೭. ಕಲ್ಯಾಣದ ಕಲಚೂರಿಗಳು

ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಕಲಚೂರಿಯರು ಕೆಲವು ಕಾಲ ಆಳ್ವಿಕೆ ಮಾಡಿದ್ದಾರೆ. ಈ ಮನೆತನದ ಮೂಲ, ಸ್ಥಾಪಕ ಮತ್ತು ಪ್ರಾರಂಭದ ಚರಿತ್ರೆಯ ಪೂರ್ಣ ವಿವರಗಳು ಅಸ್ಪಷ್ಟವಾಗಿವೆ. "ಕಲಚೂರಿಗಳು ಹೈಹಯ ಕುಲಕ್ಕೆ ಸಂಬಂಧಿಸಿದ್ದಾರೆ. ಇವರು ಕ್ರಿ.ಶ. ಸುಮಾರು ೬ನೆಯ ಶತಮಾನದಿಂದ ೧೫ನೆಯ ಶತಮಾನದ ಅವಧಿಯಲ್ಲಿ ಮಧ್ಯ ಭಾರತ ಮತ್ತು ಉತ್ತರ ಪ್ರದೇಶಗಳಲ್ಲಿ ಆಗಾಗ ರಾಜ್ಯಭಾರ ಮಾಡಿದ್ದಾರೆ. ಇವರ ಮೂಲ ಪ್ರದೇಶವು ಕಾಲಂಜರ ಮಂಡಲವಾಗಿದ್ದಿತ್ತು. ಉತ್ತರ ಭಾರತದಲ್ಲಿ ಪ್ರತೀಹಾರರು ಪ್ರಬಲರಾದ

ತರುವಾಯ ಕಲಚೂರಿಗಳು (ಕಟ್ಟಚ್ಚುರಿಗಳು) ಕಾಲಂಜರ ಮಂಡಲದ ಒಡೆತನವನ್ನು ಕಳೆದುಕೊಂಡರು. ಅಲ್ಲಿಂದ ಇವರು ಚದುರಿ ಬೇರೆ ಬೇರೆ ಪ್ರದೇಶಗಳಿಗೆ ಪಯಣ ಬೆಳೆಸಿದರು. ಮುಂದೆ ಒಂದೆರಡು ಶತಮಾನಗಳು ಕಳೆಯುವಷ್ಟರಲ್ಲಿ ಕಲಚೂರಿ ಮನೆತನದ ಮೂರ್‍ನಾಲ್ಕು ಶಾಖೆಗಳು ಮಧ್ಯೋತ್ತರ ಭಾರತದಲ್ಲಿ ಆಳುತ್ತಿರುವ ಸನ್ನಿವೇಶವು ಗೋಚರವಾಗುತ್ತದೆ" ಎಂದು ಪಿ.ಬಿ. ದೇಸಾಯಿ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೧೮] ಪ್ರಾಯಶಃ ಅವರಲ್ಲಿ ಒಂದು ಗುಂಪು ಇಂದಿನ ಮಹಾರಾಷ್ಟ್ರದ ಮಂಗಳಿವೇಡದ (ಇಂದಿನ ಸೊಲ್ಲಾಪುರ ಜಿಲ್ಲೆಯ ಮಂಗಳವೇಡ) ಕಡೆಗೆ ಬಂದಿರುವಂತೆ ತೋರುತ್ತದೆ. ಈ ಮನೆತನದ ೧ನೆಯ ರಾಜ(ರಾಜಲ), ಅಮ್ಮುಗಿದೇವ(ಕ್ರಿ.ಶ. ೧೦೮೦–೧೯೬), ೧ನೆಯ ಸಂಕಮ, ೧ನೆಯ ಬಿಜ್ಜಳ(ಕ್ರಿ.ಶ. ೧೦೫೭), ೧ನೆಯ ಕನ್ನಮ್ಮ(ಕ್ರಿ.ಶ. ೧೦೫೭–೧೦೬೭), ಜೋಗಮ (ಕ್ರಿ.ಶ. ೧೦೮೦–೧೧೧೮), ಪೆರ್ಮಾಡಿ(ಕ್ರಿ.ಶ. ೧೧೧೮–೧೧೩೦), ಇಮ್ಮಡಿ ಬಿಜ್ಜಳ(ಕ್ರಿ.ಶ. ೧೧೩೦–೧೧೬೮), ಇಮ್ಮಡಿ ರಾಜ, ಮೈಲುಗಿ(ಕ್ರಿ.ಶ. ೧೧೬೭), ರಾಯಮುರಾರಿ ಸೋಯಿದೇವ(ಕ್ರಿ.ಶ. ೧೧೬೭–೧೧೭೯), ಮಲ್ಲಿಕಾರ್ಜುನ, ಇಮ್ಮಡಿ ಸಂಕಮ(ಕ್ರಿ.ಶ. ೧೧೮೦), ಅಹವಮಲ್ಲದೇವ(ಕ್ರಿ.ಶ. ೧೧೮೨), ಸಿಂಘಣದೇವ, ವೀರ ಬಿಜ್ಜಳ, ಮಹಾದೇವ(ಕ್ರಿ.ಶ. ೧೨೦೬) ಮೊದಲಾದವರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ತರಿಕಾಡನಾಡನ್ನು ರಾಜಧಾನಿ ಮಂಗಳಿವೇಡದಿಂದ ರಾಜ್ಯಭಾರ ಮಾಡುತ್ತಿದ್ದರು.[೧೧೯]

ಕಲ್ಯಾಣದ ಚಾಳುಕ್ಯರ ಮುಮ್ಮಡಿ ತೈಲಪದೇವನ ಮಹಾಮಂಡಳೇಶ್ವರನಾಗಿ ಆಳ್ವಿಕೆ ಕೈಗೊಂಡಿದ್ದ ಇಮ್ಮಡಿ ಬಿಜ್ಜಳನು ಕ್ರಮೇಣ ರಾಜ್ಯದ ಅಧಿಕಾರ ಸೂತ್ರವನ್ನು ಒಂದೊಂದಾಗಿ ಕೈವಶ ಪಡಿಸಿಕೊಳ್ಳಲು ಪ್ರಾರಂಭಿಸಿದನು. ಆಡಳಿತ ವಿಭಾಗಗಳಿಗೆ ತನ್ನ ನೆಚ್ಚಿನ ಅಧಿಕಾರಿಗಳನ್ನು ನೇಮಿಸಿದನು. ಮುಮ್ಮಡಿ ತೈಲಪದೇವನು ಕ್ರಿ.ಶ. ೧೧೫೪–೫೫ರಲ್ಲಿ ಕಪ್ಪವನ್ನು ಸಲ್ಲಿಸದಿದ್ದ ಕಾಕತೀಯ ಮನೆತನದ ಪ್ರೋಲನನ್ನು ಶಿಕ್ಷಿಸಲು ಸೈನ್ಯದೊಂದಿಗೆ ಹೊರಟಿದ್ದ ಸಂದರ್ಭದಲ್ಲಿ ಮಧ್ಯದಲ್ಲಿಯೇ ಬಂಧಿತನಾದನು. ಇದೇ ಸಂದರ್ಭದಲ್ಲಿ ಬಿಜ್ಜಳನು ತನ್ನ ಚಕ್ರವರ್ತಿಯನ್ನು ರಕ್ಷಿಸುವ ಬದಲಾಗಿ ಸೈನ್ಯದೊಂದಿಗೆ ಕಲ್ಯಾಣ ನಗರವನ್ನು ಪ್ರವೇಶಿಸಿದನು. ತೈಲಪದೇವನು ನಿಷ್ಠಾವಂತ ಮಾಂಡಲಿಕರ ಸಹಾಯದಿಂದ ಬಿಡುಗಡೆಯಾಗಿ ಕಲ್ಯಾಣ ನಗರದೆಡೆಗೆ ಬರದೇ ಬೆಳ್ವೊಲನಾಡಿಗೆ ಹೋಗಿ ಅಣ್ಣಿಗೇರಿಯಿಂದ ಆಳ್ವಿಕೆಯನ್ನು ಆರಂಭಿಸಿದನು. ಇಮ್ಮಡಿ ಬಿಜ್ಜಳನು ಕ್ರಿ.ಶ. ೧೧೬೭ರಲ್ಲಿ ಕಲ್ಯಾಣವನ್ನು ರಾಜಧಾನಿ ಮಾಡಿಕೊಂಡು ಸ್ವತಂತ್ರವಾಗಿ ಆಳ್ವಿಕೆಯನ್ನು ಪ್ರಾರಂಭಿಸಿದನು. ಈತನ ಕಾಲಾವಧಿಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಪುನರುಜ್ಜೀವನ ಕಾರ್ಯಗಳು ಜರುಗಿದವು. ವೀರಶೈವ ಧರ್ಮದಲ್ಲಿ ಮಹತ್ತರವಾದ ಕ್ರಾಂತಿಯನ್ನುಂಟು ಮಾಡಿದ ಬಸವೇಶ್ವರರು ಈತನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದರು. ಕೂಹುಂಡಿನಾಡಿನ ಆಡಳಿತವೂ ಕೆಲಕಾಲ ಕಲಚೂರಿಗಳ ಅಧೀನಕ್ಕೊಳಪಟ್ಟಿತ್ತು. ಇಲ್ಲಿ ಆಳ್ವಿಕೆ ಕೈಗೊಂಡಿದ್ದ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು ಮೊದಲಾದ ಮಹಾಮಂಡಳೇಶ್ವರರು, ಮಹಾಸಾಮಂತರು ಮತ್ತು ಆಡಳಿತಾಧಿಕಾರಿಗಳು ಕಲಚೂರಿಗಳ ಅಧೀನದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು.[೧೨೦]

ಕೂಹುಂಡಿನಾಡಿನ ಖಡಕಲಾಟದ ಕ್ರಿ.ಶ. ೧೧೪೭ರ, ಕೆರೂರದ ಕ್ರಿ.ಶ. ೧೧೪೯ರ, ಜಗನೂರದ

ಕ್ರಿ.ಶ. ೧೧೬೭ರ ಶಾಸನಗಳಲ್ಲಿ ಇಮ್ಮಡಿ ಬಿಜ್ಜಳದೇವನು ಕೂಹುಂಡಿನಾಡಿನ (ಕೂಹುಂಡಿ-೩೦೦೦) ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಪ್ರಸ್ತಾಪಗಳಿವೆ. ಈ ಸಂದರ್ಭದಲ್ಲಿ ಸವದತ್ತಿಯ ರಟ್ಟರ ಕತ್ತಮರಸನು ಕೊರವಳ್ಳಿ-೧೫೦ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.[೧೨೧] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ_

ಜನರಾಗಂ ಮಿಗಿಲಿನ್ತು ಬಿಜ್ಜಲನೃಪಂ ನಿಶ್ಚಿಂತದಿಂ
ವಿಶ್ವಮೇನಿಯಂ ಪಾಳಿಸುತಿರ್ಪ್ಪಿನಂ ನೆಗಳ್ದನುದ್ಯತ್ಕೀರ್ತಿ
ಜೀಮೂತವಾಹನವಂಶಕ್ರಮ ಸಂಭವರ್ಕ್ಕಳಿರಿಳಾಧೀಶಂ
ಶಿಳಾಹಾರವೀರ ನರೇಂದ್ರಂ ವಿಜಯಾರ್ಕ್ಕದೇವಮಹಿಪಂ
ಶ್ರೀರೂಪನಾರಾಯಣಂ ॥ ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ
ವಿಜಯಾದಿತ್ಯದೇವರುವಳವಾಡದ ನೆಲೆವೀಡಿನಲು
ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥
ತ್ರಿಜಗತ್ಪಾವನರಟ್ಟವಂಶತಿಳಕಂ ಪೆರ್ಮ್ಮಾಡಿಭೂಪಂ
ತದಾತ್ಮಜನುದ್ದಾಮಭುಜಾಬಳಂ ವಿಜಯಲಕ್ಷ್ಮೀವಲ್ಲಭಂ
ಸೇನಭೂಭುಜನಂತಾತನ ಪುತ್ರನಪ್ರತಿಮೆ ಶೌರ್ಯಂದಾನಸಂತೃಪ್ತ
ಸರ್ವಜನಂ ಕೀರ್ತ್ತಿಲತಾವೃತ ತ್ರಿಭುವನಂ ಶ್ರೀಕತ್ತಮೋವ್ರೀಶ್ವರಂ ॥
ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರ ಕಾರ್ತ್ತವೀರ್ಯ
ದೇವರಸರು ಸುಖಸಂಕಥಾವಿನೋದದಿಂದಂ ರಾಜ್ಯಂಗೆಯ್ಯುತ್ತಮಿರೆ ॥

ಇಮ್ಮಡಿ ಬಿಜ್ಜಳದೇವನ ಅಧೀನದಲ್ಲಿ ಕೊಲ್ಲಾಪುರದ ಶಿಲಾಹಾರರ ವಿಜಯಾದಿತ್ಯ ಮತ್ತು ಸವದತ್ತಿಯ ರಟ್ಟರ ಕಾರ್ತವೀರ್ಯ ಮಹಾಮಂಡಳೇಶ್ವರ ಗೈಯುತ್ತಿದ್ದ ಪ್ರಸ್ತಾಪವಿದೆ.[೧೨೨] ಮಧೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಇಮ್ಮಡಿ ಬಿಜ್ಜಳದೇವನು ಮೈಲಾರ ನೆಲೆವೀಡಿನಿಂದ ಅರಸುಗೈಯುತ್ತಿದ್ದ ವಿವರವಿದೆ.[೧೨೩] ಜಗನೂರದ ಕ್ರಿ.ಶ. ೧೨೦೬ರ ಶಾಸನದಲ್ಲಿ ಮಹಾದೇವನ ಸರ್ವಾಧಿಕಾರಿ ಕಲ್ಲರಸನು ಕೂಹುಂಡಿ-೩೦೦೦ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ನಿರೂಪಣೆಯಿದೆ.[೧೨೪] ಗೋಕಾಕ ಜಲಪಾತದ ಕ್ರಿ.ಶ. ೧೧೭೧ರ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ರಾಯಮುರಾರಿ ಸೋಯಿದೇವನ ಬಿರುದಾವಳಿಗಳು, ದಂಡಯಾತ್ರೆಗಳು ಮತ್ತು ಆಳ್ವಿಕೆಯ ಪರಿಚಯವಿದೆ. ಈತನ ಅಧೀನದಲ್ಲಿ ಸವದತ್ತಿಯ ರಟ್ಟರ ಕತ್ತಮದೇವನು ಕೂಹುಂಡಿ-೩೦೦೦ ಆಡಳಿತ ವಿಭಾಗದಲ್ಲಿ ಆಳ್ವಿಕೆ ಕೈಗೊಂಡಿದ್ದನು.[೧೨೫] ಈ ಎಲ್ಲ ಶಾಸನಾಧಾರಗಳು ಕೂಹುಂಡಿನಾಡಿನ ಪ್ರದೇಶದಲ್ಲಿ ಕಲ್ಯಾಣದ ಚಾಳುಕ್ಯರ ತರುವಾಯ ಕಲಚೂರಿಯರು ತಮ್ಮ ಆಳ್ವಿಕೆಯನ್ನು ಮುಂದುವರೆಸಿರುವುದು ಗೋಚರಿಸುತ್ತದೆ. ಚಾಳುಕ್ಯರ ಅಧೀನದಲ್ಲಿ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಮಹಾಮಂಡಳೇಶ್ವರರು, ಮಹಾಸಾಮಂತರು, ಆಡಳಿತಾಧಿಕಾರಿಗಳು ತರುವಾಯ ಕಲಚೂರಿಯರ ಅಧೀನದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರೆಸಿದರು.

೩.೨.೮. ದೇವಗಿರಿಯ ಸೇವುಣರು

ದೇವಗಿರಿಯ ಸೇವುಣರು ಇಂದಿನ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ

ಪ್ರಾರಂಭದಲ್ಲಿ ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು ಮತ್ತು ಕಲಚೂರಿಯರ ಮಹಾಸಾಮಂತರಾಗಿ ದೇವಗಿರಿಯನ್ನು (ಇಂದಿನ ಮಹಾರಾಷ್ಟ್ರದ ಔರಂಗಾಬಾದ ಜಿಲ್ಲೆಯ ದೌಲತಾಬಾದ) ರಾಜಧಾನಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾರೆ. ಇವರ ಸಾಮ್ರಾಜ್ಯವು ಇಂದಿನ ಮಹಾರಾಷ್ಟ್ರದ ನಾಸಿಕ, ಅಹ್ಮದನಗರ ಆದಿಯಾಗಿ ಕರ್ನಾಟಕದ ಹರಿಹರದವರೆಗೂ ವಿಸ್ತಾರವಾಗಿತ್ತು. ಈ ಪ್ರದೇಶವನ್ನು ಸೇವುಣದೇಶ ಎಂದು ಕರೆಯಲಾಗುತ್ತಿತ್ತು. ಇವರು ಕ್ರಿ.ಶ. ೧೧೮೦ರ ಸುಮಾರಿಗೆ ೫ನೆಯ ಭಿಲ್ಲಮನ ಆಳ್ವಿಕೆಯ ಕಾಲದಿಂದ ಸ್ವತಂತ್ರವಾಗಿ ಕ್ರಿ.ಶ. ಸುಮಾರು ೧೪ನೆಯ ಶತಮಾನದವರೆಗೂ ಆಳ್ವಿಕೆ ಮಾಡಿದರು. ಶಾಸನಗಳಲ್ಲಿ ಈ ವಂಶದ ಹೆಸರು ಸೇಗುಣ, ಸೇಉಣ, ಸೇಗುಣ್ಣ ಎಂಬೆಲ್ಲ ರೂಪಗಳಲ್ಲಿ ಗೋಚರಿಸುತ್ತದೆ. ಇವರು ಮೂಲತಃ ಕನ್ನಡಿಗರಾಗಿದ್ದಾರೆ. ಆರಂಭದ ಇತಿಹಾಸಕಾರರು ಇವರನ್ನು ಮರಾಠಿಗರು, ಯಾದವರು ಎಂದು ತಪ್ಪಾಗಿ ಅರ್ಥೈಸಿದ್ದಾರೆ. ಹೀಗಾಗಿ ಇಂದಿಗೂ ಇವರನ್ನು ದೇವಗಿರಿಯ ಯಾದವರು ಎಂದೇ ಕರೆಯಲಾಗುತ್ತಿದೆ. ಈ ಮನೆತನದ ಕುರಿತು ಅಧ್ಯಯನ ನಡೆಸಿರುವ ಎ.ವಿ. ನರಸಿಂಹಮೂರ್ತಿ ಅವರು "ಕರ್ನಾಟಕದಲ್ಲಿ ಆಳಿದ ರಾಜ ಮನೆತನಗಳಲ್ಲಿ ಸೇವುಣ ವಂಶವೂ ಒಂದು. ದೇವಗಿರಿಯ ಯಾದವರೆಂದೇ ಸೇವುಣರು ಇತಿಹಾಸದ ವಿದ್ಯಾರ್ಥಿಗಳಿಗೆ ಚಿರಪರಿಚಿತರಾಗಿದ್ದಾರೆ. ಇವರು ಕನ್ನಡನಾಡಿನವರೆಂಬ ಕಲ್ಪನೆ ಅನೇಕರಲ್ಲಿ ಇಲ್ಲ. ಇದಕ್ಕೆ ಕಾರಣವಿಷ್ಟೇ. ಮೊದಲು ಕನ್ನಡನಾಡಿನ ಇತಿಹಾಸವನ್ನು ರಚಿಸಿದ ಫ್ಲೀಟ್, ಭಂಡಾರಕರ್, ಅಲ್ತೇಕರ್, ಡೆರೆಟ್ ಮುಂತಾದವರು ಸೇವುಣರು (ಯಾದವರು) ಮರಾಠರೆಂದೇ ಹೇಳಿದರು" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೨೬]

ಸೇವುಣರಿಗೆ ಸಂಬಂಧಿಸಿದಂತೆ ಇದುವರೆಗೂ ಬೆಳಕಿಗೆ ಬಂದಿರುವ ಐನೂರಕ್ಕೂ ಹೆಚ್ಚು ತಾಮ್ರಪಟ ಮತ್ತು ಶಿಲಾಶಾಸನಗಳಲ್ಲಿ ಕನ್ನಡ ಶಾಸನಗಳೇ ಅಧಿಕವಾಗಿವೆ. ೫ನೆಯ ಭಿಲ್ಲಮನ ಕಾಲದಲ್ಲಿ ದೋರಸಮುದ್ರದ ಹೊಯ್ಸಳರಿಗೂ ಮತ್ತು ಸೇವುಣರಿಗೂ ನಡೆದ ಯುದ್ಧದಲ್ಲಿ ಹೊಯ್ಸಳರು ವಿಜಯಿಗಳಾದರು. ಭಿಲ್ಲಮನು ಸೇವುಣ ರಾಜ್ಯದ ಕ್ಷೇಮದ ದೃಷ್ಟಿಯಿಂದ ಬೇರೆ ಮಾರ್ಗವಿಲ್ಲದೇ ಉತ್ತರಕ್ಕೆ ಹೋಗಬೇಕಾಯಿತು. ಈತನು ತನ್ನ ಬಹಳ ಸಮಯವನ್ನೆಲ್ಲ ವಿಜಾಪುರ, ಧಾರವಾಡ ಪ್ರದೇಶದಲ್ಲಿಯೇ ಕಳೆದು ಹೊಯ್ಸಳರನ್ನು ಸದೆಬಡಿಯಲು ಪ್ರಯತ್ನಿಸುತ್ತಿದ್ದನು. ಆದರೆ ಗದಗ ಜಿಲ್ಲೆಯ ಸೊರಟೂರಿನಲ್ಲಿ ಜರುಗಿದ ಯುದ್ಧದಲ್ಲಿ ಅವರಿಗೆ ಸೋತು ದೇವಗಿರಿಗೆ ಹಿಂದಿರುಗಿದನು. ಈತನ ತರುವಾಯದ ಬಹುತೇಕ ಅರಸರು ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರದಲ್ಲಿ ತಳವೂರಿ ಹೊಯ್ಸಳರನ್ನು ಮಣಿಸಲು ಪ್ರಯತ್ನಿಸುತ್ತಿದ್ದರು.[೧೨೭] ಈ ಸಂದರ್ಭದಲ್ಲಿ ಕೂಹುಂಡಿನಾಡಿನ ಮಹಾಮಂಡಳೇಶ್ವರರು, ಮಹಾಸಾಮಂತರು ಮತ್ತು ಆಡಳಿತಾಧಿಕಾರಿಗಳು ಇವರ ಅಧೀನದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರೆಸಿದರು. ಕ್ರಮೇಣ ಸೇವುಣರು ಇಡೀ ಕೂಹುಂಡಿನಾಡಿನ ಪ್ರದೇಶವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು.

ಸೇವುಣ ಮನೆತನದ ಮೂಲ, ಸ್ಥಾಪಕ ಮತ್ತು ಪ್ರಾರಂಭದ ಅರಸರ ಕುರಿತಾಗಿ ಸ್ಪಷ್ಟವಾದ ಮಾಹಿತಿಗಳಿರದ ಕಾರಣದಿಂದ ಈ ಕುರಿತು ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಸುಬಾಹು ಈ

ಮನೆತನದ ಮೂಲಪುರುಷನಾಗಿದ್ದಾನೆ. ಈತನ ಪುತ್ರ ದೃಢಪ್ರಹಾರನು ಇಂದಿನ ನಾಸಿಕದ ಸುತ್ತಮುತ್ತಲಿನ ಪ್ರದೇಶವನ್ನು ಆಳುತ್ತಿದ್ದನು. ತರುವಾಯ ಈತನ ಪುತ್ರ ಸೇವುಣಚಂದ್ರನು ಸಿಂದಿನೇರು (ಇಂದಿನ ನಾಸಿಕ ಜಿಲ್ಲೆಯ ಸಿನ್ನಾರ್) ಎಂಬ ನಗರವನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು. ಈತನ ನಂತರ ಕ್ರಮವಾಗಿ ೧ನೆಯ ಧಾಡಿಯಪ್ಪ, ೧ನೆಯ ಭಿಲ್ಲಮ, ರಾಜುಗಿ, ವಾಡುಗಿ (೧ನೆಯ ವಡ್ಡಿಗ) ಆಳ್ವಿಕೆ ಮಾಡಿದರು. ೧ನೆಯ ವಡ್ಡಿಗನು(ಕ್ರಿ.ಶ.೯೩೫–೯೭೦) ಮಳಖೇಡದ ರಾಷ್ಟ್ರಕೂಟ ಮನೆತನದ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದನು. ತರುವಾಯ ಈತನ ಪುತ್ರ ಇಮ್ಮಡಿ ಭಿಲ್ಲಮನು(ಕ್ರಿ.ಶ. ೯೭೦–೧೦೦೫) ಸಿಂಹಾಸನವನ್ನೇರಿದನು. ಈತನ ಕಾಲದಿಂದ ಸೇವುಣರು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಆಳ್ವಿಕೆಯನ್ನು ಮುಂದುವರೆಸಿದರು. ಚಾಳುಕ್ಯರ ತೈಲಪದೇವನು ಪಾರಮಾರರ ಮುಂಜನ ವಿರುದ್ಧ ಕೈಗೊಂಡಿದ್ದ ಯುದ್ಧದಲ್ಲಿ ಇಮ್ಮಡಿ ಭಿಲ್ಲಮನು ಸಹಾಯ ಮಾಡಿದನು. ಹೀಗಾಗಿ ಈತನಿಗೆ ತೈಲಪದೇವನು 'ಮಹಾಸಾಮಂತ' ಎಂಬ ಬಿರುದಿನಿಂದ ಗೌರವಿಸಿದನು. ಈತನ ತರುವಾಯ ವೆಸುಗಿ (ಕ್ರಿ.ಶ.೧೦೦೫–೧೦೨೫), ಮುಮ್ಮಡಿ ಭಿಲ್ಲಮ(ಕ್ರಿ.ಶ.೧೦೨೫–೧೦೫೫) ಆಳ್ವಿಕೆ ಮಾಡಿದರು. ಕಲ್ಯಾಣದ ಚಾಳುಕ್ಯರ ಸೋಮೇಶ್ವರನು ತನ್ನ ಸಹೋದರಿ ಅವ್ವಲದೇವಿಯನ್ನು ಮುಮ್ಮಡಿ ಭಿಲ್ಲಮನಿಗೆ ಧಾರೆಯೆರೆದು ರಕ್ತ ಸಂಬಂಧ ಬೆಳೆಸಿಕೊಂಡನು. ತರುವಾಯ ಇಮ್ಮಡಿ ವಡ್ಡಿಗ, ೪ನೆಯ ಭಿಲ್ಲಮ(ಕ್ರಿ.ಶ. ೧೦೫೫–೧೦೬೫) ಆಳ್ವಿಕೆ ಮಾಡಿದರು. ತದನಂತರ ಇಮ್ಮಡಿ ಸೇವುಣಚಂದ್ರನು(ಕ್ರಿ.ಶ.೧೦೬೯–೧೦೮೫) ಸಿಂಹಾಸವನ್ನೇರಿ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಆಳ್ವಿಕೆ ಮುಂದುವರೆಸಿದನು. ಈತನ ತರುವಾಯ ಪರಮದೇವನು(ಕ್ರಿ.ಶ. ೧೦೮೫–೧೧೧೫) ಆಳ್ವಿಕೆ ಮಾಡಿದನು.[೧೨೮]

ಪರಮದೇವನ ತರುವಾಯ ೧ನೆಯ ಸಿಂಘಣದೇವನು(ಕ್ರಿ.ಶ.೧೧೧೫–೧೧೪೫) ಸಿಂಹಾಸನವನ್ನೇರಿ ೬ನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಆಳ್ವಿಕೆ ಮುಂದುವರೆಸಿದನು. ಈತನ ಸಾಮರ್ಥ್ಯ ಮತ್ತು ನಿಷ್ಠಾವಂತ ಸಾಮಂತಿಕೆಯಿಂದ ಸಂತುಷ್ಟನಾದ ೬ನೆಯ ವಿಕ್ರಮಾದಿತ್ಯನು ಈತನಿಗೆ ಧಾರವಾಡ ಜಿಲ್ಲೆಯ ಹೊನ್ನಟ್ಟಿಯನ್ನು ಜಹಗೀರಾಗಿ ಬಿಟ್ಟುಕೊಟ್ಟನು. ತರುವಾಯ ಸೇವುಣ ರಾಜ್ಯದಲ್ಲಿ ಸಿಂಹಾಸನಕ್ಕಾಗಿ ಅಂತಃಕಲಹಗಳು ಜರುಗಿದವು. ಈ ಅವಧಿಯಲ್ಲಿ ಮಲ್ಲುಗಿ, ಅಮರಗಾಂಗೇಯ, ಗೋವಿಂದರಾಜು, ಅಮರಮಲ್ಲುಗಿ, ಕರ್ಣ, ಕಾಲಿಯ ಬಲ್ಲಾಳ ಅನುಕ್ರಮವಾಗಿ ಆಳ್ವಿಕೆ ಮಾಡಿದರು. ಇವರ ಆಳ್ವಿಕೆ ಸಮರ್ಪಕವಾಗಿರಲಿಲ್ಲ. ಅಸಮರ್ಥನಾದ ಕಾಲಿಯ ಬಲ್ಲಾಳನನ್ನು ಈತನ ಸಹೋದರ ೫ನೆಯ ಭಿಲ್ಲಮನು(ಕ್ರಿ.ಶ.೧೧೭೩–೧೧೯೨) ಮೂಲೆಗೊತ್ತಿ ಪಟ್ಟವೇರಿದನು. ಸ್ವತಂತ್ರಾಭಿಮಾನವುಳ್ಳವನಾಗಿದ್ದ ಈತನು ಆರಂಭದಲ್ಲಿ ಕಲ್ಯಾಣದ ಕಲಚೂರಿಯರ ಸಂಕಮನ ಸಾಮಂತನಾಗಿದ್ದರೂ ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ಸ್ವತಂತ್ರನೆಂದು ಘೋಷಿಸಿಕೊಂಡನು. ಈತನು ಕಲಚೂರಿಗಳು, ಮಾಳವದ ಪಾರಮಾರರು, ಗುಜರಾತಿನ ಚಾಳುಕ್ಯರು, ಮಾರವಾಡದ ಚವ್ಹಾನರು, ದೋರಸಮುದ್ರದ ಹೊಯ್ಸಳರು ಮೊದಲಾದವರನ್ನು ಸದೆಬಡಿದು ಸೇವುಣ ರಾಜ್ಯವನ್ನು ವಿಸ್ತರಿಸಿದನು. ದೇವಗಿರಿಯನ್ನು ರಾಜಧಾನಿ ಮಾಡಿಕೊಂಡು, ಸೇವುಣ ರಾಜ್ಯವನ್ನು ಒಂದು ಸ್ವತಂತ್ರ ರಾಜ್ಯವನ್ನಾಗಿ ಪರಿವರ್ತಿಸಿದ ಕೀರ್ತಿ ೫ನೆಯ

ಭಿಲ್ಲಮನಿಗೆ ಸಲ್ಲುತ್ತದೆ. ತರುವಾಯ ಈತನ ಪುತ್ರ ಜೈತುಗಿ(ಕ್ರಿ.ಶ.೧೧೯೨-೧೧೯೯) ಸಿಂಹಾಸನವನ್ನೇರಿದನು. ಈತನು ಸಿಂದವಾಡಿಯ ಪೂರ್ವಭಾಗ, ಕರ್ನೂಲಿನ ಉತ್ತರಭಾಗವನ್ನು ವಶಪಡಿಸಿಕೊಂಡು ಕೃಷ್ಣ ಮತ್ತು ತುಂಗಭದ್ರಾ ನದಿಗಳವರೆಗೂ ರಾಜ್ಯವನ್ನು ವಿಸ್ತರಿಸಿದನು. ಕಾಕತೀಯರು, ಪಾರಮಾರರು, ಚಾಳುಕ್ಯರನ್ನು ಸದೆಬಡಿದನು. ಈ ವೇಳೆಗೆ ಗುಜರಾತದೆಡೆಗೆ ಧಾವಿಸಿದ್ದ ದೆಹಲಿಯ ಖಿಲ್ಜಿ ಮನೆತನದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನ ಸೇನೆ ಮತ್ತು ಜೈತುಗಿಯ ಸೇನೆಯ ಮಧ್ಯದಲ್ಲಿ ಯುದ್ಧ ಸಂಭವಿಸಿರಬಹುದೆಂಬ ನಂಬಿಕೆಯಿದೆ.[೧೨೯]

ಜೈತುಗಿಯ ತರುವಾಯ ಈತನ ಪುತ್ರ ಇಮ್ಮಡಿ ಸಿಂಘಣದೇವನು(ಕ್ರಿ.ಶ.೧೧೯೯-೧೨೪೭) ಸಿಂಹಾಸನವನ್ನೇರಿ ದೀರ್ಘಕಾಲ ಆಳ್ವಿಕೆ ಮಾಡಿದನು. ಈತನು ಹೊಯ್ಸಳರ ಇಮ್ಮಡಿ ಬಲ್ಲಾಳನ ಮೇಲೆ ಯುದ್ಧ ಘೋಷಿಸಿ, ಆತನ ಸಾಮಂತ ಯಲಬುರ್ಗಿಯ (ಎರಂಬರ್ಗೆ) ಸಿಂಧವಂಶದ ವಿಕ್ರಮಾದಿತ್ಯನು ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಹಾಗೆಯೇ ಬೆಳ್ವೊಲ, ಪುಲಿಗೆರೆ, ಮಾಸವಾಡಿ, ಹಾನಗಲ್ಲ ಪ್ರದೇಶಗಳನ್ನು ವಶಪಡಿಸಿಕೊಂಡನು. ತರುವಾಯ ಗೋವೆಯ ಕಾದಂಬರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರನ್ನು ತನ್ನ ಅಧೀನ ಮಾಡಿಕೊಂಡನು. ಹೊಯ್ಸಳರ ನರಸಿಂಹನನ್ನು ಸದೆಬಡಿದು ಲಕ್ಕುಂಡಿಯನ್ನು ವಶಪಡಿಸಿಕೊಂಡನು. ತರುವಾಯ ಸಿಂಹಾಸನವನ್ನೇರಿದ ಜೈತುಗಿಯ ಪುತ್ರ ಕನ್ನರದೇವನ (ಕೃಷ್ಣಕಂದಾರ/ ಕ್ರಿ.ಶ.೧೨೪೭-೧೨೬೨) ಆಳ್ವಿಕೆಯ ಕಾಲಾವಧಿಯು ಶಾಂತಿಯುತವಾಗಿತ್ತು. ಈತನ ತರುವಾಯ ಸಿಂಹಾಸನವನ್ನೇರಿದ ಮಹಾದೇವನು (ಕ್ರಿ.ಶ.೧೨೬೭-೧೨೭೧) ಕೊಂಕಣದ ಶಿಲಾಹಾರರನ್ನು ಸದೆಬಡಿದು 'ಕೊಂಕಣ ಚಕ್ರವರ್ತಿ' ಎಂಬ ಬಿರುದು ಧರಿಸಿದನು.

ಮಹಾದೇವನ ತರುವಾಯ ರಾಮಚಂದ್ರನು (ಕ್ರಿ.ಶ.೧೨೭೧-೧೩೧೨) ಸಿಂಹಾಸನವನ್ನೇರಿ, ಹೊಯ್ಸಳ ರಾಜ್ಯದ ಮೇಲೆ ದಂಡಯಾತ್ರೆ ಕೈಗೊಂಡು ದೋರಸಮುದ್ರದವರೆಗೂ ಧಾವಿಸಿ ಬೆಳ್ವಾಡಿಯನ್ನು ಆಕ್ರಮಿಸಿದನು. ಈತನ ಕಾಲದಲ್ಲಿ ದೆಹಲಿಯ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನು ದೇವಗಿರಿಯ ಮೇಲೆ ದಂಡೆತ್ತಿ ಬಂದನು. ಯಾವ ಸಿದ್ಧತೆಯೂ ಇಲ್ಲದ ರಾಮಚಂದ್ರನು ಮಹಮದೀಯ ಸೈನ್ಯದಿಂದಾಗಬಹುದಾದ ಸಾವು-ನೋವು, ನಷ್ಟವನ್ನು ಮನಗಂಡು ಶಾಂತಿ ಒಪ್ಪಂದಕ್ಕೆ ಸಮ್ಮತಿಸಿದನು. ಇದರಿಂದ ಸೇವುಣರು ಪ್ರತಿ ವರ್ಷ ದೆಹಲಿ ಸುಲ್ತಾನನಿಗೆ ಕಪ್ಪ-ಕಾಣಿಕೆಯನ್ನು ಕಳುಹಿಸುವಂತಾಯಿತು. ಮಲ್ಲಿಕಾಫರನು ಕ್ರಿ.ಶ.೧೩೦೩ರಲ್ಲಿ ಮತ್ತೊಮ್ಮೆ ದೇವಗಿರಿಯ ಮೇಲೆ ದಂಡಯಾತ್ರೆ ಕೈಗೊಂಡಿದ್ದ ಸಂದರ್ಭದಲ್ಲಿ ರಾಮಚಂದ್ರನು ಆತನಿಗೆ ಶರಣಾದನು. ತರುವಾಯ ಕ್ರಮವಾಗಿ ಸಿಂಹಾಸನವನ್ನೇರಿದ ರಾಮಚಂದ್ರನ ಪುತ್ರ ಮುಮ್ಮಡಿ ಸಿಂಘಣದೇವ (ಕ್ರಿ.ಶ.೧೩೧೨-೧೩೧೩) ಮತ್ತು ರಾಮಚಂದ್ರನ ಅಳಿಯ ಹರಪಾಲದೇವ (ಕ್ರಿ.ಶ.೧೩೧೩-೧೩೧೮) ಮಲ್ಲಿಕಾಫರನ ಖಡ್ಗಕ್ಕೆ ತುತ್ತಾದರು. ತರುವಾಯ ಸಿಂಹಾಸನವನ್ನೇರಿದ ಮುಮ್ಮಡಿ ಸಿಂಘಣದೇವನ ಪುತ್ರ ಮುಮ್ಮಡಿ ಮಲ್ಲುಗಿ (ಕ್ರಿ.ಶ.೧೩೧೮-೧೩೩೬) ದೆಹಲಿ ಸುಲ್ತಾನನ ಸಾಮಂತನಾಗಿ ಆಳುತ್ತಿದ್ದನು. ಈತನ ಅಂತ್ಯದೊಂದಿಗೆ ಸೇವುಣ ಮನೆತನವೂ ಅವನತಿಯಾಯಿತು.[೧೩೦]

ಸೇವುಣರು ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ವಿಷಯ, ಮಂಡಲ, ನಾಡು, ದೇಶ, ಕಂಪಣ ಎಂದಿತ್ಯಾದಿ ಭಾಗಗಳಲ್ಲಿ ವಿಂಗಡಿಸಿದ್ದರು. ವಿಷಯ ಮತ್ತು ಮಂಡಲಗಳು 'ಸರ್ವಾಧಿಕಾರಿಗಳು' ಎಂಬ ಉನ್ನತ ಅಧಿಕಾರಿಗಳ ಅಧೀನದಲ್ಲಿದ್ದವು. ಕೂಹುಂಡಿನಾಡು ಕಲ್ಯಾಣದ ಚಾಲುಕ್ಯರ ತರುವಾಯ ಸೇವುಣರ ಅಧೀನಕ್ಕೊಳಪಟ್ಟಿತ್ತು. ಚಾಲುಕ್ಯರ ಅಧೀನದಲ್ಲಿ ಈ ಪ್ರದೇಶದ ವಿವಿಧ ಭಾಗಗಳಲ್ಲಿ ಮಹಾಮಂಡಳೇಶ್ವರ ಮತ್ತು ಮಹಾಸಾಮಂತರಾಗಿ ಆಳುತ್ತಿದ್ದ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು ಮತ್ತು ಆಡಳಿತಾಧಿಕಾರಿಗಳು ಸೇವುಣರ ಅಧೀನದಲ್ಲಿ ತಮ್ಮ ಆಳ್ವಿಕೆಯನ್ನು ಮುಂದುವರೆಸಿದರು. ಆದರೆ ಕಾಲಾಂತರದಲ್ಲಿ ಸೇವುಣರು ಈ ಎಲ್ಲ ಅಧೀನ ಮನೆತನಗಳನ್ನು ಮೂಲೆಗೊತ್ತಿ ತಾವೇ ಕೂಹುಂಡಿನಾಡಿನ ಪ್ರದೇಶದಲ್ಲಿ ಸಾರ್ವಭೌಮರಾದರು. ಈ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಈ ಪ್ರದೇಶದ ಪೂರ್ವಭಾಗವು ತೊರಗಲ್ಲ ನಾಡಿನಲ್ಲಿ ಮತ್ತು ಪಶ್ಚಿಮದ ಕೆಲವು ಭಾಗವು ಕರಹಾಟ ನಾಡಿನಲ್ಲಿ ಸೇರ್ಪಡೆಯಾಯಿತು. ಕಾಲಾಂತರದಲ್ಲಿ ದೆಹಲಿಯ ಸುಲ್ತಾನರು ದಕ್ಷಿಣ ಭಾರತದಲ್ಲಿ ಆಕ್ರಮಣ ಮಾಡುತ್ತ ಈ ಪ್ರದೇಶದ ಮೇಲೆ ಹತೋಟಿ ಹೊಂದಿದರು. ಕೂಹುಂಡಿನಾಡಿನ ತೇರದಾಳದ ಕ್ರಿ.ಶ. ೧೧೮೭ರ ಶಾಸನದಲ್ಲಿ ೫ನೆಯ ಭಿಲ್ಲಮನ ಬಿರುದಾವಳಿಗಳು ಮತ್ತು ಆಳ್ವಿಕೆಯ ಪ್ರಸ್ತಾಪವಿದೆ.[೧೩೧] ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಇಮ್ಮಡಿ ಸಿಂಘಣದೇವನ ವಿವಿಧ ಪ್ರಶಸ್ತಿಗಳು ಮತ್ತು ಆಳ್ವಿಕೆಯ ನಿರೂಪಣೆಯಿದೆ.[೧೩೨]

ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ–

> ಸ್ವಸ್ತಿಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜಃ ಪರಮೇಶ್ವರೋ
> ದ್ವಾರಾವತೀಪುರುವರಾಧೀಶ್ವರೋ ವಿಷ್ಣುವಂಶೋದ್ಧಮೋ
> ಯಾದವಕುಳಕಮಳ ಕಳಿಕಾವಿಕಾಸಭಾಸ್ಕರರೋರಿರಾಯ
> ಜಗಜ್ಜಹಂಪೋ ಮಾಳವರಾಯಮದನ ತ್ರಿನೇತ್ರೋಗೂರ್ಜ್ಜರ
> ವಾರಣಂಕುಶ ತೈಲಾಂಗರಾಯ ಸ್ಥಾಪನಾಚಾರ್ಯೋ
> ರಾಯನಾರಾಯಣಃ ಸಕಳಕಳಾಪಾರಾಯಣ ಇತ್ಯಾದಿನಾಮಾವಳಿ
> ವಿರಾಜಮಾನ ಭುಜಬಳಪ್ರೌಢಪ್ರತಾಪಚಕ್ರವರ್ತ್ತಿ ಶ್ರೀಕನ್ನರಮಹೀಶ್ವರೋ
> ದೇವಗಿರಿ ಸಂಕಥಾವಾರೇ ಸುಖಶಂಕತಾ ವಿನೋಧಯಾ
> ಚಂದ್ರಾರ್ಕ್ಕತಾರಂ ರಾಯಂ ಕರೋತಿ ‖

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೨೪೯ರ (ತ್ರಾಮಪಟ ಶಾಸನ), ಮುನವಳ್ಳಿಯ ಕ್ರಿ.ಶ. ೧೨೩೨ರ, ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ–

> ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ
> ಪರಮೇಶ್ವರ ಪರಮಭಟ್ಟಾರಕ ದ್ವಾರಾವತೀಪುರವರಾಧೀಶ್ವರ
> ಯಾದವಕುಳಕಮಳ ಕಳಿಕಾ ವಿಕಾಸಭಾಸ್ಕರ ಯರಿರಾಯ
> ಜಗಜ್ಝಂಪ ಮಾಳವರಾಯಮದನತ್ರಿನೇತ್ರ ಗೂರ್ಜ್ಜರರಾಯ
> ಭಯಂಕರ ತೆಲುಂಗರಾಯಸ್ಥಾಪನಾಚಾರ್ಯ್ಯ ಇತ್ಯಾದಿ
> ನಾಮಾವಳೀ ಸಮಾಳಂಕ್ರಿತ ಶ್ರೀಮತ್ಪ್ರೌಢಪ್ರತಾಪಚಕ್ರವರ್ತಿ

ಶ್ರೀಕಂನರದೇವಂ ದೇವಗಿರಿಯ ನೆಲವೀಡಿನೊಳು ಸುಖಸಂಕಥಾ
ವಿನೋದದನನವರತಂ ರಾಜ್ಯಂಗೆಯ್ಯುತ್ತುಮಿರೆ ॥

ಮತ್ತು ಬೆಳಗಾವಿಯ ಕ್ರಿ.ಶ. ೧೨೬೧ರ ಶಾಸನಗಳಲ್ಲಿ ಕನ್ನರದೇವನ ವಿವಿಧ ಪ್ರಶಸ್ತಿಗಳು ಮತ್ತು ಆಳ್ವಿಕೆಯ ಸವಿಸ್ತಾರವಾದ ನಿರೂಪಣೆಗಳಿವೆ.[೧೩೩]

೩.೨.೯. ದೋರಸಮುದ್ರದ ಹೊಯ್ಸಳರು

ಹೊಯ್ಸಳರು ಕ್ರಿ.ಶ. ೧೦೦೬ ರಿಂದ ೧೧೯೮ರವರೆಗೆ ತಂಜಾವೂರಿನ ಚೋಳರು ಮತ್ತು ಕ್ರಿ.ಶ. ೧೧೯೮ ರಿಂದ ೧೨೦೦ರವರೆಗೆ ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಹಾಗೂ ಕ್ರಿ.ಶ. ೧೨೦೦ ರಿಂದ ೧೩೪೬ರವರೆಗೆ ಸ್ವತಂತ್ರರಾಗಿ ಆಳ್ವಿಕೆ ಮಾಡಿದ್ದಾರೆ. ಈ ಮನೆತನದ ಮೊದಲ ಅರಸ ನೃಪಕಾಮನು (ಕ್ರಿ.ಶ. ೧೦೦೬–೧೦೪೭) ಶಶಕಪುರದ ಸುತ್ತಮುತ್ತಲಿನ ಪ್ರದೇಶದಲ್ಲಿ ಆಳುತ್ತಿದ್ದನು. ತರುವಾಯ ಈತನ ಪುತ್ರ ವಿನಯಾದಿತ್ಯನು (ಕ್ರಿ.ಶ. ೧೦೪೭–೧೧೯೮) ಸಿಂಹಾಸನವನ್ನೇರಿದನು. ಈತನು ಗಂಗರು ಮತ್ತು ಚೋಳರ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿದನು. ತರುವಾಯ ಸಿಂಹಾಸನವನ್ನೇರಿದ ಎರೆಯಂಗನು (ಕ್ರಿ.ಶ. ೧೧೯೮–೧೧೦೨) ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಅಧೀನದಲ್ಲಿ ಆಳುತ್ತಿದ್ದನು. ದೋರಸಮುದ್ರ (ಇಂದಿನ ಬೇಲೂರು) ಈತನ ರಾಜಧಾನಿಯಾಗಿತ್ತು. ಈತನ ತರುವಾಯ ೧ನೆಯ ಬಲ್ಲಾಳನು (ಕ್ರಿ.ಶ. ೧೧೦೨–೧೧೦೮) ಸಿಂಹಾಸನವನ್ನೇರಿದನು. ಈತನು ಪರಮಾರರು, ಚಂಗಾಳ್ವರನ್ನು ಸದೆಬಡಿದು ಹೊಯ್ಸಳರ ಏಳಿಗೆಗಿದ್ದ ತೊಡುಕುಗಳನ್ನು ನಿರ್ಮೂಲನೆ ಮಾಡಿದನು. ತರುವಾಯ ಈತನ ಸಹೋದರ ವಿಷ್ಣುವರ್ಧನನು (ಕ್ರಿ.ಶ.. ೧೧೦೮–೧೧೫೨) ಸಿಂಹಾಸನವನ್ನೇರಿ ನಿಷ್ಠಾವಂತ ದಂಡನಾಯಕರ (ಪುಣಿಸಮಯ್ಯ, ಪೆರ್ಗಡೆ ವಾಸುದೇವ, ಗಂಗರಾಜ, ಚಾಮದೇವ ಇತ್ಯಾದಿ) ನೆರವಿನಿಂದ ತಲಕಾಡು, ಕೊಂಗು, ನಂಗಲಿ, ನೊಳಂಬವಾಡಿ, ಕೊವತೂರು, ಕೋಲಾರ, ಕಂಚಿ, ಉಚ್ಚಂಗಿ, ನಿಡುಗಲ್ಲು, ಸೇಲಂ, ನೀಲಗಿರಿ, ಅಳ್ವಖೇಡ, ಹಾನಗಲ್ಲು ಮೊದಲಾದ ಪ್ರದೇಶಗಳನ್ನು ವಶಪಡಿಸಿಕೊಂಡು ಸಾಮ್ರಾಜ್ಯವನ್ನು ವಿಸ್ತರಿಸಿದನು. ಈತನ ತರುವಾಯ ೧ನೆಯ ನರಸಿಂಹನು (ಕ್ರಿ.ಶ. ೧೧೫೨–೧೧೭೩) ಸಿಂಹಾಸನವನ್ನೇರಿದನು. ಆದರೆ ಈತನು ಅಸಮರ್ಥನಾಗಿದ್ದರಿಂದ ಈತನ ಪುತ್ರ ಇಮ್ಮಡಿ ಬಲ್ಲಾಳನು (ಕ್ರಿ.ಶ. ೧೧೭೩–೧೨೨೦) ಈತನನ್ನು ಪದಚ್ಯುತನನ್ನಾಗಿ ಮಾಡಿ ಸಿಂಹಾಸನವನ್ನೇರಿದನು.[೧೩೪]

ಇಮ್ಮಡಿ ಬಲ್ಲಾಳನು ಚಂಗಾಳ್ವರು, ಕೊಂಗಾಳ್ವರು, ಉಚ್ಚಂಗಿ ಪಾಂಡ್ಯರು, ನೊಳಂಬರು, ಕಲಚೂರಿಗಳು, ಸೇವುಣರು, ಹಾನಗಲ್ಲ ಕಾದಂಬರು, ಬೆಳಗುತ್ತಿಯ ಸಿಂದರು ಮೊದಲಾದವರನ್ನು ಸದೆಬಡಿದು 'ಕರ್ನಾಟಕ ಚಕ್ರವರ್ತಿ' ಎಂದು ಕರೆದುಕೊಂಡನು. ಈತನು ಲಕ್ಕುಂಡಿಯನ್ನು ಕೆಲವು ವರ್ಷಗಳ ಕಾಲ ಉಪರಾಜಧಾನಿ ಮಾಡಿಕೊಂಡಿದ್ದನು. ಕಲ್ಯಾಣದ ಚಾಳುಕ್ಯರ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಸೇವುಣರ ೫ನೆಯ ಭಿಲ್ಲಮ ಮತ್ತು ಬಲ್ಲಾಳನ ಮಧ್ಯದಲ್ಲಿ ಸೊರಟೂರಿನಲ್ಲಿ ಕ್ರಿ.ಶ. ೧೧೯೧–೯೨ರಲ್ಲಿ ಜರುಗಿದ ಯುದ್ಧದಲ್ಲಿ ಬಲ್ಲಾಳನು ಜಯಗಳಿಸಿದನು. ಇದೇ ಅವಧಿಯಲ್ಲಿ ಹೊಯ್ಸಳರು

ಕೂಹುಂಡಿನಾಡಿನ ದಕ್ಷಿಣ–ನೈರುತ್ಯ ಭಾಗದ ಮೇಲೆ (ಇಂದಿನ ಸವದತ್ತಿ ತಾಲ್ಲೂಕಿನ ಪ್ರದೇಶ) ಹತೋಟಿ ಹೊಂದಲು ಪ್ರಯತ್ನಿಸಿದಂತೆ ತೋರುತ್ತದೆ. ಇದನ್ನು ಬಡ್ಲಿಯ ಕಿ.ಶ. ಸುಮಾರು ೧೨–೧೩ನೆಯ ಶತಮಾನದ ಶಾಸನವು–

ಮೂನೂ......ತ್ತಯ್ದು ಮನೆವೊಂದು ಗಾಣ.....
ಪಹೊಯ್ಸಳ ಚಕ್ರವರ್ತ್ತಿ ಶ್ರೀವೀಬಲ್ಲಾಳ........
ಛ್ವರದ ವೈಶಾಖ ಸು ೭................

ದೃಢಪಡಿಸುತ್ತದೆ.[೧೩೫] ಈ ಶಾಸನದಲ್ಲಿ ಇಮ್ಮಡಿ ಬಲ್ಲಾಳನ ಆಳ್ವಿಕೆಯ ಸಂದರ್ಭದಲ್ಲಿ ನಾರಣಭಟ್ಟರ ಪುತ್ರ ಹರಿಹರ, ಕೀರ್ತಿಪಂಡಿತ ಚಿಕ್ಕಯ್ಯ, ನಾಗಿಸೆಟ್ಟಿ, ದೂಸಿಗ ಪಾರಿಸಸೆಟ್ಟಿ ಮೊದಲಾದವರು ಗಂಗಕಂದರ್ಪ ಬ್ರಹ್ಮಜಿನಾಲಯಕ್ಕೆ ಮನೆ ಮತ್ತು ಗಾಣವನ್ನು ದಾನ ಮಾಡಿರುವ ನಿರೂಪಣೆಯಿದೆ. ಇಮ್ಮಡಿ ಬಲ್ಲಾಳನ ಆಳ್ವಿಕೆಯ ಪರಿ ಬಲ್ಲಾಳನ ತರುವಾಯ ಈತನ ಪುತ್ರ ಇಮ್ಮಡಿ ನರಸಿಂಹನು (ಕ್ರಿ.ಶ. ೧೨೨೦–೧೨೩೫) ಸಿಂಹಾಸನವನ್ನೇರಿದನು. ಈತನ ಕಾಲದಲ್ಲಿ ದೇವಗಿರಿಯ ಸೇವುಣರು ಪ್ರಬಲರಾಗಿ ಹೊಯ್ಸಳ ರಾಜ್ಯದ ಮೇರೆಯನ್ನು ಉತ್ತರದಲ್ಲಿ ತುಂಗಭದ್ರಾ ನದಿಯವರೆಗೆ ಸೀಮಿತಗೊಳಿಸಿದ್ದರು. ಈತನ ತರುವಾಯ ಸಿಂಹಾಸನವನ್ನೇರಿದ ಇಮ್ಮಡಿ ಸೋಮೇಶ್ವರನು (ಕ್ರಿ.ಶ. ೧೨೩೫–೧೨೫೪) ದಕ್ಷಿಣದ ಪ್ರಾಂತಗಳ ಮೇಲ್ವಿಚಾರಣೆಯನ್ನು ವಹಿಸಿದ್ದನು. ಕನ್ನಾನೂರು (ವಿಕ್ರಮಪುರ) ಈತನ ಆಡಳಿತ ಕೇಂದ್ರವಾಗಿತ್ತು. ಉತ್ತರ ಭಾಗವನ್ನು ನಿರ್ಲಕ್ಷಿಸಿದನು. ಇದು ಉತ್ತರದಲ್ಲಿ ದೇವಗಿರಿಯ ಸೇವುಣರು ಸ್ವತಂತ್ರರಾಗಲು ಅನುಕೂಲವಾಯಿತು. ಸೋಮೇಶ್ವರನು ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ರಾಜ್ಯವನ್ನು 'ದೋರಸಮುದ್ರ ರಾಜಧಾನಿಯನ್ನೊಳಗೊಂಡ ಉತ್ತರಭಾಗ' ಮತ್ತು 'ಕನ್ನಾನೂರು ರಾಜಧಾನಿಯನ್ನೊಳಗೊಂಡ ದಕ್ಷಿಣ–ಪೂರ್ವಭಾಗ' ಎರಡು ಭಾಗಗಳಲ್ಲಿ ವಿಂಗಡಿಸಿದನು.[೧೩೬]

ಇಮ್ಮಡಿ ಸೋಮೇಶ್ವರನ ತರುವಾಯ ಈತನ ಪುತ್ರ ಮುಮ್ಮಡಿ ನರಸಿಂಹನು (ಕ್ರಿ.ಶ. ೧೨೫೪–೧೨೯೧) ದೋರಸಮುದ್ರದ ಸಿಂಹಾಸನವನ್ನೇರಿದನು. ಹಾಗೆಯೇ ಇನ್ನೊಬ್ಬ ಪುತ್ರ ರಾಮನಾಥನು ಕನ್ನಾನೂರಿನ ಸಿಂಹಾಸನವನ್ನೇರಿದನು. ಇವರಿಬ್ಬರೂ ಪರಸ್ಪರ ಹಗೆತನದಲ್ಲಿ ತೊಡಗಿದರು. ಈ ಆಂತರಿಕ ಒಡಕನ್ನು ಸದುಪಯೋಗಪಡಿಸಿಕೊಂಡ ದೇವಗಿರಿಯ ಸೇವುಣರ ರಾಮಚಂದ್ರನು ದೋರಸಮುದ್ರವನ್ನು ವಶಪಡಿಸಿಕೊಂಡನು. ಹಾಗೆಯೇ ಕುಲಶೇಖರ ಪಾಂಡ್ಯನು ಕನ್ನಾನೂರನ್ನು ವಶಪಡಿಸಿಕೊಂಡನು. ಮುಮ್ಮಡಿ ನರಸಿಂಹನ ತರುವಾಯ ಕ್ರಮವಾಗಿ ಮುಮ್ಮಡಿ ಬಲ್ಲಾಳನು (ಕ್ರಿ.ಶ. ೧೨೯೧–೧೩೪೩) ದೋರಸಮುದ್ರದಲ್ಲಿ ಪಟ್ಟವೇರಿ, ಹೊಯ್ಸಳ ರಾಜ್ಯವನ್ನು ರಕ್ಷಿಸಲು ಪ್ರಯತ್ನಿಸಿದನು. ರಾಮನಾಥನ ತರುವಾಯ ಪಟ್ಟಕ್ಕೆ ಬಂದ ಈತನ ಪುತ್ರ ವಿಶ್ವನಾಥನು (ಕ್ರಿ.ಶ. ೧೨೯೫–೧೩೦೦) ಸೇವುಣರು, ನೊಳಂಬರು, ಕಲಚೂರಿಯರನ್ನು ತನ್ನ ಅಧೀನರನ್ನಾಗಿ ಮಾಡಿಕೊಂಡನು. ಈತನ ಮರಣದ ತರುವಾಯ ಹೊಯ್ಸಳ ರಾಜ್ಯವು ಮುಮ್ಮಡಿ ಬಲ್ಲಾಳನ ನೇತೃತ್ವದಲ್ಲಿ ಒಟ್ಟುಗೂಡಿತು. ದೆಹಲಿಯ ಖಿಲ್ಜಿ ಮನೆತನದ ಅಲ್ಲಾವುದ್ದೀನ್‌ನ ದಂಡನಾಯಕ ಮಲ್ಲಿಕಾಫರನು ಕ್ರಿ.ಶ. ೧೩೧೧ರಲ್ಲಿ ದೋರಸಮುದ್ರವನ್ನು

ವಶಪಡಿಸಿಕೊಂಡನು. ದೋರಸಮುದ್ರದ ಮೇಲೆ ಮತ್ತೊಮ್ಮೆ ಅಂದರೆ ಕ್ರಿ.ಶ. ೧೩೨೦ರಲ್ಲಿ ದೆಹಲಿಯ ಮುಸ್ಲಿಂರು ದಾಳಿ ಮಾಡಿ ಸಂಪೂರ್ಣ ನಾಶಪಡಿಸಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಮುಮ್ಮಡಿ ಬಲ್ಲಾಳನು ತಿರುವಣ್ಣಾಮಲೈಯನ್ನು ರಾಜಧಾನಿ ಮಾಡಿಕೊಂಡನು. ಮುಸ್ಲಿಂ ಸೈನ್ಯವನ್ನು ಎದುರಿಸುವುದು ಅಸಾಧ್ಯವೆಂದು ತಿಳಿದ ಬಲ್ಲಾಳನು ಅವರೊಂದಿಗೆ ಒಪ್ಪಂದ ಮಾಡಿಕೊಂಡು ಕ್ರಿ.ಶ. ೧೩೨೯ರಲ್ಲಿ ದೋರಸಮುದ್ರವನ್ನು ಮರಳಿ ಪಡೆದನು. ತರುವಾಯ ಈತನ ಪುತ್ರ ೪ನೆಯ ವೀರಬಲ್ಲಾಳನು ಅಧಿಕಾರಕ್ಕೆ ಬಂದನು. ಕ್ರಿ.ಶ. ೧೩೪೬ರಲ್ಲಿ ಈತನ ಮರಣದೊಂದಿಗೆ ಹೊಯ್ಸಳ ರಾಜ್ಯವೂ ಅವನತಿಯಾಯಿತು.[೧೩೭]

೩.೨.೧೧. ಮಹಾಮಂಡಳೇಶ್ವರರು

ಚಕ್ರವರ್ತಿಗಳು ವಿಸ್ತಾರವಾಗಿದ್ದ ತಮ್ಮ ಸಾಮ್ರಾಜ್ಯವನ್ನು ಹಲವು ವಿಭಾಗಗಳಲ್ಲಿ ವಿಂಗಡಿಸಿ, ಅವುಗಳಲ್ಲಿ ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ವಂಶಪಾರಂಪರ್ಯದಿಂದ ಮಹಾಮಂಡಳೇಶ್ವರ ಗೈಯುತ್ತಿದ್ದ ಮನೆತನದವರನ್ನು ಅಥವಾ ಹೊಸ ಮಹಾಮಂಡಳೇಶ್ವರರನ್ನು ನೇಮಿಸುತ್ತಿದ್ದರು. ಈ ಮಹಾಮಂಡಳೇಶ್ವರರ ಆಳ್ವಿಕೆಗೆ ಒಂದು ಇಲ್ಲವೇ ಒಂದಕ್ಕಿಂತ ಹೆಚ್ಚು ವಿಭಾಗಗಳೂ ಒಳಪಟ್ಟಿದ್ದವು. ಕೆಲವೊಮ್ಮೆ ಸಾಮ್ರಾಜ್ಯದ ಕೆಲವು ಪ್ರಮುಖ ಪಟ್ಟಣಗಳಿಗೆ ಮಾತ್ರ ಇವರ ಆಳ್ವಿಕೆ ಸೀಮಿತವಾಗಿದ್ದ ನಿದರ್ಶನಗಳೂ ದೊರೆಯುತ್ತವೆ. ಮಹಾಮಂಡಳೇಶ್ವರರ ಆಳ್ವಿಕೆಯನ್ನು ಗಮನಿಸಲು ಚಕ್ರವರ್ತಿಗಳ ಪುತ್ರರು, ಸಹೋದರರು ಯುವರಾಜರಾಗಿ ಅಥವಾ ಕುಮಾರವೃತ್ತಿಯವರಾಗಿ ನೇಮಕವಾಗಿದ್ದ ನಿದರ್ಶನಗಳೂ ದೊರೆಯುತ್ತವೆ. ಮಹಾಮಂಡಳೇಶ್ವರರು ಚಕ್ರವರ್ತಿಗಳಿಗೆ ಅಧೀನರಾಗಿ ಆಳುತ್ತಿದ್ದರೂ ತಮ್ಮದೇಯಾದ ಮಂತ್ರಿಮಂಡಲ, ಅಧಿಕಾರಿವರ್ಗ, ಸೈನ್ಯಗಳನ್ನು ಹೊಂದಿರುತ್ತಿದ್ದರು. ಜೊತೆಗೆ ತಮಗೆ ವಂಶಪಾರಂಪರ್ಯದಿಂದ ಬಂದ ರಾಜ್ಯ ಚಿಹ್ನೆಗಳನ್ನು ಹೊಂದಿರುತ್ತಿದ್ದರು. ಅಧಿಕಾರದ ವ್ಯಾಪ್ತಿಗನುಗುಣವಾಗಿ ಮಹಾಮಂಡಳೇಶ್ವರರನ್ನು ರಾಜವಂಶೀಯ ಮಹಾಮಂಡಳೇಶ್ವರರು, ಮಹಾಮಂಡಳೇಶ್ವರರ ಮಹಾಮಂಡಳೇಶ್ವರರು, ಇತರೆ ಮಹಾಮಂಡಳೇಶ್ವರರು ಎಂದು ಮೂರು ಪ್ರಕಾರಗಳಲ್ಲಿ ವಿಂಗಡಿಸಬಹುದು. ರಾಜವಂಶದಿಂದ ಬಂದ ಮಹಾಮಂಡಳೇಶ್ವರರಲ್ಲಿ ಹಿಂದೆ ಚಕ್ರವರ್ತಿಗಳಾಗಿದ್ದವರು (ಇವರು ತಮ್ಮ ಅಧಿಕಾರ ಕಳೆದುಕೊಂಡು ಬೇರೊಬ್ಬ ಚಕ್ರವರ್ತಿಗೆ ಮಹಾಮಂಡಳೇಶ್ವರರಾದವರು) ಮತ್ತು ಆರಂಭದಿಂದಲೂ ಮಹಾಮಂಡಳೇಶ್ವರರಾಗಿರುವರು (ಇವರು ಆರಂಭದಿಂದಲೂ ಎಲ್ಲ ವಂಶದ ಚಕ್ರವರ್ತಿಗಳಿಗೆ ಮಹಾಮಂಡಳೇಶ್ವರರಾಗಿ ಮುಂದುವರೆದವರು) ಎಂದು ಎರಡು ಪ್ರಕಾರಗಳಲ್ಲಿ ಗುರುತಿಸಬಹುದು. ಮಹಾಮಂಡಳೇಶ್ವರರ ಮಹಾಮಂಡಳೇಶ್ವರರು ರಾಜವಂಶೀಯ ಮಹಾಮಂಡಳೇಶ್ವರರ ಅಧೀನದಲ್ಲಿ ಚಿಕ್ಕ ಚಿಕ್ಕ ಉಪ ಆಡಳಿತ ವಿಭಾಗಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಇತರೆ ಮಹಾಮಂಡಳೇಶ್ವರರು ಚಿಕ್ಕ ಚಿಕ್ಕ ಆಡಳಿತ ವಿಭಾಗಗಳಲ್ಲಿ ಮತ್ತು ಪ್ರಮುಖ ಪಟ್ಟಣಗಳಲ್ಲಿ ಆಳ್ವಿಕೆ ಮಾಡುತ್ತಿದ್ದರು. ಇವರು ಚಕ್ರವರ್ತಿಗಳೊಂದಿಗೆ ಯುದ್ಧಗಳಲ್ಲಿ ಭಾಗವಹಿಸಿ ತಮ್ಮ ಜೀವದ ಹಂಗುದೊರೆದು ಜಯ ತಂದುಕೊಟ್ಟು ಅವರಿಂದ ನೇಮಕವಾದವರು. ಮಹಾಮಂಡಳೇಶ್ವರರ

ಅಧೀನದಲ್ಲಿ ಆಳ್ವಿಕೆ ಕೈಗೊಂಡಿದ್ದ ಮಹಾಸಾಮಂತರು ತಮ್ಮ ರಾಜ್ಯನಿಷ್ಠೆಯಿಂದ ಮಹಾಮಂಡಳೇಶ್ವರರಾಗಿಯೂ ಆಳ್ವಿಕೆ ಮಾಡಿದ್ದಾರೆ.[೧೩೮] ಕೂಹುಂಡಿನಾಡಿನ ಹಲವು ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಕೆಲವು ಮಹಾಮಂಡಳೇಶ್ವರರ ಅಧಿಕಾರ ಮತ್ತು ಅವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

ಉಮರಾಣಿಯ ಕ್ರಿ.ಶ. ೧೧೨೩ರ ಮತ್ತು ಕೆರೂರದ ಕ್ರಿ.ಶ. ೧೧೪೯ರ ಶಾಸನಗಳಲ್ಲಿ ಮಹಾಮಂಡಳೇಶ್ವರ ಹೆಮ್ಮಡಿದೇವನ ಉಲ್ಲೇಖವಿದೆ.[೧೩೯] ಈತನು ಕಲ್ಯಾಣದ (ಮಂಗಳವೇಡೆ) ಕಲಚೂರಿಯರ ಇಮ್ಮಡಿ ಬಿಜ್ಜಳದೇವನ ಆಳ್ವಿಕೆಯ ಸಂದರ್ಭದಲ್ಲಿ ಕೊರವಳ್ಳಿ-೧೫೦ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ಪಟ್ಟಮಹಾದೇವಿ ಚಂದಲದೇವಿ ಮತ್ತು ಪುತ್ರರಾದ ಕುಮಾರ ದೋಲರದೇವ, ವನಸಿಂಹ ಕೂಡಿಕೊಂಡು ಹೆಮ್ಮೇಶ್ವರ ದೇವಾಲಯದ ಜೀರ್ಣೋದ್ಧಾರ, ತಪೋಧನರ ಆಹಾರದಾನಕ್ಕೆಂದು ಹದಿನೈದು ಮತ್ತರು ಭೂಮಿಯನ್ನು ದಾನ ಮಾಡಿದ್ದಾರೆ. ರಾಯಬಾಗದ ಕ್ರಿ.ಶ. ೧೦೭೭ರ ವೀರಗಲ್ಲು ಶಾಸನದಲ್ಲಿ–

> ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮವರ್ಷದ ಚೈತ್ರ ಬ ೭
> ಆದಿವಾರದಂದು ಶ್ರೀಮತ್ರಿಭುವನಮಲ್ಲದೇವಂ ಉದಯಿಯಂ
> ದಿಸಾಪಟ್ಟಂ ಮಾಡಿ ಧಾರೆಯಂ ಸುಟ್ಟ ಜಯಸ್ಥಂಬಮಂ ನಿಲಿಸಿ
> ಮಗುಳಿ ಬಪ್ಪಲ್ಲಿ ಸುಖತಾ............ಯು.........................
> ಶ್ರೀಮನ್ಮಹಾಮಂಡಳೇಶ್ವರ ಕೊಂಗಜರಸರುಂ ಮಂಡಳಿಕ
> ಭೋಜನುಂ ಕಾದುವಲ್ಲಿ ಕೊಂಗರಸನ ನಾಯಕಂ ಚಂಡರಸ
> ಭೋಜನಾನೆಯ ಹಪಾಳಿ ಮೊಗಮಕಿತ್ತಿ ಪಲರುಂ ಪೆಸರ
> ನಾಯಕರಂ ಕೊಂದು ಸಲಂ ದಿವ್ಯಕೀರ್ತಿಯಂ ದಿಗುದಂತಿ
> ದಂತಂಬರಂ ವೆಯ್ದಿಸಿ ಸುರಲೋಕ ಪ್ರಾಪ್ತನಾದ ॥ ಭಾವನಂಕಾರ
> ಪದ್ಮಲದೇವಿಯ ನಿಜಗಂಧವಾರಣ ಕೊಂಗಜರಸನು ಕಟ್ಟಿದ ಅದೆ
> ಬಿರುದು ಭೂಲ..................ಊರು ಎಳಿ...........ಕೊ...............

ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಭಾವನಂಕಕಾರನೂ, ಪದ್ಮಲದೇವಿಯ ನಿಜಗಂಧವಾರಣನೂ (ಪದ್ಮಲದೇವಿಯ ಸಹೋದರ) ಆದ ಮಹಾಮಂಡಳೇಶ್ವರ ಕೊಂಗರಸನ ಪ್ರಸ್ತಾಪವಿದೆ.[೧೪೦] ಈತನು ಯಾವ ಆಡಳಿತ ವಿಭಾಗದಲ್ಲಿ ಮಹಾಮಂಡಳೇಶ್ವರ ಗೈಯುತ್ತಿದ್ದನೆಂಬುದು ಸ್ಪಷ್ಟವಿಲ್ಲ. ಇದೇ ಪಟ್ಟಣದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನ ನಿರೂಪಣೆಯಿದೆ.[೧೪೧] ಪ್ರಸ್ತುತ ಶಾಸನದ ಅಕ್ಷರಗಳು ಸವೆದಿರುವುದರಿಂದ ಈತನ ಹೆಸರು ಸ್ಪಷ್ಟವಿಲ್ಲ. ಈತನು ಹೂವಿನಬಾಗೆಯ (ಇಂದಿನ ರಾಯಬಾಗ) ನೆಲೆವೀಡಿನಿಂದ ಆಳುತ್ತಿದ್ದನು. ಕುಂದರಗಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಪೆರ್ಮಾಡಿಯರಸನ ಪ್ರಸ್ತಾಪವಿದೆ.[೧೪೨] ಆದರೆ ಈತನು ಆಳ್ವಿಕೆ ಮಾಡುತ್ತಿದ್ದ ಪ್ರದೇಶದ ಕುರಿತು ಸ್ಪಷ್ಟವಿಲ್ಲ. ಕೊಣ್ಣೂರಿನ ಕ್ರಿ.ಶ. ೧೦೮೭ರ ಶಾಸನದಲ್ಲಿ ಮಹಾಮಂಡಳೇಶ್ವರ ಜಯಕರ್ಣನ ಉಲ್ಲೇಖವಿದೆ.[೧೪೩] ಕಲ್ಯಾಣದ ಚಾಳುಕ್ಯರ ೬ನೆಯ

ವಿಕ್ರಮಾದಿತ್ಯನ ಪುತ್ರನಾದ ಈತನು ಕೂಹುಂಡಿನಾಡಿನ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಈ ಸಂದರ್ಭದಲ್ಲಿ ಕೊಣ್ಣೂರಿನಲ್ಲಿ ನಿಧಿಯಮ ಗಾವುಂಡನು ನಿರ್ಮಿಸಿದ ಪಾರ್ಶ್ವನಾಥ (?) ಬಸದಿಯ ಅಂಗಭೋಗ ಮತ್ತು ಮುನಿಗಳ ಆಹಾರದಾನಕ್ಕೆ ಎರಡು ಗದ್ಯಾಣಗಳನ್ನು ದಾನ ಮಾಡಿದ್ದಾನೆ.

೩.೨.೧೧. ಮಹಾಸಾಮಂತರು

ಮಹಾಸಾಮಂತರು ಮಹಾಮಂಡಳೇಶ್ವರರ ಅಧೀನದಲ್ಲಿ ಉಪ ಆಡಳಿತ ವಿಭಾಗಗಳು ಮತ್ತು ಪ್ರಮುಖ ಪಟ್ಟಣಗಳಲ್ಲಿ ಆಳ್ವಿಕೆ ಕೈಗೊಂಡಿದ್ದರು.'ಸಾಮಂತ' ಎಂಬುದು ಒಬ್ಬ ರಾಜನಿಗೆ ಅಧೀನನಾಗಿರುವ ರಾಜ ಅಥವಾ ಮಾಂಡಲಿಕ, ಒಡೆಯ, ಒಡೆತನ ಪಡೆದವ ಎಂದರ್ಥವಾಗುತ್ತದೆ.[೧೪೪] ಸಾಮಂತ ಎಂಬುದು ಸ್ವಾಮ್ಯವಂತ>ಸಾಮಂತ>ಸಾವಂತ ಎಂದು ರೂಪಾಂತರವಾಗುತ್ತ ಬಂದಿದೆ. ಕೆಲವು ಗ್ರಾಮಗಳ ಸಮೂಹಕ್ಕೆ 'ನಾಡು' ಎಂದು, ಇದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು 'ನಾಳ್ಗಾವುಂಡ' ಎಂದು ಕರೆಯಲಾಗುತ್ತಿತ್ತು. ಆ ಹಿನ್ನೆಲೆಯಲ್ಲಿ ನಾಳ್ಗಾವುಂಡರೂ ಮಹಾಸಾಮಂತರಾಗಿದ್ದಾರೆ. ಕೆಲವು ಶಾಸನಗಳಲ್ಲಿ ಮಹಾಸಾಮಂತರ ಹೆಸರಿನೊಂದಿಗೆ 'ಮನ್ನೆಯ' ಎಂಬ ಪದ ಗೋಚರಿಸುತ್ತದೆ. ಗೌರವಕ್ಕೆ ಪಾತ್ರನಾದವನು, ಮನ್ನಣೆಗೆ ಯೋಗ್ಯನಾದವನು ಎಂಬುದು ಇದರ ಅರ್ಥವಾಗಿದೆ. ಅರಸ ಇಲ್ಲವೇ ಮಹಾಮಂಡಳೇಶ್ವರನಿಂದ ಮಾನ್ಯತೆಯನ್ನು ಪಡೆದುಕೊಂಡು ಆಳುತ್ತಿದ್ದವರನ್ನು ಮನ್ನೆಯರು ಎಂದು ಕರೆಯಲಾಗುತ್ತಿತ್ತು.[೧೪೫] ಮಹಾಸಾಮಂತರು ಏಕಕಾಲಕ್ಕೆ ಪ್ರಾಂತೀಯ ಮಹಾಮಂಡಳೇಶ್ವರರಿಗೆ ಮತ್ತು ಕೇಂದ್ರಿಯ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರಿಗೆ ಅಧೀನರಾಗಿ ಕಾರ್ಯನಿರ್ವಹಿಸುತ್ತಿದ್ದರು. ಹೀಗಾಗಿ ಇವರ ಅಧಿಕಾರ ವ್ಯಾಪ್ತಿ ಅವರಿಗಿಂತ ಕಡಿಮೆಯಾಗಿತ್ತು. ಅಧಿಕಾರದ ಸ್ವರೂಪದ ಹಿನ್ನೆಲೆಯಲ್ಲಿ 'ಆಳುವ ಮಹಾಸಾಮಂತರು' ಮತ್ತು 'ಸುಂಕದ ಮಹಾಸಾಮಂತರು' ಎಂಬೆರಡು ಬಗೆಯ ಮಹಾಸಾಮಂತರು ಕಂಡುಬರುತ್ತಾರೆ. ಆಳುವ ಮಹಾಸಾಮಂತರು ಮಹಾಮಂಡಳೇಶ್ವರರ ಅಧೀನದಲ್ಲಿ ಉಪ ಆಡಳಿತ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ 'ರಾಜವಂಶೀಯ ಮಹಾಸಾಮಂತರು' ಮತ್ತು 'ಸಾಮಾನ್ಯ ಮಹಾಸಾಮಂತರು' ಎಂಬೆರಡು ಬಗೆಯ ಮಹಾಸಾಮಂತರು ಗೋಚರಿಸುತ್ತಾರೆ. ಸುಂಕವನ್ನು ಸಂಗ್ರಹಿಸುವ ಮಹಾಸಾಮಂತರು ಪ್ರಾಂತೀಯ ಮಹಾಮಂಡಳೇಶ್ವರರು ಮತ್ತು ಕೇಂದ್ರಿಯ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರಿಗೆ ಅಧೀನರಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಎಲ್ಲ ಮಹಾಸಾಮಂತರು ತಮ್ಮ ಅಧೀನದಲ್ಲಿ ಕೆಲವು ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ರಾಜವಂಶೀಯ ಮಹಾಸಾಮಂತರು ತಮ್ಮದೇ ಆದ ರಾಜ್ಯ ಚಿಹ್ನೆಗಳನ್ನು ಹೊಂದಿದ್ದರು.[೧೪೬] ಕೂಹುಂಡಿನಾಡಿನ ಹಲವು ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಕೆಲವು ಮಹಾಸಾಮಂತರ ಅಧಿಕಾರ ಮತ್ತು ಅವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

ದೊಡವಾಡದ ಕ್ರಿ.ಶ. ೧೦೭೯ರ ಶಾಸನದಲ್ಲಿ–

ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮವರ್ಷದ ೪ನೆಯ ಸಿದ್ಧಾರ್ತ್ಥಿ
ಸಂವತ್ಸರದ ಕಾರ್ತ್ತಿಕ ಸುದ್ಧ ೫ ಬೃಹಸ್ಪತಿವಾರದಂದು
ಶ್ರೀಮನ್ಮಹಾಸಾಮನ್ತಂ ಭುಜಬಳ ಕಾವರಸರುಮವರರ್ದ್ಧಾಂಗಿ
ಚಿಕಬ್ಬೆಯರಸಿಯರು ಮಿರ್ಪ್ಪದಿಂಬಗ್ಗಾರ್ಮುಣ್ಡುಗಳುಮಿರ್ದ್ದು
......ರ ಕಾಳಿಮಯ್ಯಸೆಟ್ಟಿ ಮಾಡಿಸಿದ ಬಸದಿಯಲಿರ್ಪ್ಪ ಶ್ರೀ
ಕಾರೆಯಗಣದ ಕುಕ್ಕುಟಸೇನದೇವರ ಕಾಲಂಕರ್ಚ್ಚಿ
ರಿಶಿಯರಾಹಾರದಾನಕ್ಕಮೆಂದು........ಬಡಗಲು ಬಿಟ್ಟ
ಎಱೆಯ ಕೆಯ್ಮತ್ತ......ರ ಸೀಮೆ ಮತ್ತುಎಱೆಯ ಮತ್ತರು ॥

ಮಹಾಸಾಮಂತ ಕಾವದೇವರಸನ ಉಲ್ಲೇಖವಿದೆ.[೧೪೭] ಈತನು ಸವದತ್ತಿಯ ರಟ್ಟರ ಅಧೀನದಲ್ಲಿ ಮಹಾಸಾಮಂತ ಗೈಯುತ್ತಿದ್ದನು. ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಅರಸನ ಹೆಸರು ಮತ್ತು ಕಾವದೇವರಸನು ಯಾವ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನೆಂಬುದು ಸ್ಪಷ್ಟವಾಗುವುದಿಲ್ಲ. ನಾಗನೂರಿನ ಕ್ರಿ.ಶ. ೧೩ನೆಯ ಶತಮಾನದ ಶಾಸನದಲ್ಲಿ ಸವದತ್ತಿಯ ರಟ್ಟರ ಕನ್ನರದೇವನ ಮಂತ್ರಿ (ಮಹಾಸಾಮಂತ) ಜಿನಪ್ರತಿಮೆಯನ್ನು ಮಾಡಿಸಿದ ಪ್ರಸ್ತಾಪವಿದೆ.[೧೪೮] ಬೆಳವಡಿಯ ಕ್ರಿ.ಶ. ೧೦೭೫ರ ಶಾಸನದಲ್ಲಿ-

ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ
ಪರಮೇಶ್ವರ ಪರಮಭಟ್ಟಾರಕ ಶ್ರೀಮದ್ಭುವನೈಕಮಲ್ಲದೇವರ
ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾಚಂದ್ರಾರ್ಕ್ಕತಾರಂ
ಸಲುತ್ತಮಿರೆ ॥ ತತ್ಪಾದಪದ್ಮೋಪಜೀವಿ ಶ್ರೀಮನ್ಮಹಾಸಾಮನ್ತಂ
ಗಂಧಮರಸಂ ಪೊಳಲ್ಗುಂದ ಮೂವತ್ತಕ್ಕಂ ಮನ್ನೆಯ
ಸಾಮ್ಯದಿನರಸುಗೆಯ್ಯುತ್ತಮಿರೆ ॥

ಮಹಾಸಾಮಂತ ಗಂಡಮರಸನ ಉಲ್ಲೇಖವಿದೆ.[೧೪೯] ಈತನು ಕಲ್ಯಾಣದ ಚಾಳುಕ್ಯರ ಇಮ್ಮಡಿ ಸೋಮೇಶ್ವರ ಆಳ್ವಿಕೆಯ ಸಂದರ್ಭದಲ್ಲಿ ಪೊಳಲ್ಗುಂದ-೩೦ ಆಡಳಿತ ವಿಭಾಗದಲ್ಲಿ ಮನ್ನೆಯ ಸಾಮ್ಯದಿಂದ ಅರಸುಗೈಯುತ್ತಿದ್ದನು. ಈತನು ಪೊಲ್ಲೆಗ, ಕುಮಾರ ಬೊಮ್ಮರಸನ ಜೊತೆಗೂಡಿ ಬೆಳವಡಿಯ ಸಹಸ್ರಕೂಟ ಬಸದಿಗೆ ಭೂದಾನ ಮಾಡಿದ್ದಾನೆ.[೧೫೦] ಈತನು ಬೈಲಹೊಂಗಲದ ಮಾಚೇಶ್ವರ ದೇವಾಲಯಕ್ಕೂ ದಾನ ಮಾಡಿದ್ದಾನೆ.[೧೫೧]

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೨೪೯ರ ತಾಮ್ರಪಟ ಶಾಸನದಲ್ಲಿ ಮಹಾಸಾಮಂತನೊಬ್ಬನ ನಿರೂಪಣೆಯಿದೆ.[೧೫೨] ಈತನು ದೇವಗಿರಿಯ ಸೇವುಣರ ಕನ್ನರದೇವನ ಆಳ್ವಿಕೆಯ ಸಂದರ್ಭದಲ್ಲಿ ಮುದುಗಲ್ಲದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈ ಸಂದರ್ಭದಲ್ಲಿ ಕೂಹುಂಡಿನಾಡಿನ ಹುಬ್ಬಳ್ಳಿ-೧೨ ಆಡಳಿತ ವಿಭಾಗದಲ್ಲಿನ ಬಾಗೇವಾಡಿ ಗ್ರಾಮದಲ್ಲಿ ದಾನ ಮಾಡಿದ್ದಾನೆ. ಅರಟಗಲ್ಲದ ಕ್ರಿ.ಶ. ೧೧೦೦ರ ಶಾಸನದಲ್ಲಿ-

ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ

ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕ ಚಾಳುಕ್ಯಾಭರಣ
ಶ್ರೀಮತ್ರಿಭುವನಮಲ್ಲದೇವ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ
ಪ್ರವರ್ಧಮಾನಮಾ ಚಂದ್ರಾರ್ಕ್ಕತಾರಂ ಬರಂ ಸಲುತ್ತಮಿರೆ ॥
ತತ್ಪಾದಪದ್ಮೋಪಜೀವಿ ಸಮಧಿಗತ ಪಂಚಮಹಾಸಬ್ದ ಮಹಾಸಾಮನ್ತ
ವಿಜೆಯಲಕ್ಷ್ಮೀಕಾನ್ತಂ ದುಸ್ತರಾರಾತಿ ಸಮರಹರಂ ಜಸಭಾವನ
ದುಶ್ಯಂತ ಪ್ರತಾಪಪಾವಕಂ ಸಿಖಾಸಹಸ್ರನೇಕ ಹೋಮಾನದಂಡ
ಮಂಡಳಿಕವಾರಣ ಸರಸಿಜಧ್ವಜರ್ಝುಪ್ಪಂ ಬಂತೆ ರಿತೋತ್ತಮಾಂಗ
ಕೀರ್ತ್ತಿಲತಾ ನರ್ತ್ತಕೀ ನರ್ತನ ಭುವನ ಭೂಶಿತರಂಗ
ಶ್ರೀಮತ್ತ್ರಿಭುವನಮಲ್ಲದೇವರಂಗ ಜಾವದ ತುಳುವತಂತ್ರಕ್ಕಧಿಷ್ಠಾಯಕಂ
ನಾಮಾದಿ ಸಮಸ್ತ ಪ್ರಸಸ್ತಿಸಹಿತಂ ಶ್ರೀ ಮನ್ಮಹಾಸಾನ್ತ ಚಿಕ್ಕರಸರಕುಮಾರಂ
ದೇವತಿ ಸ್ವರ್ಗಸ್ಥನಾದ ॥

ಮಹಾಸಾಮಂತ ಚಿಕ್ಕರಸನ ಪ್ರಸ್ತಾಪವಿದೆ.[೧೫೩] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಸಂದರ್ಭದಲ್ಲಿ ಮಹಾಸಾಮಂತ ಗೈಯುತ್ತಿದ್ದನು. ಆದರೆ ಯಾವ ಆಡಳಿತ ವಿಭಾಗದಲ್ಲಿ ಎಂಬುದು ಸ್ಪಷ್ಟವಿಲ್ಲ. ನವಿಲುತೀರ್ಥದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ಮಹಾಸಾಮಂತನೊಬ್ಬನ ಪ್ರಶಸ್ತಿಗಳು ಮತ್ತು ಆಳ್ವಿಕೆಯ ವರ್ಣನೆಯಿದೆ.[೧೫೪] ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಈತನ ಹೆಸರು, ಆಡಳಿತ ಕೈಗೊಂಡಿದ್ದ ವಿಭಾಗ ಮತ್ತು ಇತರೆ ಚಟುವಟಿಕೆಗಳು ಸ್ಪಷ್ಟವಿಲ್ಲ. ಯಡ್ರಾವಿಯ ಕ್ರಿ.ಶ. ೯೭೯ರ ಶಾಸನದಲ್ಲಿ ಮಹಾಸಾಮಂತಾಧಿಪತಿಯ ಪ್ರಸ್ತಾಪವಿದೆ.[೧೫೫] ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಈತನ ಆಳ್ವಿಕೆಯ ಕುರಿತು ತಿಳಿಯುವುದಿಲ್ಲ. ಯಕ್ಸಂಬಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನದಲ್ಲಿ ಕಲ್ಯಾಣದ ಕಲಚೂರಿಯರ ಇಮ್ಮಡಿ ಬಿಜ್ಜಳದೇವನ ಮಹಾಸಾಮಂತ ರೇವಣ್ಣನ ಉಲ್ಲೇಖವಿದೆ.[೧೫೬] ಈತನ ಕುರಿತು ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಬೆನಿವಾಡದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಮಹಾಸಾಮಂತನೊಬ್ಬನ ಪ್ರಸ್ತಾಪವಿದೆ.[೧೫೭] ಈತನು ಆಳ್ವಿಕೆ ಕೈಗೊಂಡಿದ್ದ ಆಡಳಿತ ವಿಭಾಗದ ಕುರಿತಾಗಿ ಮಾಹಿತಿಗಳಿಲ್ಲ. ಈತನು ಬೆನಿವಾಡದಲ್ಲಿ ಪಾರ್ಶ್ವನಾಥ (?) ಬಸದಿಯನ್ನು ನಿರ್ಮಿಸಿದ್ದಾನೆ.

ರಾಯಬಾಗದ ಕ್ರಿ.ಶ. ೧೧೨೭ರ ಶಾಸನದಲ್ಲಿ–

ಹಾಪ್ರಚಣ್ಡದಣ್ಡ.........ಮಳ ಮಾರ್ತ್ತಣ್ಡನು.....ನ್ದನ ನಿಮಿತ್ತ
ಮಿತ್ರಪಲ.......ಡಾಮಣಿ.....ಚಯ......ಭೂಲೋಕಮಲ್ಲದೇವ
ಹ......ಸಮಸ್ತ ಪ್ರಶಸ್ತಿಸಹಿತ ಶ್ರೀಮನುಮಪ್ರದೆ....ಕ್ಕರಸರು
ಶ್ರೀಮನ್ಮಹಾಘಟಿಕಾಸ್ಥಾನವಗ್ರಹಾರ ಹೂವಿನಬಾಗೆಯ
ತ್ರಿಭೋಗಾಭ್ಯಂತರಸಿದ್ಧಿಯಂ ಪಡೆದಾಳುತ್ತಮಿರೆ........॥

ಕಲ್ಯಾಣದ ಚಾಳುಕ್ಯರ ಮುಮ್ಮಡಿ ಸೋಮೇಶ್ವರನ ಮಹಾಸಾಮಂತನೊಬ್ಬನ ಪ್ರಸ್ತಾಪವಿದೆ.[೧೫೮] ಪ್ರಸ್ತುತ ಶಾಸನದ ಅಕ್ಷರಗಳು ಸವೆದಿರುವುದರಿಂದ ಈತನ ಹೆಸರು ಸ್ಪಷ್ಟವಿಲ್ಲ. ಈತನು ಮಹಾಘಟಿಕಾಸ್ಥಾನ,

ಅಗ್ರಹಾರ ಎಂದು ಪ್ರಸಿದ್ಧವಾಗಿದ್ದ ರಾಯಬಾಗವನ್ನು ತ್ರಿಭೋಗಾಭ್ಯಂತರಸಿದ್ಧಿಯಿಂದ ಪಡೆದು ಆಳುತ್ತಿದ್ದನು. ಈ ಸಂದರ್ಭದಲ್ಲಿ ಸ್ಥಳೀಯ ಕೆರೆಯ ಏರಿಯ ಮೇಲಿನ ಕೇಶವೇಶ್ವರ ದೇವಾಲಯದ ಪೂಜಾರಿಯ ಉಪಜೀವನ ಮತ್ತು ದೇವರ ನೈವೇದ್ಯಕ್ಕೆ ಹದಿನಾರು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ. ಇದೇ ಪಟ್ಟಣದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ–

ಕಂಕಣನೂರ ಪ್ರಭುವೀತಾಂಕುಶ ಬಾಚರಸನಾಮಹಾತ್ಮನ ಸತಿ
ಸತ್ಪಂಕರುಹವದನೆ ಪುಂಣ್ಯಾಳಂ......ವೇಣಿ ಪರಸಿಯವ್ವೆಯವರ್ಗ್ಗಳ
ತನುಜರ್ ॥ ಶ್ರೀಕಾಂತ ಹೆಂಮ್ಮಣಯ್ಯಂ ನಿಜಕುಳಪಳಿತಾಂ
ಮ್ರಾಕರೋತ್ತುಂಗ ವಜ್ರಪ್ರಾಕಾರಂ ಚಿಟ್ಟಣಯ್ಯಂ ಪ್ರಕಟಿತಮಹಿಮಂ
ತೋಷಿತಾಶೇಷವಿದ್ವಲ್ಲೋಕಂ ಶ್ರೀಕಾಳಿಮಯ್ಯಂ ಸಕಳನೃಪಸಭಾಸ್ತುತ್ಯ
ಸಾಹಿತ್ಯವಾಕ್ಕಾಂ ತಾಕಾಂತಂ ಅಟ್ಟರಾಜ್ಯೋದ್ಧರಣ ಪರಿಣತಂ
ಮಂತ್ರಿ ಚಾವುಂಡರಾಯಂ ॥ ನಯನಿಪುಣ್ಯರುಪಾಯಚತುಷ್ಟಯಂಗಳಂ
ಅಟ್ಟರಾಜ್ಯದೊಳ್ದೆಶೆ ವರುಣಾಶ್ರಯದೊಳ್ ಬಿದಿನಿಲಿಸಿದನೆನೆ
ಜಯಾಶ್ರಯರ್ತ್ತಂಮ್ಮ ನಾಲ್ವರುಂ ಸೊಗಯಿಸುವರ್ ॥

ಮಹಾಸಾಮಂತ ಭುವನಗಾವುಂಡನ ಉಲ್ಲೇಖವಿದೆ.[೧೫೯] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಸಂದರ್ಭದಲ್ಲಿ ತೇರಿದಾಳದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನು ಹೆಮ್ಮಗಾವುಂಡ ಮತ್ತು ಚವುಂಡಯ್ಯನ ಮಕ್ಕಳೊಡಗೂಡಿ (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರುಗಳು ಸ್ಪಷ್ಟವಿಲ್ಲ) ದಿಗ್ಗಜವಾಡವನ್ನು (ಇಂದಿನ ದಿಗ್ಗೇವಾಡಿ) ಮುತ್ತಿದ ಕೊಲ್ಲಾಪುರದ ಶಿಲಾಹಾರರ ಮಹಾಮಂಡಳೇಶ್ವರ ಗಂಡರಾದಿತ್ಯದೇವನ ಅಧಿಕಾರಿ ಕಾವಸೆಟ್ಟಿಯ ವಿರುದ್ಧ ಹೋರಾಡುತ್ತ ಹಲವರನ್ನು ಕೊಂದು ತಾನೂ ವೀರಮರಣವನ್ನಪ್ಪಿದ್ದಾನೆ. ಕುಂದರಗಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಪೆರ್ಮಾಡಿಯರಸನ ಮಹಾಸಾಮಂತ ಪ್ರಧಾನ ಸೇನಾಪತಿ ಪ್ರಚಂಡ ದಂಡನಾಯಕ ಮಹೇಶ್ವರಯ್ಯರಸನ ಪ್ರಸ್ತಾಪವಿದೆ.[೧೬೦] ಈತನು ದಂಡನಾಯಕನ ಹುದ್ದೆಯಿಂದ ಮಹಾಸಾಮಂತನಾಗಿರುವುದು ಗಮನಾರ್ಹವಾಗಿದೆ. ಆದರೆ ಈತನು ಯಾವ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನೆಂಬುದು ತಿಳಿಯುವುದಿಲ್ಲ. ಗೋಕಾಕ ಜಲಪಾತದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಮಹಾಸಾಮಂತಾಧಿಕಾರಿ ಪೆರ್ಗಡೆ ಧನ್ನುಗಿದೇವ ದಂಡನಾಯಕನ ನಿರೂಪಣೆಯಿದೆ.[೧೬೧] ಈತನು ಕಲ್ಯಾಣದ ಕಲಚೂರಿಯರ ಪೆರ್ಗಡೆನಾಗಿದ್ದು, ತರುವಾಯ ದಂಡನಾಯಕನಾಗಿ ಕಾರ್ಯನಿರ್ವಹಿಸಿದ್ದಾನೆ. ಕಾಲಕ್ರಮೇಣ ಅರಸನ ಪ್ರೀತಿ–ವಿಶ್ವಾಸಗಳನ್ನು ಸಂಪಾದಿಸುವ ಮೂಲಕ ಸೋಯಿದೇವನ ಮಹಾಸಾಮಂತನ ಸ್ಥಾನವನ್ನು ಪಡೆದಿರುವುದು ಗಮನಾರ್ಹವಾಗಿದೆ. ಆದರೆ ಈತನು ಆಳ್ವಿಕೆ ನೋಡಿಕೊಳ್ಳುತ್ತಿದ್ದ ವಿಭಾಗದ ಕುರಿತು ಮಾಹಿತಿಗಳು ಲಭ್ಯವಿಲ್ಲ. ಪ್ರಾಯಶಃ ಕುಂದರಿಗೆ ಕಂಪಣದ ಆಡಳಿತವನ್ನು ನೋಡಿಕೊಳ್ಳುತ್ತಿದ್ದಂತೆ ತೋರುತ್ತದೆ. ತನ್ನ ಆಳ್ವಿಕೆಯ ಸಂದರ್ಭದಲ್ಲಿ ಗೋಕಾಕ ಜಲಪಾತದ (ಇದನ್ನು ಮಹಾತೀರ್ಥ

ಎಂದು ಕರೆಯಲಾಗಿದೆ) ತಟ್ಟೇಶ್ವರ ದೇವಾಲಯದ ಅಂಗಭೋಗ, ನೈವೇದ್ಯ, ಜೀರ್ಣೋದ್ಧಾರಕ್ಕಾಗಿ ಕೂಹುಂಡಿ–೩೦೦೦ ವಿಭಾಗದ ಕುಂದರಿಗೆ ಕಂಪಣದ ಬಳಿಯ ಕೊಣ್ಣೂರನ್ನು ದತ್ತಿ ಕೊಟ್ಟಿದ್ದಾನೆ.

ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

> ಅನ್ತು ಕುಂತಳಮಹೀತಳಕಾಂತಾಂತನೆನಿಸಿದ ವೀರಪೆರ್ಮ್ಮಾಡಿರಾಯನ
> ಕಟ್ಟಿದಲಗೆನಿಸಿದ ತೇರಿದಾಳದ ವೀರಗೊಂಕಕ್ಷಿತೀಶ್ವರನನ್ವಯದೊಳೆನೆಬರಾನುಂ
> ಸಲೆ ನಿಜ ಜನನೀಕಂ ಜನಕರ್ಗ್ಗೆ ಪೂರ್ವಪುಣ್ಯವೆಂಬ ಕಲ್ಪಾವನೀಜಕ್ಕೆ
> ಫಳವುದಯಿಸುವಂತೆ ಪುಟ್ಟಿ ‖ ಅವರೀರ್ವ್ವರ್ಗನುರಾಗದಿಂ ಸಿರಿಗಮಾ
> ಕಂಜೋದರಗಂ ಮನೋಭವನದ್ರಿಪ್ರಿಯಪುತ್ರಿಗಂ ಶಶಿಧರಂಗಂ ಶಣ್ಮುಖಂ
> ಬನ್ದು ಪುಟ್ಟುವವೊಲು ಪುಟ್ಟಿ ವಿರೋಧಿಮಂನೆಯ ಘರಟ್ಟಂ ತೇರಿದಾಳಕ್ಷಿತೀಶಂ
> ವಿಳಾಸಂ ಪರಿರಂಜಿಪಂ ಭುವನದೊಳು ನಿಶ್ಶಂಕೆಯಿಂ ಗೊಂಕಮನೆ ‖
> ಕನ್ತುವಿಳಾಸ ಲಕ್ಷ್ಮಿಯೆನಿಪಗ್ಗದ ಬಾಚಲದೇವಿ ಮಾತೆ ವಿಕ್ರಾನ್ತವಿಭಾಸಿ
> ಮಲ್ಲಮಹಿಪಂ ಜನಕಂ ಮುನಿಮಾಘಣಂದಿಸೈದ್ಧಾನ್ತಿಕಚಕ್ರವರ್ತ್ತಿ
> ಗುರು ನೇಮಿಜಿನಂ ಮನದಿಷ್ಟದೆಯ್ವ ವೋರಂತೆನೆ ತೇರಿದಾಳದ ನ್ರಿಪಾಗ್ರಣಿ
> ಗೊಂಕನಿದೇಂ ಕೃತಾರ್ತ್ಥನೋ ‖ ಅಡಸುವಕುತ್ತ ವೊತ್ತರಿಪಮ್ರಿತ್ತು
> ಕಡಂಗುವ ಮಾರಿ ಕಾಯ್ವಿನಿಂ ತೊಡರ್ವ್ವವಿರೋಧಿ ಪಾಯ್ವಪುಲಿ
> ಪೊಯ್ವಸಿಡಿಲು ಪಿಡಿವುಗ್ರ ಪನ್ನೆಗಂ ಸುಡುವದವಾಗ್ನಿ ಬಾರ್ದೆ
> ಕಡೆಗಂಚುವುದೆಂದಡೆ ತೇರಿದಾಳದೀ ಕಡುಗಲಿ ಗೊಂಕಭೂಪತಿಯ
> ಭವ್ಯತೆ ಕೇವಳವೇ ನಿರೀಕ್ಷಿಸಲು ‖ ಪಸಿದಸಿತಾಹಿ ಸೋಂಕಿದೊಡೆ
> ಸಂಕಿಸಿ ಮಂತ್ರದ ತಂತ್ರದಾಸೆಯಿಂದಸುವಜೆಯಾಗಿ ಬಿರ್ದ್ದಿರದೆ
> ಪಂಚಪದಂಗಳನೋದಿ ತದ್ವಿಶಪ್ರಸರಮನೆಯ್ದೆ ಪಿಂಗಿಸಿ ಜಿನಬ್ರತದೊಳು
> ದ್ರಿಡನಾದ ತಂನ ಪೆಂಪೆಸೆದಿರೆ ತೇರಿದಾಳದರಸಂ ನೆಗಳ್ದಂ ಕಲಿ
> ಗೊಂಕಭೂಭುಜನು ‖ ಯೆತ್ತಿಸಿ ತೇರಿದಾಳದೊಳಗೊಪ್ಪೆ ಜಿನೇಶ್ವರ
> ಸದ್ಮಮಂ ಸಮಂತೆತ್ತಿಸಿದಂಜಯಧ್ವಜಮನುರ್ವ್ವಿಗೆ ದಿಗ್ಮುಖದಂತಿ
> ದನ್ತದೊಳೆತ್ತಿಸಿದಂ ನಿಜಾಕಂ ಮಹಿಮಾಕ್ಷರಮಾಳಿಕೆಯಂ
> ಗಡೆಂದಡೇನುತ್ತಮ ಭವ್ಯನೋ ಜಿನಮತಾಗ್ರಣಿ ಸದ್ಗುಣಿ
>
> ಗೊಂಕಭೂಭುಜನು ‖

ಸವದತ್ತಿಯ ರಟ್ಟರ ಕಾರ್ತವೀರ್ಯನ ಮಂಡಲಿಕ (ಮಹಾಸಾಮಂತ) ಗೊಂಕದೇವರಸನ ಆಳ್ವಿಕೆ ಮತ್ತು ಧಾರ್ಮಿಕ ಚಟುವಟಿಕೆಗಳ ಸವಿಸ್ತಾರವಾದ ಪ್ರಸ್ತಾಪವಿದೆ.[೧೨] ಈತನು ತೇರಿದಾಳ–೧೨ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈ ಸಂದರ್ಭದಲ್ಲಿ ತೇರಿದಾಳದಲ್ಲಿ ಗೊಂಕಜಿನಾಲಯವನ್ನು(ನೇಮಿನಾಥ ಬಸದಿ) ನಿರ್ಮಿಸಿದ್ದಾನೆ. ಕೊಲ್ಲಾಪುರದ ಕ್ರಿ.ಶ.೪೮೯–೯೦ರ ತಾಮ್ರಪಟ ಶಾಸನದಲ್ಲಿ ರುದ್ರಾನೀಲ ಸೇಂದ್ರಕರ ಸಾಮಿಯಾರನ ನಿರೂಪಣೆಯಿದೆ.[೧೩] ಈತನು ಬಾದಾಮಿ ಚಲುಕ್ಯರ ೧ನೆಯ ಪುಲಕೇಶಿಯ ಅಧೀನದಲ್ಲಿ ಕೂಹುಣ್ಡಿವಿಷಯದ ಅಲಕ್ತಕ ಏಳುನೂರು ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಆ ಸಂದರ್ಭದಲ್ಲಿ ಅಲಕ್ತಕ ನಗರದಲ್ಲಿ (ಇಂದಿನ ಮಹಾರಾಷ್ಟ್ರದ ಹಾತಕಣಗಲಾ ತಾಲ್ಲೂಕಿನ ಅಲ್ತೆ) ತ್ರಿಭುವನತಿಲಕ ಜಿನಾಲಯವನ್ನು ನಿರ್ಮಿಸಿದ್ದಾನೆ. ಈತನ ಕೋರಿಕೆಯ ಮೇರೆಗೆ ಈ ಬಸದಿಯ ವಿವಿಧ ಧಾರ್ಮಿಕ ಚಟುವಟಿಕೆಗಳಿಗೆ ೧ನೆಯ

ಪುಲಕೇಶಿ ಭೂಮಿ ಮತ್ತು ನಾಲ್ಕು ಗ್ರಾಮಗಳನ್ನು ದತ್ತಿ ಕೊಟ್ಟಿದ್ದಾನೆ.

೩.೨.೧೨. ಪ್ರಭುಗಾವುಂಡರು

ಪ್ರಭುಗಾವುಂಡರು ಮಹಾಸಾಮಂತರ ಅಧೀನದಲ್ಲಿ ತಮ್ಮ ಪ್ರಭುತ್ವಕ್ಕೊಳಪಟ್ಟ ಗ್ರಾಮಗಳಲ್ಲಿ ಅಥವಾ ಉಪ ಆಡಳಿತ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಜಿ.ಎಸ್. ದೀಕ್ಷಿತ್ ಅವರು ಗ್ರಾಮದ ಗಾವುಂಡರೇ ಪ್ರಭುಗಾವುಂಡರು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೬೪] ಎಂ. ಚಿದಾನಂದಮೂರ್ತಿ ಅವರು ನಾಡಿನ ಆಯಾ ಊರಿಗೆ ಮುಖ್ಯಸ್ಥನಾಗಿರುತ್ತಿದ್ದ ಊರಗಾವುಂಡನನ್ನೇ ಪ್ರಭುಗಾವುಂಡ ಎಂದು ಕರೆಯಲಾಗುತ್ತಿತ್ತೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೬೫] ಆದರೆ ಪ್ರಭುಗಾವುಂಡರು ಗ್ರಾಮದ ಗಾವುಂಡರಿಗಿಂತ ಭಿನ್ನರಾಗಿದ್ದು, ಇವರು ಗಾವುಂಡರಿಗಿಂತ ಮೇಲಿನ ಅಧಿಕಾರಿಗಳಾಗಿದ್ದರು ಎಂದು ಜೆ.ಎಂ. ನಾಗಯ್ಯ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೧೬೬] ಪ್ರಭುಗಾವುಂಡರು ತಮ್ಮ ಅಧೀನಕ್ಕೊಳಪಟ್ಟ ಗ್ರಾಮಗಳಲ್ಲಿ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ದಾನಿಗಳು ದಾನ-ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭಗಳಲ್ಲಿ ಉಪಸ್ಥಿತರಾಗಿರುತ್ತಿದ್ದರು. ಜೊತೆಗೆ ಆ ದಾನ-ದತ್ತಿಗಳ ರಕ್ಷಣೆ, ಮೇಲ್ವಿಚಾರಣೆ ಮತ್ತು ಗ್ರಾಮಗಳಲ್ಲಿ ಲೋಕೋಪಕಾರಿ ಚಟುವಟಿಕೆಗಳನ್ನು ಕೈಗೊಳ್ಳುವುದು ಇವರ ಕರ್ತವ್ಯಗಳಾಗಿದ್ದವು. ಹಾಗೆಯೇ ಯುದ್ಧದ ಸಂದರ್ಭದಲ್ಲಿ ಮತ್ತು ತಮ್ಮ ಗ್ರಾಮಗಳ ಮೇಲೆ ಬೇರೆಯವರು ದಾಳಿ ಮಾಡಿದ ಸಂದರ್ಭಗಳಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದರು. ಕೂಹುಂಡಿನಾಡಿನ ಕೆಲವು ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಪ್ರಭುಗಾವುಂಡರ ಅಧಿಕಾರ ಮತ್ತು ಅವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

ಬೆಳವಡಿಯ ಕ್ರಿ.ಶ. ೧೦೭೦ರ ಶಾಸನದಲ್ಲಿ-

....ಳೆ.....ತಾರ್ತ್ಥನೊ ದೇವನಿರ್ಮ್ಮಳ.......ವಿದ್ಯಾದಾನಮೆ ತನಗೆ.....
ಪ್ರಾಗ್ರಿಪ್ಪ ಜಿನಮಾರ್ಗ್ಗ....ಧರ್ಮ್ಮಪದ.....ರೆನೆ ನೆಗಳ್ದ ವಿಜಯಿ....
ಭುಜನಕು.....ಬರಮಂ ಮಾತನರುಹ ಪರಮೇಶ್ವರ.....ವರಗುಣ
ಲೋಕೋತ್ತಮರ್ಗುರುಗಳಾಗೆನೇನಾರ್ತ್ಥಿಯೆ ಪುಣ್ಯಮಾ.......
ನರಸಿಂಹಪ್ರಭು ನೆಗಟ್ದಿಂ ಸುಜನ ಜಿನಧರ್ಮ್ಮ ನಿರ್ಮ್ಮಳಂ ॥

ನರಸಿಂಹ ಪ್ರಭುವಿನ ಪ್ರಸ್ತಾಪವಿದೆ.[೧೬೭] ಈತನು ಬೆಳವಡಿಯಲ್ಲಿ ಪ್ರಭುಗಾವುಂಡ ಗೈಯುತ್ತಿದ್ದನು. ಈ ಸಂದರ್ಭದಲ್ಲಿ ತನ್ನ ಕುಟುಂಬದ ಸದಸ್ಯರ ಜೊತೆಯಲ್ಲಿ ಬೆಳವಡಿಯ ಸಹಸ್ರಕೂಟ ಬಸದಿಗೆ ದಾನ ಮಾಡಿದ್ದಾನೆ. ವಣ್ಣೂರದ ಕ್ರಿ.ಶ. ೧೧೧೪ರ ಶಾಸನದಲ್ಲಿ ನಾಡಪ್ರಭುಗಳು ಮತ್ತು ಪ್ರಭು ನಾಗಗಾವುಂಡನ ನಿರೂಪಣೆಯಿದೆ.[೧೬೮] ಇವರು ೬ನೆಯ ವಿಕ್ರಮಾದಿತ್ಯನ ಪುತ್ರ ಮಹಾಮಂಡಳೇಶ್ವರ ಜಯಸಿಂಘದೇವನು ಜಯಂತಿಪುರದ (ಇಂದಿನ ಬನವಾಸಿ) ನೆಲೆವೀಡಿನಲ್ಲಿದ್ದ ಸಂದರ್ಭದಲ್ಲಿ, ಆತನನ್ನು ಭೇಟಿಯಾಗಿ ಅನುಮತಿಯೊಂದಿಗೆ ವಣ್ಣೂರು ಗ್ರಾಮದಲ್ಲಿ ಜಯಸಿಂಘೇಶ್ವರ ದೇವಾಲಯವನ್ನು ನಿರ್ಮಿಸಿದ್ದಾರೆ. ಪ್ರಭು ನಾಗಗಾವುಂಡನು ಈ ದೇವಾಲಯದ ವಿವಿಧ ಧಾರ್ಮಿಕ ಕಾರ್ಯಗಳಿಗೆ ಭೂದಾನ ಮಾಡಿದ್ದಾನೆ. ಇದೇ ಗ್ರಾಮದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ-

ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮದು ಮಹಾಧರ್ಮ್ಮಸ್ಥಳಂ
ಹಿರಿಓರ್ಣ್ನನೂರ ಮಹಾಪ್ರಭು ಚಟ್ಟಿಯರ ಕಲ್ಲಗಾಮುಂಡಂ
ತಂನ ಮಾಡಿಸಿದ ಕ...ಶ್ರೀ ಕಲಿದೇವರ ಚೈತ್ರದ ಪರ್ಬ್ಬ
ಸರ್ವ್ವಾರ್ಚನೆ ರಂಗಪೂಜೆ ಜೀರ್ಣ್ನೋದ್ಧಾರ.........
ಸರ್ವ್ವಬಾಧಾಪರಿಹಾರ.....ಗಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ॥

ಮಹಾಪ್ರಭು ಚಟ್ಟಿಯರ ಕಲ್ಲಗಾಮುಂಡನ ಉಲ್ಲೇಖವಿದೆ.[೧೯೯] ಈತನು ವಣ್ಣೂರದಲ್ಲಿ ಕಲಿದೇವ ದೇವಾಲಯವನ್ನು ನಿರ್ಮಿಸಿ ದಾನ ಮಾಡಿದ್ದಾನೆ. ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನದಲ್ಲಿ–

ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಚೌಡಿಸೆಟ್ಟಿಯರ ಬೆಸದಿಂ
ಕಲ್ಲರ್ಸರ ನಿಯಾಮದಿಂ ಶ್ರೀಮತು ಸುಂಕಾಧಿಕಾರಿ ಮತಗೌಂಡನು
ಚಿಂಚುಣಿಕೆಯ ಪಂಚಮಠಸ್ಥಾನಂಗಳಿಗೆ ಬಿಟ್ಟ ದತ್ತಿ..........

ಮತ್ತು ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ–

ಆ ಚೌಡಿಸೆಟ್ಟಿಯರು ತೀರ್ತ್ಥವಿಶೇಸಮಂ ಬೆಸಗೊಳಲು ನೂಲೆ
ನಾಡೊಳಗಿನ ಮುನಿತನದಿ ಕವಿಳಲಸತೀರ್ತ್ಥಂ..................
ಆ ತೀರ್ಥಕ್ಕದು ಸಾಸನಸ್ಥವೆಂಬುದಂ ಚವುಡಿಸೆಟ್ಟಿಯರು ಕೇಳ್ದು
ನಾಗರಸರೂ ತಾವು ಏಕಸ್ಥರಾಗಿ ಕವಿಳಾಸಪುರದೊಳಗೆ ಸ್ವಯಂಭು
ಮಲ್ಲಿಕಾರ್ಜ್ಜುನ ಸಂಗಮೇಸ್ವರ ನಾಗೇಸ್ವರ ಯೀ ಮೂಱು ಲಿಂಗಕಂ
ಅಂಗಭೋಗ ರಂಗಭೋಗ ಜೀರ್ಣ್ನೋದ್ಧಾರಕ್ಕಂ ಪಾರಣೆಯ
ಜಂಗಮಾರಾಧನೆಗಂ ಕೊತ್ತಸಿ ಕುಱುವನಿಗೆ ತಳವಿರ್ತ್ತಿ ಅಂಕವಲ
ಕೂಂಡಿನಾಡೊಳು ಸಲುವಂತೆ ಹೆಜ್ಜುಗಿಯ ಹಬ್ಬವೊಂಭತ್ತು ದಾನ
ಸುಂಕ ನೂಱೆತ್ತಿನ ಪರಿಹಾರ ಯಿಂತಿನಿತುಮಂ ಸರ್ವ್ವಬಾಧೆ
ಸರ್ವ್ವನಮಸ್ಯವಂ ಮಾಡಿ ಚವುಡಿಸೆಟ್ಟಿಯರು ನಾಗರಸರು
ಯತಿರಾಯ ಹಾಲಬಸವಿದೇವಂಗೆ ಪೂರ್ವ್ವದತ್ತವೆಂದು
ಧಾರಾಪೂರ್ವ್ವಕಂ ಮಾಡಿ ಕೊಟ್ಟರು ॥

ಮಹಾಪ್ರಧಾನ ಸರ್ವಾಧಿಕಾರಿ ಚೌಡಿಸೆಟ್ಟಿಯ ಆಳ್ವಿಕೆ ಮತ್ತು ಧಾರ್ಮಿಕ ಚಟುವಟಿಕೆಗಳ ಪ್ರಸ್ತಾಪವಿದೆ. ಬಡ್ಲಿಯ ಕ್ರಿ.ಶ. ೧೨೪೬ರ, ಯಡ್ರಾವಿಯ ಕ್ರಿ.ಶ. ಸುಮಾರು ೧೩ನೆಯ ಶತಮಾನ ಶಾಸನಗಳಲ್ಲಿಯೂ ಈತನ ನಿರೂಪಣೆಗಳಿವೆ.[೧೭೦] ಈತನು ಪ್ರಾರಂಭದಲ್ಲಿ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯ, ತರುವಾಯ ದೇವಗಿರಿಯ ಸೇವುಣರ ಕನ್ನರದೇವನ ಆಳ್ವಿಕೆಯ ಸಂದರ್ಭದಲ್ಲಿ ಕೂಹುಂಡಿನಾಡಿನ ನೂಲೆನಾಡೊಳಗಿನ ಕವಿಳಾಸಪುರ ಪರಿಸರದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನು ಕಾರ್ತವೀರ್ಯ್ಯಪುರದ (ಪ್ರಾಯಶಃ ಇಂದಿನ ಬಡ್ಲಿ) ಜನಾರ್ಧನ ದೇವಾಲಯಕ್ಕೆ ತನ್ನಾಳ್ವಿಕೆಯ ಕೂಹುಂಡಿನಾಡಿನ ಸುಂಕವನ್ನು ದಾನ ಮಾಡಿದ್ದಾನೆ. ಹಾಗೆಯೇ ಸವದತ್ತಿಯ ನಾಗರಕೆರೆಯ ಮಲ್ಲಿನಾಥ ದೇವಾಲಯಕ್ಕೆ ಎರಡು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ. ಜಗನೂರದ ಕ್ರಿ.ಶ. ೧೨೦೬ರ ಶಾಸನದಲ್ಲಿ ಸರ್ವಾಧಿಕಾರಿ ಕಲ್ಲರಸನ ಉಲ್ಲೇಖವಿದೆ.[೧೭೧] ಈತನು ಕಲ್ಯಾಣದ ಕಲಚೂರಿಯರ ಮಹಾದೇವನ ಆಳ್ವಿಕೆಯ ಸಂದರ್ಭದಲ್ಲಿ ಕೂಹುಂಡಿ–೩೦೦೦ ವಿಭಾಗದ ಆಡಳಿತವನ್ನು

ನೋಡಿಕೊಳ್ಳುತ್ತಿದ್ದನು. ಭೋಜದ ಕ್ರಿ.ಶ. ೧೨೩೬ರ ಶಾಸನದಲ್ಲಿ ಸರ್ವಾಧಿಕಾರಿ ಬಸವಯ್ಯನ ಪ್ರಸ್ತಾಪವಿದೆ.[೧೮೨] ಈತನು ಛತ್ರವನ್ನು ಕಟ್ಟಿಸಿ ಆಹಾರೋಪಚಾರದ ವ್ಯವಸ್ಥೆಗಾಗಿ ಭೂದಾನ ಮಾಡಿದ್ದಾನೆ.

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ–

> ತಥವಾಡಿ ಮಧ್ಯಗ್ರಾಮ ಬಾಗವಾಡೀಪುರವರಾಧಿಸ್ವರಂ ಮಾದಿರಾಜನ
>
> ತನೂಜಂ ಬಸವರಾಜನ ಮಹಿಮೆಯೆಂತೆಂದಡೆ ॥ ಮಂಗಳಕೀರ್ತಿ
> ಪುರಾತನ ಜಂಗಮಲಿಂಗೈಕ ಭಕ್ತಿ ನಿರ್ಭರಲೀಲಾಸಂಗಂ ಸಂಗನಬಸವಂ
> ಸಂಗತಿಯಂ ಮಾಳ್ಕೆಗನವರತಂ ॥ ಸಂಗನಬಸವನ ಅಗ್ರಜ ಲಿಂಗೈಕಂ
> ದೇವರಾಜಮುನಿಪನ ತನೆಯಂ ಜಂಗಮಪರುಸಂ ಸೋವರಸಂಗಂ
> ಪ್ರಿಯಸುತನೆನಿಪ್ಪ ಕಲಿದೇವರಸಂ ॥ ಕಲಿದೇವಮುನಿಪನಾತ್ಮಜ ಸಲೆ
> ಮೂಜಗದೊಳಗೆ ಮೆಱೆವ ಮಾನವದೇವಂ ಗೆಲಿದಂ ಅಶನಬೆಸನವಂ
>
> ಛಲರಧಿಕಂ ಹಾಲಬಸವಿದೇವಮುನೀಸಂ ॥

ಜಗದ್ಗುರು ಬಸವಣ್ಣನ ಪೂರ್ವಜರಾದ ಮಾದಿರಾಜ, ಈತನ ಪುತ್ರ ಸಂಗನಬಸವಣ್ಣ, ಈತನ ಹಿರಿಯ ಸಹೋದರ ದೇವರಾಜಮುನಿಪ, ಈತನ ಪುತ್ರ ಮತ್ತು ಕಾವರಸನ ಶಿಷ್ಯ ಕಲದೇವರಸ, ಈತನ ಪುತ್ರ ಹಾಲಬಸವಿದೇವನ ಉಲ್ಲೇಖವಿದೆ.[೧೮೩] ಇವರೆಲ್ಲರೂ ಕವಿಳಾಸಪುರ ಪರಿಸರದ ಅಧೀಶ್ವರರಾಗಿದ್ದರು. ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಪ್ರಭು ಬಾಚರಸನ ನಿರೂಪಣೆಯಿದೆ.[೧೮೪] ಈತನು ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಆಳ್ವಿಕೆಯ ಸಂದರ್ಭದಲ್ಲಿ ಕಂಕಣವಾಡಿ ಪರಿಸರದಲ್ಲಿ ಪ್ರಭುಗಾವುಂಡ ಗೈಯುತ್ತಿದ್ದನು. ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ಮಹಾಪ್ರಭು ಮೂಲಿಗ ಹೊಳ್ಳಿಗಾವುಂಡನ ಪ್ರಸ್ತಾಪವಿದೆ.[೧೮೫] ಈತನು ದೇವಗಿರಿಯ ಸೇವುಣರ ಕನ್ನರದೇವನ ಆಳ್ವಿಕೆಯ ಸಂದರ್ಭದಲ್ಲಿ ಕುರುಂಬೆಟ್ಟ ಪಟ್ಟಣದಲ್ಲಿ (ಇಂದಿನ ಮಮದಾಪುರ) ಪ್ರಭುಗಾವುಂಡ ಗೈಯುತ್ತಿದ್ದನು. ಕುರುಂಬೆಟ್ಟ ಪಟ್ಟಣದಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ದಂಡನಾಯಕ ಚಾಮುಂಡನು ಮಾಡಿಸಿದ ತ್ರಿಕೂಟಪ್ರಾಸಾದ ದೇವಾಲಯದ ನಂದಾದೀವಿಗೆಗಾಗಿ ತನ್ನ ಮಾನ್ಯದೊಳಗೆ ನೂರು ಕಂಬ ಕೆಯ್ಯ ಮತ್ತು ಒಂದು ಬಣಬೆಯನ್ನು ದಾನ ಮಾಡಿದ್ದಾನೆ.

೩.೨.೧೩. ಗಾವುಂಡರು

ಗಾವುಂಡರು ಪ್ರಭುಗಾವುಂಡರ ಅಧೀನದಲ್ಲಿ ಗ್ರಾಮಗಳ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಒಬ್ಬ ಗಾವುಂಡ ಇರುತ್ತಿದ್ದನು. ಕೆಲವು ಗ್ರಾಮಗಳಲ್ಲಿ ಹಲವು ಗಾವುಂಡರಿದ್ದು, ಇವರೆಲ್ಲರ ಮೇಲೆ ಒಬ್ಬ ಪ್ರಧಾನ ಗಾವುಂಡ ಇರುತ್ತಿದ್ದನು.[೧೮೬] ಗಾವುಂಡತನ ವಂಶಪಾರಂಪರ್ಯವಾಗಿ ಮುಂದುವರೆಯುತ್ತಿತ್ತು. ಇವರು ಗ್ರಾಮದ ಆಡಳಿತ, ರಕ್ಷಣೆ, ಸುಂಕ ಸಂಗ್ರಹಣೆ ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಇದರೊಂದಿಗೆ ಗ್ರಾಮಕ್ಕೆ ಕೊಳ್ಳೆಯ ಬಾಧೆ ಮೊದಲಾದ ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಹೋರಾಡುತ್ತಿದ್ದರು.[೧೮೭] ಕೆಲವು ಗಾವುಂಡರು ಏಕಭೋಗದಿಂದ ಆಳುತ್ತಿದ್ದರು. ವ್ಯಕ್ತಿಯು ತಾನು ಜೀವಂತವಾಗಿರುವರೆಗೆ ಮಾತ್ರ

ಆಡಳಿತ ನಡೆಸುವುದು ಏಕಭೋಗವಾಗಿದೆ. ಈ ಅಧಿಕಾರ ಆತನ ವಂಶಸ್ಥರಿಗೆ ಮುಂದುವರೆಯುವುದಿಲ್ಲ. ಮತ್ತೆ ಕೆಲವರು ತ್ರಿಭೋಗದಿಂದ ಆಳುತ್ತಿದ್ದರು. ಮೂರು ತಲೆಮಾರುಗಳವರೆಗೆ ಒಂದೇ ವಂಶಸ್ಥರು ಆಡಳಿತವನ್ನು ನಡೆಸುವುದು ತ್ರಿಭೋಗವಾಗಿದೆ. ಕೂಹುಂಡಿನಾಡಿನ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಗಾವುಂಡರ ಅಧಿಕಾರ ಮತ್ತು ಇವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

ದೊಡವಾಡದ ಕ್ರಿ.ಶ. ೧೦೭೯ರ ಶಾಸನದಲ್ಲಿ_

ಶ್ರೀಮನ್ಮಹಾಸಾಮನ್ತಂ ಭುಜಬಳ ಕಾವರಸರುಮವರರ್ದ್ಧಾಂಗಿ
ಚಿಕಬ್ಬೆಯರಸಿಯರು ಮಿರ್ಪ್ಪದಿಂಬರ್ಗ್ಗಾಮುಣ್ಡುಗಳೊಮಿರ್ದ್ದು
........ರ ಕಾಳಿಮಯ್ಯಸೆಟ್ಟಿ ಮಾಡಿಸಿದ ಬಸದಿಯಲಿರ್ಪ್ಪ
ಕಾರೆಯಗಣದ ಕುಕ್ಕುಟಸೇನದೇವರ ಕಾಲಂಕರ್ಚ್ಚಿ
ರಿಶಿಯರಾಹಾರದಾನಕ್ಕೆಮೆಂದು.......

ಇಪ್ಪತ್ತು ಗಾವುಂಡರ ಪ್ರಸ್ತಾಪವಿದೆ.[೧೭೮] ಇವರು ಕಾಳಿಮಯ್ಯಸೆಟ್ಟಿ ಎಂಬಾತನು ದೊಡವಾಡದಲ್ಲಿ ನಿರ್ಮಿಸಿದ ಬಸದಿಯ ಮುನಿಗಳ ಆಹಾರದಾನಕ್ಕೆಂದು ಕಪ್ಪು ಮಣ್ಣಿನ ಭೂಮಿಯನ್ನು ದಾನ ಮಾಡಿದ್ದಾರೆ. ನೇಸರಗಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ ಸವದತ್ತಿಯ ರಟ್ಟರ ಳನೆಯ ಕಾರ್ತವೀರ್ಯನ ಮಹಾಪ್ರಧಾನ ಹಬ್ಬನಾಯಕನ ಪುತ್ರ ಬಾಚೆಯನಾಯಕನ ಪ್ರಸ್ತಾಪವಿದೆ.[೧೭೯] ನೇಸರಗಿ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದ ಈತನು ತನ್ನ ತಂದೆಯ ಹೆಸರಿನಲ್ಲಿ ಹಬ್ಬೇಶ್ವರ ದೇವಾಲಯನ್ನು ನಿರ್ಮಿಸಿದ್ದಾನೆ. ಈತನ ಧರ್ಮಪತ್ನಿ ಮಾಯಿದೇವಿ ಮಾಣಿಕೇಶ್ವರ ದೇವಾಲಯವನ್ನು ನಿರ್ಮಿಸಿದ್ದಾಳೆ. ಇದೇ ಶಾಸನದಲ್ಲಿ ಸ್ಥಳೀಯ ಆರು ಗಾವುಂಡರು ಮತ್ತು ಬೆಳ್ಳಿವೆಟ್ಟದ ರಾಚಗಾವುಂಡನ ಪ್ರಶಂಸೆಯಿದೆ. ಇವರು ಬಾಚೆಯನಾಯಕ ಮತ್ತು ಈತನ ಧರ್ಮಪತ್ನಿ ಮಾಯಿದೇವಿ ನಿರ್ಮಿಸಿದ ದೇವಾಲಯಗಳಿಗೆ ಭೂದಾನ ಮಾಡಿದ್ದಾರೆ. ಬೆಳವಡಿಯ ಕ್ರಿ.ಶ. ೧೦೭೫ರ ಶಾಸನದಲ್ಲಿ_

ಚಣ್ಡತಪಸ್ಥರಪ್ಪ ಗುಣಕೀರ್ತ್ತಿಮುನೀನ್ದ್ರರ ನಿರ್ಮ್ಮಳೋದ್ಯಶರ್ಪ್ಪಿಣ್ಡರ
ಗುಡ್ಡನುತ್ತಮವೆನಿಪ್ಪ ನೆಗರ್ತ್ತೆಯನಾನ್ತ ತೈಲಗಾವುಣ್ಡನ ದಾಸಿಕಬ್ಬೆಯ
ತನೂಜನುಮಾವಿಭು ಮಾರಸಿಂಗಗಾವುಣ್ಡನಮೋಘಶೌಣ್ಡನೆಸೆದಂ
ಜಗದನ್ತರದೊಳ್ನಿರನ್ತರಂ ॥ ಜಿನನಧಿದೈವಂ ತನಗಂಗನೆ ಲೋಕಲೆನಾರಿ
ಬಾಗುಡನಾತ್ಮಜ ನೆನಲಾವನೋ ಮಾರಸಿಂಗಗಾವುಣ್ಡನಗ್ಗೈಯ್ದು
ವಿಶೇಷಪುಣ್ಯಮಂ ಗೆಯ್ದಾತ ॥ ಮುನಿಜನದಾಹಾರಕ್ಕಾ
ಜಿನಭವನಕ್ಕಾವಕಾಲಮುಂ ನಡೆದಮುದಿನ್ತೆನೆ ಮಾರಸಿಂಗಗಾವುಣ್ಡ
ನುಮಿತ್ತಂ ಪೊನ್ನನಾ ಕ್ರಮದಿನಯ್ವತ್ತಂ ॥

ತೈಲಗಾವುಂಡ ಮತ್ತು ಈತನ ಪುತ್ರ ಮಾರಸಿಂಗ ಗಾವುಂಡನ ಪ್ರಸ್ತಾಪವಿದೆ.[೧೮೦] ಇವರಿಬ್ಬರೂ ಬೆಳವಡಿಯಲ್ಲಿ ಗಾವುಂಡಗೈಯುತ್ತಿದ್ದರು. ಮಾರಸಿಂಗ ಗಾವುಂಡನು ಬೆಳವಡಿಯ ಸಹಸ್ರಕೂಟ ಬಸದಿಯ ಮುನಿಗಳ ಆಹಾರದಾನಕ್ಕೆ ಐವತ್ತು ಪೊನ್ನಗಳನ್ನು ದಾನ ಮಾಡಿದ್ದಾನೆ. ಈತನ ಧರ್ಮಪತ್ನಿ ಲೋಕಲೆ ಮತ್ತು ಪುತ್ರರಾದ ಬಾಗುಡ, ಚಂದನ ಜೊತೆಗೂಡಿ ಅದೇ ಬಸದಿಯ ಮುನಿಗಳ ಆಹಾರದಾನಕ್ಕೆ

ಇಪ್ಪತ್ತು ಕಾಂಚನಗಳನ್ನು ದಾನ ಮಾಡಿದ್ದಾರೆ.

ಹಣ್ಣಿಕೇರಿಯ ಕ್ರಿ.ಶ. ೧೨೮೯ರ ಶಾಸನದಲ್ಲಿ–

> ನಿರುಪಮ ಹೊಲ್ಲಿಗೌಂಡನ ತನೂಭವನೂರ್ಜ್ಜಿತ ಅಂಮಗಾಮುಂಡ
> ನೀಧರೆಯೊಳು ದಾನದಿಂದೆಸೆವನಾತನ ವಲ್ಲಭೆಗಾವರಾಣಿಯಂ
> ಸರಿಯೆನಬಾರದಾವ್ಯಾಳಜಿಗೌಡಿಗೆ ಮಾಡುವದಾನದರ್ಮ್ಮ
> ಸಚ್ಚರಿತದೊಳೆಂದಡಂತವರ್ಗ್ಗೆ ಹೊಲ್ಲಣನೆಂಬ ತನೂಜನಪ್ಪುದುಂ ॥
> ಅನ್ತು ಪುತ್ರಪೌತ್ರಕಳತ್ರ ಸಮನ್ವಿತಂ ಪರ್ಮ್ಮಾನುರಾಗಸುಖದಿಂದಿರ
> ಲೊಂದುದಿನ ಯೆಪ್ಪತ್ತುಂ ಬಾಡದ ಪ್ರವಿದ್ಧ ಹರಳೆಂಟುಂಬಾಡದ
> ಚಿಂಚುಣಿಕೆಯ ಮೂಲಸ್ವಾಮಿ ಶ್ರೀಮನ್ಮಹಾಪ್ರಭು ಮುರಿಯರಂಮ
> ಗಾಮುಂಡಂ ತಂನೂರ ಮಧ್ಯದೊಳು ಶ್ರೀಮದೆಳ್ಕೋಟಿ
> ಮಹಾದೇವರಾಜ್ಞೆಯಿಂ ಜ್ಯೋಗವಟ್ಟಿಗೆಯಂ ಧರಿಯ್ಸಿ ಮಾನಸ್ತಂಭ
> ಮಕರತೋರಣ ಪಂಚಮಹಾಶಬ್ದವಿಭೂತಿಸಮನ್ವಿತಂ ಸಕಳದು
> ಕರ್ಮ್ಮನಿರ್ಮ್ಮೂಳನಾರ್ಥಂ ಶ್ರೀಪಾರ್ಶ್ವಜಿನೇಂದ್ರಭವನಮಂ
> ಮಾಡ್ಸಿ..............................

ಹೊಲ್ಲಿಗಾವುಂಡ, ಮಹಾಪ್ರಭು ಮೂಲಿಗ ಮುರಿಯರ ಅಮ್ಮಗಾವುಂಡ, ವ್ಯಾಳಜಿಗೌಡಿಯ ಪ್ರಸ್ತಾಪವಿದೆ.[೧೮೧] ಇವರು ಹಣ್ಣಕೇರಿ ಗ್ರಾಮದಲ್ಲಿ ಗಾವುಂಡಗೈಯುತ್ತಿದ್ದರು. ಅಮ್ಮಗಾವುಂಡನು ಏಳ್ಕೋಟಿ ಮಹಾದೇವನ ಆಜ್ಞೆಯಂತೆ ಜೋಗವಟ್ಟಿಗೆಯನ್ನು ಧರಿಸಿ ಹಣ್ಣಿಕೇರಿ ಗ್ರಾಮದಲ್ಲಿ ಮಾನಸ್ತಂಭ, ಮಕರತೋರಣ ಸಹಿತವಾಗಿ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿ, ಇದರ ವಿವಿಧ ಧಾರ್ಮಿಕ ಕಾರ್ಯಗಳಿಗೆ ಭೂದಾನ ಮಾಡಿದ್ದಾನೆ. ಮದಲೂರದ ಕ್ರಿ.ಶ. ೧೦೯೨ರ ವೀರಗಲ್ಲು ಶಾಸನದಲ್ಲಿ ಜಕ್ಕಿವಾಡದ ಗಣಿಗರ ಸೋಮಗಾವುಂಡನ ಉಲ್ಲೇಖವಿದೆ.[೧೮೨] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಸಂದರ್ಭದಲ್ಲಿ ಕುರಿಂಬ ಗಾಳಿಗನು (ಕೋಟೆಯ ಕಾವಲುಗಾರ ಅಥವಾ ಉಗ್ರಾಣದ ಯಜಮಾನ) ಜಕ್ಕಿವಾಡವನ್ನು ಮುತ್ತಿದಾಗ ಅವನೊಂದಿಗೆ ಹೋರಾಡಿ ಮರಣವನ್ನಪ್ಪಿದ್ದಾನೆ. ಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಕುಳ್ಳೆಯ ಕೇತಗಾವುಂಡನ ನಿರೂಪಣೆಯಿದೆ.[೧೮೩] ಈತನ ಪುತ್ರಿ ಗಂಗವ್ವೆ ಯಾಪನೀಯ ಸಂಘ ಪರಂಪರೆಯ ಮುನಿಚಂದ್ರದೇವನು ಸನ್ಯಸನ ವಿಧಿಯಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ನಿಷಿಧಿಗಲ್ಲನ್ನು ನಿಲ್ಲಿಸಿದ್ದಾಳೆ. ಯಡ್ರಾವಿಯ ಕ್ರಿ.ಶ. ೯೭೯ರ ಶಾಸನದಲ್ಲಿ–

> ಎಳರಾಮೆಯ ಪನ್ನಿರ್ವ್ವರ್ಗ್ಗಾವುಣ್ಡು ಗಳೆಯೊಳ್ ವಿದಿಜಿ.....
> ತೆಯು ಚಲದ ವಿಕ್ರಮಮಪ್ಪಯ್ದಸದುದಜಿಂದ ॥ ....
> ಮಾದೆಳೆರಾಮೆಯ ಪನ್ನಿರ್ವ್ವರ್ಗ್ಗಾವುಣ್ಡುಗಳ್ಮಿಟ್ಟಿದಲ್ಲಿಯವದ್ದಾಚಾರ್ಯ್ಯರಂ ॥

ಹನ್ನೆರಡು (ಪನ್ನಿರ್ವ್ವ) ಗಾವುಂಡರ ಪ್ರಸ್ತಾಪವಿದೆ.[೧೮೪] ಯಡ್ರಾವಿಯಲ್ಲಿ ಗಾವುಂಡಗೈಯುತ್ತಿದ್ದ ಇವರು ಸ್ಥಳೀಯ ಬಸದಿಗೆ ಭೂದಾನ ಮಾಡಿದ್ದಾರೆ. ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಹನ್ನೆರಡು

ಗಾವುಂಡರ ನಿರೂಪಣೆಯಿದೆ.[೧೮೫] ಇವರು ಸವದತ್ತಿಯಲ್ಲಿ ಗಾವುಂಡಗೈಯುತ್ತಿದ್ದರು. ಸವದತ್ತಿಯ ರಟ್ಟರ ಲಕ್ಷ್ಮೀದೇವನು ತನ್ನ ತಂದೆ ಮಲ್ಲಿಕಾರ್ಜುನನ ಪರೋಕ್ಷ ವಿನಯಾರ್ಥವಾಗಿ ಸವದತ್ತಿಯ ನಾಗರಕೆರೆಯ ಹತ್ತಿರ ನಿರ್ಮಿಸಿದ ಮಲ್ಲಿನಾಥ ದೇವಾಲಯದ ವಿವಿಧ ಧಾರ್ಮಿಕ ಕಾರ್ಯಗಳಿಗೆ ರಾಜಗುರು ಮುನಿಚಂದ್ರದೇವನ ಆಜ್ಞೆಯಂತೆ ಮುನವಳ್ಳಿ ಮತ್ತು ಅಸುಂಡಿ ಗ್ರಾಮಗಳ ಪರಿಸರದಲ್ಲಿ ಆರುನೂರು ಕಂಬಗಳ ಅಳತೆಯ ಮನೆಯನ್ನು ದಾನ ಮಾಡಿದ್ದಾರೆ. ಇದೇ ಶಾಸನದಲ್ಲಿ ಕೌದಿಯ ಮಾದಿಗಾವುಂಡ, ಕಡಲೆಯ ನಾಗಗಾವುಂಡ, ಯಡ್ರಾವಿಯ ಹನ್ನೆರಡು ಗಾವುಂಡರ ಪ್ರಸ್ತಾಪವಿದೆ. ಇವರು ಇತರರೊಂದಿಗೆ ಜೊತೆಗೂಡಿ ಪ್ರಸ್ತುತ ದೇವಾಲಯದಲ್ಲಿ ನಿತ್ಯೋಪಹಾರಕ್ಕೆಂದು ಭೂದಾನ ಮಾಡಿದ್ದಾರೆ.

ಜಗನೂರದ ಕ್ರಿ.ಶ.೧೧೬೭ರ ಶಾಸನದಲ್ಲಿ ಗುಡ್ಡಗಾವುಂಡನ ಪ್ರಸ್ತಾಪವಿದೆ.[೧೮೬] ಈತನು ಕಲ್ಯಾಣದ (ಮಂಗಳವೇಡೆ) ಕಲಚೂರಿಯರ ಇಮ್ಮಡಿ ಬಿಜ್ಜಳದೇವನು ಕೂಹುಂಡಿ-೩೦೦೦ ವಿಭಾಗದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಜಗನೂರದಲ್ಲಿ ಗಾವುಂಡಗೈಯುತ್ತಿದ್ದನು. ವೈಜರಾಸಯ್ಯ, ವಿಟ್ಟರಾಸಯ್ಯ ಮೊದಲಾದವರೊಂದಿಗೆ ಕೂಡಿಕೊಂಡು ಬಾಮಿನಾಳದ ಸ್ವಯಂಭೂ ಸಿದ್ಧೇಶ್ವರ ದೇವಾಲಯಕ್ಕೆ ಭೂದಾನ ಮಾಡಿದ್ದಾನೆ. ದೊನವಾಡದ ಕ್ರಿ.ಶ. ಸುಮಾರು೧೨ನೆಯ ಶತಮಾನದ ಶಾಸನದಲ್ಲಿ ಗಾವುಂಡನ ಉಲ್ಲೇಖವಿದೆ.[೧೮೭] ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಬೇಡಕಿಹಾಳದ ಕ್ರಿ.ಶ. ೧೦೦೦ರ ತಾಮ್ರಪಟ ಶಾಸನದಲ್ಲಿ ಸೆಟ್ಟಿಗುತ್ತ ಗಾವುಂಡಸ್ವಾಮಿಯ ಪ್ರಸ್ತಾಪವಿದೆ.[೧೮೮] ಈತನು ಮಳನಾಗಸೆಟ್ಟಿಯನ್ನು ಕೊಂದ ಬೇಡರ ಸಣ್ಣನಾಕನನ್ನೊಳಗೊಂಡಂತೆ ಈತನ ಕುಟುಂಬದ ಇತರರನ್ನು ಕೊಲ್ಲುವ ಮೂಲಕ ಸೇಡನ್ನು ತಿರಿಸುಕೊಂಡ ಬಾರಿಕ ರೇವಣನಿಗೆ ಇತರರೊಂದಿಗೆ ಕೂಡಿಕೊಂಡು 'ಪಗೆಯ ಬೆಂಕೊಳ್ವ' (ಶತ್ರುಗಳ ಬೇಟೆಗಾರ) ಎಂಬ ಬಿರುದು ಮತ್ತು ದತ್ತಿಯನ್ನು ಕೊಟ್ಟಿದ್ದಾನೆ. ಬೆನಿವಾಡದ ಕ್ರಿ.ಶ. ಸುಮಾರು೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಗಾವುಂಡರ ಉಲ್ಲೇಖವಿದೆ.[೧೮೯] ಇವರು ಬೆನಿವಾಡದಲ್ಲಿ ಗಾವುಂಡಗೈಯುತ್ತಿದ್ದರು. ಇಲ್ಲಿ ಮಹಾಸಾಮಂತನೊಬ್ಬನು ನಿರ್ಮಿಸಿದ ಪಾರ್ಶ್ವನಾಥ (?) ಬಸದಿಯ ಜೀರ್ಣೋದ್ಧಾರ, ಮುನಿಗಳ ಆಹಾರದಾನಕ್ಕೆ ಎಂಟ್ಟುಹಿಟ್ಟುಗಳು ಮೊದಲಾದ ವ್ಯಾಪಾರಿಗಳು ಕೊಡಮಾಡಿದ ಭೂದಾನವನ್ನು ಈ ಗಾವುಂಡರಿಗೆ ಪ್ರತಿಪಾಲಿಸಲು (ರಕ್ಷಿಸಲು) ಸೂಚಿಸಲಾಗಿದೆ. ಬೆಳವಿಯ ಕ್ರಿ.ಶ.೧೦೫೩ರ ಶಾಸನದಲ್ಲಿ ಸವದತ್ತಿಯ ರಟ್ಟರ ಅಂಕರಸನ ಆಳ್ವಿಕೆಯ ಸಂದರ್ಭದಲ್ಲಿ ಬೆಳವಿಯಲ್ಲಿ ಗಾವುಂಡಗೈಯುತ್ತಿದ್ದ ಊರೊಡೆಯ ಕಾಳಿದಾಸಯ್ಯನ ನಿರೂಪಣೆಯಿದೆ.[೧೯೦] ಈತನ ನೇತೃತ್ವದ ಐನೂರು ಮಹಾಜನರ ಸತ್ರಕ್ಕೆ ಇಪ್ಪತ್ತು ಗದ್ಯಾಣ ಮತ್ತು ಪಣವನ್ನು ದಾನ ಮಾಡಲಾಗಿದೆ.

ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನದಲ್ಲಿ–

ಸ್ವಸ್ತಿ ಸಮಸ್ತಗುಣಸಮ್ಪನ್ನ ನುಡಿದುಮತ್ತನ್ನಸಂಗ್ರಾಮ ಜತ್ತುಲಿಟ್ಟ
ವೈ....ಪವಿತ್ರ ಸುಜನೈಕಮಿತ್ರನಾಶ್ರಿತಜನಕಲ್ಪವೃಕ್ಷಪ್ರತಿಕಾರ್ಯ್ಯದಕ್ಷ

ತೇರಿದಾಳದ ಮಲ್ಲ.....................ರ್ವ್ವರ ವೀರ ಸಿಂಘಮಪ್ಪ
ಬುವನಗಾವುಣ್ಡಾನುಂ ಹೆಮ್ಮಗಾವುಣ್ಡನುಮಯುನ ಚವುಣ್ಡಯನ
ಮಕ್ಕ......... ದಿವಳ ಮಾಚಿಯರಂ ಹೋಚಿ ಬೋಚಿಯಂ
ಚನ್ದುಕರಸೂರನು ಕಾವಸೆಟ್ಟಿಯ ಲ.............ಕಲಿಗನುಂ ಒಳಗಾಗಿ
ಖಿಳಗಿಳದ ಮಹಾಮಣ್ಡಳೇಶ್ವರಂ ಗಣ್ಡರಾದಿತ್ಯದೇವನಂ
.............ಯುಂ ಬನ್ದಗ್ಗಜವಾಡಮಂ ಮುತ್ತಿದಾಗಳಿದಿರೆತ್ತಿ
ಕಾದಿ ಪಲರಂ ಕೊನ್ದು.....

ಹೆಮ್ಮಗಾವುಂಡನ ಉಲ್ಲೇಖವಿದೆ.[೯೧] ಈತನು ಪ್ರಾಯಶಃ ತೇರದಾಳದಲ್ಲಿ ಗಾವುಂಡಗೈಯುತ್ತಿದ್ದಂತೆ ತೋರುತ್ತದೆ. ಈತನ ಮಕ್ಕಳು (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರುಗಳು ಸ್ಪಷ್ಟವಿಲ್ಲ) ಕೊಲ್ಲಾಪುರದ ಶಿಲಾಹಾರ ಮನೆತನದ ಮಹಾಮಂಡಳೇಶ್ವರ ಗಂಡರಾದಿತ್ಯದೇವನ ಅಧಿಕಾರಿ (ದಂಡನಾಯಕ) ಕಾವಸೆಟ್ಟಿ ದಿಗ್ಗಜವಾಡವನ್ನು (ಇಂದಿನ ದಿಗ್ಗೇವಾಡಿ) ಮುತ್ತಿದ್ದ ಸಂದರ್ಭದಲ್ಲಿ, ಆತನನ್ನು ಎದುರಿಸಲು ತೇರಿದಾಳದ ಮುಖ್ಯಸ್ಥನಾದ ಭುವನಗಾವುಂಡನಿಗೆ ಸಹಾಯ ಮಾಡಿದ್ದಾರೆ. ಗೋಕಾಕ ತಾಲ್ಲೂಕಿನ ಕೊಣ್ಣೂರಿನ ಕ್ರಿ.ಶ. ೧೦೩೭ರ ಶಾಸನದಲ್ಲಿ ಕಲಿಯಗಾವುಂಡನ ಪ್ರಸ್ತಾಪವಿದೆ.[೯೨] ಈತನು ಕೊಣ್ಣೂರಿನಲ್ಲಿ ಗಾವುಂಡಗೈಯುತ್ತಿದ್ದನು. ಈ ಸಂದರ್ಭದಲ್ಲಿ ಸ್ಥಳೀಯ ಕಯಮೇಶ್ವರ ದೇವಾಲಯಕ್ಕೆ ಭೂಮಿ, ಮನೆಯ ನಿವೇಶನ, ಎಣ್ಣೆಯ ಗಾಣ, ಗದ್ಯಾಣ, ಪೊನ್ನ, ಅರುವಣ ಎಂಬ ನಾಣ್ಯಗಳು ಮೊದಲಾದವುಗಳನ್ನು ದಾನ ಮಾಡಿದ್ದಾನೆ. ಕೊಣ್ಣೂರಿನ ಕ್ರಿ.ಶ. ೧೦೮೭ರ ಶಾಸನದಲ್ಲಿ ಸೋರಿಗಾಂಕವಿಭು, ಬಲ್ಲಕಲ್ಲಗಾವುಂಡ, ಕಲಿದೇವ, ಬಲದೇವ, ನಿಧಿಯಮ ಗಾವುಂಡನ ನಿರೂಪಣೆಯಿದೆ.[೯೩] ಇವರು ಕೊಣ್ಣೂರಿನಲ್ಲಿ ಗಾವುಂಡಗೈಯುತ್ತಿದ್ದರು. ಮಹಾಪ್ರಭು ನಿಧಿಯಮ ಗಾವುಂಡನು ಕಾಲಾಂತರದಲ್ಲಿ ಗಾವುಂಡ ಸ್ಥಾನದಿಂದ ಪ್ರಭುಗಾವುಂಡನ ಸ್ಥಾನವನ್ನು ಪಡೆದಿರುವುದು ಗಮನಾರ್ಹವಾಗಿದೆ. ಈತನು ತನ್ನ ಅಧಿಕಾರದ ಅವಧಿಯಲ್ಲಿ ಕೊಣ್ಣೂರಿನಲ್ಲಿ ಪಾರ್ಶ್ವನಾಥ (?) ಬಸದಿಯನ್ನು ನಿರ್ಮಿಸಿ, ಇದರ ವಿವಿಧ ಧಾರ್ಮಿಕ ಕಾರ್ಯಗಳಿಗೆ ತನ್ನ ಮಾನ್ಯದೊಳಗಿನ ಹಿಂಡಾಧಿಯ ಹೊಲದಲ್ಲಿ ಕೂಣ್ಡಿಯ ಕೋಲಿನ ಅಳತೆಯ ಪ್ರಕಾರ ಹನ್ನೆರಡು ಮತ್ತರು ಭೂಮಿ, ಒಂದು ಮನೆ, ಒಂದು ಗಾಣ, ತೋಟವನ್ನು ತಳವೃತ್ತಿಯಾಗಿ ಕೊಟ್ಟಿದ್ದಾನೆ. ಹಾಗೆಯೇ ಈ ಬಸದಿಯ ಮುಂಭಾಗದಲ್ಲಿ ಮಾನಸ್ತಂಭವನ್ನು ನಿರ್ಮಿಸಿ, ಮತ್ತೆ ಒಂದು ಮನೆ ಮತ್ತು ಕೂಣ್ಡಿಯ ಕೋಲಿನ ಅಳತೆಯ ಪ್ರಕಾರ ನೂರ್ಮೆವತ್ತು ಕಮ್ಮ ಭೂಮಿಯನ್ನು ದಾನ ಮಾಡಿದ್ದಾನೆ. ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ಗಾವುಂಡರ ಪ್ರಸ್ತಾಪವಿದೆ.[೯೪] ಇವರು ದೇವಗಿರಿಯ ಸೇವುಣರ ಕನ್ನರದೇವನ ಆಳ್ವಿಕೆಯ ಸಂದರ್ಭದಲ್ಲಿ ಕುರುಂಬೆಟ್ಟ ಪಟ್ಟಣದಲ್ಲಿ (ಇಂದಿನ ಮಮದಾಪುರ) ಗಾವುಂಡ ಗೈಯುತ್ತಿದ್ದನು. ಕುರುಂಬೆಟ್ಟ ಪಟ್ಟಣದಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ದಂಡನಾಯಕ ಚಾಮುಂಡನು ಮಾಡಿಸಿದ ತ್ರಿಕೂಟಪ್ರಾಸಾದ ದೇವಾಲಯಕ್ಕೆ ಕಾಕತೀಯವಾಡದಲ್ಲಿ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದ್ದಾರೆ.

ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ ಹನ್ನೆರಡು ಗಾವುಂಡರ ಉಲ್ಲೇಖವಿದೆ.[೯೫] ಇವರು ತೇರದಾಳದಲ್ಲಿ ಗಾವುಂಡಗೈಯುತ್ತಿದ್ದರು. ಇವರೆಲ್ಲರೂ ತೇರದಾಳದಲ್ಲಿ ಮಹಾಸಾಮಂತ

ಗೊಂಕದೇವರಸನು ನಿರ್ಮಿಸಿದ ನೇಮಿನಾಥ ಬಸದಿಯ ವಿವಿಧ ಧಾರ್ಮಿಕ ಚಟುವಟಿಕೆಗಳಿಗೆ ಇತರರೊಂದಿಗೆ ಕೂಡಿಕೊಂಡು ಭೂದಾನ ಮಾಡಿದ್ದಾರೆ. ಮಂಟೂರದ ಕ್ರಿ.ಶ. ೧೧೪೧ರ ಶಾಸನದಲ್ಲಿ–

ಸ್ವಸ್ತಿ ಯಮ ನಿಯಮ ಸ್ವಾಧ್ಯಾಯ ಜಪ ಹೋಮಾನುಷ್ಠಾನ
ಪರಾಯಣರಪ್ಪ ದೆಯ್ವದ ಮಂಟೂರೊಡೆಯ ಮಧುಸೂದನಯ್ಯ
ಪ್ರಮುಖ ಮಹಾಜನಂ ರಟ್ಟಸಮುದ್ರವನಗಳಿಸಲೆಂದು ಪಡೆದದಾ.....
ರ್ತ್ಥಮಾವುದೆನ್ನೊಡೂರೊಳೇನೊನ್ದು ಪುಟ್ಟಿದ ದಣ್ಡಾಯಮೆಲ್ಲಂ
ಕೆಱಿಗೆ....ಪ್ರತಿಸಿದ್ಧಾಯದೊಳಯ್ವತ್ತು ಗದ್ಯಾಣ ಪೊನ್ನಾಚಂದ್ರಾರ್ಕ್ಕ
ತಾರಂ....ನಡೆವುಸಿಸೆಱಿಗ ಮಹಾನ್ರಿಪತಿಯ ದಾನಮಿನ್ನು ಸೌರ್ಯ್ಯ....||

ಮಂಟೂರು ಗ್ರಾಮದ ಒಡೆಯನಾದ ಮಧುಸೂದನಯ್ಯನ ನಿರೂಪಣೆಯಿದೆ.[೯೯] ಈತನು ಸವದತ್ತಿಯ ರಟ್ಟರ ಎರೆಗನ ಆಳ್ವಿಕೆಯ ಸಂದರ್ಭದಲ್ಲಿ ಮಂಟೂರದಲ್ಲಿ ಗಾವುಂಡಗೈಯುತ್ತಿದ್ದನು. ಈ ಸಂದರ್ಭದಲ್ಲಿ ಎರೆಗನು ದಂಡದಿಂದ ಬಂದ ಆದಾಯವನ್ನು (ಐವತ್ತು ಗದ್ಯಾಣಗಳು) ರಟ್ಟಸಮುದ್ರ ಕೆರೆಯ ನಿರ್ಮಾಣಕ್ಕಾಗಿ ಈತನಿಗೆ ಕೊಟ್ಟಿದ್ದಾನೆ. ತೇರ್ಣಿಯ ಕ್ರಿ.ಶ. ೧೧೬೨ರ ಶಾಸನದಲ್ಲಿ–

ದೇರಿದಾಳದ ಕನ್ನಗಾವುಣ್ಡ ಮಾಡಿಸಿದ ರಟ್ಟ ಜಿನಾಳಯಕ್ಕೆ
ಖಣ್ಡಸ್ಫುಟಿತ ನವಕರ್ಮ್ಮ ವಿರೂನ್ನದಾನ ನಿಮಿತ್ತದಿಂ ಪೂರಿಂ
ತೆಂಕಲು ಬಿಟ್ಟ ತಳವ್ರಿತ್ತಿ ಕೂಣ್ಡಿಯ ಪಿರಿಯಕೋಲ
ಮತ್ತರ್ ಪನ್ನೆರಡದಕ್ಕೆ ಸೀಮೆ............................

ಕನ್ನಗಾವುಂಡನ ಧಾರ್ಮಿಕ ಚಟುವಟಿಕೆಗಳ ಪ್ರಸ್ತಾಪವಿದೆ.[೯೭] ಈತನು ದೇರಿದಾಳದಲ್ಲಿ ಗಾವುಂಡಗೈಯುತ್ತಿದ್ದನು. ಈ ಸಂದರ್ಭದಲ್ಲಿ ರಟ್ಟಜಿನಾಲಯವನ್ನು ನಿರ್ಮಿಸಿದ್ದಾನೆ. ಆದರೆ ಈ ಜಿನಾಲಯವು ಯಾವ ತೀರ್ಥಂಕರನದೆಂಬುದು ಸ್ಪಷ್ಟವಿಲ್ಲ.

೩.೩. ಹೊಯ್ಸಳರ ನಂತರದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ

ದೇವಗಿರಿಯ ಸೇವುಣರು ಮತ್ತು ದೋರಸಮುದ್ರದ ಹೊಯ್ಸಳರ ತರುವಾಯ ಕೂಹುಂಡಿನಾಡಿನ ಪ್ರದೇಶದ ಪೂರ್ವ–ಉತ್ತರ ಭಾಗವು ಕ್ರಮವಾಗಿ ಮೊಗಲರು, ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು ಹಾಗೂ ದಕ್ಷಿಣ–ಪಶ್ಚಿಮ ಭಾಗವು ವಿಜಯನಗರ ಮನೆತನಗಳ ಆಡಳಿತಕ್ಕೊಳಪಟ್ಟಿತ್ತು. ಬಹಮನಿ ಸಾಮ್ರಾಜ್ಯದ ಸ್ಥಾಪಕನಾಗಿದ್ದ ಹಸನಗಂಗು ಈ ಪ್ರದೇಶದ ಇಂದಿನ ಬೆಳಗಾವಿ ತಾಲ್ಲೂಕಿನ ಕುಡಚಿ ಗ್ರಾಮದಲ್ಲಿ ಕೆಲಕಾಲ ತಂಗಿದ್ದನು. ಪೇಶ್ವೆಗಳ ಆಳ್ವಿಕೆಯಲ್ಲಂತೂ ಈ ಪ್ರದೇಶವು ಅವರ ಅಧೀನಕ್ಕೆ ಒಳಪಟ್ಟಿದ್ದಿತ್ತು. ಇನ್ನಿತರ ಕಡೆಗಳಂತೆ ಈ ಪ್ರದೇಶದಲ್ಲೂ ಅನೇಕ ದೇಸಗತಿ ಸಂಸ್ಥಾನಗಳು ಹುಟ್ಟಿಕೊಂಡವು. ಇವುಗಳಲ್ಲಿ ಚಚಡಿ, ಶಿರಸಂಗಿ, ತಲ್ಲೂರು, ತೊರಗಲ್ಲ, ರಾಮದುರ್ಗ, ಕಿತ್ತೂರು, ಬೆಳವಡಿ ಮೊದಲಾದ ದೇಸಗತಿ ಸಂಸ್ಥಾನಗಳು ಮಹತ್ವದ್ದೆನಿಸಿವೆ. ಕ್ರಿ.ಶ. ಸುಮಾರು ೧೭ನೆಯ ಶತಮಾನದ ಉತ್ತರಾರ್ಧದಲ್ಲಿ ಮರಾಠಾ ರಾಜ್ಯದ ಶಿವಾಜಿಯ ಪ್ರಾಬಲ್ಯದೊಂದಿಗೆ ಈ ಪ್ರದೇಶದಲ್ಲಿ ಮರಾಠರ ಆಡಳಿತ ಆರಂಭವಾಯಿತು. ಮರಾಠರ ಸರದಾರರು ಅಲ್ಲಲ್ಲಿ ನೇಮಕವಾದರು. ತದನಂತರ

ಪೇಶ್ವೆಗಳ ಆಡಳಿತ ಪ್ರಾರಂಭವಾಗಿ ಹುಕ್ಕೇರಿ, ವಂಟಮುರಿ, ಕಿತ್ತೂರು ದೇಸಾಯಿಗಳ ಆಡಳಿತ ಭದ್ರಗೊಂಡವು. ತಲಾ ಒಂದು ವೀರಶೈವ ದೇಸಗತಿ ಮನೆತನಗಳು ಒಂದೊಂದು ವೀರಶೈವ ಮಠವನ್ನು ಹೊಂದಿದ್ದವು. ಈ ಎಲ್ಲ ಮನೆತನಗಳು ಇನ್ನಿತರ ಕಡೆಗಳಂತೆ ಮುಂದೆ ಬ್ರಿಟಿಷರ ಅಧೀನಕ್ಕೆ ಒಳಪಟ್ಟವು. ಈ ಕಾಲದಲ್ಲಿ ಅನೇಕ ರಾಜಕೀಯ ಏರಿಳಿತಗಳು ಸಂಭವಿಸಿದವು.[೧೯೮] ಈ ಸಂಸ್ಥಾನಗಳ ವಿವಿಧ ಆಯಾಮಗಳ ಕುರಿತಾಗಿ ಅನೇಕ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಎಸ್.ಎಸ್. ಒಡೆಯರ, ಗಾ.ಸ. ಹಾಲಪ್ಪ, ಬಾಳಣ್ಣ ಶೀಗಿಹಳ್ಳಿ, ಶೈಲಜಾ ಪೂಜಾರ, ಸಂತೋಷ ಹಾನಗಲ್ಲ ಮೊದಲಾದವರು ಮುಖ್ಯರಾಗಿದ್ದಾರೆ.

ಬ್ರಿಟಿಷರನ್ನು ಭಾರತದಿಂದ ತವರೂರಿಗೆ ಓಡಿಸಲು ಈ ಪ್ರದೇಶದಲ್ಲೂ ತೀವ್ರ ಸ್ವರೂಪದಲ್ಲಿ ಸ್ವಾತಂತ್ರ್ಯ ಚಳವಳಿಗಳು ನಡೆದವು. ಅದರಲ್ಲಿ ಬೆಳಗಾವಿಯಲ್ಲಿ ನಡೆದ ಅನೇಕ ಸಭೆ-ಸಮಾರಂಭಗಳು ವಿಶೇಷ ಪಾತ್ರ ನಿರ್ವಹಿಸಿದವು. ಈ ಕಾಲದಲ್ಲಿ ಅನೇಕ ಸ್ಮಾರಕಗಳು ನಿರ್ಮಾಣವಾದವು. ೧೯೪೭ರಲ್ಲಿ ಸ್ವಾತಂತ್ರ್ಯ ದೊರೆತ ನಂತರ ಕ್ರಮೇಣವಾಗಿ ಈ ಪ್ರದೇಶದ ಸಾಂಸ್ಕೃತಿಕ ಅಭಿವೃದ್ಧಿಗೆ ಅನೇಕರು ಶ್ರಮಪಟ್ಟಿರುವ ನಿದರ್ಶನಗಳಿವೆ. ಇವುಗಳಲ್ಲದೆ ವೀರಶೈವ ಮಠಗಳು, ಸಂಘ-ಸಂಸ್ಥೆಗಳು ಉದಯಿಸಿದವು. ಅವುಗಳಲ್ಲಿ ಕೆ.ಎಲ್.ಇ. ಸಂಸ್ಥೆ, ದಕ್ಷಿಣ ಭಾರತ ಜೈನ ಸಭಾ ಮೊದಲಾದ ಸಂಘ-ಸಂಸ್ಥೆಗಳ ಕೊಡುಗೆಗಳು ಅಪಾರವಾಗಿದೆ. ಈ ನಿಟ್ಟಿನಲ್ಲಿ ಬೆಳವಡಿ ಮತ್ತು ಕಿತ್ತೂರು ಸಂಸ್ಥಾನಗಳ ಪಾತ್ರ ಗಮನಾರ್ಹವಾಗಿದೆ.

೩.೪. ಆಡಳಿತಾಧಿಕಾರಿಗಳು

ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರಿಗೆ ಆಡಳಿತದಲ್ಲಿ ಸಹಾಯಕರಾಗಿ ಕೆಲವು ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದರು. ಕೂಹುಂಡಿನಾಡಿನ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ವಿವಿಧ ಅಧಿಕಾರಿಗಳ ಅಧಿಕಾರದ ಸ್ವರೂಪ ಮತ್ತು ಇವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

೩.೪.೧. ದಂಡನಾಯಕರು

ಅರಸರು, ಮಹಾಮಂಡಳೇಶ್ವರರು ಮತ್ತು ಮಹಾಸಾಮಂತರು ಸಾಮ್ರಾಜ್ಯದ ತೆರಿಗೆ, ಸೈನ್ಯ, ವಿದೇಶಾಂಗ ಮೊದಲಾದ ಇಲಾಖೆಗಳಿಗೆ ದಂಡನಾಯಕರನ್ನು ನೇಮಿಸುತ್ತಿದ್ದರು. ನೇಮಕದ ಸಂದರ್ಭದಲ್ಲಿ ಇವರಿಗೆ ದಂಡವನ್ನು ಸಾಂಕೇತಿಕವಾಗಿ ಕೊಡಲಾಗುತ್ತಿತ್ತು. ಹೀಗಾಗಿ ಇವರನ್ನು 'ದಂಡನಾಯಕರು' ಎಂದು ಕರೆಯಲಾಗುತ್ತಿತ್ತು.[೧೯೯] ಇವರು ನೇಮಕಕ್ಕೆ ಮುಂಚೆ ಹಲವು ಬಗೆಯ ಪರೀಕ್ಷೆಗಳಲ್ಲಿ ಯಶಸ್ವಿಯಾಗಬೇಕಾಗಿತ್ತು. ಮಲ್ಲಿಕಾರ್ಜುನನು 'ಸೂಕ್ತಿಸುಧಾರ್ಣವ' ಕಾವ್ಯದಲ್ಲಿ ದಂಡನಾಯಕರ ಅರ್ಹತೆಯನ್ನು–

ಮಧುರಾಳಾಪಪ್ರಸಂಗಂ ಪರಹಿತನಮಳಂ ಸರ್ವಸನ್ನಾಹ ಶಸ್ತ್ರಾ
ಯುಧಸಾರಂ ಭಾರಕಾರ್ಯಂ ರಿಪುಜಯಪಟು ಸಾಮಂತ ಶಿಷ್ಟೇಷ್ಟನಾನಾ
ವಿಧಿತಂತ್ರಂ ನಿಷ್ಕಳಂಕಂ ಋಜುಮತಿ ಕುಶಲಂ ಸತ್ಯಶೌಚಾಭಿಮಾನಾಂ
ಬುಧಿಯರ್ಥೋದ್ಯೋಗಿ ಶಕ್ತಿತ್ರಯ ನಿಧಿಯೆನೆ ಸಂದಿರ್ದವಂ ದಂಡನಾಥಂ ॥

ಎಂದು ಪರಿಚಯಿಸಿದ್ದಾನೆ.[೨೦೦] ದಂಡನಾಯಕರಲ್ಲಿ 'ಪ್ರಾಂತೀಯ ದಂಡನಾಯಕರು' ಮಹಾಮಂಡಳೇಶ್ವರರ ಮತ್ತು 'ಕೇಂದ್ರಿಯ ದಂಡನಾಯಕರು' ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.[೨೦೧] ಇವರ ನಿಷ್ಠೆ ಮತ್ತು ನಿಸ್ವಾರ್ಥದ ಆಡಳಿತವನ್ನು ಗಮನಿಸಿ ಇವರಿಗೆ ಮೇಲಿನ ಹುದ್ದೆಗಳಿಗೆ ಬಡ್ತಿ ನೀಡಲಾಗುತ್ತಿತ್ತು. ಕೂಹುಂಡಿನಾಡಿನ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ದಂಡನಾಯಕರ ಅಧಿಕಾರದ ಸ್ವರೂಪ ಮತ್ತು ಇವರು ಕೈಗೊಂಡಿರುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ–

ಜವನಂ ಜಕ್ಕುಲಿಪಂತೆ ಮಾರಿಗಿದಿರಂ ಪೋಪಂತೆ ಕಾಳಾಹಿಯೇಗುವುದೆಂದೇ
ಪಿಡಿವಿಂತೆ ಸಿಂಹಮನದಂ ಪೊಯ್ದೋಡುವಂ ತೀತನೇಗುವ
ನೆಂದಿನ್ತೆನಲಂತೆ ಮ್ರಿತ್ಯುವಿನವೋಲೆಲ್ಲಿರ್ದ್ದಡಂ ಕೊಲ್ವನಾಹವದೊಳು
ನಾಯಕ ಹಬ್ಬನೆಂದಡಿವನೊಳ್ಮಾಱುಂಪರಾರುದ್ಧತರು ‖ ಕಂಡುಳಿದ
ಡುಳಿದರಲ್ಲದೆ ತೊಂಡಂ ನುಡಿದೆಱೆತೊಡರ್ಪರುರವುರವಣಿಯಂ
ಕಂಡಿದಿರಲೆಯ್ದಿ ಮಳ್ಸಿಂ ಖಂಡಿಪನೆನೆ ಹಬ್ಬಣಂಗಿದರ್ಚ್ಚುವನಾವಂ ‖
ಗೆಡೆಗೊಂಡಂನರೆ ತಂನವರ್ಬ್ಬಗೆಯದಂತಿರ್ದ್ದಂನರಾ ರಾಯರಾದಡ
ವೊಬ್ಬಣನೆಂಬನೊಳು ಪಸಣೆಯೇಕೆಂಬಂತೆ ಗೂಡಾಡಿಪಂ ತೊಡರಲು
ಭೈರವಪಾದಪದುಮಯುಗಳಧ್ಯಾನ್ಯೆಕವೀರಂ ಜಯಂಬಡೆವಂ
ತಾನೆನಲಾದ ನಾಯಕರುವೇನೀತಂಗೆ ಸಾದೃಶ್ಯವೇ ‖

ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಮಹಾಪ್ರಧಾನ ಹಬ್ಬನಾಯಕನ ಧಾರ್ಮಿಕ ಚಟುವಟಿಕೆಗಳ ಪ್ರಸ್ತಾಪವಿದೆ.[೨೦೨] ಪ್ರಸ್ತುತ ಶಾಸನದಲ್ಲಿ ಈತನ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕುರಿತಾಗಿ ಯಾವುದೇ ವಿವರಗಳಿಲ್ಲ. ಸವದತ್ತಿ ತಾಲ್ಲೂಕಿನ ಉಗರಗೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಮಹಾಪ್ರಧಾನನೊಬ್ಬನ (ದಂಡನಾಯಕ) ಉಲ್ಲೇಖವಿದೆ.[೨೦೩] ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಈ ಮಹಾಸಾಮಂತನ ಹೆಸರು ಮತ್ತು ಇತರೆ ಚಟುವಟಿಕೆಗಳ ಸ್ಪಷ್ಟವಿಲ್ಲ. ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ದೇವಗಿರಿಯ ಸೇವುಣರ ಅಧಿಕಾರಿ (ದಂಡನಾಯಕ) ಜೋಗದೇವ ಚಮೂಪನ ಪ್ರಸ್ತಾಪವಿದೆ.[೨೦೪] ಈತನು ಸ್ಥಳೀಯ ಪಂಚಲಿಂಗೇಶ್ವರ ದೇವಾಲಯದ ಮಾಟಕೂಟ, ಪ್ರಾಸಾದ, ಖಂಡಸ್ಫುಟಿತ ಜೀರ್ಣೋದ್ಧಾರ, ನಿತ್ಯನೈವೇದ್ಯ, ರಂಗಭೋಗ, ಚೈತ್ರಪವಿತ್ರಕ್ಕೆ ಭೂದಾನ ಮಾಡಿದ್ದಾನೆ. ಹಾಗೆಯೇ ಮುನವಳ್ಳಿಯ ಶಿವಪುರದಲ್ಲಿ ಅಗ್ರಹಾರವನ್ನು ನಿರ್ಮಿಸಿ ಬ್ರಾಹ್ಮಣರಿಗೆ ದಾನ ಮಾಡಿದ್ದಾನೆ. ಜೊತೆಗೆ ಮಾಧವನಾರಾಯಣ ದೇವಾಲಯವನ್ನು ನಿರ್ಮಿಸಿ, ಇದರ ವಿವಿಧ ಧಾರ್ಮಿಕ ಕಾರ್ಯಗಳಿಗೆ ಭೂದಾನ ಮಾಡಿದ್ದಾನೆ.

ಕಬ್ಬೂರದ ಕ್ರಿ.ಶ. ೧೨೦೪ರ ಶಾಸನದಲ್ಲಿ ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ದಂಡನಾಯಕ ಹೊಳ್ಳಯ್ಯ ನಾಯಕನ ಪ್ರಸ್ತಾಪವಿದೆ.[೨೦೫] ಈತನ ಮುಂದಾಳತ್ವದಲ್ಲಿ

ಅಗ್ರಹಾರ ಕಬ್ಬೂರಿನ ಹಿಳವಿದಾಸನು ಕುದುರೆಗಳ ಮಾರಾಟಕ್ಕೆ ವಿಧಿಸಲಾಗುತ್ತಿದ್ದ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಸ್ಥಳೀಯ ಸ್ವಯಂಭೂಚಕ್ರವರ್ತಿ ಕಲಿದೇವಸ್ವಾಮಿ ದೇವಾಲಯಕ್ಕೆ ದಾನ ಮಾಡಿದ್ದಾನೆ. ಕೆರೂರದ ಕ್ರಿ.ಶ. ೧೧೪೯ರ ಶಾಸನದಲ್ಲಿ ಕಲ್ಯಾಣದ ಕಲಚೂರಿಯರ ಇಮ್ಮಡಿ ಬಿಜ್ಜಳದೇವನ ಮಹಾಪ್ರಧಾನ ಸೇನಾದಂಡನಾಯಕ ಜಯದೇವಯ್ಯನ ಪ್ರಸ್ತಾಪವಿದೆ.[೨೦೬] ಈತನು ಸ್ಥಳೀಯ ದೇವಾಲಯಕ್ಕೆ ದಾನ ಮಾಡಿದ್ದಾನೆ. ಯಕ್ಸಂಬಾದ ಕ್ರಿ.ಶ. ೧೨೩೫ರ ಶಾಸನದಲ್ಲಿ ಸವದತ್ತಿಯ ರಟ್ಟರ ಲಕ್ಷ್ಮೀದೇವನ ಮಹಾಪ್ರಧಾನ ದಂಡನಾಯಕ ಕೇಶಿಮಯ್ಯನ ನಿರೂಪಣೆಯಿದೆ.[೨೦೭] ಈತನು ಸತ್ರವೊಂದರ ಬ್ರಾಹ್ಮಣರ ಆಹಾರೋಪಚಾರಕ್ಕಾಗಿ ಭೂದಾನ ಮಾಡಿದ್ದಾನೆ.

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಸವದತ್ತಿಯ ರಟ್ಟ ಮನೆತನದ ಕನ್ನರದೇವನ ಮಹಾಪ್ರಧಾನ ನಾಗರಸನ ಪ್ರಸ್ತಾಪವಿದೆ.[೨೦೮] ಈತನನ್ನು 'ರಟ್ಟರಾಜ ಪ್ರತಿಷ್ಠಾಚಾರ್ಯ' ಎಂದು ಕರೆಯಲಾಗಿದೆ. ಈತನು ಸ್ಥಳೀಯ ಅಧಿಕಾರಿ ಚವುಡಿಸೆಟ್ಟಿಯ (ಚೌಡಿಸೆಟ್ಟಿ) ನಿಯಾಮದಿಂದ ಕವಿಳಾಸಪುರದ ಸ್ವಯಂಭೂ ಮಲ್ಲಿಕಾರ್ಜುನ, ಸಂಗಮೇಶ್ವರ, ನಾಗೇಶ್ವರ ದೇವಾಲಯಗಳ ವಿವಿಧ ಧಾರ್ಮಿಕ ಕಾರ್ಯಗಳಿಗೆ ದತ್ತಿ, ಸುಂಕ ಮತ್ತು ನೂರೆತ್ತಿನ ಪರಿಹಾರವನ್ನು ನವೀಕರಿಸಿ ಕೊಟ್ಟಿದ್ದಾನೆ. ಭೈರಾಪುರದ ಕ್ರಿ.ಶ. ೧೨೩೭ರ ಶಾಸನದಲ್ಲಿ ಸವದತ್ತಿ ರಟ್ಟರ ಲಕ್ಷ್ಮೀದೇವನ ಮಹಾಪ್ರಧಾನ ಸೇನಾಧಿಪತಿ ನಾಗೆಯನಾಯಕನ ಉಲ್ಲೇಖವಿದೆ.[೨೦೯] ಲಕ್ಷ್ಮೀದೇವನ ಪಟ್ಟದರಸಿ ಲಲಿತದೇವಿಯು ತನ್ನ ಆಡಳಿತಕ್ಕೊಳಪಟ್ಟ ಮತ್ತಿವಾಡದಲ್ಲಿ ಬಣಂಬೆಗಾಗಿ ಭೂಮಿ, ಮನೆ, ನಿವೇಶನಗಳನ್ನು ನಾಕೇಶ್ವರದ ಮೂವತ್ತಿರ್ಚ್ಛಾಸಿರ ಛತ್ರಕ್ಕಾಗಿ ಈ ದಂಡನಾಯಕನಿಗೆ ದಾನ ಮಾಡಿದ್ದಾಳೆ. ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ–

> ಶ್ರೀಮನ್ಮಹಾಮಂಡಳೇಶ್ವರನೆಱಗದೇವರಸರ್ ಶ್ರೀಮನ್ಮಹಾಪ್ರಧಾನಂ
> ಮಾದಿರಾಜದಣ್ನಾಯಕರ್ಗ್ಗೆ ಕೂಂಡಿಮೂರುಸಾಸಿರದ ಕುರುಂಬೆಟ್ಟ
> ಗಂಪಣದ ಬಳಿಯ ಬಾಡ ಕಂಕಣನೂರ ಪ್ರಭುತ್ವಮಂ ಅಷ್ಟಭೋಗ
> ತೇಜಸಾಮ್ಯಸಹಿತಂ ಧಾರಾಪೂರ್ವ್ವಕಂ ಕೊಟ್ಟ ಸಾಮಾನ್ಯಭೂಮಿ.......
> ಕನ್ನಡಿಗಂ ವಂಶದೊಳುತ್ಪಂನಂ ಶಾಂಡಿಲ್ಯಗೋತ್ರ ವಿಪ್ರಾನ್ವಯದೊಳ್
> ತಂನದಟಿಂ ದಳದಬ್ಬುಕನುನ್ನತನಾಮಾದಿರಾಜದಣ್ಡಾಧೀಶಂ ॥
> ದಣ್ಡಾಧೀಶ ಪಯೋಜಪಂಕಜಸಖಂ ದಣ್ಡೇಶವಾಣೀವರಂ ದಣ್ಡಾಧೀಶ
> ವಿಶಾಳಭಾಳತಿಳಕಂ ದಣ್ಡೇಶ ದೈತಾಂತಕಂ ದಣ್ಡಾಧೀಶವರೇಂಣ್ಯಪುಂಣ್ಯ
> ಭುವನಂ ದಣ್ಡೇಶ ನೇತ್ರತ್ರಯಂ ದಣ್ಡಾಧೀಶ್ವರ ಮಾದಿರಾಜನೆಸೆವಂ
> ದಣ್ಡೈಕಧರ್ಮ್ಮಾತ್ಮಜಂ ॥

ಕನ್ನಡಿಗವಂಶದ ಶಾಂಡಿಲ್ಯಗೋತ್ರದ ಮಾದಿರಾಜ ದಂಡನಾಯಕನ ಸವಿಸ್ತಾರವಾದ ಪ್ರಸ್ತಾಪವಿದೆ.[೨೧೦] ಈತನಿಗೆ ಸವದತ್ತಿಯ ರಟ್ಟರ ಎರೆಗನ ಮಂತ್ರಿ (ಪೆರ್ಗಡೆ?) ಚಾವುಂಡನು ಕೂಹುಂಡಿನಾಡಿನ ಕುರುಂಬೆಟ್ಟ ಕಂಪಣದಲ್ಲಿಯ ಕಂಕಣವಾಡಿಯ ಪ್ರಭುತ್ವವನ್ನು ಅಷ್ಟಭೋಗ ತೇಜಸಾಮ್ಯಸಹಿತ ಧಾರಾಪೂರ್ವಕವಾಗಿ ಕೊಟ್ಟನು. ಮಹಾದಾನಿಯಾಗಿದ್ದ ಮಾದಿರಾಜ ದಂಡನಾಯಕನು ರಾಯಬಾಗದ

ಮೂಲಸ್ಥಾನದ ಕಲಿದೇವಸ್ವಾಮಿ ದೇವಾಲಯಕ್ಕೆ ೫೫೦ ಕಂಬಗಳ ಅಳತೆಯ ಭೂಮಿ, ಯಾಪನೀಯ ಸಂಘ ಪರಂಪರೆಯ ಬಸದಿಗೆ ೪೫೦ ಕಂಬಗಳ ಅಳತೆಯ ಭೂಮಿ ಮತ್ತು ಮೂಲಸಂಘ ಪರಂಪರೆಯ ಬಸದಿಗೆ ೫೫೦ ಕಂಬಗಳ ಅಳತೆಯ ಭೂಮಿಯನ್ನು ದಾನ ಮಾಡಿದ್ದಾನೆ. ಹಾಗೆಯೇ ಈ ದೇವಾಲಯ ಮತ್ತು ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿದ್ದಾನೆ.

ರಾಯಬಾಗದ ಕ್ರಿ.ಶ. ೧೦೭೭ರ ವೀರಗಲ್ಲು ಶಾಸನದಲ್ಲಿ ಮಹಾಮಂಡಳೇಶ್ವರ ಕೊಂಗರಸನ ಅಧಿಕಾರಿ (ದಂಡನಾಯಕ) ಚಂಡರಸನ ಉಲ್ಲೆಖವಿದೆ.[೨೧೧] ಈತನು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನು ಧಾರಾನಗರದ ಉದಯನ ಮೇಲೆ ದಂಡಯಾತ್ರೆಯನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಮಹಾಮಂಡಳೇಶ್ವರ ಕೊಂಗರಸನಿಗೂ ಮಾಂಡಲಿಕ ಭೋಜನಿಗೂ ನಡೆದ ಯುದ್ಧದಲ್ಲಿ ಭೋಜನ ಆನೆಯನ್ನು ಸದೆಬಡೆದು ಪಾಳಿಮೊಗವನ್ನು ಕಿತ್ತು ಅನೇಕ ಹೆಸರಾಂತ ನಾಯಕರನ್ನು ಕೊಂದು ತಾನೂ ಮರಣವನ್ನಪ್ಪಿದ್ದಾನೆ. ಇದೇ ಪಟ್ಟಣದ ಕ್ರಿ.ಶ. ೧೧೪೯ರ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ಇಮ್ಮಡಿ ಜಗದೇಕಮಲ್ಲದೇವನ ನೆಚ್ಚಿನ ಹಿರಿಯ ದಂಡನಾಯಕನೂ, ಸಾಮ್ರಾಜ್ಯದ ಸಂರಕ್ಷಕನೂ ಆದ ಕಾಳಿದಾಸನ ಪ್ರಸ್ತಾಪವಿದೆ.[೨೧೨] ಈತನ ಆಡಳಿತ ಮತ್ತು ಧಾರ್ಮಿಕ ಚಟುವಟಿಕೆಗಳ ಕುರಿತು ಸ್ಪಷ್ಟವಿಲ್ಲ. ಈತನ ಧರ್ಮಪತ್ನಿ ರೇಕಲದೇವಿಯ ಸಹೋದರನಾದ ದಂಡನಾಯಕ ದಾಸಿರಾಜನು (ದಾಸಿಮರಸ) ಪ್ರೀತಿಯ ಅಳಿಯನಾಗಿದ್ದನು. ದಾಸಿರಾಜನು ಅಗ್ರಹಾರ ರಾಯಬಾಗದ ಮಾರಸಿಂಗಸೆಟ್ಟಿ ಬಸದಿಯಲ್ಲಿ ಜಿನಪೂಜೆಯ ಉತ್ಸವವನ್ನು ನೋಡಲು ಆಗಮಿಸಿದ್ದ ಸಂದರ್ಭದಲ್ಲಿ, ಇದು ಶೂನ್ಯಸಂಸ್ಥಾನವೆಂದು ಇದರ ಮಹಿಮೆಯನ್ನು ಸ್ಥಳೀಯ ವ್ಯಾಪಾರಿಗಳು ಬಣ್ಣಿಸಲು, ಈ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರ, ದೇವರ ಪೂಜೆ ಮತ್ತು ಮುನಿಗಳ ಆಹಾರದಾನಕ್ಕೆ ಮೂವತ್ತು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ. ಇದೇ ಪಟ್ಟಣದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನದಲ್ಲಿ ಕೊಲ್ಲಾಪುರದ ಶಿಲಾಹಾರರ ಮಹಾಮಂಡಳೇಶ್ವರ ಗಂಡರಾದಿತ್ಯದೇವನ ಅಧಿಕಾರಿ (ದಂಡನಾಯಕ) ಕಾವಸೆಟ್ಟಿಯ ಉಲ್ಲೇಖವಿದೆ.[೨೧೩] ಈತನು ದಿಗ್ಗಜವಾಡವನ್ನು ಮುತ್ತಿದ ಸಂದರ್ಭದಲ್ಲಿ ತೇರಿದಾಳದ ಮುಖ್ಯಸ್ಥನಾದ ಭುವನಗಾವುಂಡನು ಹೆಮ್ಮಗಾವುಂಡ ಮತ್ತು ಚವುಂಡಯ್ಯನ ಮಕ್ಕಳೊಡಗೂಡಿ (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರುಗಳು ಸ್ಪಷ್ಟವಿಲ್ಲ) ಈತನನ್ನು ಎದುರಿಸಿ ಕೊಂದಿದ್ದಾನೆ.

ಕೊಣ್ಣೂರಿನ ಕ್ರಿ.ಶ. ೧೦೮೭ರ ಶಾಸನದಲ್ಲಿ ಸೇನಾಪತಿ (ದಂಡನಾಯಕ) ಚಾವುಂಡನ ಪ್ರಸ್ತಾಪವಿದೆ.[೨೧೪] ಈತನು ಕೂಹುಂಡಿನಾಡಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಪುತ್ರ ಮಹಾಮಂಡಳೇಶ್ವರ ಜಯಕರ್ಣನ ಸೇನಾಪತಿಯಾಗಿದ್ದನು. ಈತನ ಅಧೀನದಲ್ಲಿ ಸವದತ್ತಿಯ ರಟ್ಟರ ಇಮ್ಮಡಿ ಸೇನನು ಮಹಾಮಂಡಳೇಶ್ವರ ಗೈಯುತ್ತಿದ್ದನು. ಗೋಕಾಕ ಜಲಪಾತದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲ್ಯಾಣದ ಕಲಚೂರಿಯರ ತ್ರಿಭುವನಮಲ್ಲ ಸೋಯಿದೇವನ ದಂಡನಾಯಕ ಸೋವಣನ ನಿರೂಪಣೆಯಿದೆ.[೨೧೫] ಈತನು ಸ್ಥಳೀಯ ತಟ್ಟೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ಪೂಜೆ ಮತ್ತು ದೇವಾಲಯದ ಜೀರ್ಣೋದ್ಧಾರಕ್ಕೆ

ದಾನ ಮಾಡಿದ್ದಾನೆ. ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ದೇವಗಿರಿ ಸೇವುಣರ ಕನ್ನರದೇವನ ದಂಡನಾಯಕ ಮನೆತನದ ಚಿಕ್ಕದೇವರಸ, ಮಂತ್ರಿ ಬೀಚಣ, ಮಲ್ಲಿನಾಥ, ಚಾಮುಂಡನ ಉಲ್ಲೇಖವಿದೆ.[೧೬] ಮಹಾಪ್ರಧಾನ ಸರ್ವಾಧಿಕಾರಿ ದಂಡನಾಯಕ ಚಾಮುಂಡನು ಪಾಂಡ್ಯರ ರಾಜಧಾನಿ, ಕೊಂಕಣ ಪ್ರದೇಶ, ಕಾವೇರಿ ನದಿಯ ಸುತ್ತಲಿನ ಭಾಗವನ್ನು ವಶಪಡಿಸಿಕೊಂಡಿದ್ದನು. ಹಾಗೆಯೇ ಹೊಯ್ಸಳರ ಸೋಮೇಶ್ವರನನ್ನು ಸೋಲಿಸಿ ಸಪ್ಪೇರೆ ಲಿಂಗವನ್ನು ಪ್ರತಿಷ್ಠಾಪಿಸಿದನು. ಜೊತೆಗೆ ತನ್ನ ಗುರು ಸೋಮನಾಥನ ಅನುಗ್ರಹದಿಂದ ಕುರುಂಬೆಟ್ಟ ಪಟ್ಟಣದಲ್ಲಿ (ಇಂದಿನ ಮಮದಾಪುರ) ತ್ರಿಕೂಟಪ್ರಾಸಾದ ದೇವಾಲಯವನ್ನು ನಿರ್ಮಿಸಿ, ಇದರಲ್ಲಿ ಮಾಧವನ ಪ್ರತಿಮೆ, ತನ್ನ ತಂದೆ ಮಲ್ಲಿನಾಥ ಮತ್ತು ಸಹೋದರ ದೇವಿಸೆಟ್ಟಿಯ ಹೆಸರಿನಲ್ಲಿ ಎರಡು ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಹುಲಿಗೆರೆ ನಗರದಲ್ಲಿ (ಇಂದಿನ ಲಕ್ಷ್ಮೇಶ್ವರ) ಭೂದಾನ ಮಾಡಿದ್ದಾನೆ. ಇದೇ ಶಾಸನದಲ್ಲಿ ಆದಿಸೆಟ್ಟಿಯ ತಂದೆ ಮಹಾಪ್ರಧಾನ (ದಂಡನಾಯಕ) ಮಲ್ಲಿಸೆಟ್ಟಿಯ ಪ್ರಸ್ತಾಪವಿದೆ. ಈತನು ಪ್ರಸ್ತುತ ದೇವಾಲಯದ ಮಾಧವದೇವರ ವಿವಿಧ ಧಾರ್ಮಿಕ ಕಾರ್ಯಗಳಿಗಾಗಿ ಸ್ಥಳೀಯ ಬ್ರಹ್ಮಪುರಿಯ ಹನ್ನೆರಡು ವೃತ್ತಿಯ ಬ್ರಾಹ್ಮಣರಿಗೆ ನಿವೇಶನವನ್ನು ದಾನ ಮಾಡಿದ್ದಾನೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ–

ಪ್ರಣುತೋದ್ಯತ್ಪಾತ್ರದಾನಂ ಬ್ರತಗುಣಚರಿತಂ ಸಜ್ಜಿನಾವಾಸನಿರ್ಮ್ಮಾ
ಪಣವಾತ್ಮೋರ್ವ್ವೀಶರಾಜ್ಯಾಭ್ಯುದಯನಯಚಯಂ ತಮ್ಮೊಳೊಪ್ಪುತ್ತಿರಲ್
ಧಾರಿಣಿಯೊಳ್ವಿಖ್ಯಾತಿವೆತ್ತಿರ್ವ್ವರೆ ಸೊಗಯಿಪರಾ ಗಂಡರಾದಿತ್ಯಸೇನಾಗ್ರಣಿ
ನಿಂಬಂ ಕಾರ್ತ್ತವೀರ್ಯ್ಯಕ್ಷಿತಿಪತಿಸಚಿವೋತ್ತಂಸನೀ ಬೀಚಿರಾಜಂ ॥
ಸುಜನಾಕರ್ಷಣಮಾತ್ಮವಲ್ಲಭವಶೀಕಾರಂ ಸುಹೃನ್ಮೋಹನಂ ಕುಜನೋ
ಚ್ಚಾಟನಮನ್ಯಮಂತ್ರಿಚಯಮಾನಸ್ತಂಭನಂ ದುರ್ಣ್ಣಯಬ್ರಜವಿದ್ವೇಷಣ
ಮೆಂಬಿವಾಗೆ ನಿಜಮಂತ್ರಾಂಗಂಗಳಿಂ ರಂಜಿಪಂ ವಿಜಯಶ್ರೀನಿಧಿ
ಕಾರ್ತ್ತವೀರ್ಯ್ಯಸಚಿವಂ ಲಕ್ಷ್ಮೀಚಣಂ ಬೀಚಣಂ ॥ ಪರವದುಗನುಮತಿಯಂ
ಜೈನರೀಯಲಾಗದು ಪರಪ್ರವರ್ತ್ತನೆಯೊಳ್ ಜೈನರೊಳಧಿಕಂ ಬೀಚಂ
ತಂಡರಿನ್ನೃಪಭುಜವಿಜಯಲಕ್ಷ್ಮೀಯಂ ಪತಿಗೀವ ॥ ....

ಸವದತ್ತಿಯ ರಟ್ಟರ ಆನೆಯ ಕಾರ್ತವೀರ್ಯನ ಮಹಾಮಂತ್ರಿ ಸಚಿವ (ದಂಡನಾಯಕ) ಬೀಚಣನ (ಬೀಚಿರಾಜ) ವಿವಿಧ ಬಿರುದಾವಳಿಗಳು ಮತ್ತು ಹಿರಿಮೆಯ ಪ್ರಸ್ತಾಪಗಳಿವೆ.[೧೭] ಈತನು ವೇಣುಗ್ರಾಮದಲ್ಲಿ ಶಾಂತಿನಾಥ ಬಸದಿಯನ್ನು ನಿರ್ಮಿಸಿದ್ದಾನೆ. ಇದೇ ಶಾಸನದಲ್ಲಿ ಪರಶುರಾಮನಾಯಕ, ಪೊಮ್ಮನನಾಯಕ, ಅಮ್ಮುಗಿನಾಯಕನ ಉಲ್ಲೇಖಗಳಿವೆ.[೨೧೮] ಇವರು ಪ್ರಾಯಶಃ ವೇಣುಗ್ರಾಮ ನೆಲೆವೀಡಿನಿಂದ ಆಳ್ವಿಕೆ ಕೈಗೊಂಡಿದ್ದ ಸವದತ್ತಿಯ ರಟ್ಟ ಮನೆತನದ ಯುವರಾಜ ಮಲ್ಲಿಕಾರ್ಜುನದೇವನ ದಂಡನಾಯಕರಾಗಿದ್ದಂತೆ ತೋರುತ್ತದೆ. ಈ ಮೂವರೂ ದಂಡನಾಯಕರು ಪ್ರಸ್ತುತ ಬಸದಿಗೆ ಇತರರೊಂದಿಗೆ ಕೂಡಿಕೊಂಡು ಹಣವನ್ನು ದಾನ ಮಾಡಿದ್ದಾರೆ.

ತೇರದಾಳದ ಕ್ರಿ.ಶ. ೧೧೮೭ರ ಶಾಸನದಲ್ಲಿ–

ವೀರಕಣಿಗರಾಯ ಗಜಕೇಸರಿ ಸಿಂಹರಾಯಶೈಳನಿರ್ದ್ಧಾರಣವಜ್ರ

ಮಾರ್ಮ್ಮಲೆವ ಗೂರ್ಜ್ಜರರಾಯ ಭುಜಪ್ರತಾಪ ನೀರೇರುಹವನ್ಯ
ದಂನ್ತಿಯೆನೆ ಪೆರ್ಮ್ಮೆಯನೊರ್ಮ್ಮೆಯುಮಾನ್ತು ಗಣ್ಡಪೆಣ್ಡಾರನುದಾರ
ನುರ್ವ್ವಿಗೆಸೆವಂ ಸುತೇಜುಗಿ ದಂಡನಾಯಕನು ॥ ....
ಆತನ ತನಯಂ ವಿನಿಯೋಪೇತಂ ವಿದ್ವಷ್ಟ ದಣ್ಡನಾಥಕುಮಾರ
ಬ್ರಾತಾಚಳಪವಿದಂಡಂ ಖ್ಯಾತಂ ಶ್ರೀ ಭಾಯಿದೇವನೆಸೆವಂ ಜಗದೊಳು ॥

ದೇವಗಿರಿಯ ಸೇವುಣ ಮನೆತನದ ಜೆನೆಯ ಭಿಲ್ಲಮನ ದಂಡನಾಯಕರಾದ ಗೂರ್ಜರ ತೇಜುಗಿ ಮತ್ತು ಈತನ ಪುತ್ರ ಭಾಯಿದೇವನ ವಿವಿಧ ಬಿರುದಾವಳಿಗಳು ಹಾಗೂ ಹಿರಿಮೆಯ ಪ್ರಸ್ತಾಪವಿದೆ.[೨೧೯] ಇವರಿಬ್ಬರೂ ರಾಜಕೀಯ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಂಡು ಕೂಹುಂಡಿ–೩೦೦೦ ಪ್ರದೇಶದಲ್ಲಿ ಪ್ರಸಿದ್ಧರಾಗಿದ್ದರು. ಭಾಯಿದೇವ ದಂಡನಾಯಕನು ತೇರದಾಳದ ಗೊಂಕಜಿನಾಲಯದ (ನೇಮಿನಾಥ ಬಸದಿ) ಅಂಗಭೋಗ, ಮುನಿಗಳ ಆಹಾರದಾನ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಮುಂಚೆ ಗೊಂಕದೇವರಸನು ಕೊಡಮಾಡಿದ ಏಪ್ಪತ್ತೆರಡು ಮತ್ತರು ಭೂಮಿಯ ಉತ್ತರಕ್ಕೆ ಮೂವತ್ತಾರು ಮತ್ತರು ಭೂಮಿ ಮತ್ತು ಅಂಗಡಿಗೇರಿಯಲ್ಲಿ ನಿವೇಶನವನ್ನು ದಾನ ಮಾಡಿದ್ದಾನೆ. ಬೆಳಗಲಿಯ ಕ್ರಿ.ಶ. ೧೨೩೩ರ ಶಾಸನದಲ್ಲಿ ಸವದತ್ತಿಯ ರಟ್ಟರ ಇಮ್ಮಡಿ ಲಕ್ಷ್ಮೀದೇವನ ಮಹಾಪ್ರಧಾನ ದಂಡನಾಯಕ ಉಲ್ಲೇಖವಿದೆ.[೨೨೦] ಪ್ರಸ್ತುತ ಶಾಸನದ ಅಕ್ಷರಗಳು ಸವೆದಿರುವುದರಿಂದ ಈತನ ಹೆಸರು ಸ್ಪಷ್ಟವಿಲ್ಲ. ಈತನು ಇತರರೊಂದಿಗೆ ಕೂಡಿಕೊಂಡು ಬೆಳಗಲಿಯ ಬಸದಿಯ ದೇವಕಾರ್ಯಕ್ಕೆ ಭೂದಾನ ಮಾಡಿದ್ದಾನೆ. ಮಂಟೂರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕೊಣ್ಡತಳಿರದ ದಂಡನಾಯಕನ ನಿರೂಪಣೆಯಿದೆ.[೨೨೧] ಪ್ರಸ್ತುತ ಶಾಸನದ ಅಕ್ಷರಗಳು ಸವೆದಿರುವುದರಿಂದ ಈತನ ಹೆಸರು ಮತ್ತು ರಾಜಕೀಯ, ಧಾರ್ಮಿಕ ಚಟುವಟಿಕೆಗಳ ಕುರಿತು ಸ್ಪಷ್ಟವಿಲ್ಲ.

ಮುಧೋಳದ ಕ್ರಿ.ಶ. ೧೨೩೩ರ ಶಾಸನದಲ್ಲಿ–

ತತ್ಪಾದಪದ್ಮೋಪಜೀವಿ ಮಹಾಪ್ರಧಾನಂ ಕಲ್ಲಚಮೂಪ......
ಪರಿಪೂರ್ಣ್ನಂ......ಹೊಡೆ ಸುತ್ತಿದರಿ ಜಗವೆಲ್ಲ........ವಿಕ್ರಮಂ
ಕೇರಳ ವೈ.........ಮಹಾ ದಂಡನಾಯಕ.......ಡಾಳೋಗ್ರ
ಪ್ರತಾಪ ಕಂಠೀರವನುದ್ದಂಡಾರಿ......ಪರಮ...............
ದಂಡಾಧೀಶಂ ॥ ಸದುನಿರ್ಮ್ಮಳ ಚಾರಿತ್ರ......ವಿನಿಟವೆಂದಿ
ಮಾಘದಗೊಲ್ದು........ಳರು ಮುದುವೊಳಲನ.....ನಾಡ ರೊಂ.....
ರೆಂಬ ಗೊಡರು ॥ ಬಾನುಶಡುದರುಷನಾಗ ಮಸ..........
ಲಾಗಾರರು ಧರ್ಮಾಧರ್ಮಾವಿಚಾರರು ಮು....ವೊಳಲ
ಪಂಚಮಠದಾಚಾ......ಜನಿತಂ ಸೋಮ.........ಧರ್ಮ್ಮಮಂ
ಬೆಳಗುವರ್ಸ್ಸತಿಗೋಜರ....ತ್ರರೂ ॥

ಸವದತ್ತಿಯ ರಟ್ಟರ ಲಕ್ಷ್ಮೀದೇವನ ಮಹಾಪ್ರಧಾನ ದಂಡನಾಯಕ ಕಲ್ಲಚಮೂಪನ ಪ್ರಸ್ತಾಪವಿದೆ.[೨೨೨] ಈತನು ಸ್ಥಳೀಯ ಗಾಜೇಶ್ವರ(?) ದೇವಾಲಯಕ್ಕೆ ಭೂದಾನ ಮಾಡಿದ್ದಾನೆ. ತೇರ್ಣಿಯ ಕ್ರಿ.ಶ.

೧೦೬೨ರ ಶಾಸನದಲ್ಲಿ–

> ಸ್ವಸ್ತಿ ಸಮಸ್ತ......ಪರಾಕ್ರಮನಿ................................
> ನಜನಮನೋರಾಜಹಂಸಂ ಸರಸ್ವತೀ ಕರ್ಣ್ನಾವತಂಸಂ
> ಜಿನಸಮಯ ಸಮುದ್ಧರಣಂ ಕರಣಕಾರಣಂ ದುರಿತಮ
> ದನಿವಾರಣಂ...ವನಗರುಡ ಶ್ರೀಮತ್ಪೆರ್ಗ್ಗಡೆ ಕಾವರಾಜ ॥
> ಸಕವರ್ಷ ೯೮೪ನೆಯ ಸುಭಕೃತ್ಸಂವತ್ಸರದ ಮಾರ್ಗ್ಗಸಿರದ
> ಪುಣ್ನಮೆ ಆದಿತ್ಯವಾರದಂದು ಸೋಮಗ್ರಹಣದೊಳು
> ಶ್ರೀಮನ್ಮೂಳಸಂಘಾನ್ವಯದ ಬಳಗಾಱಗಣದಿಂದ್ರಾವಳೀಗಚ್ಛದ
> ಶ್ರೀಮತ್ಪಕ್ಷೋಪವಾಸಿಭಟ್ಟಾರಕರ ಸಿಸ್ಯಾಗ್ರಣಿಗಳಪ್ಪ ಶ್ರೀಧರದೇವರ
> ಪಾದಪ್ರಕ್ಷಾಳನಂ ಮಾಡಿ ದೇರಿದಾಳದ ಕನ್ನಗಾವುಣ್ಡ ಮಾಡಿಸಿದ
> ರಟ್ಟಜಿನಾಳಯಕ್ಕೆ ಖಣ್ಡಸ್ಫುಟಿತ ನವಕರ್ಮ್ಮ ವಿರೂನ್ನದಾನ
> ನಿಮಿತ್ತದಿಂ ವೂರಿಂ ತೆಂಕಲು ಬಿಟ್ಟ ತಳವ್ರಿತ್ತಿ ಕೂಣ್ಡಿಯ
> ಪಿರಿಯಕೋಲ ಮತ್ತರ್ ಪನ್ನೆರಡದಕ್ಕೆ ಸೀಮೆ................

ಸವದತ್ತಿಯ ರಟ್ಟರ ಕಾಳಸೇನನ ಅಧಿಕಾರಿ (ದಂಡನಾಯಕ) ಕಾವರಾಜನ ಉಲ್ಲೇಖವಿದೆ.[೨೨೩] ಈತನು ದೇರಿದಾಳದಲ್ಲಿ ಕನ್ನಗಾವುಂಡನು ನಿರ್ಮಿಸಿದ ರಟ್ಟಜಿನಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಭೂಮಿ, ಮನೆ, ಗಾಣ, ಹೂದೋಟವನ್ನು ದಾನ ಮಾಡಿದ್ದಾನೆ. ಚಿಕ್ಕಹಂದಿಗೋಳದ ಕ್ರಿ.ಶ. ೧೦೯೯ರ ಶಾಸನದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ದಂಡನಾಯಕ ಅನಂತಪಾಲನ ಪ್ರಸ್ತಾಪವಿದೆ.[೨೨೪] ಈತನು ಎರಡಱುನೂಱು (ಪುಲಿಗೆರೆ-೩೦೦ ಮತ್ತು ಬೆಳ್ವೊಲ-೩೦೦), ಬನವಸೆನಾಡು, ಕೂಣ್ಡಿನಾಡು, ಬಳಯವಟ್ಟಣ ವಿಭಾಗಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.

೩.೪.೨. ಪೆರ್ಗಡೆಗಳು

'ಪೆರ್ಗಡೆ' ಎಂಬುದು ಸಂಸ್ಕೃತದ 'ಮಹತ್ತರ' ಪದದ ಸಮಾನ ರೂಪವಾಗಿದ್ದು, ಇವೆರಡೂ ಪದಗಳು ಹಿರಿಯ ಅಧಿಕಾರಿಗಳನ್ನು ಸೂಚಿಸುತ್ತವೆ ಎಂದು ಎಂ. ಚಿದಾನಂದಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೨೫] ನಾಡು ಅಥವಾ ಗ್ರಾಮದ ಮುಖ್ಯಸ್ಥರಾಗಿದ್ದ ಇವರು ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದರು. ಇವರನ್ನು ಸುಂಕದ ಹೆಗ್ಗಡೆ ಎಂತಲೂ ಕರೆಯಲಾಗುತ್ತಿತ್ತೆಂದು ಜಿ.ಎಸ್. ದಿಕ್ಷಿತ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೨೬] ಇದರಿಂದ ಕೆಲವು ಪೆರ್ಗಡೆಗಳು ಗ್ರಾಮ ಅಥವಾ ಚಿಕ್ಕ ಚಿಕ್ಕ ಆಡಳಿತ ವಿಭಾಗಗಳ ಆಡಳಿತಾಧಿಕಾರಿಗಳಾಗಿದ್ದು, ಮತ್ತೆ ಕೆಲವು ಪೆರ್ಗಡೆಗಳು ಸುಂಕದ ಅಧಿಕಾರಿಗಳಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಗ್ರಾಮದ ಮುಖ್ಯಸ್ಥನಾಗಿದ್ದ ಗಾವುಂಡನ ಅಧಿಕಾರ ಗ್ರಾಮಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಪೆರ್ಗಡೆಗಳ ಅಧಿಕಾರಕ್ಕೆ ಒಂದಕ್ಕಿಂತ ಹೆಚ್ಚು ಗ್ರಾಮಗಳು ಒಳಪಟ್ಟಿದ್ದವು. ಇವರು ಗಾವುಂಡರ ಮೇಲಿನ ಅಧಿಕಾರಿಗಳಾಗಿದ್ದರು. ಗಾವುಂಡರು ಸ್ಥಳೀಯ ತೆರಿಗೆಗಳನ್ನು ಸಂಗ್ರಹಿಸಿ ಪೆರ್ಗಡೆಗಳಿಗೆ ಹಸ್ತಾಂತರಿಸುತ್ತಿದ್ದರು. ಹೀಗಾಗಿ ಇವರನ್ನು 'ಕಿರಿಯಗಾವುಂಡ' ಎಂದು ಕರೆಯಲಾಗುತ್ತಿತ್ತು. ಕಾಲಾಂತರದಲ್ಲಿ ಪಿರಿಯಗಾವುಂಡ>ಪೆರ್ಗ್ಗಾವುಂಡ> ಪೆರ್ಗಾವುಂಡ> ಪೆರ್ಗಡೆ>ಹೆಗ್ಗಡೆ ಎಂದಾಗಿರಬೇಕೆಂದು ಜೆ.ಎಂ. ನಾಗಯ್ಯ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೨೨೭] ಕೂಹುಂಡಿನಾಡಿನ

ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಪೆರ್ಗಡೆಗಳ ಅಧಿಕಾರದ ಸ್ವರೂಪ ಮತ್ತು ಇವರು ಕೈಗೊಂಡಿರುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳು ಈ ಕೆಳಗಿನಂತಿವೆ.

ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನದಲ್ಲಿ–

> ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಚೌಡಿಸೆಟ್ಟಿಯರ ಬೆಸದಿಂ
> ಕಲ್ಲರಸರ ನಿಯಾಮದಿಂ ಶ್ರೀಮತು ಸುಂಕಾಧಿಕಾರಿ ಮತಗೌಂಡನು
> ಚಿಂಚುಣಿಕೆಯ ಪಂಚಮಠಸ್ಥಾನಂಗಳಿಗೆ ಬಿಟ್ಟ ದತ್ತಿಯೆಂತೆಂದಡೆ
> ಮೂಱು ಮದುವೇಜಿಪ್ಪುಸಾಂಕ ಯಿಪ್ಪತ್ತೆತ್ತಿನ ಪಟ್ಟಯಿಂತಿನಿತು.....
> ಪರಿಹಾರವಾಗಿ ಬಿಟ್ಟ ದತ್ತಿ ಮಂಗಳ ಮಹಾಶ್ರೀ ॥

ಸುಂಕಾಧಿಕಾರಿ ಮತಗೌಂಡನ ಉಲ್ಲೇಖವಿದೆ.[೨೨೮] ಈತನು ಮಹಾಪ್ರಧಾನ ಸರ್ವಾಧಿಕಾರಿ ಚೌಡಿಸೆಟ್ಟಿಯ ಆಜ್ಞೆಯಂತೆ ಕಲ್ಲರಸನ ಒಪ್ಪಿಗೆಯನ್ನು ಪಡೆದು ಚಿಂಚುಣಿಕೆಯ (ಇಂದಿನ ಹಣ್ಣಿಕೇರಿ) ಪಂಚಮಠಸ್ಥಾನಗಳಿಗೆ ಸುಂಕಗಳನ್ನು ದಾನ ಮಾಡಿದ್ದಾನೆ. ಉಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೨೯–೩೦ರ ಶಾಸನದಲ್ಲಿ–

> ......ರಟ್ಟಕುಳಭೂಷಣಂ ಶ್ರೀಮ......ನ ಶ್ರೀಮದಂಕಿದೇವರಸರ
> ನಿಯಾಮದಿಂ ಶ್ರೀಮನ್ಮಹಾಪ್ರಧಾನ....ವೆರ್ಗ್ಗಡೆ ಬಮ್ಮಣಯ್ಯಂ
> ಮಾಡಿಸಿದ ಬಸದಿಗೆ ಶ್ರೀಮನ್ಮಹಾಪ್ರಧಾನರಂ ಪ್ರತಿಷ್ಠೆಯಂ
> ಮಾಡಿಸಿ ಖಂಡಸ್ಫುಟಿತ ಜೀರ್ಣ್ಣೋದ್ಧಾರಕ್ಕಂ ದೇವರ ಸರು..
> ರ ದಾನಕ್ಕಂ......................................

ಸವದತ್ತಿಯ ರಟ್ಟರ ಅಂಕದೇವನ ಮಹಾಪ್ರಧಾನ ಪೆರ್ಗಡೆ ಬಮ್ಮಣಯ್ಯನ ನಿರೂಪಣೆಯಿದೆ.[೨೨೯] ಈತನು ಉಳಾಗಡ್ಡಿ ಖಾನಾಪುರದಲ್ಲಿ ಬಸದಿಯನ್ನು ಕಟ್ಟಿಸಿ, ಇದರ ವಿವಿಧ ಧಾರ್ಮಿಕ ಕಾರ್ಯಗಳಿಗೆ ಭೂದಾನ ಮಾಡಿದ್ದಾನೆ. ಇದೇ ಶಾಸನದ ಅಂತ್ಯದಲ್ಲಿ ಜಿನಪತಿ ಪಾದಭಕ್ತನಾದ ಪೆರ್ಗಡೆ ಬೊಪ್ಪನ ಪ್ರಸ್ತಾಪವಿದೆ. ಪ್ರಾಯಶಃ ಈತನು ಮಹಾಪ್ರಧಾನ ಪೆರ್ಗಡೆ ಬಮ್ಮಣಯ್ಯನ ಪುತ್ರನಾಗಿರುವಂತೆ ತೋರುತ್ತದೆ. ಈತನ ಚಟುವಟಿಕೆಗಳ ಕುರಿತಾಗಿ ಸ್ಪಷ್ಟವಿಲ್ಲ. ಇದೇ ಗ್ರಾಮದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಸವದತ್ತಿಯ ರಟ್ಟರ ಅರಸನೊಬ್ಬನ ಪೆರ್ಗಡೆ ಚಾವುಂಡನ ಉಲ್ಲೇಖವಿದೆ.[೨೩೦] ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಅರಸನ ಹೆಸರು ಮತ್ತು ಈ ಪೆರ್ಗಡೆಯ ಚಟುವಟಿಕೆಗಳ ಕುರಿತು ಸ್ಪಷ್ಟವಿಲ್ಲ.

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಉಲ್ಲೀಖಿತ ಸವದತ್ತಿಯ ರಟ್ಟರ ಎರೆಗನ ಮಂತ್ರಿ ಚಾವುಂಡನು[೨೩೧] ಪ್ರಸ್ತುತ ಉಳ್ಳಾಗಡ್ಡಿ ಖಾನಾಪುರದ ಪೆರ್ಗಡೆ ಚಾವುಂಡನೇ ಆಗಿರುವಂತೆ ತೋರುತ್ತದೆ. ಈತನು ರಟ್ಟ ಸಾಮ್ರಾಜ್ಯದ ಏಳಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದನು. ಈತನ ಮಕ್ಕಳು (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರುಗಳು ಸ್ಪಷ್ಟವಿಲ್ಲ) ಕೊಲ್ಲಾಪುರದ ಶಿಲಾಹಾರರ ಮಹಾಮಂಡಳೇಶ್ವರ ಗಂಡರಾದಿತ್ಯದೇವನ ಅಧಿಕಾರಿ (ದಂಡನಾಯಕ) ಕಾವಸೆಟ್ಟಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ದಿಗ್ಗಜವಾಡವನ್ನು (ಇಂದಿನ ದಿಗ್ಗೇವಾಡಿ) ಮುತ್ತಿದ್ದ ಸಂದರ್ಭದಲ್ಲಿ, ಆತನನ್ನು ಎದುರಿಸಲು ತೇರಿದಾಳದ ಮುಖ್ಯಸ್ಥನಾದ ಭುವನಗಾವುಂಡನಿಗೆ ಸಹಾಯ ಮಾಡಿದ್ದಾರೆ.[೨೩೨]

ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಹೆಗ್ಗಡೆಯ ಪ್ರಸ್ತಾಪವಿದೆ.[೨೩೩] ಈತನು ಸವದತ್ತಿಯ ರಟ್ಟರ ಕಾರ್ತವೀರ್ಯನ ಹೆಗ್ಗಡೆಯಾಗಿರುವಂತೆ ತೋರುತ್ತದೆ. ಸಂಕೇಶ್ವರದ ಬ್ರಹ್ಮಪುರಿಯ ಅಶೇಷ ಮಹಾಜನಗಳಿಗೆ ಮತ್ತು ಲಕ್ಷ್ಮೀನರಸಿಂಹ ದೇವಾಲಯದ ಅಷ್ಟವಿಧಾರ್ಚನೆಗೆ ಸುಂಕಗಳನ್ನು ದಾನ ಮಾಡಿದ ಹಲವರಲ್ಲಿ ಈತನೂ ಒಬ್ಬನಾಗಿದ್ದಾನೆ. ಗಡಹಿಂಗ್ಲಜದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ–

ಶ್ರೀ ಯಾಪನೀಯಸಂಘದ ಕುಡುಪಲೆಗಣದಾಚಾರ್ಯ್ಯ ಸ್ಯಾದ್ವಾದ
ವಿದ್ಯಾಪತಿಗಳೆ......ಪಂಡಿತದೇವರ್ಗ್ಗೆ ಶ್ರೀಮನ್ಮಹಾಪ್ರಧಾನ ಪೆರ್ಗ್ಗಡೆ
ದೇವಪಯ್ಯನ ಸತಿ ಚಾಮವ್ವೆ ಮಾಡಿಸಿಕೊಟ್ಟರೀ ಚಂದ್ರಪ್ರಭ ಜಿನಾಲಯ ||

ಮಹಾಪ್ರಧಾನ ಪೆರ್ಗಡೆ ದೇವಪಯ್ಯನ ನಿರೂಪಣೆಯಿದೆ.[೨೩೪] ಈತನ ಧರ್ಮಪತ್ನಿ ಚಾಮವ್ವೆ ಚಂದ್ರಪ್ರಭನಾಥ ಬಸದಿಯನ್ನು ನಿರ್ಮಿಸಿದ್ದಾಳೆ. ಕೊಲ್ಲಾಪುರದ ಕ್ರಿ.ಶ. ೧೧೩೫ರ ಶಾಸನದಲ್ಲಿ–

ಶ್ರೀಮನ್ಮಹಾಸಾಮಂತಂ ನಿಂಬದೇವರಸರು ಕವಡೆಳ್ಳಗೊದ
ಬಳಿಯ ಸಂತೆಯ ಮುದ್ಗೊಡೆಯಲ್ಮಾಡಿಸಿದ ಬಸದಿಯ
ಪಾರ್ಶ್ವನಾಥದೇವರಪ್ಪ ವಿಧಾರ್ಚನಕ್ಕಮಾ ಬಸದಿಯ
ಜೀರ್ಣ್ಣೋದ್ಧಾರಕಮಲ್ಲಿಪ್ಪ ರಿಷಿವಯರಾಹಾರ ದಾನಕ್ಕಂ...........
ಕೂಂಡಿಪಟ್ಟಣದಾದಿತ್ಯಗೃಹದ ಸಾಸನಿಗಂ ಹೆಗ್ಗಡೆ ರಾವಸೆಟ್ಟಿಯುಂ
..............ಶ್ರೀ ಮೂಲಸಂಘ ದೇಸಿಯಗಣ ಪುಸ್ತಕಗಚ್ಛದ
ಕೊಲ್ಲಾಪುರದ ಶ್ರೀ ರೂಪನಾರಾಯಣ ಬಸದಿಯಾಚಾರ್ಯ್ಯರಪ್ಪ
ಶ್ರೀ ಶ್ರುತಕೀರ್ತಿತ್ರೈವಿದ್ಯದೇವರ ಕಾಲಂಕರ್ಚ್ಚಿ ಧಾರಾಪೂರ್ವ್ವಕವಾಗಿ....

ಕೂಂಡಿಪಟ್ಟಣದ ಆದಿತ್ಯಗೃಹದ (ಸೂರ್ಯನ ದೇವಾಲಯ) ಸಾಸನಿಗ ಹೆಗ್ಗಡೆ ರಾವಸೆಟ್ಟಿಯ ಪ್ರಸ್ತಾಪವಿದೆ.[೨೩೫] ಈತನು ಕೊಲ್ಲಾಪುರದ ಶಿಲಾಹಾರರ ಗಂಡರಾದಿತ್ಯನ ಮಹಾಸಾಮಂತನಾದ ನಿಂಬದೇವನು ಕವಡೆಳ್ಳಗೊದ ಬಳಿಯ ಸಂತೆಯ ಮುದ್ಗೊಡೆಯಲ್ಲಿ ಕಟ್ಟಿಸಿದ ಪಾರ್ಶ್ವನಾಥ ಬಸದಿಯ ವಿವಿಧ ಧಾರ್ಮಿಕ ಚಟುವಟಿಕೆಗಳಿಗೆ ಇತರರೊಂದಿಗೆ ಕೂಡಿಕೊಂಡು ದಾನ ಮಾಡಿದ್ದಾನೆ.

೩.೪.೪. ಪಡೆವಳರು

ಪಡೆವಳರನ್ನು 'ಹಡಬಳರು' ಎಂತಲೂ ಕರೆಯಲಾಗುತ್ತಿತ್ತು. 'ಪಡೆವಳ' ಎಂಬುದನ್ನು 'ಸೇನಾನಿ' ಎಂದು ಅರ್ಥೈಸಲಾಗಿದೆ.[೨೩೬] ಇದರಿಂದ ಪಡೆವಳರು ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರ ಅಧೀನದಲ್ಲಿರುತ್ತಿದ್ದ ಸೈನ್ಯದ ಚಿಕ್ಕ ಚಿಕ್ಕ ತುಕ್ಕಡಿಗಳ ನಾಯಕರಾಗಿದ್ದರೆಂಬುದು ಮನವರಿಕೆಯಾಗುತ್ತದೆ. ಕೂಹುಂಡಿನಾಡಿನ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಪಡೆವಳರ ಅಧಿಕಾರದ ಸ್ವರೂಪ ಮತ್ತು ಇವರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳು ಈ ಮುಂದಿನಂತಿವೆ. ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

ಕ್ಷಿತಿಗಿಂತು ನೆಗಳ್ದಸುತರುಂ ಪತಿಬ್ರತಾನ್ವಿತ ಲಚ್ಚಲಾಂಗನೆಯುಂ
ವಿಸ್ತೃತಗೋತ್ರಮಿತ್ರರುಂ ಬೆರಸತಿಸುಖದಿಂದಿರ್ದ್ದನನುಪಮಂ

ಕಾಳಿಯಣಂ ॥ ಸುಕೃತಾಳಂಕೃತ ವೃತ್ತನೊಂದುದಿವಸಂ ವಿದ್ವದ್ವೃತ್ತಂ
ಜೈನಧರ್ಮಕಥಾಗೋಷ್ಠಿಯೊಳಿರ್ದ್ದ ಪರಸುಖಕ್ಕಂ ಖ್ಯಾತಿಗಂ
ತಾರಣಾತ್ಮಕವೆಂತುಂ ಪರಿಶುದ್ಧಧರ್ಮ್ಮಮೆವಲಂ ಬೇರೇನುವಿಲ್ಲೆಂಬುದಂ
ಪ್ರಕಟಂ ಭಾವಿಸಿ ಮಾಡಿಸಲ್ಪಗೆದನರ್ಹದ್ಗೇಹಮಮಂ ಕಾಳಣಂ ॥
ಫಳಿತವನಂಗಳಿ ಬೆಳೆದ ಕೆಯ್ವಾಲದಿಂ ಧನಧಾನ್ಯ ಗೋತುಳಾಕಳಿತ
ಬಹುಪ್ರಜಾಢ್ಯವೆನಿಪೂರ್ಗ್ಗಳಿನೊಪ್ಪವನಾಂತ ಕೂಂಡಿನಾಡೊಳಗೆ
ಸೆವೆಕ್ಕಸಂಬುಗೆಯೊಳರ್ಜ್ಜಿತವಾಗಿ ದೃಡೋಂನತ ಕ್ರಿಯಾವಿಳಸಿತಮಂ
ವಿನಿರ್ಮ್ಮಿಸಿದನಾಮೆ ನೇಮಿಜಿನೇಂದ್ರಗೇಹಂ ॥

ಮಹಾಪ್ರಧಾನ ಪಡೆವಳ ಕಾಳಿಯಣ್ಣನ ನಿರೂಪಣೆಯಿದೆ.[೨೩೭] ಈತನು ಯಕ್ಸಂಬಾದಲ್ಲಿ ನೇಮಿನಾಥ ಬಸದಿಯನ್ನು ನಿರ್ಮಿಸಿ, ಇದರ ತ್ರಿಕಾಲ ಸಂಧ್ಯಾವಸರದ ಮಧುರ ವಾದ್ಯಕ್ಕೆ ಎರಡುಸಾವಿರ ಕಂಬಗಳ ಅಳತೆಯ ಭೂಮಿ, ದಾನಶಾಲೆ, ಬಣಬೆಯ ನಿವೇಶನ, ಹೂದೋಟ ಮೊದಲಾದವುಗಳನ್ನು ದಾನ ಮಾಡಿದ್ದಾನೆ. ಇದೇ ಗ್ರಾಮದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ವೀರಗಲ್ಲು ಶಾಸನದಲ್ಲಿ ಕಲ್ಯಾಣದ ಕಲಚೂರಿಯರ ಇಮ್ಮಡಿ ಬಿಜ್ಜಳದೇವನ ಸಾಮಂತನಾದ ರೇವಣ್ಣನ ಸೇನಾಧಿಪತಿ ಪಡೆವಳ ಜಿನ್ನನ ಪ್ರಸ್ತಾಪವಿದೆ.[೨೩೮] ಈತನು ಯಾವುದೋ ಯುದ್ಧದಲ್ಲಿ ಮರಣವನ್ನಪ್ಪಿದ್ದಾನೆ.

೩.೪.೩. ಸೇನಬೋವರು

ಸೇನಬೋವರು ಇಂದಿನ ಶ್ಯಾನುಭೋಗರು ಮತ್ತು ಗ್ರಾಮ ಲೆಕ್ಕಿಗರಂತೆ ಅಂದು ಗ್ರಾಮದ ಮುಖ್ಯಸ್ಥನಾಗಿದ್ದ ಗಾವುಂಡನ ಅಧೀನದಲ್ಲಿ ಲೆಕ್ಕಪತ್ರಗಳನ್ನು ಬರೆಯುತ್ತಿದ್ದರು. ಗ್ರಾಮಕ್ಕೊಬ್ಬ ಸೇನಬೋವ ಇರುತ್ತಿದ್ದನು. ಕೆಲವೊಮ್ಮೆ ಅತಿ ಚಿಕ್ಕ ಚಿಕ್ಕ ಎರಡು, ಮೂರು ಗ್ರಾಮಗಳಿಗೊಬ್ಬ ಸೇನಬೋವ ಇರುತ್ತಿದ್ದನು. ವಿದ್ಯಾವಂತರಾಗಿದ್ದ ಇವರು ಗ್ರಾಮದ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಜೊತೆಗೆ ಸ್ಥಳೀಯ ಶಾಸನಗಳನ್ನೂ ಬರೆಯುತ್ತಿದ್ದರು. ತಮ್ಮ ಜೀವನೋಪಾಯಕ್ಕಾಗಿ ಅರಸರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರಿಂದ ದಾನ-ದತ್ತಿಗಳನ್ನು ಪಡೆಯುತ್ತಿದ್ದರು.[೨೩೯] ಕೂಹುಂಡಿನಾಡಿನ ಶಾಸನಗಳಲ್ಲಿ ಪ್ರಸ್ತಾಪಿತವಾಗಿರುವ ಸೇನಬೋವ ಅಧಿಕಾರದ ಸ್ವರೂಪ ಮತ್ತು ಇವರು ಕೈಗೊಂಡಿರುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಈ ಮುಂದಿನಂತಿವೆ. ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೦೫೨ರ ಶಾಸನದಲ್ಲಿ–

ತಂಬುಲಿಗರ ಭೀ.....ಣ್ಣಂ ತನ್ನ ಗಳಿಸಿದ ಭೀಮಗಟ್ಟಿನ ಖಾತ
ಪೂರಣಕ್ಕೆ ರಿ........ಗದ್ಯಾಣದ ವೃದ್ಧಿಯೊಳಂ ಸ್ಥಾನ
ಮಿಟ್ಟುಬಿಟ್ಟಗಟ್ಡಿಮ.....ಚರಕ್ಯ ಭೀಮಯ್ಯ ಸೇನಬೋವ
ಗೋಯಿನ್ದಿಮಯ್ಯ ಬ......ಸಯ್ಯ ಹೋಳವ ಮಾಧವಯ್ಯ
ಮುಗ್ಗಿಯ ಮಧುವಯ್ಯ.................

ಸೇನಬೋವ ಗೋವಿಂದಮಯ್ಯನ ಪ್ರಸ್ತಾಪವಿದೆ.[೨೪೦] ಈತನು ತಂಬುಲಿಗರ ಭೀಮಣ್ಣನು ಮುಗಟಖಾನ ಹುಬ್ಬಳ್ಳಿಯಲ್ಲಿ ಅಗೆಸಿದ ಭೀಮಗಟ್ಟು ಎಂಬ ಹೊಂಡಕ್ಕೆ ನೀರು ತುಂಬಿಸುವ ಸಲುವಾಗಿ ದತ್ತಿಯನ್ನು

ಕೊಟ್ಟಿದ್ದಾನೆ. ಸವದತ್ತಿಯ ಕ್ರಿ.ಶ. ೬೬೯ರ ತಾಮ್ರಪಟ ಶಾಸನದಲ್ಲಿ ಮಹಾಸನ್ಧಿವಿಗ್ರಹಿಕ ಜಯಸೇನನ ಉಲ್ಲೇಖವಿದೆ.[೨೪೧] ಪ್ರಸ್ತುತ ತಾಮ್ರಪಟ ಶಾಸನವನ್ನು ಈತನೇ ಬರೆದಿದ್ದಾನೆ. ಕಬ್ಬೂರದ ಕ್ರಿ.ಶ. ೧೨೦೪ರ ಶಾಸನದಲ್ಲಿ ಅಗ್ರಹಾರ ಕಬ್ಬೂರಿನ ಹಿಳವಿದಾಸನ ಪ್ರಸ್ತಾಪವಿದೆ.[೨೪೨] ಈತನು ಹೊಳ್ಳಯ್ಯ ನಾಯಕನ ಮುಂದಾಳತ್ವದಲ್ಲಿ ಕುದುರೆಗಳ ಮಾರಾಟಕ್ಕೆ ವಿಧಿಸಲಾಗುತ್ತಿದ್ದ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಸ್ಥಳೀಯ ಸ್ವಯಂಭೂಚಕ್ರವರ್ತಿ ಕಲಿದೇವಸ್ವಾಮಿ ದೇವಾಲಯಕ್ಕೆ ದಾನ ಮಾಡಿದ್ದಾನೆ. ತೇರ್ಣಿಯ ಕ್ರಿ.ಶ. ೧೦೬೨ರ ಶಾಸನದಲ್ಲಿ–

ಸೇನಬೋವ ಸಾಸನಿಗ ಮಾರಸಿಂಗಯ್ಯ ಬರದ
ಮಂಗಳ ಮಹಾಶ್ರೀ ಶ್ರೀ ಶ್ರೀ ॥

ಸೇನಬೋವ ಸಾಸನಿಗ ಮಾರಸಿಂಗಯ್ಯನ ನಿರೂಪಣೆಯಿದೆ.[೨೪೩] ಪ್ರಸ್ತುತ ಶಾಸನವನ್ನು ಈತನೇ ರಚಿಸಿದ್ದಾನೆ.

೩.೫. ಕೂಹುಂಡಿನಾಡಿನ ಉಪ ಆಡಳಿತ ವಿಭಾಗಗಳು

ಕೂಹುಂಡಿನಾಡಿನಲ್ಲಿ ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಅಧಿಕಾರ ವಿಕೇಂದ್ರಿಕರಣ ಮಾಡಿದುದು ಗೋಚರಿಸುತ್ತದೆ. ಅದು ಇಂದಿನ ಕೇಂದ್ರಾಡಳಿತ ಮತ್ತು ಪ್ರಾಂತಾಡಳಿತ ರೀತಿಯಾಗಿದ್ದಿತ್ತು. ರಾಜಧಾನಿ ಪಟ್ಟಣವು ಕೇಂದ್ರಾಡಳಿತದ ಮುಖ್ಯ ಕೇಂದ್ರವಾಗಿತ್ತು. ಪ್ರಾಂತಾಡಳಿತದಲ್ಲಿ ಮಂಡಲ, ವಿಷಯ, ದೇಶ, ನಾಡು, ಕಂಪಣ ಮೊದಲಾದ ಹಲವು ಉಪ ಆಡಳಿತ ವಿಭಾಗಗಳಿದ್ದವು. ಈ ವಿಭಾಗಗಳ ಸ್ವರೂಪ ಮೂಲತಃ ಅನಿರ್ದಿಷ್ಟವಾಗಿದೆ. ಹೀಗಿದ್ದೂ ನಾಡು, ಮಂಡಲ, ದೇಶ ದೊಡ್ಡದಾಗಿದ್ದವು. ಕಂಪಣವು ಸಣ್ಣದಾಗಿತ್ತೆಂದು ಸ್ಥೂಲವಾಗಿ ಹೇಳಬಹುದು. ಗ್ರಾಮಗಳು ಅಂದಿನ ಆಡಳಿತ ವ್ಯವಸ್ಥೆಯಲ್ಲಿ ಅತಿ ಚಿಕ್ಕ ಘಟಕಗಳಾಗಿದ್ದವು. ಇವು ಯುದ್ಧಗಳಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರ ನಾಡಿನಲ್ಲಿಯ ಆಯಾಕಾಲೀನ ಅಧಿಕಾರ ಸಂಚಲನದ ಅಗತ್ಯಗಳಿಗನುಗುಣವಾಗಿ ಭಾಗಿಯಾಗುತ್ತಿದ್ದವು. ಆಡಳಿತ ವಿಭಾಗಗಳ ಆಡಳಿತವನ್ನು ಅರಸನಿಂದ ನಿಯಮಿಸಲ್ಪಟ್ಟ ಮಹಾಮಂಡಳೇಶ್ವರರು, ಮಹಾಸಾಮಂತರು ಮತ್ತು ಗ್ರಾಮಗಳ ಆಡಳಿತವನ್ನು ಪ್ರಭುಗಾವುಂಡರು, ಗಾವುಂಡರು ನೋಡಿಕೊಳ್ಳುತ್ತಿದ್ದರು. ಕೆಲವೊಮ್ಮೆ ರಾಣಿಯರು, ಯುವರಾಜರು, ಧರ್ಮಗುರುಗಳು, ದಂಡನಾಯಕರು ಆಡಳಿತ ವಿಭಾಗಗಳ ಉಸ್ತುವಾರಿಯನ್ನು (ಮೇಲ್ವಿಚಾರಣೆ) ನೋಡಿಕೊಳ್ಳುತ್ತಿದ್ದ ನಿದರ್ಶನಗಳೂ ಕಾಣುತ್ತವೆ. ಕೂಹುಂಡಿನಾಡಿನಲ್ಲಿದ್ದ ಉಪ ಆಡಳಿತ ವಿಭಾಗಗಳು, ಅವುಗಳ ವ್ಯಾಪ್ತಿ, ಕೇಂದ್ರ ಪಟ್ಟಣ, ಅವುಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತರು, ಅಧಿಕಾರಿಗಳು ಮೊದಲಾದ ವಿವರಗಳು ಈ ಕೆಳಗಿನಂತಿವೆ.

೩.೫.೧. ತೇರಿದಾಳ ಪನ್ನೆರಡು

ತೇರದಾಳದ ಕ್ರಿ.ಶ. ೧೧೨೩, ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಕೂಹುಂಡಿನಾಡಿನಲ್ಲಿದ್ದ ತೇರದಾಳ ಪನ್ನೆರಡು ಉಪ ಆಡಳಿತ ವಿಭಾಗದ ಪ್ರಸ್ತಾಪವಿದೆ.[೨೪೪] ಪ್ರಸ್ತುತ ತೇರದಾಳದ ಶಾಸನವು ಈ ವಿಭಾಗದ ಸಾಂಸ್ಕೃತಿಕ ಹಿರಿಮೆಯನ್ನು–

ಭರತವಿಷಯಮಾದೇಶದೋಳು ಕುಂತಳೋದ್ಯತ್ ಕ್ಷಿತಿತೋರ್ಕ್ಕುಂ
ಚೆಲ್ವಿನಿಂ ತದ್ಧರಣೆಯೊಳೆಸೆಗುಂ ಕೊಂಡಿನಾಮೂದ್ಭದೇಶಂ
ತದ್ವಿಷಯ ಮಧ್ಯೋದ್ದೇಶದೊಳು ‖ ನಿರುಪಮ ಗನ್ಧಶಾಲಿವನದಿಂ
ಬನದಿಂ ಕೊಳದಿಂ ತಟಾಕದಿಂ ಗಿರಿವನ ತೋಯದುರ್ಗ್ಗ
ಕುಳದಿಂದಗಳಿಂ ಬುಧ ಮಾಧವಾರ್ಕ್ಕ ಶಂಕರ ಜಿನಸದುಮದಿಂ
ವಿಪಣಿಮಾರ್ಗದಿ ನೊಪ್ಪುವ ತೇರಿದಾಳ ಪಂನ್ನೆರಡಱ ಚಲ್ವನೆಯ್ದೆ
ಪೊಗಳಲುಕಜನುಂ ನೆಱೆಯಂ ಧರಿತ್ರಿಯೊಳು ‖

ಎಂದು ಕೊಂಡಾಡಿದೆ. ಇಂದಿನ ತೇರದಾಳ ಪಟ್ಟಣವು ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇದರಲ್ಲಿ ಇಂದಿನ ತೇರದಾಳದ ಸುತ್ತಮುತ್ತಲಿನ (ಹಾರೂಗೇರಿ, ಸಸಾಲಟ್ಟಿ ಇತ್ಯಾದಿ) ಹನ್ನೆರಡು ಗ್ರಾಮಗಳು ಸೇರ್ಪಡೆಯಾಗಿದ್ದವು. ಈ ವಿಭಾಗದ ಆಡಳಿತವನ್ನು ಸವದತ್ತಿಯ ರಟ್ಟರ ಕಾರ್ತವೀರ್ಯನ ಮಾಂಡಲಿಕನಾದ ಗೊಂಕದೇವರಸನು ನೋಡಿಕೊಳ್ಳುತ್ತಿದ್ದನು.

೩.೫.೨. ಕುರುಂಬೆಟ್ಟ ಕಂಪಣ

ರಾಯಬಾಗದ ಕ್ರಿ.ಶ. ೧೦೪೦, ಮಮದಾಪುರದ ಕ್ರಿ.ಶ. ೧೨೪೬ರ ಶಾಸನಗಳಲ್ಲಿ ಕುರುಂಬೆಟ್ಟ ಕಂಪಣದ ಪ್ರಸ್ತಾಪವಿದೆ.[೨೪೫] ಗೋಕಾಕ ತಾಲ್ಲೂಕಿನಲ್ಲಿರುವ ಮಮದಾಪುರ ಗ್ರಾಮವೇ ಈ ಕಂಪಣದ ಕೇಂದ್ರ ಪಟ್ಟಣವಾಗಿತ್ತು. ಮಮದಾಪುರದ ಶಾಸನವು–

ಕುಂತಳೋರ್ಬ್ಬೇ ಜನಜನಿತಯಳ ಶ್ರೀ ಸುಕಾಗಾರಗುರ್ಬ್ಬಿ ತಸ್ಮಿನ
ಸುಷ್ಮೇರಲಕ್ಷ್ಮೀ ಮುದಿತ ಜನಪದಾಗನ್ಯ ಪುಣ್ಯೈಕ ಕೋಶಃ
ಸಂಪತಸಂಪೂರಿತಾಶಃ ಸಜಯತಿ ಜಗತಿಮಂಡನಂ ಕೂಂಡಿದೇಶಃ ‖
ದೇಶೀತತ್ರಚರಾಸ್ತಿ ವಾಸ್ತವಾಜನ ಶ್ರೀವರ್ತ್ತನಂ ಪಟ್ಟಣಂ ಪೂರ್ಣನೇಕ
ತಟಾಕರೂಪ ಸರಸೀ ಸಂಪತ್ತಿ ಶೋಭಾಸ್ಪದಂ ಯತಸರ್ಬ್ಬತ್ರ ಲತಾಂತ
ಪಲ್ಲವಫಲ ಕ್ಷೋನಿರ್ಮ್ಯೆರ್ಬ್ಬರಂ ತ್ರಿಂಶದ ಗ್ರಾಮವರಾಧಿ ಗಿರಿನಾಮ
ಶ್ರೀ ಮತಾವ್ಯಶ್ರಯಃ ‖ ತದಿಹ ಕುರುಂಬೆಟ್ಟ ಮಯಿಲೆ ಪ್ರಖ್ಯಾತ ಲೋಕ
ಭಾಸ್ಯಾಯಾ ನಗರಂ । ಯತ್ರ ಸುರಾಲಯ ಕಳಶೈಹಃ ಸಾರದ್ಬಂ
ಸಂಧಿಯ್ಯತೇ ರಾಜಾವಳಿಃ ‖

ಎಂದು ಕುರುಂಬೆಟ್ಟ ನಗರದ ಭೌಗೋಳಿಕ ಹಿರಿಮೆಯನ್ನು ಬಣ್ಣಿಸಿದೆ. ಈ ವಿಭಾಗದಲ್ಲಿ ಕಂಕಣನೂರು (ಇಂದಿನ ರಾಯಬಾಗ ತಾಲ್ಲೂಕಿನ ಕಂಕಣವಾಡಿ) ಗ್ರಾಮವನ್ನೊಳಗೊಂಡಂತೆ ಸುತ್ತಮುತ್ತಲಿನ ಗ್ರಾಮಗಳು ಸೇರ್ಪಡೆಯಾಗಿದ್ದವು. ಆದರೆ ಈ ವಿಭಾಗದಲ್ಲಿದ್ದ ಗ್ರಾಮಗಳ ಸಂಖ್ಯೆ ಮತ್ತು ಇದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತರು ಅಥವಾ ಅಧಿಕಾರಿಗಳ ಕುರಿತಾಗಿ ಯಾವುದೇ ಮಾಹಿತಿಗಳು ಇದುವರೆಗೂ ಲಭ್ಯವಾಗಿಲ್ಲ.

೩.೫.೩. ಸುಗಂಧವರ್ತಿ ಪನ್ನೆರಡು

ಸವದತ್ತಿಯ ಕ್ರಿ.ಶ. ೮೭೫–೭೬, ೧೦೮೭, ೧೧೯೮, ೧೨೨೮ರ ಶಾಸನಗಳಲ್ಲಿ ಸುಗಂಧವರ್ತಿ ಪನ್ನೆರಡು ಆಡಳಿತ ವಿಭಾಗದ ಉಲ್ಲೇಖವಿದೆ.[೨೪೬] ಇಂದಿನ ತಾಲ್ಲೂಕು ಕೇಂದ್ರ ಸವದತ್ತಿ ನಗರವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಕ್ರಿ.ಶ. ೧೦೮೭ರ ಶಾಸನವು–

ಕುಹುಣ್ಡಿಮೂಸಾಸಿರದ ಬಳಿಯ ಕಂಪಣ ಪನ್ನೆರಡಱ

ಮೊದಲಬಾಡಂ ಸಿವ....ರಾಜಧಾನಿ ಸುಗನ್ಧವರ್ತ್ತಿಯೊಳ್...

ಎಂದು ಸುಗಂಧವರ್ತಿ ಪನ್ನೆರಡು ವಿಭಾಗವನ್ನು ಹೆಸರಿಸಿದೆ. ಪುಲಗೆರೆವಳ್ಳಿ (ಇಂದಿನ ಸವದತ್ತಿ ತಾಲ್ಲೂಕಿನ ಹುಲಿಕಟ್ಟಿ), ಮುಳಗುಂದ ಗ್ರಾಮಗಳನ್ನೊಳಗೊಂಡಂತೆ ಸುತ್ತಮುತ್ತಲಿನ ಹನ್ನೆರಡು ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು. ಆದರೆ ಆ ಗ್ರಾಮಗಳು ಮತ್ತು ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಅಧಿಕಾರಿಗಳ ಕುರಿತಾಗಿ ಮಾಹಿತಿಗಳು ಲಭ್ಯವಾಗಿಲ್ಲ. ರಟ್ಟ ಮನೆತನದ ಪ್ರಾರಂಭದ ಅರಸರು ಸುಗಂಧವರ್ತಿಯ ಇಂದಿನ ಎಲ್ಲಮ್ಮದೇವಿ ದೇವಾಲಯದ ಗುಡ್ಡದ ಪರಿಸರದಲ್ಲಿ ಕೋಟೆಯನ್ನು ಕಟ್ಟಿಕೊಂಡು ಆಳ್ವಿಕೆ ಪ್ರಾರಂಭಿಸಿದರು. ಅಂತಾಗಿ ಸುಗಂಧವರ್ತಿ ಈ ಮನೆತನದ ಪ್ರಾರಂಭದ ರಾಜಧಾನಿಯಾಗಿತ್ತು. ೧೯ನೆಯ ಶತಮಾನದವರೆಗೂ ಇದನ್ನು ಪರಸಗಡ (ಪರಶುರಾಮನ ಕೋಟೆ) ಎಂದು ಕರೆಯಲಾಗುತ್ತಿತ್ತು. ತರುವಾಯ ಸವದತ್ತಿ ಎಂದು ಕರೆಯಲಾಗುತ್ತಿದೆ.

೩.೫.೪. ಹೊರಘಟ್ಟಿ ಸಪ್ತತಿ

ಏಣಗಿಯ ಕ್ರಿ.ಶ. ೧೧೮೨ರ ತಾಮ್ರಪಟ ಶಾಸನದಲ್ಲಿ ಹೊರಘಟ್ಟಿ ಸಪ್ತತಿ ಆಡಳಿತ ವಿಭಾಗದ ನಿರೂಪಣೆಯಿದೆ.[೨೪೭] ಈ ವಿಭಾಗದಲ್ಲಿ ಅಂತರ್ಗತವಾಗಿದ್ದ ಗ್ರಾಮಗಳು ಮತ್ತು ಇಲ್ಲಿ ಆಡಳಿತ ಮಾಡುತ್ತಿದ್ದ ಸಾಮಂತ ಅಥವಾ ಅಧಿಕಾರಿಗಳ ಕುರಿತಾಗಿ ಇದುವರೆಗೂ ಯಾವುದೇ ಮಾಹಿತಿಗಳು ಲಭ್ಯವಾಗಿಲ್ಲ. ಇಂದಿನ ಸವದತ್ತಿ ತಾಲ್ಲೂಕಿನ ಯರಗಟ್ಟಿ ಗ್ರಾಮವೇ ಹೊರಘಟ್ಟಿ ಸಪ್ತತಿ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿದ್ದು, ಇದರ ಸುತ್ತಮುತ್ತಲಿನ ಏಪ್ಪತ್ತು ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು.[೨೪೮]

೩.೫.೫. ಹುಬಳ್ಳಿ ಪನ್ನೆರಡು

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ೧೨೪೯ರ ತಾಮ್ರಪಟ ಶಾಸನದಲ್ಲಿ ಹುಬಳ್ಳಿ ಪನ್ನೆರಡು ಆಡಳಿತ ವಿಭಾಗದ ಉಲ್ಲೇಖವಿದೆ.[೨೪೯] ಇಂದಿನ ಬೈಲಹೊಂಗಲ ತಾಲ್ಲೂಕಿನ ಮುಗಟಖಾನ ಹುಬ್ಬಳ್ಳಿ ಗ್ರಾಮವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಇಂದಿನ ಹಿರೇಬಾಗೇವಾಡಿ ಗ್ರಾಮವನ್ನೊಳಗೊಂಡಂತೆ ಸುತ್ತಮುತ್ತಲಿನ ಹನ್ನೆರಡು ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು. ಮೂಲದಲ್ಲಿ ಹುಬ್ಬಳ್ಳಿ ಎಂದು ಕರೆಸಿಕೊಳ್ಳುತ್ತಿದ್ದ ಈ ಗ್ರಾಮದ ಆಡಳಿತವನ್ನು ನೋಡಿಕೊಳ್ಳಲು ಮುಸ್ಲಿಂ ದೊರೆಗಳು ಮುಗುಟಖಾನ ಎಂಬ ಸರದಾರನನ್ನು ನೇಮಿಸಿದಾಗ ಅವನ ಪ್ರಾಬಲ್ಯದ ಫಲವಾಗಿ ಹುಬ್ಬಳ್ಳಿ ಎಂಬ ಗ್ರಾಮಕ್ಕೆ ಮುಗುಟಖಾನ ಎಂಬುದು ಸೇರಿಕೊಂಡು ಮುಗುಟಖಾನ ಹುಬ್ಬಳ್ಳಿ ಎಂದು ಕರೆಯಲ್ಪಟ್ಟಿದೆ.

೨.೫.೬. ವೇಣುಗ್ರಾಮ ಎಪ್ಪತ್ತು

ರಾಯಬಾಗದ ಕ್ರಿ.ಶ. ೧೦೪೦, ಬೆಳಗಾವಿಯ ಕ್ರಿ.ಶ. ೧೨೦೪, ಸವದತ್ತಿಯ ಕ್ರಿ.ಶ. ೧೨೨೮, ಹಣ್ಣಿಕೇರಿಯ ಕ್ರಿ.ಶ. ೧೨೫೮, ನೇಸರಗಿಯ ಕ್ರಿ.ಶ. ೧೨೧೯, ಕುಂಭಾಪುರದ ಕ್ರಿ.ಶ. ೧೧೨೬ರ ಶಾಸನಗಳಲ್ಲಿ ವೇಣುಗ್ರಾಮ ಎಪ್ಪತ್ತು ಆಡಳಿತ ವಿಭಾಗದ ಪ್ರಸ್ತಾಪವಿದೆ.[೨೫೦] ಇದನ್ನು ವೇಳುಗ್ರಾಮ ಎಪ್ಪತ್ತು ಎಂತಲೂ ಕರೆಯಲಾಗಿದೆ. ಇಂದಿನ ಬೆಳಗಾವಿ ನಗರವೇ ಈ ವಿಭಾಗದ ಕೇಂದ್ರ ಪಟ್ಟಣ ಮತ್ತು ರಾಜಧಾನಿಯಾಗಿತ್ತು. ಈ ನಗರದ ಸುತ್ತಮುತ್ತಲಿನ ಎಪ್ಪತ್ತು ಗ್ರಾಮಗಳು ಈ ವಿಭಾಗದಲ್ಲಿ ಅಂತರ್ಗತವಾಗಿದ್ದವು. ಸವದತ್ತಿಯ ರಟ್ಟರ ಮುಮ್ಮಡಿ ಕಾರ್ತವೀರ್ಯನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ರಾಜಧಾನಿ ಕೇಂದ್ರವನ್ನು ಸುಗಂಧವರ್ತಿಯಿಂದ ವೇಣುಗ್ರಾಮಗೆ ವರ್ಗಾಯಿಸಿದನು. ೪ನೆಯ ಕಾರ್ತವೀರ್ಯ ಮತ್ತು ಈತನ ಸಹೋದರ ಮಲ್ಲಿಕಾರ್ಜುನ ವೇಣುಗ್ರಾಮ ರಾಜಧಾನಿಯಿಂದ ಕೆಲಕಾಲ ಸ್ವತಂತ್ರವಾಗಿ ಆಳ್ವಿಕೆ ಮಾಡಿದ್ದಾರೆ. ವೇಣುಗ್ರಾಮಯ ಪರಿಸರದಲ್ಲಿ ಬಿದಿರು (ವೇಣು) ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಇದಕ್ಕೆ ವೇಣುಗ್ರಾಮ ಎಂಬ ಹೆಸರು ಬಂದಿದೆ. ಹಾಗೆಯೇ ಇಲ್ಲಿ ಎಳ್ಳು ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಇದನ್ನು ವೇಳುಗ್ರಾಮ (ಎಳ್ಳು>ವೇಳು>ವೇಳುಗ್ರಾಮ) ಎಂತಲೂ ಕರೆಯಲಾಗಿದೆ. ವೇಣುಗ್ರಾಮದ ಭೌಗೋಳಿಕ ವ್ಯಾಪ್ತಿ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನವು–

> ಶ್ರೀಮಜ್ಜಂಬೂದ್ವೀಪದ ಭೂಮಧ್ಯ ಸ್ತಂಭವೆನಿಸಿ ಮಂದರಶೈಲಂ
> ಆ ಮಂದರ ದಕ್ಷಿಣದಿಗ್ಭೂಮಂಡಳಮೆಸೆಗು ಭರತನಾಮದಿನೆಂದುಂ ॥
> ಅನ್ತನೇಕ ಮಣಿಗಣಭರಿತ ಭರತಕ್ಷೇತ್ರದೊಳು ಸಮಸ್ತವಸ್ತುವಿಸ್ತೀರ್ಣ್ನ
> ನಾನಾಜನಪದಬ್ಯಾಕೀರ್ಣ್ನ ಗ್ರಾಮನಗರಖೇಡಖರ್ಬ್ಬಡಾದಿನಗರೀ
> ಸಂಪೂರ್ಣ್ನ ತ್ರಿಸಹಸ್ರ ಕೂಂಡಿ ಮಂಡಳಮಧ್ಯಪ್ರದೇಶಮನಳಂಕರ್ಸಿ
> ಪ್ರಾಜ್ಯರಾಜ್ಯಲಕ್ಷ್ಮೀವಿಳಾಸಾವಾಸಕಾಶ್ರಯವಾಗಿ ಸೊಗಯಿಸುವ
> ವೇಣುಗ್ರಾಮಮಹಾಗ್ರಾಮದೊಳೂ ॥

ಎಂದು ಸೊಗಸಾಗಿ ಬಣ್ಣಿಸಿದೆ.

೨.೫.೭. ಉತ್ಸುಗ್ರಾಮ ಮೂವತ್ತು

ಧಾರವಾಡ ತಾಲ್ಲೂಕಿನ ನರೇಂದ್ರದ ಕ್ರಿ.ಶ. ೧೧೨೬ರ ಮತ್ತು ಕುಂಭಾಪುರದ ಕ್ರಿ.ಶ. ೧೧೨೬ರ ಶಾಸನಗಳಲ್ಲಿ ಉತ್ಸುಗ್ರಾಮ ಮೂವತ್ತು ಆಡಳಿತ ವಿಭಾಗದ ನಿರೂಪಣೆಯಿದೆ.[೨೫೧] ಇಂದಿನ ಬೆಳಗಾವಿ ತಾಲ್ಲೂಕಿನ ಉಚಗಾಂವ (ಉಚಗಾವಿ) ಗ್ರಾಮವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ಗ್ರಾಮದ ಸುತ್ತಮುತ್ತಲಿನ ಮೂವತ್ತು ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು. ಆದರೆ ಈ ಗ್ರಾಮಗಳು ಯಾವುವು ಮತ್ತು ಇಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತರು ಅಥವಾ ಅಧಿಕಾರಿಗಳ ಕುರಿತಾಗಿ ಯಾವುದೇ ಮಾಹಿತಿಗಳು ಲಭ್ಯವಿಲ್ಲ.

೩.೫.೮. ಕೊರವಳ್ಳಿ ನೂರೈವತ್ತು

ಕೆರೂರದ ಕ್ರಿ.ಶ. ೧೧೪೯, ಯಕ್ಸಂಬಾದ ಕ್ರಿ.ಶ. ೧೧೬೫, ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ ಕೊರವಳ್ಳಿ ನೂರೈವತ್ತು ಆಡಳಿತ ವಿಭಾಗದ ಪ್ರಸ್ತಾಪವಿದೆ.[೨೫೨] ಇದನ್ನು ಕೊರವಳ್ಳಿ ಕಂಪಣ ಎಂತಲೂ ಕರೆಯಲಾಗಿದೆ. ಇಂದಿನ ಚಿಕ್ಕೋಡಿ ತಾಲ್ಲೂಕಿನ ಜೋಡಕುರಳಿ ಗ್ರಾಮವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನವು–

ಕೊರವಳ್ಳಿ ಗಂಪಣದ ಬಳಿಯ ಬಾಡಂ ಯಕ್ಕಸಂಬುಗೆ

ಎಂದು ಈ ವಿಭಾಗವನ್ನು ಹೆಸರಿಸಿದೆ. ಈ ವಿಭಾಗದಲ್ಲಿ ಯಕ್ಸಂಬಾ, ಕೆರೂರು, ಭೋಜ, ಉಂಬರವಾಣಿ ಗ್ರಾಮಗಳು ಸೇರ್ಪಡೆಯಾಗಿದ್ದು, ಉಳಿದ ಗ್ರಾಮಗಳ ಕುರಿತಾಗಿ ವಿವರಗಳು ಲಭ್ಯವಿಲ್ಲ. ಸವದತ್ತಿಯ ರಟ್ಟರ ಕತ್ತಮರಸ ಮತ್ತು ಹೆಮ್ಮಡಿದೇವನು (ಪ್ರಾಯಶಃ ಅಧಿಕಾರಿ) ಈ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಕಲ್ಯಾಣದ ಕಲಚೂರಿಯರ ಮಹಾಮಂಡಳೇಶ್ವರ ಇಮ್ಮಡಿ ಬಿಜ್ಜಳದೇವನು ಕೂಹುಂಡಿ–೩೦೦೦ ವಿಭಾಗದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು.

೩.೫.೯. ನೂಲೆನಾಡು

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ನೂಲೆನಾಡು ಆಡಳಿತ ವಿಭಾಗದ ಉಲ್ಲೇಖವಿದೆ.[೨೫೩] ಪ್ರಸ್ತುತ ಶಾಸನದಲ್ಲಿ–

ಆ ಚೌಡಿಸೆಟ್ಟಿಯರು ತೀರ್ಥವಿಶೇಷಮಂ ಬೆಸಗೊಳಲು
ನೂಲೆನಾಡೊಳಗಿನ ಮನಿತನದಿ ಕವಿಳಲಸತೀರ್ಥಂ
ನಾಲ್ಕುಯುಗದ ಪುರಾಣೋಕ್ತದಿಂಬಂದ ಕ್ಷೇತ್ರವದೆಂತೆಂದಡೆ... ||

ಎಂದು ನೂಲೆನಾಡು ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಚೌಡಿಸೆಟ್ಟಿಯರ ಮನೆತನದ ಪರಿಚಯವಿದೆ. ಕೂಹುಂಡಿನಾಡಿನಲ್ಲಿ ಪ್ರಮುಖ ತೀರ್ಥಕ್ಷೇತ್ರವಾಗಿದ್ದ ನೂಲೆನಾಡು ಪಟ್ಟಣವು ಪುರಾಣ ಕಾಲದಿಂದಲೂ ಪ್ರಸಿದ್ಧಿಯನ್ನು ಹೊಂದಿದ ಸ್ಥಳವಾಗಿತ್ತು. ಇಂದಿನ ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಚಿಕ್ಕೋಡಿ ತಾಲ್ಲೂಕುಗಳು ಮತ್ತು ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ ತಾಲ್ಲೂಕಿನ ಪ್ರದೇಶದಲ್ಲಿ ನೂಲೆನಾಡು ವಿಭಾಗ ಇದ್ದಿರಬಹುದೆಂದು ಎಂ.ಎಂ. ಕಲಬುರ್ಗಿ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೫೪] ಗಡಹಿಂಗ್ಲಜ ತಾಲ್ಲೂಕಿನಲ್ಲಿ ಹರಣಕಾಶಿ (ಹಿರಣ್ಯಕೇಶಿ) ನದಿಯ ದಡದಲ್ಲಿರುವ ನೂಲಿ ಎಂಬ ಗ್ರಾಮವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಈ ಆಡಳಿತ ವಿಭಾಗದಲ್ಲಿ ಇಂದಿನ ಚಿಕ್ಕೋಡಿ ತಾಲ್ಲೂಕಿನ ಬಂಬಲವಾಡ, ಹುಕ್ಕೇರಿ ತಾಲ್ಲೂಕಿನ ಕವಿಳಾಸಪುರ ಗ್ರಾಮಗಳು ಸೇರ್ಪಡೆಯಾಗಿದ್ದವು. ಆದರೆ ಈ ವಿಭಾಗದಲ್ಲಿದ್ದ ಗ್ರಾಮಗಳ ಸಂಖ್ಯೆ ಮತ್ತು ಇದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತರು ಅಥವಾ ಅಧಿಕಾರಿಗಳ ಕುರಿತಾಗಿ ಸ್ಪಷ್ಟತೆಯಿಲ್ಲ.

೩.೫.೧೦. ಕುಂದುರುಗೆ ಕಂಪಣ

ಗೋಕಾಕ ಜಲಪಾತದ ಕ್ರಿ.ಶ. ೧೧೭೧ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಕುಂದುರುಗೆ ಕಂಪಣ ಆಡಳಿತ ವಿಭಾಗದ ಪ್ರಸ್ತಾಪವಿದೆ.[೨೫೫] ಇದನ್ನು ಕುಂದರಿಗೆ ಕಂಪಣ ಎಂತಲೂ ಕರೆಯಲಾಗಿದೆ. ಇಂದಿನ ಗೋಕಾಕ ತಾಲ್ಲೂಕಿನಲ್ಲಿ ಮಾರ್ಕಂಡೇಯ ನದಿಯ ದಡದಲ್ಲಿರುವ ಕುಂದರಗಿ ಗ್ರಾಮವೇ ಈ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಪ್ರಸ್ತುತ ತಾಲ್ಲೂಕಿನ ಕೊಣ್ಣೂರು ಗ್ರಾಮವನ್ನೊಳಗೊಂಡಂತೆ ಸುತ್ತಮುತ್ತಲಿನ ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು. ಆದರೆ ಈ ವಿಭಾಗದ ವ್ಯಾಪ್ತಿ, ಇಲ್ಲಿದ್ದ ಗ್ರಾಮಗಳ ಸಂಖ್ಯೆ ಮತ್ತು ಇದರ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಾಮಂತರು ಅಥವಾ ಅಧಿಕಾರಿಗಳ ಕುರಿತಾಗಿ ಯಾವುದೇ ವಿವರಗಳು ಲಭ್ಯವಿಲ್ಲ.

೩.೫.೧೧. ಪೂವಿನಬಾಗೆ ನೆಲೆವೀಡು

ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನ, ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನಗಳಲ್ಲಿ ಮತ್ತು ಜೈನಕವಿ ರಾಜಾದಿತ್ಯನ 'ವ್ಯವಹಾರಗಣಿತ' ಎಂಬ ಕಾವ್ಯದಲ್ಲಿ ಪೂವಿನಬಾಗೆ ನೆಲೆವೀಡಿನ ನಿರೂಪಣೆಯಿದೆ.[೨೫೬] ಇಂದಿನ ತಾಲ್ಲೂಕು ಕೇಂದ್ರ ರಾಯಬಾಗ ಪಟ್ಟಣವೇ ಈ ನೆಲೆವೀಡಿನ ಕೇಂದ್ರವಾಗಿತ್ತು. ಕಲ್ಯಾಣದ ಚಾಳುಕ್ಯರ ತ್ರಿಭುವನಮಲ್ಲದೇವನ (೬ನೆಯ ವಿಕ್ರಮಾದಿತ್ಯ) ಮಹಾಮಂಡಳೇಶ್ವರನೊಬ್ಬನು ಈ ನೆಲೆವೀಡಿನಿಂದ ಆಳುತ್ತಿದ್ದನು. ಇದರಿಂದ ರಾಯಬಾಗವೂ ಅಂದು ಕೂಹುಂಡಿನಾಡಿನ ಆಡಳಿತ ಘಟಕವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದ ಗ್ರಾಮಗಳ ಕುರಿತಾಗಿ ಮಾಹಿತಿಗಳು ಲಭ್ಯವಿಲ್ಲ.

೩.೫.೧೨. ಪಸಣಕಾಗೆ ನೆಲೆವೀಡು

ರಾಯಬಾಗದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಪಸಣಕಾಗೆ ನೆಲೆವೀಡಿನ ಪ್ರಸ್ತಾಪವಿದೆ.[೨೫೭] ಇದು ಇಂದಿನ ಯಾವ ಗ್ರಾಮವೆಂಬುದು ಸ್ಪಷ್ಟವಿಲ್ಲ. ಕಲ್ಯಾಣದ ಚಾಳುಕ್ಯರ ತ್ರಿಭುವನಮಲ್ಲದೇವನ (೬ನೆಯ ವಿಕ್ರಮಾದಿತ್ಯ) ಮಹಾಮಂಡಳೇಶ್ವರ ಸವದತ್ತಿಯ ರಟ್ಟರ ಕನ್ನಕೈರನು ಪಸಣಕಾಗೆಯ ನೆಲೆವೀಡಿನಿಂದ ಆಳುತ್ತಿದ್ದನು. ಇದರಿಂದ ಇದೊಂದು ಆಡಳಿತ ವಿಭಾಗವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದ ಗ್ರಾಮಗಳ ಕುರಿತಾಗಿ ಮಾಹಿತಿಗಳು ಲಭ್ಯವಿಲ್ಲ.

೩.೫.೧೩. ಸೋಲು ಮೂವತ್ತು (ಸೊಗಲ ಮೂವತ್ತು)

ಸೊಗಲದ ಕ್ರಿ.ಶ. ೯೭೮ರ ಶಾಸನದಲ್ಲಿ ಸೋಲು ಮೂವತ್ತು ಆಡಳಿತ ವಿಭಾಗದ ಉಲ್ಲೇಖವಿದೆ.[೨೫೮] ಇಂದಿನ ಸವದತ್ತಿ ತಾಲ್ಲೂಕಿನ ಸೊಗಲ ಗ್ರಾಮವೇ ಈ ಆಡಳಿತ ವಿಭಾಗದ ಕೇಂದ್ರ ಪಟ್ಟಣವಾಗಿತ್ತು. ಪ್ರಸ್ತುತ ಶಾಸನವು–

ಶ್ರೀಮತ್ಸುವರ್ಣ್ಣಾಕ್ಷಿದೇವರ ತೀರ್ತ್ಥದಲಿಟ್ಟು......ನ್ತರೇ ತಪೋಧನ
.....ಶ್ರೀಮದನವರತದನುಜನರಾಮರಣಿಮಕುಟತಟಘಟಿತಪದ

ಪದ್ಮೋದ್ದಾಮಯುಗಳಂ ತ್ರಿಲೋಕಸ್ವಾಮಿ ಸುವರ್ಣ್ಣಾಕ್ಷಿ ದೇವರೀ
ಗೆಮಗೊಳ್ಪ || ಪಂಕಜಷಣ್ಡದಿಂದೆಸೆವ ನೈದಿಲೆಪೂಗೊಳದಿಂ
ತಳಿರ್ತ್ತ ಮಾವಿಂ ಕುಸುಮೋದಿತಂ ಕೊಸಗುಂಪಾದರಿನೇಱೆಲ
ಶೋಕಬಾಳೆಯೆಂಬಂಕದ ವೃಕ್ಷ ಜಾತಿಗಳಿನಿಂಚರದಿಂ ಪುಗಲೆಂಬ
ಕೋಕಿಳಾಳಂಕೃತದಿಂದೆ ಸಾಲಬನಮೊಪ್ಪುವುದೀ ವಿಷಯಾಂತರಾ
ಳದೊಳ್ || ಅಲ್ಲಿಯ ನೀರ್ಜ್ಝರೋದಕದಿನೊಪ್ಪುವ ತೀರ್ತ್ಥಮಿದೀ
ಜಗಕ್ಕೆ ಪೆಂಪೆಲ್ಲಮನಾನ್ತ ಶಂಕರ ಸ್ವಯಂಭು ಸುವರ್ಣ್ಣಮಹಾಕ್ಷಿದೇವ
ಪಾದೋಲ್ಲಸಿತಾಂಬುಜಂಗಳನೆ ಪೂಜಿಪ ಭಕ್ತಜನಕ್ಕೆ ಮುಕ್ತಿ ತಳ್ವಿಲ್ಲದೆ
ಕೊಡುಗೆಂದು ಪೊಗಟ್ದಿಂ ಕವಿತೇಶ ಮದಪ್ರಭಂಜನ || ಪುಲಿಗಳೆ
ಧರ್ಮ್ಮಶ್ರವಣಮನೆಲೆ ಮಿಡುಕದೆ ಕೇಳುತಿರ್ಪ್ಪವರಗಿಳಿಗಳ್ ನಿರ್ಮ್ಮಲ
ಮುನಿಪರೋದುವವೋದಂ ಚಳವಾದೆಡೆಯಱಿದು ಪೇಳ್ವವಿರುಳುಂ
ಪಗಲುಂ || ವಾನರ ಸಂಹತಿ ದೇವಸ್ನಾನಂ ಮಾಡುವರ್ಗ್ಗೆ ಗದ್ದುಗೆಯ
ನೀರಂ ಸನ್ಮಾನದೆ ತನ್ದೀವುವೆನಲ್ಕಾನಱೆಯೆಂ ಪೊಗಳಲವರ ತಪದು
ಗ್ರತೆಯ || ಪಾಪಿ ಪುಗಲು ಪುಗಲುಗ್ರದ ಕೋಪಿ ಪುಗಲು ಪುಗಲಶೇಷ
ಧರ್ಮ್ಮದ್ರೋಹವ್ಯಾಪಾರಿ ಪುಗಲ್ಪುಗಲೆನ್ದಾ ಪೊರ್ತ್ತುಂ ಕೋಕಿಳಂಗಳು
ಲಿಗುಂ ಬನದೊಳು || ಗಳಪುವರಗಿಳಿಯ ಕುಕಿಲುವ ಕಳಹಂಸೆಯ
ಗಾವರಿಪ್ಪ ಪೆಣ್ಡುಂಬಿಯ ಬಾವಳಿಸುವ ಪುರುಳಿಯ ಕೊಂಡಂಗಳನಗಿ
ಸುವರವಮೆ ನಗದ ನಾಲ್ಕು ದೆಸೆಯೊಳು || ನೋಡತನು ಮುಟ್ಟೆ
ಸಿದ್ಧಮ್ಮಾಡುವ ಸೆಲಿಗನ್ತಶೇಷರಸ ಮೂಳಿಕೆಗಳು ಕೊಡುಗುಮರೇನ್ದ್ರತ್ವ
ಮನೂಡುವರಚ್ಚ ರಸಿಯರ್ಕ್ಕಳಾಮುನಿ ಕುಳಮ || ಇನ್ತೆನಿಸುವ ಸಿದ್ಧ
ಕ್ಷೇತ್ರಾಂತರ ತೀರ್ತ್ಥಕ್ಕೆ ಮುಖ್ಯನಾಶ್ರಿತಸುರಭೂಜಂ ತ್ರಿಭುವನಸಿಂಹ
ಮುನೀಂದ್ರಂ ತಾಪಸಗೋತ್ರ ವೈರಿಕುಳಗಜಸಿಂಹ || ನೋಡಿರೆ ರಾಘವದ್ವಿಷನ
ನಚ್ಚುವ ಮಾಲಿ ಸುಮಾಲಿ ದಾನವರ್ಮ್ಮಾಡಿದ ಸುಪ್ರತಿಷ್ಠೆಯದಱಿಂದೆ
ಸುವರ್ಣ್ಣಮಹಾಕ್ಷಿದೇವರೆಂಬೀಡಿತ ನಾಮಮಾದುದು ಸುಮಾಲಿಪೆಸರ್ನ್ನಗರಕ್ಕೆ
ರೂಡಿಯೊಳು ಕೂಡಿದುದೆನ್ದೊಡೇವುಗಳ್ವರೋ ಕೂಣ್ಡಿಮಹೀವಳಯಾನ್ತರದೊಳ್ ||
ಮಾಲಿ ಸುಮಾಲಿದ್ವಯಭುಪಾ ಲರ್ದ್ದೇವರ್ಗ್ಗೆ ಸೋಲುಮೂವತ್ತಂ
ಸಲ್ಲೀಲೆಯೊಳೆ ಬಿಟ್ಟು ಸುಗತಿಸುಖಾಲಯಮಾ ತ್ರೇತೆಯಂತ್ಯಕಾಲದೆ ಪೊಕ್ಕರ್ ||

ಎಂದು ಈ ಸ್ಥಳದ ಹಿರಿಮೆಯನ್ನು ಸವಿಸ್ತಾರವಾಗಿ ಬಣ್ಣಿಸಿದೆ. ಸೊಗಲ ಗ್ರಾಮದ ಸುತ್ತಮುತ್ತಲಿನ ಮೂವತ್ತು ಗ್ರಾಮಗಳು ಈ ವಿಭಾಗದಲ್ಲಿ ಸೇರ್ಪಡೆಯಾಗಿದ್ದವು. ಆದರೆ ಆ ಗ್ರಾಮಗಳು ಯಾವುವು ಎಂಬುದು ಸ್ಪಷ್ಟವಿಲ್ಲ. ಕಲ್ಯಾಣದ ಚಾಳುಕ್ಯರ ಇಮ್ಮಡಿ ತೈಲಪದೇವನ ಮಹಾಮಂಡಳೇಶ್ವರ ಸವದತ್ತಿಯ ರಟ್ಟರ ೧ನೆಯ ಕಾರ್ತವೀರ್ಯನು ಈ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು.

೩.೫.೧೪. ಕುಹುಣ್ಡಿ ಪಟ್ಟಣ

ರಾಯಬಾಗದ ಕ್ರಿ.ಶ.೧೦೪೦, ಬೆಳಗಾವಿಯ ಕ್ರಿ.ಶ.೧೨೦೪ರ ಮೊದಲಾದ ಕೆಲವು ಶಾಸನಗಳಲ್ಲಿ ಕೂಹುಂಡಿನಾಡಿನ ಕೇಂದ್ರ ಪಟ್ಟಣ ಕುಹುಣ್ಡಿಯ ಪ್ರಸ್ತಾಪವಿದೆ.[೫೯] ಈಗಾಗಲೇ ಈ ಮೇಲೆ ಗಮನಿಸಿದಂತೆ ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕೋಡಿ ಗ್ರಾಮವೇ ಕೂಹುಂಡಿ ಪಟ್ಟಣವಾಗಿತ್ತು. ಆದರೆ ಈ ಪಟ್ಟಣವು ಕೂಹುಂಡಿನಾಡಿನ ಆಡಳಿತ ವ್ಯವಸ್ಥೆಯಲ್ಲಿ ವಹಿಸಿದ ಪಾತ್ರದ ಕುರಿತು ಇದುವರೆಗೂ

ಯಾವುದೇ ಮಾಹಿತಿಗಳು ಲಭ್ಯವಾಗಿಲ್ಲ. ಕೂಹುಂಡಿನಾಡಿನ ಪ್ರದೇಶದಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಕ್ರಮವಾಗಿ ಸುಗಂಧವರ್ತಿ(ಇಂದಿನ ಸವದತ್ತಿ), ವೇಣುಗ್ರಾಮ(ಇಂದಿನ ಬೆಳಗಾವಿ), ಸೋಲು (ಇಂದಿನ ಸೊಗಲ), ತೇರಿದಾಳ(ಇಂದಿನ ತೇರದಾಳ), ಪೂವಿನಬಾಗೆ(ಇಂದಿನ ರಾಯಬಾಗ) ಕೇಂದ್ರಾಡಳಿತದ ಚಿಕ್ಕ ಘಟಕಗಳಾಗಿದ್ದವು.

ಹೀಗೆ ಕೂಹುಂಡಿನಾಡಿನ ಪ್ರದೇಶದಲ್ಲಿ ರಾಜಕೀಯ ಮತ್ತು ಆಡಳಿತ ವ್ಯವಸ್ಥೆ ವೈವಿಧ್ಯಮಯವಾಗಿ ತೋರುತ್ತದೆ. ಈ ನಾಡಿನ ಪ್ರದೇಶವು ಬಹುತೇಕ ಪ್ರಾಚೀನ ಅರಸು ಮನೆತನಗಳ(ಮಗಧದ ನಂದರು, ಮೌರ್ಯರು, ಶಾತವಾಹನರು, ಬನವಾಸಿಯ ಕದಂಬರು, ಬಾದಾಮಿಯ ಚಲುಕ್ಯರು, ಸೇಂದ್ರಕರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು) ಆಳ್ವಿಕೆಗೊಳಪಟ್ಟಿತ್ತು. ಮಧ್ಯಯುಗೀನ ಸಂದರ್ಭದಲ್ಲಿ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಗಳು, ದೇವಗಿರಿಯ ಸೇವುಣರು, ದೋರಸಮುದ್ರದ ಹೊಯ್ಸಳರ ಪರಸ್ಪರ ರಾಜಕೀಯ ಸೇಣಸಾಟದಲ್ಲಿ ಈ ನಾಡಿನ ಪ್ರದೇಶವು ಆ ಎಲ್ಲ ಮನೆತನಗಳ ಆಳ್ವಿಕೆಯಡಿಗೂ ಕೆಲಕಾಲ ಒಳಪಡುತ್ತ ಬಂದಿರುವುದು ಸ್ಪಷ್ಟವಾಗುತ್ತದೆ. ದೇವಗಿರಿಯ ಸೇವುಣರ ಆಳ್ವಿಕೆಯ ಉತ್ತರಾರ್ಧದ ಕಾಲದಲ್ಲಿ ಅಂದರೆ ಕ್ರಿ.ಶ. ಸುಮಾರು ೧೩ನೆಯ ಶತಮಾನದಲ್ಲಿ ಈ ನಾಡಿನ ಪ್ರದೇಶವು ಉತ್ತರದ ಮುಸ್ಲಿಂ ಮನೆತನಗಳ ಆಕ್ರಮಣಗಳಿಗೆ ಒಳಗಾಯಿತು. ವಿಜಯನಗರ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಈ ನಾಡಿನ ಪ್ರದೇಶದ ಮೇಲೆ ಬಹಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು ದಾಳಿಗಳನ್ನು ಕೈಗೊಂಡು ತಮ್ಮ ಅಧೀನಕ್ಕೆ ತೆಗೆದುಕೊಂಡರು. ತರುವಾಯ ಇದು ಮರಾಠರು, ಪೇಶ್ವೆಗಳು, ಸಂಸ್ಥಾನಿಕರು, ಬ್ರಿಟಿಷರ ಅಧೀನಕ್ಕೊಳಪಟ್ಟಿತ್ತು.

ಅಡಿಟಿಪ್ಪಣಿಗಳು

೧. ದೇವೀರಪ್ಪ ಎಚ್. (ಸಂ.), ಸಿಂಗಿರಾಜಕವಿಕೃತ ಸಿಂಗಿರಾಜಪುರಾಣ (೧೯೫೦), ೪ನೆಯ ಸಂಧಿ, ಪದ್ಯ ಸಂಖ್ಯೆ ೧೧, ಪು. ೪೨.

೨. ಹಂಚೆ ಅಪ್ಪಣ್ಣ ಎನ್., "ಸಾಹಿತ್ಯ ಮತ್ತು ಶಾಸನಗಳಲ್ಲಿ ಭದ್ರಬಾಹು ಭಟ್ಟಾರಕರು ಮತ್ತು ಚಂದ್ರಗುಪ್ತ", ಅರವಂಟಿಗೆ ಸಂ. ೧/೧ (ಜೂನ್-೨೦೦೮), ಪು. ೧೦-೧೯, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.

೩. ತೆಲಗಾವಿ ಲಕ್ಷ್ಮಣ, ಮೌರ್ಯ ಮತ್ತು ಶಾತವಾಹನರು (೨೦೦೪), ಪು. ೧೩.

೪. ಅದೇ, ಪು. ೮೫-೯೧.

೫. ಷಡಕ್ಷರಯ್ಯ ಆರ್.ಎಂ., "ಅಧ್ಯಕ್ಷರ ಭಾಷಣ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೧-೨೫.

೬. ಗೋಪಾಲ ಬಾ.ರಾ., ಬನವಾಸಿ ಕದಂಬರು (೧೯೮೩), ಶಾ.ಸಂ. ೩, ೧೪, ೧೮, ೨೨, ೨೪.

೭. ಪಾಡಿಗಾರ ಶ್ರೀನಿವಾಸ ವೆಂ., ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ (೨೦೦೮), ಪು. ೨.

೮. ಅದೇ, ಪು. ೨-೩.

೯. ಅದೇ, ಪು. ೪-೬.

೧೦. ಪ್ರಭಾಕರ ಎಂ.ಎನ್. (ಮೂಲ : ಇಷಿಕವ ಕಾನ್), "ಬಾದಾಮಿ ಚಾಲುಕ್ಯರ ಕಾಲದ ಪ್ರಾಂತ್ಯಾಡಳಿತ", ಬಾದಾಮಿ ಚಾಲುಕ್ಯರು ಲೇಖನ ಸಂಪುಟ (೨೦೦೯), ಪು. ೧೩೭-೧೪೪.

೧೧. ಪಾಡಿಗಾರ ಶ್ರೀನಿವಾಸ ವ್ಹಿ. (ಸಂ.), ಇನ್ಸ್ಕ್ರಿಪ್‌ಶನ್ಸ್ ಆಫ್ ದಿ ಚಲುಕ್ಯಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೪, ೯, ೯೭, ೯೮.

೧೨. ಅದೇ, ಶಾ.ಸಂ. ೯೮.

೧೩. ಇ.ಆಯ್. ಸಂ. XXI, ಶಾ.ಸಂ. ೪೩.

೧೪. ಅಲ್ತೇಕರ ಎ.ಎಸ್., ರಾಷ್ಟ್ರಕೂಟಾಸ್ ಅಂಡ್ ದೆಯರ್ ಟೈಮ್ಸ್ (೧೯೬೭), ಪು. ೨೩-೪೮.

೧೫. ಅದೇ, ಪು. ೪೯-೬೮.

೧೬. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೧೭. ಭಾರತೀ ಬಿ.ಆರ್. (ಸಂ.), ರಾಷ್ಟ್ರಕೂಟರ ಶಾಸನಗಳು ಸಂಪುಟ-೧ (೨೦೧೧), ಶಾ.ಸಂ. ೬೦.

೧೮. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮. ಇ.ಆಯ್. ಸಂ. XVI, ಶಾ.ಸಂ. ೧.

೧೯. ಕೆ.ಆಯ್. ಸಂ. IV, ಶಾ.ಸಂ. ೫೫.

೨೦. ಎ.ಆರ್.ಎಸ್.ಆಯ್.ಇ. ೧೯೫೬-೫೭, ಶಾ.ಸಂ. ೧೫೪. ಕೆ.ಆಯ್. ಸಂ. V, ಶಾ.ಸಂ. ೬. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

೨೧. ಗೋಪಾಲ ಬಿ.ಆರ್., ದಿ ಚಾಲುಕ್ಯಾಸ್ ಆಫ್ ಕಲ್ಯಾಣ ಅಂಡ್ ದಿ ಕಲಚೂರಿಸ್ (೧೯೮೧), ಪು. ೧೫-೩೦.

೨೨. ನೇಗಿನಹಾಳ ಎಂ.ಬಿ., "ಒಂದನೆಯ ಸೋಮೇಶ್ವರನ ಮುಗಟಖಾನ ಹುಬ್ಬಳ್ಳಿ ಶಾಸನ", ನೇಗಿನಹಾಳ ಪ್ರಬಂಧಗಳು

(೧೯೯೯), ಪು. ೪೪೧-೪೪೪. ಕೆ.ಆಯ್. ಸಂ. V, ಶಾ.ಸಂ. ೫೧ ಮತ್ತು ೫೨. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ೪೨, ಪು. ೬೯-೭೧.

೨೩. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೮೦.

೨೪. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೩೬. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯-೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಕೆ.ಆಯ್. ಸಂ. ೬, ಶಾ.ಸಂ. ೧೪.

೨೫. ನಾಗಯ್ಯ ಜೆ.ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ (೧೯೯೨), ಪು. ೫-೨೬.

೨೬. ಎ.ಆರ್.ಎಸ್.ಆಯ್.ಇ. ೧೯೫೧-೫೨, ಶಾ.ಸಂ. ೩೩, ಪು. ೧೨. ಪಾಡಿಗಾರ ಶ್ರೀನಿವಾಸ ವ್ಹಿ. ಮತ್ತು ಕರೆಪ್ಪಗೌಡ ಸಿ., "ಅರಟಗಲ್ಲಿನ ಸ್ಮಾರಕ ಶಿಲಾಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೧೭-೧೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೨, ೫೧, ೫೮, ೮೨. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೫. ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨), ಶಾ.ಸಂ. ೧, ೨, ೫, ಪು. ೫೬-೫೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಎ.ಆರ್.ಎಸ್.ಆಯ್.ಇ. ೧೯೫೬-೫೭, ಶಾ.ಸಂ. ೧೫೫. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ૩೨, ಪು. ೫೪-೫೫. ಹಂಚೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., "ರಾಯಬಾಗದ ವೀರಗಲ್ಲು ಶಾಸನ", ಶಾಸನ ಅಧ್ಯಯನ ಸಂ. ೨/೨ (೨೦೦೫), ಪು. ೨೬-೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಕೆ.ಆಯ್. ಸಂ. VI, ಶಾ.ಸಂ. ೨೧. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨. ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೫. ಕೆ.ಆಯ್. ಸಂ. V, ಶಾ.ಸಂ. ೨೧. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯ (ಬಾಗಲಕೋಟೆ ಜಿಲ್ಲೆ-೨೦೦೫), ಶಾ.ಸಂ. ೧ ಮತ್ತು ೯, ಪು. ೧೩೮ ಮತ್ತು ೧೩೧-೧೩೨.

೨೭. ಆಯ್.ಎ. ಸಂ. X, ಪು. ೧೩೧. ಕುಂದಣಗಾರ ಕೆ.ಜಿ. (ಸಂ.), ಇನ್ಸ್ಕ್ರಿಪ್ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೬. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯ (ಬಾಗಲಕೋಟೆ ಜಿಲ್ಲೆ-೨೦೦೫), ಶಾ.ಸಂ. ೮, ಪು. ೧೩೬-೧೩೭.

೨೮. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨). ಶಾ.ಸಂ. ೪, ಪು. ೫೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಕೆ.ಆಯ್. ಸಂ. V, ಶಾ.ಸಂ. ೨೫.

೨೯. ಗೋಪಾಲ ಬಿ.ಆರ್., ಪೂರ್ವೋಕ್ತ, ಪು. ೩೦–೫೮.

೩೦. ಅಲ್ತೇಕರ ಎ.ಎಸ್., ಪೂರ್ವೋಕ್ತ, ಪು. ೬೫.

೩೧. ಆಲೂರು ವೆಂಕಟರಾಯರು, ಕರ್ನಾಟಕದ ಗತವೈಭವ (೧೯೭೧), ಪು. ೪೮.

೩೨. ಮುತ್ತಯ್ಯ ಎ.ಎಂ., ಎ ಹಿಸ್ಟ್ರಿ ಆಫ್ ಕರ್ನಾಟಕ (೧೯೮೫), ಪು. ೬೫.

೩೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೩೪. ಕೆ.ಆಯ್. ಸಂ. V, ಶಾ.ಸಂ. ೨೧.

೩೫. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೩೬. ಹಂಪ ನಾಗರಾಜಯ್ಯ, ಚಂದ್ರಕೊಡೆ (೧೯೯೭), ಪು. ೩೫.

೩೭. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೩೮. ಅದೇ.

೩೯. ಅದೇ.

೪೦. ಅದೇ.

೪೧. ಅದೇ.

೪೨. ಅದೇ.

೪೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೪೪. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೬.

೪೫. ಇ.ಆಯ್. ಸಂ. V, ಪು. ೩.

೪೬. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೪೭. ಕೆ.ಆಯ್. ಸಂ. V, ಪು. ೨೦೪.

೪೮. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೪೯. ಇ.ಆಯ್. ಸಂ. XVI, ಪು. ೮.

೫೦. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೫೧. ಅದೇ, ಶಾ.ಸಂ. ೬೨.

೫೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೪.

೫೩. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

೫೪. ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ : ೧೬೭೮–೧೯೭೮ (೧೯೭೯), ಪು. ೧೬–೧೮.

೫೫. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

೫೬. ದೇಸಾಯಿ ದಿನಕರ, ಮಹಾಮಂಡಳೇಶ್ವರ ಅಂಡರ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣ (೧೯೫೧), ಪು. ೫೯.

೫೭. ತಬೋಜಿ ಚಂದ್ರಶೇಖರ ಬಿ., "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್-೬ (೨೦೦೬), ಪು. ೧೭೩.

೫೮. ಆಯ್.ಎ. ಸಂ. XIX, ಪು. ೧೬೫.

೫೯. ಎಸ್.ಆಯ್.ಆಯ್. ಸಂ. XIX, ಶಾ.ಸಂ. ೫೦.

೬೦. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

೬೧. ಕೆ.ಆಯ್. ಸಂ. VI, ಶಾ.ಸಂ. ೧೪.

೬೨. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೬೩. ಇ.ಆಯ್. ಸಂ. XVIII, ಶಾ.ಸಂ. ೨೨/ಬಿ.

೬೪. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೬೫. ಅದೇ, ಶಾ.ಸಂ. ೩೭.

೬೬. ಅದೇ, ಶಾ.ಸಂ. ೧೩.

೬೭ ಅದೇ.

೬೮. ಅದೇ, ಶಾ.ಸಂ. ೨೪೭.

೬೯. ಅದೇ, ಶಾ.ಸಂ. ೩೩.

೭೦. ಅದೇ, ಶಾ.ಸಂ. ೧೩.

೭೧. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೬.

೭೨. ಅದೇ.

೭೩. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೭೪. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೬.

೭೫. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೭೬. ಅದೇ.

೭೭ ಅದೇ.

೭೮. ಅದೇ, ಶಾ.ಸಂ. ೬೨.

೭೯. ಕೆ.ಆಯ್. ಸಂ. VI, ಪು. ೩.

೮೦. ಹಂದೂರ ಬಾಹುಬಲಿ, ಜೈನ ಪರಂಪರೆಗೆ ಬೆಳಗಾವಿ ಜಿಲ್ಲೆಯ ಪ್ರಾದೇಶಿಕ ಕೊಡುಗೆ (೨೦೦೩), ಪು. ೬೪.

೮೧. ಕೆ.ಆಯ್. ಸಂ. V, ಪು. ೨೦೯.

೮೨. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೮೩. ಅದೇ, ಶಾ.ಸಂ. ೧೩.

೮೪. ಕುಂದಣಗಾರ ಕೆ.ಜಿ. (ಸಂ.), ಇನ್‌ಸ್ಕ್ರಿಪ್‌ಶನ್ಸ್ ಆಫ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.

೮೫. ಹಂದೂರ ಬಾಹುಬಲಿ, ಪೂರ್ವೋಕ್ತ, ಪು. ೭೦-೭೧.

೮೬. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ-೧೯೭೪), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೮೭. ಇ.ಆಯ್. ಸಂ. XIII, ಶಾ.ಸಂ. ೩/ಎ.

೮೮. ಗುರವ ಆರ್.ಎನ್., ಪೂರ್ವೋಕ್ತ.

೮೯. ದೇಸಾಯಿ ದಿನಕರ, ಪೂರ್ವೋಕ್ತ, ಪು. ೧೭೨.

೯೦. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೯೧. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೯೨. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರದ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨), ಶಾ.ಸಂ. ೪, ಪು. ೫೫, ಪ್ರಾಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೯೩. ಗುರವ ಆರ್.ಎನ್., ಪೂರ್ವೋಕ್ತ.

೯೪. ಕೆ.ಆಯ್. ಸಂ. VI, ಶಾ.ಸಂ. ೭೩.

೯೫. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೯೬. ಇಚ್ಚಂಗಿ ರಾಜಶೇಖರ, ಪಾರ್ಶ್ವನಾಥ ಪುರಾಣ : ಒಂದು ತೌಲನಿಕ ಅಧ್ಯಯನ (೨೦೦೦), ಪು. ೨೬೫.

೯೭. ಇ.ಆಯ್. ಸಂ. XIII, ಶಾ.ಸಂ. ೩-ಎ.

೯೮. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೨೦.

೯೯. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೦೦. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೧೦೧. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೦೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೨೦.

೧೦೩. ಕೆ.ಆಯ್. ಸಂ. V, ಶಾ.ಸಂ. ೫೨.

೧೦೪. ಜೆ.ಬಿ.ಬಿ.ಆರ್.ಎ.ಎಸ್. ಸಂ. XII, ಪು. ೧೧.

೧೦೫. ಉಪಾಧ್ಯ ಜಿ.ಎನ್., ಮಹಾರಾಷ್ಟ್ರ ಕರ್ನಾಟಕ ಆದಾನ ಪ್ರದಾನ (೨೦೦೯), ಪು. ೧೬೪.

೧೦೬. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೧೧೩, ಪು. ೧೭೪-೧೭೭.

೧೦೭. ಕೆ.ಆಯ್. ಸಂ. V, ಶಾ.ಸಂ. ೧೦.

೧೦೮. ಉಪಾಧ್ಯ ಜಿ.ಎನ್., ಪೂರ್ವೋಕ್ತ, ಪು. ೧೬೪-೧೬೭.

೧೦೯. ಅದೇ, ಪು. ೧೬೬-೧೭೨.

೧೧೦. ಕೆ.ಆಯ್. ಸಂ. V, ಶಾ.ಸಂ. ೯೮.

೧೧೧. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೭.

೧೧೨. ಎ.ಆರ್.ಎಸ್.ಆಯ್.ಇ. ೧೯೫೯-೬೦, ಶಾ.ಸಂ. ೩೯೬.

೧೧೩. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೧೧೪. ಅದೇ.

೧೧೫. ಅದೇ.

೧೧೬. ಉಪಾಧ್ಯ ಜಿ.ಎನ್., ಪೂರ್ವೋಕ್ತ, ಪು. ೧೬೩-೧೬೪.

೧೧೭. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೬.

೧೧೮. ದೇಸಾಯಿ ಪಿ.ಬಿ., ಕರ್ನಾಟಕದ ಕಲಚುರಿಗಳು (೧೯೮೩), ಪು. ೭.

೧೧೯. ಉಪಾಧ್ಯ ಜಿ.ಎನ್., ಪೂರ್ವೋಕ್ತ, ಪು. ೧೪೪-೧೫೨.

೧೨೦. ಅದೇ.

೧೨೧. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೨-೧೫೭.

೧೨೨. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೧೨೩. ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ. ೨೪.

೧೨೪. ಅದೇ, ಪು. ೧೫೬.

೧೨೫. ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧, ೫೨, ೫೩.

೧೨೬. ನರಸಿಂಹಮೂರ್ತಿ ಎ.ವಿ., ಕರ್ನಾಟಕದ ಸೇವುಣರ ಇತಿಹಾಸ (೧೯೭೧), ಪು. ೧೨.

೧೨೭. ಅದೇ, ಪು. ೧೪.

೧೨೮. ಅದೇ, ಪು. ೧೦-೩೬.

೧೨೯. ಅದೇ, ಪು. ೩೬-೪೬.

೧೩೦. ಅದೇ, ಪು. ೪೭-೬೨.

೧೩೧. ಕೆ.ಆಯ್. ಸಂ. V, ಶಾ.ಸಂ. ೯೯.

೧೩೨. ಅದೇ, ಸಂ. I, ಶಾ.ಸಂ. ೩೦.

೧೩೩. ಇ.ಆಯ್. ಸಂ. XIX, ಪು. ೨೬. ಅನುಬಂಧ : ಒಂದು, ಶಾ.ಸಂ. ೧೭. ಕೆ.ಆಯ್. ಸಂ. I, ಶಾ.ಸಂ. ೩೧. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧-೧೦೪. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದಿ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್-ಪ್ಲೇಟ್ ಇನ್ಸ್ಕ್ರಿಪ್ಶನ್ಸ್ ಎಗ್ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೪೦, ಪು. ೭.

೧೩೪. ಸುರೇಂದ್ರರಾವ್ ಬಿ. (ಸಂ.), ಕರ್ನಾಟಕ ಚರಿತ್ರೆ ಸಂ. ೨ (೧೯೯೭), ಪು. ೧೦೭-೧೨೩.

೧೩೫. ಕೆ.ಆಯ್. ಸಂ. I, ಶಾ.ಸಂ. ೨೯.

೧೩೬. ಸುರೇಂದ್ರರಾವ್ ಬಿ. (ಸಂ.), ಪೂರ್ವೋಕ್ತ, ಪು. ೧೨೪-೧೩೪.

೧೩೭. ಅದೇ, ಪು. ೧೩೫-೧೬೮.

೧೩೮. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೧೫೧-೧೫೫.

೧೩೯. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೨.

೧೪೦. ಎ.ಆರ್.ಎಸ್.ಆಯ್.ಇ. ೧೯೫೬-೫೭, ಶಾ.ಸಂ. ೧೫೫.

೧೪೧. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ೩೨, ಪು. ೫೪-೫೫.

೧೪೨. ಕೆ.ಆಯ್. ಸಂ. VI, ಶಾ.ಸಂ. ೨೧.

೧೪೩. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.

೧೪೪. ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ಕನ್ನಡ ನಿಘಂಟು (೧೯೭೫), ಪು. ೮೬೪.

೧೪೫. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೨೩೦.

೧೪೬. ಅದೇ, ಪು. ೧೩೧-೧೩೨.

೧೪೭ ಎ.ಆರ್.ಎಸ್.ಆಯ್.ಇ. ೧೯೫೧-೫೨, ಶಾ.ಸಂ. ೩೭.

೧೪೮. ಎ.ಆರ್.ಎಸ್.ಆಯ್.ಇ. ೧೯೭೩-೭೪, ಶಾ.ಸಂ. ೯೨.

೧೪೯. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯-೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೫೦. ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ : ೧೬೭೮-೧೯೭೮ (೧೯೭೯), ಪು. ೧೬-೧೮.

೧೫೧. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೧೧).

೧೫೨. ಪಾಡಿಗಾರ ಶ್ರೀನಿವಾಸ ವ್ಹಿ. ಮತ್ತು ಪಾಟೀಲ ಕರೆಪ್ಪಗೌಡ ಸಿ., "ಅರಟಗಲ್ಲಿನ ಸ್ಮಾರಕ ಶಿಲಾಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೧೭-೧೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೫೩. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೫.

೧೫೪. ಅದೇ, ಪು. ೧೬೬.

೧೫೫. ಎ.ಆರ್.ಎಸ್.ಆಯ್.ಇ. ೧೯೫೯-೬೦, ಶಾ.ಸಂ. ೩೯೬, ಪು. ೮೭.

೧೫೬. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೧೫೭. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೧೫೮. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., "ರಾಯಬಾಗದ ವೀರಗಲ್ಲು ಶಾಸನ", ಶಾಸನ ಅಧ್ಯಯನ

ಸಂ. ೨/೨ (೨೦೦೫), ಪು. ೨೬–೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೫೯. ಕೆ.ಆಯ್. ಸಂ. ೬, ಶಾ.ಸಂ. ೨೧.

೧೬೦. ಎ.ಆರ್.ಎಸ್.ಆಯ್.ಇ. ೧೯೫೨–೫೩, ಶಾ.ಸಂ. ೫೨.

೧೬೧. ಕೆ.ಆಯ್. ಸಂ. V, ಶಾ.ಸಂ. ೨೧.

೧೬೨. ಅದೇ.

೧೬೩. ಪಾಡಿಗಾರ ಶ್ರೀನಿವಾಸ ವ್ಹಿ. (ಸಂ.), ಪೂರ್ವೋಕ್ತ, ಶಾ.ಸಂ. ೪.

೧೬೪. ದಿಕ್ಷಿತ್ ಜಿ.ಎಸ್., ಲೋಕಲ್ ಸೆಲ್ಫ್ ಗವ್ಹರ್ನ್‌ಮೆಂಟ್ ಇನ್ ಮೆಡಿವಲ್ ಕರ್ನಾಟಕ (೧೯೬೪), ಪು. ೪೪–೪೫.

೧೬೫. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಪು. ೩೪೧.

೧೬೬. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೨೪೯.

೧೬೭. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯–೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೬೮. ಅದೇ.

೧೬೯. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೨೦).

೧೭೦. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨. ಕೆ.ಆಯ್. ಸಂ. ೧, ಶಾ.ಸಂ. ೩೩. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಪೂರ್ವೋಕ್ತ, ಪು. ೧೬೯. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ.

೧೭೧. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೬.

೧೭೨. ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್‌ಕ್ರಿಪ್ಶನ್ಸ್ : ೧೯೪೭–೪೮ (೧೯೬೬), ಶಾ.ಸಂ. ೧೪, ಪು. ೫೮–೫೯.

೧೭೩. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ.

೧೭೪. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೧೭೫. ಇ.ಆಯ್. ಸಂ. XIX, ಪು. ೨೬.

೧೭೬. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೩೫೬–೩೫೭.

೧೭೭. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೨೫೩.

೧೭೮. ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ೩೭.

೧೭೯. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦–೨೪೧.

೧೮೦. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಪೂರ್ವೋಕ್ತ.

೧೮೧. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೧೮೨. ಪಾಟೀಲ ಕರೆಪ್ಪಗೌಡ ಸಿ., "ಮದಲೂರಿನ (ಶ್ರೀರಂಗಾಪುರ) ವೀರಗಲ್ಲು ಶಾಸನಶಿಲ್ಪ", ಇತಿಹಾಸ ದರ್ಶನ

ಸಂ. ೨೩, (೨೦೦೮), ಪು. ೯೮-೯೯.

೧೮೩. ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೬೩, ಪು. ೨೪೫.

೧೮೪. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಪೂರ್ವೋಕ್ತ, ಪು. ೧೬೬.

೧೮೫. ಕೆ.ಆಯ್. ಸಂ. VI, ಶಾ.ಸಂ. ೭೩.

೧೮೬. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೨.

೧೮೭. ಅದೇ, ಪು. ೧೫೭.

೧೮೮. ಕೆ.ಆಯ್. ಸಂ. IV, ಶಾ.ಸಂ. ೫೫.

೧೮೯. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨.

೧೯೦. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಪೂರ್ವೋಕ್ತ, ಪು. ೧೬೧-೧೬೨.

೧೯೧. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., ಪೂರ್ವೋಕ್ತ.

೧೯೨. ಕೆ.ಆಯ್. ಸಂ. V, ಶಾ.ಸಂ. ೬.

೧೯೩. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.

೧೯೪. ಇ.ಆಯ್. ಸಂ. XIX, ಪು. ೨೬.

೧೯೫. ಕೆ.ಆಯ್. ಸಂ. V, ಶಾ.ಸಂ. ೨೧.

೧೯೬. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.

೧೯೭. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೨, ಪು. ೬೯-೭೧.

೧೯೮. ಹಾನಗಲ್ಲ ಸಂತೋಷ, ಬೆಳಗಾವಿ ಜಿಲ್ಲೆಯ ದೇಸಗತಿ ಮನೆತನಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ-೨೦೦೮), ಪು. ೩೭-೫೫. ಶೆಟ್ಟರ ಅಶೋಕ, "ಬೆಳಗಾವಿ ಜಿಲ್ಲೆಯ ದೇಸಗತಿ ಮನೆತನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೪೬೪-೪೭೨. ಸಾವಂತ ಎಂ.ವೈ., "ಬೆಳಗಾವಿ ಜಿಲ್ಲೆಯಲ್ಲಿ ಮರಾಠರು-ಪೇಶ್ವೆಯವರ ಆಳ್ವಿಕೆ (೧೭೫೩-೧೮೧೮)", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೬೨೦-೬೨೨. ಗೋಪಾಲಕೃಷ್ಣರಾವ ಕೆ.ಜಿ., "ವಿಜಯನಗರ ಕೃಷ್ಣರಾಯ ಮತ್ತು ಬೆಳಗಾವಿ", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೭೮-೮೦.

೧೯೯. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೩೨೦.

೨೦೦. ಅನಂತರಂಗಾಚಾರ್ ಎನ್. (ಸಂ.), ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವ (೧೯೪೭), ಪು. ೩೫೭.

೨೦೧. ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕರು ಅರಸರಿಂದ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿದ್ದ ಇಲಾಖೆಗಳಿಗೆ ಕೇಂದ್ರದ ಪ್ರತಿನಿಧಿಯಾಗಿ ನೇಮಕವಾಗಿದ್ದರು.

೨೦೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦-೨೪೧.

೨೦೩. ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೮೨, ಪು. ೨೪೨.

೨೦೪. ಕೆ.ಆಯ್. ಸಂ. I, ಶಾ.ಸಂ. ೩೦.

೨೦೫. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೬.

೨೦೬. ಅದೇ, ಪು. ೧೫೨.

೨೦೭. ದೇಸಾಯಿ ಪಿ.ಬಿ. (ಸಂ.), ಪೂರ್ವೋಕ್ತ, ಶಾ.ಸಂ. ೧೩, ಪು. ೫೮–೫೯.

೨೦೮. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ.

೨೦೯. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಪೂರ್ವೋಕ್ತ, ಪು. ೧೬೦.

೨೧೦. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೨೧೧. ಎ.ಆರ್.ಎಸ್.ಆಯ್.ಇ. ೧೯೫೬–೫೭, ಶಾ.ಸಂ. ೧೫೫.

೨೧೨. ಕೆ.ಆಯ್. ಸಂ. V, ಶಾ.ಸಂ. ೨೫.

೨೧೩. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., "ರಾಯಬಾಗದ ವೀರಗಲ್ಲು ಶಾಸನ", ಶಾಸನ ಅಧ್ಯಯನ ಸಂ. ೨/೨ (೨೦೦೫), ಪು. ೨೬–೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೧೪. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೨೧೫. ಎ.ಆರ್.ಎಸ್.ಆಯ್.ಇ. ೧೯೫೨–೫೩, ಶಾ.ಸಂ. ೫೩.

೨೧೬. ಇ.ಆಯ್. ಸಂ. XIX, ಪು. ೨೬.

೨೧೭. ಇ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೨೧೮. ಅದೇ, ಶಾ.ಸಂ. ೩/ಎ.

೨೧೯. ಕೆ.ಆಯ್. ಸಂ. V, ಶಾ.ಸಂ. ೯೯.

೨೨೦. ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೨೧.

೨೨೧. ಅದೇ, ಶಾ.ಸಂ. ೫೧.

೨೨೨. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯ (ಬಾಗಲಕೋಟೆ ಜಿಲ್ಲೆ–೨೦೦೫), ಶಾ.ಸಂ. ೮, ಪು. ೧೩೬–೧೩೭.

೨೨೩. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೨, ಪು. ೬೯–೭೧.

೨೨೪. ಕೆ.ಆಯ್. ಸಂ. V, ಶಾ.ಸಂ. ೧೪.

೨೨೫. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೩೩೦–೩೩೧.

೨೨೬. ದಿಕ್ಷಿತ್ ಜಿ.ಎಸ್., ಪೂರ್ವೋಕ್ತ, ಪು. ೩೭.

೨೨೭. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೩೫೦.

೨೨೮. ಕುಂದಣಗಾರ ಕೆ.ಜಿ. (ಸಂ.), ಪೂವೋಕ್ತ, ಶಾ.ಸಂ. ೨೨.

೨೨೯. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರದ ಶಾಸನಗಳು", ಪೂರ್ವೋಕ್ತ, ಶಾ.ಸಂ. ೩, ಪು. ೫೫.

೨೩೦. ಅದೇ, ಶಾ.ಸಂ. ೫, ಪು. ೫೭

೨೩೧. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೨೩೨. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., ಪೂರ್ವೋಕ್ತ.

೨೩೩. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಪೂರ್ವೋಕ್ತ, ಪು. ೧೬೨–೧೬೩.

೨೩೪. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೧, ಪು. ೬೮–೬೯.

೨೩೫. ಅದೇ, ಶಾ.ಸಂ. ೨೬, ಪು. ೩೯–೪೧.

೨೩೬. ಮರಿಯಪ್ಪಭಟ್ಟ ಎಂ. (ಸಂ.), ಕಿಟ್ಟೆಲರ ಕನ್ನಡ–ಇಂಗ್ಲೀಷ್ ನಿಘಂಟು ಸಂ. ೩ (೧೯೭೦), ಪು. ೯೮೫.

೨೩೭. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೨೩೮. ಎ.ಆರ್.ಎಸ್.ಆಯ್.ಇ. ೧೯೫೯–೬೦, ಶಾ.ಸಂ. ೩೯೬, ಪು. ೮೭.

೨೩೯. ನಾಗಯ್ಯ ಜೆ.ಎಂ., ಪೂರ್ವೋಕ್ತ, ಪು. ೩೫೮–೩೫೯.

೨೪೦. ನೇಗಿನಹಾಳ ಎಂ.ಬಿ., "ಒಂದನೆಯ ಸೋಮೇಶ್ವರನ ಮುಗಟಖಾನ ಹುಬ್ಬಳ್ಳಿ ಶಾಸನ", ನೇಗಿನಹಾಳ ಪ್ರಬಂಧಗಳು (೧೯೯೯), ಪು. ೪೪೧–೪೪೪.

೨೪೧. ಪಾಡಿಗಾರ ಶ್ರೀನಿವಾಸ ವ್ಹಿ. (ಸಂ.), ಇನ್ಸ್ಕ್ರಿಪ್ಶನ್ಸ್ ಆಫ್ ದಿ ಚಲುಕ್ಯಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೪೭.

೨೪೨. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೬.

೨೪೩. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೨, ಪು. ೬೯–೭೧.

೨೪೪. ಕೆ.ಆಯ್. ಸಂ. V, ಶಾ.ಸಂ. ೨೧. ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ.,"ರಾಯಬಾಗದ ವೀರಗಲ್ಲು ಶಾಸನ", ಶಾಸನ ಅಧ್ಯಯನ ಸಂ. ೨/೨ (೨೦೦೫), ಪು. ೨೬–೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೪೫. ಕೆ.ಆಯ್. ಸಂ. V, ಶಾ.ಸಂ. ೨೫. ಇ.ಆಯ್. ಸಂ. XIX, ಪು. ೧೯–೨೬.

೨೪೬. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩, ೬೨, ೨೪೭. ಕೆ.ಆಯ್. ಸಂ. VI, ಶಾ.ಸಂ. ೭೩.

೨೪೭. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದಿ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್–ಪ್ಲೇಟ್ ಇನ್ಸ್ಕ್ರಿಪ್ಶನ್ಸ್ ಎಗ್ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦–೪೧ (೧೯೬೧), ಶಾ.ಸಂ. ೨೯, ಪು. ೫.

೨೪೮. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೨೮.

೨೪೯. ಅಪ್ರಕಟಿತ ತಾಮ್ರಪಟ ಶಾಸನ.

೨೫೦. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨, ೨೨. ಇ.ಆಯ್. ಸಂ. XIII, ಶಾ.ಸಂ. ೩/ಎ, ೨೮/ಬಿ. ಕೆ.ಆಯ್. ಸಂ. VI, ಶಾ.ಸಂ. ೭೩.

೨೫೧. ಇ.ಆಯ್. ಸಂ. XIII, ಶಾ.ಸಂ. ೨೮/ಬಿ.

೨೫೨. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ.,"ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್–೧೯೭೮), ಪು. ೨೨–೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಇ.ಆಯ್. ಸಂ. XIII, ಶಾ.ಸಂ. ೩/ಬಿ.

೨೫೩. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೭೪), ಪು. ೧೨೪.

೨೫೪. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೩೦.

೨೫೫. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದಿ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್-ಪ್ಲೇಟ್ ಇನ್‌ಸ್ಕ್ರಿಪ್ಶನ್ಸ್ ಎಗ್‌ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೫೦/೧-೨, ಪು. ೨೧. ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧ ಮತ್ತು ೫೨.

೨೫೬. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೩೨. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೨೫೭. ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ.

೨೫೮. ಇ.ಆಯ್. ಸಂ. XVI, ಪು. ೧.

೨೫೯. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೧೨. ಇ.ಆಯ್. ಸಂ. XIII, ಶಾ.ಸಂ. ೩/ಬಿ.

❖❖❖

ಅಧ್ಯಾಯ : ನಾಲ್ಕು

ಕೂಹುಂಡಿನಾಡಿನ ಸಾಮಾಜಿಕ ವ್ಯವಸ್ಥೆ

ಅಧ್ಯಾಯ : ನಾಲ್ಕು
ಸಾಮಾಜಿಕ ವ್ಯವಸ್ಥೆ

೪.೧. ಪೀಠಿಕೆ

ಯಾವುದೋ ಒಂದು ಸಮಾಜದ ಸ್ಥಿರತೆ-ಅಸ್ಥಿರತೆ, ಪರಿವರ್ತನೆಯ ರೀತಿ ಮತ್ತು ಅಗಾಧತೆ, ಸ್ವಂತಿಕೆಯ ಅಳಿವು-ಉಳಿವು ಮೊದಲಾದವುಗಳು ಅದರ ಸಾಂಸ್ಕೃತಿಕ ಆಳ-ಎತ್ತರಗಳು, ವಿಸ್ತಾರ-ವ್ಯಾಪ್ತಿ, ಪ್ರೌಢಿಮೆ-ಪ್ರಬುದ್ಧತೆಯನ್ನು ಅವಲಂಭಿಸಿರುತ್ತದೆ. ಈ ನಿಟ್ಟಿನಲ್ಲಿ ಇತಿಹಾಸಪೂರ್ವ ಕಾಲದಿಂದಲೂ ಒಂದಿಲ್ಲೊಂದು ರೀತಿಯಲ್ಲಿ ಸಾಮಾಜಿಕ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಅಂದಿನ ಮಾನವನು ಗುಂಪು-ಗುಂಪಾಗಿ ವಾಸಿಸತೊಡಗಿದ ತರುವಾಯ ಹಂತ-ಹಂತವಾಗಿ ಅವನ ಜೀವನ ವಿಧಾನ ಬದಲಾಗುತ್ತ ಬಂದಿತು. ಇದನ್ನೇ ನಾಗರಿಕತೆ ಅಥವಾ ಸಾಮಾಜಿಕ ವ್ಯವಸ್ಥೆಯ ಪ್ರಾರಂಭದ ಹಂತ ಎಂದು ಕರೆಯಲಾಗುತ್ತದೆ. ನಂತರ ಸಮಾಜದಲ್ಲಿ ವರ್ಣ, ವರ್ಗ, ಕುಟುಂಬ, ಸಂಘ, ಧರ್ಮ ಮತ್ತು ಅವುಗಳ ಆಲೋಚನಾ ಕ್ರಮ ಇತ್ಯಾದಿ ಅಂಶಗಳು ಬೆಳೆದು ಬಂದವು. ಈ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ರೂಢಿ-ಸಂಪ್ರದಾಯಗಳು ಮತ್ತು ಸಾಮಾಜಿಕ ಕಟ್ಟಳೆಗಳು ಪರಿಸ್ಥಿತಿಗೆ ತಕ್ಕಂತೆ ಬದಲಾಗುತ್ತ ಬಂದಿವೆ.

ಧರ್ಮ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವುಗಳನ್ನು ಒಂದನ್ನೊಂದು ಪ್ರತ್ಯೇಕಿಸಲು ಸಾಧ್ಯವಿಲ್ಲ. ಸಮಾಜದಲ್ಲಿನ ಕುಟುಂಬದ ರಚನೆ, ಜಾತಿ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ವಿದ್ಯಾಭ್ಯಾಸ ಮೊದಲಾದವುಗಳ ಜೊತೆಗೆ ನ್ಯಾಯ ಅನ್ಯಾಯಗಳ ತೀರ್ಪುಗಳು ಸಮಾಜದ ಮೌಲ್ಯಗಳಾಗಿವೆ. ವೈದಿಕ ಯುಗದ ಪೂರ್ವದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ ವ್ಯವಸ್ಥೆ ಅಸ್ತಿತ್ವದಲ್ಲಿರಲಿಲ್ಲ. ಈ ಯುಗದಿಂದೀಚೆಗೆ ವರ್ಣ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತ್ತು. ಈ ವ್ಯವಸ್ಥೆಯಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು ಎಂಬ ನಾಲ್ಕು ವರ್ಣಗಳಿದ್ದವು. ಪ್ರಾರಂಭದಲ್ಲಿ ವರ್ಣ ವ್ಯವಸ್ಥೆ ಕಟ್ಟುನಿಟ್ಟಾಗಿರಲಿಲ್ಲ. ಕಾಲಕ್ರಮೇಣ ಇದು ಸಂಕೀರ್ಣವಾಗತೊಡಗಿತು. ಶೂದ್ರರನ್ನುಳಿದು ಯಾರು ಯಾವ ವರ್ಗವನ್ನಾದರೂ ಸೇರುವ ಅವಕಾಶವಿತ್ತು.[೧] ಇದು ಸಮಾಜದಲ್ಲಿ ವಿಶಿಷ್ಟ ಪದ್ಧತಿಯಾಗಿ ರೂಪುಗೊಂಡಿತು. ಅಂದು ಶೂದ್ರರಿಗೆ ಕೀಳು ದರ್ಜೆಯನ್ನು ಕಲ್ಪಿಸಲಾಗಿತ್ತು. ಮೊದಲ ಮೂರು ವರ್ಣಗಳ ವಿವಾಹ ಮತ್ತಿತರ ವಿಷಯದಲ್ಲಿ ಯಾವುದೇ ನಿಬಂಧನೆಗಳು ಇರಲಿಲ್ಲ. ಕಾಲಕ್ರಮೇಣ ಸಮಾಜದಲ್ಲಿ ವೃತ್ತಿ ಆಧಾರಿತ ಜಾತಿಗಳು ಉದಯಿಸಿದವು.

ಕೂಹುಂಡಿನಾಡಿನ ಪ್ರದೇಶದ ಸಾಮಾಜಿಕ ವ್ಯವಸ್ಥೆಯು ಸಂತೃಪ್ತ ಮತ್ತು ಸುಖಮಯವಾಗಿತ್ತೆಂಬುದು ಇಲ್ಲಿಯ ಶಾಸನಗಳ ಅಧ್ಯಯನದಿಂದ ವಿದಿತವಾಗುತ್ತದೆ. ಇಲ್ಲಿಯ ಜನಸಾಮಾನ್ಯರು ನಡೆ-ನುಡಿ, ಶಿಸ್ತು-ಸಂಯಮ, ಸಹಕಾರಗಳಿಂದ ಒಬ್ಬರಿಗೊಬ್ಬರು ಅರಿತು ಸಮಾಜದಲ್ಲಿ ಸಾಮರಸ್ಯವನ್ನು ಕಾಪಾಡುವ ಮೂಲಕ ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡಿದ್ದರು. ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೨೨ ಮತ್ತು ಈ ನಾಡಿಗೆ ಸಂಬಂಧಿಸಿದಂತೆ ಇತರೆಡೆಯಲ್ಲಿರುವ ೧೨ ಒಟ್ಟು ೧೩೪ ಶಾಸನಗಳೆಲ್ಲವುಗಳನ್ನೂ ಕೇಂದ್ರವಾಗಿಟ್ಟುಕೊಂಡು ಸಮಕಾಲೀನ ಸಾಮಾಜಿಕ

ವ್ಯವಸ್ಥೆಯ ವಿವಿಧ ಆಯಾಮಗಳನ್ನು ಅಂದರೆ ಚಾತುರ್ವರ್ಣಗಳು, ವೃತ್ತಿ ಆಧಾರಿತ ಜಾತಿಗಳು, ಸಮಕಾಲೀನ ಸ್ತ್ರೀಯರ ಸ್ಥಾನಮಾನಗಳು, ನಂಬುಗೆ-ಸಂಪ್ರದಾಯಗಳು, ಹಬ್ಬ-ಹರಿದಿನಗಳು, ಆಹಾರ-ಪಾನೀಯಗಳು, ಸಾರ್ವಜನಿಕ ಚಟುವಟಿಕೆಗಳು ಮೊದಲಾದವುಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೪.೨. ಸಾಮಾಜಿಕ ಜೀವನ

ಕೂಹುಂಡಿನಾಡಿನ ಪ್ರದೇಶದ ಜನಸಾಮಾನ್ಯರ ನಡೆ-ನುಡಿಗಳು, ಶಿಸ್ತು-ಸಂಯಮ, ಸಹಕಾರಗಳಿಂದ ಇಲ್ಲಿಯ ಸಾಮಾಜಿಕ ಜೀವನ ಸುಖಮಯವಾಗಿತ್ತು. ಈ ನಾಡಿನ ಭೂಮಿ ಫಲವತ್ತಾಗಿದ್ದು, ಎಲ್ಲ ಋತುಗಳಲ್ಲಿ ಹುಲುಸಾದ ಬೆಳೆಗಳನ್ನು ಬೆಳೆಯುತಿತ್ತು.[೨] ಅಂದಿನ ಸಮಾಜವು ಕಳ್ಳಕಾಕರಿಂದ ಮುಕ್ತವಾಗಿತ್ತು. ಜೊತೆಗೆ ಉತ್ತಮವಾದ ವ್ಯಾಪಾರ-ವ್ಯವಹಾರಗಳು, ಧವಸ-ಧಾನ್ಯಗಳು, ನಿಸರ್ಗ ಸಂಪತ್ತಿನಿಂದ ಸಮೃದ್ಧವಾಗಿತ್ತು. ಇಲ್ಲಿಯ ಆಳರಸರಾದಿ ಅಧಿಕಾರಿಗಳು ಪ್ರಜೆಗಳನ್ನು ಮಕ್ಕಳಂತೆ ಕಂಡಿದ್ದಾರೆ. ಇವರು ಜನತೆಯ ಬೇಕು-ಬೇಡಗಳನ್ನು ಅರಿತು ಪೂರೈಸುವುದು ತಮ್ಮ ಪರಮ ಕರ್ತವ್ಯವೆಂದು ಭಾವಿಸಿದ್ದರು.

ಕೆಱೆ ಬಾವಿ ಸತ್ರಮೆಱೆಯಿಸು ವಱಿವಟಿಗೆ
ಪುರಪ್ರದೇಶಪರಿಸರದೊಳ್ ಕಿಕ್ಕಿಱಿದಿಱಿದಾರವೆಗಳುಮ...
ನೆಱೆ ತಂನಿಂದೊಳವಿಂ ನಮಳ....ಪ್ರಭುಗಳ್ ||

ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಆಡಳಿತ ನಡೆಸುವುದರೊಂದಿಗೆ, ಪ್ರಜೆಗಳ ಅವಶ್ಯಕತೆಗಳನ್ನು ಅರಿತು ಕೆರೆಗಳು, ಬಾವಿಗಳು, ಅರವಟ್ಟಿಗೆಗಳು, ದೇವಾಲಯಗಳು, ಬಸದಿಗಳನ್ನು ನಿರ್ಮಿಸಿ ಸಾರ್ವಜನಿಕ ಸಾಮರಸ್ಯವನ್ನು ಮೆರೆದಿರುವುದು ರಾಯಬಾಗದ ಕ್ರಿ.ಶ. ೧೧೪೦ರ ಶಾಸನದಲ್ಲಿ ದಾಖಲಾಗಿದೆ.[೩]

ಕೂಹುಂಡಿನಾಡಿನ ಪ್ರದೇಶದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಜಾರಿಯಲ್ಲಿತ್ತು. ಇಲ್ಲಿಯ ಹಮ್ಮು ಎಂಬ ಅಧಿಕಾರಿಗೆ ನಾಲ್ವರು ಗಂಡು ಮಕ್ಕಳಿದ್ದರು. ಅವರೆಲ್ಲರೂ ಆಡಳಿತದಲ್ಲಿ ಉನ್ನತ ಸ್ಥಾನದಲ್ಲಿದ್ದರು. ತಂದೆಗೆ ವಿಧೇಯರಾಗಿ ಕೂಡಿ ಬಾಳುತ್ತಿದ್ದರು.[೪] ಕುಟುಂಬದಲ್ಲಿ ತಂದೆಯ ನಂತರ ಹಿರಿಯ ಮಗನು ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಳ್ಳುತಿದ್ದನು. ಒಂದು ವೇಳೆ ಕುಟುಂಬದ ಮುಖ್ಯಸ್ಥನಿಗೆ ಮಕ್ಕಳಿಲ್ಲದಿದ್ದರೆ ತಮ್ಮ ಆಸ್ತಿಯನ್ನು ಧಾರ್ಮಿಕ ಕಾರ್ಯಗಳಿಗೆ ದಾನ ಮಾಡುತ್ತಿದ್ದರು. ಸಂಕೇಶ್ವರದ ರಾಮಶೆಟ್ಟಿ ಎಂಬ ವರ್ತಕನು ತನಗೆ ಮಕ್ಕಳಿಲ್ಲದ್ದಕ್ಕಾಗಿ ತನ್ನೆಲ್ಲ ಆಸ್ತಿಯನ್ನು ದೇವರಿಗೆ ದಾನ ಮಾಡಿದ್ದಾನೆ.[೫] ಈ ನಾಡಿನಲ್ಲಿ ಬಹುಪತ್ನಿತ್ವ ವ್ಯವಸ್ಥೆ ಜಾರಿಯಲ್ಲಿತ್ತು.[೬] ಈ ಪದ್ಧತಿ ರಾಜ ಮನೆತನಗಳಲ್ಲಿ, ಶ್ರೀಮಂತರಲ್ಲಿ ಜಾರಿಯಲ್ಲಿತ್ತೊ ಅಥವಾ ಎಲ್ಲ ವರ್ಗದಲ್ಲಿ ಅಸ್ತಿತ್ವದಲ್ಲಿ ಇದ್ದುದರಕುರಿತು ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಪ್ರಾಯಶಃ ಇದು ಉಚ್ಚ ವರ್ಗದವರಲ್ಲಿದ್ದಂತೆ ತೋರುತ್ತದೆ. ತಮ್ಮ ಪತ್ನಿಯರನ್ನು ಹೊರತುಪಡಿಸಿ ಉಳಿದ ಹೆಣ್ಣು ಮಕ್ಕಳನ್ನು ಸಹೋದರಿಯರಂತೆ ಕಾಣುತಿದ್ದರು. ನೇಸರಗಿಯ ಕ್ರಿ.ಶ. ೧೨೧೯ರ ಶಾಸನವು-

ಪಿರಿದುಂ ಮೊಲ್ಲವೆಯುಳ್ಳವಂ ಶರಣೆನಲ್ಕಾವಂ
ದಿಟಕ್ಕಾಂತಡೆಂನರುವಂ ತಳ್ತಿಱಿದಿಕ್ಕುವಂ ಮಱೆದುವನ್ಯ

ಸ್ತ್ರೀಯರಂ ರಂಭೆಗೆ ಬೆರೆಲಿಂದಂ ಮಿಗಿಲಾದಡಂ
ನೆನೆಯನೀವಂ ಬೇಡಿದರ್ಗ್ಗಿಷ್ಟಮಂ ಧರೆಯೊಳು
ತಾನೆನಲಿಂತದೇನೆಸದನೋ ಶ್ರೀಕಾರ್ತ್ತವೀರ್ಯ್ಯೋರ್ವ್ವಿಪಂ ॥
ಪರಧನಮಂ ಪರಸತಿಯಂ ಪರವೀರರನಂತೆ
ಧನದಧನಕಂ ರತಿಗಂ ಕರಿರಿಪುಗವದಿಕವೆನ್ಸಿಯೇ
ಬರೆ ನಾಯಕ ಬಾಚನೊಲ್ಲನಱಿಯಂ ಬಗೆಯಂ ॥

ಎಂದು ಅಂದಿನ ಸಾಮಾಜಿಕ ಮೌಲ್ಯವನ್ನು ಸೂಚಿಸುತ್ತದೆ.[೭]

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಆಳರಸರಾದಿ ಅಧಿಕಾರಿಗಳು ನೀತಿ-ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದುದರಿಂದ ಪ್ರಜೆಗಳು ಅನೀತಿಯಿಂದ ವರ್ತಿಸಲು ಸಾಧ್ಯವಿರಲಿಲ್ಲ. ಸಮಾಜದಲ್ಲಿ ನೀತಿ-ನಿಯಮಗಳಿಗೆ ಹೆಚ್ಚಿನ ಗೌರವವಿತ್ತು. ನೀತಿವಂತರಿಗೆ ಸಾಮಾಜಿಕವಾಗಿ ಉನ್ನತ ಸ್ಥಾನವಿತ್ತು.

ತಲೆಬುರುಡೆಯಲ್ಲಿ ನಾಯಿಯ ಮಾಂಸ, ಹೆಂಡ
ಹಾಕಿ ಬೇಯಿಸುವವರು ನೀಚರಲ್ಲ, ದೇವಾಲಯಗಳಿಗೆ
ಸಾರ್ವಜನಿಕರು ಕೊಡಮಾಡಿದ ದಾನ-ದತ್ತಿಗಳನ್ನು
ಅಪಹರಿಸುವವರು, ನಾಶಪಡಿಸುವವರು ನೀಚರು ॥

ಎಂದು ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು ಸ್ಪಷ್ಟಪಡಿಸುತ್ತದೆ.[೮] ಅನೀತಿವಂತರು ಸಾರ್ವಜನಿಕರ ಎದುರಿನಲ್ಲಿ 'ದಿವ್ಯವನು' ಎದುರಿಸಬೇಕಾಗುತ್ತಿತ್ತು. ಸವದತ್ತಿಯ ರಟ್ಟ ಮನೆತನದ ಲಕ್ಷ್ಮೀದೇವನ ಪಟ್ಟದರಸಿ ಚಂದಲದೇವಿ ಒಮ್ಮೆ ಘಟಸರ್ಪವನ್ನು ಹಿಡಿದು ವಿಜಯ ಸಾಧಿಸಿದಳು.[೯] ಇದರಿಂದ ಜನರು ಕಾನೂನು ವಿರೋಧಿ ಚಟುವಟಿಕೆಗಳನ್ನು ನಡೆಸಲು ಹೆದರುತ್ತಿದ್ದರು. ಇಲ್ಲಿಯ ಆಳರಸರಾದಿ ಅಧಿಕಾರಿಗಳು ನ್ಯಾಯದ ಪರವಾಗಿದ್ದು, ಅಂತಾಗಿ ಪ್ರಜೆಗಳಿಗೆ ಮುಕ್ತ ನ್ಯಾಯ ದೊರಕುತಿತ್ತು. ಇದರಿಂದ ಸಮಾಜದಲ್ಲಿ ನೆಮ್ಮದಿಯ ವಾತಾವರಣ ನಿರ್ಮಾಣವಾಗಿತ್ತು.

೪.೩. ಚಾತುರ್ವರ್ಣಗಳು

ವರ್ಣವ್ಯವಸ್ಥೆ ರೂಪಗೊಳ್ಳುವುದಕ್ಕೆ ಮುಂಚೆ ಸಮಾಜವನ್ನು ವೃತ್ತಿಗನುಗುಣವಾಗಿ ವರ್ಗೀಕರಣ ಮಾಡಲಾಗಿತ್ತು. ವೃತ್ತಿಗಳು ತೀರಾ ಪ್ರಾಚೀನ ಕಾಲದಲ್ಲಿಯೇ ಜಾತಿಗಳಾಗಿ ರೂಪುಗೊಂಡಿದ್ದವೆಂಬ ಮಾತುಗಳಿಗೆ ಒಮ್ಮತವಿಲ್ಲ. ವರ್ಣ ಎಂಬ ಪದವು ಜಾತಿ ಸೂಚಕವಾಗಿರದೇ, ಅದು ಆರ್ಯರ ಮತ್ತು ಇಲ್ಲಿನ ಮೂಲ ನಿವಾಸಿಗಳ (ದಸ್ಸು) ನಡುವಣ ವ್ಯತ್ಯಾಸವನ್ನು ಸೂಚಿಸುವ ಪದವಾಗಿತ್ತು. ಅದು ಭಾಷೆ, ಮತ, ಧರ್ಮ, ಬಣ್ಣ, ಆಕಾರ ಮೊದಲಾದವುಗಳನ್ನು ಒಳಗೊಂಡ ಪದಸೂಚಕವಾಗಿತ್ತು. ವರ್ಣ ವ್ಯವಸ್ಥೆಯಲ್ಲಿ ಇಂದಿನ ಜಾತಿ ಪದ್ಧತಿಯಂತೆ ರಕ್ತ ಸಂಬಂಧ ನಿಷಿದ್ಧವಾಗಿರಲಿಲ್ಲ. ಅಂತರವರ್ಣ ವಿವಾಹಗಳು ನಡೆಯುತ್ತಿದ್ದ ಉಲ್ಲೇಖಗಳು ದೊರೆಯುತ್ತವೆ. ಮುಂದೆ ವಿವಿಧ ವೃತ್ತಿಗಳಲ್ಲಿ ಭೇದ ಉಂಟಾಗಿ ಅದು ಸಾಮಾಜಿಕವಾಗಿ ಮೇಲು-ಕೀಳು ಭಾವನೆಗೆ ಎಡೆ ಮಾಡಿ ಚಾತುರ್ವರ್ಣಗಳಿಗೆ ಹಾದಿ ಮಾಡಿಕೊಟ್ಟಿತ್ತು. ಬ್ರಾಹ್ಮಣ್ಯಗಳ ಕಾಲದಲ್ಲಿ ವರ್ಣ ವ್ಯವಸ್ಥೆ ಮತ್ತಷ್ಟು ಬಿಗಿಯಾಯಿತು. ವೃತ್ತಿ ವ್ಯತ್ಯಾಸಗಳು ಹಿಂದುಳಿದ ವ್ಯಕ್ತಿಯ ಹುಟ್ಟು, ವರ್ಣವನ್ನು ನಿರ್ಣಯಿಸುವಂತಾಯಿತು.[೧೦]

ಭಾರತದಲ್ಲಿ ಜಾತಿ ವ್ಯವಸ್ಥೆಯ ಮೂಲ ಬಹು ಪ್ರಾಚೀನವಾಗಿದೆ. ಮನುಸ್ಮೃತಿಯಲ್ಲಿ 'ವರ್ಣ ಸಾಂಕರ್ಯದಲ್ಲಿ ಬೇರೆ ಬೇರೆ ಜಾತಿಗಳು ಹುಟ್ಟಿದವು' ಎಂದು ಹೇಳಲಾಗಿದೆ.[೧೧] ಜಾತಿ ವ್ಯವಸ್ಥೆ ರೂಢಿಗೆ ಬಂದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಬೌದ್ಧ ಧರ್ಮದ ಸ್ಥಾಪನೆಯ ನಂತರ ಬೌದ್ಧರು ಕೀಳರೆಂದು ಪರಿಗಣಿಸಿ ಮಾಂಸ ಸೇವನೆ ಮತ್ತು ಬಹುಪತ್ನಿತ್ವವನ್ನು ತೊರೆದ ಬ್ರಾಹ್ಮಣರು ತಮ್ಮ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರು.[೧೨] ಯಾವಾಗ ವೈಶಿಷ್ಟ್ಯದ ರಕ್ಷಣೆಯೇ ಮುಖ್ಯ ಉದ್ದೇಶವಾಯಿತೋ ಆಗ ಕೊಳ್ಳು-ಕೊಡುಗೆಗಳು ಇಲ್ಲವಾದವು. ಇವು ನಿಂತಾಗ ಬೇರೆ ಬೇರೆ ವರ್ಣಗಳಿಗೆ ಸೇರಿದ ಜನರು ಪರಸ್ಪರರಿಂದ ದೂರವಾದರು. ಅವರಲ್ಲಿ ಮೇಲು-ಕೀಳು ಭಾವನೆಗಳು ಬೆಳೆದವು. ಇದು ಜಾತಿ ವ್ಯವಸ್ಥೆಗೆ ನಾಂದಿಯಾಯಿತು. ಮೇಲು-ಕೀಳು ಭಾವನೆ ಪಕ್ವವಾದಾಗ ಕೀಳು ಜಾತಿಯವರು ಯಜ್ಞ-ಯಾಗಾದಿಗಳನ್ನು ಮಾಡುವ ಹಾಗಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಯಿತು. ಹಲವು ಜಾತಿಗಳುಂಟಾಗಿ ಅಲ್ಲಿ ಪ್ರತಿಯೊಂದು ಜಾತಿ ಬೇರೆಯವರೊಡನೆ ಸಂಪರ್ಕವಿಟ್ಟುಕೊಳ್ಳದೆ ಪ್ರತ್ಯೇಕ ಪಂಗಡವಾದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳು ಹಲವು ಉಪಜಾತಿಗಳಾಗಿ ಪರಸ್ಪರರಲ್ಲಿ ಸಂಪರ್ಕ ಕಡಿಮೆಯಾಯಿತು. ಈ ತೆರನಾಗಿ ಜಾತಿ ವ್ಯವಸ್ಥೆ ಬೆಳೆದು ಬಂದಿತು.

ಕೂಹುಂಡಿನಾಡಿನ ಪ್ರದೇಶದ ಶಾಸನಗಳನ್ನು ಅವಲೋಕಿಸಿದಾಗ ಇಲ್ಲಿ ವರ್ಣ ವ್ಯವಸ್ಥೆ ಪ್ರಚಲಿತದಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ. ಆದರೆ ಇದು ಹಿಂದಿನ ಕಾಲದಷ್ಟು ಕಠಿಣವಾಗಿರಲಿಲ್ಲ. ಬ್ರಾಹ್ಮಣ್ಯಗಳ ಕಾಲದಲ್ಲಿ ವ್ಯಕ್ತಿಯ ವರ್ಣ ಅವನ ವೃತ್ತಿಯನ್ನಾಧರಿಸದೇ ಹುಟ್ಟನ್ನಾಧರಿಸಿತ್ತು. ಆದರೆ ಎಂ. ಚಿದಾನಂದಮೂರ್ತಿ ಅವರು 'ಪ್ರಾಚೀನ ಕರ್ನಾಟಕದಲ್ಲಿ ವರ್ಣ ಪದ್ಧತಿಯ ಪರಿಪಾಲನೆ ಬಹುಮಟ್ಟಿಗೆ ಕುಸಿದು ಹೋಗಿತ್ತು' ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೩] ಆದರೂ ಬ್ರಾಹ್ಮಣರು ಇತರರಿಗಿಂತ ಹೆಚ್ಚು ಪ್ರಭಾವಶಾಲಿಗಳಾಗಿರುವುದು ಗೋಚರಿಸುತ್ತದೆ. ಇವರು ತಮ್ಮ ಗೃಹವೃತ್ತಿಗಳಿಂದ ಉಪಜೀವನವನ್ನು ನಡೆಸುತ್ತಿದ್ದರು. ಹೀಗಿದ್ದರೂ ಅವರಲ್ಲಿ ಕೆಲವರು ಕ್ಷತ್ರಿಯರಂತೆ ಖಡ್ಗ ಹಿಡಿದು ರಾಜ್ಯವನ್ನು ಸ್ಥಾಪಿಸಿದ್ದಾರೆ. ಉದಾಹರಣೆಗಾಗಿ; ಬನವಾಸಿ ಕದಂಬ ಮನೆತನದ ಮೂಲ ಪುರುಷ ಮಯೂರವರ್ಮನು ಬ್ರಾಹ್ಮಣನಾಗಿದ್ದನು. ಮನುಸ್ಮೃತಿಕಾರನು ಬ್ರಾಹ್ಮಣರು ಕ್ಷತ್ರಿಯ ಮತ್ತು ವೈಶ್ಯರ ವೃತ್ತಿಗಳನ್ನು ಅವಲಂಬಿಸಬಹುದು ಎಂದು ಸೂಚಿಸಿದ್ದಾನೆ.[೧೪] ಇದರಂತೆ ವೈಶ್ಯರೂ ಸಹ ಊರ್ಗ್ಗಾವುಂಡರೂ, ನಾಳ್ಗಾವುಂಡರೂ ಆಗಿ ರಾಜಕೀಯ ಮಾಡಿರುವುದಕ್ಕೆ ಉದಾಹರಣೆಗಳಿವೆ. ಒಟ್ಟಿನಲ್ಲಿ ಬ್ರಾಹ್ಮಣ್ಯಗಳ ಕಾಲದಲ್ಲಿ ವರ್ಣಗಳಲ್ಲಿ ಯಾವ ಒಂದು ಕಠಿಣತೆ, ಗಡಸುತನ ಎನ್ನುವದಿತ್ತೋ ಅಷ್ಟು ಕೂಹುಂಡಿನಾಡಿನ ಪ್ರದೇಶದಲ್ಲಿರಲಿಲ್ಲ ಎಂಬುದು ಗಮನಿಸುವ ಸಂಗತಿಯಾಗಿದೆ. ಈ ನಾಡಿನ ಶಾಸನಗಳ ಆಧಾರದಿಂದ ಇಲ್ಲಿನ ಚಾತುರ್ವರ್ಣಗಳ ವ್ಯವಸ್ಥೆಯ ಸ್ವರೂಪ ಕೆಳಗಿನಂತಿದೆ.

೪.೩.೧. ಬ್ರಾಹ್ಮಣರು

ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ಬ್ರಾಹ್ಮಣರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನಗಳಿದ್ದವು. ಮನುಸ್ಮೃತಿಯಲ್ಲಿ ಅಧ್ಯಯನ, ಅಧ್ಯಾಪನ, ಯಜ್ಞ ಮಾಡುವುದು ಮತ್ತು ಯಜ್ಞ

ಮಾಡಿಸುವುದು, ದಾನ ಕೊಡುವುದು ಮತ್ತು ಸ್ವೀಕರಿಸುವುದು ಬ್ರಾಹ್ಮಣರ ಆರು ಕರ್ಮಗಳೆಂದು ಹೇಳಲಾಗಿದೆ.[೧೫] ಕರ್ನಾಟಕದಲ್ಲಿ ಬ್ರಾಹ್ಮಣರು ಪ್ರಭಾವಶಾಲಿಗಳಾಗಿದ್ದರು. ಆದಿಕವಿ ಪಂಪನು 'ಜಾತಿಗಳಲ್ಲೆಲ್ಲಮುತ್ತಮ ಜಾತಿಯ ವಿಪ್ರಕುಲದ ಮಹಾಜನರು'ಎಂದಿರುವುದರಿಂದ ಜಾತಿಗಳಲ್ಲಿ ಬ್ರಾಹ್ಮಣ ಜಾತಿಯೇ ಉತ್ತಮವಾಗಿತ್ತು.[೧೬] 'ಬ್ರಾಹ್ಮಣರಿಗಲ್ಲದೆ ಗೋರವುಗಳಿಗೆ ಸಲ್ಲದು ಬ್ರಾಹ್ಮಣ ಪೂಜೆ' ಎಂಬ ಶಾಸನೋಕ್ತಿಯು ಅವರು ಸಮಾಜದಲ್ಲಿ ಎಲ್ಲರಿಗಿಂತಲೂ ಹಿರಿಯ ಸ್ಥಾನದಲ್ಲಿದ್ದುದು ಸ್ಪಷ್ಟವಾಗುತ್ತದೆ. ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳು ಬ್ರಾಹ್ಮಣರು ಷಟ್ಕರ್ಮನಿರತರು ಎಂದು ಬಣ್ಣಿಸಿವೆ.[೧೭] ಇದರಿಂದ ಈ ನಾಡಿನ ಪ್ರದೇಶದಲ್ಲಿ ಬ್ರಾಹ್ಮಣರಿಗೆ ಉನ್ನತವಾದ ಸ್ಥಾನ-ಮಾನಗಳಿದ್ದವೆಂಬುದು ಮನದಟ್ಟಾಗುತ್ತದೆ. ಅವರನ್ನು ಗುರುಗಳೆಂದು ಮನ್ನಿಸುತ್ತಿದ್ದರು. ಶಾಸನಗಳನ್ನು ನಾಶ ಮಾಡಿದವರಿಗೆ ಸಾವಿರ ಬ್ರಾಹ್ಮಣರನ್ನು ಕೊಂದ ಪಾಪ ತಗಲುತ್ತದೆ ಎಂಬ ಶಾಪಾಶಯವನ್ನು ಶಾಸನದ ಕೊನೆಯಲ್ಲಿ ಕೊರೆಯಿಸಿದ್ದನ್ನು ಗಮನಿಸಿದರೆ, ಇದು ಅವರಿಗಿದ್ದ ಗೌರವವನ್ನು ಎತ್ತಿ ತೋರಿಸುತ್ತದೆ. ಕೆಲವು ಬ್ರಾಹ್ಮಣರು ಇಲ್ಲಿಯ ರಾಜಕೀಯದಲ್ಲಿಯೂ ಮುಖ್ಯ ಪಾತ್ರವನ್ನು ವಹಿಸಿದ್ದಾರೆ. ಅರಸರಿಗೆ ಮಾರ್ಗದರ್ಶನ ಮತ್ತು ಶಿಕ್ಷಣವನ್ನು ಕೊಡುವುದು ಇವರ ಪ್ರಮುಖ ಕಾರ್ಯವಾಗಿತ್ತು. ಕೆಲವು ಅರಸರು ತಮ್ಮ ಆಸ್ಥಾನದಲ್ಲಿ ಬ್ರಾಹ್ಮಣರನ್ನು ಸಲಹೆಗಾರರನ್ನಾಗಿ ನೇಮಿಸಿಕೊಂಡಿದ್ದರು. ಇವರನ್ನು ಶಸ್ತ್ರಾಭ್ಯಾಸಕ್ಕಾಗಿ ಗುರುಗಳೆಂದು ಮಾನ್ಯ ಮಾಡುವ ಪದ್ಧತಿ ಅರಸರಲ್ಲಿತ್ತು.

ತೇರದಾಳದ ಕ್ರಿ.ಶ. ೧೧೮೧ರ ಶಾಸನವು-

> ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡಂಬದ್ರೋಣಾಮುಖ
> ಪತ್ತಣಂಗಳಿಂದಮನೇಕಮಾಟಕೂಟಪ್ರಸಾದದೇವಾಯತನಂ
> ಗಳಿಂದಮೋಪ್ಪುವಗ್ರಹಾರಪಟ್ಟಣಂಗಳಿಂದ ಮತಿಶಯವಪ್ಪ
> ಶ್ರೀಮತುಕೂಂಡಿಮೂರುಸಾಸಿರದೊಳಗೆ ಹನ್ನೆರಡಕ್ಕಂ ಮೊದ
> ಬಾಡಂ ಬಣಂಜುವಟ್ಟಣಂ ನಡುವೆಯಮನೆ ತೇರಿದಾಳದಲು ॥

ಎಂದು ಕೂಹುಂಡಿನಾಡಿನ ಪ್ರದೇಶವು ಅಗ್ರಹಾರಗಳಿಂದ ಶೋಭಿಸುತ್ತಿತ್ತೆಂದು ವರ್ಣಿಸಿದೆ.[೧೮] ಇದರಿಂದ ಕೂಹುಂಡಿನಾಡಿನಲ್ಲಿ ಅನೇಕ ಅಗ್ರಹಾರಗಳಿದ್ದು, ಇಲ್ಲಿ ಬ್ರಾಹ್ಮಣರು (ಮಹಾಜನರು) ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ತೇರದಾಳ ಪ್ರದೇಶವು ಜೈನ ಧರ್ಮದ ಜೊತೆಗೆ ವೈಷ್ಣವ ಧರ್ಮದ ಪ್ರಮುಖ ಸ್ಥಾನವಾಗಿತ್ತು.

ರಾಯಬಾಗದ ಕ್ರಿ.ಶ. ೧೧೩೯ರ ಶಾಸನದಲ್ಲಿ-

> ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾಣ
> ಪಾರಾಯಣ ಜಪಸಮಾಧಿ ಶೀಲಸಂಪನ್ನರು । ಮತೀತಾನಾಗತ
> ವರ್ತ್ತಮಾನಕಾಲ ದೂರ ಶ್ರವಣ ವಿಜ್ಞಾನಾದಿಗಳೊಳತಿಪರಿಚಿತರುಂ
> ಮನೇಕ ತರ್ಕ್ಕಶಾಸ್ತ್ರವಿದ್ಯಾವಿಶಾರದರುಂ ಚತುರ್ವ್ವೇದ ಪಾರಾವಾರ
> ಪಾರಗರುಮಾಶ್ರಿತಜನಾಧಾರರುಮೇಕವಾಕ್ಯರುಂ ಶ್ವೇತಚ್ಛತ್ರಚಾಮ
> ರಾದ್ಯನೇಕ ರಾಜ್ಯಚಿಹ್ನೋಪಲಕ್ಷಿತರುಂ । ಶ್ರೀವಾಸುದೇವ ಲಬ್ಧವರ

ಪ್ರಸಾದರುಮಪ್ಪ ಶ್ರೀಮನ್ಮಹಾಘಟಿಕಾಸ್ಥಾನಮಗ್ರಹಾರಂ ।
ಶ್ರೀವಾಮದೇವಲಬ್ಧವರಪ್ರಸಾದರುಮಪ್ಪ ಶ್ರೀಮನ್ಮಹಾಘಟಿಕಾ
ಸ್ಥಾನಮಗ್ರಹಾರಂ ಮೂವಿನಬಾಗೆ ವೂರೊಡೆಯಪ್ರಮುಖವಶೇಷ
ಮಹಾಜನಙ್ಗಳು ಸಧರ್ಮ್ಮದಿಂದ ಪ್ರತಿಪಾಳಿಸುವರು ॥

ಎಂದು ಅಗ್ರಹಾರದಲ್ಲಿದ್ದ ಮಹಾಜನರ (ಬ್ರಾಹ್ಮಣರು) ಹಿರಿಮೆಯನ್ನು ಬಣ್ಣಿಸಿದೆ. ಕೊಣ್ಣೂರದ ಕ್ರಿ.ಶ. ೧೦೩೭ರ ಶಾಸನದಲ್ಲಿ ಬ್ರಾಹ್ಮಣರಿಗೆ ದಾನ ಕೊಡಮಾಡಿದ ಪ್ರಸ್ತಾಪವಿದೆ.[೯] ಇದೇ ಗ್ರಾಮದ ರೈಲು ಸೇತುವೆ ಹತ್ತಿರ ಹೊಸದಾಗಿ ಬೆಳಕಿಗೆ ಬಂದಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಜೈನ ಶಾಸನದ ಅಂತ್ಯದಲ್ಲಿ ಬ್ರಾಹ್ಮಣರನ್ನು ನೆನೆಯಲಾಗಿದೆ.[೨೦] ಬೆಳವಡಿಯ ಕ್ರಿ.ಶ. ೧೦೭೫ರ ಶಾಸನದಲ್ಲಿ–

ಗಂಗಾ ಗಯಾವಾರಾಣಾಸಿಕುರುಕ್ಷೇತ್ರದೊಳೆ
ಯ್ದೆಗೋದ್ವಿಜಮುನಿವ್ರಾತಂಗಳಂ ಕೊಂದಪಾತಕನಕ್ಕುಂ
ಬಿಡದಿರ್ಕ್ಕುಮಾಪುರುಷನೆಂದಂ ರೌರವಸ್ಥಾನಮಂ ॥

ಎಂದು ಶಾಸನಕ್ಕೆ ತಪ್ಪಿದರೆ ಅಥವಾ ದಾನವನ್ನು ಅಪಹರಿಸಿದರೆ ಬ್ರಾಹ್ಮರನ್ನು ಕೊಂದ ಪಾಪಕ್ಕೆ ಗುರಿಯಾಗಿ ರೌರವ ನರಕದ ಸ್ಥಾನವನ್ನು ಪಡೆಯಲಾಗುತ್ತದೆ ಎಂದು ಸೂಚಿಸಲಾಗಿದೆ.[೨೧] ಇದರಿಂದ ಅಂದು ಬ್ರಾಹ್ಮಣರನ್ನು ದೇವಸಮಾನರಾಗಿ ಕಾಣಲಾಗುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ. ಅವರನ್ನು ಕೊಂದರೆ ಪಾಪ ಬರುತ್ತದೆ, ನರಕದಲ್ಲಿ ನರಳಬೇಕಾಗುತ್ತದೆ. ಇದು ಅಂದಿನ ಸಮಾಜದಲ್ಲಿ ಬ್ರಾಹ್ಮಣರಿಗಿದ್ದ ಉನ್ನತ ಸ್ಥಾನವನ್ನು ಸ್ಪಷ್ಟಪಡಿಸುತ್ತದೆ. ಬ್ರಾಹ್ಮಣರು ದೇವರ ಪೂಜಕರಾಗಿ, ಕ್ಷತ್ರಿಯರಿಗೆ ವಿದ್ಯೆ ನೀಡುವ ಪವಿತ್ರ ಕಾರ್ಯವನ್ನು ನಿರ್ವಹಿಸಿದ್ದಾರೆ. ಸಮಾಜದಲ್ಲಿ ಪೂಜನೀಯ ಸ್ಥಾನದಲ್ಲಿದ್ದ ಬ್ರಾಹ್ಮಣರನ್ನು ಜನಸಾಮಾನ್ಯರು ತಮ್ಮ ದೈವಕ್ಕಿಂತ ಹೆಚ್ಚಿನ ಗೌರವಾಧಾರಗಳಿಂದ ಕಾಣುತ್ತಿದ್ದರು. ಇದಕ್ಕೆ ಸವದತ್ತಿಯ ಕ್ರಿ.ಶ. ೧೯೮೮ರ ಶಾಸನವು–

ಮುದಮುತ್ಸಾಹಮಶೇಷಸೌಖ್ಯಮೆಸೆವಾಯಂ ಶ್ರೀಯುಮ
ನ್ತಲ್ಲದಿನ್ತದು ತಾನೇಕೆಗನ್ದಮೂಣ್ದುಕಿಡಿಸಲ್ಕೆಂದಿರ್ಪ್ಪು
ಕಪ್ಪಂನ್ನಿಗೋದಯೊಳರ್ಕ್ಕನ್ದಗಳುಳ್ಳನಂವಿಷಯಮದು:
ಖಾವಾಸಮಂಪೊಳ್ದುಗು ಗಂಗಾಸಾಗರಯಮುನಾ
ಸಂಗಮದೊಳ್ವಾರಣಾಸಿಗಯೆಯೆಂಬೀತೀರ್ತ್ಥಂಗ
ಳೊಳೋತುಕುಳದ್ವಿಜಪುಂಗವಗೋಕುಳಮನದಳರಿನ್ತಿದನಳಿದರ್ ॥

ಉತ್ತಮ ನಿದರ್ಶನವಾಗಿದೆ.[೨೨] ಹೀಗೆ ಈ ನಾಡಿನ ಪ್ರತಿಯೊಂದು ದಾನ ಶಾಸನದ ಅಂತ್ಯದಲ್ಲಿ ಬ್ರಾಹ್ಮಣರನ್ನು ನೆನೆಯಲಾಗಿದೆ ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದ ಶಾಪಾಶಯದಲ್ಲಿ ಬ್ರಾಹ್ಮಣರ ಕುರಿತಾಗಿ–

ಅಪಿ ಗಂಗಾದಿ ತೀರ್ತ್ಥೇಷು ಹನ್ತುರ್ಗ್ಗಾಮತ್ವಾದ್ವಿಜಂ
ನಿಷ್ಕೃತಿಸ್ಸ್ಯಾನ್ನ ದೇವಸ್ವ ಬ್ರಹ್ಮಸ್ವಹರಣೇ ನೃಣಾಂ ॥

ಎಂಬ ನಿರೂಪಣೆಯಿದೆ.[೨೩] ತೇರದಾಳದ ಕ್ರಿ.ಶ. ೧೧೮೭ರ ಶಾಸನದಲ್ಲಿ–

ಪಿರಿದುಗಂಗಾನಯಾ ವಾರಣಾಸಿ ಕುರುಕ್ಷೇತ್ರದೆ

ಪುತ್ರಗೋದ್ವಿ ಜಮುನಿಬ್ರಾತಂಗಳಮ........॥

ಎಂದು ಸೂಚಿಸಲಾಗಿದೆ.[೨೪] ಬೆಳವಡಿಯ ಕ್ರಿ.ಶ. ೧೧೭೫ರ ಶಾಸನದ ಶಾಪಾಶಯಲ್ಲಿ-

ಸಕಳೋರ್ವ್ವೀಸ್ತುತಮಪ್ಪ ಧರ್ಮ್ಮಮನಿದಂ ಕಾದಂ
ಚಿರೈಶ್ವರ್ಯ್ಯಭುಂಬುಕನಕ್ಕುಂ ವಿಪರೀತದೊಳ್ನಡೆದವಂ
ಗಂಗಾ ಗಯಾ ವಾರಣಾಸಿ ಕುರುಕ್ಷೇತ್ರದೊಳೆಯ್ದೆ
ಗೋದ್ವಿಜಮುನಿವ್ರಾತಂಗಳಂ ಕೊಂದ ಪಾತಕನಕ್ಕುಂ
ಬಿಡದಿರ್ಕ್ಕುಮಾ ಪುರುಷನೆಂದುಂ ರೌರವ ಸ್ಥಾನಮಂ ॥

ಅಂದರೆ ಸಾವಿರ ಬ್ರಾಹ್ಮಣರನ್ನು ಕೊಂದಂತೆ ಮತ್ತು ಏಳನೆಯ ನರಕಕ್ಕೆ ಹೋದಂತೆ ಎಂದು ಹೇಳಲಾಗಿದೆ. ಅಂದಿನ ಜನಸಾಮಾನ್ಯರು ಬ್ರಾಹ್ಮಣರನ್ನು ತಮ್ಮ ಜೀವನದ ಪವಿತ್ರ ಅಂಗವೆಂದು ಭಾವಿಸಿದ್ದರು. ಸಮಾಜದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದ ಇವರು ಸಮಾಜದ ಇತರರು ದಾನ ಕೊಡುವ ಸಂದರ್ಭದಲ್ಲಿ ಉಪಸ್ಥಿತರಿರುತ್ತಿದ್ದರು.

ಹುಕ್ಕೇರಿ ತಾಲ್ಲೂಕಿನ ಬೆಳವಿಯ ಕ್ರಿ.ಶ. ೧೧೫೯ರ ಶಾಸನದಲ್ಲಿ-

ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ
ಮೋನಾನುಷ್ಠಾಣಯನ್ಯ ದೀಕ್ಷಾದ್ಯನೇಕ ಬ್ರತ
ಸತ್ಯಸೇವಾಚಾರ ಜಪ ಸಮಾಧಿ ಸಂಪನ್ನರಪ್ಪ
ಶ್ರೀಮತು ಬೆಳ್ವಬ್ಬೆಯೂರೊಡೆಯ ಕಾಳಿದಾಸಯ್ಯ
ಪ್ರಮುಖ ಮಹಾಜನಮಯ್ಯೂರ್ವ್ವರ್ಗ್ಗೆ...........
ಪದಿಂಬರ್ ಬ್ರಾಹ್ಮಣರ್ಗ್ಗಂ ಸತ್ರಕ್ಕೆ ಬಿಟ್ಟ ಗದ್ಯಾಣ
ವಿಪ್ಪತ್ತು ಪಣಂ ಬಣ್ಣಾದಾನಂ ತಿಱುವ ಗದ್ಯಾಣ
ಮಾಱುವಂತಾಚನ್ದ್ರಾರ್ಕ್ಕ ತಾರಂಬರಂ ತಪ್ಪದೆ
ಪ್ರತಿಪಾಳಿಸುವರ್ ॥

ಸವದತ್ತಿಯ ರಟ್ಟ ಮನೆತನದ ಅಂಕರಸಯ್ಯನ ಆಳ್ವಿಕೆಯ ಕಾಲಾವಧಿಯಲ್ಲಿ ಬ್ರಾಹ್ಮಣರಿಗಾಗಿ ಸತ್ರವನ್ನು ನಡೆಸಲು ಊರೊಡೆಯ ಕಾಳಿದಾಸಯ್ಯನ ನೇತೃತ್ವದ ಬೆಳುವಬ್ಬೆಯ ಐವತ್ತು ಮಹಾಜನರಿಗೆ ಹಣದಾನ ನೀಡಿದುದನ್ನು ನಿರೂಪಿಸಿದೆ. ಹೀಗೆ ಕೂಹುಂಡಿನಾಡಿನ ಪ್ರದೇಶದ ಶಾಸನಗಳನ್ನು ಅವಲೋಕಿಸಿದಾಗ ಬ್ರಾಹ್ಮಣರು ಸಮಾಜದ ಉನ್ನತ ಸ್ಥಾನದಲ್ಲಿದ್ದರೆಂಬುದು ಮನದಟ್ಟಾಗುತ್ತದೆ. ಸಮಾಜದಲ್ಲಿದ್ಯಾವಂತರಾಗಿದ್ದ ಬ್ರಾಹ್ಮಣರು ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳಿಂದ ಗೌರವ ಪಡೆದುಕೊಂಡಿದ್ದರು. ಇವರಿಗಾಗಿಯೇ ಆಳರಸರು ಅಗ್ರಹಾರಗಳನ್ನು ಬಿಟ್ಟುಕೊಟ್ಟು, ಅವುಗಳ ಆಡಳಿತ ಮತ್ತು ಉಪಭೋಗವನ್ನು ಇವರಿಗೆ ಬಿಟ್ಟುಕೊಟ್ಟಿದ್ದಾರೆ. ಬ್ರಾಹ್ಮಣರು ಅಗ್ರಹಾರಗಳ ಆಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ ಗ್ರಾಮದ ಸ್ಥಿತಿಗತಿಗೆ ಕಾರಣರಾಗಿದ್ದರು.

೪.೩..೨. ಕ್ಷತ್ರಿಯರು

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ಷತ್ರಿಯರನ್ನು ಬ್ರಾಹ್ಮಣರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಪ್ರಜೆಗಳ ರಕ್ಷಣೆ, ದಾನ ಕೊಡುವುದು, ಯಜ್ಞ ಕೈಗೊಳ್ಳುವುದ,

ಅಧ್ಯಯನ ಮಾಡುವುದು, ವಿಷಯಗಳಲ್ಲಿ (ಭೋಗಗಳು) ಆಸಕ್ತಿ ತೋರದಿರುವುದು ಕ್ಷತ್ರಿಯರ ಕರ್ತವ್ಯೆಂದು ಹೇಳಲಾಗಿದೆ.[೨೬] ನಯಸೇನನು ತನ್ನ ಧರ್ಮಾಮೃತ ಕಾವ್ಯದಲ್ಲಿ ಕ್ಷತ್ರಿಯರು ಮಹಾಪುರುಷರಲ್ಲಿಯೇ ಶುಚಿತ್ವ ಹೊಂದಿದ್ದು, ಭೂಮಂಡಲವನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದವರೆಂದು ಹೇಳಿದ್ದಾನೆ.[೨೭] ಇವರು ವಿರಾಟಪುರುಷನ ಬಾಹುಗಳಿಂದ ಜನಿಸಿದ್ದರಿಂದ ಶೌರ್ಯ, ಧೈರ್ಯ, ಪರಾಕ್ರಮ, ಅತ್ಯಧಿಕ ದೇಹ ಶಕ್ತಿ, ಸ್ಥಿರತೆ, ಪಟ್ಟು ಹಿಡಿದು ಕಾರ್ಯವೆಸಗುವ ಛಲ, ಉದಾರತೆ, ದಾನಶೀಲತೆ ಮೊದಲಾದ ಗುಣಗಳನ್ನು ಹೊಂದಿರಬೇಕೆಂದು ಬಯಸಲಾಗಿತ್ತು. ರಾಜ್ಯಾಡಳಿತ, ದೇಶ ಮತ್ತು ಪ್ರಜೆಗಳ ರಕ್ಷಣೆ, ಸಮಾಜದ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಬರುವುದು, ವಿವಾದಗಳನ್ನು ಪರಿಹರಿಸುವುದು, ತಪ್ಪಿತಸ್ಥರನ್ನು ದಂಡಿಸುವುದು, ದೀನ-ದುರ್ಬಲರನ್ನು, ಗೋ-ಬ್ರಾಹ್ಮಣ ಮತ್ತು ಧರ್ಮವನ್ನು ರಕ್ಷಿಸುವುದು, ಯುದ್ಧಗಳಲ್ಲಿ ಹೋರಾಡುವುದು, ಅರಾಜಕತೆಯನ್ನು ತೊಲಗಿಸುವುದು ಕ್ಷತ್ರಿಯರ ಕಾರ್ಯಗಳಾಗಿದ್ದವು. ವೀರ ಮತ್ತು ತ್ಯಾಗ ಕನ್ನಡಿಗರ ಮೌಲ್ಯಗಳಾಗಿದ್ದವು. ಇವು ಕನ್ನಡಿಗರನ್ನು ಆಶ್ರಯಿಸಿಕೊಂಡು ಬಂದಿವೆ. ಅದು ಅಂದಿನ ಕಾಲದಲ್ಲಿ ಅನಿವಾರ್ಯವೂ ಆಗಿತ್ತು. ಆದ್ದರಿಂದಲೇ ಚೀನಾ ದೇಶದ ಪ್ರವಾಸಿ ಹೂಯನ್‌ತ್ಸಾಂಗನು ತನ್ನ ಸಿ-ಯು-ಕಿ ಎಂಬ ಪ್ರವಾಸ ವರದಿಯಲ್ಲಿ ಕನ್ನಡನಾಡಿನ ಜನತೆಯ ಶೌರ್ಯ ಧೈರ್ಯಾದಿಗಳನ್ನು ಕೊಂಡಾಡಿದ್ದಾನೆ.

ಕೂಹುಂಡಿನಾಡಿನ ಪ್ರದೇಶದ ಅರಸು ಮನೆತನಗಳಲ್ಲಿ ಮೇಲಿಂದ ಮೇಲೆ ಯುದ್ಧಗಳು ಸಂಭವಿಸುತ್ತಿದ್ದವು. ಇದರಿಂದ ಈ ನಾಡಿನ ಜನತೆ ನೆಮ್ಮದಿಯಿಂದ ಬದುಕದೆ ಆತಂಕಕಾರಿ ಜೀವನ ನಡೆಸಬೇಕಾಗಿತ್ತು. ಪ್ರತಿ ಹಳ್ಳಿಗಳಲ್ಲಿ ಒಬ್ಬೊಬ್ಬ ವೀರನನ್ನು ಬೆಳೆಸುವುದು ಅಂದಿನ ಪರಂಪರೆಯಾಗಿತ್ತು. ಶೂರತನವೆಂಬುದು ಬರಬರುತ್ತ ಸಮಾಜದ ಜನತೆಯಲ್ಲಿ ಒಂದು ಸಾಮಾಜಿಕ ಮೌಲ್ಯವಾಗಿ ಬೆಳೆದು ಬಂದಿತು. ಸಮಾಜದ ಉನ್ನತ ವರ್ಗದ ಜನತೆ ಯುದ್ಧದಲ್ಲಿ ಮಡಿದರೆ ಆ ವ್ಯಕ್ತಿ ಸ್ವರ್ಗಕ್ಕೆ ಹೋಗುತ್ತಾನೆ ಎಂದು ಸ್ವರ್ಗ ನರಕಗಳ ಕಲ್ಪನೆಯಿತ್ತು. ಈ ಕಾರಣದಿಂದ 'ಅರ್ಥಮುಳ್ಳುದು, ಈವುದು, ಜೀವಮುಳ್ಳುದು, ಇರಿಯುವದು' ಎಂಬ ಉಕ್ತಿಗಳು ಮನೆಮಾತಾಗಿದ್ದವು.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸೀನಿ ಕಾಯೇ ಕಾ ಚಿಂತಾ ಮರಣೇ ರಣೇ ‖

ಎಂಬ ಸೂಚನೆಗಳು ಶಾಸನಗಳಲ್ಲಿ ರಾರಾಜಿಸತೊಡಗಿದವು.[೨೮] 'ಯುದ್ಧದಲ್ಲಿ ಗೆದ್ದರೆ ವಿಜಯಲಕ್ಷ್ಮೀ ದೊರೆಯುವಳು, ಹೋರಾಡುತ್ತ ಮಡಿದರೆ ದೇವಲೋಕದ ಅಪ್ಸರೆಯರು ಬಂದು ವೀರನನ್ನು ಪುಷ್ಪಕ ವಿಮಾನದಲ್ಲಿ ಸ್ವರ್ಗಕ್ಕೆ ಕರೆದೊಯ್ಯುತ್ತಾರೆ, ಅಲ್ಪಾಯುಷಿಯಾದ ದೇಹಕ್ಕೆ ಚಿಂತಿಸಬೇಡಿ' ಎಂದು ಹೇಳುವ ವೀರಗಲ್ಲುಗಳು ನಿಲ್ಲಿಸಲ್ಪಟ್ಟವು. ಕ್ಷತ್ರಿಯರು ಯುದ್ಧದ ಆಪತ್ತು ಮತ್ತು ಗಂಡಾಂತರ ಸಮಯದಲ್ಲಿ ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಡುತಿದ್ದರೆಂಬುದಕ್ಕೆ ಕೂಹುಂಡಿನಾಡಿನಲ್ಲಿರುವ ವೀರಗಲ್ಲುಗಳೇ ಸಾಕ್ಷಿಗಳಾಗಿವೆ.

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಆಳರಸರಾದಿ ಅಧಿಕಾರಿಗಳು ತಮ್ಮನ್ನು ಕ್ಷತ್ರಿಯರೆಂದು

ಕರೆದುಕೊಂಡಿದ್ದರೂ, ಹಾಗೆ ಕರೆದುಕೊಳ್ಳುವುದರಲ್ಲಿ ಅಂತಹ ಉತ್ಸಾಹ ತೋರಿಲ್ಲ. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಕ್ಷತ್ರಿಯ ಮಸ್ತಕಾಭರಣ ರಾಜನೃಪಂ ವಿಭುಸಿಂಹಸೂನು ರ
ತ್ನತ್ರಯಮೂರ್ತ್ತಿ ನಿರ್ಮ್ಮಳಿನಧರ್ಮ್ಮನೆನುತ್ತದನೊಲ್ದು ಪೇಳ್ವವೋ
ಲ್ಧಾತ್ರಿಗೆ ಮಿಕ್ಕ ಕಲ್ಲೊಳೆಯೊಳೆತ್ತಿಸಿದಂ ಜಿನಶಾಂತಿಗೇಹಮಂ
ನೇತ್ರವಿಚಿತ್ರಮಂ ಮಹಿತಿರೀಟಮನಪ್ರತಿಮತ್ರಿಕೂಟಮಂ ॥

ಎಂದು ಹಗರಟಗೆ ನಾಡಿನ ಮಹಾಮಂಡಳೇಶ್ವರ ರಾಜರಸನನ್ನು ಕೊಂಡಾಡಲಾಗಿದೆ.[೯] ಕೂಹುಂಡಿನಾಡನ್ನು ಆಳರಸರು ಕ್ಷತ್ರಿಯ ಕರ್ತವ್ಯಗಳನ್ನು ಮೈಗೂಡಿಸಿಕೊಂಡಿದ್ದರಿಂದ ಅವರ ಕುರಿತಾಗಿ ಹೇಳುವುದು ಶಾಸನ ಲಿಪಿಕಾರರಿಗೆ ಅವಶ್ಯ ಇರಲಿಲ್ಲವೇನೊ ಎಂಬ ಸಂದೇಹ ಮೂಡುತ್ತದೆ. ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಕೂಹುಂಡಿನಾಡನ್ನಾಳಿದ ಆಳರಸರಾದಿ ಅಧಿಕಾರಿಗಳು ಕ್ಷತ್ರಿಯರು ಮಾಡುವಂತಹ ಕಾರ್ಯಗಳನ್ನು ಕೈಗೊಂಡು ಈ ನಾಡನ್ನು ಉಳಿಸಿ ಬೆಳೆಸಿದ್ದಾರೆ. ಒಟ್ಟಾರೆ ಕೂಹುಂಡಿನಾಡಿನ ಕ್ಷತ್ರಿಯ ವೀರರು ತಮ್ಮ ಪ್ರಾಣವನ್ನು ಲೆಕ್ಕಿಸದೇ ಸಾಮ್ರಾಜ್ಯದ ವಿಸ್ತರಣೆ ಮತ್ತು ಪ್ರಜೆಗಳ ರಕ್ಷಣೆ ಮಾಡುವಲ್ಲಿ ಶ್ರಮಿಸಿದ್ದಾರೆ. 'ಗೆದ್ದರೆ ರಾಜ್ಯ, ಸತ್ತರೆ ವೀರ ಸ್ವರ್ಗ' ಎಂಬ ಧ್ಯೇಯ ಮಂತ್ರದಿಂದ ಇವರು ತಮ್ಮ ಕ್ಷಾತ್ರಧರ್ಮವನ್ನು ಮೆರೆದಿದ್ದಾರೆ. ಆದ್ದರಿಂದಲೇ ಕೂಹುಂಡಿನಾಡಿನ ಪ್ರಜೆಗಳು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗಿದೆ.

೪.೩.೩. ವೈಶ್ಯರು

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ವೈಶ್ಯರನ್ನು ಕ್ಷತ್ರಿಯರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಪಶುಪಾಲನೆ, ದಾನ ಕೊಡುವುದು, ಯಜ್ಞ ಮಾಡುವುದು, ಅಧ್ಯಯನ ಮಾಡುವುದು, ನೆಲ-ಜಲಗಳಲ್ಲಿ ವ್ಯಾಪಾರ ಮಾಡುವುದು, ಬಡ್ಡಿಸಾಲ ಕೊಡುವುದು ಮತ್ತು ಕೃಷಿಯಲ್ಲಿ ತೊಡಗುವುದು ವೈಶ್ಯರ ಕರ್ತವ್ಯಗಳೆಂದು ಹೇಳಲಾಗಿದೆ.[೩೦] ಕೂಹುಂಡಿನಾಡಿನ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೈಶ್ಯರು ನೆಲೆಸಿದ್ದರು. ವ್ಯಾಪಾರವೇ ಇವರ ಮುಖ್ಯ ವೃತ್ತಿಯಾಗಿತ್ತು. ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಇವರ ಪಾತ್ರ ಹಿರಿದಾಗಿತ್ತು. ನಾಡಿನ ಒಳಗೂ, ಹೊರಗೂ ವ್ಯಾಪಾರ ಮಾಡುತ್ತಿದ್ದರು. ಇವರನ್ನು ಬಣಂಜಿಗರು, ಸೆಟ್ಟಿಗಳು, ಮುಮ್ಮುರಿದಂಡರು ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಇವರು ವೈಯಕ್ತಿಕವಾಗಿ ಮತ್ತು ಸಂಘಗಳ ಮೂಲಕ ವ್ಯಾಪಾರವನ್ನು ಕೈಕೊಂಡು ಸಮಾಜದ ಜೀವನಮಟ್ಟ ಹಾಗೂ ನಾಡಿನ ಆರ್ಥಿಕ ಸ್ಥಿತಿಯ ಶ್ರೇಯಸ್ಸಿಗೆ ಶ್ರಮಿಸಿದ್ದಾರೆ. ಜೊತೆಗೆ ಸಮಾಜದೊಂದಿಗೆ ಬೆರೆತು ಧಾರ್ಮಿಕ ಕಾರ್ಯಗಳನ್ನು ಕೈಕೊಂಡಿದ್ದಾರೆ.

ದೇವಾಲಯಗಳು ಮತ್ತು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರಕ್ಕೆ ಉದಾರವಾಗಿ ದಾನ ಮಾಡಿದ್ದಾರೆ. ಇಂಥ ಧಾರ್ಮಿಕ ಕಾರ್ಯಗಳನ್ನು ಮಾಡಿದ ಅನೇಕ ವರ್ತಕರು ಈ ನಾಡಿನ ಶಾಸನಗಳಲ್ಲಿ ದಾಖಲಾಗಿದ್ದಾರೆ. ತೆಂಗಿನಕಾಯಿ, ಬೆಲ್ಲ, ಗೋಧಿ, ಅಕ್ಕಿ, ಎಣ್ಣೆ, ವೀಳ್ಯದೆಲೆ ಇತ್ಯಾದಿ ಜೀವನಾವಶ್ಯಕ

ಸಾಮಗ್ರಿಗಳನ್ನು ಮತ್ತು ಇನ್ನಿತರ ವಸ್ತುಗಳನ್ನು ಮಾರಾಟ ಮಾಡುವುದು ಇವರ ವೃತ್ತಿಯಾಗಿತ್ತು. ಸಾಮಗ್ರಿಯನ್ನು ಹೊತ್ತುಕೊಂಡು ಮತ್ತು ಕುದುರೆಗಳ ಮೇಲೆ ಹೇರಿಕೊಂಡು ತಾವು ವಾಸವಾಗಿದ್ದ ಗ್ರಾಮಗಳಲ್ಲಿ ಮತ್ತು ಬೇರೆ ಗ್ರಾಮಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ವ್ಯಾಪಾರ ಮಾಡಿಕೊಂಡು ಬರುವಾಗ ಆ ಗ್ರಾಮಗಳ ದೇವಾಲಯಗಳು ಹಾಗೂ ಬಸದಿಗಳ ನಂದಾದೀವಿಗೆಗೆ, ಪೂಜೆಗೆ ತಮ್ಮ ಆದಾಯದ ಕೆಲವು ಭಾಗವನ್ನು ದಾನ ಮಾಡಿದ್ದಾರೆ. ಕೂಹುಂಡಿನಾಡಿನ ಹಲವು ಶಾಸನಗಳಲ್ಲಿ ವೈಶ್ಯರ ಪ್ರಸ್ತಾಪಗಳಿವೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಸ್ವಸ್ಥ್ಯನೇಕಗುಣಗಣಾಳಂಕೃತ ಸತ್ಯಶೌಚಾಚಾರನಯವಿನಯ
ಸಂಪನ್ನರುಮಾಶ್ರಿತಜನಪ್ರಸನ್ನರುಂ ಮಘಪಟ್ಟಿಮರಪ್ರತಿಷ್ಠಿತ
ಜಿನಮುನಿಜಿನೋಪದಿಷ್ಟ ಗುಡ್ಡಶಾಸ್ತ್ರ ಕ್ರಮಪರಿಪಾಳಿತ
ವೀರಬಣಂಜುಧರ್ಮ್ಮರುಂ ಸಮಾಚರಿತಪುಣ್ಯಕರ್ಮ್ಮರುಂ ।
ಪದ್ಮಾವತೀದೇವೀಲಬ್ಧವರ ಪ್ರಸಾದರರುಂ ವೀಲಿತಸಕಳಜನಾ
ಹ್ಲಾದರುಂ । ನ್ಯಾಯೋಪಾರ್ಜ್ಜನವ್ಯವಹಾರಪ್ರಶಸ್ಥರುಂ
ಭಲ್ಲುಂಕಿದಂಡಹಸ್ತರುಮಪ್ಪ ಸಮಯಚಕ್ರವರ್ತ್ತಿ ಜಯಪತಿ
ಸೆಟ್ಟಿ ಮುಖ್ಯವಾಗಿ ವೇಣುಗ್ರಾಮದ ಸ್ಥಲದ ಸಮಸ್ತಮುಮ್ಮುರಿ
ದಂಡಂಗಲುಂ ಕೂಂಡಿಮೂಸಾಸಿರದ ಪಟ್ಟಣಿಗ ಮೊದಲಾದು
ಭಯನಾನಾದೇಶಿಮುಮ್ಮುರಿದಂಡಂಗಲುಂ ಪರಶುರಾಮ
ನಾಯಕ ಪೊಮ್ಮನನಾಯಕ ಅಮ್ಮುಗಿನಾಯಕ ಪ್ರಮುಖರಪ್ಪ
ಸಮಸ್ತ ಲಾಳವ್ಯವಹಾರಿಗಳುಂ ಪಡಪನಾಯಕ ಕೊಂಡನಂಬಿಸೆಟ್ಟಿ
ಪೊರೆಯಂಚಸೆಟ್ಟಿ ಮೊದಲಾದೆಲ್ಲಾ ಮಲೆಯಾಳವ್ಯವಹಾರಿಗಳುಂ
ಮತ್ತಮಾ ವೇಣುಗ್ರಾಮದ ಸ್ಥಳದ ಚಿನ್ನಗೆಯಿಕದವರುಂ ದೂಸಿಗರುಂ
ಮುಖ್ಯಮಾಗುಳಿದ ಪರದರುಂ । ತೇಲಿಗರುಂ ದಿಂಕಸಾಲಿ
ಗರುಮಿನ್ತಿವರೆಲ್ಲಂ..........................

ಎಂದು ಅಂದಿನ ನಾನಾದೇಶಿಯ ಮುಮ್ಮುರಿದಂಡರು, ಲಾಳವ್ಯವಹಾರಿಗಳು, ಸೆಟ್ಟಿಗಳು, ತೇಲಿಗರು, ದೂಸಿಗರು ಮೊದಲಾದ ವೈಶ್ಯರ ಸ್ಥಾನಮಾನಗಳು ಮತ್ತು ಕಾರ್ಯಚಟುವಟಿಕೆಗಳ ವರ್ಣನೆಯಿದೆ.[೩೧] ಮಲಯಾಳಿ (ಇಂದಿನ ಕೇರಳ ರಾಜ್ಯದ ಪ್ರದೇಶ) ವ್ಯಾಪಾರಿಗಳೂ ಕೂಹುಂಡಿನಾಡಿನ ಬೆಳಗಾವಿಗೆ ಬಂದು ವ್ಯಾಪಾರ ಮಾಡಿರುವುದು ಗಮನಾರ್ಹವಾಗಿದೆ. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಮತ್ತಮಾವೂರ ಸಂತೆಯಂ ಮಾಡಲುವೇಡಿ ಬೆಳಗಲೆ
ಮುಖ್ಯವಾಗಿ ನಾಲ್ಕು ಪಟ್ಟಣದ ಸೆಟ್ಟಿಯರುಂ ಮಹಾನಾಡಾಗಿ
ನೆರೆದಿರ್ದ್ದಲ್ಲಿ ಆ ಶಾನ್ತಿನಾಥದೇವರ ನಿತ್ಯಾಭಿಷೇಕಕ್ಕಮಷ್ಟ
ವಿಧಾರ್ಚ್ಚನೆಗಂ ಸರ್ಬ್ಬಾಬಾಧಾರಪರಿಹಾರವಾಗಿ ಬಿಟ್ಟ ಎತ್ತು
ಕತ್ತೆ ಕೋಣಂ ಮೊದಲಾದವಱುವತ್ತು ॥

ತ್ರಿಕೂಟಮಂಡಿತ ಶಾಂತಿನಾಥ ಬಸದಿಯ ದೇವರ ನಿತ್ಯಾಭಿಷೇಕ, ಅಷ್ಟವಿಧಾರ್ಚನೆಗೆ ನಾಲ್ಕು ಪಟ್ಟಣದ ಸೆಟ್ಟಿಗಳು ದಾನ ಮಾಡಿರುವ ನಿರೂಪಣೆಯಿದೆ.[೩೨]

ತೇರದಾಳದ ಕ್ರಿ.ಶ. ೧೧೮೧ರ ಶಾಸನದಲ್ಲಿ–

ಸ್ವಸ್ತಿಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕೃತ ಸತ್ಯಶೌಚಾಚಾರಚಾರುಚಾರಿತ್ರನಯವಿನಯ
ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನ ವಿಶುದ್ಧಗುಡ್ಡಧ್ವಜ
ವಿರಾಜಿತಾನೇಕಸಾಹಸ ಲಕ್ಷ್ಮೀಸಮಾಲಿಂಗಿತವಕ್ಷಸ್ಥಳಭುವನ
ಪರಾಕ್ರಮೋನ್ನತರುಂ ಮುಖ್ಯಪಟ್ಟಿಗುರೂತ್ಪತ್ತಿ ಬಲದೇವ
ವಾಸುದೇವಖಣ್ಡಳಿ ಮೂಳಭದ್ರವಂಶೋದ್ಭವರುಂ ಪದ್ಮಾವತೀ
ದೇವಿಲಬ್ಧವರಪ್ರಸಾದರುಮಪ್ಪ ಶ್ರೀಮದಯ್ಯವಳೆಯಯ್ನೂರ್ವ್ವ
ಸ್ವಾಮಿಗಳು ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡ
ಮಡಂಬದ್ರೋಣಾಮುಖ ಪತ್ತಣಂಗಳಿಂದಮನೇಕಮಾಟಕೂಟ
ಪ್ರಸಾದದೇವಾಯತನಂಗಳಿಂದಮೊಪ್ಪುವಗ್ರಹಾರಪಟ್ಟಣಂಗಳಿಂದ
ಮತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರದೊಳಗೆ ಹನ್ನೆರಡಕ್ಕಂ
ಮೊದಲಬಾಡಂ ಬಣಂಜುವಟ್ಟಣಂ ನಡವೆಯಮನೆ ತೇರಿದಾಳದಲು
ಸಕವರ್ಷ ೧೧೧೦ಳನೆಯ ಪ್ಲವಸಂವತ್ಸರದ ಆಶ್ವಯುಜ ಬಹುಳ
೩ ಆದಿವಾರದಲು ದ್ವಾತ್ರಿಂಸತುವೇಳಾಪುರಮುಂ ಮಷ್ಟಾದಶಪಟ್ಟಣಮಂ
ಚೌಸಷ್ಟಿಯೋಗಪೀಠಮುಂ ಮಱುವತ್ತನಾಲ್ಕುಘಟಿಕಸ್ಥಾನಮುಂ
ನಾನಾದೇಶಾಭ್ಯನ್ತರದ ಗವಱೆಗಾತ್ರಿಗರುಂ ಸೆಟ್ಟಿಯರುಂ
ಸೆಟ್ಟಿಗುತ್ತರುಂ ಮಹಾನಾಡಾಗಿ ನೆರೆದಾಸ್ಥಳದಲು ಶ್ರೀಮನ್ಮಂ
ಣ್ಡಳಿಕಂ ಗೊಂಕದೇವರಸಂ ಮಾಡಿಸಿದ ನೇಮಿತೀರ್ತ್ಥೇಶ್ವರನ
ಚೈತ್ಯಾಲಯಮಂ ಕಣ್ಡು ಬಲಂಗೊಣ್ಡು ಪೊಡೆವಟ್ಟು ಹರ್ಷ
ಚಿತ್ತರಾಗಿ ದೇವರಷ್ಟವಿಧಾರ್ಚನೆ ಚಂದ್ರಾರ್ಕ್ಕತಾರಂಬರ
ನಡೆವನ್ತಾಗಿ ಕೊಟ್ಟ ಶಾಸನಮರ್ಯಾದೆಯೆನ್ತೆಂದೊಡೆ............

ಎಂದು ಅಯ್ಯಾವೊಳೆಯ ಐನೂರ್ವ್ವರು, ಗವರೆಗಾತ್ರಿಗರು, ಸೆಟ್ಟಿಯರು, ಸೆಟ್ಟಿಗುತ್ತರು ಮೊದಲಾದ ವೈಶ್ಯರ (ವ್ಯಾಪಾರಿಗಳು) ಸ್ಥಾನಮಾನ ಮತ್ತು ಅವರ ಧಾರ್ಮಿಕ ಚಟುವಟಿಕೆಗಳ ನಿರೂಪಣೆಯಿದೆ.[೩೩]

೪.೩.೪. ಶೂದ್ರರು

ಪ್ರಾಚೀನ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರನ್ನು ವೈಶ್ಯರ ತರುವಾಯದ ಸ್ಥಾನದಲ್ಲಿ ಗುರುತಿಸಲಾಗುತ್ತಿತ್ತು. ಮನುಸ್ಮೃತಿಯಲ್ಲಿ ಆ ಮಹಾಪ್ರಭುವಾದ ಬ್ರಹ್ಮನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ನಿಸ್ವಾರ್ಥಸೇವೆ ಮಾಡಿಕೊಂಡಿರುವುದೇ ಶೂದ್ರರ ಕರ್ತವ್ಯವೆಂದು ಆದೇಶಿಸಿದ್ದಾನೆ ಎಂದು ಹೇಳಲಾಗಿದೆ.[೩೪] ಇದು ಪ್ರಜಾಸಮುದಾಯಕ್ಕೆ ಬೇಕಾದ ಕಾರ್ಮಿಕ ವರ್ಗವಾಗಿತ್ತು. 'ಉಳಿದ ವರ್ಗದವರು ಬಿಟ್ಟ ಕಾರ್ಯವನ್ನು ಇವರು ಮಾಡುತ್ತಿದ್ದರು. ಸರಕುಗಳ ಉತ್ಪಾದನೆಯನ್ನು ಶೂದ್ರರೇ ಮಾಡುತ್ತಿದ್ದರು' ಎಂದು ಕೆ.ಆರ್. ಬಸವರಾಜ ಅವರು ಅಭಿಪ್ರಾಯ ಪಟ್ಟಿದ್ದಾರೆ.[೩೫] ಇವರು ಯಾವಾಗಲೂ ತಮ್ಮ ಕೆಲಸ ಕೀಳೆಂದು ತಿಳಿದುಕೊಂಡಿರಲಿಲ್ಲ. ಮೇಲ್ವರ್ಗದವರು ಹೇಳಿದ ಕೆಲಸಗಳನ್ನು ಪೂರೈಸುತ್ತ ಸಮಾಜದ ಇತರರೊಂದಿಗೆ ಹೊಂದಿಕೊಂಡು ಸಾಮರಸ್ಯ ಜೀವನ ಸಾಗಿಸಿದ್ದರು. ಇಂತಹ ಶೂದ್ರರ ಉಲ್ಲೇಖಗಳು ಕೂಹುಂಡಿನಾಡಿನ ಶಾಸನಗಳಲ್ಲಿ ದೊರೆಯುವುದಿಲ್ಲ. ಆದರೂ ಸಮಕಾಲೀನ ಸೈನ್ಯ ಪಡೆಗಳಲ್ಲಿ, ದೇವಾಲಯಗಳು ಮತ್ತು ಬಸದಿಗಳ ನಿರ್ಮಾಣ, ಶಿಲ್ಪ ಮತ್ತು ಶಾಸನಗಳ ಕಂಡರಣೆ, ಒಕ್ಕಲುತನ ಮೊದಲಾದ ಚಟುವಟಿಕೆಗಳಲ್ಲಿ

ಇವರ ಸೇವೆಯನ್ನು ಮರೆಯುವಂತಿಲ್ಲ. ಶೂದ್ರರು ತಮ್ಮ ಕಾರ್ಯಗಳನ್ನು ಬೇಧಭಾವವಿಲ್ಲದೆ ನೆರವೇರಿಸುತ್ತಿದ್ದರು. ಶ್ರಮ ಜೀವಿಗಳಾಗಿದ್ದ ಇವರು ಹೊಲದಲ್ಲಿ ರಾಶಿ ಮಾಡುವ ಸಂದರ್ಭದಲ್ಲಿ ಎಲ್ಲ ರೀತಿಯ ಸಹಾಯಗಳನ್ನು ಮಾಡುತ್ತಿದ್ದರು. ಇವರ ಸೇವೆಗೆ ಪ್ರತಿಯಾಗಿ ಬೆಳೆದ ಬೆಳೆಯಲ್ಲಿ ಧಾನ್ಯಗಳನ್ನು ಕೊಡುವ ಪದ್ಧತಿಯಿತ್ತು.

೪.೪. ವೃತ್ತಿ ಆಧಾರಿತ ಜಾತಿಗಳು

ಸಾಮಾಜಿಕ ಕ್ಷೇತ್ರದಲ್ಲಿ ವರ್ಣ ವ್ಯವಸ್ಥೆಯ ಜೊತೆಗೆ ವೃತ್ತಿಯಾಧಾರಿತ ಸಾಮಾಜಿಕ ವ್ಯವಸ್ಥೆಯೂ ಅಸ್ತಿತ್ವಕ್ಕೆ ಬಂದಿತು. ಕೂಹುಂಡಿನಾಡಿನಲ್ಲಿ ಜಾತಿ ವ್ಯವಸ್ಥೆ ಅಸ್ತಿತ್ವದಲ್ಲಿ ಇದ್ದರೂ ಅದು ಅಷ್ಟೊಂದು ಕಠಿಣವಾಗಿರಲಿಲ್ಲ. ಯಾರು ಯಾವ ವೃತ್ತಿಯನ್ನಾದರೂ ಮಾಡಬಹುದಾಗಿತ್ತು. ಕಾಲಕ್ರಮೇಣ ವರ್ಣವ್ಯವಸ್ಥೆ ಕಠಿಣವಾಗತೊಡಗಿತು. ವೃತ್ತಿ ವಂಶಪಾರಂಪರ್ಯವಾಯಿತು. ವೃತ್ತಿಯ ಆಧಾರದ ಮೇಲೆ ವರ್ಗ ವ್ಯವಸ್ಥೆ ರೂಪುಗೊಂಡಿತು. ವೃತ್ತಿಯಾಧಾರಿತ ಜಾತಿಗಳು ಇಲ್ಲಿಯ ಪ್ರತಿಯೊಂದು ಗ್ರಾಮದಲ್ಲಿಯೂ ಗೋಚರಿಸುತ್ತವೆ. ಈ ನಾಡಿನ ಶಾಸನಗಳಲ್ಲಿ ದಾಖಲಾಗಿರುವ ವೃತ್ತಿಯಾಧಾರಿತ ಜಾತಿಗಳಲ್ಲಿ ಗಾಣಿಗರು, ತಳವಾರರು, ಬಡಿಗರು, ಬಣಂಜಿಗರು, ಕಲ್ಕುಟಿಗರು, ಕಮ್ಮಾರರು, ಚಮ್ಮಾರರು, ತೇಲಿಗರು, ಸೆಟ್ಟಿಗಳು, ವಡ್ಡವ್ಯವಹಾರಿಗಳು, ಮಾಲಿಗರು, ನಾವಿದರು, ಸಮ್ಮಗಾರರು, ಅಂಬಿಗರು, ತಂಬಿಗರು (ಎಲೆಗಾರರು), ಕುಂಬಾರರು, ಟಂಕಸಾಲಿಗರು ಮೊದಲಾದವರು ಪ್ರಮುಖರಾಗಿದ್ದಾರೆ.

೪.೪..೧. ಕುಂಬಾರರು

ಕೂಹುಂಡಿನಾಡಿನ ಪ್ರದೇಶದಲ್ಲಿ ಕುಂಬಾರಿಕೆಯು ಪ್ರಮುಖ ಗೃಹ ಕೈಗಾರಿಕೆಯಾಗಿತ್ತು. ಈ ನಾಡಿನ, ಕೆಲವು ಶಾಸನಗಳಲ್ಲಿ ಕುಂಬಾರ ವೃತ್ತಿಯವರ ಪ್ರಸ್ತಾಪಗಳಿವೆ. ಇವರು ತಯಾರಿಸುವ ಮಣ್ಣಿನ ಮಡಿಕೆ, ಗಡಿಗೆ, ಕೊಡ ಮೊದಲಾದವುಗಳಿಗೆ ಸಮಾಜದಲ್ಲಿ ಬೇಡಿಕೆಯಿತ್ತು. ತೇರದಾಳದ ಕ್ರಿ.ಶ. ೧೧೨೫ರ ಶಾಸನದಲ್ಲಿ–

ಕುಂಭಾಜಿರು ದೇವರ ಅಷ್ಟವಿಧಾರ್ಚ್ಚನೆ ಆಹಾರದಾನ
ನಡವನ್ತಾಗಿ ದಾನಶಾಲೆಗೆ ಆವಗೆ ಗಲನ ಬಿಟ್ಟರು.......

ಗೊಂಕದೇವರಸನು ಮಾಡಿಸಿದ ಗೊಂಕಜಿನಾಲಯದ ನೇಮಿನಾಥ ತೀರ್ಥಂಕರನ ಅಷ್ಟವಿಧಾರ್ಚ್ಚನೆಗಳಿಗೆ ಮತ್ತು ಮುನಿಗಳ ಆಹಾರದಾನ ಸದಾಕಾಲ ನಡೆದುಕೊಂಡು ಮುಂದುವರೆಯಲು ದಾನ ಮಾಡಿದ ನಿರೂಪಣೆಯಿದೆ.[೩೬] ನೇಸರಗಿಯ ಕ್ರಿ.ಶ. ೧೨೯೯ರ ಶಾಸನದಲ್ಲಿ ಬಮ್ಮ ಎಂಬ ಕುಂಬಾರನು ತಾನು ನಿರ್ಮಿಸಿದ ದೇವಾಲಯಕ್ಕೆ 'ಕುಂಬೇಶ್ವರ' ಎಂದು ಹೆಸರಿಟ್ಟನು ಎಂದು ಪ್ರಸ್ತಾಪವಿದೆ.[೩೭]

೪.೪.೨. ತೇಲಿಗರು (ಗಾಣಿಗರು)

ಕೂಹುಂಡಿನಾಡಿನಲ್ಲಿ ಎಣ್ಣೆಯನ್ನು ತಯಾರಿಸಿ ಮಾರಾಟ ಮಾಡುವ ವೃತ್ತಿಯವರನ್ನು ಗಾಣಿಗರು ಅಥವಾ ತೇಲಿಗರು ಎಂದು ಕರೆಯಲಾಗುತ್ತಿತ್ತು. ಎಣ್ಣೆ ಉತ್ಪಾದನೆ ಮತ್ತು ಮಾರಾಟ ಇವರ ಪ್ರಧಾನ ಉದ್ಯೋಗವಾಗಿತ್ತು. ಇವರು ತಾವು ವ್ಯಾಪಾರ ಮಾಡುತ್ತಿದ್ದ ಗ್ರಾಮಗಳಲ್ಲಿ ವಿವಿಧ ಧಾರ್ಮಿಕ ಮತ್ತು

ಸಾಮಾಜಿಕ ಚಟುವಟಿಕೆಗಳಿಗೆ ಉದಾರವಾಗಿ ದಾನ ಮಾಡುತ್ತಿದ್ದರು. ಎಣ್ಣೆ ಉತ್ಪಾದನೆ ಮತ್ತು ಮಾರಾಟಗಳೆರಡೂ ತೇಲಿಗರ ನಿಯಂತ್ರಣದಲ್ಲಿದ್ದವು. ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ತೆಲ್ಲಿಗರು ಮಾನ್ಯಸಾನ್ಯವೆನ್ನದೆ ದೇವರ ಸಂಜೆಸೊಡರಿಂಗಂ
ಧೂಪಾರಿತೆಗಂ ಗಾಣಕ್ಕೆ ಸೊಲ್ಲಗೆ ಹೊಜಿಗಣ ಬನ್ದ ಎಣ್ಣೆಯ
ಕೊಡಕ್ಕೆ ಸೊಲ್ಲಗೆ ಯಿನ್ತಿವಂ ಬಿಟ್ಟರು ಗಾಣ...............

ಗೊಂಕದೇವರಸನು ಮಾಡಿಸಿದ ಗೊಂಕಜಿನಾಲಯದ ನೇಮಿನಾಥ ತೀರ್ಥಂಕರನ ಸಂಜೆಯ ಧೂಪಾರತಿಗೆ ಎಣ್ಣೆಯನ್ನು ದಾನ ಮಾಡಿದ ಪ್ರಸ್ತಾಪವಿದೆ.[೬೮] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ
ಕಾರ್ತ್ತವೀರ್ಯ್ಯದೇವಂ ನಿಜಾನುಜಯುವರಾಜಕುಮಾರ
ವೀರಮಲ್ಲಿಕಾರ್ಜ್ಜುನದೇವಂ ಬೆರಸು ವೇಣುಗ್ರಾಮ
ಸ್ಕಂಧಾವಾರದೊಳ್ ಸಾಮ್ರಾಜ್ಯಸುಖಮನನುಭವಿಸುತ್ತ
ಮಾತ್ಮೀಯ ಶ್ರೀಕರಣಾಗ್ರಗಣ್ಯನುಮುಖಿಳಮಂತ್ರಿಜನವರೇಣ್ಯ
ನುಮಪ್ಪ ಬೀಚಿರಾಜಂ ಮಾಡಿಸಿದ ರಟ್ಟಜಿನಾಲಯದ
ಶ್ರೀಶಾಂತಿನಾಥದೇವರ ನಿತ್ಯಪೂಕಾಭಿಷೇಕಂ ಮೊದಲಾದ
ಧರ್ಮ್ಮಕಾರ್ಯ್ಯಂ ನಿಮಿತ್ತಮಾಗಿ ತಜ್ಜಿನಾಲಯಾಚಾರ್ಯ್ಯ
ಶ್ರೀಶುಭಚಂದ್ರ ಭಟ್ಟಾರಕದೇವರ್ಗ್ಗೆ.......................
ಸ್ವಸ್ತ್ಯನೇಕಗುಣಗಣಾಳಂಲ್ರತಸತ್ಯಶೌಚಾಚಾರನಯವಿನಯ
ಸಂಪನ್ನರು ಮಾಶ್ರಿತಜನಪ್ರಸನ್ನರುಂ........................
ತೇಲಿಗರುಂ..........ಮಿನ್ತಿವರೆಲ್ಲಂ ನೆರೆದಾ ಶಾನ್ತಿನಾಥದೇವರ
ಬಸದಿಗೆ ಬಿಟ್ಟಾಯವೆಣತೆಂದೊಡೆ...............................

ತೇಲಿಗರು ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ ಪ್ರಸ್ತಾಪವಿದೆ.[೬೯] ಅಂದು ಪಟ್ಟಣಗಳಲ್ಲಿ ನಡೆಯುತ್ತಿದ್ದ ಸಂತೆಗಳಲ್ಲಿ ಎಣ್ಣೆ ಮಾರುವುದು ಇವರ ಕಾಯಕವಾಗಿತ್ತು. 'ತೇಲ' ಎನ್ನುವದು ಮರಾಠಿ ಭಾಷೆಯ ಪದವಾಗಿದೆ. ಮರಾಠಿಯಲ್ಲಿ 'ತೇಲ' ಎಂದರೆ ಎಣ್ಣೆ ಎನ್ನುವ ಅರ್ಥವಿದೆ. ಇದರಿಂದ ಕ್ರಿ.ಶ. ಸುಮಾರು ೧೨–೧೩ನೆಯ ಶತಮಾನದಲ್ಲಾಗಲೇ ಕೂಹುಂಡಿನಾಡಿನ ಪ್ರದೇಶದಲ್ಲಿ ಮರಾಠಿ ಭಾಷೆ ಬಳಕೆಯಲ್ಲಿದ್ದು, ಕನ್ನಡ ಭಾಷೆಯ ಮೇಲೆ ಮರಾಠಿಯ ಪ್ರಭಾವ ಅಂದಿನಿಂದಲೇ ಪ್ರಾರಂಭವಾಗಿರುವುದು ಸ್ಪಷ್ಟವಾಗುತ್ತದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಎರಡು ಶಾಸನಗಳು ಮತ್ತು ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಮರಾಠಿ ಪ್ರಭಾವ ಎದ್ದು ಕಾಣುತ್ತದೆ.[೭೦] ಇದರಿಂದ ಕೂಹುಂಡಿನಾಡಿನ ಶಾಸನ ಕವಿಗಳು ಕನ್ನಡದಲ್ಲಿ ತಮ್ಮ ಸುತ್ತಮುತ್ತಲಿನ ಸಮಕಾಲೀನ ಭಾಷೆಗಳನ್ನು ಬಳಸಿಕೊಂಡು ಸರ್ವಭಾಷಾ ಸಹಿಷ್ಣುತೆಯನ್ನು ಮೆರೆದಿರುವುದು ಮನದಟ್ಟಾಗುತ್ತದೆ.

೪.೪.೩. ಲಾಳದವರು

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ನೇಕಾರರನ್ನು ಲಾಳದವರು ಎಂದು ಕರೆಯಲಾಗಿದೆ. ಇಂದಿನ ಬೆಳಗಾವಿ ತಾಲ್ಲೂಕಿನ ವಡಗಾವಿ ಸೀರೆಯನ್ನು ನೇಯುವುದಕ್ಕೆ ಪ್ರಸಿದ್ಧಿ

ಪಡೆದಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಪರಶುರಾಮನಾಯಕ ಪೊಮ್ಮನನಾಯಕ ಅಮ್ಮುಗಿನಾಯಕ
> ಪ್ರಮುಖರಪ್ಪ ಸಮಸ್ತ ಲಾಳವ್ಯವಹಾರಿಗಳುಂ । ....
> ಹೊಱಗಣಿಂ ಬಂದ ಸೀರೆಯ ಕಡಗೆಗೆ ವೀಸವೊಂದು ।

ಲಾಳವ್ಯವಹಾರಿಗಳು ಮತ್ತು ಸೀರೆಯ ಕಡಗೆಯ ಪ್ರಸ್ತಾಪವಿದೆ.[೧] ಸೀರೆ ನೇಯುವುದು ಲಾಳದವರ ವೃತ್ತಿಯಾಗಿತ್ತು. ಇವರು ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಕೊಟ್ಟಿದ್ದಾರೆ. ಪ್ರಸ್ತುತ ಶಾಸನದಲ್ಲಿ ಇಲ್ಲಿಯ ಸೀರೆ ವ್ಯಾಪಾರಿಗಳು ಸೀರೆಯ ಒಂದು ಕಡಗಗೆ (ಕಟ್ಟು) ಒಂದು ವೀಸದಂತೆ ಸುಂಕವನ್ನು ಸಲ್ಲಿಸಬೇಕೆಂದು ಉಲ್ಲೇಖವಿದೆ. ಈ ಸುಂಕವನ್ನು ಶಾಂತಿನಾಥ ಬಸದಿಯ ಪೂಜಾ ವಿಧಿ–ವಿಧಾನಕ್ಕೆ, ದೀಪಾವಳಿಯ ಪೂಜಾ ಖರ್ಚಿಗೆ ಮತ್ತು ಮತ್ತಿತರ ನಿರ್ವಹಣೆಗಾಗಿ ವಿನಿಯೋಗಿಸಲಾಗುತಿತ್ತು. ಹೀಗೆ ಇಲ್ಲಿಯ ಲಾಳದವರು ತಮ್ಮ ವ್ಯಾಪಾರದೊಂದಿಗೆ ಸಮಕಾಲೀನ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು, ದೇವಾಲಯಗಳು, ಬಸದಿಗಳಿಗೆ ತಮ್ಮ ಉತ್ಪಾದನೆಯ ಸ್ವಲ್ಪ ಭಾಗವನ್ನು ತೆರಿಗೆ ರೂಪದಲ್ಲಿ ದಾನ ಮಾಡುವುದರ ಮೂಲಕ ಧಾರ್ಮಿಕ ಕಾರ್ಯದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವುದು ಗೋಚರಿಸುತ್ತದೆ.

೪.೪.೪. ದೊಸಿಗರು

ಕೂಹುಂಡಿನಾಡಿನ ಶಾಸನಗಳಲ್ಲಿ ಆಕಳುಗಳನ್ನು ಕಾಯುವವರನ್ನು ದೊಸಿಗರು ಎಂದು ಕರೆಯಲಾಗಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ವೇಣುಗ್ರಾಮದ ಸ್ಥಳದ ಚಿನ್ನಗೆಯಿಕದವರುಂ
> ದೂಸಿಗರುಂ ಮುಖ್ಯಮಾಗುಳಿದ ಪರದರುಂ ।
> ಚಿನ್ನಗೆಯಿಕದ ಚೀರಕ್ಕೆ ದೂಸಿಗವಸರಕ್ಕೆ । ....
> ಬೇಱೆವೇಱೆ ಬರಿಸದೆಱೆ ಹಿರಿಯ ಹಾಗವೊಂದು ।

ದೂಸಿಗರ ಪ್ರಸ್ತಾಪವಿದೆ.[೨] ಇವರು ತಮ್ಮ ಆದಾಯದ ಕೆಲವು ಭಾಗವನ್ನು ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿರುವುದು ಗಮನಾರ್ಹವಾಗಿದೆ.

೪.೪.೫. ಕಡವರು

ಕೂಹುಂಡಿನಾಡಿನ ಕೆಲವು ಶಾಸನಗಳಲ್ಲಿ ಕಡವರ ನಿರೂಪಣೆಯಿದೆ. ದನಗಳನ್ನು ಕಾಯುವವರನ್ನು 'ಕಡವರು' ಎಂದು ಕರೆಯಲಾಗುತ್ತಿತ್ತು. ಆಳರಸರ ಮತ್ತು ಶ್ರೀಮಂತರ ಮನೆಗಳ ದನಗಳನ್ನು ಕಾಯುವುದು ಇವರ ಕಾಯಕವಾಗಿತ್ತು. ಇವರು ಅರಮನೆಯ ದನಗಳನ್ನು ಕಾಯುತ್ತಿದ್ದುದರಿಂದ ಇವರು ಕೆಲವು ತೆರಿಗೆಗಳಿಂದ ವಿನಾಯತಿಯನ್ನು ಪಡೆದಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಡವರ

ಪ್ರಸ್ತಾಪವಿದೆ.[೪೩] ಇವರು ಸಹ ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ್ದಾರೆ.

೪.೪.೬. ಚಿನ್ನಗೆಯಿಕದವರು (ಅಕ್ಕಸಾಲಿಗರು/ಪತ್ತಾರರು)

ಕೂಹುಂಡಿನಾಡಿನ ಶಾಸನಗಳಲ್ಲಿ ಬಂಗಾರ, ಬೆಳ್ಳಿ ಮತ್ತು ಇತರ ಧಾತುಗಳಿಂದ ಆಭರಣಗಳನ್ನು ತಯಾರಿಸುವವರನ್ನು ಚಿನ್ನಗೆಯಿಕದವರು ಎಂದು ಕರೆಯಲಾಗಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_ವೇಣುಗ್ರಾಮದ ಸ್ಥಳದ ಚಿನ್ನಗೆಯಿಕದವರುಂಚಿ ನ್ನಗೆಯಿಕದ ಚೀರಕ್ಕೆ ದೂಸಿಗವಸರಕ್ಕೆ। ....ಬೇಜಿ೩ವೇಜಿ೩ ಬರಿಸದೆಜಿ೩ ಹಿರಿಯ ಹಾಗವೊಂದು ।ಚಿನ್ನಗೆಯಿಕದವರ ಪ್ರಸ್ತಾಪವಿದೆ.[೪೪] ಇವರು ತಮ್ಮ ಆದಾಯದ ಕೆಲವು ಭಾಗವನ್ನು ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ್ದಾರೆ.

೪.೪.೭. ಬಡಿಗರು

ಕೂಹುಂಡಿನಾಡಿನ ಶಾಸನಗಳಲ್ಲಿ ಮರದ ಸಾಮಗ್ರಿಗಳನ್ನು ತಯಾರಿಸುವವರನ್ನು ಬಡಿಗರು ಎಂದು ಕರೆಯಲಾಗಿದೆ. ಮನೆಗಳು ಮತ್ತು ಕೃಷಿಗೆ ಬೇಕಾದ ಸಾಮಗ್ರಿಗಳನ್ನು ತಯಾರಿಸುವುದು ಇವರ ಕಾಯಕವಾಗಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಶ್ರೀಕಾರ್ತವೀರ್ಯದೇವಂ ಕೊಟ್ಟ ಅಂಗಡಿ ಬಡಿಗಗೇರಿಯ ಬಡಗಣ..........

ಎಂಬ ಪ್ರಸ್ತಾಪವಿದೆ.[೪೫] ಇದರಿಂದ ಈ ಪ್ರದೇಶದಲ್ಲಿ ಬಡಿಗರು ಇದ್ದರೆಂಬುದು ಮನದಟ್ಟಾಗುತ್ತದೆ.

೪.೪.೮. ಮಣಿಗಾರರು

ಕೂಹುಂಡಿನಾಡಿನ ಶಾಸನಗಳಲ್ಲಿ ಸರಕು ಸಾಮಗ್ರಿಗಳನ್ನು ಮಾರಾಟ ಮಾಡುವವರನ್ನು 'ಮಣಿಗಾರರು' ಎಂದು ಕರೆಯಲಾಗಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಮಣಿಗಾಜಿವಸರಕ್ಕೆ...........ಬೇಜಿ೩ವೇಜಿ೩ ಬರಿಸದೆಜಿ೩ ಹಿರಿಯ ಹಾಗವೊಂದು ।

ಮಣಿಗಾರರ ನಿರೂಪಣೆಯಿದೆ.[೪೬] ಇವರು ತಮ್ಮ ಸರಕು ಸಾಮಗ್ರಗಳ ಮಾರಾಟದ ಮೇಲಿನ ತೆರಿಗೆಯನ್ನು ಬೀಚಿರಾಜನು ಬೆಳಗಾವಿಯಲ್ಲಿ ಮಾಡಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ್ದಾರೆ.

೪.೫. ಸ್ತ್ರೀಯರ ಸ್ಥಾನಮಾನಗಳು

ಭಾರತೀಯ ಸಂಸ್ಕೃತಿಯುದ್ದಕ್ಕೂ ಸ್ತ್ರೀಯರನ್ನು ಗೌರವಿಸುತ್ತ ಬಂದಿರುವುದು ಸಮಕಾಲೀನ ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳಿಂದ ದೃಢಪಡುತ್ತದೆ. ಸಮಕಾಲೀನ ಸ್ತ್ರೀಯರಲ್ಲಿ ಕೆಲವರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದರೆ, ಮತ್ತೆ ಕೆಲವರು ಸ್ವ–ಕಾರ್ಯಬಲದಿಂದ ಪ್ರಾಮುಖ್ಯತೆಯನ್ನು ಪಡೆದಿದ್ದರು. ಈ ನಿಟ್ಟಿನಲ್ಲಿ ಕೂಹುಂಡಿನಾಡಿನ ಪ್ರದೇಶದಲ್ಲಿ ಕೆಲವು ಸ್ತ್ರೀಯರು ರಾಜಕೀಯ, ಆಡಳಿತ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಕೈಗೊಂಡಿರುವ

ಚಟುವಟಿಕೆಗಳು ಗಮನಾರ್ಹವಾಗಿವೆ. ಈ ನಾಡಿನಲ್ಲಿ ಸ್ತ್ರೀಯರಿಗೆ ವೈದಿಕ ಯುಗದ ಸ್ಮೃತಿಗಳ ಕಾಲದಲ್ಲಿದ್ದಂತೆ ನಿರ್ಬಂಧಗಳಿರಲಿಲ್ಲ. ಇಲ್ಲಿಯ ಆಳರಸರು ಸ್ತ್ರೀಯರ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದ್ದರೂ, ಅದರ ಕುರಿತಾಗಿ ಹೆಚ್ಚಿನ ಮಾಹಿತಿಗಳು ದೊರಕುವುದಿಲ್ಲ. ಇಲ್ಲಿಯ ಸ್ತ್ರೀಯರು ಕಲಾ ಶಿಕ್ಷಣಕ್ಕೆ ಹೆಚ್ಚಿನ ಗಮನ ನೀಡಿದ್ದರು. ಸವದತ್ತಿಯ ರಟ್ಟ ಮನೆತನದ ೧ನೆಯ ಸೇನನ ಪಟ್ಟದರಸಿ ಮೈಳಲದೇವಿಯನ್ನು ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ಕ್ಷಿತಿಪತಿರಾಜರಾಜನ ಮನೋರಮೆ ಮೈಳಲದೇವಿ ತಾಂ ಯಶ
ಸ್ವತಿ ನುತಿಯೋಗ್ಯಭಾಗ್ಯವತಿ ದಾನದಯಾವತಿ ಸತ್ಕಳಾಸರ
ಸ್ವತಿ ಯಭಿರೂಪರೂಪಮಳೆಯಾವತಿ ಜೈನಪದಾಂಬುಜಾರ್ಚ್ಚನಾ
ವತಿ ಪುರುಪುಣ್ಯಪುತ್ರವತಿ ರಂಜಿಸುವಳ್ಳುವಿಶಾಳಶೀಳದಿಂ ‖

ಎಂದು ಮೈಳಲದೇವಿಯನ್ನು ಸರಸ್ವತಿ ಎಂದು ಬಣ್ಣಿಸಿದೆ.[೪೭] ಇದು ಮೈಳಲದೇವಿಯ ಸಂಗೀತ, ಸಾಹಿತ್ಯಾರಾಧನೆಗೆ ಉತ್ತಮ ನಿದರ್ಶನವಾಗಿದೆ. ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದ ವಿದ್ಯಾರ್ಥಿಗಳಿಗೆ ಮತ್ತು ವಿದ್ವಾಂಸರಿಗೆ ದಾನ ಮಾಡಿದ ಉಲ್ಲೇಖಗಳು ಕೆಲವು ಶಾಸನಗಳಲ್ಲಿ ದೊರಕುತ್ತವೆ. ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ–

ಆ ಮಹಾನುಭಾವನ ಮನೋನಯನವಲ್ಲಭೆ ‖ ಶ್ರೀಮ....
ದ್ಧಿಯೊಳು.....ಪಡೆದು ಲಕ್ಷ್ಮಿಯ ವಿಭವೋದ್ಧಾಮಮವತರಿ
ಸಿತೆನಿಸುವುದೀ ಮಹಿಯೊಳ್ನೆಗಟ್ದರೂಪುಚ....ನಿಜಂ ಮನವೊಲ್ದು
ಚಿನ್ತೆಯೊಳ್ಕೂಡಿದೊಡಲ್ಲದೀಯದು ಕದನ್ಮಣಿವತ್ಸನನಾ ಪ್ರ.......
ಲಸತ್ಸುರಧೇನು ಸಮಸ್ತವಸುವಂ ಬೇಡದೆ ಸನ್ತತಂ ಕುಡುವುದಾರತೆ
ಭಾಗಲದೇವಿಗೊಪ್ಪುಗುಂ ‖ ಅನ್ತೆನಿ.................ಪುಣ್ಯವತಿ
ಶ್ರೀಮದ್ಭಾಗಲದೇವಿಯರುಂ ಸತ್ಪತಿ ಶ್ರೀಮನ್ಮಹಾಮಣ್ಡಳೇಶ್ವರಂ
ಕಾರ್ತ್ತವೀರ್ಯ್ಯರಸರುಮಿರ್ದ್ದು ....
ತಮ್ಮ ಮು...........ಶ್ರೀಮನ್ಮಹಾಸಾಮನ್ತನಂಕರಸ ಮಾಡಿಸಿದಂ
ಕೇಶ್ವರದೇವರ್ಗ್ಗೆ ಮುನ್ನೆ ಬಿಟ್ಟ ವೃತ್ತಿ ದೇಶಕಾಲದಿಮಾಡದಿದ್ದು
......ರಣಮಾಗೆ.............ಸರ್ವ್ವಾಭ್ಯನ್ತರಸಿದ್ಧಯಾಗೆ ಪೂಲಿ ಮಠದ
ಸೋಮೇಶ್ವರಪಣ್ಡಿತದೇವರ ಶ್ರೀ........ಚರಿತ್ರ.......ಹರ.......ಸತ್ಕೀರ್ತ್ತಿ
ಕಾನ್ತಾಪತಿ ರಾದ್ಧಾನ್ತೋದ್ಧತರ್ಕಾಮಳಿನಮತಿಕವಾದೀಂದ್ರವಾಗ್ಗರ್ಭ್ಭ
ಸ..........‖ ಜಿತ ಮಾರಾಸ್ತ್ರಂ......ತತ್ಪೂಜಿತನೆನೆ ನೆಗಟ್ದಜ್ಞಾನಶಕ್ತಿವ್ರತೀನ್ದ್ರ
.......ಸ್ವಸ್ತಿ ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನು
ಷ್ಠಾನಜಪಸಮಾಧಿಶೀಳಸಂಪಂನರುಂ ವಿಬುಧಪ್ರಸನ್ನರುಂ............
ಕರರುಂ ಪ್ರತ್ಯಕ್ಷ....ರುಂ ಕರ್ಮ್ಮರಿಪುರೌದ್ರರುಂ । ಮುಕ್ತಿವಿದ್ಯಾಮುಖ
...ಮ....ಲದೊಳ್ ಕಾಲಂ ಕರ್ಚ್ಚಿ ಸರ್ವ್ವನಮಶ್ಯಮಾಗಿ ಬಿಟ್ಟ.....
ತಮ್ಮ ಶಿಷ್ಯರ್ ‖

ಸವದತ್ತಿಯ ರಟ್ಟ ಮನೆತನದ ಕಾರ್ತವೀರ್ಯನ ಪಟ್ಟದರಸಿ ಭಾಗಲದೇವಿ ಶಿಕ್ಷಣಕ್ಕೆ ಪಾಠಶಾಲೆಯನ್ನು ನಿರ್ಮಿಸಿದ ಪ್ರಸ್ತಾಪವಿದೆ.[೪೮] ಅದರಲ್ಲೂ ವಿಶೇಷವಾಗಿ ಸ್ತ್ರೀಯರ ಶಿಕ್ಷಣಕ್ಕೆ ಈ ಪಾಠಶಾಲೆ ನಡೆಯುವಂತೆ

ಏರ್ಪಾಡು ಮಾಡಿರುವ ವಿಷಯವನ್ನು ಸವದತ್ತಿಯ ಪ್ರಸ್ತುತ ಶಾಸನವು ಸ್ಪಷ್ಟಪಡಿಸುತ್ತದೆ. ಇದರಿಂದ ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಸ್ತ್ರೀಯರಿಗಾಗಿಯೇ ಪ್ರತ್ಯೇಕ ಪಾಠಶಾಲೆಗಳು ಅಸ್ತಿತ್ವದಲ್ಲಿದ್ದವೆಂಬುದು ಮನದಟ್ಟಾಗುತ್ತದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಕೆಲವು ಸ್ತ್ರೀಯರು ದೇವಾಲಯಗಳು ಮತ್ತು ಬಸದಿಗಳನ್ನು ಕಟ್ಟಿಸಿ ಅವುಗಳಿಗೆ ಉದಾರವಾಗಿ ದಾನ ಕೊಟ್ಟಿದ್ದಾರೆ. ಆ ದೇವಾಲಯಗಳು ಮತ್ತು ಬಸದಿಗಳಲ್ಲಿ ಜರುಗುತ್ತಿದ್ದ ವಿದ್ಯಾಭ್ಯಾಸಕ್ಕೆ ಧನಸಹಾಯ ಮಾಡಿದ್ದಾರೆ. ಹಾಗೆಯೇ ಆಡಳಿತದಲ್ಲಿ ತಮ್ಮ ಪತಿಯರಿಗೆ ಸಹಾಯ ಮಾಡಿದ್ದಾರೆ. ಕೆಲವೊಮ್ಮೆ ಸ್ವತಂತ್ರರಾಗಿ ಆಳ್ವಿಕೆ ಮಾಡಿರುವ ನಿದರ್ಶನಗಳೂ ದೊರಕುತ್ತವೆ. ಈ ನಾಡಿನ ಕೆಳವರ್ಗದ ಸ್ತ್ರೀಯರ ಹೆಚ್ಚಿನ ವಿಚಾರಗಳು ತಿಳಿದು ಬರುವುದಿಲ್ಲ. ಹೀಗೆ ಇಲ್ಲಿಯ ಆಳರಸರಾದಿ ಅಧಿಕಾರಿಗಳು ಸ್ತ್ರೀಯರಿಗೆ ಸಕಲ ಅವಕಾಶಗಳನ್ನೂ ಕೊಡಮಾಡಿರುವುದು ಸಮಕಾಲೀನ ಶಾಸನಗಳಲ್ಲಿ ದಾಖಲಾಗಿದೆ. ಸ್ತ್ರೀಯರಿಗೆ ಯುದ್ಧ ಮಾಡುವ, ಕುದುರೆ ಸವಾರಿ, ರಾಜನೀತಿಯಲ್ಲಿ ಸಲಹೆ ನೀಡುವ, ಖಡ್ಗ ಪ್ರಹಾರದಂತಹ ಕಾರ್ಯಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದಕ್ಕೆ ಸವದತ್ತಿಯ ರಟ್ಟ ಮನೆತನದ ಅರಸರು ಅವಕಾಶ ಮಾಡಿಕೊಟ್ಟಿದ್ದರು. ಈ ಕಾಲಾವಧಿಯಲ್ಲಿ ಸ್ತ್ರೀಯರು ಪುರುಷರೊಂದಿಗೆ ಸಮಾನವಾದ ಅವಕಾಶಗಳನ್ನು ಹೊಂದಿದ್ದರು. ಸವದತ್ತಿಯ ರಟ್ಟ ಮನೆತನದ ಕಾಲಾವಧಿಯ ಸ್ತ್ರೀಯರಲ್ಲಿ (ರಾಣಿಯರು) ನೀಜಿಯಬ್ಬರಸಿ. ಲಚ್ಚಬ್ಬರಸಿ, ಮೈಳಲದೇವಿ, ಭಾಗಲದೇವಿ, ಲಕ್ಷ್ಮೀದೇವಿ, ಪದ್ಮಲದೇವಿ, ಚಂದಲದೇವಿ, ಏಚಲಾದೇವಿಯರು ಪ್ರಮುಖರಾಗಿದ್ದಾರೆ. ಇವರು ಸಾಮಾಜಿಕ, ಧಾರ್ಮಿಕ, ಆಡಳಿತ ಕ್ಷೇತ್ರಗಳಲ್ಲಿ ವಹಿಸಿರುವ ಪಾತ್ರ ಅನನ್ಯವಾಗಿದೆ.

ಸವದತ್ತಿಯ ರಟ್ಟ ಮನೆತನದ ೧ನೆಯ ಲಕ್ಷ್ಮೀದೇವನ ಪಟ್ಟದರಸಿಯಾದ ಚಂದಲದೇವಿ ಆಡಳಿತದಲ್ಲಿ ಸಲಹೆ-ಸೂಚನೆಗಳನ್ನು ಕೊಡುತ್ತಿದ್ದಳು. ಇವಳನ್ನು ಹಣ್ಣಿಕೇರಿಯ ಕ್ರಿ.ಶ. ೧೨೦೮ರ ಶಾಸನವು–

ಆ ಮಹೀವಲ್ಲಭನ ಮನೋನಯನವಲ್ಲಭೆಯೆಂತೆನೆ ॥ ಶರಣಾಗತ
ರಕ್ಷಾಮಣಿಧರಣೀನುತೆ ಸಕಳವಿಬುಧಚಿಂತಾಮಣಿವರ ಭಾಸುರನಿಜಗೋತ್ರ
ಸಿಖಾಮಣಿ ವರಚಂದಲದೇವಿ ಪಟ್ಟರಾಣಿಯೆನಿಕ್ಕುಂ ॥

ಎಂದು ಬಣ್ಣಿಸಿದೆ.[೪೯] ಇವಳು ಕಾಮಿಣಿದೇಹಿ ಎಂದು ಬಂದವರಿಗೆ ಕೊಡುಗೈ ದಾನಿಯಾಗಿ, ಆಶ್ರಯವನ್ನು ಕೋರಿ ಬಂದವರಿಗೆ ರಕ್ಷಕಳಾಗಿ ಅಭಯಹಸ್ತ ನೀಡುತಿದ್ದಳು. ಇವಳು ಹಗರಟಗೆ ನಾಡಿನ ಯದುವಂಶದ ಮಹಾಮಂಡಳೇಶ್ವರ ರಾಜರಸ ಮತ್ತು ಮೈಲಳದೇವಿಯರ ಪುತ್ರಿ.[೫೦] ಇವಳಿಗೆ ಸಿಂಹಮಹಿಪ ಎಂಬ ಸಹೋದರನಿದ್ದನು. ಇವಳ ಉದರದಲ್ಲಿ ೪ನೆಯ ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನ ಎಂಬಿಬ್ಬರು ಪುತ್ರರು ಜನಿಸಿದರು. ಇವಳನ್ನು ಚಂದಲದೇವಿ, ಚಂದ್ರಿಕಾದೇವಿ, ಚಂದ್ರಿಕೆ ಎಂತಲೂ ಕರೆಯಲಾಗಿದೆ.[೫೧] ಸವದತ್ತಿಯ ರಟ್ಟ ಮನೆತನದ ಆಸ್ಥಾನದ ಕವಿಯಾದ ನೇಮಿಚಂದ್ರನು ತನ್ನ 'ಲೀಲಾವತಿ ಪ್ರಬಂಧ' ಕಾವ್ಯದಲ್ಲಿ–

ಅಂಬುಧಿವೇಷ್ಟಿತಾವನಿಗೆ ಲಕ್ಷಣವನೆ ರಾಜನೆಂದು
ಲೋಕಾಂಬಿಕೆಯಪ್ಪ ಪುಣ್ಯಸತಿ ಚಂದಲದೇವಿಯೆಂದು
ಸೇವ್ಯಂ ಬುಧನೇಮಿಚಂದ್ರನೆ ಕವೇಶ್ವರನೆಂದು ಧರೆಯ
ರಕ್ಷಿಸುತ್ತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವಿಶ್ವರಂ
ಸಿರಿಯಂತಾತನ ತೋಳೊಳಿರ್ಕೆಸತತಂ ಶ್ರೀಚಂದ್ರಿಕಾದೇವಿ ‖

ಎಂದು ಈಕೆಯನ್ನು ಗುಣಗಾನ ಮಾಡಿದ್ದಾನೆ.[೫೨] 'ಪಾರ್ಶ್ವನಾಥ ಪುರಾಣ' ಕಾವ್ಯದ ಕರ್ತೃ ಪಾರ್ಶ್ವಪಂಡಿತನು ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಶ್ರೀಪತಿಲಕ್ಷ್ಮೀದೇವಮಹಿವಲ್ಲಭವಲ್ಲಭೆ ಕಾರ್ತ್ತವೀರ್ಯ್ಯಧಾ
ತ್ರೀಪತಿಮಲ್ಲಿಕಾರ್ಜ್ಜುನಮಹೀಶರ ಮಾತೃ ಮಹಾಸತೀತ್ವಸೀ
ತೋಪಮೆ ಜೈನಪೂಜನಸುರೇಂದ್ರವಧೂಪಮೆ ರೂಪಕಂತುಕಾ
ನ್ತೋಪಮೆ ರಂಜಿಪಳ್ನೆಗಳ್ದೆ ಚಂದಲದೇವಿ ಸಮಸ್ತಧಾತ್ರಿಯೋಳ್ ‖

ಎಂದು ಈಕೆಯನ್ನು ಕೊಂಡಾಡಿದ್ದಾನೆ.[೫೩] ಮಹಾಸತಿಯೂ, ಪತಿವ್ರತೆಯೂ, ೪ನೆಯ ಕಾರ್ತವೀರ್ಯ ಮತ್ತು ಮಲ್ಲಿಕಾರ್ಜುನರ ತಾಯಿಯೂ, ೧ನೆಯ ಲಕ್ಷ್ಮೀದೇವನ ಪ್ರೀತಿಯ ಮನದನ್ನೆಯೂ ಆದ ಇವಳು ಕೂಹುಂಡಿನಾಡಿನ ಶ್ರೇಷ್ಠತೆಗೆ ತನ್ನನ್ನು ಅರ್ಪಿಸಿಕೊಂಡಿದ್ದಳು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಶಾಸನಕವಿ ಬಾಳಚಂದ್ರದೇವನು–

ಅಮೃತಾಂಭೋರಾಶಿಯೊಳ್ಪುಟ್ಟಿದ ಸಿರಿಯನಣಂ ಬಯ್ತು
ಧಾತ್ರಂ ಸ್ವಮಾಯಾಕ್ರಮದಿಂ ಬೇಱಿರ್ಕೊರ್ವ್ವಳಂ ನಿರ್ಮ್ಮಿಸಿ
ಚಪಳೆಯನಾ ಕೃಷ್ಣನೊಳ್ಕೂಡಿ ಮತ್ತಾ ವಿಮಳೋದ್ಯದ್ಭಾಗ್ಯೆಯುಂ
ಸುಸ್ಥಿರೆಯನೊಸೆದು ಕೊಟ್ಟಂ ಮಹೀಭೃನ್ನಿಕಾಯೋತ್ತಮನಪ್ಪೀ
ಲಕ್ಷ್ಮಿದೇವಂಗನೆ ಮಿಗೆ ತಳೆದಳ್ ಚಂದಿಕಾದೇವಿ ಚೆಲ್ವಂ ‖
ಪ್ರಣುತಶ್ರೀನಿಧಿ ಚಂದ್ರಿಕಾಸತಿಯ ಶೀಲಬ್ರಾತಮಂ ಕೂಡೆ
ಧಾರಿಣಿಯೊಳ್ಬಣ್ಣಿಸಲಾರುಮಾರ್ತ್ತಪರೆ ಲಕ್ಷೋರ್ವ್ವೀಶನಂ
ಕ್ಷತ್ರಿಯಾಗ್ರಣಿಯಂ ಶೀಲದೆ ಮೆಚ್ಚಿಸಲ್ ಫಣಿಪನಂ
ಪೂಣ್ಡೆತ್ತೆ ತಾಂ ತನ್ನ ಕಯ್ಗುಣಮಂ ಕಂಡುದಜೆಂಡವಂ
ಪೊಗಳಲಾರ್ಪ್ಪಂ ವಿಶ್ವಜಿಹ್ವಾಳಿಯಿಂ ‖ ನರಪತಿಲಕ್ಷ್ಮಿದೇವಸತಿ
ಚಂದಲದೇವಿ ನಿಜೋದ್ಧಹಸ್ತದಿಂ ಧರೆಗೆಸೆಯಲ್ಕೆ ಸಂಕ್ರಮಣ
ದೊಳ್ಕುಡೆ ಕಾಂಚನಮಂ ಬೆರಲ್ಗಳೊಳ್ಬೆರೆಸೆದ ಹೇಮಕಾಲಿಕೆಯ
ಕರ್ಪ್ಪೆಸೆದಿರ್ಪ್ಪುದು ಬಾಹುಕಲ್ಪವಲ್ಲರಿಯ ತಳಪ್ರವಾಳದ
ನಖಪ್ರಸವಕ್ಕೆಳಸಿರ್ದ್ದ ತುಂಬಿವೊಲ್ ‖
ವಿಜಿತರಿಪುರಾಜರಾಜಾತ್ಮಜೆ ಚಂದಲದೇವಿ ಲಕ್ಷ್ಮನೃಪಸತಿಯೆಸೆ
ವಳ್ವಿಜ್ಜಿತಘಟಸರ್ಪ್ಪಮದೆ ವಿಶ್ವಜನಸ್ತುತಚಾರುಚರಿತೆಯೆನೆ
ಧಾರಿಣಿಯೊಳ್ ‖

ಎಂದು ಇವಳನ್ನು ಗುಣಗಾಣ ಮಾಡಿದ್ದಾನೆ.[೫೪] ರಾಯಬಾಗದ ಕ್ರಿ.ಶ. ೧೦೪೧ರ ಶಾಸನವು–

ಆ ನೃಪನ ಮನೋವಲ್ಲಭೆ ಭೂನುತಸಚ್ಚರಿತೆ ಚಂದ್ರಿಕಾದೇವಿ
ಮಹದ್ದಾನೆ ಘಟಸರ್ಪ್ಪ ವಿಜಯಜ ಯಾನಕರವಜನಿತ

ಜನಮನೋಮುದೆ ಜಗದೊಳ್ ||

ಎಂದು ಕೊಂಡಾಡಿದೆ. ಅಂದರೆ ಉತ್ತಮ ಗುಣವಂತೆಯೂ, ಮದ್ದಾನೆ ಮತ್ತು ಘಟಸರ್ಪಗಳಿಗೆ ಹೆದರದೆ ವಿಜಯಿಯಾಗಿ ತನ್ನ ಧೈರ್ಯಸಾಹಸಗಳನ್ನು ಮೆರೆದು ಜನಮಾನಸದಲ್ಲಿ ಪ್ರಸಿದ್ಧಿ ಪಡೆದಿದ್ದಳು. ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ ಇವಳನ್ನು–

ಶರಣಾಗತ ರಕ್ಷಾಮಣಿ ಧರಣೀನುತೆ ಸಕಳವಿಬುಧ
ಚಿಂತಾಮಣಿ ಭಾಸುರನಿಜಗೋತ್ರಸಿಖಾಮಣಿ
ವರಚಂದಲದೇವಿ ಪಟ್ಟರಾಣಿಯೆನಿಕ್ಕುಂ ||

ಎಂದು ವರ್ಣಿಸಲಾಗಿದೆ.[೫೫] ಇವಳು ಶರಣು ಬಂದವರನ್ನು ಕಾಪಾಡುತ್ತಿದ್ದಳು. ರಾಜ್ಯದ ಎಲ್ಲ ಮಹಿಳೆಯರಿಗೆ ಇವಳನ್ನು ಕಂಡರೆ ಬಹಳ ಪ್ರೀತಿಯಿತ್ತು. ಪ್ರಜೆಗಳು ಈಕೆಯಿಂದ ಸಲಹೆ–ಸೂಚನೆಗಳನ್ನು ಪಡೆದುಕೊಳ್ಳುತ್ತಿದ್ದರು. ಜೈನ ಧರ್ಮವನ್ನು ಇವಳು ತನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದಳು. ಜೈನ ಧರ್ಮವನ್ನು ಬೆಳೆಸುವಲ್ಲಿ, ಮುನಿಜನರ ಆಹಾರ ಮತ್ತು ಆರ್ಯಿಕೆಯಲ್ಲಿ ಇವಳ ಕೊಡುಗೆ ಅಪಾರವಾಗಿದೆ. ತನ್ನ ಪತಿಯ ಮೇಲೆ ಅಪಾರವಾದ ಗೌರವ ಹೊಂದಿದ್ದಳು.

ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ರಟ್ಟ ಮನೆತನದ ಪಿಟ್ಟಿಗನ ಪಟ್ಟದರಸಿಯಾದ ನೀಜಿಯಬ್ಬರಸಿಯ ಪ್ರಸ್ತಾಪವಿದೆ.[೫೬] ಈಕೆಯನ್ನು ಪ್ರಸ್ತುತ ಶಾಸನವು–

ಪೊಗಳಲಳುಂಬಮಪ್ಪ ಚರಿತಂ ಮಿಗೆ ಬಣ್ಣಿಸಲಬ್ಜಸಂಭವಂ
ಗಗಣಿತಮಪ್ಪ ರೂಪವಿಭವಂ ಪತಿಭಕ್ತಿಯೊಳೊಂದಿ ಸಜ್ಜನಿಕೆಗೆ
ನೆಲೆಯಾದ ಮಾಂತನದ ಪೆಂಪು ಸಮಂತಳವಟ್ಟ ನೀಜಿಕಬ್ಬರಸಿಗೆ
ಸುಂದರುನ್ಧತಿ ಪೆಱರ್ದ್ದೊರೆಯೆಂದಡೆ ದೋಸವಲ್ಲದೇ ||

ಎಂದು ವರ್ಣಿಸಿದೆ. ಸೌಂದರ್ಯವತಿಯೂ, ಸಹೃದಯಿಯೂ, ಜಿನಭಕ್ತಳೂ ಆದ ಇವಳು ಅಪಾರವಾದ ಪತಿಭಕ್ತಿಯನ್ನು ಹೊಂದಿದ್ದಳು. ತನ್ನ ಪುತ್ರ ಶಾಂತಿವರ್ಮನು ಸವದತ್ತಿಯಲ್ಲಿ ಕಟ್ಟಿಸಿದ ಬಸದಿಯ ಮುನಿಗಳ ಆಹಾರದಾನಕ್ಕೆ ಯಾಪನೀಯ ಸಂಘದ ಕಂಡೂರುಗಣ ಪರಂಪರೆಯ ಬಾಹುಬಲಿ ಭಟ್ಟಾರಕನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾಳೆ.

ಸವದತ್ತಿಯ ರಟ್ಟ ಮನೆತನದ ಅಂಕರಸನ ಪಟ್ಟದರಸಿಯಾದ ಲಚ್ಚಲದೇವಿ ಹೂಲಿಯ ಒಡೆಯನಾದ ಪಾಯಿಮನೃಪ ಮತ್ತು ಹಮ್ಮಿಕಬ್ಬೆಯ ಮಗಳಾಗಿದ್ದಳು. ಹೂಲಿಯ ಕ್ರಿ.ಶ. ೧೦೪೩ರ ಶಾಸನದಲ್ಲಿ–

ಸಕಳಧರತ್ರಿಯೊಳ್ನೆಗಭಿವಂದಿತಜನಂಸತಿರೂಪಿನೇಳ್ವೆಯಂ
ಪ್ರಕಟತೆವೆತ್ತಾನಗುಣಮಂಕೂಳದುಂನತಿಯಂಜಿನಾಂಘ್ರಗ
ಳ್ಗೆಕುಟಿಳಚಿತ್ತಮಂಪೊಗಳುತರ್ಪ್ಪುದುಕೂಡಿಯಲಿಂಕದಂಕಪಾ
ಳಕನಕುಳೋತ್ತಮಾಂಗನೆಯನರ್ತ್ಥಿಯೆಲಚ್ಚಲದೇವಿಯಜಗಂ ||

ಎಂದು ಇವಳ ವ್ಯಕ್ತಿತ್ವದ ವರ್ಣನೆಯಿದೆ. ಸದ್ಗುಣ ಸಂಪನ್ನಳೂ, ದಾನವಂತೆ ಆದ ಈಕೆಯು ಸಕಲ ಜನರಿಗೆ ಆದರಣೀಯಳಾಗಿದ್ದಳು. ಹೂಲಿಯ ಬಸದಿಗೆ ಉದಾರವಾಗಿ ದಾನ ಮಾಡಿದ್ದಾಳೆ.[೫೭]

ಸವದತ್ತಿಯ ರಟ್ಟ ಮನೆತನದ ೧ನೆಯ ಸೇನನ ಪಟ್ಟದರಸಿಯಾದ ಮೈಳಲದೇವಿಯನ್ನು ಸವದತ್ತಿಯ ಕ್ರಿ.ಶ.೧೦೪೮ರ ಶಾಸನವು 'ಶ್ರೀಸೇನಭೂಪತಿಸ್ತಸ್ಯಾಗ್ರ ಮಹೀಷೀಜಾತಾ ಮೈಳಲಾದೇವಿರೂರ್ಜ್ಜಿತಾ' ಎಂದು ಕರೆದಿದೆ.[೫೮] ಇವಳು ರಾಜ್ಯಾಡಳಿತದಲ್ಲಿ ಪತಿಗೆ ಸಲಹೆಗಾರಳಾಗಿ ರಟ್ಟ ಸಾಮ್ರಾಜ್ಯದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾಳೆ. ಇವಳ ಉದರದಲ್ಲಿ ಅರಿಭೂಪಾಳ, ೧ನೆಯ ಕನ್ನಕೈರ ಮತ್ತು ಇಮ್ಮಡಿ ಕಾರ್ತವೀರ್ಯ ಎಂಬ ಮೂವರು ಜನಿಸಿದರು. ಸವದತ್ತಿಯ ಕ್ರಿ.ಶ.೧೦೮೭ರ ಶಾಸನವು–

ಅರಿಭೂಪಾಳ...ಳಾನರೇಂದ್ರ ಕುಳ............ಕಾಳಾಸಮರೂಪ
.........ನಿರ್ಮ್ಮೂಳನಿರ್ಬ್ಭರರೌದ್ರಾಶನಿ ವೀರಮಣ್ಡಳಿಕರೌದ್ರ.....
ಣರ್ದ್ದು ಸೇನರಸಂಗಾನ್ತು ಬೇೞ್ದು....ನುಪಮಮಪ್ಪ ದೇವ
ವನಿತೋ ಮಾನವಕಾನ್ತೆಯಾದ............ಮವಿಭೂತಿಯಿಂ
ನೆಱದು ರೂಪವಿಳಾಸಮನೆಯ್ದೆ ತಾಳ್ದಿ ಕಾಮನನೆ.........ನ
ನೃಪಾಳಕವಕ್ಷದೊಳ್ ಕರಂ ಮನಮೊಸೆದಿರ್ಪ್ಪ ಲಕ್ಷ್ಮಿಯಿಂ
........ಮೈಳಲದೇವಿ ರಂಜಿಕುಂ ॥

ಎಂದು ಈಕೆಯ ವ್ಯಕ್ತಿತ್ವವನ್ನು ಕೊಂಡಾಡಿದೆ.[೫೯] ರೂಪಲಾವಣ್ಯವತಿಯಾದ ಈಕೆಯು ೧ನೆಯ ಸೇನನ ಮನೋವಲ್ಲಭೆಯಾಗಿದ್ದಳು. ಪ್ರಸ್ತುತ ಶಾಸನವು–

ದೇವನುದ್ದರಿರ....................ಮನೆ ಕನ್ದರ್ಪಜಾತೆ
ಪ್ರತ್ಯಕ್ಷಗೋಮಿನೆತಾಯಿ ಮೈಳಲದೇವಿನೊಳ್ಳ
ಮರಕ್ಕವರ್ಪ್ಪರಿಕ್ಷಿತಿ ಪ..........ತಿಸ್ಯೆ..........ರವಧೂಪ್ರಕರ ॥

ಎಂದು ಈಕೆಯ ಗುಣವಿಶೇಷತೆಗಳನ್ನು ಬಣ್ಣಿಸಿದೆ. ಇವಳು ದೇವಲೋಕದಿಂದ ಬಂದ ದೇವತೆಯಂತೆ, ಪವಿತ್ರ ಕಾಮಧೇನುವಿನಂತಿದ್ದಳು. ಉದಾರ ಧಾರ್ಮಿಕ ಮನೋಭಾವನೆಯ ಇವಳು ಜೈನ ಧರ್ಮದ ಪ್ರಗತಿಗೆ ವಿಶೇಷವಾಗಿ ಶ್ರಮಿಸಿದ್ದಾಳೆ.

ಇಮ್ಮಡಿ ಕಾರ್ತವೀರ್ಯನ ಪಟ್ಟದರಸಿಯಾದ ಭಾಗಲದೇವಿ ರಾಜನೀತಿಯನ್ನು ಚೆನ್ನಾಗಿ ಅರಿತಿದ್ದಳು. ಸವದತ್ತಿಯ ಕ್ರಿ.ಶ.೧೦೮೭ರ ಶಾಸನವು–

ಶ್ರೀಮದ್ದಿ.....ಯೊಳು.......ಪಡೆದು ಲಕ್ಷ್ಮಿಯ ವಿಭವೋದ್ಧಾಮ
ಮವತರಿಸಿತೆನಿಸುವುದೀ ಮಹಿಯೊಳ್ನೆಗೞ್ದ ರೂಪುಚ....ನಿಜಂ
ಮನವೊಲ್ದು ಚಿನ್ತೆಯೊಳ್ಕೂಡಿದೊಡಲ್ಲದೀಯದು ಕದನ್ಮಣಿವತ್ಸ
ನನಾ ಪ್ರ............ಲಸತ್ಸುರದೇನು ಸಮಸ್ತವಸುವಂ ಬೇಡದೆ
ಸನ್ತತಂ ಕುಡುವುದಾರತೆ ಭಾಗಲದೇವಿಗೊಪ್ಪುಗುಂ ॥

ಎಂದು ಇವಳ ಪ್ರತಿಭಾವಂತಿಕೆ ಮತ್ತು ಪತಿಯ ಮೇಲಿನ ಪ್ರೀತಿಯನ್ನು ಸೊಗಸಾಗಿ ನಿರೂಪಿಸಿದೆ.[೬೦] ಪ್ರಸ್ತುತ ಶಾಸನದಲ್ಲಿ–

ಶಕನೃಪಕಾಳಾತೀತ ಸಂವಚರ ಶತಂಗಳ್ ೧೦೦೯ನೆಯ
ಪ್ರಭವ ಸಂವತ್ಸರದ ಶ್ರಾವಣದಮಾವಾಸ್ಯೆ ಆದಿತ್ಯವಾರದನ್ದಿನ

ಸರ್ವ್ವಗ್ರಾಸಿ ಸೂರ್ಯ್ಯಗ್ರಹಣ ತತ್ಕಾಲದೊಳ್ ತಮ್ಮ ಮು...
ಶ್ರೀಮನ್ಮಹಾಸಾಮನ್ತನಂಕರಸ ಮಾಡಿಸಿದಂಕೇಶ್ವರದೇವರ್ಗೆ
ಮುನ್ನೆ ಬಿಟ್ಟ ವೃತ್ತಿ ದೇಶಕಾಲದಿ ಮಾಡದಿದ್ದು............. ॥

ಎಂದು ಈಕೆಯ ದಾನಗುಣಗಳು ಮತ್ತು ಧಾರ್ಮಿಕ ಭಕ್ತಿಯನ್ನು ಕೊಂಡಾಡಲಾಗಿದೆ.[೯] ತನ್ನ ಪತಿಯ ಅಜ್ಜ ಅಂಕರಸನು ಸವದತ್ತಿಯಲ್ಲಿ ನಿರ್ಮಿಸಿದ ಅಂಕೇಶ್ವರ ದೇವಾಲಯಕ್ಕೆ ಹೂಲಿಯ ಸೋಮೇಶ್ವರ ಮಠದ ಆಚಾರ್ಯನಾದ ಜ್ಞಾನಪಂಡಿತನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾಳೆ. ಜೈನಳಾಗಿದ್ದ ಇವಳು ಶಿವಾಲಯಕ್ಕೆ ಭೂದಾನ ಮಾಡಿ ಪರಧರ್ಮ ಸಹಿಷ್ಣುತೆಯನ್ನು ಮೆರೆದಿದ್ದಾಳೆ. ಸ್ತ್ರೀಪರ ಕಾಳಜಿಯುಳ್ಳ ಈಕೆಯು ಅದೇ ದೇವಾಲಯದಲ್ಲಿ ಸ್ತ್ರೀಯರ ಶಿಕ್ಷಣಗಾಗಿ ಪಾಠಶಾಲೆಯನ್ನು ಪ್ರಾರಂಭಿಸಿದ್ದಳು. ಪತಿಯ ಆಡಳಿತದಲ್ಲಿ ಭಾಗಿಯಾಗಿ ಸರ್ವ ರೀತಿಯಿಂದಲೂ ಸೂಕ್ತವಾದ ಸಲಹೆ–ಸೂಚನೆಗಳನ್ನು ನೀಡುತ್ತಿದ್ದಳು.

ಇಮ್ಮಡಿ ಸೇನರಸನ ಪಟ್ಟದರಸಿಯಾದ ಲಕ್ಷ್ಮೀದೇವಿಯ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ರಾಯಬಾಗದ ಕ್ರಿ.ಶ. ೧೦೪೦ರ ಶಾಸನವು–

ಸೇನಮಹೀಭೂಬುಜಂ ಭುಜಬಳಾನ್ವಿತನಪ್ರತಿಮಪ್ರಭಾವದಿಂ ॥
ಆ ವಸುಧಾಧೀಶಂಗಂ ಲಾವಂಣ್ಯಾಂಭೋನಿ ಧಾನಲಹರಿಕೆ
ಲಖಿವಾದೇವಿಮುದಯಿಸಿದ ವಸುಧಾವಿನುತಂ
ಕಾರ್ತ್ತವೀರ್ಯ್ಯನನುಪಮಶೌರ್ಯ್ಯಂ ॥

ಎಂದು ಪರಿಚಯಿಸಿದೆ.[೨] ಇವಳು ತನ್ನ ಪತಿಯ ರಾಜ್ಯಾಡಳಿತದಲ್ಲಿ ಭಾಗಿಯಾಗುತ್ತಿದ್ದಳು. ರೂಪವತಿಯಾಗಿದ್ದ ಈಕೆಯು ಧಾರ್ಮಿಕ ಸಂಪ್ರದಾಯಗಳ ಆಚರಣೆಗೆ ವಿಶೇಷ ಒತ್ತು ನೀಡಿದ್ದಳು. ತನ್ನ ಕಾರ್ಯದ ಮೂಲಕ ರಾಜ್ಯದ ಪ್ರಜೆಗಳಿಗೆ ಗೌರವಾಧರಣೀಯಳಾಗಿದ್ದಳು. ಇವಳ ಉದರದಲ್ಲಿ ಮುಮ್ಮಡಿ ಕಾರ್ತವೀರ್ಯ ಜನಿಸಿದನು.

ಮುಮ್ಮಡಿ ಕಾರ್ತವೀರ್ಯನ ಪಟ್ಟದರಸಿ ಪದ್ಮಲದೇವಿಯನ್ನು ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು–

ಸ್ಥಿತಿಕಾರಿಣಿ ವಿಮಳಗುಣಾನ್ವಿತೆ ಪದ್ಮಲದೇವಿ
ಕಾರ್ತ್ತವೀರ್ಯ್ಯಧರಿತ್ರೀಪತಿದಯಿತೆ ತಾಂ
ತ್ರಿವರ್ಗ್ಗೋಂನತಿಸಾಧಿಕೆಯಪರನೀತಿವಿದ್ಯೆವೊಲೆಸೆವಳ್ ॥

ಎಂದು ವರ್ಣಿಸಿದೆ.[೩] ಪ್ರಸ್ತುತ ಶಾಸನದಲ್ಲಿ ಈಕೆಯ ಗುಣಸೌಂದರ್ಯವನ್ನು–

ವಿನತರಿಪುಪ್ರತಿಬಿಂಬಾಳಿ ನಿತಾಂತಂ ಕಾರ್ತ್ತವೀರ್ಯ್ಯ
ಪದನಖದೆಳ್ಗೆಲ್ವೆನಿಕುಂ ಪೂರ್ವ್ವಪದಾಶ್ರಿತರನಲಿದು
ತನಮಂತ್ರಕೃತಿಗೆ ಪಡೆದಪ್ಪುವವೊಲ್ ॥

ಎಂದು ಕೊಂಡಾಡಲಾಗಿದೆ. ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಇವಳು ಕಮಲದಂತಹ ಕಣ್ಣುಗಳನ್ನು ಹೊಂದಿದ್ದಳೆಂದು ನಿರೂಪಣೆಯಿದೆ.[೪] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ಆ ವಿಭುವಿನ ವಧು ಪದ್ಮಲ
ದೇವಿ ಕಳಾರೂಪವಿಭವಜಿನಮತದೊಳ್ವಾ
ಗ್ದೇವಿ ರತಿದೇವಿ ಲಕ್ಷ್ಮೀ
ದೇವಿ ಶಚೀದೇವಿಯೆನಿಸಿ ಮಿಗೆ ಸೊಗಯಿಸುವಳ್ ॥
ಶ್ರೀಪತಿನಾ ವಿಷ್ಣುಃ ಪೃಥು
ವೀಪತಿಯೆನೆ ಲಕ್ಷ್ಮಿದೇವನೊಗೆದಂ ವಸುದೇ
ವೋಪಮ ಕತ್ತಮವಿಭುಗಂ
ಶ್ರೀಪದ್ಮಲದೇವಿಯೆಂಬ ನುತದೇವಕಿಗಂ ॥

ಎಂದು ಇವಳು ತೇಜಸ್ಸುಳ್ಳವಳೂ, ಜಿನಧರ್ಮದ ಸಾರವನ್ನು ಅರಿತವಳೂ, ರತಿಯನ್ನು ಮೀರಿಸುವ ಸೌಂದರ್ಯವತಿಯೂ, ಸಾಕ್ಷಾತ್ ಲಕ್ಷ್ಮಿಯೇ ಆಗಿದ್ದಳೆಂದು ಬಣ್ಣಿಸಿದೆ.[೬೫]

ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಪಟ್ಟದರಸಿ ಏಚಲಾದೇವಿಯನ್ನು ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನವು–

ಶ್ರೀಚಕ್ರವರ್ತ್ತಿತನುಜೆ ಕ
ಳಾಚತುರೆ ವಿಶಾಳಲೋಳಲೋಚನೆಯೆನಿಸಿ
ರ್ದ್ದೇಚಲದೇವಿ ಸತೀತ್ವಸು
ಲೋಚನೆಯೆನೆ ಕಾರ್ತ್ತವೀರ್ಯ್ಯವಧು ಪೆಸರ್ವಡೆದಳ್ ॥

ಎಂದು ವರ್ಣಿಸಲಾಗಿದೆ.[೬೬] ಇವಳು ಹಗರಟಗೆ ನಾಡಿನ ಯದುವಂಶದ ರಾಜಕನ್ಯೆಯಾಗಿರಬಹುದು. ಶಿವನ ಆರಾಧಕಳಾದ ಇವಳು ನೇಸರಗಿಯಲ್ಲಿ ಹೆಬ್ಬೇಶ್ವರ, ಮಾಣಿಕ್ಕೇಶ್ವರ ಮತ್ತು ವೀರಭದ್ರ ದೇವಾಲಯಗಳನ್ನು ನಿರ್ಮಿಸಿ ದಾನ–ದತ್ತಿಗಳನ್ನು ಕೊಟ್ಟಿದ್ದಾಳೆ.[೬೭] ಏಚಲಾದೇವಿ ಜೈನ ಧರ್ಮದ ಮತಾವಲಂಭಿಯಾಗಿದ್ದರೂ ಶೈವ ಧರ್ಮದ ದೇವಾಲಯಗಳನ್ನು ನಿರ್ಮಿಸುವ ಮೂಲಕ ಪರಧರ್ಮ ಸಹಿಷ್ಣುತೆಯನ್ನು ಮೆರೆದಿದ್ದಾಳೆ. ಪತಿಯ ರಾಜ್ಯಾಡಳಿತದಲ್ಲಿ ಸಹಭಾಗಿಯಾಗಿ ಸೂಕ್ತ ಸಲಹೆ–ಸೂಚನೆಗಳನ್ನು ನೀಡುವ ಮೂಲಕ ಪ್ರಜೆಗಳ ಕಷ್ಟ–ಸುಖಗಳಿಗೆ ಸ್ಪಂದಿಸಿದ್ದಾಳೆ.

ಹಗರಟಗೆನಾಡಿನ ಯದುವಂಶದ ರಾಜರಸನ ಪತ್ನಿ ಚಂದಲದೇವಿ ಆಡಳಿತದಲ್ಲಿ ಸಲಹೆ–ಸೂಚನೆಗಳನ್ನು ಕೊಡುತ್ತಿದ್ದಳೆಂದು ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ನಿರೂಪಣೆಯಿದೆ. ಈ ಶಾಸನವು ಇವಳನ್ನು–

ಸತಿ ಚಂದಲದೇವಿ ಪತಿ
ಬ್ರತೆ ಲಕ್ಷ್ಮಾದೇವಿಯೆಂಬರಿರ್ವ್ವರುಮವನೀ
ಪತಿ ರಾಜನೃಪನ ರಾಣಿಯ
ರಶಿತಯುಗುಣಯುತೆಯರೆನಿಸಿ ನೆಗಳ್ದರ್ಜ್ಜಗದೊಳ್ ॥

ಎಂದು ವರ್ಣಿಸಿದೆ.[೬೮] ಪತಿವ್ರತೆಯಾಗಿ, ಪತಿಗೆ ತಕ್ಕ ಪತ್ನಿಯಾಗಿದ್ದ ಇವಳನ್ನು ಮತ್ತು ಭೂಲಕ್ಷ್ಮೀ ಎಂಬಿಬ್ಬರು ಲಕ್ಷ್ಮೀಯರನ್ನು ವರಿಸಿದ ರಾಜರಸನು ಯದುವಂಶದ ಕೀರ್ತಿಯನ್ನು ಲೋಕದ ತುಂಬೆಲ್ಲ ಪಸರಿಸಿದ್ದನು. ಚಂದಲದೇವಿಯು ಪತಿಯ ಯುದ್ಧಗಳಲ್ಲಿ ಸ್ಫೂರ್ತಿಯ ಸೆಲೆಯಾಗಿದ್ದಳು. ಸವದತ್ತಿಯ

ರಟ್ಟ ಮನೆತನದ ಅರಸರು ಸ್ತ್ರೀಯರಿಗೆ ತಾಯಿಗೆ ಸಮಾನವಾದ ಸ್ಥಾನಮಾನವನ್ನು ಕೊಟ್ಟಿದ್ದಾರೆ. ಕೊಣ್ಣೂರಿನ ಕ್ರಿ.ಶ. ೧೦೮೭ರ ಶಾಸನದಲ್ಲಿ–

ವರನೆಂದೊಲದೆಲ್ಲರುಂ ಬಣ್ಣಿಸಲೆಸೆದನಿವಂ
ವಿಶ್ವಭೂಪಾಳರತ್ನಂ ಪರಿದುಂಪೊಲ್ಲವೆಯುಳ್ಳಗಂ
ಶರಣೆನಲವಂದಿಟಕ್ಕಾಂತದೆಂ ವರುವಂಳ್ತಹಿದಿಕ್ಕವಂಮ
ಮಡೆದುವನ್ಯಸ್ತ್ರೀಯರಂ ರಂಭೆಗೇ ಬೆರಲಿಂದಮಿಗಿಲಾದಡಂ ‖

ಎಂಬ ಪ್ರಸ್ತಾಪವಿದೆ.[೯] ಇದನ್ನು ಗಮನಿಸಿದರೆ ಸವದತ್ತಿಯ ರಟ್ಟ ಮನೆತನದ ರಾಜ್ಯದಲ್ಲಿ ರಂಭೆಯಂತೆ ಸುಂದರಿಯರು, ಸೌಂದರ್ಯವತಿಯರಿದ್ದರೂ ಇಮ್ಮಡಿ ಸೇನನು ತನ್ನ ಪತ್ನಿಯನ್ನು ಬಿಟ್ಟು ಬೇರೆ ಸ್ತ್ರೀಯರನ್ನು ದೇವತೆಗಳ ಸಮಾನವಾಗಿ ಕಾಣುತ್ತಿದ್ದನು. ಅಂದರೆ ಅಂದು ಸ್ತ್ರೀಯರಿಗೆ ಸಮಾಜದಲ್ಲಿ ಉನ್ನತ ಸ್ಥಾನ–ಮಾನಗಳಿದ್ದುದು ಸ್ಪಷ್ಟವಾಗುತ್ತದೆ. ಸ್ತ್ರೀಯರೂ ತಮ್ಮ ಪತಿಯರೊಂದಿಗೆ ಸಭ್ಯರಾಗಿ, ಪತಿವ್ರತೆಯರಾಗಿ ಜೀವಿಸುತಿದ್ದರು. ಈ ಕಾರಣದಿಂದಲೇ ಅಂದಿನ ಸಮಾಜದಲ್ಲಿ ನೈತಿಕತೆಯಿತ್ತು. ಅಂದಿನ ಸ್ತ್ರೀಯರು ದೇವಾಲಯಗಳು ಮತ್ತು ಬಸದಿಗಳನ್ನು ಕಟ್ಟಿಸಿ, ಅವುಗಳ ವಿವಿಧ ಪೂಜಾಧಿಗಳು ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ. ಇಮ್ಮಡಿ ಕಾರ್ತವೀರ್ಯನ ಪಟ್ಟದರಸಿ ಭಾಗಲದೇವಿಯು ಅಂಕರಸನು ಸವದತ್ತಿಯಲ್ಲಿ ಕಟ್ಟಿಸಿದ ಅಂಕೇಶ್ವರ ದೇವಾಲಯಕ್ಕೆ ಕ್ರಿ.ಶ. ೧೦೮೭ರಲ್ಲಿ ಭೂದಾನ ಮಾಡಿದ್ದಾಳೆ.[೨೦] ಸೊಗಲದ ಕ್ರಿ.ಶ. ೯೭೮ರ ಶಾಸನದಲ್ಲಿ–

ಹರಚರಣಾಬ್ಜಭೃಂಗಿ ಕಪಟೋದಯ ನಿರ್ಜ್ಜಿತ ನಿರ್ಮ್ಮಳಾಂಗಿ
ಭಾಸುರತರಮೂರ್ತಿ ನಿರ್ಮ್ಮಳಿನಕೀರ್ತಿ ದಯಾಪರೆ ದಾನಧರ್ಮ್ಮ
ತತ್ಪರಗುಣಯುಕ್ತೆ ದೇವಗುರುಭಕ್ತೆ ಸುಗೋತ್ರಪವಿತ್ರೆಯೆಂದು
ವಿಸ್ತರದೊಳೆ ಕೀರ್ತ್ತಿಕುಂ ವಸುಧೆ ಸನ್ತತದಿಂದಮೆ ಕಂಚಿಕಬ್ಬೆಯ ‖
ಮಾರಜನ ಬೆಳವಾಡಿಯ ಚಾರುಗುಣಂ ಕರಿಯ ಕೇತಿಮಯ್ಯನವಳು
ವಿಸ್ತಾರಗುಣಾಂಬುಧಿ ಧರ್ಮ್ಮದ ಮೇರುವನಾ ಕಂಚಿಕಬ್ಬೆಯಂ
ಪೊಗಳದರಾರ್ ‖ ಪರಹಿತಗುಣಚರಿತದ ಧನಗರ ಗೋತ್ರದ
ಕಂಚಿಯಬ್ಬೆ ಮಾತಾರತ್ನಂ ಧರೆಗೆಸೆವ ದಾನಧರ್ಮ್ಮದ ಪರಿಣತಿಕೆಯೆ
ಪಿರಿದು ಪರಮ ಮಾಹೇಶ್ವರಿಯೇ ‖ ಶ್ರೀಯ ದ್ವಾರಯುಗಂ ಲೀಳಾಯುತ
ಕರಮೆನಿಪ ಸೂರ್ಯ್ಯಕಿರಣಸ್ತಂಭಂ ಭೂಯುವತಿಯೊಳಗೆ ಸಲೆ
ಕಳ್ಪಾಯುಷ್ಯಂ ನಿಲ್ಕುಮೆಂದೊಡೇನಚ್ಚರಿಯೋ ‖ ಎನೆ ನೆಗಟ್ದಿ ಕಂಚಿಕಬ್ಬೆಯ
ತನಯಂ ಶಿವಚರಣಯುಗಳ ಕಮಳ ಭ್ರಮರಂ ಮುನಿಜನಭಕ್ತಂ
ಶಿಷ್ಟೇಷ್ಟನಿಧಾನಂ ಚಟ್ಟನುಗ್ರಪಾಪಘರಟ್ಟ ‖

ಎಂದು ಬೆಳವಡಿ ನಗರದ ಕೇತಿಮಯ್ಯನ ಮಡದಿ ಕಂಚಿಯಬ್ಬೆಯ ವ್ಯಕ್ತಿತ್ವ ಅನಾವರಣಗೊಂಡಿದೆ. ಧರ್ಮದಲ್ಲಿ ನಿಷ್ಠಾವಂತೆ ಮತ್ತು ಗುರುಭಕ್ತೆಯಾಗಿದ್ದ ಇವಳು ಸ್ಥಳೀಯ ಸುವರ್ಣಾಕ್ಷಿ ದೇವಾಲಯಕ್ಕೆ ದಾನ ಮಾಡಿದ್ದಾಳೆ.[೨೧] ಇವಳ ದಾನಗುಣವನ್ನು ಪ್ರಸ್ತುತ ಶಾಸನವು ಮನದುಂಬಿ ಕೊಂಡಾಡಿದೆ.

ಕೂಹುಂಡಿನಾಡಿನಲ್ಲಿ ಸ್ತ್ರೀಯರು ಪಾತಿವ್ರತ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ಆದರ್ಶವನ್ನು ಮೆರೆದಿದ್ದಾರೆ. ೧ನೆಯ ಲಕ್ಷ್ಮೀದೇವನ ಮಡದಿ ಚಂದಲದೇವಿ ಸಾರ್ವಜನಿಕರ ಎದುರು 'ಘಟಸರ್ಪವಿಜಯ'

ಕೈಗೊಂಡು ದಿವ್ಯ ಮೆರೆದಿದ್ದಾಳೆ.[೭೨] ಇದು ರಾಯಬಾಗದ ಕ್ರಿ.ಶ. ೧೧೨೭ರ ಶಾಸನದಲ್ಲಿ–

ಆ ನೃಪನ ಮನೋವಲ್ಲಭೆ ಭೂನುತಸಚ್ಚರಿತೆ ಚಂದ್ರಿಕಾದೇವಿ
ಮಹದ್ದಾನೆ ಘಟಸರ್ಪ್ಪ ವಿಜಯಜ ಯಾನಕರವಜನಿತ
ಜನಮನೋಮುದೆ ಜಗದೊಳ್ ॥

ಎಂದು ದಾಖಲಾಗಿದೆ.[೭೩] ಈ ನಾಡಿನಲ್ಲಿ ಬಹುಪತ್ನಿತ್ವ ಪದ್ಧತಿ ಪ್ರಚಲಿತದಲ್ಲಿದ್ದಂತೆ ತೋರುತ್ತದೆ. ಆಳರಸರು ಬಹುಪತ್ನಿವಲ್ಲಭರಾಗಿ ಹಿರಿಯವಳನ್ನು ಪಟ್ಟದರಸಿಯಾಗಿ, ಉಳಿದವರನ್ನು ರಾಣಿಯರನ್ನಾಗಿಸಿದ ಉದಾಹರಣೆಗಳು ಇಲ್ಲಿಯ ಶಾಸನದಲ್ಲಿವೆ. ಸವದತ್ತಿಯ ರಟ್ಟ ಮನೆತನದ ಲಕ್ಷ್ಮೀದೇವನಿಗೆ 'ಚಂದಲದೇವಿ ಮತ್ತು ಲಕ್ಷ್ಮೀದೇವಿ' ಎಂಬ ಇಬ್ಬರು ರಾಣಿಯರಿದ್ದರು. ಇವರಿಬ್ಬರೂ ಹೊಂದಾಣಿಕೆಯ ಗುಣದಿಂದ ಸಾಮರಸ್ಯ ಜೀವನ ನಡೆಸುತ್ತಿದ್ದರು. ಈ ನಾಡಿನಲ್ಲಿ ಕೆಲವು ಕುಟಿಲ ಸ್ತ್ರೀಯರೂ ಇದ್ದರು. ಇದಕ್ಕೆ ಅಂಗಳಕೆ, ತೆಲೆವಾಗಿಲಿಗೆ ಒನಸೆಗೆ, ನೊಂಪಿಗೆ, ಅಂಗಡಿಗೆ, ಬಾಡಿನ ಸಂತೆಗೆ, ಬಾಯಿನಕ್ಕೆ ಎಂದು ಹೋಗಿ ಪರಪುರುಷನೊಂದಿಗೆ ನೆರೆಯುವ, ವಾಚಾಳಿಯಾಗಿ ದುಚ್ಚರಿತೆಯಿಂದ ಪತಿಯನ್ನು ನಿಂದಿಸುವ, ತನ್ನ ಪತಿಯನ್ನು ವಶಪಡಿಸಿಕೊಳ್ಳಲು ಹತ್ತಾರು ಔಷಧಗಳನ್ನು ನೀಡಿ ಅವನನ್ನು ಬ್ರಮಿಷ್ಠರನ್ನಾಗಿ ಮಾಡಿ, ತಮ್ಮ ಅಂಗಸುಖವನ್ನು ಹಿಂಗಿಸುವದು, ಅದಕ್ಕೆ ವಶರಾಗದವರಿಗೆ ವಿಷಪ್ರಯೋಗ ಮಾಡಿ ಜೀವಕ್ಕೆ ಅಪಾಯ ಒಡ್ಡುವಂತಹ ಕುಟಿಲೆ, ಕುಮಾರ್ಗೆ, ಕುತ್ಸಿತೆ, ಕೂರೂಪಿ, ಕುಭಾಗ್ಯ, ಕುಶೀಲೆ, ಜಿಹ್ವಾಲಂಪಟೆ, ಶಠೆ, ಧೂರ್ತೆ, ದುರ್ಗುಣಿ, ದುರಾಣ್ವಿತೆ, ದುರ್ಜನೆ, ದುಷ್ಟೇ ಎಂಬುವರನ್ನು ಮೈಳಲದೇವಿಯೊಂದಿಗೆ ಹೋಲಿಸಬಾರದೆಂದು ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿರುವ ಪ್ರಸ್ತಾಪವು ಪರೋಕ್ಷ ನಿದರ್ಶನವಾಗಿದೆ.[೭೪]

ಕೂಹುಂಡಿನಾಡಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸೂಳೆ ಪದ್ಧತಿ ಬೆಳೆದು ಬಂದಿರುವುದಕ್ಕೆ ಸಮಕಾಲೀನ ಕೆಲವು ಶಾಸನಗಳಲ್ಲಿ ಕುರುಹುಗಳು ದೊರೆಯುತ್ತವೆ. ಈ ಪದ್ಧತಿಯಲ್ಲಿ ವ್ಯಕ್ತಿನೊಬ್ಬನಿಗಿದ್ದ ವ್ಯಕ್ತಿಸೂಳೆ, ದೇವರ ಹೆಸರಿನಲ್ಲಿ ಬಿಟ್ಟ ದೇವಸೂಳೆ, ಹಣಕ್ಕಾಗಿ ದೇಹ ಮಾರುವ ಸಮಾಜಸೂಳೆ ಎಂಬ ಮೂರು ವರ್ಗಗಳಿದ್ದವು. ದೇವಸೂಳೆಯರು ದೇವಾಲಯಗಳಲ್ಲಿ ಅಜನ್ಮಪರ್ಯಂತ ದೇವರ ಅನನ್ಯ ಸೇವೆಗೈಯುತ್ತ (ನರ್ತನ, ಸಂಗೀತ, ದೇವಾಲಂಕಾರ, ಪೂಜೆ, ಪ್ರಸಾದ ವಿನಿಯೋಗ ಇತ್ಯಾದಿ) ಬಾಳುತ್ತಿದ್ದರು. ಆಳರಸರಾದಿ ಅಧಿಕಾರಿಗಳು ದೇವಾಲಯಗಳಿಗೆ ದಾನ–ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭದಲ್ಲಿ ಸೂಳೆಯರಿಗೂ ದಾನ ಕೊಟ್ಟು ಪ್ರೋತ್ಸಾಹಿಸುತ್ತಿದ್ದರು.[೭೫] ಇಲ್ಲಿಯ ಕೆಲವು ಆಳರಸರು ತಾವು 'ವೇಶ್ಯಭುಜಂಗರೆಂದು' ಕರೆದುಕೊಂಡಿದ್ದಾರೆ.[೭೬] ಇದು ಸೂಳೆಗೇರಿಗಳ ಅಸ್ತಿತ್ವವನ್ನು ಸೂಚಿಸುತ್ತದೆ. ಇಲ್ಲಿ ಅನುವಂಶೀಕವಾಗಿ ಸೂಳೆಯ ಮಗಳು ಸೂಳೆಯೇ ಆಗುತಿದ್ದಳು.

ಅಂಥವೇಶ್ಯಯ ಧರ್ಮ ಸಂತತಿಯು ಮೈದರಸನಸೂಳೆ
ಕಾಡಬ್ಬೆ ಕಾಡಬ್ಬೆಯ ಮಗಳೆ ಕಳಿಂಗಬ್ಬೆ ಕಳಿಗಂಬ್ಬೆ
ಯಮಗಂಪರತಯ್ಯ ಇಂತು ಪಾರಂಪರ್ಯಯ

ಮೆಡವರಿಯದೆಬಂದ ಧರ್ಮಸಂತತಿ ||

ಎಂದು ಶಾಸನಗಳಲ್ಲಿ ನಿರೂಪಣೆಯಿದೆ.[೭೭] ಈ ನಾಡಿನ ಕೆಲವು ಸ್ತ್ರೀಯರು ಜೀವನದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ವಿವಿಧ ಕ್ಷೇತ್ರಗಳಲ್ಲಿ ದುಡಿದು ಹಣ ಸಂಪಾದಿಸುತ್ತಿದ್ದರು. ಹೂವಾಡಗಿತ್ತಿಯರು ಹೂ ಮಾರುತ್ತಿದ್ದರು. ಕೃಷಿ ಕುಟುಂಬದ ಸ್ತ್ರೀಯರು ಕೃಷಿಯಲ್ಲಿ ಪುರುಷರಿಗೆ ಸಹಾಯ ಮಾಡುತ್ತಿದ್ದರು.

೪.೬. ನಂಬುಗೆ-ಸಂಪ್ರದಾಯಗಳು

ಮಾನವನ ನಿತ್ಯವ್ಯವಹಾರದ ಪದ್ಧತಿಗಳೂ ಮತ್ತು ಇವುಗಳ ಹಿನ್ನೆಲೆಯಲ್ಲಿರುವ ಕಲ್ಪನೆಗಳೂ, ಉದ್ದೇಶಗಳೂ ಕಲೆತು ಸಂಪ್ರದಾಯಗಳಾಗಿ ರೂಪುಗೊಂಡವು. ಹಾಗೆಯೇ ನಂಬುಗೆಗಳು ಮನಸ್ಸಿನ ಪ್ರಕ್ರಿಯೆಗಳಾಗಿವೆ. ಅಂತಾಗಿ ಮಾನವನ ಜೀವನವು ಹೆಚ್ಚಾಗಿ ಸಂಪ್ರದಾಯ ಮತ್ತು ನಂಬುಗೆಗಳ ಮೇಲೆ ನಿಂತಿದೆ. ಈ ನಿಟ್ಟಿನಲ್ಲಿ ಆಯಾ ದೇಶ, ನಾಡು, ಕಾಲಕ್ಕನುಸರಿಸಿ ಸಮಾಜವು ಕೆಲವು ನಂಬುಗೆ-ಸಂಪ್ರದಾಯಗಳನ್ನು ರೂಢಿಸಿಕೊಂಡು ಬೆಳೆಸಿಕೊಂಡು ಬಂದಿದೆ.[೭೮] ಕೂಹುಂಡಿನಾಡಿನಲ್ಲಿ ಆಳರಸರು, ಅಧಿಕಾರಿಗಳು, ಪ್ರಜೆಗಳು ತಮ್ಮ ಶ್ರೇಯಸ್ಸಿಗಾಗಿ ಮತ್ತು ಪುಣ್ಯಾರ್ಜನೆಗಾಗಿ ದಾನಗಳನ್ನು ಕೊಡುವ ಮೌಲ್ಯವನ್ನು ರೂಢಿಸಿಕೊಂಡಿದ್ದರು. ಇಲ್ಲಿಯ ಆಳರಸರು ದಾನ, ಧರ್ಮ, ಹೋಮ-ಹವನಾದಿಗಳನ್ನು ಸಾಮಾನ್ಯವಾಗಿ ಪುತ್ರೋತ್ಸವ, ಜಾತಕರ್ಮ, ಪಟ್ಟಾಭಿಷೇಕ, ವರ್ಧಂತಿ ಮೊದಲಾದ ಸಂದರ್ಭಗಳಲ್ಲಿ ಮಾಡುತ್ತಿದ್ದರು. ದಾನ ಕೊಡಲು ಹಬ್ಬ-ಹರಿದಿನ, ಸೂರ್ಯಗ್ರಹಣ, ಚಂದ್ರಗ್ರಹಣ ದಿನಗಳು ಪ್ರಶಸ್ತವೆನ್ನುವ ನಂಬಿಕೆಯಿತ್ತು. ಇಂತಹ ಚಟುವಟಿಕೆಗಳು ಸಾಮಾನ್ಯವಾಗಿ ದೇವಾಲಯಗಳು ಮತ್ತು ಬಸದಿಗಳ ಪರಿಸರದಲ್ಲಿ ನಡೆಯುತ್ತಿದ್ದವು. ಕೂಹುಂಡಿನಾಡಿನ ಬೆಳಗಾವಿ, ಕಲ್ಲೊಳೆ, ಯಕ್ಸಂಬಾ, ತೇರದಾಳ ಮೊದಲಾದ ಕೆಲವು ಶಾಸನಗಳಲ್ಲಿ ಈ ವಿಚಾರಗಳನ್ನು ಗುರುತಿಸಬಹುದಾಗಿದೆ.[೭೯] ಸಮಕಾಲೀನ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಉದ್ದೇಶದಿಂದ ಪುಣ್ಯ-ಪಾಪ, ಸ್ವರ್ಗ-ನರಕಗಳ ಕಲ್ಪನೆಗಳು ನಂಬುಗೆಗಳಾಗಿ ರೂಢಿಯಲ್ಲಿವೆ. ಇಲ್ಲಿಯ ಬಹುತೇಕ ಶಾಸನಗಳ ಫಲಶ್ರುತಿಗಳಲ್ಲಿ ಸಾಮಾನ್ಯವಾಗಿ ಪಂಚಮಹಾಪಾತಕದ ಪ್ರಸ್ತಾಪವಿದೆ. ಇವುಗಳ ಮುಖ್ಯ ಉದ್ದೇಶ ಕೊಟ್ಟ ದಾನವು ಅಪಹೃತವಾಗದೇ ಶಾಶ್ವತವಾಗಿ ಉಳಿಯಬೇಕು ಎಂಬುದಾಗಿದೆ.

೪.೭. ಹಬ್ಬ-ಹರಿದಿನಗಳು

ಹಬ್ಬ ಎಂಬ ಪದವು ಪರ್ವ (ಸಂಸ್ಕೃತ), ಪಬ್ಬ (ಪ್ರಾಕೃತ), ಹಬ್ಬ (ಕನ್ನಡ) ಎಂದು ಬಳಕೆಯಲ್ಲಿದೆ. ಮೂಲತಃ ಸಂಸ್ಕೃತದಿಂದ ಪ್ರಾಕೃತ ಪದವಾಗಿ ಕನ್ನಡಕ್ಕೆ ಬಂದಿದೆ. ಕನ್ನಡನಾಡಿನ ಚರಿತ್ರೆ ಮತ್ತು ಸಂಸ್ಕೃತಿಯಲ್ಲಿ ಹಬ್ಬ-ಹರಿದಿನಗಳು ಜನಜೀವನದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ. ಈ ಮೂಲಕ ಧಾರ್ಮಿಕ ಶ್ರದ್ಧೆಗಳು ಜನಸಾಮಾನ್ಯರಲ್ಲಿ ಹಾಸುಹೊಕ್ಕಾಗಿವೆ. ಇಂತಹ ಧಾರ್ಮಿಕ ಹಿನ್ನೆಲೆಯುಳ್ಳ ಕೆಲವು ಹಬ್ಬಗಳು ಕೂಹುಂಡಿನಾಡಿನ ಪ್ರದೇಶದಲ್ಲಿ ಆಚರಣೆಯಲ್ಲಿದ್ದುದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಪ್ರಮುಖವಾದ ಹಬ್ಬ-ಹರಿದಿನಗಳು ಈ ಕೆಳಗಿನಂತಿವೆ.

೪.೭.೧. ಹೆಜ್ಜುಗೆ ಹಬ್ಬ

ರೈತರು ಕಾರಹುಣ್ಣಿಮೆಯ ಮುನ್ನಾದಿನ ಆಚರಿಸುವ 'ಹೊನ್ನುಗ್ಗಿ' ಎಂದು ಕರೆಯುವ ಹಬ್ಬವೇ ಹೆಜ್ಜುಗೆ ಹಬ್ಬವಾಗಿದೆ. ಜೂನ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗಿ ಕೃಷಿ ಚಟುವಟಿಕೆಗಳು

ಚಾಲನೆಗೊಳ್ಳುತ್ತವೆ. ರೈತರು ಹೊಸ ಕೃಷಿ ಚಟುವಟಿಕೆಗಳ ಪ್ರಾರಂಭಕ್ಕೆ ಮುಂಚೆ ಕಾರಹುಣ್ಣಿಮೆಯ ಹಿಂದಿನ ದಿನ ತಮ್ಮ ಎತ್ತುಗಳ ಮೈತೊಳೆದು, ಅವುಗಳಿಗೆ ಬಣ್ಣ ಹಚ್ಚುವ ಮೂಲಕ ಶೃಂಗರಿಸಿ ನೂತನ ಕೃಷಿ ಚಟುವಟಿಕೆಗಳಿಗೆ ಸಜ್ಜುಗೊಳಿಸುತ್ತಾರೆ. ಸಮಕಾಲೀನ ಶಾಸನಗಳಲ್ಲಿ ಈ ಹಬ್ಬವನ್ನು 'ಹೆಜ್ಜುಗೆಯ ಹಬ್ಬ' ಎಂದು ಕರೆಯಲಾಗಿದೆ.[೮೦]

೪.೭.೨. ಕಾರ್ತಿಕೋತ್ಸವ ಮತ್ತು ದೀಪಾವಳಿ ಹಬ್ಬಗಳು

ಕೂಹುಂಡಿನಾಡಿನಲ್ಲಿ ಕಾರ್ತಿಕೋತ್ಸವ ಮತ್ತು ದೀಪಾವಳಿ ಹಬ್ಬಗಳು ಪವಿತ್ರವಾಗಿವೆ. ಈ ಹಬ್ಬಗಳು ನವೆಂಬರ ಮತ್ತು ಡಿಸೆಂಬರ ತಿಂಗಳುಗಳಲ್ಲಿ ಬರುತ್ತವೆ. ಕಾರ್ತಿಕೋತ್ಸವದಲ್ಲಿ ಒಂದು ತಿಂಗಳು ದೇವಾಲಯಗಳ ಮುಂಭಾಗದ ಮಾಲೆಗಂಬದ (ದೀಪಸ್ತಂಭ) ಮೇಲೆ ದೀಪವನ್ನು ಉರಿಸಲಾಗುತ್ತದೆ. ಇದು ನಿರಂತರವಾಗಿ ಒಂದು ತಿಂಗಳು ನಡೆಯುವ ಕಾರ್ಯಕ್ರಮವಾಗಿದೆ. ದೀಪಾವಳಿ ಹಬ್ಬದಲ್ಲಿ ಸಹೋದರಿಯರು ತಮ್ಮ ಸಹೋದರರಿಗೆ ಶುಭ ಕೋರಿ ಆರತಿ ಬೆಳಗುವ ಪದ್ಧತಿಯಿದೆ. ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ–

> ದೀಪಾವಳಿಯ ಪರ್ವ್ವಕ್ಕೆ ದೇವರ ಸೊಡರಿಂಗೆ
> ಗಾಣದಲೊಮ್ಮಾನೆಣ್ಣೆ ॥

ರಟ್ಟ ಮನೆತನದ 'ಪಟ್ಟಜಿನಾಲಯ'ಕ್ಕೆ ದಾನವನ್ನು ಕೊಡುವಾಗ ದೀಪಾವಳಿ ಹಬ್ಬದಲ್ಲಿ ದೇವರ ಸನ್ನಿಧಿಯಲ್ಲಿ ಹಚ್ಚುವ ದೀಪಕ್ಕೆ ಎಣ್ಣೆದಾನ ಎಂಬ ನಿರೂಪಣೆಯಿದೆ.[೮೧] ಈ ನಾಡಿನಲ್ಲಿ ದೀಪಾವಳಿ ಹಬ್ಬದಂದು ದೇವಾಲಯಗಳು ಮತ್ತು ಬಸದಿಗಳಿಗೆ ದಾನ–ದತ್ತಿಗಳನ್ನು ಕೊಡಮಾಡಿದ ಅನೇಕ ಉದಾಹರಣೆಗಳಿವೆ.

೪.೭.೩. ರಕ್ಷಾ ಬಂಧನ ಹಬ್ಬ

ಕೂಹುಂಡಿನಾಡಿನ ಹಲವು ಹಬ್ಬಗಳಲ್ಲಿ ರಕ್ಷಾ ಬಂಧನ ಹಬ್ಬವೂ ಒಂದಾಗಿದೆ. ಇದು ಸಹೋದರಿಯರು ತಮ್ಮ ರಕ್ಷಣೆಯ ಸಂಕೇತವಾಗಿ ಸಹೋದರರ ಕೈಗೆ ರಕ್ಷೆಯನ್ನು ಕಟ್ಟುವುದರ ಮೂಲಕ ಸಹೋದರ–ಸಹೋದರಿಯ ಭಾವನೆಯನ್ನು ವ್ಯಕ್ತಪಡಿಸುವ ಹಬ್ಬವಾಗಿದೆ. ಇದು ಸಹೋದರ–ಸಹೋದರಿಯರ ಭಾವನಾತ್ಮಕ ಸಂಬಂಧಗಳನ್ನು ಬೆಸೆಯುವ ಹಬ್ಬವಾಗಿದೆ. ಕೂಹುಂಡಿನಾಡಿನಲ್ಲಿ ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲದಲ್ಲಿ ರಕ್ಷಾ ಬಂಧನ ಹಬ್ಬವನ್ನು ಆಚರಿಸುತಿದ್ದ ಕುರಿತಾಗಿ ಕೆಲವು ಶಾಸನಾಧಾರಗಳಿವೆ.[೮೨]

೪.೭.೪. ಹೋಳಿ ಹಬ್ಬ

ಕೂಹುಂಡಿನಾಡಿನಲ್ಲಿ ಹೋಳಿ ಹಬ್ಬವು ವಿಶೇಷವಾಗಿತ್ತು. ಇದು ಇಂದಿಗೂ ವೈಭವಯುತವಾಗಿ ಆಚರಣೆಯಲ್ಲಿದೆ. ಈ ಹಬ್ಬದ ಸಂದರ್ಭದಲ್ಲಿ ಕಾಮದಹನ ಮಾಡಲಾಗುತ್ತದೆ. ಈ ನಾಡಿನಲ್ಲಿ ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಈ ಹಬ್ಬವು ವಿಶೇಷವಾಗಿ ಆಚರಿಸಲ್ಪಡುತಿತ್ತು. ಸಮಕಾಲೀನ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ 'ಕಾಮದಹನಂ' ಎಂಬ ಪ್ರಸ್ತಾಪವಿದೆ.[೮೩]

೪.೭.೫. ಸಂಕ್ರಾಂತಿ

ಸಂಕ್ರಾಂತ್ರಿಯಂದು ಸೂರ್ಯನು ತನ್ನ ಚಲನೆಯಲ್ಲಿ ಉತ್ತರಾಯಣದಿಂದ ದಕ್ಷಿಣಾಯಣದತ್ತ ವಾಲತೊಡಗುತ್ತಾನೆ. ಅಂದರೆ ಕಾಲದ ಋತುಚಕ್ರ ಚಳಿಗಾಲದಿಂದ ಬೇಸಿಗೆಗೆ ಕಾಲಿಡುವ ಸೌರ ವ್ಯವಸ್ಥೆಯನ್ನು 'ಸಂಕ್ರಾಂತಿ' ಎಂದು ಕರೆಯಲಾಗುತ್ತದೆ. ಈ ದಿನ ಜನಸಾಮಾನ್ಯರು ನದಿಗಳಲ್ಲಿ ಪುಣ್ಯ ಸ್ನಾನ ಮಾಡುವುದು ಮತ್ತು ದೇವಾಲಯ, ಬಸದಿಗಳ ಧಾರ್ಮಿಕ ಕಾರ್ಯಗಳಿಗೆ ದಾನ ಮಾಡುವ ಪರಂಪರೆಯಿದೆ. ಕೂಹುಂಡಿನಾಡಿನ ಬಹುತೇಕ ಶಾಸನಗಳಲ್ಲಿ ಸಂಕ್ರಾಂತಿಯ ಪ್ರಸ್ತಾಪವಿದೆ.[೮೪] ಅಂದು ದಾನ ಕೊಡಲು ಸಂಕ್ರಾಂತಿ ಶುಭಸೂಚಕ ದಿನವೆಂಬ ನಂಬಿಕೆ ಇದ್ದಿತು. ಹೀಗೆ ಕೂಹುಂಡಿನಾಡಿನ ಹಲವು ಶಾಸನಗಳಲ್ಲಿ ಸಮಕಾಲೀನ ಹಬ್ಬ-ಹರಿದಿನಗಳ ನಿರೂಪಣೆಯಿದೆ. ಇಲ್ಲಿಯ ಕೆಲವು ದೇವಾಲಯಗಳು ಮತ್ತು ಬಸದಿಗಳಲ್ಲಿ ಜರುಗುತ್ತಿದ್ದ ಚೈತ್ರ ಮತ್ತು ಪವಿತ್ರ ಹಬ್ಬಗಳಿಗೆ ದಾನವನ್ನು ಕೊಡಲಾಗಿದೆ. ಹಾಗೆಯೇ ಇಲ್ಲಿಯ ಶಾಸನಗಳಲ್ಲಿ ಉತ್ತರಾಯಣ ಸಂಕ್ರಮಣ, ದೀಪಾವಳಿಪರ್ವ, ಯುಗಾದಿಪರ್ವ ಮೊದಲಾದ ದಿನಗಳು ಮತ್ತು ಹಬ್ಬಗಳ ಪ್ರಸ್ತಾಪಗಳಿವೆ.[೮೫]

೪.೮. ಆಹಾರ-ಪಾನೀಯಗಳು

ಮಾನವನ ಬದುಕಿನ ಮುಖ್ಯ ಜೀವನಾಂಶಗಳಾದ ಆಹಾರದ ಉತ್ಪಾದನೆ ಮತ್ತು ಬಳಕೆ ಮನುಷ್ಯನ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಬೆಳವಣಿಗೆಯನ್ನು ಸೂಚಿಸುವ ಪ್ರಮುಖ ಅಂಶಗಳಾಗಿವೆ. ಇತಿಹಾಸಪೂರ್ವ ಕಾಲಾವಧಿಯ ಸರಳ ಆಹಾರ ಪದ್ಧತಿ ಹಾಗೂ ಇಂದಿನ ಜಟಿಲ ಆಹಾರ ಪದ್ಧತಿ ಮಾನವನ ದೇಹಶಕ್ತಿ ಮತ್ತು ಬುದ್ಧಿಶಕ್ತಿ ವೃದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ. ಅಡುಗೆಯ ವಿಧಾನವು ಒಂದು ನಾಡಿನ ಇಲ್ಲವೆ ಪ್ರದೇಶದ ಸಂಸ್ಕೃತಿಯ ಪರಂಪರೆಯನ್ನು ಸೂಚಿಸುತ್ತದೆ. ಅಡುಗೆಗೆ ಬಳಸುವ ವಸ್ತುಗಳು, ತಯಾರಿಸುವ ವಿಧಾನ, ಉಪಯೋಗಿಸುವ ಬಗೆ, ಶೇಖರಿಸಿಡುವ ರೀತಿ, ಅಡುಗೆಗಳ ಪ್ರಕಾರಗಳು ದೇಶದಿಂದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಸಮಾಜದಿಂದ ಸಮಾಜಕ್ಕೆ, ಕಾಲದಿಂದ ಕಾಲಕ್ಕೆ ವಿಭಿನ್ನತೆ ಮತ್ತು ವೈವಿಧ್ಯತೆಯನ್ನು ಹೊಂದಿರುತ್ತವೆ. ಯಾವುದೇ ಸಮಾಜವು ಸ್ಥಳೀಯ ಭೌಗೋಳಿಕ ಪರಿಸರಕ್ಕೆ ಹೊಂದಿಕೊಳ್ಳುವುದರೊಂದಿಗೆ ತನಗೆ ವಿಶಿಷ್ಟವಾದ ಪರಂಪರೆಯನ್ನೂ ನಿರ್ವಹಿಸಿಕೊಳ್ಳುತ್ತದೆ. ಕೂಹುಂಡಿನಾಡಿನ ಪ್ರದೇಶದ ಶಾಸನಗಳಲ್ಲಿ ನೇರವಾಗಿ ಆಹಾರ-ಪಾನೀಯಗಳ ಪ್ರಸ್ತಾಪಗಳು ಗೋಚರಿಸುವುದಿಲ್ಲ. ಆದರೆ ಬೆಳಗಾವಿ, ಕಲ್ಹೊಳೆ. ತೇರದಾಳ, ಯಕ್ಸಂಬಾ, ಹಣ್ಣಿಕೇರಿ, ಬೆಳವಡಿ, ಸವದತ್ತಿ, ರಾಯಬಾಗ ಮೊದಲಾದ ಕೆಲವು ಶಾಸನಗಳಲ್ಲಿ ದೇವಾಲಯಗಳು ಮತ್ತು ಬಸದಿಗಳಿಗೆ ದಾನ-ದತ್ತಿಗಳನ್ನು ಕೊಡಮಾಡುವ ಮತ್ತು ವ್ಯಾಪಾರದ ಸಂದರ್ಭದಲ್ಲಿ ಭತ್ತ, ಬೇಳೆ, ಬೆಲ್ಲ, ಅರಿಷಿಣ, ಮೆಣಸು, ಅಜವಾನ, ಅಲ್ಲ, ಎಣ್ಣೆ ಮೊದಲಾದ ವಸ್ತುಗಳ ನಿರೂಪಣೆಗಳಿವೆ.[೮೬] ಇದಕ್ಕೆ ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿರುವ-

ಸುಗಂಧವರ್ತ್ತಿಯ ಹಂನಿರ್ವ್ವರ್ಗಾವುಂಡುಗಳು ಮುಖ್ಯಸ್ಥಳ
ಸಮಸ್ತನಖರ ಮುಂಮುರಿದಂಡಂಗಳು ಸನ್ತೆಯ ದೇವಸ

ಮಹಾಸಭೆಯಾಗಿರ್ದು ತಂಮೊಳ್ಯೆಕಮತ್ಯವಾಗಿ ಆ ಮಲ್ಲಿನಾಥ
ದೇವರಿಗೆ ಬಿಟ್ಟ ಆಯವೆಂದೆಡೆ ಎಲೆಯ ಹೇಱಿಂಗೆ ನೂಱೆಲೆಯ
ಕೊಟ್ಟರು ಊರೊಳಗೆಯುಂ ಸನ್ತೆಯೊಳಗೆಯುಂ ಮಾಱುವ
ಧಾನ್ಯವರ್ಗ್ಗದಲುಂ ಭತ್ತವಸರದಲುಂ ಸಟ್ಟುಗ ಭತ್ತಮಂ ಕೊಟ್ಟರು
ಪಸಾರಕ್ಕೆರಡಡಕೆಯ ಕೊಟ್ಟರು ಅಲ್ಲ ಬೆಲ್ಲ ಅರಸಿನ ಮೊದಲಾಗಿ
ಕಿಱುಕುಳವೆಲ್ಲವಂ ಪಸಾರಕ್ಕೊಂದೊಂದ ಕೊಟ್ಟರು............

ಪ್ರಸ್ತಾಪವು ಉತ್ತಮ ನಿದರ್ಶನವಾಗಿದೆ. ಹಾಗೆಯೇ ಇಲ್ಲಿಯ ದೇವರಿಗೆ ಸಲ್ಲಿಸಿರುವ ವಿವಿಧ ದಾನಧರ್ಮ ಸೇವೆಗಳಲ್ಲಿ ವೀಳೆ-ಅಡಕೆಗಳೂ ಪ್ರಮುಖವಾಗಿವೆ.

೪.೯. ಸಾರ್ವಜನಿಕ ಚಟುವಟಿಕೆಗಳು

ಕೂಹುಂಡಿನಾಡಿನ ಪ್ರದೇಶದ ಜನತೆಯು ಧರ್ಮಪಾಲನೆಯ ಜೊತೆಗೆ ಲೌಕಿಕ ಕಟ್ಟಳೆಗಳನ್ನೂ ಪಾಲಿಸಿಕೊಂಡು ಬಂದಿದ್ದಾರೆ. ಇವುಗಳೊಂದಿಗೆ ಸಾಮಾಜಿಕ ಜೀವನದಲ್ಲಿ ಜಾತಿ, ಮತ ಪಂಥವನ್ನು ಮೀರಿದ ಸತ್ಕಾರ್ಯಗಳಿಂದ ಪುಣ್ಯವನ್ನು ಸಂಪಾದಿಸುವ ಸೇವೆ ಮತ್ತು ತ್ಯಾಗ ಮನೋಭಾವನೆಯನ್ನು ಮೆರೆಯುವ ಸಾರ್ವಜನಿಕ ಚಟುವಟಿಕೆಗಳನ್ನು ಕೈಕೊಂಡಿದ್ದಾರೆ. ಈ ಕಾರ್ಯಗಳಿಗೆ ಆಳರಸರಾದಿ ಅಧಿಕಾರಿಗಳು ಉದಾರವಾಗಿ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ. ಮಾನವನ ಬದುಕಿಗೆ ಗಾಳಿ, ನೀರು, ಅನ್ನ ಪ್ರಮುಖವಾದವುಗಳು. ಜೀವನಾವಶ್ಯಕತೆಗಳು ಹೆಚ್ಚಿದಂತೆ ಜೀವನ ಹೊಸ ಆಯಾಮಗಳನ್ನು ಪಡೆಯುತ್ತದೆ. ಅಂತಾಗಿ ಇಲ್ಲಿಯ ಆಳರಸರು ನೀರಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ. 'ಕನ್ನಡಿಗರ ಔದಾರ್ಯವು ಮುಖ್ಯವಾಗಿ ಪ್ರಕಟವಾಗಿರುವುದು ಒಂದು ದೇವಾಲಯಗಳ ನಿರ್ಮಾಣದಲ್ಲಿ, ಮತ್ತೊಂದು ತಟಾಕಗಳ ನಿರ್ಮಾಣದಲ್ಲಿ' ಎಂಬುದು ಅಷ್ಟೇ ಸತ್ಯವಾದುದು.[೮೭] ಹೀಗಾಗಿ ಇಲ್ಲಿನ ಪ್ರಜೆಗಳನ್ನು ವೀರ ಮತ್ತು ತ್ಯಾಗ ಮೌಲ್ಯಗಳು ಆಶ್ರಯಿಸಿ ಬೆಳೆದು ಬಂದಿವೆ.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ
ಮಾಡಿಸಜ್ಜರೆಯೊಳ್ಸಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುದಕೆಯ
ನಂಬಿದರ್ಗ್ಗೆಡೆವಟ್ಟಾಗಿರು ಶಿಷ್ಯಪರುಪೊರೆಯನುತ್ತಿಂತೆಲ್ಲಮಪಿಂದೆತಾಂ
ಯೆರದಳ್ಪಾತಿರವೆಂದು ತೊಟ್ಟು ಕಿವಿಯೊಳ್ ಲಕ್ಷೀಧರಾಮಾತ್ಯನು ॥

ಲಕ್ಷ್ಮೀಧರಾಮಾತ್ಯನ ತಾಯಿ ತನ್ನ ಮಗುವಿಗೆ ಹಾಲುಣಿಸುತ್ತ ಹೇಳುವ ಈ ಮೇಲಿನ ಮಾತುಗಳು ಇಲ್ಲಿಯ ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳಿಗೂ ಹೊಂದುತ್ತದೆ.[೮೮] ಇಂಥ ಉನ್ನತ ಪರಂಪರೆಯಲ್ಲಿ ಬದುಕಿದ ಕೂಹುಂಡಿನಾಡಿನ ಜನಸಾಮಾನ್ಯರೂ ಇದಕ್ಕೆ ಹೊರತಾಗಿಲ್ಲ. ರಾಯಬಾಗದ ಕ್ರಿ.ಶ. ೧೧೪೦ರ ಶಾಸನದಲ್ಲಿ-

ಕೆರೆ ಬಾವಿ ಸತ್ರಮೆಱೆಯಿಸು ವಱವಟಗೆ
ಪುರಪ್ರದೇಶಪರಿಸರದೊಳ್ ಕಿಕ್ಕಿಱಿದಿಱಿದಾರವೆಗಳುಮ.....
ನೆಱೆ ತಂನಿಂದೊಳವಿಂ ನಮಳ........ಪ್ರಭುಗಳ್ ॥

ಎಂದು ಪ್ರಭುಗಾವುಂಡ ಹೆಮ್ಮರಸನು ಮಾಡಿರುವ ಸಾರ್ವಜನಿಕ ಚಟುವಟಿಕೆಗಳ ಪ್ರಸ್ತಾಪವಿದೆ.[೮೯]

ಕೂಹುಂಡಿನಾಡಿನ ಆಳರಸರು, ಅಧಿಕಾರಿಗಳು ತಮ್ಮ ಅಥವಾ ಇನ್ನಾವುದೋ ಹೆಸರಿನಲ್ಲಿ ದೇವಾಲಯಗಳು ಮತ್ತು ಬಸದಿಗಳನ್ನು ನಿರ್ಮಿಸಿ ಅವುಗಳ ನಿತ್ಯಪೂಜೆ, ಅರ್ಚನೆ, ಅಂಗಭೋಗ, ರಂಗಭೋಗ, ಸಂಕ್ರಾಂತಿಪರ್ವ, ನಿತ್ಯನೈವೇದ್ಯ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಭೂಮಿ, ಧಾನ್ಯ, ತೋಟ ಇತ್ಯಾದಿಯನ್ನು ದಾನ ಮಾಡಿದ ಉದಾಹರಣೆಗಳು ಇಲ್ಲಿಯ ಶಾಸನಗಳಲ್ಲಿ ಹೇರಳವಾಗಿ ಸಿಗುತ್ತವೆ. ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಸೇವಕನಾದ ಹೆಬ್ಬೆಯನಾಯಕ ಮತ್ತು ಅವನ ಮಡದಿ ಕಾಳವ್ವೆ ದಂಪತಿಯ ಪುತ್ರ ಬಾಚೆಯನಾಯಕ ಮತ್ತು ಈತನ ಮಡದಿ ಮಾಯಾದೇವಿಯರು 'ಶ್ರೀ ವೀರಭೈರವದೇವರ' ಸೇವಕರಾದ ನೇಸರಗಿಯ ಗೌಡರ ಪ್ರೀತಿಗೆ ಪಾತ್ರರಾಗಿ 'ಹೆಬ್ಬೇಶ್ವರ' ಮತ್ತು 'ಮಾಣಿಕೇಶ್ವರ' ದೇವಾಲಯಗಳನ್ನು ನಿರ್ಮಿಸಿ, ಇವುಗಳಲ್ಲಿ ಲಿಂಗಗಳನ್ನು ಸ್ಥಾಪಿಸಿ ಹೊನ್ನಯ್ಯ ಗುರುಗಳ ಆಜ್ಞೆಯಂತೆ ದೇವರ ನೈವೇದ್ಯ, ತಪೋಧನ ಆಹಾರದಾನ, ಜೀರ್ಣೋದ್ಧಾರಕ್ಕೆ ಕಾರ್ತ್ಯವೀರ್ಯರ ನಿಯಾಮದಿಂದ ಧನ, ಕನಕ, ಭೂಮಿ, ಎಲೆತೋಟಗಳನ್ನು ದಾನ ಮಾಡಿದ್ದಾರೆ.[೯೦] ಇಮ್ಮಡಿ ಲಕ್ಷ್ಮೀದೇವನು ತನ್ನ ತಂದೆ ಮಲ್ಲಿಕಾರ್ಜುನನ ಹೆಸರಿನಲ್ಲಿ ಸವದತ್ತಿಯಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿದ್ದಾನೆ.[೯೧] ಅಂಕರಸನು ಅಂಕೇಶ್ವರ ದೇವಾಲಯವನ್ನು ನಿರ್ಮಿಸಿ ದಾನ ಮಾಡಿದ್ದಾನೆ.[೯೨] ಸಾರ್ವಜನಿಕ ಚಟುವಟಿಕೆಗಳ ಒಂದು ಭಾಗವಾಗಿದ್ದ ವಿದ್ಯೆಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಅಲ್ಲಲ್ಲಿ ವಿದ್ಯಾಛತ್ರಗಳನ್ನು ನಿರ್ಮಿಸಿ ಅವುಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ. ಅಂಕರಸನು ಸವದತ್ತಿಯ ವಿದ್ಯಾಛತ್ರಕ್ಕೆ ಅಗ್ರಹಾರ ಪೂಲಿಯರಸರ (ಇಂದಿನ ಹೂಲಿ) ಮಠದ ನೈಷ್ಠಿಕರ ಮತ್ತು ಮಠದ ಸೋಮೇಶ್ವರಪಂಡಿತದೇವನ ಸನ್ನಿಧಿಯಲ್ಲಿ ಭೂಮಿ, ಹೂದೋಟವನ್ನು ದಾನ ಮಾಡಿದ್ದಾನೆ.[೯೩]

ಹೀಗೆ ಕೂಹುಂಡಿನಾಡಿನ ಪ್ರದೇಶದ ಶಾಸನಗಳಲ್ಲಿ ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ಆಯಾಮಗಳಾದ ಚತುರ್ವರ್ಣಗಳು, ವೃತ್ತಿ ಆಧಾರಿತ ಜಾತಿಗಳು, ಸ್ತ್ರೀಯರ ಸ್ಥಾನಮಾನಗಳು, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳು, ಸಾರ್ವಜನಿಕ ಕಾರ್ಯಗಳು ಸೊಗಸಾಗಿ ಅಭಿವ್ಯಕ್ತವಾಗಿವೆ. ಅವುಗಳು ತಮ್ಮದೆಯಾದ ಅನನ್ಯತೆಯನ್ನು ಉಳಿಸಿಕೊಂಡು ಇಂದಿಗೂ ಮುಂದುವರೆದಿವೆ.

ಅಡಿಟಿಪ್ಪಣಿಗಳು

೧. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು (೧೯೮೫), ಪು. ೮೪.

೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೩. ಕುಂದಣಗಾರ ಕೆ.ಜಿ. (ಸಂ.), ಇನ್‌ಸ್ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.

೪. ಸನ್ಮತಿ ಮಾಸಪತ್ರಿಕೆ (ನವೆಂಬರ್–೧೯೭೮), ಪು. ೩೧೩, ಬಾಹುಬಲಿ ಆಶ್ರಮ ಕುಂಭೋಜ (ಮಹಾರಾಷ್ಟ್ರ).

೫. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೬. ಇ.ಆಯ್. ಸಂ. XIII, ಶಾ.ಸಂ. ೩/ಎ.

೭. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೯೧.

೮. ಇ.ಆಯ್. ಸಂ. XIII, ಶಾ.ಸಂ. ೩/ಎ.

೯. ಅದೇ.

೧೦. ದತ್ತಾ ಎನ್.ಕೆ., ಓರಿಜಿನ್ ಅಂಡ್ ಗ್ರೋಥ್ ಆಫ್ ಕಾಸ್ಟ ಇನ್ ಇಂಡಿಯಾ, ಪು. ೮೫–೮೬.

೧೧. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಪು. ೪೧೩.

೧೨. ಶಾಮಶಾಸ್ತ್ರಿ ಆರ್., ಎವಲೂಶನ್ ಆಫ್ ಇಂಡಿಯನ್ ಪಾಲಿಟಿ, ಪು. ೩೮.

೧೩. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೪೨೯.

೧೪. ಬರ್ನೆಲ್ ಎ.ಸಿ., ದಿ ಆರ್ಡಿನನ್ಸ್ ಆಫ್ ಮನು, ಪು. ೩೧೬–೩೧೭.

೧೫. ಶೇಷ ನವರತ್ನ (ಅನು.), ಮನುಸ್ಮೃತಿ (೨೦೦೦), ಅಧ್ಯಾಯ ೧, ಪ.ಸಂ. ೮೮, ಪು. ೨೦.

೧೬. ಪಂಪಭಾರತ, ಪು. ೧೪–೪೮.

೧೭. ಎಸ್.ಆಯ್.ಆಯ್. ಸಂ. IX, ಪು. ೧೪೨.

೧೮. ಕೆ.ಆಯ್. ಸಂ. V, ಶಾ.ಸಂ. ೯೮.

೧೯. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೯೧.

೨೦. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೪೩.

೨೧. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ" ಕರ್ನಾಟಕ ಭಾರತಿ, ಸಂ. ೧೧/೪, (ನವೆಂಬರ್–೧೯೭೯), ಪು. ೨೯–೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨೨. ಎಸ್.ಆಯ್.ಆಯ್. ಸಂ. XX, ಪು. ೭೫.

೨೩. ಇ.ಆಯ್. ಸಂ. XIII, ಶಾ.ಸಂ. ೩/ಎ.

೨೪. ಕೆ.ಆಯ್. ಸಂ. V, ಶಾ.ಸಂ. ೯೯.

೨೫. ಗುರವ ಆರ್.ಎನ್., ಪೂರ್ವೋಕ್ತ.

೨೬. ಶೇಷ ನವರತ್ನ (ಅನು.), ಪೂರ್ವೋಕ್ತ, ಪ.ಸಂ. ೮೯, ಪು. ೨೦.

೨೭. ಮಹೀಶವಾಡಿ ಬಿ.ಬಿ. (ಸಂ.), ನಯಸೇನ ವಿರಚಿತ ಧರ್ಮಾಮೃತಂ (೧೯೮೪), ಆಶ್ವಾಸ ೨, ಪ.ಸಂ. ೫೩, ಪು. ೬೨.

೨೮. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ (೧೯೯೯), ೨೫೮.

೨೯. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ-೧೯೭೮), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೩೦. ಶೇಷ ನವರತ್ನ (ಅನು.), ಪೂರ್ವೋಕ್ತ, ಪ.ಸಂ. ೯೦, ಪು. ೨೦.

೩೧. ಇ.ಆಯ್. ಸಂ. XIII, ಶಾ.ಸಂ. ೩/ಎ.

೩೨. ಗುರವ ಆರ್.ಎನ್., ಪೂರ್ವೋಕ್ತ.

೩೩. ಕೆ.ಆಯ್. ಸಂ. V, ಶಾ.ಸಂ. ೯೮.

೩೪. ಶೇಷ ನವರತ್ನ (ಅನು.), ಪೂರ್ವೋಕ್ತ, ಪ.ಸಂ. ೯೧, ಪು. ೨೦.

೩೫. ಬಸವರಾಜ ಕೆ.ಆರ್., ಹಿಸ್ಟರಿ ಅಂಡ್ ಕಲ್ಚರ್ ಆಫ್ ಕರ್ನಾಟಕ, ಪು. ೪೫೭.

೩೬. ಕೆ.ಆಯ್. ಸಂ. V, ಶಾ.ಸಂ. ೨೧.

೩೭. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೩೦೦.

೩೮. ಕೆ.ಆಯ್. ಸಂ. V, ಶಾ.ಸಂ. ೨೧.

೩೯. ಇ.ಆಯ್. ಸಂ. XIII, ಶಾ.ಸಂ. ೩/ಎ.

೪೦. ಅದೇ. ಗುರವ ಆರ್.ಎನ್., ಪೂರ್ವೋಕ್ತ.

೪೧. ಇ.ಆಯ್. ಸಂ. XIII, ಶಾ.ಸಂ. ೩/ಎ.

೪೨. ಅದೇ.

೪೩. ಅದೇ.

೪೪. ಅದೇ.

೪೫. ಅದೇ.

೪೬. ಅದೇ.

೪೭. ಗುರವ ಆರ್.ಎನ್., ಪೂರ್ವೋಕ್ತ.

೪೮. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.

೪೯. ಆಯ್.ಎ. ಸಂ. XXXII, ಪು. ೨೧೭.

೫೦. ಗುರವ ಆರ್.ಎನ್., ಪೂರ್ವೋಕ್ತ.

೫೧. ಇ.ಆಯ್. ಸಂ. XIII, ಶಾ.ಸಂ. ೩/ಎ.

೫೨. ಚಂದ್ರಶೇಖರ ಪಿ.ವಿ. (ಸಂ.), ನೇಮಿಚಂದ್ರನ ಲೀಲಾವತಿ ಪ್ರಬಂಧ (೧೯೮೨), ಪು. ೩೫.

೫೩. ಗುರವ ಆರ್.ಎನ್., ಪೂರ್ವೋಕ್ತ.

೫೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೫೫. ಆಯ್.ಎ. ಸಂ. XXXII, ಪು. ೨೧೭.

೫೬. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೫೭. ಇ.ಆಯ್. ಸಂ. XVIII, ಶಾ.ಸಂ. ೨೨/ಬಿ.

೫೮. ಕೆ.ಆಯ್. ಸಂ. V, ಶಾ.ಸಂ. ೫೧.

೫೯. ಅದೇ, ಶಾ.ಸಂ. ೫೨.

೬೦. ಅದೇ.

೬೧. ಅದೇ.

೬೨. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೬೩. ಇ.ಆಯ್. ಸಂ. XIII, ಶಾ.ಸಂ. ೩/ಎ.

೬೪. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೬೫. ಗುರವ ಆರ್.ಎನ್., ಪೂರ್ವೋಕ್ತ.

೬೬. ಅದೇ.

೬೭. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦–೨೪೧.

೬೮. ಗುರವ ಆರ್.ಎನ್., ಪೂರ್ವೋಕ್ತ.

೬೯. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೭೦. ಕೆ.ಆಯ್. ಸಂ. V, ಶಾ.ಸಂ. ೫೨.

೭೧. ಇ.ಆಯ್. ಸಂ. XVI, ಶಾ.ಸಂ. ೧

೭೨. ಪಾವಟೆ ಚನ್ನಕ್ಕ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ (೧೯೯೦), ಪು. ೪೬.

೭೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೭೪. ಕೆ.ಆಯ್. ಸಂ. V, ಶಾ.ಸಂ. ೫೨.

೭೫. ಪಾವಟೆ ಚನ್ನಕ್ಕ, ಪೂರ್ವೋಕ್ತ, ಪು. ೪೭–೭೬.

೭೬. ಎ.ಕ. ಸಂ. VI, ಪು. ೨೩,

೭೭. ಅದೇ, ಸಂ. XI, ಪು. ೧೭,

೭೮. ಕೊಪ್ಪಾ ಎಸ್.ಕೆ., ತರ್ದವಾಡಿನಾಡು : ಒಂದು ಅಧ್ಯಯನ (೧೯೯೦), ಪು. ೧೬೮.

೭೯. ಇ.ಆಯ್. ಸಂ. XIII, ಶಾ.ಸಂ. ೩/ಎ–ಬಿ. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ. "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಸಂ. ೧೧/೨ (ನವೆಂಬರ್–೧೯೭೮), ಪು. ೨೨–೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೮೦. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಶಾ.ಸಂ. ೩೦, ಪು. ೨೦೪.

೮೧. ಅದೇ.

೮೨. ಅದೇ.

೮೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೮೪. ಅದೇ.

೮೫. ಇ.ಆಯ್. ಸಂ. XIII, ಶಾ.ಸಂ. ೩/ಎ-ಬಿ. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ. "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೮೬. ಅದೇ.

೮೭. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೪೪೯.

೮೮. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೮೯. ಅದೇ, ಶಾ.ಸಂ. ೬.

೯೦. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಶಾ.ಸಂ. ೩೦, ಪು. ೨೪೧.

೯೧. ಕೆ.ಆಯ್. ಸಂ. VI, ಶಾ.ಸಂ. ೭೩.

೯೨. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೯೩. ಅದೇ.

❖❖❖

ಅಧ್ಯಾಯ : ಐದು

ಕೂಹುಂಡಿನಾಡಿನ ಶಿಕ್ಷಣ ಮತ್ತು ಸಾಹಿತ್ಯ

೫.೧. ಪೀಠಿಕೆ
೫.೨. ಅಗ್ರಹಾರಗಳು
೫.೩. ಬ್ರಹ್ಮಪುರಿಗಳು
೫.೪. ಘಟಿಕಾಸ್ಥಾನಗಳು
೫.೫. ದೇವಾಲಯಗಳು
೫.೬. ಮಠಗಳು
೫.೭. ದಾನಶಾಲೆಗಳು
೫.೮. ಶಿಕ್ಷಣ ಕೇಂದ್ರಗಳ ಸ್ವರೂಪ
೫.೯. ಕವಿಗಳು ಮತ್ತು ಸ್ಥಾನಾಚಾರ್ಯರು
೫.೧೦. ಶಾಸನಗಳ ರೂವಾರಿಗಳು
೫.೧೧. ಶಾಸನ ಸಾಹಿತ್ಯ

ಅಧ್ಯಾಯ : ಐದು

ಶಿಕ್ಷಣ ಮತ್ತು ಸಾಹಿತ್ಯ

೫.೧. ಪೀಠಿಕೆ

ಕನ್ನಡನಾಡಿನಲ್ಲಿ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಾವಧಿಗಳಲ್ಲಿ ಶಿಕ್ಷಣ ವ್ಯವಸ್ಥೆ ಬಹುಪಾಲು ಧರ್ಮದ ತಳಹದಿಯ ಮೇಲೆ ರೂಪುಗೊಂಡಿತ್ತು. ಅಂದು ಶಿಕ್ಷಣವೆನ್ನುವುದು ಆತ್ಮಜ್ಞಾನವನ್ನು ಪಡೆಯುವ ಒಂದು ಮಾರ್ಗವಾಗಿತ್ತು. ವೈದಿಕ ಯುಗದಲ್ಲಿ ಗುರುವಿನ ಮನೆಯೇ ಪಾಠಶಾಲೆಯಾಗಿತ್ತು. ಅಂದು ವೇದ ಆಗಮ ಒಟ್ಟಾಗಿ ಸಂಸ್ಕೃತ ಭಾಷೆಯನ್ನು ಕಲಿಯುವುದೇ ಶಿಕ್ಷಣ ಎಂದೆನಿಸಿತ್ತು. ವರ್ಣಾಶ್ರಮ ಧರ್ಮದ ನೆರಳಿನಲ್ಲಿ ಶಿಕ್ಷಣ ಕೆಲವೇ ಜನರ ಸ್ವತ್ತಾಗಿತ್ತು. ಸಾಮೂಹಿಕ ಶಿಕ್ಷಣಕ್ಕೆ ಅಲ್ಲಿ ಅಷ್ಟಾಗಿ ಅವಕಾಶವಿರಲಿಲ್ಲ. ಕ್ರಿಪೂ. ಸುಮಾರು ೬ನೆಯ ಶತಮಾನದಲ್ಲಿ ಬೌದ್ಧ ಧರ್ಮದ ವಿಹಾರಗಳು ಮತ್ತು ಜೈನ ಧರ್ಮದ ಗುರುಕುಲಗಳು ಶಿಕ್ಷಣ ಕೇಂದ್ರಗಳಾಗಿದ್ದವು. ಅವುಗಳಿಂದ ಪ್ರೇರಿತರಾದ ಹಿಂದೂಗಳೂ ತಕ್ಷಶಿಲೆ, ವಾರಣಾಸಿ, ನಲಂದಾ, ವಲ್ಲಭಿ, ವಿಕ್ರಮಶಿಲೆ, ಮಿಥಿಲ, ಧನ್ಯಕಟಕ, ಜಗದ್ದಲ, ಕಾಂಚಿ, ಓದಂತಪುರಿ ಮೊದಲಾದೆಡೆಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದರು. ಕನ್ನಡನಾಡಿನ ಬ್ರಹ್ಮಗಿರಿ, ಮಸ್ಕಿ, ಉದಯಗೊಳಂ, ನಿಟ್ಟೂರು, ಕೊಪ್ಪಳ, ಸನ್ನತಿ, ಜಟಿಂಗರಾಮೇಶ್ವರದಲ್ಲಿ ಬೆಳಕಿಗೆ ಬಂದಿರುವ ಮೌರ್ಯ ಮನೆತನದ ಅಶೋಕ ಚಕ್ರವರ್ತಿಯ ಕ್ರಿಪೂ. ಸುಮಾರು ೩ನೆಯ ಶತಮಾನದ ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಭಾಷೆಯ ಧರ್ಮಶಾಸನಗಳೇ ಈ ನಾಡಿನ ಪ್ರಾರಂಭದ ಬರವಣಿಗೆಯ ದಾಖಲೆಗಳಾಗಿವೆ. ಇದರಿಂದ ಆದಾಗಲೇ ಇಲ್ಲಿಯ ಜನಸಾಮಾನ್ಯರಿಗೆ ಲಿಪಿ ಮತ್ತು ಭಾಷೆಯ ಪರಿಚಯ ವಿತ್ತೆಂಬುದು ಸ್ಪಷ್ಟವಾಗುತ್ತದೆ. ಬನವಾಸಿ ಕದಂಬ ಮನೆತನದ ಕಾಕುತ್ಸವರ್ಮನ ಹಲ್ಮಿಡಿಯ ಕ್ರಿ.ಶ. ೪೫೦ರ ಶಾಸನವು ಕನ್ನಡ ಲಿಪಿ ಮತ್ತು ಭಾಷೆಯ ಪ್ರಪ್ರಥಮ ದಾಖಲೆಯಾಗಿದೆ. ತರುವಾಯ ಅಂದರೆ ಕ್ರಿ.ಶ. ಸುಮಾರು ೪-೫ನೆಯ ಶತಮಾನದಿಂದೀಚೆಗೆ ಶೈವ ಧರ್ಮದ ಲಕುಲೀಶ ಪಾಶುಪತ ಪಂಥದ ದೇವಾಲಯಗಳು ಮತ್ತು ವೈಷ್ಣವ ಧರ್ಮದ ಮಹಾಜನರ (ಬ್ರಾಹ್ಮಣರು) ಅಗ್ರಹಾರಗಳು ಶಿಕ್ಷಣ ಕೇಂದ್ರಗಳಾಗಿ ಪರಿಣಮಿಸಿದವು. ಹಾಗೆಯೇ ಕಾಲಾಂತರದಲ್ಲಿ ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು, ಮಠಗಳು, ತ್ರಿಕೂಟಾಚಲ ವಿನ್ಯಾಸದ ದೇವಾಲಯಗಳು ಮತ್ತು ಬಸದಿಗಳೂ ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು.

ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೫-೬ನೆಯ ಶತಮಾನದಿಂದಲೂ ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು ಸಾಂಗವಾಗಿ ಬೆಳೆದು ಬಂದಿವೆ. ಈ ನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೭೨ ಮತ್ತು ಈ ನಾಡಿನ ಪ್ರಸ್ತಾಪವಿರುವ ಇತರೆಡೆಯ ೧೨ ಒಟ್ಟು ೧೮೪ ಶಾಸನಗಳಲ್ಲಿ ಕೆಲವು ಶಾಸನಗಳು ಸಮಕಾಲೀನ ಶಿಕ್ಷಣ ಮತ್ತು ಸಾಹಿತ್ಯಿಕ ಚಟುವಟಿಕೆಗಳ ವಿವಿಧ ಆಯಾಮಗಳ ಅಧ್ಯಯನಕ್ಕೆ ಅಪರೂಪದ ಆಕರಗಳಾಗಿವೆ. ಈ ಪ್ರದೇಶವನ್ನಾಳಿದ ಬಹುತೇಕ ಅರಸು ಮನೆತನಗಳೆಲ್ಲವೂ ಶಿಕ್ಷಣ ಮತ್ತು ಸಾಹಿತ್ಯಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ಕೊಡಮಾಡಿವೆ. ಹೀಗಾಗಿ

ಈ ನಾಡಿನಲ್ಲಿ ಅನೇಕ ಕವಿಗಳು ಸಾಹಿತ್ಯಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಹಾಗಾಗಿ ಇಲ್ಲಿಯ ಸಾಹಿತ್ಯವು ವಿಶೇಷವಾಗಿ ಬೆಳೆದು ಬಂದಿದೆ. ಇಲ್ಲಿ ಶಿಕ್ಷಣ ಮತ್ತು ಸಾಹಿತ್ಯಿಕ ಚಟುವಟಿಕೆಗಳು ಹಲವು ಕೇಂದ್ರಗಳಲ್ಲಿ ನಡೆಯುತ್ತಿದ್ದವು. ಅವುಗಳಲ್ಲಿ ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು, ಮಠಗಳು ಮತ್ತು ದೇವಾಲಯಗಳು ಪ್ರಮುಖವಾಗಿವೆ. ಗಣಿತಶಾಸ್ತ್ರದ ಬ್ರಹ್ಮನೆಂದೇ ಪ್ರಸಿದ್ಧಿಯನ್ನು ಪಡೆದಿದ್ದ ರಾಯಬಾಗದ ರಾಜಾದಿತ್ಯ ಕವಿಯು ತನ್ನ 'ವ್ಯವಹಾರ ಗಣಿತ' ಎಂಬ ಕಾವ್ಯದಲ್ಲಿ–

ವನತತಿಯಿಂ ನದಿನದಕುಭೃತ್ಕುಲದಿಂ ಧನಧಾನ್ಯವರ್ಗದಿಂ
ಜನಪದದರಾಸಿಯಿಂ ಬೆಳೆವಕೆಯ್ವೊಲದಿದೆಸೆಮೂರ್ಗಳಿಂ ಜಗ
ಜ್ಜನಮತ ಜೈನಧರ್ಮದ ನೆಗೆಯಿನೊಪ್ಪರೆ ಕೂಂಡಿಮಂಡಲ
ಕ್ಕನುಪಮ ರತ್ನಮಂಡನಮೆನಿಪ್ಪುದು ಪೂವಿನಬಾಗೆ ಸಚಿತತಂ ॥

ಎಂದು ಕೂಹುಂಡಿನಾಡಿನ ಹಿರಿಮೆಯನ್ನು ಕೊಂಡಾಡಿದ್ದಾನೆ.[೧] ಈತನಂತೆ ಇಮ್ಮಡಿ ಗುಣವರ್ಮ, ನೇಮಿಚಂದ್ರ, ಪಾರ್ಶ್ವಪಂಡಿತ ಮೊದಲಾದ ಕವಿಗಳು ಕೂಹುಂಡಿನಾಡಿನ ಆಳರಸರ ರಾಜಾಶ್ರಯವನ್ನು ಪಡೆದುಕೊಂಡು, ಸಮೃದ್ಧವಾದ ಸಾಹಿತ್ಯ ಕೃಷಿಯನ್ನು ಮಾಡಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತವಾಗಿಸಿದ್ದಾರೆ. ಕೂಹುಂಡಿನಾಡಿನ ಶಾಸನಗಳಲ್ಲಿ ಉಲ್ಲೇಖಿತ ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು, ದೇವಾಲಯಗಳು, ಮಠಗಳು, ಕವಿಗಳು ಮತ್ತು ಸಾಹಿತ್ಯಿಕ ಚಟುವಟಿಕೆಗಳು, ವಿದ್ವಾಂಸರಾಗಿದ್ದ ಸ್ಥಾನಾಚಾರ್ಯರು, ಶಾಸನಗಳ ರೂವಾರಿಗಳು ಮತ್ತು ಶಾಸನ ಸಾಹಿತ್ಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೨. ಅಗ್ರಹಾರಗಳು

ಅಗ್ರ (ಶ್ರೇಷ್ಠ) ಮತ್ತು ಆಹಾರ (ದೇಶ/ಸ್ಥಳ/ಗ್ರಾಮ) ಎಂಬೆರಡು ಪದಗಳಿಂದ ಸಂಯುಕ್ತವಾಗಿರುವ ಅಗ್ರಹಾರ ಪದವನ್ನು 'ಶ್ರೇಷ್ಠರಿಗೆ (ಮಹಾಜನರು) ಕೊಟ್ಟಿರುವ ಸ್ಥಳ' ಎಂದು ಅರ್ಥೈಸಲಾಗಿದೆ. ಈ ಸ್ಥಳದಲ್ಲಿ ಎಲ್ಲ ಜಾತಿಯವರು ವಾಸಿಸುತ್ತಿದ್ದರಾದರೂ ಇದರ ಆದಾಯವೆಲ್ಲ ಸ್ಥಳೀಯ ಮಹಾಜನರಿಗೆ ಸಲ್ಲುತ್ತಿತ್ತು. ಕನ್ನಡನಾಡಿನಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದಲೂ ಅಗ್ರಹಾರಗಳು ಗೋಚರಿಸುತ್ತವೆ ಗುರುಕುಲಗಳಿಂದ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹಿಂದಿರುಗಿ ಬಂದ ಮಹಾಜನರಿಗೆ (ವಿಪ್ರರು) ಅಧ್ಯಯನ ಮತ್ತು ಅಧ್ಯಾಪನಕ್ಕಾಗಿ ಸಮಕಾಲೀನ ಆಳರಸರು ಸಾಮಾನ್ಯ ಗ್ರಾಮಗಳನ್ನು ಅಗ್ರಹಾರಗಳಾಗಿ ಪರಿವರ್ತಿಸಿ ದಾನ ಕೊಡುತ್ತಿದ್ದರು. ಹೀಗಾಗಿ ಮಹಾಜನರೇ ಇವುಗಳ ಪ್ರಭುಗಳಾಗಿದ್ದು, ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದರು. ಇಲ್ಲಿ ಪ್ರತಿಯೊಂದು ಧಾರ್ಮಿಕ, ಸಾಮಾಜಿಕ, ಚಟುವಟಿಕೆಗಳು ಇವರ ಉಪಸ್ಥಿತಿಯಲ್ಲಿ ಜರುಗುತ್ತಿದ್ದವು. ದಾನವನ್ನು ಸ್ವೀಕರಿಸಿ, ಇದರ ರಕ್ಷಣೆ ಮತ್ತು ವಿನಿಯೋಗ ಇವರದ್ದಾಗಿತ್ತು. ಅಗ್ರಹಾರಗಳು ತೆರಿಗೆಗಳಿಂದ ಮುಕ್ತವಾಗಿದ್ದವು. ಮಹಾಜನರು ವಿವಿಧ ಶಾಸ್ತ್ರ ಮತ್ತು ಶಸ್ತ್ರಗಳಲ್ಲಿ ಪರಿಣತರಾಗಿದ್ದರು. ಇವು ಬಹುತೇಕ ವೈದಿಕ ಸಂಪ್ರದಾಯದ ಶಿಕ್ಷಣ ಕೇಂದ್ರಗಳಾಗಿದ್ದವು. ಇಲ್ಲಿಯ ಶಿಕ್ಷಕರಿಗೆ ಕೊಡುವ ದಾನವನ್ನು ಚಟ್ಟವೃತ್ತಿ (ಛಾತ್ರವೃತ್ತಿ) ಎಂದು ಕರೆಯಲಾಗುತ್ತಿತ್ತು. ಇಲ್ಲಿ

ವೇದ, ಶಾಸ್ತ್ರ, ಸಾಹಿತ್ಯ, ದರ್ಶನ, ವ್ಯಾಕರಣ, ಮೀಮಾಂಸೆ ಮೊದಲಾದ ವಿಷಯಗಳ ಅಧ್ಯಯನ ಮತ್ತು ಅಧ್ಯಾಪನ ನಡೆಯುತ್ತಿತ್ತು.[೬] ಕೂಹುಂಡಿನಾಡಿನ ಶಾಸನಗಳಲ್ಲಿ ಉಲ್ಲೇಖಿತ ಅಗ್ರಹಾರಗಳ ವಿವರಗಳು ಈ ಕೆಳಗಿನಂತಿವೆ.

೫.೨.೧. ಅಸುಂಡಿ

ಕೂಹುಂಡಿನಾಡಿನ ಸುಗಂಧವರ್ತಿ-೧೨ ಉಪ ಆಡಳಿತ ವಿಭಾಗದಲ್ಲಿದ್ದ ಅಸುಂಡಿ ಪ್ರಸಿದ್ಧ ಮಹಾ ಅಗ್ರಹಾರವಾಗಿತ್ತು. ಇದು ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಮಲ್ಲಿಕಾರ್ಜುನ ದೇವಾಲಯಕ್ಕೆ ಕೊಡಮಾಡಿದ ದಾನದ ವಿವರಗಳಲ್ಲಿರುವ_

ಮತ್ತಮಾ ದೇವರ್ಗ್ಗೆ ಶ್ರೀಮದನಾದಿಯ ಪಿರಿಯಗ್ರಹಾರಂ
ಹಸುಡಿಯಿಂ ನೂರ್ವರುರ್ಮಹಾಜನಂಗಳುಂ ಹಂನಿರ್ವ್ವರ್ಗ್ಗಾ
ವುಂಡುಗಳು ತಂಮೂರ ತೆಂಕಣ ಘೈಸ್ಸಗೆಜಿಯಿಂ ತೆಂಕಣ
ಸವಂದತ್ತಿಯ ಸವಣುಬೊಲದ ಹೊಲ ಮೇರೆಯಂ ಪಡುವಲು
ತಮ್ಮ ಬಾಸಿಂಗವಾಡದ ಪೆಉವಣ ಹೆಬ್ಬಸುಗೆಯ ಸ್ಥಳದೊಳಗೆ
ಸೊಗಲದ ಡಿಗೇಶ್ವರದೇವರ ಕೋಲಲಳೆದು ಸರ್ವ್ವನಮಶ್ಯವಾಗಿ
ಕೊಟ್ಟ ಕೆಯಿ ಕಂಬಂ ಮೂನೂಱು......................

ಎಂಬ ಪ್ರಸ್ತಾಪದಿಂದ ಸ್ಪಷ್ಟವಾಗುತ್ತದೆ.[೭] ಈ ಗ್ರಾಮದ ಭಾಷಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಕುರಿತು ಕೂಹುಂಡಿನಾಡಿನ ಸ್ಥಳನಾಮಗಳ ಸಂದರ್ಭದಲ್ಲಿ ಗಮನಿಸಲಾಗಿದೆ. ಪ್ರಸ್ತುತ ಗ್ರಾಮವು ಮಲಪ್ರಭಾ ನದಿಯ ಹಿನ್ನೀರಿನಲ್ಲಿ ಮುಳುಗಿರುವುದರಿಂದ ೧೯೭೭ರಲ್ಲಿ ಇದು ಮೂಲನೆಲೆಯಿಂದ ಸ್ಥಳಾಂತರವಾಗಿ ಮೂರು ಕಿ.ಮೀ. ಅಂತರದಲ್ಲಿ ನೆಲೆಸಿದೆ. ಹಾಳೂರಿನಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ದೇವಾಲಯದ ಅವಶೇಷಗಳು ಹರಡಿಕೊಂಡಿವೆ. ಈ ಅಗ್ರಹಾರದಲ್ಲಿ ಅಂದು ನೂರು ಮಹಾಜನರು ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾಗಿದ್ದರು.[೮] ಇಲ್ಲಿ ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದವು.

೫.೨.೨. ಖಡಕಲಾಟ

ಖಡಕಲಾಟದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ 'ಲಟ್ಟಿ ಅಗ್ರಹಾರ'ದ ನಿರೂಪಣೆಯಿದೆ.[೯] ಈ ಶಾಸನದಲ್ಲಿ 'ಲಟ್ಟಿ' ಅಗ್ರಹಾರ ಎಂಬ ಅಕ್ಷರಗಳನ್ನು ಬಿಟ್ಟು ಉಳಿದ ಅಕ್ಷರಗಳೆಲ್ಲವೂ ಸವೆದಿವೆ. ಅಂತಾಗಿ ಹೆಚ್ಚಿನ ವಿವರಗಳು ಸ್ಪಷ್ಟವಾಗುವುದಿಲ್ಲ. 'ಲಟ್ಟಿ' ಎಂಬುದು ಲಾಟವಾಗಿ ಕಾಲಕ್ರಮೇಣ ಖಡಕಲಾಟವಾಗಿದೆ. ಈ ಗ್ರಾಮದ ಭಾಷಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕ ಮಹತ್ವದ ಕುರಿತು ಕೂಹುಂಡಿನಾಡಿನ ಶಾಸನಗಳೋಕ್ತ ಸ್ಥಳನಾಮಗಳ ಕುರಿತು ಚರ್ಚೆಯಲ್ಲಿ ಅವಲೋಕಿಸಲಾಗಿದೆ.

೫.೨.೩. ಕಬ್ಬೂರು

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ 'ಪಿರಿಯ ಅಗ್ರಹಾರ ಕಬ್ಬೂರ'ದ ನಿರೂಪಣೆಯಿದೆ.[೬] ಇದರಿಂದ ಇದು ಕೂಹುಂಡಿನಾಡಿನಲ್ಲಿ ಅತಿ ದೊಡ್ಡದಾದ ಅಗ್ರಹಾರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಅಗ್ರಹಾರದ ಹಿತವಿಳಾಸನು ಕುದುರೆಗಳ ಮಾರಾಟಕ್ಕೆ ವಿಧಿಸುತ್ತಿದ್ದ ತೆರಿಗೆಯಿಂದ ಸಂಗ್ರಹವಾದ

ಹಣವನ್ನು ಸ್ಥಳೀಯ 'ಸ್ವಯಂಭೂ ಚಕ್ರವರ್ತಿ ಕಲ್ಲಿದೇವಸ್ವಾಮಿ' ದೇವಾಲಯಕ್ಕೆ ದೇಣಿಗೆ ಕೊಟ್ಟಿದ್ದಾನೆ.[೭] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಬೀಚಿರಾಜನು ಬೆಳಗಾವಿಯಲ್ಲಿ ನಿರ್ಮಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ ವಿವರಗಳಲ್ಲಿ–

ಮತ್ತಂ ನಾಡೊಳ್ ಕೊಟ್ಟ ಸ್ಥಳವೃತ್ತಿ ಕಬ್ಬೂರ ಕಾಲ್ವಳ್ಳಿ
ಮೂಲವಳ್ಳಿಯೊಳೂರಿಂ ಮೂಡಲ ಬೆಲಕಬ್ಬೆಯ ಕೆಯ್ಯಿಂ
ತೆಂಕಲ ಕೆಯ್ಯಮ್ಮವೆಂಟುನೂಱು ಆ ಕಬ್ಬೂರೊಳ್ಮದ್ದಿ
ಗಾವುಂಡನ ಮನೆಯಿಂ ಪಡುವಳಱುಗಯ್ಯಗಲದಿಪ್ಪತ್ತೊಂದು
ಕಯನೀಳದ ಮನೆಯೊನ್ದು ॥ ....

ಎಂದು ಕಬ್ಬೂರದಲ್ಲಿ ಭೂದಾನ ಮಾಡಿರುವ ಪ್ರಸ್ತಾಪವಿದೆ. ಈ ಗ್ರಾಮದ ಭಾಷಿಕ ಹಿನ್ನೆಲೆ ಮತ್ತು ಇಲ್ಲಿರುವ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳ ಕುರಿತಾಗಿ ಸ್ಥಳನಾಮಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಗಮನಿಸಲಾಗಿದೆ.

೫.೨.೪. ಬೆಳವಿ

ಬೆಳವಿಯ ಕ್ರಿ.ಶ. ೧೦೫೩ರ ಶಾಸನದಲ್ಲಿ–

ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ
ಮೋನಾನುಷ್ಠಾಣಯನ್ನ ದೀಕ್ಷಾದ್ಯನೇಕ ಬ್ರತ
ಸತ್ಯಸೇವಾಚಾರ ಜಪ ಸಮಾಧಿ ಸಂಪನ್ನರಪ್ಪ
ಶ್ರೀಮತು ಬೆಳ್ವಬ್ಬೆಯೂರೊಡೆಯ ಕಾಳಿದಾಸಯ್ಯ
ಪ್ರಮುಖ ಮಹಾಜನಮಯ್ನೂರ್ವ್ವರ್ಗ್ಗೆ...........
ಪದಿಂಬರ್ ಬ್ರಾಹ್ಮಣರ್ಗ್ಗಂ ಸತ್ರಕ್ಕೆ ಬಿಟ್ಟ ಗದ್ಯಾಣ
ಎಪ್ಪತ್ತು ಪಣಂ ಬಣ್ಣಾದಾನಂ ತಿಱುವ ಗದ್ಯಾಣ
ಮಾಱುವಂತಾಚನ್ದ್ರಾರ್ಕ್ಕ ತಾರಂಬರಂ ತಪ್ಪದೆ
ಪ್ರತಿಪಾಳಿಸುವರ್ ॥

ಸವದತ್ತಿಯ ರಟ್ಟ ಮನೆತನದ ಅಂಕರಸಯ್ಯನ ಆಳ್ವಿಕೆಯ ಕಾಲಾವಧಿಯಲ್ಲಿ ಬ್ರಾಹ್ಮಣರಿಗಾಗಿ ಸತ್ರವನ್ನು ನಡೆಸಲು ಊರೊಡೆಯ ಕಾಳಿದಾಸಯ್ಯನ ನೇತೃತ್ವದ ಬೆಳುವಬ್ಬೆಯ ಐನೂರು ಮಹಾಜನರಿಗೆ ಹಣದಾನ ನೀಡಿದುದರ ನಿರೂಪಣೆಯಿದೆ.[೮] ಇದರಿಂದ ಬೆಳವಿಯು ಐನೂರು ಮಹಾಜನರು ನೆಲೆಸಿದ್ದ ಅಗ್ರಹಾರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಗ್ರಾಮದ ಭಾಷಿಕ ಹಿನ್ನೆಲೆಯನ್ನು ಸ್ಥಳನಾಮಗಳ ಅಧ್ಯಯನದ ಸಂದರ್ಭದಲ್ಲಿ ಚರ್ಚಿಸಲಾಗಿದೆ.

೫.೨.೫. ಚಚ್ಚಕ್ಕಿ (ಚಚಡಿ)

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ 'ಚಚ್ಚಕ್ಕಿ ಅಗ್ರಹಾರ'ದ ಉಲ್ಲೇಖವಿದೆ.[೯] ಆದರೆ ಈ ಅಗ್ರಹಾರದಲ್ಲಿದ್ದ ಮಹಾಜನರ ಸಂಖ್ಯೆ ಇತ್ಯಾದಿ ವಿವರಗಳ ಕುರಿತು ಸ್ಪಷ್ಟವಿಲ್ಲ. ಪ್ರಸ್ತುತ ಶಾಸನದಲ್ಲಿ ಬೀಚಿರಾಜನು ಬೆಳಗಾವಿಯಲ್ಲಿ ನಿರ್ಮಿಸಿದ ರಟ್ಟಜಿನಾಲಯದ ಶಾಂತಿನಾಥದೇವರ ನಿತ್ಯಪೂಜಾಭಿಷೇಕ ಮೊದಲಾದ ಕಾರ್ಯಗಳಿಗೆ ದಾನ ಮಾಡಿದ ವಿವರಗಳಲ್ಲಿ–

ಚಚ್ಛಕ್ಕಿಯಲ್ಲಿ ಮೂಡಣ ಪ್ರಭುಮಾನ್ಯದೊಳಗೆ ಬೊಚ್ಚುಲಗೆಱೆಯಿಂ
ಮೂಡಲ್ಮುದುಗೋಡೆಯ ಬಟ್ಟೆಯಿಂ ತೆಂಕಲ ಹಾರುವಗೋಲ
ಮತ್ತರ್ಮೂವತ್ತು ಸೆಟ್ಟಿಗುತ್ತ ನಾಗಣನ ಮನೆಯಿಂ ಬಡಗಲ್
ಹನ್ನಿರ್ಕ್ಕೆಯ್ಯಗಲದಿರ್ಪ್ಪತ್ತು ಕಯ್ನೀಳದ ಮನೆಯೊಂದು ॥............

ಎಂದು ಚಚ್ಛಕ್ಕಿಯಲ್ಲಿ (ಇಂದಿನ ಚಚಡಿ) ಭೂದಾನ ಮಾಡಿರುವ ಪ್ರಸ್ತಾಪವಿದೆ. ಈ ಗ್ರಾಮದ ಭಾಷಿಕ ಹಿನ್ನೆಲೆಯನ್ನು ಸ್ಥಳನಾಮಗಳನ್ನು ಅಧ್ಯಯನ ಮಾಡುವಾಗ ಗಮನಿಸಲಾಗಿದೆ.

೫.೨.೬. ನೇಸರಗಿ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ 'ಪಿರಿಯ ಅಗ್ರಹಾರ ನೇಸರಿಗೆ'ಯ ಪ್ರಸ್ತಾಪವಿದೆ.[೧೦] ಇದರಿಂದ ಈ ಅಗ್ರಹಾರವು ಕೂಹುಂಡಿನಾಡಿನಲ್ಲಿ ಅತಿ ದೊಡ್ಡದ್ದಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇದರಲ್ಲಿ ಅಧ್ಯಯನ ಮತ್ತು ಅಧ್ಯಾಪನ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿದ್ದವು. ಈ ಗ್ರಾಮದ ಭಾಷಿಕ ಹಿನ್ನೆಲೆ ಮತ್ತು ಇಲ್ಲಿರುವ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳ ಕುರಿತು ಸ್ಥಳನಾಮಗಳ ಅಧ್ಯಯನದ ಸಂದರ್ಭದಲ್ಲಿ ಅವಲೋಕಿಸಲಾಗಿದೆ.

೫.೨.೭. ತೇರದಾಳ

ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡಮಡಂಬ
ದ್ರೋಣಾಮುಖಪತ್ತಣಂಗಳಿಂದಮನೇಕಮಾಟಕೂಟಪ್ರಸಾದ
ದೇವಾಲಯತನಂಗಳಿಂದಮೊಪ್ಪುವಗ್ರಹಾರಪಟ್ಟಣಂಗಳಿಂದ
ಮತಿಶಯವಪ್ಪ ಶ್ರೀಮತಂ ಕೂಂಡಿ ಮೂಱುಸಾಸಿರದೊಳೆಗೆ
ಹನ್ನೆರಡಕ್ಕಂ ಮೊದಲಬಾಡಂ ಬಣಂಜುವಟ್ಟಣಂ ನಡವೆಯಮನೆ
ತೇರದಾಳದಳು ॥

ಎಂಬ ನಿರೂಪಣೆಯಿದೆ.[೧೧] ಇದರಿಂದ ಈ ಪಟ್ಟಣವು ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಅಗ್ರಹಾರ ಮತ್ತು ಪ್ರಸಿದ್ಧ ಜೈನ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ನಡೆಯುತ್ತಿದ ಅಧ್ಯಯನ ಮತ್ತು ಅಧ್ಯಾಪನ ಚಟುವಟಿಕೆಗಳಿಗೆ ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳು ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ. ಈ ಗ್ರಾಮದ ಭಾಷಿಕ ಹಿನ್ನೆಲೆ ಮತ್ತು ಇದರ ಚಾರಿತ್ರಿಕ, ಸಾಂಸ್ಕೃತಿಕ ಹಿರಿಮೆಯ ಕುರಿತು ಸ್ಥಳನಾಮಗಳ ವಿಶ್ಲೇಷಣೆಯ ಸಂದರ್ಭದಲ್ಲಿ ಅವಲೋಕಿಸಲಾಗಿದೆ.

೫.೩. ಬ್ರಹ್ಮಪುರಿಗಳು

ನಗರ, ಪಟ್ಟಣ ಮತ್ತು ಗ್ರಾಮಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಕೇರಿಯನ್ನು ಬ್ರಹ್ಮಪುರಿ ಎಂದು ಕರೆಯಲಾಗುತ್ತಿತ್ತು. ಆಳರಸರು ಬ್ರಹ್ಮಪುರಿಗಳನ್ನು ಸ್ಥಾಪಿಸಿ, ಇವುಗಳನ್ನು ಸ್ಥಳೀಯ ವಿದ್ವಾಂಸ ಮಹಾಜನರಿಗೆ ಬಿಟ್ಟುಕೊಡುವುದರೊಂದಿಗೆ ಅವರಿಗೆ ದಾನ–ದತ್ತಿಗಳನ್ನೂ ಕೊಡುತ್ತಿದ್ದರು. ಶೈಕ್ಷಣಿಕ

ದೃಷ್ಟಿಯಿಂದ ಇವು ಬಹುಮಟ್ಟಿಗೆ ಅಗ್ರಹಾರಗಳನ್ನು ಹೋಲುತ್ತಿದ್ದವು. ಅಗ್ರಹಾರ ಮತ್ತು ಬ್ರಹ್ಮಪುರಿಗಳೆರಡೂ ಬ್ರಾಹ್ಮಣರ ವಾಸಸ್ಥಳಗಳಾದರೂ ಇವೆರಡರಲ್ಲಿಯೂ ಕೆಲವು ವ್ಯತ್ಯಾಸಗಳು ಗೋಚರಿಸುತ್ತವೆ. ಅಗ್ರಹಾರಗಳು ಗ್ರಾಮಗಳಾದರೆ, ಬ್ರಹ್ಮಪುರಿಗಳು ಪಟ್ಟಣದ ಅಥವಾ ನಗರದ ಒಂದು ಭಾಗಗಳಾಗಿದ್ದವು. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆಯಾಗಿತ್ತು. ಏಕೆಂದರೆ ಪ್ರಾಚೀನ ಕರ್ನಾಟಕದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚಾಗಿತ್ತು. ನಗರಗಳ ಸಂಖ್ಯೆ ಕಡಿಮೆಯಾಗಿತ್ತು. ಅಗ್ರಹಾರದ ಬ್ರಾಹ್ಮಣರು ಆಯಾ ಗ್ರಾಮದ (ಅಗ್ರಹಾರ) ಒಡೆಯರಾಗಿದ್ದರು. ಆದರೆ ಬ್ರಹ್ಮಪುರಿಗಳಲ್ಲಿನ ಬ್ರಾಹ್ಮಣರು ಇತರ ಪಂಗಡಗಳ ಜನರಂತೆ ಬದುಕುತ್ತಿದ್ದರು. ಅಗ್ರಹಾರಗಳ ಬ್ರಾಹ್ಮಣರಿಗಿದ್ದ ಅಧಿಕಾರ ಬ್ರಹ್ಮಪುರಿಗಳಲ್ಲಿ ವಾಸವಾಗಿದ್ದ ಬ್ರಾಹ್ಮಣರಿಗಿರಲಿಲ್ಲ. ಸಮಕಾಲೀನ ಆಳರಸರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ಅಧಿಕಾರಿಗಳು ಬ್ರಹ್ಮಪುರಿಗಳನ್ನು ಸ್ಥಾಪಿಸುವ ಮೂಲಕ ಆಯಾ ಗ್ರಾಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಕ್ಕೆ ಅವಕಾಶವನ್ನ ಕಲ್ಪಿಸಿದ್ದರೆಂಬುದು ಸಮಕಾಲೀನ ಶಾಸನಗಳಿಂದ ಮನದಟ್ಟಾಗುತ್ತದೆ.[೧೩] ಅಧ್ಯಯನ ಮತ್ತು ಅಧ್ಯಾಪನದ ವಿಷಯದಲ್ಲಿ ಬ್ರಹ್ಮಪುರಿಗಳು ಯಾವ ವೈಶಿಷ್ಟ್ಯವನ್ನೂ ತೋರುವುದಿಲ್ಲ. ಇವು ಬಹುಮಟ್ಟಿಗೆ ಅಗ್ರಹಾರಗಳನ್ನೇ ಹೋಲುತ್ತವೆ. ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ಉಲ್ಲೇಖಿತ ಬ್ರಹ್ಮಪುರಿಗಳ ವಿವರಗಳು ಇಂತಿವೆ.

೫.೩.೧. ಸಂಕೇಶ್ವರ

ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ–

> ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ
> ಕಾರ್ತ್ತವೀರ್ಯ್ಯದೇವರಸರು ವೇಳುಗ್ರಾಮದ ನೆಲೆವೀಡಿನಲು
> ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ಸಕವರ್ಷದ
> ೧೦ ಉತ್ತನೆಯ ರೌದ್ರ ಸಂವತ್ಸರದ ಪುಸ್ಯ ಸುದ್ಧ ೧೧
> ಸೋಮವಾರದಂದು ಶ್ರೀ ಕಂಕುರದ........ಬ್ರಹ್ಮಪುರಿಯ
> ಅಶೇಷ ಮಹಾಜನಂಗಳ್ಗೆ ರೇವಿಸೆಟ್ಟಿಯ ಮಕ್ಕಳು ಗುಡ್ಡಿಸೆಟ್ಟಿ
> ಯೀಶ್ವರಸೆಟ್ಟಿ ಯಿಂತಿರ್ವ್ವರು..........ಚಿಕೇಶ್ವರದೇವರ ಪರ್ವ್ವ....
> ವತಾ ಸಾಲಿ......ನದಂ ಬಿಡಿಸಿ ರಕ್ತಾಕ್ಷಿ ಸಂವತ್ಸರದಲಿ ಯಿಪ್ಪತ್ತ್ರಿ
> ಮೂಱು ಗದ್ಯಾಣಂ ಧರಣ.......ದಾತ್ಯಂತಿಕ ನಡೆಸುವಂತಾಗಿ
> ಧಾರಾಪೂರ್ವ್ವಕವಾಗಿ ಕೊಟ್ಟರು ॥ ....

ಎಂದು ಕಲ್ಯಾಣದ ಚಾಳುಕ್ಯರ ಮಹಾಮಂಡಳೇಶ್ವರನಾದ ಸವದತ್ತಿಯ ರಟ್ಟ ಮನೆತನದ ಕಾರ್ತವೀರ್ಯನ ಆಳ್ವಿಕೆಯ ಕಾಲಾವಧಿಯಲ್ಲಿ ಬ್ರಹ್ಮಪುರಿಯ ಅಶೇಷ ಮಹಾಜನಗಳಿಗೆ ಶ್ರೀ ಲಕ್ಷ್ಮೀನರಸಿಂಹದೇವರ ಅಷ್ಟವಿಧಾರ್ಚ್ಚನೆಗಾಗಿ ಬಿಟ್ಟ ಸುಂಕದತ್ತಿ ಮತ್ತು ಚಿಕ್ಕೇಶ್ವರ ದೇವರಿಗಾಗಿ ಬಿಟ್ಟ ಹಣದಾನದ ಪ್ರಸ್ತಾಪವಿದೆ.[೧೪] ಇದರಿಂದ ಸಂಕೇಶ್ವರ ಪಟ್ಟಣದ ಒಂದು ಕೇರಿ ಬ್ರಹ್ಮಪುರಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಕೇರಿಯಲ್ಲಿ ವಾಸವಾಗಿದ್ದ ಮಹಾಜನರು ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾಗಿದ್ದರು. ಈ ಗ್ರಾಮದ ಭಾಷಿಕ ಹಿನ್ನೆಲೆಯ ಕುರಿತು ಈಗಾಗಲೇ ಸ್ಥಳನಾಮಗಳನ್ನು ಪರಿಶಿಲಿಸುವ ಸಂದರ್ಭದಲ್ಲಿ ಗಮನಿಸಲಾಗಿದೆ.

೫.೩.೨. ರಾಯಬಾಗ

ರಾಯಬಾಗ ಕ್ರಿ.ಶ. ೧೦೪೦ರ ಶಾಸನದಲ್ಲಿ ಸ್ಥಳೀಯ ಬ್ರಹ್ಮೇಶ್ವರ ದೇವಾಲಯಕ್ಕೆ ಕೊಡಲಾದ ಭೂದಾನದ ವಿವರಗಳಲ್ಲಿ- ಬ್ರಹ್ಮಪುರಿಗೆಯಿ ೧೦೦ ಮನೆ ಹಸ್ತಂ ೪ ॥ ಎಂಬ ಪ್ರಸ್ತಾಪವಿದೆ.[೧೫] ಇದರಿಂದ ರಾಯಬಾಗದ ಒಂದು ಭಾಗವು ಮಹಾಜನಗಳು ನೆಲೆನಿಂತ ಬ್ರಹ್ಮಪುರಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಪಟ್ಟಣದ ಒಂದು ಕೇರಿಯಲ್ಲಿ ನೂರು ಬ್ರಾಹ್ಮಣರಿಗೆ ಮನೆಗಳನ್ನು ದತ್ತಿಯಾಗಿ ಬಿಟ್ಟಿರುವುದು ಗೋಚರಿಸುತ್ತದೆ. ಇಲ್ಲಿ ಅಧ್ಯಯನ ಮತ್ತು ಅಧ್ಯಾಪನ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿದ್ದವು. ಈ ಗ್ರಾಮದ ಭಾಷಿಕ ಹಿನ್ನೆಲೆ ಮತ್ತು ಇಲ್ಲಿರುವ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳನ್ನು ಸ್ಥಳನಾಮಗಳ ಕುರಿತು ಚರ್ಚಿಸುವ ಸಂದರ್ಭದಲ್ಲಿ ಅವಲೋಕಿಸಲಾಗಿದೆ.

೫.೪. ಘಟಿಕಾಸ್ಥಾನಗಳು

ಘಟಿಕಾ ಪದವನ್ನು ಕಾಲವನ್ನು (ಸಮಯ) ಅಳೆಯಲು ಉಪಯೋಗಿಸುತ್ತಿದ್ದ ಮಣ್ಣಿನ ಪಾತ್ರೆ ಎಂಬರ್ಥದಲ್ಲಿ ಅರ್ಥೈಸಲಾಗಿದೆ. ಅಂದರೆ ಕಾಲವನ್ನು ನಿರ್ಧರಿಸಲು ರಂಧ್ರವಿರುವ ಮಣ್ಣಿನ ಪಾತ್ರೆಯಲ್ಲಿ ನೀರು ಅಥವಾ ಮರಳನ್ನು ತುಂಬಿಡಲಾಗುತ್ತಿತ್ತು. ಇವುಗಳನ್ನು ದೇವಾಲಯಗಳು, ಬಸದಿಗಳು ಮತ್ತು ಮಠಗಳಲ್ಲಿ ಸ್ಥಾಪಿಸಲಾಗುತ್ತಿತ್ತು. ಇವು ವೈದಿಕ ಬ್ರಾಹ್ಮಣರಿಗೆ ಶಿಕ್ಷಣ ಕೇಂದ್ರಗಳಾಗಿದ್ದ ದೇವಾಲಯಗಳು ಮತ್ತು ಜೋತಿಷ್ಯರಿಗೆ ತುಂಬಾ ಅವಶ್ಯವಾಗಿದ್ದವು. ವಿದ್ವತ್ತಿನ ಅತ್ಯುನ್ನತ ಕೇಂದ್ರಗಳಾಗಿದ್ದ ದೇವಾಲಯಗಳಲ್ಲಿ ಈ ಘಟಿಕಾ ಯಂತ್ರಗಳನ್ನು ಸ್ಥಾಪಿಸುತ್ತಿದ್ದುದರಿಂದ ಕಾಲಾನುಕ್ರಮದಲ್ಲಿ ಈ ಸ್ಥಳಗಳಿಗೆ ಘಟಿಕಾಸ್ಥಾನ ಎಂಬ ಹೆಸರುಗಳು ರೂಢಿಗೆ ಬಂದಿರುವಂತೆ ತೋರುತ್ತದೆ. ಘಟಿಕಾಸ್ಥಾನಗಳು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಚರ್ಚೆ ನಡೆಸುತ್ತಿದ್ದ ಹಾಗೂ ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನವನ್ನು ಪಡೆಯಲು ಸಾಧ್ಯವಾಗಿದ್ದ ಶ್ರೇಷ್ಠತಮ ಸಂಸ್ಥೆಗಳಾಗಿದ್ದವೆಂದು ಎಸ್.ವಿ. ವೆಂಕಟೇಶ್ವ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೬] ಇದರಿಂದ ಘಟಿಕಾಸ್ಥಾನಗಳು ಉಚ್ಚ ಶಿಕ್ಷಣ ಕೇಂದ್ರಗಳಾಗಿದ್ದವೆಂಬ ವಿಚಾರ ಮನದಟ್ಟಾಗುತ್ತದೆ. ಈ ಶಿಕ್ಷಣ ಅಗ್ರಹಾರ ಮತ್ತು ದೇವಾಲಯಗಳಲ್ಲಿ ನಡೆಯುತ್ತಿತ್ತು. ಇಲ್ಲಿ ವಿದ್ವಾಂಸರ ಚರ್ಚೆಗಳಷ್ಟೆ ಅಲ್ಲದೇ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ವಾದ-ವಿವಾದಗಳೂ ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ವಾದಿ-ಪ್ರತಿವಾದಿಗಳಿಗೆ ಕಾಲದ ಮಿತಿಯನ್ನು ನಿಗದಿಪಡಿಸಲು ಘಟಿಕಾ ಯಂತ್ರಗಳ ಅವಶ್ಯಯಿದ್ದಿತ್ತೆಂದು ತೋರುತ್ತದೆ. ಒಟ್ಟಾರೆ ಈ ಪದದ ಕುರಿತಾಗಿ ಸ್ಪಷ್ಟವಾದ ವಿವರಣೆಗಳು ದೊರೆಯುವುದಿಲ್ಲ.

ತೇರದಾಳ ಕ್ರಿ.ಶ. ೧೧೮೧ರ ಶಾಸನದಲ್ಲಿ-

> ಸ್ವಸ್ತಿಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
> ಗುಣಗಣಾಳಂಕ್ರಿತ ಸತ್ಯಶೌಚಾಚಾರಚಾರುಚಾರಿತ್ರನಯವಿನಯ
> ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನ ವಿಶುದ್ಧಗುಡ್ಡಧ್ವಜ
> ವಿರಾಜಿತಾನೇಕಸಾಹಸ ಲಕ್ಷ್ಮೀಸಮಾಲಿಂಗಿತವಕ್ಷಸ್ಥಳಭುವನ
> ಪರಾಕ್ರಮೋನ್ನತರುಂ ಮುಖ್ಯಪಟ್ಟಿಗುರೂತ್ಪತ್ತಿ ಬಲದೇವ

ವಾಸುದೇವಖಣ್ಡಳಿ ಮೂಳಭದ್ರವಂಶೋದ್ಭವರುಂ ಪದ್ಮಾವತೀ
ದೇವಿಲಬ್ಧವರಪ್ರಸಾದರುಮಪ್ಪ ಶ್ರೀಮದಯ್ಯವಳೆಯಯ್ನೂರ್ವ್ವ
ಸ್ವಾಮಿಗಳು ಕುನ್ತಳವಿಷಯದೊಳು ಗ್ರಾಮನಗರಖೇಡಕರ್ವ್ವಡ
ಮಡಂಬದ್ರೋಣಾಮುಖ ಪತ್ತಣಂಗಳಿಂದಮನೇಕಮಾಟಕೂಟ
ಪ್ರಸಾದದೇವಾಯತನಂಗಳಿಂದಮೊಪ್ಪುವಗ್ರಹಾರಪಟ್ಟಣಂಗಳಿಂದ
ಮತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರದೊಳಗೆ ಹನ್ನೆರಡಕ್ಕಂ
ಮೊದಲಬಾಡಂ ಬಣಂಜುವಟ್ಟಣಂ ನಡವೆಯಮನೆ ತೇರಿದಾಳದಲು
ಸಕವರ್ಷ ೧೧೧೪ನೆಯ ಪ್ಲವಸಂವತ್ಸರದ ಆಶ್ವಯುಜ ಬಹುಳ
೩ ಆದಿವಾರದಲು ದ್ವಾತ್ರಿಂಸತುವೇಳಾವುರಮುಂ ಮಷ್ಟಾದಶಪಟ್ಟಣಮಂ
ಚೌಸಷ್ಟಿಯೋಗಪೀಠಮುಂ ಮಱುವತ್ತನಾಲ್ಕುಘಟಿಕಸ್ಥಾನಮುಂ
ನಾನಾದೇಶಾಭ್ಯನ್ತರದ ಗವಱೆಗಾತ್ರಿಗರುಂ ಸೆಟ್ಟಿಯರುಂ
ಸೆಟ್ಟಿಗುತ್ತರುಂ ಮಹಾನಾಡಾಗಿ ನೆರೆದಾಸ್ಥಳದಲು ಶ್ರೀಮನ್ಮಂ
ಣ್ಡಳಿಕಂ ಗೊಂಕದೇವರಸಂ ಮಾಡಿಸಿದ ನೇಮಿತೀರ್ತ್ಥೇಶ್ವರನ
ಚೈತ್ಯಾಲಯಮಂ ಕಣ್ಡು ಬಲಂಗೊಣ್ಡು ಪೊಡೆವಟ್ಟು ಹರ್ಷ
ಚಿತ್ತರಾಗಿ ದೇವರಷ್ಟವಿಧಾರ್ಚನೆ ಚಂದ್ರಾರ್ಕ್ಕತಾರಂಬರ
ನಡೆವನ್ತಾಗಿ ಕೊಟ್ಟ ಶಾಸನಮರ್ಯಾದೆಯೆನ್ತೆಂದೊಡೆ............

ಎಂದು ಆರವತ್ನಾಲ್ಕು ಘಟಿಕಾಸ್ಥಾನಗಳ ಪ್ರಸ್ತಾಪವಿದೆ.[೧೭] ಇದರಿಂದ ಕೂಹುಂಡಿನಾಡಿನಲ್ಲಿ ಆರವತ್ನಾಲ್ಕು ಘಟಿಕಾಸ್ಥಾನಗಳಿದ್ದವೆಂಬುದು ಸ್ಪಷ್ಟವಾಗುತ್ತದೆ. ಆದರೆ ಅವು ಯಾವುವು ಎಂಬುದು ಸ್ಪಷ್ಟವಿಲ್ಲ. ಪ್ರಸ್ತುತ ಶಾಸನದಲ್ಲಿ 'ಯಿನ್ತೀಘಟಿಕಾಸ್ಥಾನದಾಚಾರ್ಯ್ಯರು' ಎಂದು ಸೂಚಿಸಿರುವುದರಿಂದ ಘಟಿಕಾಸ್ಥಾನದ ಮೇಲ್ವಿಚಾರಣೆಯನ್ನು ಸ್ಥಾನಾಚಾರ್ಯರೇ ನೋಡಿಕೊಳ್ಳುತ್ತಿದ್ದಂತೆ ತೋರುತ್ತದೆ. ಈ ನಾಡಿನ ಕೆಲವು ಶಾಸನಗಳಲ್ಲಿ ಉಲ್ಲೇಖಿತ ಘಟಿಕಾಸ್ಥಾನಗಳ ವಿವರಗಳು ಇಂತಿವೆ.

೫.೪.೧. ಹೂವಿನಬಾಗೆ (ರಾಯಬಾಗ)

ರಾಯಬಾಗದ ಕ್ರಿ.ಶ. ೧೧೨೭ರ ತ್ರುಟಿತ ಶಾಸನದಲ್ಲಿ–

........ಹಾಪ್ರಚಣ್ಡದಣ್ಡ........ಮಳ ಮಾರ್ತ್ತಣ್ಡನು......ನ್ದನ ನಿಮಿತ್ತ
ಮಿತ್ರಪಲ......ಡಾಮಣಿ ಚಯ.....ಭೂಲೋಕಮಲ್ಲದೇವ ಹ.....
ಸಮಸ್ತಪ್ರಸಸ್ತಿಸಹಿತ ಶ್ರೀಮನುಮಪ್ರದೆ.......ಕ್ಕರಸರು..................
ಶ್ರೀಮನ್ಮಹಾಘಟಿಕಾಸ್ಥಾನವಗ್ರಹಾರ ಹೂವಿನಬಾಗೆಯ ತ್ರಿಭೋಗಾ
ಭ್ಯಂತರಸಿದ್ಧಿಯಂ ಪಡೆದಾಳುತ್ತಮಿರೆ........................

ಎಂದು ಘಟಿಕಾಸ್ಥಾನ ಹೂವಿನಬಾಗೆ ಎಂಬ ಪ್ರಸ್ತಾಪವಿದೆ.[೧೮] ಇದರಿಂದ ರಾಯಬಾಗವು ಪ್ರಸಿದ್ಧ ಘಟಿಕಾಸ್ಥಾನವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಸಮಕಾಲೀನ ಶಾಸನಗಳಲ್ಲಿ ಇದನ್ನು ಪೂವಿನಬಾಗೆ, ಹೂವಿನಬಾಗೆ, ಬಾಗೆ ಎಂದು ಕರೆಯಲಾಗಿದೆ.[೧೯] ಹಣ್ಣಿಕೇರಿಯ ಕ್ರಿ.ಶ. ೧೨೯೯ರ ಶಾಸನದಲ್ಲಿ 'ತೆಂಕಲುಬಾಗೆ' ಎಂಬ ಪಸ್ತಾಪವಿದೆ.[೨೦] ಈ ಪಟ್ಟಣವು ಸರ್ವಧರ್ಮಗಳ ಸಮನ್ವಯ ಕೇಂದ್ರವಾಗಿತ್ತೆಂಬುದು ಇಲ್ಲಿಯ ಶಾಸನಗಳಿಂದ ದೃಢಪಡುತ್ತದೆ. ಈ ಪಟ್ಟಣದಲ್ಲಿದ್ದ ಮಾಹಾಜನರು–

ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾಣ

> ಪಾರಾಯಣ ಜಪಸಮಾಧಿ ಶೀಲಸಂಪನ್ನರು । ಮತೀತಾನಾಗತ
> ವರ್ತ್ತಮಾನಕಾಲ ದೂರ ಶ್ರವಣ ವಿಜ್ಞಾನಾದಿಗಳೊಳತಿಪರಿಚಿತರುಂ
> ಮನೇಕ ತರ್ಕ್ಕಶಾಸ್ತ್ರವಿದ್ಯಾವಿಶಾರದರುಂ ಚತುರ್ವ್ವೇದ ಪಾರಾವಾರ
> ಪಾರಗರುಮಾಶ್ರಿತಜನಾಧಾರರುಮೇಕವಾಕ್ಯರುಂ ಶ್ವೇತಚ್ಛತ್ರಚಾಮ
> ರಾದ್ಯನೇಕ ರಾಜ್ಯಚಿಹ್ನೋಪಲಕ್ಷಿತರುಂ । ಶ್ರೀವಾಸುದೇವ ಲಬ್ಧವರ
> ಪ್ರಸಾದರುಮಪ್ಪ ಶ್ರೀಮನ್ಮಹಾಘಟಿಕಾಸ್ಥಾನಮಗ್ರಹಾರಂ ।
> ಶ್ರೀವಾಮದೇವಲಬ್ಧವರಪ್ರಸಾದರುಮಪ್ಪ ಶ್ರೀಮನ್ಮಹಾಘಟಿಕಾ
> ಸ್ಥಾನಮಗ್ರಹಾರಂ ಪೂವಿನಬಾಗೆ ವೂರೊಡೆಯಪ್ರಮುಖವಶೇಷ
> ಮಹಾಜನಙ್ಗಳು ಸಧರ್ಮ್ಮದಿಂದ ಪ್ರತಿಪಾಳಿಸುವರು ॥

ಚತುರ್ವೇದ ಪಾರಾಂಗತರಾಗಿದ್ದರೆಂದು ರಾಯಬಾಗದ ಕ್ರಿ.ಶ. ೧೧೮೯ರ ಶಾಸನವು ಬಣ್ಣಿಸಿದೆ. ಈ ಘಟಿಕಾಸ್ಥಾನದಲ್ಲಿ–ಕೀರ್ತ್ತಿರ್ಯಸ್ಯ ಗುಣಾಶ್ರಯಾದ್ವಿಮಳತಾಮಾಲಂಬತೇ ಭಾರತೀ ಪ್ರಾಗಲ್ಭ್ಯಂ ಭಜತೇ ಬಿಭರ್ತ್ತಿ ಚ ತಪಶ್ರೀರಾತ್ಮನೋ ಗೌರವಂ ಸೋಯಂ ದುರ್ದ್ಧರವಾದಿವಾರಣಮದ ಪ್ರೋದ್ಭೇದವಜ್ರಾಂಕುಶೋ ಬಾಭಾತ್ಯತ್ರ ಕುಮಾರಕೀರ್ತ್ತಿಯತಿಪ ಸ್ಯಾದ್ವಾದವಿದ್ಯಾನಿಧಿಃ ॥ ದುರ್ದ್ಧರವಾದಿವಾರಣಮದನಾದ ಕುಮಾರಕೀರ್ತಿಯಂತಹ ಆಚಾರ್ಯರಿದ್ದರು. ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನವು—.....ಪ್ರಯಾಗ ಬಡಗಲು ತೆಂಕಲುಬಾಗಿ..... ॥ ಎಂದು ಪೂವಿನಬಾಗೆಯು ಪ್ರಯಾಗದಷ್ಟೇ ಪ್ರಸಿದ್ಧಿ ಪಡೆದಿತ್ತೆಂದು ವರ್ಣಿಸಿದೆ.[೧೧] ಅಂದರೆ ಉತ್ತರ ಭಾರತದಲ್ಲಿ ಪ್ರಯಾಗವು (ಕಾಶಿ) ವಿದ್ಯೆಗೆ ಪ್ರಸಿದ್ಧಿ ಪಡೆದಂತೆ ಪೂವಿನಬಾಗೆಯು ಕೂಹುಂಡಿನಾಡಿನಲ್ಲಿ ವಿದ್ಯೆಗೆ ಪ್ರಸಿದ್ಧಿ ಪಡೆದಿತ್ತು. ಇಲ್ಲಿನ ಶಿಕ್ಷಣ ಕೇಂದ್ರದಲ್ಲಿ ಅಧ್ಯಯನ ಮಾಡಿದ ಜೈನಕವಿ ರಾಜಾದಿತ್ಯನು ಒಬ್ಬ ಶ್ರೇಷ್ಠ ಗಣಿತಜ್ಞನಾಗಿ, ಕವಿಯಾಗಿ ಹೊರ ಹೊಮ್ಮಿದ್ದಾನೆ.

೫.೪.೨. ಸವದತ್ತಿ

ಸವದತ್ತಿಯು (ಸುಗಂಧವರ್ತಿ) ರಟ್ಟ ಮನೆತನದ ಪ್ರಾರಂಭದ ರಾಜಧಾನಿಯಾಗಿತ್ತು. ಇಲ್ಲಿ ಅಧ್ಯಯನ ಮತ್ತು ಅಧ್ಯಾಪನ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿದ್ದವು. ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ 'ಮುಳುಗುಂದ ವರವೈಶ್ಯಜಾತಶ್ರೇಷ್ಟಿಬಿ' ಎಂಬ ಪ್ರಸ್ತಾಪವಿದೆ.[೨೨] ಅಂದರೆ ಇಂದಿನ ಗದಗ ತಾಲ್ಲೂಕಿನ ಮುಳಗುಂದದ ವೈಶ್ಯ ಕುಲದವರು (ಬಯಿಸಕುಲ) ಮೈಳಾಪತೀರ್ಥಕ್ಕೆ ದಾನ–ದತ್ತಿಗಳನ್ನು ಕೊಟ್ಟು ಶಿಷ್ಯರಾಗಿದ್ದರು. ಸವದತ್ತಿಯ ರಟ್ಟ ಮನೆತನದ ಮೇರಡ, ಪೃಥ್ವೀರಾಮ, ಪಿಟ್ಟಿಗ, ಕನ್ನರ ಮೊದಲಾದ ಅರಸರು ಮೈಳಾಪತೀರ್ಥದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಪೃಥ್ವೀರಾಮನು ಮೈಳಾಪತೀರ್ಥದ ಗುರುಕುಲದಲ್ಲಿ ಛಾತ್ರನಾಗಿದ್ದನು.[೨೩] ಈತನು ಇಲ್ಲಿಯೇ ಶಿಕ್ಷಣ ಪಡೆಯುತ್ತಿದ್ದನು. ಇದರಿಂದ ಸವದತ್ತಿಯು ಕ್ರಿ.ಶ. ಸುಮಾರು ೯ನೆಯ ಶತಮಾನದಲ್ಲಿ ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿತ್ತೆಂಬುದು ಮನದಟ್ಟಾಗುತ್ತದೆ. ಮೈಳಾಪತೀರ್ಥವು ಮಳಹಾರೀ ತೊರೆಯ (ಇಂದಿನ ಮಲಪ್ರಭಾ ನದಿ) ದಡದ ಮೇಲಿತ್ತು. ಇಂದಿನ ಎಲ್ಲಮ್ಮದೇವಿಯ ದೇವಾಲಯದ ಪರಿಸರವೇ ಮೈಳಾಪತೀರ್ಥವಾಗಿತ್ತು. ಇದು ಯಾಪನೀಯ ಸಂಘದ ಮುನಿಗಳ ಅಧ್ಯಯನ ಮತ್ತು ಅಧ್ಯಾಪನದ ಪ್ರಧಾನ ಕೇಂದ್ರವಾಗಿತ್ತು.[೨೪] ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಸವದತ್ತಿಯ ರಟ್ಟ ಮನೆತನದ

ಲಕ್ಷ್ಮೀದೇವನು ಸುಗಂಧವರ್ತಿಯಲ್ಲಿ ನಿರ್ಮಿಸಿದ ಮಲ್ಲಿಕಾರ್ಜುನ ದೇವಾಲಯಕ್ಕೆ ಕೊಡಲಾದ ದಾನದ ವಿವರಗಳಲ್ಲಿ–

ಮತ್ತಮಾ ದೇವರ್ಗ್ಗೆ ಶ್ರೀಮದನಾದಿಯ ಪಿರಿಯಗ್ರಹಾರಂ
ಹಸುಡಿಯಂ ನೂರ್ವರುರ್ಮ್ಮಹಾಜಂಗಳುಂ ಹಂನಿರ್ವ್ವರ್ಗ್ಗಾ
ವುಂಡಗಳುಂ ತಂಮೂರ ತೆಂಕಣ ಘೈಸ್ಸಗೆಱೆಯಿಂ ತೆಂಕಣ
ಸವಂದತ್ತಿಯ ಸವಣುಬೊಲದ ಹೊಲ ಮೇರೆಯಿಂ ಪಡವಲು
ತಮ್ಮ ಬಾಸಿಂಗವಾಡದ ಪಡುವಣ ಹೆಬ್ಬಸುಗೆಯ ಸ್ಥಳದೊಳಗೆ
ಸೊಗಲದ ಡಿಗೇಶ್ವರದೇವರ ಕೋಲಲಳೆದು ಸರ್ವ್ವನಮಶ್ಯವಾಗಿ
ಕೊಟ್ಟ ಕೆಯಿ ಕಂಬಂ ಮೂನೂಱು..........................

ಎಂದು ಘೈಸ್ಸಗೆಱೆಯ ಉಲ್ಲೇಖವಿದೆ.[೨೫] ಘೈಸ್ಸಗೆರೆಯು ಘಟಿಕಾಸ್ಥಾನದಲ್ಲಿ ವಿದ್ಯಾರ್ಜನೆ ಮಾಡಿದ ವಿದ್ವಾಂಸರು ಒಂದೆಡೆ ವಾಸವಾಗಿರುವ ಕೇರಿಯಾಗಿರುವಂತೆ ತೋರುತ್ತದೆ. ಈ ಎಲ್ಲ ವಿಚಾರಗಳಿಂದ ಸವದತ್ತಿಯು ರಟ್ಟ ಮನೆತನದ ಆಳ್ವಿಕೆಯ ಕಾಲಾವಧಿಯಲ್ಲಿ ಪ್ರಮುಖ ಘಟಿಕಾಸ್ಥಾನವಾಗಿತ್ತೆಂದು ಸ್ಪಷ್ಟವಾಗುತ್ತದೆ.

೫.೪.೩. ಹಣ್ಣೀಕೇರಿ

ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ–

...........ಯೆಪ್ಪತ್ತುಂ ಬಾಡದ ಪ್ರವಿದ್ಧ ಹರಳೆಂಟುಂಬಾಡದ
ಚಿಂಚುಣಿಕೆ................

ಎಂದು ನಿರೂಪಿತವಾಗಿರುವ ಈ ಗ್ರಾಮವು ಪ್ರಮುಖ ಶಿಕ್ಷಣ ಕೇಂದ್ರವಾಗಿತ್ತು.[೬] ಈ ಗ್ರಾಮವನ್ನು 'ವ್ಯಾಕೀರ್ಣ' ಎಂದು ಕರೆಯಲಾಗಿದೆ. ಇದು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಜೈನ ಮುನಿಗಳ ತಾಣವಾಗಿತ್ತು. ಈ ಮುನಿಗಳಲ್ಲಿ ಕನಕಪ್ರಭ ಎಂಬ ಮುನಿಯನ್ನು–

ಕನಕಮನೆಕೊಟ್ಟು ವಿಬುಧರ್ಗ್ಗನವರತಂ ಕೀರ್ತಿವೆತ್ತಕಾರಣದಿಂದಂ
ಕನಕಪ್ರಭನಾಮಯುತಂ ಜನಿಯಿಸಿದಂ ಜಾತರೂಪಧರವಿಖ್ಯಾತಂ ||
ತನ್ಮುನೀಶ್ವರಪ್ರಿಯಶಿಷ್ಯಾಗ್ರೇಸರನೆಂತೆನೆ || ವರಮೀಮಾಂಸಕ
ಕಂಜಕುಂಜರನಿಭಂ ಚಾರ್ವ್ವಾಕವಾದೀಭಕೇಶರಿ ವೈಶೇಷಿಕಲೇಲಿಹಾ
ನವಿನತಾಪತ್ಯಂ ಸುಸಾಂಖ್ಯಾವನೀಧರವಜ್ರಾಯುಧನುಗ್ರಬೌದ್ಧಬುಧ
ಜೀಮೂತಾಳಿಝುಂ ಝಾನಿಳಂ ನಿರುತಂ ಶ್ರೀಧರದೇವ ದಿಬ್ಯಮೆನಿಪಂ
ತ್ರೈವಿದ್ಯಚಕ್ರೇಶ್ವರಂ || ಯೀಧರೆ ಬಣ್ಣಿಪುದಖಿಳಕಳಾಧಾರರನಧಿಕಪುಂಣ್ಯರಂ
ತ್ರೈವಿದ್ಯಶ್ರೀಧರಮುನೀಂದ್ರ ಶಿಷ್ಯಶ್ರೀಧರರನಮಳಬಳಿಯ ಕನಕಪ್ರಭನಂ ||
ಸುರುಚಿರಕೀರ್ತಿಧಾಮ ಕನಕಪ್ರಭಪಂಡಿತದೇವ ಭಾಗ್ಯವೀಧರೆಗತಿಕೌತುಕಂ
ನೆಗಳ್ದ ಕೂಂಡಿಮಹೀತಳವೆಯ್ದೆ ರಾಗದಿಂ ಚರಣತಳಾಶ್ರಿತಂ ವಿಬುಧಸಂತತಿ
ಬೇಡೆ ಸಮಸ್ತವಸ್ತುವಂ ಕರದೊಳು ದೀವಡೀ ಮುನಿಮನೋಹರ ಜಂಗಮ
ಕಲ್ಪಭೂರುಹಂ || ಜಿನಸಮಯಕುಮುದವನವಿಕಸನಚಂದ್ರಂ ಜಿನಮತಾಬ್ಜವನ
ಕಳಹಂಸಂ ಸಂಜಿನಪೂಕಾಸಕ್ರಂದೇವನನಘಂ ಕನಕಪ್ರಭಂ ಜಗದ್ವಿಖ್ಯಾತಂ ||

ಮಹಾವಿದ್ವಾಂಸನೂ, ಮೀಮಾಂಸಕನೂ, ಚಾರ್ವಾಕವಾದಿಯೂ, ಮದ್ದಾನೆಯೆಂಬ ಅಂಧಕಾರಕ್ಕೆ ಜ್ಞಾನಾಂಕುಶನೂ, ವೈಶೇಷಿಕಪ್ರವೀಣನೂ, ಮಹಾತಪಸ್ವಿಯೂ, ಸಾಂಖ್ಯವಾದಿಯೂ, ಬೌದ್ಧ ವಿದ್ವಾಂಸರಿಗೆ ವಜ್ರಾಯುಧನೂ, ತ್ರೈವಿದ್ಯೆಯಲ್ಲಿ ಪಾರಂಗತನೂ, ಚಕ್ರೇಶ್ವರನೂ ಎಂದು ಕೊಂಡಾಡಲಾಗಿದೆ.[೨೭] ಇದರಿಂದ ಈ ಗ್ರಾಮದಲ್ಲಿ ಅಧ್ಯಯನ ಮತ್ತು ಅಧ್ಯಾಪನ ಚಟಿವಟಿಕೆಗಳು ನಡೆಯುತ್ತಿದ್ದವೆಂಬುದು ಸ್ಪಷ್ಟವಾಗುತ್ತದೆ. ಶ್ರೀಧರ ಮುನಿಯ ಶಿಷ್ಯನಾಗಿದ್ದ ಕನಕಪ್ರಭ ಮುನಿಯನ್ನು ಪ್ರಸ್ತುತ ಶಾಸನವು–

> ಸುರಚರ ಕೀರ್ತ್ತಿಧಾಮ ಕನಕಪ್ರಭಪಂಡಿತದೇವ ಭಾಗ್ಯವೀ
> ಧರೆಗತಿಕೌತುಕಂನೆಗಳ್ದ ಕೂಂಡಿಮಹೀತಳವೆಯ್ದೆರಾಗದಿಂ
> ಚರಣತಳಾಶ್ರೀತಂವಿಭುಧಸಂತತಿ(ಜೀದೆ) ಬೇಡೆ ಸಮಸ್ತವಸ್ತವಂ
> ಕರದೊಳುದೀವದೀ ಮುನಿಮನೋಹರ ಜಂಗಮ ಪಳ್ಳಭೂರುಹಂ ॥

ಎಂದು ಕನಕಪ್ರಭಪಂಡಿತದೇವನು ಕೂಹುಂಡಿನಾಡಿಗೆ ಭಾಗ್ಯವಿದ್ದಂತೆ, ಈ ಭೂಮಿಯಲ್ಲಿ ಅತ್ಯಂತ ಕೌತುಕಮಯವಾದ ಘಟನೆಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದ್ದಾರೆ ಎಂದಿತ್ಯಾಗಿ ಕೊಂಡಾಡಲಾಗಿದೆ.[೨೮] ಇಂತಹ ಮಹಾಮುನಿಗಳಿದ್ದ ಹಣ್ಣಿಕೇರಿ ಗ್ರಾಮವು ಅಂದು ಪ್ರಸಿದ್ಧ ಜೈನ ಶಿಕ್ಷಣ ಕೇಂದ್ರವಾಗಿತ್ತು. ಈ ಕೇಂದ್ರದಲ್ಲಿ ಜೋತಿಷ್ಯಶಾಸ್ತ್ರದ ಅಧ್ಯಯನ ಮತ್ತು ಅಧ್ಯಾಪನ ನಡೆಯುತ್ತಿದ್ದವು. ಇಲ್ಲಿಯ ಜೈನ ಮುನಿಗಳು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಸಮಕಾಲೀನ ಆಳರಸರಾದಿ ಅಧಿಕಾರಿಗಳು ಮತ್ತು ವರ್ತಕರು ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ. ಇದನ್ನು ಪ್ರಸ್ತುತ ಶಾಸನದಲ್ಲಿರುವ–

> ಶ್ರೀಯಾಪನೀಯ ಶಂಘ ಮೈಳಾಪಾಂನ್ವಯ ಕಾರೆಯಗಣಾ
> ಚಾರ್ಯ್ಯರ್ಜ್ಯಂ ಶ್ರೀಕನಕಪ್ರಭಪಂಡಿತದೇವದಿವ್ಯಶ್ರೀಪಾದಪದ್ಮಪ್ರಕ್ಷಾಳನಂ
> ಗೆಯ್ದಾ ಗುರುಗಳಿಗೆ ಗುರುಭಕ್ತಿಪೂರ್ವ್ವಕಂ ಶ್ರೀಮನ್ಮಹಾಪ್ರಭು
> ಮೂಲಿಗಂ ಮುರಿಯ್ಯರಂಮಗಾಮುಂಡನು ಆಚಂದ್ರಾರ್ಕ್ಕತಾರಂ
> ಬರಂ ಸರ್ವ್ವಾಬಾಧಪರಿಹಾರಾರ್ತ್ಥ ತಂನೂರಾಗ್ನೇಯದಿಗ್ಭಾಗದಲಿ
> ಕೊಟ್ಟ ಭೂಮಿ ಕಂಬ ೭೦೦ ದಾನಶಾಲೆಯ ನಿವೇಶನಂ.........

ಎಂಬ ಪ್ರಸ್ತಾಪವು ದೃಢಪಡಿಸುತ್ತದೆ.[೨೯]

೫.೫. ದೇವಾಲಯಗಳು

ಕನ್ನಡನಾಡಿನಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಮತ್ತು ಜೈನ ಧರ್ಮದ ಯಾಪನೀಯ ಸಂಘದ ಆಚಾರ್ಯರು ಅಸಂಖ್ಯಾತ ದೇವಾಲಯಗಳು ಮತ್ತು ಬಸದಿಗಳ ನಿರ್ಮಾಣಕ್ಕೆ ಪ್ರೇರಕರಾಗಿದ್ದಾರೆ. ಮಹಾವಿದ್ವಾಂಸರಾಗಿದ್ದ ಈ ಆಚಾರ್ಯರು ದೇವಾಲಯಗಳು ಮತ್ತು ಬಸದಿಗಳಲ್ಲಿ ನೆಲೆಸಿದ್ದರು. ಇವರು ತಮ್ಮ ಅಧ್ಯಾತ್ಮಿಕ ಸಾಧನೆಯೊಂದಿಗೆ ವಿದ್ಯಾಪ್ರಸಾರವನ್ನೂ ಕೈಗೊಂಡಿದ್ದಾರೆ. ಸಮಕಾಲೀನ ಆಳರಸರಾದಿ ಅಧಿಕಾರಿಗಳು, ವರ್ತಕರು, ಪ್ರಜೆಗಳು ದೇವಾಲಯಗಳು ಮತ್ತು ಬಸದಿಗಳಿಗೆ ದಾನ–ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭದಲ್ಲಿ ವಿದ್ಯಾದಾನಕ್ಕೂ ದಾನ ಮಾಡಿದ ಸಂಗತಿಯನ್ನು ಅಂದಿನ ಶಾಸನಗಳಲ್ಲಿ ಕಾಣಬಹುದು. ಇದರಿಂದ ಬಹುತೇಕ ತ್ರಿಕೂಟಾಚಲ ವಿನ್ಯಾಸದ ದೇವಾಲಯಗಳು ಮತ್ತು ಬಸದಿಗಳೂ ಶಿಕ್ಷಣ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದ ವಿಚಾರ ಸ್ಪಷ್ಟವಾಗುತ್ತದೆ. ಇವುಗಳಲ್ಲಿ

ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು 'ವಿದ್ಯಾರ್ಥಿ ತಪೋಧನರು' ಮತ್ತು 'ವಿದ್ಯಾರ್ಥಿ ಮಾಣಿಯರು' ಎಂಬೆರಡು ಬಗೆಯಲ್ಲಿ ಗುರುತಿಸಲಾಗುತ್ತಿತ್ತು. ವಿದ್ಯಾರ್ಥಿ ತಪೋಧನರನ್ನು 'ನೈಷ್ಠಿಕ ತಪೋಧನರು' ಮತ್ತು 'ನೈಷ್ಠಿಕ ಬ್ರಹ್ಮಚಾರಿಗಳು' ಎಂದು ಕರೆಯಲಾಗುತ್ತಿತ್ತು. ಇವರು ದೇವಾಲಯಗಳ ಮತ್ತು ಬಸದಿಗಳ ಆಚಾರ್ಯ ಪರಂಪರೆಗೆ ಸಂಬಂಧಿಸಿದ್ದು, ಅಜೀವಪರ್ಯಂತ ಬ್ರಹ್ಮಚಾರಿಗಳಾಗಿದ್ದುಕೊಂಡು ಅಧ್ಯಯನದ ತರುವಾಯ ಬೇರೆ ಬೇರೆ ದೇವಾಲಯಗಳು ಮತ್ತು ಬಸದಿಗಳಲ್ಲಿ ಸ್ಥಾನಪತಿಗಳಾಗುತ್ತಿದ್ದರು. ವಿದ್ಯಾರ್ಥಿ ಮಾಣಿಯರು ತಮ್ಮ ಅಧ್ಯಯನದ ತರುವಾಯ ಗೃಹಸ್ಥರಾಗುತ್ತಿದ್ದರು.[೩೦]

ಕೂಹುಂಡಿನಾಡಿನ ಕಲ್ಲೊಳೆಯ ತ್ರಿಕೂಟಮಂಡಿತ ಶಾಂತಿನಾಥ ಬಸದಿ, ಮಮದಾಪುರದ ತ್ರಿಕೂಟಪ್ರಾಸಾದ (ಇಂದಿನ ಬಸವಣ್ಣ ದೇವಾಲಯ) ಮೊದಲಾದ ತ್ರಿಕೂಟಾಚಲ ದೇವಾಲಯಗಳು ಮತ್ತು ಬಸದಿಗಳು ಅಧ್ಯಯನ ಮತ್ತು ಅಧ್ಯಾಪನ ಕೇಂದ್ರಗಳಾಗಿದ್ದವು. ಇಲ್ಲಿಯ ಆಳರಸರಾದಿ ಅಧಿಕಾರಿಗಳು ಮತ್ತು ವರ್ತಕರು ಈ ದೇವಾಲಯಗಳು ಮತ್ತು ಬಸದಿಗಳ ವಿವಿಧ ಕಾರ್ಯಗಳಿಗೆ ದಾನ-ದತ್ತಿಗಳನ್ನು ಕೊಡುತ್ತಿದ್ದ ಸಂದರ್ಭದಲ್ಲಿ ಸ್ಥಾನಾಚಾರ್ಯರು ಮತ್ತು ಛತ್ರಗಳ ಆಹಾರಕ್ಕೂ ದಾನವನ್ನು ಕೊಟ್ಟಿರುವುದು ಸವದತ್ತಿಯ ಕ್ರಿ.ಶ. ೧೧೮೭ರ ಶಾಸನದಲ್ಲಿ-

ಶ್ರೀಮನ್‌ಮಹಾಸಾಮನ್ತನಂಕರಸರ್..........ಕೂಹುಣ್ಡಿಮೂಱು
ಸಾಸಿರದ ಬಳಿಯ ಕಂಪಣ ಪನ್ನೆರಡಱ ಮೊದಲಬಾಡಂ
ಸಿವ....ರಾಜಧಾನಿ ಸುಗನ್ಧವತ್ತಿಯೊಳ್ ತನ್ನ ಮಾಡಿಸಿದಂಕೇಶ್ವರ
ದೇವರಂಗಭೋಗಕ್ಕಂ ಖಣ್ಡಸ್ಫುಟಿತಕ್ಕಂ ತಪೋಧನರಾಹಾರಕ್ಕಂ
ವಿದ್ಯಾಛಾತ್ರಕ್ಕವೆನ್ದು ಸಮಸ್ತಜಗದುತ್ಪತ್ತಿಸ್ಥಿಪ್ರಳಯಕಾರ್ಯ್ಯಕಾರಣಂ
ಶ್ರೀ.....ಕ್ತಿಪಾದಾಂಭೋರುಹ ರಾ......ವಿಜ್ಞಾನಾವಾಪ್ತನಮಳೀಕೃತ
ಮತಿಗಳುಂ ಶ್ರೀ ಮುನೀಂದ್ರಪ್ರಣೀತ ಪಂಚ...ನ..................

ಎಂದು ದಾಖಲಾಗಿದೆ.[೩೧] ಇಲ್ಲಿಯ ದೇವಾಲಯಗಳು ಮತ್ತು ಬಸದಿಗಳಲ್ಲಿ ಪ್ರಾಯಶಃ ಪ್ರಾಥಮಿಕ ಹಂತದ ಶಿಕ್ಷಣದ ವ್ಯವಸ್ಥೆಯಿದ್ದಂತೆ ತೋರುತ್ತದೆ. ಅಂತಾಗಿ ಮೂಲತಃ ಅಧ್ಯಯನದ ಅವಕಾಶಕ್ಕೆ ತಳಹದಿಯನ್ನು ಹಾಕಿದ ಶ್ರೇಯಸ್ಸು ದೇವಾಲಯಗಳು ಮತ್ತು ಬಸದಿಗಳಿಗೆ ಸಲ್ಲುತ್ತದೆ. ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ-

ಪುಲಿಗಳೆ ಧರ್ಮ್ಮಶ್ರವಣಮನೆಲೆ ಮಿಡುಕದೆ ಕೇಳುತಿರ್ಪ್ಪುವರಗಿಳಿಗಳ್
ನಿರ್ಮ್ಮಲ ಮುನಿಪರೋದುವವೋಂದಂ ಚಳವಾದೆಡೆಯಱಿದು
ಪೇಳ್ವುವಿರುಳುಂ ಪಗಲುಂ ‖ ಈ ಧರ್ಮ್ಮಮನೂರುಂ ಸ್ಥಾನಾಚಾರ್ಯ್ಯನುಂ
ಕೂಡಿ ಸ್ವಧರ್ಮ್ಮದಿಂ ನಡೆಯಿಸುವ ಸತ್ರಕ್ಕೆ ಬ್ರಾಹ್ಮಣಿಯಡುವಳ್ ‖

ಎಂಬ ಪ್ರಸ್ತಾಪವಿದೆ.[೩೨] ಇದು ಋಷಿ-ಮುನಿಗಳಿಗೆ ಧ್ಯಾನ ಮಾಡಲು ಮತ್ತು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಯೋಗ್ಯ ಸ್ಥಳವಾಗಿತ್ತು.

೫.೬. ಮಠಗಳು

ಕೂಹುಂಡಿನಾಡಿನ ಪ್ರದೇಶದ ದೇವಾಲಯಗಳು ಮತ್ತು ಬಸದಿಗಳಲ್ಲಿ ನಡೆಯುತ್ತಿದ್ದ ಧಾರ್ಮಿಕ

ಹಾಗೂ ಸಾಮಾಜಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಮತ್ತು ಆಯಾ ಧರ್ಮಗಳ ಆಚಾರ್ಯರು ತಂಗಲು ದೇವಾಲಯಗಳು ಮತ್ತು ಬಸದಿಗಳಿಗೆ ಹೊಂದಿಕೊಂಡಂತೆ ಮಠಗಳಿದ್ದವು. ಇವುಗಳಲ್ಲಿ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳೊಂದಿಗೆ ಅಧ್ಯಯನ ಮತ್ತು ಅಧ್ಯಾಪನ ಕ್ರಿಯೆಗಳೂ ಜರುಗುತ್ತಿದ್ದವು. ಕೆಲವು ಸ್ವತಂತ್ರ ಮಠಗಳೂ ಈ ಚಟುವಟಿಕೆಗಳನ್ನು ನಿರ್ವಹಿಸುತ್ತ ಬಂದಿವೆ. ನೈಷ್ಠಿಕ ಬ್ರಹ್ಮಚಾರಿಗಳು ಮಠಗಳ ಸ್ಥಾನಾಚಾರ್ಯರಾಗಿದ್ದರು. ಕೂಹುಂಡಿನಾಡಿನ ಆಳರಸರಾದಿ ಅಧಿಕಾರಿಗಳು ಇಲ್ಲಿಯ ದೇವಾಲಯಗಳು ಮತ್ತು ಬಸದಿಗಳಿಗೆ ಹೊಂದಿಕೊಂಡಂತಿದ್ದ ಶೈವ ಮತ್ತು ಜೈನ ಧರ್ಮಗಳ ಮಠಗಳಲ್ಲಿ ಜರುಗುತ್ತಿದ್ದ ವಿದ್ಯಾದಾನಕ್ಕೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿ ಪ್ರೋತ್ಸಾಹಿಸಿದ ವಿಚಾರಗಳು ಸಮಕಾಲೀನ ಶಾಸನಗಳಲ್ಲಿ ದಾಖಲಾಗಿವೆ.

ಕಲಬಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ-

> ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರ ಮೋನಾನುಷ್ಠಾಣ
> ......ಧಿ ಸಂಪನ್ನರಪ್ಪ ಶ್ರೀಮದಣ್ಣಿಗೆಱೆಯ ನಗರೇಶ್ವರ............
> ಮಲೆಯಾಳಪಣ್ಡಿತರ ಶಿಷ್ಯರ್ಕ್ಕುಡನಪೂರ್ವದವಳ್ಳಿಯ ನಗರೇಶ್ವರದ
> ....ಣ್ಡಿತ........ರಶಿಷ್ಯರ್ ರಾ....ರದ ತೇಜೋರಾಶಿಪಣ್ಡಿತರಂ......
> ಜೇಷ್ಠಮಾ......ವಾದಿತ್ಯವಾರಂ ಸೂರ್ಯ್ಯಗ್ರಹಣನಿಮಿತ್ಯದಿಂ ಕಾಲಂ
> ಕಚ್ಚಿ ಧಾರಾಪೂರ್ವ್ವಕಂ....ರಿಹಾರಮಾಗೆ ಊರಿಂ ತೆಂಕ ಪಲಿಗಿಲಕೆಱೆಯ
> ಕೆಳಗೆ ಮಠದ ವಿದ್ಯಾದಾನ....ಕಮ್ಮ.....................

ಎಂದು ಶೈವ ಧರ್ಮದ ಲಾಕುಳೀಶ-ಪಾಶುಪತ ಪಂಥದ ಅಣ್ಣಿಗೆಱೆಯ (ಇಂದಿನ ನವಲಗುಂದ ತಾಲ್ಲೂಕಿನ ಅಣ್ಣಿಗೇರಿ) ನಗರೇಶ್ವರ ದೇವಾಲಯದ ಸ್ಥಾನಾಚಾರ್ಯನಾದ ಮಲೆಯಾಳಪಂಡಿತದೇವನ ಶಿಷ್ಯ ಕುಡನಪೂರ್ವದವಳ್ಳಿಯ (ಇಂದಿನ ಕೋದಾನಪುರ) ನಗರೇಶ್ವರ ದೇವಾಲಯದ ಸ್ಥಾನಾಚಾರ್ಯನಾದ ತೇಜೋರಾಶಿಪಂಡಿತದೇವನ ಪಾದಗಳನ್ನು ತೊಳೆದು ಧಾರಾಪೂರ್ವಕವಾಗಿ ಮಠದಲ್ಲಿ ನಡೆಯುವ ವಿದ್ಯಾದಾನಕ್ಕಾಗಿ ಭೂದಾನ ಮಾಡಿರುವುದು ದಾಖಲಾಗಿದೆ.[೩೩] ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನದಲ್ಲಿ-

> ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಚೌಡಿಸೆಟ್ಟಿಯರ ಬೆಸದಿಂ
> ಕಲ್ಲರ್ಸರ ನಿಯಾಮದಿಂ ಶ್ರೀಮತು ಸುಂಕಾಧಿಕಾರಿ ಮತಗೌಂಡನು
> ಚಿಂಚುಣಿಕೆಯ ಪಂಚಮಠಸ್ಥಾನಂಗಳಿಗೆ ಬಿಟ್ಟ ದತ್ತಿಯೆಂತೆಂದಡೆ
> ಮೂಱು ಮದುವೇಱಿಪ್ಪುಸಾಂಕ ಯಿಪ್ಪತ್ತೆತ್ತಿನ ಪಟ್ಟಯಿಂತಿನಿತು......
> ಪರಿಹಾರವಾಗಿ ಬಿಟ್ಟ ದತ್ತಿ ಮಂಗಳಮಹಾಶ್ರೀ ॥

ಎಂದು ಸುಂಕಾಧಿಕಾರಿ ಮತಗೌಡನು ಮಹಾಪ್ರಧಾನ ಸರ್ವಾಧಿಕಾರಿ ಚೌಡಿಸೆಟ್ಟಿಯ ಆಜ್ಞೆಯಂತೆ ಕಲ್ಲರಸನ ಒಪ್ಪಿಗೆಯನ್ನು ಪಡೆದು ಚಿಂಚುಣಿಕೆಯ (ಇಂದಿನ ಹಣ್ಣಿಕೇರಿ) ಪಂಚಮಠಗಳಿಗೆ ಸುಂಕಗಳನ್ನು ದಾನ ಮಾಡಿದ ಪ್ರಸ್ತಾಪವಿದೆ.[೩೪] ಈ ನಾಡಿನಲ್ಲಿ ಕಾಲಾನುಕ್ರಮದಲ್ಲಿ ಅಸ್ತಿತ್ವಕ್ಕೆ ಬಂದ ವೀರಶೈವ ಮತ್ತು ಜೈನ ಧರ್ಮಗಳ ಅನೇಕ ಮಠಗಳೂ ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡ ಬಂದಿವೆ.

೫.೭. ದಾನಶಾಲೆಗಳು

ಕೂಹುಂಡಿನಾಡಿನ ಕೆಲವು ದೇವಾಲಯಗಳು ಮತ್ತು ಬಸದಿಗಳಿಗೆ ಹೊಂದಿಕೊಂಡಂತೆ ದಾನಶಾಲೆಗಳಿದ್ದ ಕುರಿತಾಗಿ ಸಮಕಾಲೀನ ಕೆಲವು ಶಾಸನಗಳಲ್ಲಿ ಪ್ರಸ್ತಾಪಗಳಿವೆ.[೩೫] ಸೊಗಲದ ಕ್ರಿ.ಶ. ೯೭೮ರ ಶಾಸನದಲ್ಲಿ–

ನಾವಿದರಸಗರ ಮಧ್ಯದ ಭೂಮಿಯೆ ನಡೆವ ಬೀಡಿಗೆ
ಬಡಗಲ್ದೇವಂಗೇರಿಗೆ ತೆಂಕಲ್ ದೇವತಪೋಧನರ
ಸತ್ರ ಶಾಲೆಯ ಗೇಹಂ ॥

ಎಂಬ ನಿರೂಪಣೆಯಿದೆ. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

ಆ ಬಸದಿಯ ಪರಿಸೂತ್ರದಿಂ ಮೂಡಲು ಮೂಲಿಗರ
ಮಗಿಲ ಮುಂದಣ ಬಟ್ಟೆಯಿಂ ಬಡಗಲು ಕೂಂಡಿಯ
ಕೋಲಹಸ್ತದಿಂ ಪದಿನೆಂಟು ಕಯ್ಯಗಲ । ನಾಲ್ವತ್ತೆರಡು
ಕಯ್ಯನೀಳದ ದಾನಶಾಲೆಯ ನಿವೇಶನಮು............

ಎಂಬ ಉಲ್ಲೇಖವಿದೆ. ಹಣ್ಣಿಕೇರಿಯ ಕ್ರಿ.ಶ. ೧೨೫೮ರ ಶಾಸನದಲ್ಲಿ–

ಶ್ರೀಮನ್ಮಹಾಪ್ರಭು ಮೂಲಿಗಂ ಮುರಿಯ್ರ್ಯರಂಮಗಾಮುಂಡನು
ಆಚಂದ್ರಾರ್ಕ್ಕತಾರಂ ಬರಂ ಸರ್ವ್ವಾಬಾಧಪರಿಹಾರಾರ್ತ್ಥಂ
ತಂನೂರಾಗ್ನೇಯದಿಗ್ಭಾಗದಲಿ ಕೊಟ್ಟ ಭೂಮಿ ಕಂಬ ೭೦೦
ದಾನಶಾಲೆಯ ನಿವೇಶನಂ ಅಡವನೆಯ ಹಸ್ತ ೨೦ ಗೊಟ್ಟಗೆಯ
ಮನೆ ಹಸ್ತ ೧೦ ಯೆಲೆದೋಂಟ ಕುಳಿ ೨೦೦ ಗಾಣ ೧ ಅಂಗಡಿ
೧ ಪೂದೋಟ ೧ ಯೆಲೆವೇಜೆಂಗೆ ವೀಸ ೧ ಮೇಟಿಗೊಳಗಮೊಂದು
ಮತ್ತರು ಇಂತಿನಿತಂ ಬಿಟ್ಟ ದತ್ತಿ ಮಂಗಳ ಮಹಾಶ್ರೀ ಶ್ರೀ ಶ್ರೀ ॥

ಎಂಬ ಪ್ರಸ್ತಾಪವಿದೆ. ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳು, ದೇವಾಲಯಗಳು ಮತ್ತು ಬಸದಿಗಳಿಗೆ ಕೊಡಮಾಡುತ್ತಿದ್ದ ದಾನ–ದತ್ತಿಗಳು ಈ ದಾನಶಾಲೆಗಳಲ್ಲಿ ಸಂಗ್ರಹವಾಗುತ್ತಿದ್ದವು. ಇವುಗಳ ಮೇಲ್ವಿಚಾರಣೆಯನ್ನು ಸ್ಥಳೀಯ ಸ್ಥಾನಾಚಾರ್ಯರು ನೋಡಿಕೊಳ್ಳುತ್ತಿದ್ದರು. ಈ ದಾನಶಾಲೆಗಳಲ್ಲಿ ಸ್ಥಾನಾಚಾರ್ಯರ ಶಿಷ್ಯರೂ ನೆಲೆಸಿರುತ್ತಿದ್ದರು. ಇಲ್ಲಿಯ ಆಚಾರ್ಯರಲ್ಲಿ ಪರಸ್ಪರ ಅಧ್ಯಯನ, ಅಧ್ಯಾಪನ ಮತ್ತು ಸಾಹಿತ್ಯಿಕ ಚಟುವಟಿಕೆಗಳೂ ನಡೆಯುತ್ತಿದ್ದವು.

೫.೮. ಶಿಕ್ಷಣ ಕೇಂದ್ರಗಳ ಸ್ವರೂಪ

ಕೂಹುಂಡಿನಾಡಿನಲ್ಲಿ ಈ ಮೇಲೆ ಗಮನಿಸಲಾದ ವಿವಿಧ ಶಿಕ್ಷಣ ಕೇಂದ್ರಗಳಲ್ಲಿ ಅಧ್ಯಯನ ಕೈಕೊಳ್ಳುವ ವಿದ್ಯಾರ್ಥಿಗಳ ಶಿಕ್ಷಣವು ಯಾವ ಹಂತದಲ್ಲಿ ಪ್ರಾರಂಭವಾಗುತ್ತಿತ್ತು ಮತ್ತು ಯಾವ ಯಾವ ವಿಷಯಗಳ ಕುರಿತಾಗಿ ಅಧ್ಯಯನ ಮತ್ತು ಅಧ್ಯಾಪನ ನಡೆಯುತ್ತಿತ್ತೆಂಬುದು ಶಾಸನಗಳಲ್ಲಿ ಪ್ರಸ್ತಾಪಗಳಿಲ್ಲ. ಆದರೆ ಈ ಶಿಕ್ಷಣ ಕೇಂದ್ರಗಳ ಸ್ವರೂಪ ಮತ್ತು ಇಲ್ಲಿದ್ದ ಅಧ್ಯಾಪಕರ ಬಿರುದಾವಳಿಗಳ ತಲಸ್ಪರ್ಶಿ ಅಧ್ಯಯನದಿಂದ ಕೆಲವು ಸಂಗತಿಗಳು ಸ್ಪಷ್ಟವಾಗುತ್ತವೆ. ಈ ನಾಡಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಗುರುಕುಲ

ಶಿಕ್ಷಣ ವ್ಯವಸ್ಥೆಯಿತ್ತು. ವೈದಿಕ ಶಿಕ್ಷಣವನ್ನು ಬಾಲಕರ ಐದನೆಯ ವಯಸ್ಸಿನಲ್ಲಿ ಪ್ರಾರಂಭಿಸಲಾಗುತ್ತಿತ್ತು. ಇವರಿಗೆ ಹದಿನಾಲ್ಕು ವರ್ಷಗಳಾದ ನಂತರ ಗುರುವಿನ ಹತ್ತಿರ ಕರೆದೊಯ್ದು ಉಪನಯನ ಸಂಸ್ಕಾರ ಮಾಡಿಸಿ, ಅಲ್ಲಿಯೇ ಗುರುವಿನ ಬಳಿ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣಗಳ ಅಧ್ಯಯನಕ್ಕಾಗಿ ಕೆಲವುಕಾಲ ಬಿಡಲಾಗುತ್ತಿತ್ತು.[೩೬] ಗುರುಗಳು ಪ್ರಾರಂಭದಲ್ಲಿ ವಿದ್ಯಾರ್ಥಿಗಳಿಗೆ ವೇದಗಳನ್ನು ಕಂಠಪಾಠ ಮಾಡಿಸುತ್ತಿದ್ದರು. ಅಂದರೆ ಮೌಖಿಕ ಶಿಕ್ಷಣ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಪ್ರೌಢ ಶಿಕ್ಷಣ ಅವಧಿಯಲ್ಲಿ ವೇದ, ವ್ಯಾಕರಣ, ಮೀಮಾಂಸೆ, ಷಡದರ್ಶನಗಳು, ಆಗಮಗಳು, ಜ್ಯೋತಿಷ್ಯ, ಪುರಾಣ, ಕಾವ್ಯ, ನಾಟಕ, ಅಲಂಕಾರಶಾಸ್ತ್ರ ಸ್ಮೃತಿಗಳು, ಪುರಾಣಗಳನ್ನು ಅಧ್ಯಯನ ಮಾಡಿಸಲಾಗುತ್ತಿತ್ತು.

ಕೂಹುಂಡಿನಾಡಿನ ಪ್ರಯಾಗವೆನಿಸಿದ ಅಗ್ರಹಾರ ರಾಯಬಾಗದಲ್ಲಿ–

> ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾಣ
> ಪಾರಾಯಣ ಜಪಸಮಾಧಿ ಶೀಲಸಂಪನ್ನರು । ಮತೀತಾನಾಗತ
> ವರ್ತಮಾನಕಾಲ ದೂರ ಶ್ರವಣ ವಿಜ್ಞಾನಾದಿಗಳೊಳತಿಪರಿಚಿತರುಂ
> ಮನೇಕ ತರ್ಕಶಾಸ್ತ್ರವಿದ್ಯಾವಿಶಾರದರುಂ ಚತುರ್ವ್ವೇದ ಪಾರಾವಾರ
> ಪಾರಗರುಮಾಶ್ರಿತಜನಾಧಾರರುಮೇಕವಾಕ್ಯರುಂ ಶ್ವೇತಚ್ಛತ್ರಚಾಮ
> ರಾದ್ಯನೇಕ ರಾಜ್ಯಚಿಹ್ನೋಪಲಕ್ಷಿತರುಂ । ಶ್ರೀವಾಸುದೇವ ಲಬ್ಧವರ
> ಪ್ರಸಾದರುಮಪ್ಪ ಶ್ರೀಮನ್ಮಹಾಘಟಿಕಾಸ್ಥಾನಮಗ್ರಹಾರಂ ।

ವೇದಗಳಲ್ಲಿ ಪಾರಂಗತರಾಗಿದ್ದ ಬ್ರಾಹ್ಮಣರಿದ್ದರು. ಇವರು ವೇದಾಧ್ಯಯನ ಮತ್ತು ಕಾವ್ಯಶಾಸ್ತ್ರಗಳಲ್ಲಿ ಪರಿಣತರಾಗಿದ್ದರು.[೩೭] ರಾಯಬಾಗದ ಕ್ರಿ.ಶ. ೧೧೪೯ರ ಶಾಸನದಲ್ಲಿ 'ವ್ಯಾಕರಣ, ತೀಕ್ಷ್ಣ, ದಂಷ್ಟ್ರ, ಸಿದ್ಧಾಂತನಖಪ್ರಮಾಣ ಕೇಸರಭಾರ, ವೇದಾಗಮಶಾಸ್ತ್ರ ಮೊದಲಾದ ವಿಷಯಗಳನ್ನು ಬೋಧಿಸುತಿದ್ದ ಕುರಿತಾಗಿ ನಿರೂಪಣೆಯಿದೆ.[೩೮] ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ ಇಲ್ಲಿಯ ಶಿಕ್ಷಣ ಕೇಂದ್ರದಲ್ಲಿ ಜೋತಿಷ್ಯಶಾಸ್ತ್ರವನ್ನು ಬೋಧಿಸಲಾಗುತ್ತಿದ್ದ ಪ್ರಸ್ತಾಪವಿದೆ.[೩೯] ಪ್ರಸ್ತುತ ಶಾಸನದಲ್ಲಿ ಕನಕಪ್ರಭಪಂಡಿತ ಮುನಿಯನ್ನು–

> ಕನಕಮನೆಕೊಟ್ಟು ವಿಬುಧರ್ಗ್ಗನವರತಂ ಕೀರ್ತ್ತಿವೆತ್ತಕಾರಣದಿಂದಂ
> ಕನಕಪ್ರಭನಾಮಯುತಂ ಜನಿಯಿಸಿದಂ ಜಾತರೂಪಧರವಿಖ್ಯಾತಂ ॥
> ತನ್ಮುನೀಶ್ವರಪ್ರಿಯಶಿಷ್ಯಾಗ್ರೇಸರನೆಂತೆನೆ ॥ ವರಮೀಮಾಂಸಕ
> ಕಂಜಕುಂಜರನಿಭಂ ಚಾರ್ವ್ವಾಕವಾದೀಭಕೇಶರಿ ವೈಶೇಷಿಕಲೇಲಿಹಾ
> ನವಿನತಾಪತ್ಯಂ ಸುಸಾಂಖ್ಯಾವನೀಧರವಜ್ರಾಯುಧನುಗ್ರಬೌದ್ಧಬುಧ
> ಜೀಮೂತಾಳಿಝುಂ ಝೂನಿಳಂ ನಿರುತಂ ಶ್ರೀಧರದೇವ ದಿಬ್ಯಮೆನಿಪಂ
> ತ್ರೈವಿದ್ಯಚಕ್ರೇಶ್ವರಂ ॥ ಯೀಧರೆ ಬಣ್ಣಿಪುದಖಿಳಕಳಾಧಾರರನಧಿಕಮುಂಣ್ಯರಂ
> ತ್ರೈವಿದ್ಯಶ್ರೀಧರಮುನೀಂದ್ರ ಶಿಷ್ಯಶ್ರೀಧರರನಮಳಬಳಿಯ ಕನಕಪ್ರಭನಂ ॥
> ಸುರುಚರಕೀರ್ತ್ತಿಧಾಮ ಕನಕಪ್ರಭಪಂಡಿತದೇವ ಭಾಗ್ಯವೀಧರೆಗತಿಕೌತುಕಂ
> ನೆಗಳ್ದ ಕೂಂಡಿಮಹೀತಳವೆಯ್ದೆ ರಾಗದಿಂ ಚರಣತಳಾಶ್ರಿತಂ ವಿಬುಧಸಂತತಿ
> ಬೇಡೆ ಸಮಸ್ತವಸ್ತುವಂ ಕರದೊಳು ದೀವಡೀ ಮುನಿಮನೋಹರ ಜಂಗಮ
> ಕಲ್ಪಭೂರುಹಂ ॥

ಎಂದು ಕೊಂಡಾಡಲಾಗಿದೆ. ಕನಕಪ್ರಭಪಂಡಿತನು ಮೀಮಾಂಸ, ವೈಶೇಷಿಕ ವಿಷಯಗಳಲ್ಲಿ ಪಾಂಡಿತ್ಯ

ಪಡೆದಿದ್ದನು. ಈತನನ್ನು 'ಬುದ್ಧಜೀಮೂತಾಳಿಝುಂ' ಎಂದು ಕರೆದಿರುವುದರಿಂದ ಈತನು ಬೌದ್ಧ ಮುನಿಗಳನ್ನು (ಭಿಕ್ಷುಗಳು) ವಾದ-ವಿವಾದದಲ್ಲಿ ಸೋಲಿಸಿರುವಂತೆ ತೋರುತ್ತದೆ.

೫.೯. ಕವಿಗಳು ಮತ್ತು ಸ್ಥಾನಾಚಾರ್ಯರು

ಕೂಹುಂಡಿನಾಡಿನ ಪ್ರದೇಶದಲ್ಲಿ ರಚನೆಯಾಗಿರುವ ಸಾಹಿತ್ಯವು ಇಲ್ಲಿಯ ಸಾಂಸ್ಕೃತಿಕ ಶ್ರೀಮಂತಿಕೆಯ ಪ್ರತೀಕವಾಗಿದೆ. ಇದು ಈ ನಾಡಿನ ಜನಜೀವನದ ಪ್ರತಿಬಿಂಬವಾಗಿದೆ. ಇಲ್ಲಿಯ ಅನೇಕ ಕವಿಗಳು, ವಿದ್ವಾಂಸರು, ಸಾಹಿತಿಗಳು ಮತ್ತು ಇವರಿಗೆ ಆಶ್ರಯ-ಪ್ರೋತ್ಸಾವನ್ನು ಕೊಡಮಾಡಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾದ ಆಳರಸರಾದಿ ಅಧಿಕಾರಿಗಳು ಈ ನಾಡಿನ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾಗಿದೆ. ಕನ್ನಡದ ಪ್ರಪ್ರಥಮ ಗಣಿತಶಾಸ್ತ್ರಜ್ಞನಾದ ರಾಯಬಾಗದ ರಾಜಾದಿತ್ಯ, ಕಮಲಾದಿತ್ಯ, ಜಿನವರ್ಮ, ಸೋರಿಗಾಂಕ, ಶ್ರುತಕೀರ್ತಿ, ಪಾರ್ಶ್ವಪಂಡಿತ ಮೊದಲಾದ ಕವಿಗಳು ಈ ನಾಡಿನ ಸಾಹಿತ್ಯವನ್ನು ಶ್ರೀಮಂತವಾಗಿಸಿದ್ದಾರೆ. ಈ ನಾಡಿನಲ್ಲಿ ಜೈನಧರ್ಮೀಯರು ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ. ಸವದತ್ತಿಯ ರಟ್ಟ ಮನೆತನದ ಆಳರಸರು ಮತ್ತು ಅಧಿಕಾರಿಗಳು ಕನ್ನಡ ಸಾಹಿತ್ಯಕ್ಕೆ ಮತ್ತು ಕವಿಗಳಿಗೆ ಆಶ್ರಯ ಕೊಟ್ಟು ಗೌರವಿಸಿ ಸಾಹಿತ್ಯ ಬೆಳವಣಿಗೆಗೆ ಪ್ರೋತ್ಸಾಹಿಸಿದ್ದಾರೆ. ಅಂತಾಗಿ ಇವರ ಕಾಲದಲ್ಲಿ ಧಾರ್ಮಿಕ ಸಾಹಿತ್ಯ ಅಧಿಕವಾಗಿ ರೂಪಗೊಂಡಿತು. ಈ ನಾಡಿನ ಕೆಲವು ಶಾಸನಗಳು ಕನ್ನಡ ಮತ್ತು ಸಂಸ್ಕೃತ ಮಿಶ್ರ ಭಾಷೆಯಲ್ಲಿವೆ. ಗದ್ಯ ಪದ್ಯಗಳಿಂದ ಕೂಡಿದ ಇವುಗಳಲ್ಲಿ ಸಾಹಿತ್ಯಿಕ ಅಂಶಗಳಿವೆ. ಇವುಗಳಲ್ಲಿ ಸ್ಥಳೀಯ ಭೌಗೋಳಿಕ ಮತ್ತು ಆಳರಸರ ಸೊಗಸಾದ ವರ್ಣನೆಯಿದೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಅನೇಕ ಕವಿಗಳು ಮತ್ತು ಸ್ಥಾನಾಚಾರ್ಯರು ಸಾಹಿತ್ಯಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಅವರ ವಿವರಗಳು ಇಂತಿವೆ.

೫.೯.೧. ಕಮಲಾದಿತ್ಯ

ಸೊಗಲದ ಕ್ರಿ.ಶ ೯೮೦ರ ಶಾಸನವನ್ನು-

ಭುವನಂ ವನನಿಧಿ ಸುರಗಿರಿ ದಿವಕುಳಮಿನಚಂದ್ರರುಳ್ಳಿನಂ
ಧರ್ಮ್ಮಮಿದುದ್ಭವಮಾಗಿ ನಡೆಗೆ ಶಾಸನಕವಿಕಮಳಾದಿತ್ಯ
ರಚಿತಕಾವ್ಯಾದೇಶಂ ॥

ಕಮಲಾದಿತ್ಯ ಎಂಬ ಕವಿ ರಚಿಸಿದ್ದಾನೆ.[೮೦] ಕಲ್ಯಾಣದ ಚಾಳುಕ್ಯ ಮನೆತನದ ಇಮ್ಮಡಿ ತೈಲಪದೇವನ ಯುದ್ಧ ವಿಜಯಗಳು ಮತ್ತು ದೇವಾಲಯಕ್ಕೆ ಕೊಡಮಾಡಿದ ದಾನಗಳನ್ನು ನಿರೂಪಿಸಿರುವ ಅರವತ್ತೆಂಟು ಸಾಲುಗಳ ಈ ಶಾಸನದಲ್ಲಿ ವೈವಿಧ್ಯಮಯವಾದ ಛಂದೋಪ್ರಕಾರಗಳಲ್ಲಿ (ಅನುಷ್ಟುಪ್, ಕಂದ ಮತ್ತು ವಿವಿಧ ವೃತ್ತಗಳು) ರಚಿಸಿರುವ ಮೂವತ್ತೆರಡು ಪದ್ಯಗಳಿರುವುದು ಈ ಕವಿಯ ಕಾವ್ಯ ರಚನಾಸಕ್ತಿ ಮತ್ತು ಪ್ರತಿಭೆಯನ್ನು ತೋರಿಸುತ್ತದೆ. ಕಮಲಾದಿತ್ಯ ಎಂಬುದು ಕವಿಯ ಹೆಸರಾಗಿರದೇ ಅದು ಪ್ರಶಸ್ತಿಯಾಗಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[೮೧] ಆದರೆ ಅಂದು 'ಆದಿತ್ಯ' ಎಂಬುದು ಉತ್ತರಪದವಾಗಿರುವ ಅನೇಕ ವ್ಯಕ್ತಿನಾಮಗಳು (ವಿಜಯಾದಿತ್ಯ, ವಿಮಲಾದಿತ್ಯ, ವಿಕ್ರಮಾದಿತ್ಯ,

ಚಂದ್ರಾದಿತ್ಯ ಇತ್ಯಾದಿ) ಇರುವುದರಿಂದ ಕವುಲಾದಿತ್ಯ ಎಂಬುದೂ ಅಂಥದೇ ಒಂದು ವ್ಯಕ್ತಿನಾಮವಾಗಿರುವಂತೆ ತೋರುತ್ತದೆ. ಈತನು ಪ್ರಸ್ತುತ ಶಾಸನದಲ್ಲಿ ತನ್ನನ್ನು 'ಕವಿತೇಶಮದಪ್ರಭಂಜನ' (ಕವಿತೇಶ ಎಂಬ ವ್ಯಕ್ತಿನಾಮದ ಅಥವಾ ಕಾವ್ಯನಾಮದ ಕವಿಯೊಬ್ಬನ ಗರ್ವವನ್ನು ಮುರಿದಿದ್ದನು) ಎಂಬ ಬಿರುದಿನಿಂದ ಕರೆದುಕೊಂಡಿದ್ದಾನೆ.[೨] ಈ ಕವಿ ರಚಿಸಿರಬಹುದಾದ ಯಾವುದೇ ಕೃತಿ–ಕಾವ್ಯಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಕುರಿತಾಗಿ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಪ್ರಸ್ತುತ ಶಾಸನದಲ್ಲಿ ಸೊಗಲದ ನಿಸರ್ಗದ ವಾಸ್ತವತೆಯನ್ನು ಚಿತ್ರಿಸುತ್ತ ಪ್ರಾಚೀನ ಸ್ಥಳಪುರಾಣ ಮತ್ತು ಅಖ್ಯಾಯಿಕೆಯನ್ನು ಧರ್ಮದ ತಿರುಳಿನಲ್ಲಿ ನಿರೂಪಿಸಿರುವುದು ಗಮನಾರ್ಹವಾಗಿದೆ.

೫.೯..೨. ಸೋರಿಗಾಂಕ

ಕೊಣ್ಣೂರಿನ ಕ್ರಿ.ಶ. ೧೧೮೭ರ ಶಾಸನದಲ್ಲಿ ಸೋರಿಗಾಂಕ ಕವಿಯ ಪ್ರಸ್ತಾಪವಿದೆ.[೩] ಪ್ರಸ್ತುತ ಶಾಸನದಲ್ಲಿ ಈತನನ್ನು–

ಶ್ರೀರಮಣೀಭಾಸಿಬಳತ್ಕಾರಗಣಾಂಭೋಜ
ಮಧುಪರಿಂಶಿರೆಸತತಂ ಚಾರುತರಂ
ಹಳ್ಳಿಯರವತಾರಂತದ್ಗುಣ ಸರೋಜ ಗುಣದವೊಲೆಸೆಗುಂ ‖

ಎಂದು ವರ್ಣಿಸಲಾಗಿದೆ. ಅಂದರೆ ಈತನು ರಮಣೀಯವೂ, ಸೂರ್ಯನಂತೆ ಪ್ರಕಾಶಮಾನವೂ ಆದ ಯಾಪನೀಯ ಸಂಘದ ಬಳಾತ್ಕಾರಗಣದ ಸರೋವರದಲ್ಲಿ ಅರಳಿದ ಕಮಲದಂತೆ ಶೋಭಾಯಮಾನನಾಗಿದ್ದನು. ಈತನನ್ನು–

ತತ್ಕುಲರಾಜಾನ್ವಯದೊಳಸತ್ಕವಿರಾಜ
ಪ್ರಯಾವಲೋಕನ ಲೀಲೋದ್ಯತ್ಕನ
ಕಾಂಬುಜದನ್ತೆಬೃಹತ್ಕಿರಣಂಸೋರಿಗಾಂಕ
ವಿಭುಧರೆಗೆಸೆದಂ ‖

ಎಂತಲೂ ಕರೆಯಲಾಗಿದೆ. ಪ್ರಸ್ತುತ ಶಾಸನವು ಈ ಕವಿಯನ್ನು ಸತ್ಕವಿಯೂ, ರಾಜನ ಪ್ರೀತಿಗೆ ಪಾತ್ರನಾದವನೂ, ವಿಭುವೂ, ಬಂಗಾರದ ಕಿರಣಭೂಷಣನೂ ಎಂದಿತ್ಯಾಗಿ ಕೊಂಡಾಡಿದೆ. ಈ ಕವಿ ರಚಿಸಿರಬಹುದಾದ ಕೃತಿ–ಕಾವ್ಯಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ವಿವರಗಳು ಸ್ಪಷ್ಟವಾಗುವುದಿಲ್ಲ.

೫.೯.೩. ಶ್ರುತಕೀರ್ತಿಮುನಿ

ಕೊಣ್ಣೂರಿನ ಕ್ರಿ.ಶ. ೧೧೮೭ರ ಶಾಸನದಲ್ಲಿ ಶ್ರುತಕೀರ್ತಿಮುನಿಯ ಪ್ರಸ್ತಾಪವಿದೆ.[೪] ಪ್ರಸ್ತುತ ಶಾಸನದಲ್ಲಿ ಈತನನ್ನು–

ಅತಿಚತುರಕವಿಚಕೋರಪ್ರತತಿಧರೆ

ಸೇರನಯನ ಮಿಚಿಟಿದಪ್ಮದುದಂಬಿಕರ್ಣ್ಣ
ಚಂಚುಪುಟದಿಂ ಶ್ರುತಕೀರ್ತಿ ಮುನೀಂದ್ರ
ಚಂದ್ರವಾಕ್ಚಂದ್ರಿಕೇಯ ॥

ಎಂದು ವರ್ಣಿಸಲಾಗಿದೆ. ಅಂದರೆ ಈ ಮುನಿ ಚತುರನೂ, ಕವಿಚಕೋರನೂ, ನವಿಲುಗರಿಯಿಂದ ಬರೆಯುವವನೂ, ವಾಕ್ಸಿದ್ಧಿಯುಳ್ಳವನೂ, ಚಂದ್ರನಂತೆ ಶಾಂತನೂ, ಹೊಳಪುಳ್ಳವನೂ ಆಗಿದ್ದನು. ಇದರಿಂದ ಈ ಮುನಿ ಕವಿಯೂ ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಆದರೆ ಈತನು ರಚಿಸಿರಬುಹುದಾದ ಕೃತಿ-ಕಾವ್ಯಗಳು ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ವಿವರಗಳು ಲಭ್ಯವಿಲ್ಲ.

೫.೯.೪. ಲಕ್ಷ್ಮಣ

ಹೊಸೂರದ ಕ್ರಿ.ಶ. ೧೧೦೭ರ ಜೈನ ಶಾಸನದಲ್ಲಿ ಲಕ್ಷ್ಮಣ ಕವಿಯ ಪ್ರಸ್ತಾಪವಿದೆ.[೪೫] ಪ್ರಸ್ತುತ ಶಾಸನವನ್ನು ಈ ಕವಿಯೇ ರಚಿಸಿದ್ದಾನೆ. ಈ ಶಾಸನವು ಚಂಪೂ ಶೈಲಿಯಲ್ಲಿದೆ. ಈ ಕವಿ ಪ್ರಸ್ತುತ ಶಾಸನದಲ್ಲಿ ತನ್ನನ್ನು ಕುರಿತಾಗಿ–

ಆವರಿಸೆ ನಿಜಗುಣೋನ್ನತಿ ಭೂವಳಯಮಭಿ
ವಿಜಿನಶಾಸನಮಂ ಶ್ರೀವಿಬಧವಂದ್ಯನಗ್ಗಳ
ದೇವಪ್ರಯಸೂನು ಲಕ್ಷ್ಮಣಂ ವಿರಚಿಸಿದಂ ॥

ಎಂದು ಹೇಳಿಕೊಂಡಿದ್ದಾನೆ.[೪೬] ಈತನ ತಂದೆ ಅಗ್ಗಳದೇವನು ವಿದ್ವಾಂಸರಿಗೆ ಪೂಜ್ಯನೀಯನಾಗಿದ್ದನು. ಲಕ್ಷ್ಮಣನು ಸವದತ್ತಿಯ ರಟ್ಟ ಮನೆತನದ ಇಮ್ಮಡಿ ಸೇನನ ಆಶ್ರಯದಲ್ಲಿದ್ದನು. ಈತನು ರಚಿಸಿರಬಹುದಾದ ಕೃತಿ-ಕಾವ್ಯಗಳು ಇದುವರೆಗೆ ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳು ತಿಳಿಯುವುದಿಲ್ಲ.

೫.೯..೫. ಇಮ್ಮಡಿ ಆಚಣ್ಣ

ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಇಮ್ಮಡಿ ಆಚಣ್ಣ ಕವಿಯ ಪ್ರಸ್ತಾಪವಿದೆ.[೪೭] ಈತನು ಕೊಲ್ಲಾಪುರದ ಶಿಲಾಹಾರ ಮನೆತನದ ವಿಜಯಾದಿತ್ಯನ ಸೇನಾಪತಿ ಕಾಳಿಯಣ್ಣ ಮತ್ತು ಲಚ್ಚಲದೇವಿ ದಂಪತಿಗಳ ಎರಡನೆಯ ಮಗನು. ಪ್ರಸ್ತುತ ಶಾಸನದಲ್ಲಿ ಈತನನ್ನು–

ಸರಸತಿತಂನ ನಾಲಿಗೆಯನೋಲಗಿಪಳ್ಸುರಧೇನು
ತಂನಮುಂ ನೆರೆದುನೀವ ಕಯ್ಯೊಲದೊಳಾಡುವುದಗ್ಗದಕಂತು
ತಂನಕಣ್ಬುರಿಯೆನೆ ತೊಂಬುಗೊಂಡು ನಡೆವಂಗಡೆ
ನಲ್ನುಡಿ ಜಾಣನರ್ಥಿಗೋಸರಿಸದ ಚಾಗಿಸೊಂಪಸೊಬಗಂ
ಕಲಿಜಂನನ ತಂಮನಾಚಂ ॥

ಎಂದು ವರ್ಣಿಸಲಾಗಿದೆ. ಅಂದರೆ ಸಾಕ್ಷಾತ್ ಸರಸ್ವತಿಯೇ ಈತನ ನಾಲಿಗೆಯ ಮೇಲೆ ಕುಳಿತು ಮಾತನಾಡುತ್ತಿದ್ದಳು. ಹಸ್ತವನ್ನು ನೋಡಿ ಭವಿಷ್ಯ ಹೇಳುವ ಪಂಡಿತನಾಗಿದ್ದನು. ಇದು ಈತನು ಕವಿಯಾಗಿದ್ದನೆಂಬುದನ್ನು ದೃಢಪಡಿಸುತ್ತದೆ. ಆದರೆ ಈತನು ರಚಿಸಿರಬಹುದಾದ ಕೃತಿ-ಕಾವ್ಯಗಳು

ಇದುವರೆಗೂ ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಹೆಚ್ಚಿನ ವಿವರಗಳು ಸ್ಪಷ್ಟವಿಲ್ಲ.

೫.೯.೬. ಮುನಿಚಂದ್ರಮುನಿ

ಯಾಪನೀಯ ಸಂಘದ ಕಾರೆಯಗಣದ ಮೈಳಾಪಾನ್ವಯ ಪರಂಪರೆಯಲ್ಲಿ ಮುನಿಚಂದ್ರಮುನಿ ಕವಿಯಾಗಿಯೂ ಪ್ರಸಿದ್ಧನಾಗಿದ್ದಾನೆ. ಈತನು ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನಿಗೆ ಗುರುವಾಗಿ, ಲಕ್ಷ್ಮೀದೇವನಿಗೆ ಶಸ್ತ್ರಾಸ್ತ್ರ ಮತ್ತು ಶಿಕ್ಷಾ ಗುರುವಾಗಿದ್ದನು. ಸುಗಂಧವರ್ತಿ ಹನ್ನೆರಡು ಆಡಳಿತ ವಿಭಾಗದ ಪ್ರಭುವಾಗಿ 'ರಟ್ಟರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನು ಧರಿಸಿರುವುದು ಗಮನಾರ್ಹವಾಗಿದೆ. ಈತನನ್ನು ಸವದತ್ತಿಯ ಕ್ರಿ.ಶ. ೧೨೨೮ರ ಶಾಸನವು–

ಧರಣೀಶಾಗ್ರಣಿ ಕಾರ್ತ್ಯವೀರ್ಯಸುತನಪ್ಪೀ ಲಕ್ಷ್ಮೀದೇವಂಗೆ
ಸುಸ್ಥಿರವಪ್ಪನ್ತಿರೆಧತ್ರಿಯಂ ನಯದಿನೇಕಾಯತ್ತವಂ ಮಾಡಿದಂವರ
ಬಾಹುಬಲದಿಂ ವಿರೋಧಿ ನೃಪರಂಭೆಂಕೋಂಡನೀವಾಣ
ಸಾಬರಣಂ ಶ್ರೀಮುನಿಚಂದ್ರದೇವನ ಸಹ್ಯನ್ಮಾತಂಗಕಂಠೀರವಂ ॥

ಎಂದು ಕೊಂಡಾಡಿದೆ.[೪೮] ಇದೇ ಶಾಸನದಲ್ಲಿ–

ಗುರುವಾದಂ ಕಾರ್ತ್ತವೀರ್ಯ್ಯಕ್ಷಿತಿಪತಿಗೆನಸುಂ
ಮಂತ್ರದಿಂಸಿಕ್ಷಾಗುರುವಾದಂ ಶಸ್ತ್ರಶಾಸ್ತ್ರಸ್ಥಿರ ಪರಿಣತೆಯೊಳ್
ಲಕ್ಷ್ಮೀದೇವಂಗೆ ದೀಕ್ಷಾಗುರುವಾದಂ ಪ್ರಾಜ್ಯರಾಜ್ಯಾಪಹರಣದೆ
ಪರಕ್ಷೋಣಿಪಾಳರ್ಗ್ಗೆನಲ್ಕೇಳ್ಗುರು ಶಬ್ದಂವಾಚ್ಯವಾಯ್ತಲ್ಲದಲವರ
ಮುನಿಚಂದ್ರಂಗಿದೊಂದೆಸೆಗಾಯ್ತೆ ॥

ಎಂದು ನಿರೂಪಣೆಯಿದೆ. ಈ ಮುನಿಯ ಶಿಷ್ಯ ಇಮ್ಮಡಿ ಗುಣವರ್ಮನು ತನ್ನ ಕೃತಿ 'ಪುಷ್ಪದಂತಪುರಾಣ'ದಲ್ಲಿ 'ಉಭಯಕವಿ ಕಮಲಗರ್ಭ' ಎಂದು ಮುನಿಚಂದ್ರಮುನಿಯನ್ನು ಸ್ತುತಿಸಿದ್ದಾನೆ.[೪೯] ಇದರಿಂದ ಮುನಿಚಂದ್ರಮುನಿ ಕನ್ನಡ ಮತ್ತು ಸಂಸ್ಕೃತದಲ್ಲಿ ಕಾವ್ಯ ರಚಿಸಿರುವಂತೆ ತೋರುತ್ತದೆ. ಮುನಿಚಂದ್ರಮುನಿ ಮುನವಳ್ಳಿಯಲ್ಲಿ ಸಲ್ಲೇಖನದಿಂದ ಸಮಾಧಿಮರಣ ಹೊಂದಿದ್ದಾನೆ.[೫೦] ದೇವಗಿರಿಯ ಸೇವುಣ ಮನೆತನದ ಸಿಂಘಣನಿಂದ ಸೊಲನ್ನನುಭವಿಸಿ ಕಪ್ಪಕಾಣಿಕೆಗಳನ್ನು ಕೊಟ್ಟು ಕಳುಹಿಸಿದ ತರುವಾಯ ಮುನಿಚಂದ್ರಮುನಿ ಪುನಃ ಸ್ವತಂತ್ರ ಶಾಸನಗಳನ್ನು ಬರೆಯಿಸಲು ಪ್ರಾರಂಭಿಸಿದ್ದಕ್ಕೆ ಕೋಪಗೊಂಡ ಸಿಂಘಣನು ಈತನ ಕೃತಿ–ಕಾವ್ಯಗಳನ್ನು ನಾಶಪಡಿಸಿರುವಂತೆ ತೋರುತ್ತದೆ.

೫.೯.೭. ಬೊಮ್ಮರಸ

ಸವದತ್ತಿಯ ಕ್ರಿ.ಶ. ೧೨೨೮ರ ಶಾಸನವನ್ನು ಬೊಮ್ಮರಸ ಕವಿ ರಚಿಸಿದ್ದಾನೆ.[೫೧] ಈತನು ಸವದತ್ತಿಯ ರಟ್ಟ ಮನೆತನದ ಆಶ್ರಯದಲ್ಲಿದ್ದನು. ಈತನು ರಚಿಸಿರಬಹುದಾದ ಕೃತಿ–ಕಾವ್ಯಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಅಂತಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳ ವಿವರಗಳು ಅಸ್ಪಷ್ಟವಾಗಿವೆ.

೫.೯.೮. ಮಾದಿರಾಜ

ಸವದತ್ತಿಯ ಕ್ರಿಶ. ೧೨೨೮ರ ಶಾಸನವನ್ನು–

ಇದಾ ಕೇಸಿರಾಜನ ವಚನ ‖ ಎಸೆಶಾವೀ ಸನಮಂ
ವಿರಚಿಸಿ ಬರೆದಂ ಪೂರ್ವ್ವಜನ್ಮದೊಳ್ ಮಾದಿರಾಜನಾ
ವಿಭುವತದಿಂ ‖

ಮಾದಿರಾಜ ಕವಿ ರಚಿಸಿದ್ದಾನೆ.[೫೨] ತೊಂಭತ್ತೂ ರು ಸಾಲುಗಳಿರುವ ಈ ಶಾಸನದಲ್ಲಿ ಸುಂದರವಾದ ಕಂದ ಪದ್ಯಗಳು ಮತ್ತು ವಿವಿಧ ವೃತ್ತ ಛಂದಸ್ಸಿನ ಅರವತ್ತೈದು ಪದ್ಯಗಳಿವೆ. ಈ ಶಾಸನದ ಶಾಪಾಶಯ ಪದ್ಯಗಳನ್ನು ಪೂರ್ಣವಾಗಿ ಕನ್ನಡದಲ್ಲಿ ರಚಿಸಿರುವುದು ಈತನ ನೂತನ ದೃಷ್ಟಿಯನ್ನೂ, ಕನ್ನಡ ಪ್ರೇಮವನ್ನೂ ಎತ್ತಿ ತೋರಿಸುತ್ತದೆ. ಈತನು ರುದ್ರಭಟ್ಟನ ವಂಶಸ್ಥನಾಗಿದ್ದಾನೆ. ಪ್ರಸ್ತುತ ಶಾಸನದಲ್ಲಿ ತನ್ನ ವಂಶದ ವಿವರಗಳನ್ನು ಸುದೀರ್ಘವಾಗಿ ನಿರೂಪಿಸಿದ್ದಾನೆ. ತನ್ನ ವಂಶದ ಹಿರಿಯನಾದ ರುದ್ರಭಟ್ಟನ ಕಾಲದಿಂದ ಬಂದಿದ್ದ ಹದಿನೆಂಟು ಗ್ರಾಮಗಳ ಪ್ರಭುತ್ವ ಈ ವಂಶಕ್ಕೆ ಪಾರಂಪರ್ಯದಿಂದ ಬಂದಿದ್ದರೂ ಈತನು ಮತ್ತು ಈತನ ಹಿರಿಯ ಸಹೋದರನಾದ ಮಲ್ಲಿಕಾರ್ಜುನನು ಸುಗಂಧವರ್ತಿ ಪ್ರಾಂತವನ್ನು ಆಳುತ್ತಿದ್ದ ಮುನಿಚಂದ್ರದೇವನಲ್ಲಿ ಮಂತ್ರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಈತನು ವಿಜಾಪುರ ಜಿಲ್ಲೆಯ ಕೋಲಾರದ ವಿಭು ಕೇಶಿರಾಜನ ಮಗನು. ಈತನು ತನ್ನ ತಂದೆ ಕೇಶಿರಾಜನು ಹೇಳಿದ ವಚನಗಳನ್ನು ಶಾಸನ ರೂಪದಲ್ಲಿ ಬರೆದಿರುವುದಾಗಿ ಪ್ರಸ್ತುತ ಶಾಸನದ ಕೊನೆಯಲ್ಲಿಹೇಳಿರುವುದು ಮಾದಿರಾಜನಲ್ಲಿರುವ ಕವಿತಾ ಶಕ್ತಿಯನ್ನು ತೋರ್ಪಡಿಸುತ್ತದೆ. ಈತನು ರಚಿಸಿರಬಹುದಾದ ಕೃತಿ–ಕಾವ್ಯಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಹಾಗಾಗಿ ಈತನ ವೈಯಕ್ತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳ ವಿವರಗಳು ಸ್ಪಷ್ಟವಾಗುವುದಿಲ್ಲ.

೫.೯.೯. ಪಾರ್ಶ್ವಪಂಡಿತ

ಕಲ್ಲೊಳೆಯ ಕ್ರಿಶ. ೧೨೦೫ರ ಶಾಸನವನ್ನು–

ಲಲಿತಪದಾರ್ತ್ಥಾಳಂಕೃತಿ
ಗಳನೊಸರ್ವ ರಸಂಗಳಿಂದೆ ಬುಧರೊಳ್ಪುಳಕಾ
ವಳಿಸಸ್ಯಮೊಗೆಯೆ ಕವಿಕುಳ
ತಿಳಕಂ ಶಾಸನಮನೊಲ್ದು ವೇಳ್ದಂ ಪಾರ್ಶ್ವಂ ‖

ಪಾರ್ಶ್ವಪಂಡಿತ ಕವಿ ರಚಿಸಿದ್ದಾನೆ.[೫೩] ಎಪ್ಪತ್ತು ಸಾಲುಗಳ ಈ ಶಾಸನದಲ್ಲಿ ನಲವತ್ತು ಪದ್ಯಗಳಿವೆ. ಈತನು ಸವದತ್ತಿಯ ರಟ್ಟ ಮನೆತನದ ನಾಲ್ಕನೆಯ ಕಾರ್ತವೀರ್ಯನ ಆಶ್ರಯದಲ್ಲಿದ್ದನು. ಈತನು ಕ್ರಿಶ. ೧೨೨೨ರಲ್ಲಿ ರಚಿಸಿರುವ 'ಪಾರ್ಶ್ವನಾಥ ಪುರಾಣ' ಎಂಬುದು ಕನ್ನಡ ಸಾಹಿತ್ಯ ಲೋಕದಲ್ಲಿ ಮೇರುಕೃತಿಯಾಗಿದೆ. ಇದು ಹದಿನಾರು ಆಶ್ವಾಸಗಳ ಒಂದು ದೊಡ್ಡ ಚಂಪೂ ಕಾವ್ಯವಾಗಿದೆ. ಇಪ್ಪತ್ತೂರನೆಯ ತೀರ್ಥಂಕರ ಪಾರ್ಶ್ವನಾಥನನ್ನು ಕುರಿತಾಗಿ ಕನ್ನಡದಲ್ಲಿ ಬರೆದ ಕಾವ್ಯಗಳಲ್ಲಿ ಇದೇ ಮೊತ್ತಮೊದಲನೆಯದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಸ್ತುತ ಕಲ್ಲೊಳೆಯ ಶಾಸನದಲ್ಲಿ–

ಶ್ರೀಪತಿಲಕ್ಷ್ಮೀದೇವಮಹಿವಲ್ಲಭವಲ್ಲಭೆ ಕಾರ್ತ್ತವೀರ್ಯ್ಯಧಾ
ತ್ರೀಪತಿಮಲ್ಲಿಕಾರ್ಜ್ಜುನಮಹೀಶರ ಮಾತೃ ಮಹಾಸತೀತ್ವಸೀ
ತೋಪಮೆ ಜೈನಪೂಜನಸುರೇಂದ್ರವಧೂಪಮೆ ರೂಪಕಂತುಕಾ
ನ್ತೋಪಮೆ ರಂಜಿಪಳ್ನೆಗಳ್ದ ಚಂದಲದೇವಿ ಸಮಸ್ತಧಾತ್ರಿಯೋಳ್ ||

ಎಂದು ತನ್ನ ಆಶ್ರಯದಾತರನ್ನು ಸ್ಮರಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಕಂದ ಮತ್ತು ವೃತ್ತಗಳನ್ನು ಬಳಸಿ ಎರಡು ರಾಜ ಮನೆತನಗಳ (ಸವದತ್ತಿಯ ರಟ್ಟ ಮತ್ತು ಹಗರಟಗೆನಾಡಿನ ಮಹಾಮಂಡಳೇಶ್ವರ ಮನೆತನಗಳು) ವಂಶಾವಳಿ ಇತ್ಯಾದಿ ವಿವರಗಳನ್ನು ವರ್ಣಿಸಿರುವ ಶೈಲಿಯನ್ನು ನೋಡಿದರೆ ಈತನೊಬ್ಬ ಪ್ರೌಢ ಕವಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಈತನಿಗಿದ್ದ'ಕವಿಕುಲತಿಳಕ' ಇತ್ಯಾದಿ ಹಲವು ಬಿರುದುಗಳಲ್ಲಿ 'ಸುಕವಿ ಜನ ಮನೋಹರ್ಷ ಸಸ್ಯಪ್ರವರ್ಷಂ' (ಉತ್ತಮ ಕವಿ ಜನರ ಮನಸ್ಸಲ್ಲಿ ಹರ್ಷದ ಸಸ್ಯಕ್ಕೆ ವಿಶೇಷವಾದ ಮಳೆಯಂತಿರುವವನು) ಎಂಬುದು ವಿಶೇಷವಾಗಿದೆ.

೫.೯.೧೦. ಬಾಳಚಂದ್ರಮುನಿ

ಬೆಳಗಾವಿ ಜಿಲ್ಲೆಯ ಪ್ರದೇಶದಲ್ಲಿ ಜೈನ ಧರ್ಮದ ಪ್ರಸಾರ ಮತ್ತು ಬಸದಿಗಳ ನಿರ್ಮಾಣಕ್ಕೆ ಸ್ಫೂರ್ತಿ-ಪ್ರೇರಣೆ ಕೊಡಮಾಡಿದ ಮುನಿಗಳಲ್ಲಿ ಬಾಳಚಂದ್ರಮುನಿಯ ಕೊಡುಗೆ ಅಪಾರವಾಗಿದೆ. ಸವದತ್ತಿಯ ರಟ್ಟ ಮನೆತನದ ಕಾಲಾವಧಿಯಲ್ಲಿದ್ದ ಈ ಮುನಿಯನ್ನು ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನವು-

ಆನಮೆಲ್ಲಂ ಮೆಚ್ಚೆಚಲ್ಲಂಪಗೆವರುದದ ಸೆಲ್ಲಂಜಯಶ್ರೀಗೆನಲ್ಲಂ
ಮನುಮಾರ್ಗ್ಗಂ ಸತಿವರ್ಗಂ ತನಗೆಸೆಯೆ ನಿಸರ್ಗ್ಗಂ ಗೃಹಿತಾರಿದುರ್ಗ್ಗಂ
ಸನಯ ಅರೂಪಂಸುರೂಪಂನೆಗೆಲ್ದತಿದಿಲೀಪಂಜಿತಾರಾತಿಭೂಪಂ
ಘನಸೂರ್ಯ್ಯಂಕ್ಷತ್ರವಂರ್ಯ್ಯಂಸುರಕುಜನಸದೃಶಾದಾರ್ಯ್ಯನಿಕಾರ್ತ್ತವೀರ್ಯ್ಯಂ ||

ಎಂದು ಕೊಂಡಾಡಿದೆ.[೫೪] ಬೆಳಗಾವಿಯ ಕ್ರಿ.ಶ. ೧೨೦೪ರ ಎರಡೂ ಶಾಸನಗಳನ್ನು ಈ ಮುನಿಯೇ ರಚಿಸಿರುವುದು ಗಮನಾರ್ಹವಾಗಿದೆ. ವಿವಿಧ ಬಗೆಯ ವೃತ್ತಗಳು, ಕಂದಪದ್ಯಗಳು, ಗದ್ಯದಿಂದ ಕೂಡಿರುವ ಈ ಶಾಸನಗಳು ಪುಟ್ಟ ಚಂಪೂಕಾವ್ಯದಂತಿವೆ. ಈ ಎರಡೂ ಶಾಸನಗಳು ಈಗ ಇಂಗ್ಲೆಂಡಿನ ಪ್ರಾಚ್ಯವಸ್ತು ಸಂಗ್ರಹಾಲಯುದಲ್ಲಿವೆ. ಬಾಳಚಂದ್ರಮುನಿ ಚತುರ್ಭಾಷಾ ಪಂಡಿತನಾಗಿದ್ದನು. ಈತನು 'ಅನಂತನಾಥಪುರಾಣ' ಕಾವ್ಯವನ್ನು ರಚಿಸಿರುವ ಜನ್ನನ ಧರ್ಮಪತ್ನಿ ಲಕುಮಾದೇವಿಯ ಗುರುವಾಗಿದ್ದನು. ಆದರೆ ಈತನು ರಚಿಸಿರಬಹುದಾದ ಕೃತಿ-ಕಾವ್ಯಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಈತನಿಗೆ ಕವಿಕಂದರ್ಪ (ಕವಿಗಳಲ್ಲಿ ಮನ್ಮಥನಂತಿರುವವನು), ನಿತ್ಯಸಾಹಿತ್ಯ ಕಮಳವನ ಮರಾಳ (ಯಾವಾಗಲೂ ಸಾಹಿತ್ಯವೆಂಬ ಕಮಲ ಸರೋವರದಲ್ಲಿ ಹಂಸದಂತಿರುವವನು), ಬುಧಾಧೀಶ್ವರಃಗುಣಗ್ರಾಹಿ, ವಿದ್ವಜ್ಜನವಂದಿತ, ಪದಕವಿ, ಚತುರ್ಭಾಷಾ ಕವಿಚಕ್ರವರ್ತಿ ಎಂಬ ಬಿರುದುಗಳಿದ್ದವು.[೫೫]

೫.೯.೧೧. ರುದ್ರಭಟ್ಟ

ಸವದತ್ತಿಯ ಕ್ರಿ.ಶ. ೧೨೨೯ರ ಶಾಸನದಲ್ಲಿ-

ವಂಜಶರ್ಕ್ಕಳರುದಿಂಗಳೊಳುದ್ಘ ಕವೀಶರಪ್ಪವ್ಯಾಕೋಂನತಿಯಿಂ

ಸರಸ್ವತಿಯಿನೂರ್ಪ್ಪದಿನೆಂಟುರೊಳಂ ಪ್ರಭುತ್ವಮಂ ಕಂನರನಿಂದ
ವಂದು ಪಡೆದಂದೊರೆಯಾ ಕವಿತಾವಿಳಾಸದೊಂದುಂನತೊಯೊಳ್
ಪ್ರಭುತ್ವದ ನೆಗರ್ತ್ತೆಯೊಳಾವಿಭುರುದ್ರಭಟ್ಟನೊಳ್ ಆಸುಕವಿ
ರುದ್ರಭಟ್ಟನಿನಾ ಸೋಮಕುಲಾಂಖ್ಯವೆನಸುವತ್ರಿಕುಲಂ
ಸಾಮಾಸಿಗಕುಲವೆನಿಸಿದನ್ನಾಸತ್ಕುಲದೊಳಗೆ ಪುಟ್ಟಿತ ಮಳಚರಿತ್ರಂ ॥

ಎಂದು ರುದ್ರಭಟ್ಟ ಕವಿಯ ಪ್ರಸ್ತಾಪವಿದೆ.[೫೬] ಈ ಕವಿಯು–

ಎಡಱಿೊಳ್ ನಿಜನಾಮಾಕ್ಷರ
ವಿಡೆ ಸಾಸಿರ ಹೊನ್ಗೆ ಕೊಟ್ಟುದಂ ಬಿಡಿಸನಿತು ದಿನಂ
ಪಡೆದಂ ರುದ್ರಟನೆಂಬೀ
ಪಡೆಮಾತಂ ರುದ್ರಭಟ್ಟನುರ್ವೀತಳದೊಳ್ ॥

ಎಂದು ಯಾವುದೋ ಆರ್ಥಿಕ ಸಂಕಷ್ಟದ ಉತ್ಕಟ ಸಂದರ್ಭದಲ್ಲಿ ತನ್ನ ಹೆಸರಲ್ಲಿಯ 'ಭ' ಅಕ್ಷರವನ್ನು ಒತ್ತೆಯಿಟ್ಟು ಸಾವಿರ ಹೊನ್ನು ಸಾಲ ಪಡೆದಿದ್ದನೆಂದೂ, ಅದು ತೀರುವವರೆಗೂ ಅವನು ತನ್ನ ಹೆಸರಲ್ಲಿಯ 'ಭ' ಅಕ್ಷರ ಬಿಟ್ಟು ತನ್ನನ್ನು ರುದ್ರಟ ಎಂದೇ ಜನರಿಂದ ಕರೆಸಿಕೊಂಡನೆಂದೂ ಕವಿ ಮಾದಿರಾಜ ಆಶ್ಚರ್ಯಕರ ಸಂಗತಿಯೊಂದನ್ನು ಹೇಳಿದ್ದಾನೆ. ಈತನು ಕ್ರಿ.ಶ. ೯೫೦ರಲ್ಲಿ ಮಳಖೇಡದ ರಾಷ್ಟ್ರಕೂಟ ಮನೆತನದ ಕನ್ನರನಿಂದ ಶ್ರೇಷ್ಠಕವಿ ಎಂದು ಸನ್ಮಾನಿತನಾಗಿ ಬನಹಟ್ಟಿಯ ಸುತ್ತಲಿನ ಹದಿನೆಂಟು ಗ್ರಾಮಗಳ ಪ್ರಭುತ್ವವನ್ನು ಪಡೆದಿದ್ದನು. ಪ್ರಸ್ತುತ ಶಾಸನದಲ್ಲಿ ಈತನನ್ನು 'ಆಸುಕವಿ' ಎಂದು ಕರೆಯಲಾಗಿದೆ. ಈತನು ಸಂಸ್ಕೃತದಲ್ಲಿ 'ಕಾವ್ಯಾಲಂಕಾರ' ಎಂಬ ಕಾವ್ಯಲಕ್ಷಣಶಾಸ್ತ್ರ ಕೃತಿಯನ್ನು ಬರೆದಿದ್ದಾನೆ. ಇದರಲ್ಲಿ ಹದಿನಾರು ಅಧ್ಯಾಯಗಳಿದ್ದು, ಹನ್ನೆರಡು ಅಧ್ಯಾಯಗಳಲ್ಲಿ ಅಲಂಕಾರ ನಿರೂಪಣೆಗಳು ಮತ್ತು ನಾಲ್ಕು ಅಧ್ಯಾಯಗಳಲ್ಲಿ ರಸನಿರೂಪಣೆಗಳಿವೆ. ಈ ಮೂಲಕ ಅಲಂಕಾರಗಳನ್ನು ಒಂದು ಶಾಸ್ತ್ರೀಯ ಕ್ರಮದಲ್ಲಿ ಪ್ರಪ್ರಥಮವಾಗಿ ವಿಂಗಡಿಸಿದ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತ ಇವುಗಳು ನವರಸಗಳಾಗಿವೆ. ಇವುಗಳಲ್ಲಿ ರುದ್ರಭಟ್ಟನು 'ಶಾಂತ'ವನ್ನು ಒಂದು ರಸವಾಗಿ ಪ್ರತಿಪಾದಿಸಿ ಸ್ಥಾಪಿಸಿದ್ದಲ್ಲದೆ, ಸ್ನೇಹವೇ ಸ್ಥಾಯಿಯಾಗಿ ಉಳ್ಳ 'ಪ್ರೇಯಾನ್' ಎಂಬುದೂ ಒಂದು ರಸವಾಗುತ್ತದೆಂದು ಪ್ರತಿಪಾದಿಸಿ 'ರಸ' ಸಂಖ್ಯೆಯನ್ನು ಎತ್ತರಕ್ಕೇರಿಸಿದುದು ಈತನ ಕ್ರಾಂತಿಕಾರಿ ಶಾಸ್ತ್ರದೃಷ್ಟಿಗೆ ಮತ್ತು ಲಾಕ್ಷಣಿಕ ಪ್ರತಿಭೆಗೆ ಸಾಕ್ಷಿಯಾಗಿದೆ.[೫೭]

೫.೧೦. ಶಾಸನಗಳ ರೂವಾರಿಗಳು

ಒಂದು ತಾಮ್ರಫಲಕ ಇಲ್ಲವೇ ಶಿಲಾಫಲಕ ಶಾಸನವಾಗಿ ರೂಪುಗೊಳ್ಳುವಲ್ಲಿ ಸಾಮಾನ್ಯವಾಗಿ ಕವಿ, ಲಿಪಿಕಾರ ಮತ್ತು ರೂವಾರಿಯ ಪಾತ್ರ ಅವಶ್ಯವಾಗಿದ್ದಿತ್ತು. ಕವಿ ಎಲೆಯ ಮೇಲೆ ಬರೆದ ವಿಷಯವನ್ನು ಲಿಪಿಕಾರ ಬಳಪದಿಂದ ಶಿಲೆಯ ಮೇಲೆ ತೀಡಿದ ತರುವಾಯ ರೂವಾರಿ ಅದನ್ನು

ಕಂಡರಿಸುತ್ತಿದ್ದನು. ಇವುಗಳಲ್ಲಿ ಲಿಪಿಕಾರ ಮತ್ತು ರೂವಾರಿಯ ಕಾರ್ಯವನ್ನು ಒಬ್ಬನೇ ನಿರ್ವಹಿಸಿದ ನಿದರ್ಶನಗಳೂ ದೊರೆಯುತ್ತವೆ. ಕೂಹುಂಡಿನಾಡಿನ ಕೆಲವು ಶಾಸನಗಳೋಕ್ತ ಕವಿಗಳು, ಆಯಾ ಶಾಸನಗಳಿಗೆ ಪಾಠಗಳನ್ನು ರಚಿಸಿಕೊಟ್ಟು ತಮ್ಮ ಪ್ರತಿಭಾ ಸ್ಪರ್ಶದಿಂದ ಸಾಹಿತ್ಯವನ್ನಾಗಿಸಿದ್ದಾರೆ. ವಣ್ಣೂರಿನ ಕ್ರಿ.ಶ. ೧೧೧೪ರ ಶಾಸನವನ್ನು–

> ಶ್ರೀಮತು ಮೂಲವಳ್ಳಿಯ ಜೋಗೋಜನ ಪುತ್ರ
> ಸರಸ್ವತೀಗಣಮಿತ್ರ ಗೋತ್ರಪವಿತ್ರ ಸರಸ್ವತೀ
> ಪಾದಾರಾಧಕ ಕನ್ನೋಜನ ಬರೆಪಂ
> ಮಂಗಳ ಮಹಾ ಶ್ರೀ ॥

ಮುನವಳ್ಳಿಯ ಜೋಗೋಜನ ಪುತ್ರ ಕನ್ನೋಜನು ಬರೆದಿದ್ದಾನೆ.[೫೮] ಮುನವಳ್ಳಿಯ ಕ್ರಿ.ಶ. ೧೨೫೨ರ ಶಾಸನವನ್ನು ಶ್ರೀಕಲಿದೇವರ ದಾಸ ಬೊಮ್ಮರಸನು ಬರೆದಿದ್ದಾನೆ.[೫೯] ಯೆಕ್ಕೇರಿಯ ಕ್ರಿ.ಶ. ೫೪೯ರ ಶಾಸನವನ್ನು ಈಶಾನ್ಯ ಎಂಬಾತನು ಬರೆದಿದ್ದಾನೆ.[೬೦] ಸವದತ್ತಿಯ ಕ್ರಿ.ಶ. ೬೭೯ರ ತಾಮ್ರಪಟವನ್ನು ಮಹಾಸಂಧಿವಿಗ್ರಹಿಕ ಜಯಸೇನನು ಬರೆದಿದ್ದಾನೆ.[೬೧] ಪಟ್ಟಣಕೋಡಿಯ ಕ್ರಿ.ಶ. ೯೮೮ರ ಶಾಸನವನ್ನು ವಾಮನನ ಪುತ್ರ ದೇವಪಾಲನು ಬರೆದಿದ್ದು, ಈ ಬರವಣಿಗೆಯನ್ನು ವಜ್ಜಡ ಎಂಬಾತನು ಶಿಲೆಯ ಮೇಲೆ ಕೊರೆದಿದ್ದಾನೆ.[೨]

೫.೧೧. ಶಾಸನ ಸಾಹಿತ್ಯ

ಕೂಹುಂಡಿನಾಡಿನ ಶಾಸನಗಳು ಸಮಕಾಲೀನ ಸಂಗತಿಯನ್ನು ಯಥಾವತ್ತಾಗಿ ನಿರೂಪಿಸುವುದರಿಂದ ಇವುಗಳ ವಸ್ತು ಬಹುಮಟ್ಟಿಗೆ ಸೀಮಿತವಾಗಿದೆ. ಇಲ್ಲಿಯ ಶಾಸನಗಳಲ್ಲಿ ದಾನಶಾಸನಗಳ ಸಂಖ್ಯೆ ಅಧಿಕವಾಗಿರುವುದರಿಂದ ಇವುಗಳಲ್ಲಿಯ ವಿಷಯ ವೈವಿದ್ಯವೂ ಕಡಿಮೆಯಾಗಿದೆ. ಈ ಸೀಮಿತಗಳ ಮಧ್ಯದಲ್ಲಿಯೂ ಕೆಲವು ಶಾಸನ ಕವಿಗಳು ತಮ್ಮ ಪ್ರತಿಭೆ–ಪಾಂಡಿತ್ಯವನ್ನು ಮೆರೆದಿದ್ದಾರೆ. ಇಲ್ಲಿಯ ಪ್ರಾರಂಭದ ಅಂದರೆ ಕ್ರಿ.ಶ. ಸುಮಾರು ೭ ರಿಂದ ೧೦ನೆಯ ಶತಮಾನದ ದಾನ ಶಾಸನಗಳು ಅರಸನ ಆಳ್ವಿಕೆ, ದಾನ ಕೊಟ್ಟವರ ಹೆಸರು, ದಾನದ ವಿವರಗಳನ್ನು ಮಾತ್ರ ಒಳಗೊಂಡಿವೆ. ತದನಂತರದ ಶಾಸನಗಳಲ್ಲಿ ಆಳರಸರು, ದಾನಿಗಳು, ಇವರ ಪ್ರದೇಶ ಇತ್ಯಾದಿ ವರ್ಣನೆಗಳಿಂದ ಇವುಗಳ ಹರವು ವಿಸ್ತೃತವಾಗಿದೆ. ಇಂತಹ ಶಾಸನಗಳು ಶುದ್ಧ ಚಂಪೂ ಕಾವ್ಯಶೈಲಿಯನ್ನು ಅಳವಡಿಸಿಕೊಂಡಿವೆ. ಈ ನಾಡಿನಲ್ಲಿ ಇದುವರೆಗೂ ೧೭೨ ಶಾಸನಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ಕನ್ನಡ ಲಿಪಿ ಮತ್ತು ಭಾಷೆಯ ಶಾಸನಗಳೇ ಅಧಿಕವಾಗಿವೆ. ಬೆರಳೆಣಿಕೆಯಷ್ಟು ಶಾಸನಗಳು ಮಾತ್ರ ದೇವನಾಗರಿ ಲಿಪಿ ಮತ್ತು ಸಂಸ್ಕೃತ ಭಾಷೆಯಲ್ಲಿವೆ. ಕೆಲವು ಕನ್ನಡ ಶಾಸನಗಳ ಪ್ರಾರ್ಥನಾ ಮತ್ತು ಶಾಪಾಶಯದ ಪದ್ಯಗಳು ಸಂಸ್ಕೃತ ಭಾಷೆಯಲ್ಲಿವೆ. ಕಾಲಮಾನ ಮತ್ತು ಸಂಖ್ಯಾದೃಷ್ಟಿಯಿಂದ ಕ್ರಿ.ಶ. ಸುಮಾರು ೧೦ರಿಂದ ೧೩ನೆಯ ಶತಮಾನದವರೆಗಿನ ಶಾಸನಗಳು ಅಧಿಕವಾಗಿವೆ. ನೇಸರಗಿ, ಅರ್ಜುನವಾಡ, ಕಲ್ಲೊಳೆ, ಬೆಳಗಾವಿ, ಯಕ್ಸಂಬಾ, ಸವದತ್ತಿ, ರಾಯಬಾಗ, ಹಣ್ಣಿಕೇರಿ, ಬೆಳವಡಿ, ವಣ್ಣೂರು, ಮಮದಾಪುರ, ಕೊಣ್ಣೂರು, ಬೇಡಕಿಹಾಳ ಮೊದಲಾದ ಕೆಲವು ಶಾಸನಗಳು ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾಗಿವೆ

ಇವುಗಳಲ್ಲಿ ಆಳರಸರ ಸಾಂಪ್ರದಾಯಿಕ ಬಿರುದಾವಳಿಗಳು ಮತ್ತು ದಾನದ ವಿವರಗಳು ಹೆಚ್ಚಾಗಿ ಗದ್ಯದಲ್ಲಿವೆ. ದೇಶವರ್ಣನೆ, ಪುರವರ್ಣನೆ, ಅರಸ ಮತ್ತು ಈತನ ಅಧೀನರ ಶೌರ್ಯಾದಿ ಗುಣಗಾನ, ದಾನ ಕೊಡುವವನ ಔದಾರ್ಯ ಮನೋಭಾವ, ಸ್ವೀಕರಿಸುವವನ ಅರ್ಹತೆ ಇತ್ಯಾದಿ ವಿಷಯ ನಿರೂಪಣೆ ಪದ್ಯದಲ್ಲಿದ್ದು, ಅಲ್ಲೆಲ್ಲ ಕವಿಕಲ್ಪನೆ ಗರಿಗೆದರಿದೆ.

ಹೀಗೆ ಕೂಹುಂಡಿನಾಡಿನ ಪ್ರದೇಶದ ಶಿಕ್ಷಣ ಮತ್ತು ಸಾಹಿತ್ಯಿಕ ಚಟುವಟಿಕೆಗಳು ಸಮಕಾಲೀನ ಶೈಕ್ಷಣಿಕ ವ್ಯವಸ್ಥೆಯ ಆಯಾಮಗಳನ್ನು ಮೈಗೂಡಿಸಿಕೊಂಡು ಬೆಳೆದು ಬಂದಿವೆ. ಇಲ್ಲಿಯ ಶಾಸನಗಳೋಕ್ತ ಕೆಲವು ಕವಿಗಳು ಮತ್ತು ಸ್ಥಾನಾಚಾರ್ಯರು ಕನ್ನಡ ಭಾಷೆಯನ್ನು ಉಳಿಸಿ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಿಂಚಿ ಈ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅಂತಾಗಿ ಕನ್ನಡನಾಡಿನ ಪ್ರಾದೇಶಿಕ ಶಿಕ್ಷಣ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಅಧ್ಯಯನದಲ್ಲಿ ಕೂಹುಂಡಿನಾಡಿನ ಪ್ರದೇಶದ ಶಾಸನಗಳ ಕೊಡುಗೆಯೂ ಅಪಾರವೆಂಬುದು ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

೧. ಮರಿಯಪ್ಪಭಟ್ಟ ಎಂ. (ಸಂ.), ರಾಜಾದಿತ್ಯನ ವ್ಯವಹಾರ ಗಣಿತ (೧೯೫೫), ಪು. ೨.

೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಪು. ೨೦೫–೨೦೯.

೩. ಕೆ.ಆಯ್. ಸಂ. VI, ಶಾ.ಸಂ. ೭೩.

೪. ಅದೇ.

೫. ಎ.ಆರ್.ಎಸ್.ಆಯ್.ಇ. ೧೯೬೧–೬೨, ಪು. ೯೭.

೬. ಇ.ಆಯ್. ಸಂ. XII, ಶಾ.ಸಂ. ೩/ಎ.

೭. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೬.

೮. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೧–೧೬೨.

೯. ಇ.ಆಯ್. ಸಂ. XII, ಶಾ.ಸಂ. ೩/ಎ.

೧೦. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೯೧.

೧೧. ಕೆ.ಆಯ್. ಸಂ. V, ಶಾ.ಸಂ. ೨೧.

೧೨. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೨೧೬–೨೧೭.

೧೩. ಅದೇ.

೧೪. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೨–೧೬೩.

೧೫. ಕುಂದಣಗಾರ. ಕೆ.ಜಿ. (ಸಂ.), ಇನ್‌ಸ್ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.

೧೬. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೨೨೪.

೧೭ ಕೆ.ಆಯ್. ಸಂ. V, ಶಾ.ಸಂ. ೨೩.

೧೮. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೧೯. ಅದೇ, ಶಾ.ಸಂ. ೬ ಮತ್ತು ೨೩.

೨೦. ಆಯ್.ಎ. ಸಂ. XXXII, ಪು. ೨೧೭.

೨೧. ಗೋಗಿ ಹನುಮಾಕ್ಷಿ, ಪೂರ್ವೋಕ್ತ.

೨೨. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೨೩. ಹಂಪ ನಾಗರಾಜಯ್ಯ, "ಮೈಲಾಪತೀರ್ಥ : ಶಾಸನಗಳ ಆಧಾರ", ಚಂದ್ರಕೊಡೆ (೧೯೯೭), ಪು. ೩೪–೩೯.

೨೪. ಅದೇ.

೨೫. ಕೆ.ಆಯ್. ಸಂ. VI, ಶಾ.ಸಂ. ೭೩.

೨೬. ಆಯ್.ಎ. ಸಂ. XXXII, ಪು. ೨೧೭.

೨೭ ಅದೇ.

೨೮. ಅದೇ.

೨೯. ಅದೇ.

೩೦. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೨೧೭–೨೨೩.

೩೧. ಕೆ.ಆಯ್. ಸಂ. V, ಶಾ.ಸಂ. ೫೨.

೩೨. ಇ.ಆಯ್. ಸಂ. XVI, ಶಾ.ಸಂ. ೧.

೩೩. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೨).

೩೪. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೩೫. ಗುರವ ಆರ್.ಎನ್. "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ–೧೯೭೮), ಪು. ೪೩–೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೩೬. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೨೨೮.

೩೭. ಬಸವರಾಜ ಅಮ್ಮಣಗಿ, "ಶಾಸನದಲ್ಲಿ ರಾಯಬಾಗ", ವಾರ್ಷಿಕ ಸಂಚಿಕೆ (೧೯೮೧), ಪು. ೮೨–೮೩.

೩೮. ಕೆ.ಆಯ್. ಸಂ. V, ಶಾ.ಸಂ. ೨೫.

೩೯. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೪೦. ಇ.ಆಯ್. ಸಂ. XVI, ಶಾ.ಸಂ. ೧.

೪೧. ಪಾಟೀಲ ಶಿ.ಬಾ., ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ (೧೯೯೫), ಪು. ೧೧೧.

೪೨. ಇ.ಆಯ್. ಸಂ. XX, ಶಾ.ಸಂ. ೧.

೪೩. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೮.

೪೪. ಅದೇ.

೪೫. ಎ.ಆರ್.ಎಸ್.ಆಯ್.ಇ. ೧೯೪೦–೪೧, ಪು. ೧೬.

೪೬. ಮೇವುಂಡಿ ಮಲ್ಲಾರಿ, ಕನ್ನಡ ನಾಡಿನ ಕೆಲವು ಶಾಸನ ಕವಿಗಳು (೧೯೭೪), ಪು. ೧೯.

೪೭ ಗುರವ ಆರ್.ಎನ್., "ಏಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್–೧೯೭೮), ಪು. ೨೨–೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೪೮. ಕೆ.ಆಯ್. ಸಂ. VI, ಶಾ.ಸಂ. ೭೩.

೪೯. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ.

೫೦. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩ ಮತ್ತು ೬೫, ಪು. ೨೪೫.

೫೧. ಕೆ.ಆಯ್. ಸಂ. VI, ಶಾ.ಸಂ. ೭೩.

೫೨. ಅದೇ.

೫೩. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೫೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೫೫. ಅದೇ, ಶಾ.ಸಂ. ೩/ಎ–ಬಿ.

೫೬. ಕೆ.ಆಯ್. ಸಂ. I, ಶಾ.ಸಂ. ೭೩.

೫೭. ರಾಜಶೇಖರಪ್ಪ ಬಿ., "ಬೆಳಗಾವಿ ಜಿಲ್ಲೆಯ ಪ್ರಾಚೀನ ಕವಿಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೬೭೯-೬೮೦.

೫೮. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೧೯).

೫೯. ಕೆ.ಆಯ್. ಸಂ. I, ಶಾ.ಸಂ. ೩೧.

೬೦. ಆಯ್.ಎ. ಸಂ. V, ಶಾ.ಸಂ. ೨.

೬೧. ಅದೇ, ಸಂ. XLII, ಪು. ೧-೫.

೬೨. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೭.

೬೩. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦-೨೪೧. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯-೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಆಯ್.ಎ. ಸಂ. XXXII, ಪು. ೨೧೭. ಕೆ.ಆಯ್. ಸಂ. I, ಶಾ.ಸಂ. ೩೦. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮. ಕೆ.ಆಯ್. ಸಂ. VI, ಶಾ.ಸಂ. ೭೩. ಇ.ಆಯ್. ಸಂ. XVI, ಶಾ.ಸಂ. ೧. ಕೆ.ಆಯ್. ಸಂ. IV, ಶಾ.ಸಂ. ೫೫. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧-೧೦೪. ಕುಂದಣಗಾರ ಕೆ.ಜಿ. (ಸಂ.), ಇನ್ಸ್ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬/ (ಜನೇವರಿ-೧೯೭೮), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨. ಇ.ಆಯ್. ಸಂ. XIX, ಪು. ೨೬. ಇ.ಆಯ್. ಸಂ. XIII, ಶಾ.ಸಂ. ೩/ಎ-ಬಿ. ಕೆ.ಆಯ್. ಸಂ. V, ಶಾ.ಸಂ. ೨೧.

❖❖❖

ಅಧ್ಯಾಯ : ಆರು

ಕೂಹುಂಡಿನಾಡಿನ ಆರ್ಥಿಕ ಪರಿಸ್ಥಿತಿ

ಅಧ್ಯಾಯ : ಆರು
ಆರ್ಥಿಕ ಪರಿಸ್ಥಿತಿ

೬.೧. ಪೀಠಿಕೆ

ಯಾವುದೋ ಒಂದು ಪ್ರದೇಶ ಅಥವಾ ನಾಡಿನ ಆರ್ಥಿಕ ಪರಿಸ್ಥಿತಿ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಪ್ರಮಾಣ, ಅವುಗಳ ಗುಣಮಟ್ಟ ಮತ್ತು ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ, ಮೂಲಭೂತ ಸೌಕರ್ಯಗಳು, ಜನರ ದುಡಿಮೆಯ ಪರಿಶ್ರಮವನ್ನು ಅವಲಂಭಿಸಿರುತ್ತದೆ. ಈ ವ್ಯವಸ್ಥೆಗನುಗುಣವಾಗಿ ಆ ನಾಡಿನ ಜನರ ಜೀವನ ವಿಧಾನಗಳು ನಿರ್ಧರಿತವಾಗಿರುತ್ತವೆ. ಪ್ರಕೃತಿದತ್ತವಾದ ಎಲ್ಲ ಕೊಡುಗೆಗಳು ಅಂದರೆ ಮಣ್ಣು, ನೀರು, ಖನಿಜ, ಅರಣ್ಯ ಸಂಪತ್ತುಗಳೆಲ್ಲವೂ ಭೂಮಿಯಲ್ಲಿ ಸಮಾವೇಶಗೊಳ್ಳುತ್ತವೆ. ಇದರಿಂದ ಭೂಮಿಯು ನಿಸರ್ಗ ಸಂಪನ್ಮೂಲದ ಕೇಂದ್ರವಾಗಿರುವುದು ಮನದಟ್ಟಾಗುತ್ತದೆ. ಪ್ರಾಚೀನ ಕಾಲಾವಧಿಯಲ್ಲಿ ಹೊಸ ಗ್ರಾಮಗಳ ಉದಯದೊಂದಿಗೆ ಅದರ ಸುತ್ತಲೂ ವ್ಯವಸಾಯ ಭೂಮಿ ನಿರ್ಮಾಣವಾಗುತ್ತಿತ್ತು. ಪಾಳು ಭೂಮಿಯನ್ನು ಪಶುಪಾಲನೆಯ ಹುಲ್ಲುಗಾವಲಿಗೆಂದು ಉಪಯೋಗಿಸಲಾಗುತ್ತಿತ್ತು. ಪಾಳು ಭೂಮಿ ಇರದಿದ್ದರೆ ಅಲ್ಲಿ ನೂರು ಬಿಲ್ಲಳತೆಯ ಭೂಮಿಯನ್ನು ಕಾಯ್ದಿಡಬೇಕು ಎಂದು 'ಯಾಜ್ಞವಲ್ಕಸ್ಮೃತಿ' ಸೂಚಿಸುತ್ತದೆ.[೧] ಈಗಲೂ ಪ್ರತಿಯೊಂದು ಗ್ರಾಮದಲ್ಲಿ ಗೋಮಾಳ ಭೂಮಿಯನ್ನು ಕಾಯ್ದಿಡುವ ಪದ್ಧತಿಯಿದೆ. ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ' ಕೃತಿಯಲ್ಲಿ ಅರ್ಥವ್ಯವಸ್ಥೆ (ಆರ್ಥಿಕ ಪರಿಸ್ಥಿತಿ) ಎಂದರೆ ಆಯಾ ಪ್ರದೇಶದ ಕೃಷಿ, ಪಶುಪಾಲನೆ, ವಾಣಿಜ್ಯ, ಕೈಗಾರಿಕೆ, ರಾಜನೀತಿ, ದಂಡನೀತಿ ಎಂದು ಸೂಚಿಸಿದ್ದಾನೆ.

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳು ಈ ನಾಡಿನ ನೈಸರ್ಗಿಕ ಸಂಪತ್ತಿನ ಸವಿಸ್ತಾರವಾದ ವಿವರಗಳನ್ನೊಳಗೊಂಡಿವೆ. ಈ ಹಿನ್ನೆಲೆಯಲ್ಲಿ ಇಲ್ಲಿಯ ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಇಲ್ಲಿ ಕೃಷಿ ಸಂಪತ್ತೂ ಸಮೃದ್ಧವಾಗಿತ್ತು. ಈ ನಾಡು–

> ನಿರುಪಮ ಗನ್ಧಶಾಳಿವನದಿಂ ಬನದಿಂ ಕೊಳದಿಂ ತಟಾಕದಿಂ
> ಗಿರಿವನ ತೋಯದುರ್ಗ್ಗಕುಳದಿಂದಗಳಿಂ ಬುಧ ಮಾಧವಾರ್ಕ್ಕ
> ಶಂಕರ ಜಿನಸದುಮದಿಂ ವಿಷಣಿಮಾರ್ಗದಿನೊಪ್ಪುವ..........||

ನದಿಗಳು, ಕೆರೆಗಳು, ಗದ್ದೆಗಳು, ಹೂದೋಟಗಳು, ಕಬ್ಬಿನ ತೋಟಗಳು ಮೊದಲಾದ ನೀರಿನಾಸರೆಗಳು ಮತ್ತು ಗದ್ದೆ–ತೋಟಗಳಿಂದ ಸಂಪದ್ಭರಿತವಾಗಿತ್ತು. ತೇರದಾಳದ ಕ್ರಿ.ಶ. ೧೧೨೩ರ ಶಾಸನವು–

> ಧನದನನೆವನೆಂದು ಕೊಱಚಾಡುವ ಕಾಡುವ ತಂಮ
> ಕಾಂಚನನಿಚಯಂಗಳಿಂ ಮಣಿಗಣಂಗಳ ರಾಸಿಗಳಿಂ
> ನವೀನಮಣ್ಡನಬಹುವಸ್ತ್ರದಿಂ ಪಯಗಳಿಂ ಬಹುಧಾನ್ಯಾದಿ
> ನೊಪ್ಪಿತೋರ್ಪ್ಪ ನಚ್ಚಿನ ಪರದರ್ಕ್ಕಳಿಂ ಭರಿತವಾಗಿ ಕರಂ
> ಸೊಗಯಿಕ್ಕು ತತ್ಪುರಂ ||

ಕೂಹುಂಡಿನಾಡಿನ ಪ್ರದೇಶವು ಚಿನ್ನದ ಒಡವೆಯ ರಾಶಿಗಳು, ಬಣ್ಣ–ಬಣ್ಣದ ಬಟ್ಟೆಗಳು, ಹಾಲು

ಹೈನುಗಳು, ಜೇನುತುಪ್ಪ, ಗೋಸಂಪತ್ತಿನಿಂದ ಸಂಪತದ್ಭರಿತವಾಗಿತ್ತೆಂದು ಕೊಂಡಾಡಿದೆ.[೨] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳು ಕೂಹುಂಡಿನಾಡು ಕಬ್ಬಿನ ತೋಟಗಳು, ಭತ್ತದ ಗದ್ದೆಗಳು, ಬಾಳೆಯ ತೋಟಗಳು, ಹಣ್ಣಿನ ತೋಟಗಳು, ಸುಂದರವಾದ ಮನೆಗಳು, ಸೌಧಗಳು, ಅಂಗಡಿಗಳ ಸಾಲುಗಳು, ದನಕರುಗಳ ವ್ಯವಹಾರಗಳಿಂದ ವಿಜೃಂಭಿಸುತ್ತಿತ್ತೆಂದು ವರ್ಣಿಸಿವೆಪ್ರಸ್ತುತ ಅಧ್ಯಾಯದಲ್ಲಿ ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳ ಹಿನ್ನೆಲೆಯಲ್ಲಿ ಸಮಕಾಲೀನ ಆರ್ಥಿಕ ಪರಿಸ್ಥಿಯ ವಿವಿಧ ಆಯಾಮಗಳನ್ನು ವಿಶ್ಲೇಷಿಸಲಾಗಿದೆ.

೬.೨. ಭೂ ಸಂಪತ್ತು

ಕೂಹುಂಡಿನಾಡಿನ ಪ್ರದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಭೂಮಿ ಪ್ರಮುಖ ಸ್ಥಾನ ಪಡೆದಿತ್ತು. ಈ ನಾಡಿನ ಬಹುತೇಕ ಶಾಸನಗಳೆಲ್ಲವೂ ಭೂದಾನಕ್ಕೆ ಸಂಬಂಧಿಸಿವೆ. ಇದರಿಂದ ದಾನವಾಗಿ ಕೊಡುವ ವಸ್ತುಗಳಲ್ಲಿ ಭೂಮಿ ತುಂಬಾ ಶ್ರೇಷ್ಠವಾದ ವಸ್ತುವಾಗಿತ್ತೆಂಬುದು ಮನದಟ್ಟಾಗುತ್ತದೆ. ಅಲ್ಲದೇ ಅಂದು ವ್ಯವಸಾಯವೇ ಜೀವನೋಪಾಯದ ಪ್ರಮುಖ ಉದ್ಯೋಗವಾಗಿತ್ತು. ವ್ಯವಸಾಯ ಮಾಡುತ್ತಿದ್ದ ರೈತರನ್ನು ಒಕ್ಕಲು ಮಕ್ಕಲು ಎಂದು ಕರೆಯಲಾಗುತ್ತಿತ್ತು. ಈ ನಾಡಿನಲ್ಲಿ ಇತಿಹಾಸ ಪೂರ್ವಕಾಲದಿಂದಲೂ ಅನುಸರಿಸಿಕೊಂಡು ಬಂದ ಒಕ್ಕಲುತನವು ಇಲ್ಲಿಯ ಆರ್ಥಿಕ ವ್ಯವಸ್ಥೆಯ ಜೀವನಾಡಿಯಾಗಿದೆ. ಕೃಷಿ ಇಲ್ಲಿಯ ಬಹು ಜನರ ಮುಖ್ಯ ಉದ್ಯೋಗವಾಗಿತ್ತು. ಕೃಷಿ, ವ್ಯಾಪಾರ, ಉದ್ಯೋಗ, ಕೈಗಾರಿಕೆಗಳು ಈ ನಾಡಿನ ಸಮಸ್ತ ಆದಾಯಕ್ಕೆಲ್ಲ ಮೂಲವಾಗಿದ್ದರಿಂದಲೇ ಅಂದು ಒಕ್ಕಲುತನದ ಅಭಿವೃದ್ಧಿಯೇ ನಾಡಿನ ಅಭಿವೃದ್ಧಿಯಾಗಿತ್ತು. ಈ ನಾಡಿನಲ್ಲಿ ಮಾನವನು ಬೇಟೆಯಾಡುವುದನ್ನು ಬಿಟ್ಟು, ಪ್ರಾಣಿ ಸಾಕಾಣಿಕೆಯ ಪ್ರಾರಂಭ ಮತ್ತು ಭೂಮಿಯನ್ನು ಬೇಸಾಯಕ್ಕೆ ಬಳಸುವಾಗಿನಿಂದಲೇ ಕೃಷಿ ವ್ಯವಸ್ಥೆ ಪ್ರಾರಂಭವಾಗಿದೆ. ಅಂದು ಭೂಮಿಯ ಮೇಲೆ ಯಾವುದೇ ರಾಜಕೀಯ ಮತ್ತು ವ್ಯಕ್ತಿಗತವಾದ ಶಕ್ತಿಗಳ ಒಡೆತನವಿರಲ್ಲಿಲ್ಲ.

ಕೂಹುಂಡಿನಾಡಿನ ಪ್ರದೇಶದಲ್ಲಿ ಒಕ್ಕಲುತನ ಮತ್ತು ಆಹಾರ ಬೆಳೆಯುವ ಸಾಧನವಾದ ಭೂಮಿಯನ್ನು ತುಂಬಾ ಗೌರವಿಸಲಾಗುತ್ತಿತ್ತು. ತನ್ನ ಗರ್ಭದಿಂದ ಹೊರಟ ಧಾನ್ಯಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿ ಎಂದೂ, ಭೂತಾಯಿಯ ಗರ್ಭದಿಂದ ಬೆಳೆಯನ್ನು ಬೆಳೆಯುವ ರೈತನನ್ನು ಭೂತಾಯಿಯ ಮಕ್ಕಳು ಎಂದೂ ಗುರುತಿಸಲಾಗುತ್ತಿತ್ತು.[೪] ಸಮಕಾಲೀನ ಶಾಸನಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ನೀರಿನಾಸರೆಗಳು ಮತ್ತು ಬೆಳೆಯುವ ಬೆಳೆಗಳನ್ನು ಆಶ್ರಯಿಸಿ ಕ್ರಮವಾಗಿ ದೇವಮಾತೃಕ (ಬೆದ್ದಲೆ) ಮತ್ತು ನದಿಮಾತೃಕ (ಗದ್ದೆ) ಎಂದು ಕರೆಯಲಾಗಿದೆ.[೫] ಅಂದು ಭೂಮಿಯನ್ನು ಯಾರಿಗೆ ದಾನ ಕೊಡಲಾಗುತ್ತಿತ್ತೋ ಅವರೇ ಆ ಭೂಮಿಯ ಒಡೆಯರಾಗಿದ್ದರು. ಕೂಹುಂಡಿನಾಡಿನ ಪ್ರದೇಶದಲ್ಲಿ ಕೃಷಿ ಉಪಜೀವನದ ಪ್ರಧಾನ ಕಸುಬುವಾಗಿತ್ತೆಂಬುದು ಇಲ್ಲಿಯ ಭೂದಾನಗಳಿಗೆ ಸಂಬಂಧಿಸಿದ ಶಾಸನಗಳಿಂದ ಮನದಟ್ಟಾಗುತ್ತದೆ. ಈ ನಾಡಿನಲ್ಲಿ ಕಬ್ಬು, ಭತ್ತ, ಬಾಳೆ, ರಾಗಿ, ಅರಿಷಿಣ, ಅಡಿಕೆ, ಎಲೆ ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತಿತ್ತೆಂಬುದು ಬೆಳಗಾವಿ,

ಸವದತ್ತಿ, ಕಲ್ಲೊಳೆ, ಹಣ್ಣಿಕೇರಿ, ವಣ್ಣೂರು, ಯಕ್ಸಂಬಾ, ಸಂಕೇಶ್ವರ, ತೇರದಾಳ ಮೊದಲಾದ ಶಾಸನಗಳಲ್ಲಿರು ದಾನ-ದತ್ತಿಗಳಿಂದ ತಿಳಿಯುತ್ತದೆ. ಒಕ್ಕಲುತನದಿಂದ ಉತ್ಪಾದನೆಯಾದ ಉತ್ಪನ್ನದ ಆಧಾರದ ಮೇಲೆ ತೆರಿಗೆಯನ್ನು ನಿರ್ಧರಿಸಲಾಲಾಗುತ್ತಿತ್ತು. ಕೃಷಿ ಉತ್ಪಾದನೆಯ ಪ್ರಮಾಣದ ಮೇಲೆ ತೆರಿಗೆಯನ್ನು ಕಟ್ಟಲಾಗುತ್ತಿತ್ತು.

೬.೩. ಭೂಮಿಯ ಪ್ರಕಾರಗಳು

ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಸಾಮಾನ್ಯವಾಗಿ 'ಕೆಯ್ಯ' ಎಂದು ಕರೆಯಲಾಗುತ್ತಿತ್ತು. ಶಾಸನಗಳು ಭೂಮಿಯ ಫಲವತ್ತತೆಯನ್ನಾಧರಿಸಿ ಉತ್ತಮ, ಮಧ್ಯಮ, ಕನಿಷ್ಠ ಎಂದು ಮೂರು ಪ್ರಕಾರಗಳಲ್ಲಿ ವಿಂಗಡಿಸಿವೆ. ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ–

> ಶ್ರೀಮನ್ಮಹಾಮಂಡಳೇಶ್ವರನೆಱಗದೇವರಸರ್ ಶ್ರೀಮನ್ಮಹಾಪ್ರಧಾನಂ
> ಮಾದಿರಾಜದಣ್ಣಾಯಕರ್ಗ್ಗೆ ಕೂಂಡಿ ಮೂರುಸಾಸಿರದ ಕುರುಂಬೆಟ್ಟ
> ಗಂಪಣದ ಬಳಿಯ ಬಾಡ ಕಂಕನೂರ ಪ್ರಭುತ್ವಮಂ ಅಷ್ಟಭೋಗ
> ತೇಜಸಾಮ್ಯಸಹಿತಂ ಧಾರಾಪೂರ್ವ್ವಕಂ ಕೊಟ್ಟ ಸಾಮಾನ್ಯಭೂಮಿ
> ಊರಿಂ ಮೂಡಲ್ ಮೋದಿಣಿಯ ಸೀಮೆಯಿಂ ಪಡುವಲ್
> ನಾಗನೂರ ಸೀಮೆಯಿಂ ಬಡಗಲ್ ಕಂಬಂ ೪೧೦ ತೋಂಟಂ
> ಕಂಬ ೫೦ ಊರನ್ಯರುತ್ತುಂ ಪ್ರಭುಮಾನ್ಯದ ಮಗಿಲ್ ಹಸ್ತಂ
> ೪೦ ಬಣಂಬೆ ಹಸ್ತಂ ೪೦ ॥

ಎಂದು ಸಾಮಾನ್ಯ ಭೂಮಿಯ ಪ್ರಸ್ತಾಪವಿದೆ.[೬] ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ–

> ನಾಗರಸರು ಕೊಟ್ಟ ಸಾಸನ ನಾಲ್ಕುಂ ಪಟ್ಟಣಂಗಳು ನೂಲೆನಾಡೊಳಗೆ
> ಸಂತೆಗಳ ಅಯದಾಯ ಇಪಂತು ಕೋಣನ ಮೆಯಿದೆಱೆ ಸುಂಕ
> ಹದಿನೆಂಟ್ಟು ಸಮೆಯವು ಅಱುವತಮೂವರು ಬಣಜು ಭಕುತಿ
> ಭೇದವಿಲ್ಲ ಕವಿಳಾಸಪುರವೇ ಸಾಸನದ ಮನೆ ಬಸವರಾಜನೇ
> ಸಾಸನಿಗನೆಂದು ವುಭಯನಾನಾದೇಸಿ ಮುಂಮುರಿದಂಡಂಗಳು
> ಕೊಟ್ಟ ಸಾಸನ ॥

ಇಪ್ಪತ್ತು ಕೋಣ ಮೇಯಿಸುವ ಮಡ್ಡಿಯ ನಿರೂಪಣೆಯಿದೆ.[೭] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಬಡಗಮುಖಂ ಬೀಳಿಯ ಬಾವಿಯಿಂ ಮೂಡಲಾಗಿ
> ಪಡುವಣ ಸೀಮೆ ನಡೆಯಲ್ಕೆಂಮೊರಡಿಯಲ್ಲಿ..........

ಮೊರಡಿಯ ಪ್ರಸ್ತಾಪವಿದೆ. ಮಡ್ಡಿ ಭೂಮಿ ಸಾಮಾನ್ಯವಾಗಿ ಕೆಂಪು ಮಣ್ಣನ್ನು ಹೊಂದಿರುತ್ತದೆ. ಅಸುಂಡಿಯ ಕ್ರಿ.ಶ. ೧೧೯೩ರ ಶಾಸನದಲ್ಲಿ ಸವಳು ಜಮೀನಿನ ಉಲ್ಲೇಖವಿದೆ.[೮] ಕೆಲವು ಶಾಸನಗಳಲ್ಲಿ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಭೂಮಿಗಳಾದ ಗುಡ್ಡ, ಗದ್ದೆ, ತೋಟ, ಹೊಲಗಳ ಪ್ರಸ್ತಾಪಗಳಿವೆ. ಕೂಹುಂಡಿನಾಡಿನಲ್ಲಿ ಬೆಳೆಯಲಾಗುತ್ತಿದ್ದ ಬೆಳೆಗಳನ್ನು ಅವಲೋಕಿಸಿದರೆ ಇಲ್ಲಿ ಕರಿ ಮಣ್ಣಿನ ಭೂಮಿ, ಕೆಂಪು ಮಣ್ಣಿನ ಭೂಮಿ, ಗುಡ್ಡಗಾಡು ಭೂಮಿ, ಕಪ್ಪುಮಿಶ್ರಿತ ಎರೆಯ ಭೂಮಿಗಳಿದ್ದವೆಂಬುದು

ಸ್ಪಷ್ಟವಾಗುತ್ತದೆ. ಹೀಗೆ ಅಂದು ಭೂಮಿಯನ್ನು ಅದರ ಫಲವತ್ತತೆ ಹಾಗೂ ಮಣ್ಣಿನ ಬಣ್ಣದ ಆಧಾರದ ಮೇಲೆ ವಿಂಗಡಿಸಿ ಗುರುತಿಸಲಾಗುತ್ತಿತ್ತು.

೬.೪. ನೀರಾವರಿ ವ್ಯವಸ್ಥೆ

ಕೂಹುಂಡಿನಾಡಿನ ಪ್ರದೇಶದಲ್ಲಿ ನದಿಮಾತೃಕಗಳಿಂದ ಬೆಳೆಗಳನ್ನು ಬೆಳೆಯುವ ಭೂಮಿಯು ನೀರಾವರಿ ಭೂಮಿ ಎಂದು ಕರೆಯಲ್ಪಡುತ್ತಿತ್ತು. ಈ ಪ್ರದೇಶವನ್ನಾಳಿದ ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳು ಕೆರೆ, ಬಾವಿ, ಕಾಲುವೆಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ಭಾವಿಸಿದ್ದರು. ಅಂತಾಗಿ ಇಲ್ಲಿ ನೀರಾವರಿಗಾಗಿ ಅನೇಕ ಕೆರೆಗಳು, ಕಟ್ಟೆಗಳು, ಹೊಂಡಗಳು, ಬಾವಿಗಳು ನಿರ್ಮಾಣವಾಗಿವೆ. ಈ ನಾಡಿನ ಹಲವು ಶಾಸನಗಳಲ್ಲಿ ದಾನ ಮಾಡಿದ ಭೂಮಿಯ ಮೇರೆಯನ್ನು ಸೂಚಿಸಿರುವ ವಿವರಗಳಲ್ಲಿ ಅನೇಕ ಕೆರೆಗಳ ಪ್ರಸ್ತಾಪಗಳು ಗೋಚರಿಸುತ್ತವೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಆನೆಯಕೆರೆಗೆ ಹೋದ ಬಟ್ಟೆಯಿಂ ಬಡಗಲ ಹೂದೋಂಟಂ
ಆ ವೇಣುಗ್ರಾಮದ ಕೋಲಿಂ ಮತ್ತರೆರಡು ಕಮ್ಮವಿನ್ನೂಱೆಳ್ಪತ್ತಾರು ।
ಮುಂತೆ ನಟ್ಟ ಕಲ್ಲಲ್ಲಿಂ ಮುಂದೆ ನಾಗಱಕೆಱೆಯಲ್ಲಿಂ ....

ಆನೆಯಕೆರೆ ಮತ್ತು ನಾಗರಕೆರೆಯ ಪ್ರಸ್ತಾಪಗಳಿವೆ.[೧೦] ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ–

ತದ್ಧರಪೊಲದ ಬಗಿವೊಲದ ಸಂದಿನಲೀಶಾನ್ಯದ ಗುಡ್ಡೆ
ಅಲ್ಲಿಂ ತೆಂಕಲೆಳೆಯ ಕೆರೆಯ ಬಳಿಯ ಕಲ್ಲು ।

ಕೆರೆಯ ನಿರೂಪಣೆಯಿದೆ.[೧೧] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

ಅಲ್ಲಿಯ ಮೂಲಸ್ಥಾನದ ಗೊರವಗೆಯ್ಯಿಂ ಬಡಗಲು
ಕೆರೆವೂರಿಂಗೆ ಹೋದ ಬಟ್ಟೆಯಿಂ.......................

ಕೆರೆಯ ಉಲ್ಲೇಖವಿದೆ.[೧೨] ಕುಡಿಯಲು ಮತ್ತು ಕೃಷಿಗಾಗಿ ಜಮೀನುಗಳಲ್ಲಿ ಕೃಷಿಕರು ಬಾವಿಗಳನ್ನು ತೋಡಿದ್ದರು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಊರಿಂ ಬಡಗಲು ಕಂಕಣನೂರ ಹೆದ್ದಾರಿಯಿಂ
ಮೂಡಲ್ನವಿಲಹಳ್ಳದ ಮುರಿವಿನಲ್ಲಿ ನೈರರೈತ್ಯದ
ಕೋಣೋಳ್ನಟ್ಟಕಲ್ಲಲ್ಲಿಂ ಬಡಗಮುಖಂ ಬಿಳಿಯ
ಬಾವಿಯಿಂ ಮೂಡಲಾಗಿ......................

ಬಿಳಿಯ ಬಾವಿಯ ಪ್ರಸ್ತಾಪವಿದೆ.[೧೩] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ತೆಂಕಣ ಹೆಳೆಪಡುವಳಾ ಹಳ್ಳಂ ಬಡಗಲುರುಂಬಬಾವಿಯ
ತೋಂಟಂ । ....

ಬಡಗಲೂರ ಬಾವಿಯ ಉಲ್ಲೇಖವಿದೆ.[೧೪] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ದೇವಿಯಣಬಾವಿಯಂ ತೆಂಕಲಾಕೋಲೋಳು
ಕೊಟ್ಟ ತೋಂಟ ಮತ್ತರೊನ್ದು...........

ದೇವಿಯಣ ಬಾವಿಯ ಪ್ರಸ್ತಾಪವಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ನದಿಗಳ ನೀರಿನ ಪ್ರಮಾಣ ಅಧಿಕವಾಗಿತ್ತು. ಹನ್ನೆರಡು ತಿಂಗಳುಗಳೂ ಇಲ್ಲಿಯ ನದಿಗಳು ತುಂಬಿ ಹರಿಯುತ್ತಿದ್ದುದರಿಂದ ನೀರಾವರಿಯ ವ್ಯವಸ್ಥೆ ಸಂಪದ್ಭರಿತವಾಗಿತ್ತು. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ-

ಕೂಡಲಂಬಿಯರ ಮಾನ್ಯದಿಂ ತೆಂಕಲು ಕಲುಹೊಳೆಯ
ಸೀಮೆಯ ನೀರ್ವ್ವರಿಯಿಂ ಪಡವಲು.....................
ಮತ್ತಂ ಕೂಡಲು ಕಲುಹೊಳೆಯಲು....................

ಕಲ್ಲುಹೊಳೆಯ ನಿರೂಪಣೆಯಿದೆ.[೧೫] ಯಕ್ಸಂಬಾದ ಹತ್ತಿರ ಹರಿದಿರುವ ಕೃಷ್ಣಾ ನದಿಯನ್ನೇ ಕಲ್ಲುಹೊಳೆ ಎಂದು ಕರೆಯಲಾಗುತ್ತಿತ್ತು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ-

ಹಳ್ಳದಿಂ ಮೂಡಲು ಬಣಬೆಗಟ್ಟೆಂ ಪಡವಲು........
ಮೂಡಣಸೀಮೆ ನಡೆಯಲ್ನವಿಲಹಳ್ಳದಲ್ಲಿ ಆಗ್ನೇಯ
ಕೋಣೋಳ್ನಟ್ಟ ಕಲ್ಲಲ್ಲಿಂ ಪಡುಮುಖಂ ತೆಂಕಣ
ಸೀಮೆ ನವಿಳಹಳ್ಳಂ ।

ನವಿಹಳ್ಳದ ಪ್ರಸ್ತಾಪವಿದೆ. ಯಕ್ಸಂಬಾದ ಕ್ರಿ.ಶ. ೧೧೬೫ರರ ಶಾಸನದಲ್ಲಿ-

ಹಳ್ಳದಿಂ ಮೂಡಲು ಬಣಬೆಗಟ್ಟೆಂ ಪಡುವಲು
ಬ್ರಹ್ಮಯನ ದೇವಾಲಯದ ಬಡಗಣ ಬಟ್ಟೆಯಿಂ
ಬಡಗಲು ಆ ಕೋಲಲು ಇಪ್ಪತ್ತು ಕಂಬ...........

ಹಳ್ಳದ ನಿರೂಪಣೆಯಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ-

ತೆಂಕಣಿಂ ಬಂದ ಮುಗುಳಿಯ ಹಳ್ಳವದರ್ಕ್ಕೆ ತೆಂಕಣ
ಹೆಳೆಪಡುವಳಾ ಹಳ್ಳಂ...
ಆ ಎಲೆಯ ತೋಂಟದಿಂ ತೆಂಕಲಾ ಹಳ್ಳದಿಂ............

ಹಳ್ಳದ ಉಲ್ಲೇಖವಿದೆ.[೧೬] ಗಾತ್ರ ಮತ್ತು ನೀರಿನ ಪ್ರಮಾಣದಲ್ಲಿ ನದಿಗಿಂತ ಚಿಕ್ಕವುಗಳಾಗಿದ್ದ ಇವು ಕೃಷಿಯ ಬೆಳವಣಿಗೆ ಮತ್ತು ನೀರಾವರಿ ಬೆಳೆಗಳನ್ನು ಬೆಳೆಯಲು ರೈತರಿಗೆ ಸಹಕಾರಿಯಾಗಿದ್ದವು. ಇದರ ಜೊತೆಗೆ ರೈತರು ತಮ್ಮ ಜಮೀನುಗಳಲ್ಲಿ ಹೊಂಡಗಳನ್ನು ತೋಡಿಕೊಂಡಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ 'ತೊಂಡಂ' ಎಂಬ ಹೊಂಡದ ಪ್ರಸ್ತಾಪವಿದೆ.[೧೭] ಹೀಗೆ ಕೂಹುಂಡಿನಾಡಿನ ಪ್ರದೇಶದ ರೈತರು ಆಹಾರೋತ್ಪಾದನೆಗೆ ತಮ್ಮ ಜಮೀನುಗಳನ್ನು ನೀರಾವರಿಗೊಳಪಡಿಸುವುದಕ್ಕಾಗಿ ನೈಸರ್ಗಿಕ ಮತ್ತು ಕೃತಕ ನೀರಿನ ಮೂಲಗಳನ್ನು ಉಪಯೋಗಿಸಿಕೊಂಡು ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ಸಲ್ಲಿಸಿದ್ದಾರೆ.

ಕೂಹುಂಡಿನಾಡಿನ ಪ್ರದೇಶದ ರೈತರು ಕೃಷಿಯಲ್ಲಿ ನೀರಾವರಿಯ ಉಪಯೋಗವನ್ನು ಚೆನ್ನಾಗಿಯೇ ಅರಿತ್ತಿದ್ದರು. ಕೃಷಿ ಭೂಮಿಯನ್ನು ನೀರಾವರಿ ಭೂಮಿಯನ್ನಾಗಿ ಪರಿವರ್ತಿಸಲು ಅನೇಕ ಕಡೆಗಳಲ್ಲಿ ಕೆರೆಗಳು, ಬಾವಿಗಳು, ಹಳ್ಳಗಳು ಮತ್ತು ನದಿಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಿದ್ದರು.

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಆನೆಕೆರೆಯ ಪ್ರಸ್ತಾಪವಿದೆ.[೧೮] ನೇಸರಗಿಯ ಕ್ರಿ.ಶ. ೧೨೯೯ರ ಶಾಸನದಲ್ಲಿ–

ತಾವರಗೆರೆಯ ದಾರಿಯಿಂ ಪಡುವಲು ರಂಬೆಗೇರಿಯ
ಸೀಮೆಯಿಂ ಮೂಡಲು ||

ತಾವರಗೆರೆಯ ನಿರೂಪಣೆಯಿದೆ.[೧೯] ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ನಾಗರಕೆರೆಯ ಉಲ್ಲೇಖವಿದೆ.[೨೦] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ ಕೆರೆಯ ಪ್ರಸ್ತಾಪವಿದೆ.[೨೧] ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ–

ಕಚ್ಚವಿಯ ತೀರ್ತ್ಥದಿಂ ಪಡುವಲ ಬಾಹಿರ ಸೀಮೆ........
ಯದಱ ಮೂಡಣ ಸೀಮೆ ಮಲಪ್ರಹಾರೀ ನದಿಯ ಸಕಲೇ........

ಮಲಪ್ರಹಾರಿ, ಮಳಾಪಹಾರಿನದಿ ಎಂದು ಇಂದಿನ ಮಲಪ್ರಭಾ ನದಿಯ ನಿರೂಪಣೆಯಿದೆ.[೨೨] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ 'ಕಿರುದೊರೆ' ಎಂದು ಇಂದಿನ ಧೂದಗಂಗಾ ನದಿಯ ಉಲ್ಲೇಖವಿದೆ.[೨೩] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ'ಹಳ್ಳಂ' ಎಂದು ಇಂದಿನ ಬಳ್ಳಾರಿ ಹಳ್ಳದ ನಿರೂಪಣೆಯಿದೆ.[೨೪] ಹೀಗೆ ಕೂಹುಂಡಿನಾಡಿನ ಪ್ರದೇಶದಲ್ಲಿ ಕೆರೆಗಳು, ಬಾವಿಗಳು, ಹಳ್ಳಗಳು, ನದಿಗಳು ಕೃಷಿ ಮತ್ತು ಕುಡಿಯುವ ನೀರಿಗಾಗಿ ತುಂಬಾ ಉಪಯುಕ್ತವಾಗಿದ್ದವು.

೬.೫. ಬೆಳೆಗಳು

ಕೂಹುಂಡಿನಾಡಿನ ಪ್ರದೇಶದಲ್ಲಿ ಬೆಳೆಯುತ್ತಿದ್ದ ಬೆಳೆಗಳನ್ನು ನದಿಮಾತೃಕ ಮತ್ತು ದೇವಮಾತೃಕ ಬೆಳೆಗಳೆಂದು ವಿಂಗಡಿಸಲಾಗಿದೆ. ಇವುಗಳನ್ನೇ ನೀರಾವರಿ ಬೆಳೆಗಳು ಮತ್ತು ಒಣ ಬೇಸಾಯದ ಬೆಳೆಗಳು (ಮಳೆ ಆಧಾರಿತ) ಎಂದು ಕರೆಯಲಾಗುತ್ತದೆ. ಇವುಗಳ ಉಪಯೋಗ ಮತ್ತು ಬಳಕೆಯನ್ನು ಅವಲಂಭಿಸಿ ವಾಣಿಜ್ಯ ಬೆಳೆಗಳು ಮತ್ತು ಆಹಾರ ಬೆಳೆಗಳು ಎಂದು ವಿಂಗಡಿಸಲಾಗಿದೆ.

೬.೫.೧. ಒಣಬೇಸಾಯದ ಬೆಳೆಗಳು

ಕೂಹುಂಡಿನಾಡಿನ ಪ್ರದೇಶದಲ್ಲಿ ಮಳೆಯನ್ನು ಅವಲಂಭಿಸಿ ಬೆಳೆಯಲಾಗುತ್ತಿದ್ದ ಬೆಳೆಗಳನ್ನು ಒಣ ಬೇಸಾಯದ ಬೆಳೆಗಳು ಎಂದು ಕರೆಯಲಾಗುತ್ತಿತ್ತು. ಅಂದಿನ ಕೃಷಿ ಮತ್ತು ನೀರಾವರಿ ವ್ಯವಸ್ಥೆ ಇಂದಿನಷ್ಟು ಮುಂದುವರೆದಿರಲಿಲ್ಲ. ಕೃಷಿಕರು ಹೆಚ್ಚಾಗಿ ಮಳೆಯನ್ನೇ ಅವಲಂಭಿಸಿ ಬೆಳೆಗಳನ್ನು ಬೆಳೆಯುತ್ತಿದ್ದರು. ಕೆಲವೆಡೆಗಳಲ್ಲಿ ಮಾತ್ರ ನದಿಗಳು, ಹಳ್ಳಗಳು ಮತ್ತು ಬಾವಿಗಳಿವೆ. ಅಂತಾಗಿ ಈ ನಾಡಿನಲ್ಲಿ ರೈತರು ಹೆಚ್ಚಾಗಿ ಒಣ ಬೇಸಾಯದ ಬೆಳೆಗಳನ್ನು ಬೆಳೆಯುತ್ತಿದ್ದರು. ಇವುಗಳಲ್ಲಿ ಜೋಳ, ಸಜ್ಜೆ, ಗೋಧಿ, ಕಡಲೆ, ಬೇಳೆ ಕಾಳುಗಳು ಮೊದಲಾದ ಬೆಳೆಗಳು ಪ್ರಮುಖವಾಗಿವೆ. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

ಸ್ವಸ್ತಿಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕೃತ ಸತ್ಯಾಶೌಚಾಚಾರಕ್ಷಿತಚಾರಿತ್ರ ನಯವಿನಯ
ವಿಜ್ಞಾನ ವೀರಸಮಯಬಣಂಜುಧಮದರ್ಮಪತಿಪಾಳಕರಪ್ಪ
ಶ್ರೀಮದಯ್ಯಾವೊಳಿಯ ಯ್ನಾರ್ವ್ವಸ್ವಾಮಿಗಳಂ | ಸಾಸಿರದೇಳ್ನೂರು
ಬವರಿಯುಂ ಮುಮ್ಮುರಿದಂಡಮುಂ ಉಭಯನಾನಾದೇಶಿಯಂ |

ಎಕ್ಕಸಂಬುಗೆಯ ತಳಸಮಸ್ತಮುಮಿರ್ದ್ದು ಶ್ರೀಮನ್ಮಹಾಪ್ರಧಾನಂ
ಪಡವಳ ಕಾಳಿಯಣ್ಣಂ ಮಾಡಿಸಿದ ಬಸದಿಯ ಶ್ರೀನೇಮಿನಾಥಸ್ವಾಮಿಗಳ
ಕ್ಷಿರವಿಧಾರ್ಚ್ಚನೆಗಂ ನಂದಾದೀವಿಗೆಗಂ ನಡವಂತಾಗಿ ಒಂದು ಗಾಣ
ದೊಕ್ಕಲುದೆರೆ ಬೆಣ್ಣೆ ಬೀರವಣಮುಂ । ಕೋಣನ ಹೇರಿಂಗಿಂಮನ ।
ಎತ್ತಿನ ಹೇರಿಂಗೊಂಮನ । ಕತ್ತೆಯ ಹೇರಿಂಗರವನ ಧಾನ್ಯಮುಮಂ ।
ಹೊಂಗಯದತಕೆ ಹೇರಿಂಗಯಿವತ್ತೆತ್ತಿ ತಂದು ಮಾರುವಹಾಡಕ್ಕರವನೆ
ಣ್ಣೆಯುಮಂ ಕೊಟ್ಟು...

ಎಂದು ವಿವಿಧ ಧಾನ್ಯಗಳನ್ನು ದಾನ ಮಾಡಿದ ಪ್ರಸ್ತಾಪವಿದೆ.[೨೫] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಚೆನ್ನಗೆಯಿಕದ ಚೀರಕ್ಕೆ ದೂಸಿಗವಸರಕ್ಕೆ ।
ಹತ್ತಿವಸರಕ್ಕೆ ಮಣಿಗಾಱವಸರಕ್ಕೆ.................
ಹತ್ತಿಯ ಭಣ್ಡಿಗೆ ತಾರಂ ಮೂಱು ಆ ಪೇಱಿಂಗೆ
ಕಾಣಿಯೊಂದು । ....

ಎಂದು ಹತ್ತಿಯ ಉಲ್ಲೇಖವಿದೆ.[೨೬] ಬೈಲಹೊಂಗಲ ತಾಲ್ಲೂಕಿನ ಪ್ರದೇಶದಲ್ಲಿ ಕರಿಮಣ್ಣು ಹೆಚ್ಚಿನ ಪ್ರಮಾಣದಲ್ಲಿದ್ದುದರಿಂದ ಇಲ್ಲಿ ಹತ್ತಿಯನ್ನು ಬೆಳೆದು ಬೆಳಗಾವಿಯ ಮಾರುಕಟ್ಟೆಗೆ ಕಳುಹಿಸಲಾಗುತ್ತಿತ್ತು.

೬.೫.೨. ನೀರಾವರಿ ಬೆಳೆಗಳು

ಈ ಪ್ರದೇಶದಲ್ಲಿ ವ್ಯವಸಾಯದ ಅನುಕೂಲಕ್ಕೆ ಮಳೆಯ ನೀರನ್ನು ಸಂಗ್ರಹಿಸಲು ಕೆರೆಗಳು, ಹೊಂಡಗಳು ಮತ್ತು ಬಾವಿಗಳನ್ನು ತೋಡಲಾಗುತ್ತಿತ್ತು. ಇವುಗಳ ನೀರು ಉಪಯೋಗಿಸಿ ಬೆಳೆಯುವ ಬೆಳೆಗಳನ್ನು ನದಿಮಾತೃಕ ಬೆಳೆಗಳು ಎಂದು ಕರೆಯಲಾಗುತ್ತಿತ್ತು. ಭತ್ತ, ಹತ್ತಿ, ಮೆಣಸು, ಇಂಗು, ಅರಿಷಿಣ, ಅಡಕೆ, ಎಲೆ, ತೆಂಗು, ಬಾಳೆ, ಅಲ್ಲ, ನೆಲ್ಲಿಕಾಯಿ, ಕಬ್ಬು ಮೊದಲಾದ ಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಇದನ್ನು ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿರುವ–

ಹತ್ತಿವಸರಕ್ಕೆ । ಗಂಧವಣವಸರಕ್ಕೆ ಗಂಧವಣಿಗರಂಗಡಿಗೆ ಬೇಱೆವೇಱೆ
ಬರಿಸದೆಱೆ ಹಿರಿಯ ಹಾಗವೊಂದು । ಹೊಱಗಣಿಂ ಬಂದ ಗಂಧವಣಕ್ಕೆ ।
ಕಕ್ಷಭಣ್ಡಕ್ಕೆ । ಆ ಭಂಡಂ ಗದ್ಯಾಣ ತೂಕವಯ್ದು । ಹತ್ತಿಯ ಭಣ್ಡಿಗೆ ತಾರಂ
ಮೂಱು ಆ ಪೇಱಿಂಗೆ ಕಾಣಿಯೊಂದು । ಭತ್ತದ ಭಂಡಿಗೆ ಭತ್ತವೊರ್ವ್ವಳ್ಳಿಂ
ಆ ಪೇಱಿಂಗೆ ಭತ್ತವೊರ್ಮ್ಮಾನಂ । ಅಂಕಣದ ಭತ್ತಂ ಮಾಱಿದಡಾ
ಭತ್ತಂವೊರ್ವ್ವಳ್ಳಂ । ಭತ್ತವಸರದಂಗಡಿಗೆ ಭತ್ತಂ ನಿಚೆಹಸೊಲ್ಲಗೆ । ಅಕ್ಕಿವಸರಕ್ಕೆ
ಅಕ್ಕಿಯುದ್ದಂ । ಮೆಳಸಿಣ ಹೇಱಿಂಗೆ ಮೆಳಸೊರ್ಮ್ಮಾನಂ ಆಜವಳಕ್ಕೆ
ಆರೆವಾನಂ । ಇಂಗಿನ ಪೆಟ್ಟಿಗೆಗೆ ಇಂಗು ಗದ್ಯಾಣಂ ತೂಕವಾಱು ಅಲ್ಲರಿಸಿನದ
ಜವಳಕ್ಕೆ ಆ ಭಣ್ಡಂ ಪಲವಯ್ದು ಆ ಹೇಱಿಂಗೆ ಅಲ್ಲರಿಸಿನಂ ಪಲಂ ಹತ್ತು ।
ಅಡಕೆಯ ಹೇಱಿಂಗೆ ಅಡಕೆಯಿಪ್ಪತ್ತಯ್ದು ಆ ಜವಳಕ್ಕೆ ಅಡಕೆ ಹಂನೆರಡು ।
ಎಲೆಯ ಹೇಱಿಂಗೆಲೆ ನೂಱು ಹೊಱೆಗೆಲೆಯಯ್ವತ್ತು । ತೆಂಗಿನ ಕಾಯ
ಹೇಱಿಂಗಾ ಕಾಯೊಂದು । ಓಲೆಯ ಹೇಱಿಂಗೆ ಓಲೆಯ ಸೂಡೆರಡು ಆ
ಹೊಱೆಗೆ ಸೂಡೊನ್ದು । ಹೊಱಗಣಿಂ ಬಂದ ಬೆಲ್ಲದ ಭಂಡಿಗೆ ಬೆಲ್ಲದಚ್ಚು

ಹದಿನಯ್ದು ಆ ಹೊಱಗೆ ಅಚ್ಚೊನ್ದು । ಬಾಳೆಯ ಹೇಱಿಂಗಾ ಕಾಯಾಱು
ಆ ಹೊಱಗೆ ಕಾಯ್ಮೂಱು । ನೆಲ್ಲಿಯ ಕಾಯ ಹೇಱಿಂಗಾ ಕಾಯ್ಬಳ್ಳವೊಂದು ।
ಕರ್ವ್ವಿನ ಹಗರಕ್ಕೆ ಒಂದು ಕರ್ವ್ವು ಬಳಹದ ಹೇಱಿಂಗೆ ಬಳಹವೊರ್ಪ್ಪಲಂ ॥

ಗಂಧ, ಭತ್ತ, ಹತ್ತಿ, ಮೆಣಸು, ಅಜವಾನ, ಇಂಗು, ಅರಿಷಿಣ, ಅಲ್ಲ, ಅಡಕೆ, ಎಲೆ, ತೆಂಗು, ಕಬ್ಬು, ಬಾಳೆ, ನೆಲ್ಲಿಕಾಯಿ, ಅಲ್ಲ ಮೊದಲಾದವುಗಳು ದೃಢಪಡಿಸುತ್ತವೆ.[೨೭] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ_

ಮತ್ತಮೇಳುವರೆ ಹಂನೊಂದುವರೆಯ ಸಮಸ್ತ ಮುಂಮುರಿದಂಡಂ
ಮುಖ್ಯವಾಗಿ ನಾಡುಗಳು ಬಿಟ್ಟಾಯದ ಕ್ರಮಮೆಂತೆಂದೊಡೆ ।
ಸಕಳಧಾನ್ಯಮಾವುದು ಬಂದಡಂ ಹೇಱಿಂಗೊಂಮನಂ ಭಂಡಿಗೆ
ಬಳ್ಳವೆರಡು ಹಸರಕ್ಕಡಕೆ ಆಯ್ದು ಹೇಱಿಂಗೆಲೆ ನೂಱು ಹೊತ್ತಳಕ್ಕಯ್ವತ್ತು
ಹಾಡಕ್ಕೆ ಸೊಲ್ಲಗೆ ಎಣ್ಣೆ ಓಲೆಯ ಹೊಱ ಮಾಱಿತಕ್ಕೆ ಒಂದು ಕಟ್ಟೋಲೆ
ಕಿಱುಕುಳವೇನು ಮಾಱಿದಡು ಸುಟ್ಟುಗಾಯಂ ಹಿಡಿವತ್ತಿ ಕಂಬಿಗೆ
ಮಡಕೆ ಒಂದು ॥

ಧಾನ್ಯಗಳ ಪ್ರಸ್ತಾಪವಿದೆ. ಕೂಹುಂಡಿನಾಡಿನ ಕೆಲವು ಶಾನಗಳಲ್ಲಿ ದೇವಾಲಯಗಳು ಮತ್ತು ಬಸದಿಗಳಿಗೆ ತೋಟಗಳನ್ನು ದಾನ ಕೊಡಲಾಗಿರುವುದು ದಾಖಲಾಗಿದೆ. ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ_ 'ಯೆಲೆದೋಂಟ ಕುಳಿ ೨೦೦..........ಪೂದೋಟ ೧.......'ದಾನದ ವಿವರಗಳಲ್ಲಿ ತೋಟ, ಎಲೆದೋಟ ಮತ್ತು ಹೂದೋಟಗಳ ಪ್ರಸ್ತಾಪವಿದೆ.[೨೮] ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ_

ತೋಟಂ ಕಂಬ ೫೦....................................
ಶ್ರೀಮೂಲಸ್ಥಾನದ ಕಲಿದೇವಸ್ವಾಮಿಯ ಭೂಮಿ
ಕಂಬಂ ೫೫೦ ತೋಂಟ ೧........................
ಅಷ್ಟೇಶ್ವರ ಭೂಮಿ ೪೫೦ ಗೃಹಂ ಹಸ್ತ ೬ ತೋಂಟ ೧...........................

ದಾನ ಮಾಡಿದ ವಿವರಗಳಲ್ಲಿ ತೋಟದ ನಿರೂಪಣೆಯಿದೆ.[೨೯] ಇದೇ ಪಟ್ಟಣದ ಕ್ರಿ.ಶ. ೧೧೩೯ರ ಶಾಸನದಲ್ಲಿ_

ಆ ಅಗ್ರಹಾರದ ತಗ್ಗಿಯ ಮಾನ್ಯದೊಳಗೆ ರಾವಸೆಟ್ಟಿಯ ಕೆಱ
ಏರಿಯ ಕೇಶವೇಶ್ವರದೇವರ ಭೂಮಿಯಿಂ ಬಡಗಲು
ಮೊಳೆಯವಾಡದ ಬಟ್ಟೆಯಿಂ ಪಡುವಲು ಮಾನ್ಯಕ್ಕೆ ಹೋದ
ಬಟ್ಟೆಯಿಂ ಮೂಡಲು ೩೦ ಮತ್ತರು ಕೆಯ್ಯುಮಂ ಮಾನ್ಯದ
ತೋಂಟದೊಳಗೊಂದು ತೋಂಟಮುಮಂ ॥

ತೋಟವನ್ನು ದಾನ ಮಾಡಿದ ಪ್ರಸ್ತಾಪವಿದೆ. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ_

ಊರಿಂ ಪಡುವಲು ಹೂದೋಂಟದ ಕಂಬಂ ಮೂವತ್ತು ।

ಮೂವತ್ತು ಕಂಬದಳತೆಯ ಹೂದೋಟವನ್ನು ದಾನ ಮಾಡಿದ ಉಲ್ಲೇಖವಿದೆ.[೩೦] ಬೆಳವಡಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ_ ತೆಂಕಲು ಬಸದಿಯ ತೋಟದ 'ನಾನಲಂ........... ಭೂದಾನದ ಮೇರೆಗಳನ್ನು ಸೂಚಿಸುವ ವಿವರಗಳಲ್ಲಿ ತೋಟದ ಪ್ರಸ್ತಾಪವಿದೆ.[೩೧]

ಉಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ–

ಕಲುಹಳ್ಳದಿಂ ಪಡುವಲು ಮಾನ್ಯದೊಳಗೆ ಗಾವುಂಡರ
ಬಸದಿಯ ಗರ್ದ್ದೆ..........ಊರಿಂ ಪಡುವಲುಮೂಲಿ.......
ಪಡುವಲುಂ ತೆಂಕಲುಂ ಮಾರ್ಗ್ಗದಸೀಮೆಯಿಂ ಕೊಟ್ಟ
ತೋಂಟ ೧...............

ತೋಟ, ಗದ್ದೆಯನ್ನು ದಾನ ಮಾಡಿದ ಉಲ್ಲೇಖವಿದೆ.[೨] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಕಣ್ಣಗಾವೆಯಾಲೂರಿಂ ನೈಋತ್ಯದಲ್ಲಿ ಎಳೆಯದೋಂಟಂ
ಹಾರುವಗೋಲ ಮತ್ತರೊಂದು ಕಮ್ಮವೆಳ್ನೂಱಱವತ್ತೆಂಟು
ತೆಂಕಣಿಂ ಬಂದ ಮುಗುಳಿಯ ಹಳ್ಳವದರ್ಕ್ಕೆ ತೆಂಕಣ
ಹೆಳೆಪಡುವಳಾ ಹಳ್ಳಂ ಬಡಗಲುರುಂಬಾವಿಯ ತೋಂಟಂ।
ಮೂಡಲ್ ಮೂಲಸ್ಥಾನದೇವರ ತೋಂಟಂ। ಆಗ್ನೇಯ
ಕೋಣೊಳೂರ ನಡುವಣ ದೇವಾಲಯದ ತೋಂಟಂ।
ಆ ಎಲ್ಲ ತೋಂಟದಿಂ ತೆಂಕಲಾ ಹಳ್ಳದಿಂ ಮೂಡಲ್
ಹೂದೋಂಟಂ ಕಮ್ಮಂ ನಾಲ್ನೂಱು॥

ಹಳ್ಳ, ಬಾವಿ, ಹೂದೋಟಗಳ ಪ್ರಸ್ತಾಪವಿದೆ. ಈ ಎಲ್ಲ ತೋಟಗಳು ಕೂಹುಂಡಿನಾಡು ನಿಸರ್ಗ ಸಂಪತ್ತಿನ ಜೊತೆಗೆ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುವ ಪ್ರದೇಶವಾಗಿರುವುದು ಸ್ಪಷ್ಟವಾಗುತ್ತದ ಈ ಬೆಳೆಗಳಲ್ಲಿ ಭತ್ತ, ಬಾಳೆ ಆಹಾರ ಬೆಳೆಗಳಾದರೆ, ಕಬ್ಬು ಎಲೆ, ಅಡಿಕೆ, ಅಲ್ಲ, ಅರಿಷಿನ, ಮೆಣಸು ಮೊದಲಾದವುಗಳು ವಾಣಿಜ್ಯ ಬೆಳೆಗಳಾಗಿವೆ. ಕೂಹುಂಡಿನಾಡಿನ ರೈತರು ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆದು ನಾಡಿನ ಜನತೆಯ ಆಹಾರ ಮತ್ತು ಜೀವನಾವಶ್ಯಕ ವಸ್ತುಗಳ ಸಮಸ್ಯೆಯನ್ನು ನೀಗಿಸುವಲ್ಲಿ ಯಶಸ್ವಿಯಾಗಿದ್ದರು.

೬.೬. ಭೂ ಒಡೆತನ

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಭೂಮಿ ರಾಜ್ಯಾದಾಯದ ಪ್ರಮುಖ ಸಾಧನವಾಗಿತ್ತು. ಕೂಹುಂಡಿನಾಡಿನ ಪ್ರದೇಶದಲ್ಲಿ ಭೂ ಒಡೆತನವು ವ್ಯಕ್ತಿಗತವಾಗಿರುವುದು ಇಲ್ಲಿಯ ಶಾಸನಗಳಿಂದ ಮನದಟ್ಟಾಗುತ್ತದೆ. ಈ ಪ್ರದೇಶದಲ್ಲಿ ಆಳ್ವಿಕೆ ಕೈಗೊಂಡಿದ್ದ ಆಳರಸರು, ಮಹಾಮಂಡಳೇಶ್ವರರು ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಮತ್ತು ಸಮಕಾಲೀನ ವ್ಯಾಪಾರಿಗಳು (ಸೆಟ್ಟಿಗಳು), ಪ್ರಜೆಗಳು ಭೂಮಿಯ ಒಡೆಯರಾಗಿದ್ದರು. ಭೂಮಿಯನ್ನು ದೇವಾಲಯಗಳು ಮತ್ತು ಬಸದಿಗಳಿಗೆ ದಾನ ಕೊಡಬೇಕಾದಲ್ಲಿ ಹಕ್ಕುಪತ್ರದ ರೂಪದಲ್ಲಿ ದಾನ ಶಾಸನಗಳನ್ನು (ದಾನ ಪತ್ರಗಳು) ತಾಮ್ರಪಟದಲ್ಲಿ ಅಥವಾ ಕಲ್ಲಿನ ಮೇಲೆ ಬರೆಸುತ್ತಿದ್ದರು. ಬೆನಿವಾಡದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠದ ಶಾಸನದಲ್ಲಿ–

ಎಂಟುಹಿಟ್ಟು ಸಾವಿಕವಾಗುದರ ಬಸದಿಯ ಜೀರ್ಣ್ನೋರ್ಧಾರಕ್ಕಂ
ಮುನಿಜನಾಹಾರಕ್ಕಂ ಸರ್ವ್ವಬಾಧಾಪರಿಹಾರವಾಗಿ ಬಿಟ್ಟ ಭೂಮಿ
ಕಮ್ಮ ೩೦ ಗಮುಡ ಹೆಮಸತರದಿಂ ಪ್ರತಿಪಾಳಿಸುವರು॥

ಮೂವತ್ತು ಕಮ್ಮ ಭೂಮಿಯನ್ನು ಬಸದಿಯ ಜೀರ್ಣೋದ್ಧಾರಕ್ಕೆ ಮತ್ತು ಮುನಿಗಳ ಆಹಾರಕ್ಕೆ ದಾನ ಮಾಡಿದ ಪ್ರಸ್ತಾಪವಿದೆ.[೩೩] ಭೂಮಿಯನ್ನು ಬಸದಿಗೆ ಸಂಬಂಧಿಸಿದ ಸ್ಥಾನಾಚಾರ್ಯರು ಒಕ್ಕಲುತನ ಮಾಡಿಸಿ, ಅದರಿಂದ ಬಂದ ಪೈರನ್ನು ಮತ್ತು ಲಾಭವನ್ನು ಬಳಸಿಕೊಂಡು ಬಸದಿಗಳಲ್ಲಿ ಜರುಗುವ ಪೂಜೆ–ಪುನಸ್ಕಾರ, ಬಸದಿಯ ಜೀರ್ಣೋದ್ಧಾರ ಮತ್ತು ಮುನಿಗಳ ಆಹಾರಕ್ಕಾಗಿ ಉಪಯೋಗಿಸುತ್ತಿದ್ದರು.

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ–

> ನಾಗರಸರು ಕೊಟ್ಟ ಸಾಸನ ನಾಲ್ಕುಂ ಪಟ್ಟಣಂಗಳು ನೂಲೆನಾಡೊಳಗೆ
> ಸಂತೆಗಳ ಅಯದಾಯ ಇಪಂತು ಕೋಣನ ಮೆಯಿದೆಱೆ ಸುಂಕ
> ಹದಿನೆಂಟ್ಟು ಸಮೆಯವು ....

ಕೋಣಗಳನ್ನು ಮೇಯಿಸುವ ಮಡ್ಡಿಯ ಉಲ್ಲೇಖವಿದೆ.[೩೪] ಈ ಮಡ್ಡಿಯಿಂದ ಬರುವ ಆದಾಯವನ್ನು ನಾಗರಸನು ದಾನ ಕೊಟ್ಟಿದ್ದಾನೆ. ಈ ಭೂಮಿಯ ಒಡೆತನವನ್ನು ನಾಗರಸನು ಹೊಂದಿದ್ದನೆಂಬುದು ಮನದಟ್ಟಾಗುತ್ತದೆ. ಇದರಿಂದ ಅಂದು ಭೂಮಿಯು ಆಳರಸರಾದಿ ಗ್ರಾಮದ ಒಡೆಯರ ಸ್ವಾಧೀನದಲ್ಲಿದ್ದಿತ್ತೆಂಬುದು ಸ್ಪಷ್ಟವಾಗುತ್ತದೆ. ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಸವದತ್ತಿಯ ರಟ್ಟ ಮನೆತನದ ಕಾರ್ತವೀರ್ಯನು ಲಕ್ಷ್ಮೀನರಸಿಂಹ ದೇವಾಲಯದ ಉತ್ಸವಕ್ಕೆ ಭೂದಾನ ಮಾಡಿದ ಉಲ್ಲೇಖವಿದೆ.[೩೫] ಹೀಗೆ ಕೂಹುಂಡಿನಾಡಿನಲ್ಲಿ ಆಳರಸರಾದಿ ಅಧಿಕಾರಿಗಳು ಮತ್ತು ಸಮಕಾಲೀನ ಪ್ರಜೆಗಳು ದೇವಾಲಯಗಳು ಮತ್ತು ಬಸದಿಗಳಿಗೆ ಭೂದಾನ ಮಾಡಿರುವುದು ಅನೇಕ ಶಾಸನಗಳಲ್ಲಿ ದಾಖಲಾಗಿದೆ.

೬.೭. ಪಶುಪಾಲನೆ

ಕೂಹುಂಡಿನಾಡಿನ ಪ್ರದೇಶದಲ್ಲಿ ರೈತರು ವ್ಯವಸಾಯ, ಸಾರಿಗೆ, ಹೈನುಗಾರಿಕೆ, ಮಾಂಸಾಹಾರ ಮೊದಲಾದ ಚಟುವಟಿಕೆಗಳಿಗಾಗಿ ವಿವಿಧ ಪ್ರಾಣಿಗಳನ್ನು ಸಾಕುತ್ತಿದ್ದರು. ಇವುಗಳಲ್ಲಿ ಗೋವು (ಆಕಳು) ವಿಶೇಷ ಸಂಪತ್ತು ಎಂದು ಪರಿಗಣಿತವಾಗಿತ್ತು. ಈ ನಾಡಿನ ಬಹುತೇಕ ಶಾಸನಗಳ ಫಲಶ್ರುತಿಗಳಿಂದ ಅಂದು ಗೋವುಗಳಿದ್ದ ಪ್ರಾಮುಖ್ಯತೆ ಸ್ಪಷ್ಟವಾಗುತ್ತದೆ. ಹಾಗೆಯೇ ಇಲ್ಲಿರುವ ತುರುಗೋಳ್ ವೀರಗಲ್ಲುಗಳೂ ಗೋವುಗಳ ಧಾರ್ಮಿಕ, ಆರ್ಥಿಕ, ಸಾಮಾಜಿಕ ಪ್ರಾಮುಖ್ಯತೆಯನ್ನು ದೃಢಪಡಿಸುತ್ತವೆ. ಹೈನುಗಾರಿಕೆಯು ಇಲ್ಲಿಯ ಜನಸಾಮಾನ್ಯರ ಉಪಕಸುಬಾಗಿತ್ತು. ಎತ್ತು, ಕೋಣ, ಕುದುರೆ, ಕತ್ತೆಗಳು ಒಕ್ಕಲುತನ ಹಾಗೂ ಸಾರಿಗೆಗೆ ಸಹಾಯಕವಾಗಿದ್ದವು. ಆಡು, ಕುರಿ, ಆಕಳು, ಎಮ್ಮೆಗಳನ್ನು ಹೈನುಗಾರಿಕೆಗಾಗಿ ಸಾಕುತ್ತಿದ್ದರು. ಇವುಗಳಿಂದ ದೊರೆಯುವ ಹಾಲು, ಮೊಸರು, ಬೆಣ್ಣೆ, ತುಪ್ಪ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗಿದ್ದವು.

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಬಡಗಣಿಂ ಬಂದ ಕುದುರೆಗೆ ನೆಲಮೆಟ್ಟು ಹಾಗವೊಂದು ।
> ತೆಂಕಲ ನಡೆವವರ್ಕ್ಕೆ ಸುಂಕ ಹಾಗವೊಂದು ಮಲೆಯಾಳರ
> ಕುದುರೆಗೆ ಹಾಗವೊಂದು । ಅಱುವತ್ತ್ಯದೆತ್ತು ಕೋಣಂಗಳೊಳೇನಂ
> ಪೇಱಿದೊಡಂ ಸರ್ವ್ವಬಾಧಾಪರಿಹಾರಂ ।

ಒಕ್ಕಲುತನಕ್ಕೆ ಸಹಾಯಕವಾದ ಎತ್ತು ಮತ್ತು ಸಾರಿಗೆಗೆ ಸಹಾಯಕವಾದ ಕುದುರೆ, ಕೋಣಗಳ ನಿರೂಪಣೆಗಳಿವೆ.[೩೬] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಬೆಳಗಲೆ ಮುಖ್ಯವಾಗಿ ನಾಲ್ಕು ಪಟ್ಟಣದ ಸೆಟ್ಟಿಯರುಂ
> ಮಹಾನಾಡಾಗಿ ನೆರೆದಿರ್ದ್ದಲ್ಲಿ ಆ ಶಾಸ್ತಿನಾಥದೇವರ
> ನಿತ್ಯಾಭಿಷೇಕಕ್ಕಮಷ್ಟವಿಧಾರ್ಚ್ಚನೆಗಂ ಸರ್ಬ್ಬಾಬಾಧಾಪರಿಹಾರವಾಗಿ
> ಬಿಟ್ಟ ಎತ್ತುಕತ್ತೆಕೋಣಂ ಮೊದಲಾವಱುವತ್ತು ೬೦ ॥

ಎತ್ತು, ಕೋಣ, ಕತ್ತೆಯ ಪ್ರಸ್ತಾಪಗಳಿವೆ.[೩೭] ಕೆಲವು ಶಾಸನಗಳಲ್ಲಿರುವ 'ಕತ್ತೆಯ ಹೇರಿಂಗೆ' ಎಂಬ ಉಲ್ಲೇಖವು ವ್ಯಾಪಾರಿಗಳು ತಮ್ಮ ಸರಕು–ಸಾಮಗ್ರಿಗಳನ್ನು ಸಾಗಿಸಲು ಕತ್ತೆಗಳನ್ನು ಉಪಯೋಗಿಸುತ್ತಿದ್ದರೆಂಬುದನ್ನು ಸೂಚಿಸುತ್ತದೆ. ಆಡು, ಕುರಿ, ಆಕಳು, ಎಮ್ಮೆಗಳ ಉಲ್ಲೇಖಗಳು ಯಾವುದೇ ಶಾಸನಗಳಲ್ಲಿ ಗೋಚರಿಸುವುದಿಲ್ಲ. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

> ಎಕ್ಕಸಂಬುಗೆಯ ತಳಸಮಸ್ತಮುಮಿರ್ದ್ದು ಶ್ರೀಮನ್ಮಹಾಪ್ರಧಾನಂ
> ಪಡವಳ ಕಾಳಿಯಣ್ಣಂ ಮಾಡಿಸಿದ ಬಸದಿಯ ಶ್ರೀನೇಮಿನಾಥಸ್ವಾಮಿಗಳ
> ಕ್ಷಿರವಿಧಾರ್ಚ್ಚನೆಗಂ ನಂದಾದೀವಿಗೆಗಂ ನಡವಂತಾಗಿ ಒಂದು ಗಾಣ
> ದೊಕ್ಕಲುದೆರೆ ಬೆಣ್ಣೆ ಬೀರವಣಮುಂ । ಕೋಣನ ಹೇರಿಂಗಿಂಮನ ।
> ಎತ್ತಿನ ಹೇರಿಂಗೊಂಮನ । ಕತ್ತೆಯ ಹೇರಿಂಗರವನ ಧಾನ್ಯಮುಮಂ ।
> ಹೊಂಗಯದತಕೆ ಹೇರಿಂಗಯಿವತ್ತೆತಿ ತಂದು ಮಾರುವಹಾಡಕ್ಕರವನೆ
> ಣ್ಣೆಯುಮಂ ಕೊಟ್ಟು...

ಬೆಣ್ಣೆ, ಎತ್ತು, ಕತ್ತೆಯ ಪ್ರಸ್ತಾಪಗಳಿವೆ.[೩೮] ಕೂಹುಂಡಿನಾಡಿನಲ್ಲಿ ಎತ್ತು, ಕೋಣಗಳು ಇದ್ದುವೆಂದರೆ, ಎಮ್ಮೆ ಮುತ್ತು ಆಕಳುಗಳೂ ಇದ್ದಿರಲೇಬೇಕು. ಇಲ್ಲಿಯ ರೈತರು ಕೃಷಿಯ ಜೊತೆಗೆ ಉಪಕಸುಬಾಗಿ ಹೈನುಗಾರಿಕೆಯನ್ನು ಮಾಡುತ್ತಿದ್ದರು.

೬.೮. ಕೈಗಾರಿಕೆಗಳು

ಕೂಹುಂಡಿನಾಡಿನ ಪ್ರದೇಶದ ಅರ್ಥಿಕ ಅಭಿವೃದ್ಧಿಯಲ್ಲಿ ಭೂಮಿಯಷ್ಟು ಪ್ರಾಧಾನ್ಯತೆಯನ್ನು ಕೈಗಾರಿಕೆಗಳೂ ಹೊಂದಿದ್ದವು. ವ್ಯವಸಾಯ ಮತ್ತು ಭೂ ಮೂಲದ ಸಂಪನ್ಮೂಲಗಳು ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳಾದುದರಿಂದ ಇವೆರಡೂ ಒಂದನ್ನುಳಿದು ಇನ್ನೊಂದಿಲ್ಲ. ಇಂದಿನ ಕೈಗಾರಿಕೆಗಳಷ್ಟು ಅಂದಿನ ಕೈಗಾರಿಕೆಗಳು ಬೆಳೆದಿರಲಿಲ್ಲ. ಈ ನಾಡಿನಲ್ಲಿ ಕೃಷಿ ಆಧಾರಿತ ಗುಡಿ ಕೈಗಾರಿಕೆಗಳು ಮತ್ತು ಬೃಹತ್ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿವೆ.

೬.೮.೧. ಬೆಲ್ಲ ಮತ್ತು ಸಕ್ಕರೆ ಕೈಗಾರಿಕೆಗಳು

ಕೂಹುಂಡಿನಾಡಿನಲ್ಲಿ ದಿನನಿತ್ಯದ ಆಹಾರ ಪಾನೀಯಗಳಲ್ಲಿ ಬೆಲ್ಲ ಮತ್ತು ಸಕ್ಕರೆಯನ್ನು ಬಳಸುತ್ತಿದ್ದರು. ಇವುಗಳ ಉತ್ಪಾದನೆಗೆ ಕಬ್ಬಿನ ಬೆಳೆಯನ್ನು ಬೆಳೆಯಲಾಗುತ್ತಿತ್ತು. ಕೆಲವು ಶಾಸನಗಳಲ್ಲಿ ಕಬ್ಬಿನ ಬೆಳೆಯ ಉಲ್ಲೇಖಗಳಿವೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಶಾಂತಿನಾಥ ದೇವರಿಗೆ ಕೊಡಲಾದ ದಾನದ ವಿವರಗಳನ್ನು ಸೂಚಿಸುವಾಗ–

ಹೊಱಗಣಿಂ ಬಂದ ಬೆಲ್ಲದ ಭಂಡಿಗೆ ಬೆಲ್ಲದಚ್ಚು

ಹದಿನಯ್ದು ಆ ಹೊಱಗೆ ಅಚ್ಚೊನ್ದು ।

ಎಂದು ಹೇಳಲಾಗಿದೆ.[೩೯] ಇದರಿಂದ ಈ ನಾಡಿನಲ್ಲಿ ಕಬ್ಬಿನ ಬೆಳೆಯನ್ನು ಬೆಳೆದು ಅದರಿಂದ ಬೆಲ್ಲವನ್ನು ತಯಾರಿಸಲಾಗುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ. ಈ ಬೆಲ್ಲವನ್ನು ತಯಾರಿಸಲು ಗಾಣದ ಮನೆಗಳನ್ನು (ಆಲೆಮನೆಗಳು) ನಿರ್ಮಿಸಿಕೊಂಡಿರುವಂತೆ ತೋರುತ್ತದೆ.

೬.೮.೨. ಎಣ್ಣೆ ಕೈಗಾರಿಕೆಗಳು

ಕೂಹುಂಡಿನಾಡಿನಲ್ಲಿ ದಿನನಿತ್ಯದ ಬದುಕಿಗೆ, ದೇವಾಲಯಗಳು ಮತ್ತು ಬಸದಿಗಳಲ್ಲಿ ನಂದಾದೀಪಕ್ಕಾಗಿ ಅಗತ್ಯವಾದ 'ಗಾಣದೆಣ್ಣೆ' ಉತ್ಪಾದನೆಯನ್ನು ಮಾಡಲಾಗುತ್ತಿತ್ತು. ಕುಸುಬಿ, ಎಳ್ಳು, ಶೇಂಗಾ, ಸಾಸಿವೆ ಮೊದಲಾದ ಧಾನ್ಯಗಳಿಂದ ಎಣ್ಣೆ ತೆಗೆಯುವ ವೃತ್ತಿಯವರನ್ನು ಶಾಸನಗಳಲ್ಲಿ 'ತೆಲ್ಲಿಗರು', 'ಗಾಣಿಗರು' ಎಂದು ಕರೆಯಲಾಗಿದೆ. ಇವರು ತಮ್ಮದೇ ಆದ ಸ್ವತಂತ್ರ ಸಂಘಗಳನ್ನು ಕಟ್ಟಿಕೊಂಡು ಪ್ರಭಾವಶಾಲಿಗಳಾಗಿದ್ದರು. ಈ ಎಣ್ಣೆ ಉತ್ಪಾದನೆ ಮತ್ತು ಮಾರಾಟಗಳೆರಡೂ ತೆಲ್ಲಿಗರ ಪ್ರಭುತ್ವದಲ್ಲಿದ್ದವು. ಇವರು ಎತ್ತುಗಾಣ ಮತ್ತು ಕೈಗಾಣ ಎಂಬೆರಡು ಪ್ರಕಾರದ ಗಾಣಗಳಿಂದ ಎಣ್ಣೆಯನ್ನು ತೆಗೆಯುತ್ತಿದ್ದರು. ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ತೆಲ್ಲಿಗರು ಮಾನ್ಯಸಾನ್ಯವೆನ್ನದೆ ದೇವರ ಸಂಜೆಸೊಡರಿಂಗಂ

ಧೂಪಾರಿತೆಗಂ ಗಾಣಕ್ಕೆ ಸೊಲ್ಲಗೆ ಹೊಱಗಣಿಂ ಬನ್ದ

ಎಣ್ಣೆಯ ಕೊಡಕ್ಕೆ ಸೊಲ್ಲಗೆ ಯಿನ್ತಿವಂ ಬಿಟ್ಟರು ಗಾಣ.......

ಗೊಂಕಿದೇವರಸನು ತೇರದಾಳದಲ್ಲಿ ಮಾಡಿಸಿದ ಗೊಂಕಜಿನಾಲಯದ ನೇಮಿನಾಥದೇವರ ಮುಂದೆ ಸಂಜೆಯ ಸಮಯದಲ್ಲಿ ಕೈಗೊಳ್ಳುವ ದೂಪಾರತಿಗೆ ತೆಲ್ಲಿಗರು ಎಣ್ಣೆಯನ್ನು ದಾನ ಮಾಡಿದ ಪ್ರಸ್ತಾಪವಿದೆ.[೪೦] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ– 'ತೇಲಿಗರುಂ'। ....ತೇಲಿಗರ ನಿರೂಪಣೆಯಿದೆ.[೪೧] ಬೆಳಗಾವಿಯ ಕ್ರಿ.ಶ. ೧೨೦೪ರ ಇನ್ನೊಂದು ಶಾಸನದಲ್ಲಿ 'ಗಾಣಕ್ಕೆ ನಿತ್ಯದ್ವೆಣ್ಣೆಯದ್ದು' ಎಂಬ ಉಲ್ಲೇಖವಿದೆ.[೪೨] ಈ ಶಾಸನದಲ್ಲಿ ಗಾಣಿಗರನ್ನು 'ತೇಲಿಗರು' ಎಂದು ಕರೆಯಲಾಗಿದೆ. ಈ ಎಲ್ಲ ಉಲ್ಲೇಖಗಳು ಕೂಹುಂಡಿನಾಡಿನ ಪ್ರದೇಶದಲ್ಲಿ ಎಣ್ಣೆಯನ್ನು ತಯಾರಿಸುವ ಗಾಣದೆಣ್ಣೆಯ ಗೃಹ ಕೈಗಾರಿಕೆಗಳ ಅಸ್ತಿತ್ವವನ್ನು ಸೂಚಿಸುತ್ತವೆ.

೬.೮.೩. ಬಟ್ಟೆ ಕೈಗಾರಿಕೆಗಳು

ಕೂಹುಂಡಿನಾಡಿನ ಪ್ರದೇಶದಲ್ಲಿದ್ದ ಹಲವು ಕೈಗಾರಿಕೆಗಳಲ್ಲಿ ಬಟ್ಟೆ ಕೈಗಾರಿಕೆಯೂ ಒಂದಾಗಿದೆ. ಇದು ಜನರ ಅವಶ್ಯಕತೆಗಳನ್ನು ಪೂರೈಸುವ ಉದ್ಯಮವಾಗಿತ್ತು. ಈ ಉದ್ಯಮವನ್ನು ನಡೆಸುವವರನ್ನು ಶಾಸನಗಳು 'ಲಾಳದವರು' ಎಂದು ಹೆಸರಿಸಿವೆ. 'ಲಾಳ' ಎಂದರೆ ಬಟ್ಟೆ ನೇಯುವ 'ಲಾಳ' ಅಥವಾ 'ಲಾಟ' ಎಂದರ್ಥ. ಲಾಳದವರೆಂದರೆ 'ಸೀರೆ' ನೇಯುವವರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–ದಿಂಕಸಾಲಿಗರುಮಿನ್ತಿವರೆಲ್ಲಂ ನೆರೆದಾ ಶಾಂತಿನಾಥದೇವರ ಬಸದಿಗೆ ಬಿಟ್ಟಾಯವೆಂತೆಂದೊಡೆ............. ಎಂಬ ಪ್ರಸ್ತಾಪವಿದೆ.[೪೩] ಸೀರೆಗಳನ್ನು ನೇಯುವವರನ್ನು 'ದಿಂಕಸಾಲಿಗರು'

ಎಂದು ಕರೆಯಲಾಗುತ್ತಿತ್ತು. 'ದಿಂಕ' ಎಂಬ ಪದವು ನೇಕಾರರ ಮತ್ತೊಂದು ಪ್ರಕಾರವನ್ನು ಸೂಚಿಸುತ್ತದೆ. ಆದರೆ ಇದರ ಅರ್ಥ ಸ್ಪಷ್ಟವಾಗುವುದಿಲ್ಲ. ಇಂದಿಗೂ ಬೆಳಗಾವಿ ಸಮೀಪದ ವಡಗಾವಿ ಗ್ರಾಮವು ಸೀರೆ ನೇಯುವುದಕ್ಕೆ ಪ್ರಸಿದ್ಧವಾಗಿದೆ. ಇದರಿಂದ ಕೂಹುಂಡಿನಾಡಿನಲ್ಲಿ ಬಟ್ಟೆ ತಯಾರಿಕೆಯ ಗೃಹ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದ ವಿಚಾರ ಸ್ಪಷ್ಟವಾಗುತ್ತದೆ.

೬.೮.೪. ಆಭರಣಗಳ ಕೈಗಾರಿಕೆಗಳು

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಆಳರಸರಾದಿ ಅಧಿಕಾರಿಗಳು ಮತ್ತು ಜನಸಾಮಾನ್ಯರ ಪ್ರಮುಖ ಬೇಡಿಕೆಯಾಗಿದ್ದ ಬಂಗಾರ, ಬೆಳ್ಳಿ ಮತ್ತು ಇತರ ಧಾತುಗಳ ಆಭರಣಗಳನ್ನು ತಯಾರಿಸಲಾಗುತ್ತಿತ್ತು ಆಭರಣ ತಯಾರಕರು (ಅಕ್ಕಸಾಲಿಗರು) ಕೂಹುಂಡಿನಾಡಿನ ಪ್ರದೇಶದಲ್ಲಿದ್ದರೆಂಬುದಕ್ಕೆ ಇಲ್ಲಿಯ ಶಾಸನಗಳಲ್ಲಿ ನಿದರ್ಶನಗಳಿವೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_ಮತ್ತಮಾ ವೇಣುಗ್ರಾಮದ ಸ್ಥಳದ ಚಿನ್ನಗೆಯಿಕದವರುಂ.........ಚಿನ್ನದ ವ್ಯಾಪಾರಿಗಳನ್ನು ಚಿನ್ನಗೆಯಿಕದವರು ಎಂದು ಕರೆಯಲಾಗಿದೆ.[೪] ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ_ಅಕ್ಕಸಾಲೆಗೆ ಕಂಬ ೪೫೦ ಗೃಹಂ ಹಸ್ತ ೬ ‖ .... ಎಂಬ ಪ್ರಸ್ತಾಪವಿದೆ. ಇದರಿಂದ ಕೂಹುಂಡಿನಾಡಿನ ಪ್ರದೇಶದಲ್ಲಿ ಚಿನ್ನದ ವ್ಯಾಪಾರ ನಡೆಯುತ್ತಿತ್ತೆಂಬುದು ಮನದಟ್ಟಾಗುತ್ತದೆ. ಇಲ್ಲಿ ಚಿನ್ನದ ವ್ಯಾಪಾರ ನಡೆಯುತ್ತಿದ್ದರೆ ಆಭರಣಗಳನ್ನು ತಯಾರಿಸುವ ಪತ್ತಾರರು ಇರಲೇಬೇಕು. ವಿವಿಧ ಬಗೆಯ ಆಭರಣಗಳ ತಯಾರಿಕೆಯ ಕೈಗಾರಿಕೆಗಳಿಂದ ಚಿನ್ನವನ್ನೊಳಗೊಂಡಂತೆ ಇನ್ನಿತರ ಧಾತುಗಳಿಂದ ಆಭರಣಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿತ್ತು. ಬೆಳಗಾವಿಯ ಶಹಾಪುರದಲ್ಲಿ ಈಗಲೂ ಚಿನ್ನದ ವ್ಯಾಪಾರಿಗಳ ಒಂದು ದೊಡ್ಡ ಮಳಿಗೆಯೇ ಇರುವುದು.

೬.೮.೫. ಮರಗೆಲಸದ ಕೈಗಾರಿಕೆಗಳು

ಕೂಹುಂಡಿನಾಡಿನ ಕೆಲವು ಶಾಸನಗಳಲ್ಲಿ ಕೃಷಿ ಕಾರ್ಯ, ಮನೆ ನಿರ್ಮಾಣ ಮತ್ತು ಇನ್ನಿತರ ಕೆಲಸಗಳಿಗೆ ಬೇಕಾದ ಮರದ ಸಾಮಗ್ರಿಗಳನ್ನು ತಯಾರಿಸುವ ವೃತ್ತಿಯವರನ್ನು 'ಬಡಿಗರು' ಎಂದು ಕರೆಯಲಾಗಿದೆ. ಇಂಥ ಅನೇಕ ಬಡಿಗರು ಕೂಹುಂಡಿನಾಡಿನಲ್ಲಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_

> ಮತ್ತಮಾ ಶಾನ್ತಿನಾಥದೇವರ ಬಸದಿಗೆ ಶ್ರೀಕಾರ್ತ್ತವೀರ್ಯ್ಯದೇವಂ
> ಕೊಟ್ಟ ಅಂಗಡಿ ಬಡಗಗೇರಿಯ ಬಡಗಣ ಹರಿಯ ಪಡುವಣ
> ಕಡೆಯೊಳ್ ರಾಜವೀಥಿಯಿಂ ಮೂಡಲ ನಾಲ್ಕು ‖

ಎಂಬ ಪ್ರಸ್ತಾಪವಿದೆ.[೪೫] ಈ ಬಡಿಗರು ತಾವು ತಯಾರಿಸಿದ ಮರದ ವಸ್ತುಗಳನ್ನು ಮಾರಾಟ ಮಾಡಿದ ಉತ್ಪಾದನೆಯ ಹಣದಲ್ಲಿ ಬೆಳಗಾವಿಯ ಶಾಂತಿನಾಥ ಬಸದಿಗೆ ದಾನ ಮಾಡಿದ್ದಾರೆ.

೬.೮.೬. ಸುಣ್ಣದ ಕೈಗಾರಿಕೆಗಳು

ಕೂಹುಂಡಿನಾಡಿನಲ್ಲಿ ಸುಣ್ಣವು ಅತ್ಯವಶ್ಯಕವಾಗಿದ್ದ ವಸ್ತುವಾಗಿತ್ತು. ಮನೆಗಳಿಗೆ ಬಣ್ಣ ಬಳಿಯಲು, ಬೆಲ್ಲ ತಯಾರಿಸಲು ಮೊದಲಾದವುಗಳಿಗೆ ಬೇಕಾದ ಸುಣ್ಣವನ್ನು ತಯಾರಿಸಲು ಸುಣ್ಣದ ಕೈಗಾರಿಕೆಗಳಿದ್ದವು.

ಇವು ಜನರ ಅವಶ್ಯಕತೆಯನ್ನು ಪೂರೈಸುವ ಕೈಗಾರಿಕೆಗಳಾಗಿದ್ದವು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ– 'ಮೂಡ ಮೊಗದೆ ಬಡಗಣ ದಿಕ್ಕಿನೊಳ್ ಸುಣ್ಣದ ಕೋಡಿಯ ಮೇಗಣೊಟ್ಟುಗಲ್ಲಲ್ಲಿಂ........' ಶಾಂತಿನಾಥ ದೇವರಿಗೆ ಕೊಡಮಾಡಿದ ಭೂದಾನದ ಮೇರೆಗಳನ್ನು ಗುರುತಿಸುವ ಸಂದರ್ಭದಲ್ಲಿ ಸುಣ್ಣದ ಕೋಡಿಯನ್ನು ಸೂಚಿಸಲಾಗಿದೆ.[೪೬] ಇದರಿಂದ ಕೂಹುಂಡಿನಾಡಿನ ಪ್ರದೇಶದಲ್ಲಿ ಸುಣ್ಣವನ್ನು ತಯಾರಿಸುವ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವೆಂಬುದು ಸ್ಪಷ್ಟವಾಗುತ್ತದೆ.

೬.೮.೭. ಕುಂಬಾರಿಕೆ

ಕೂಹುಂಡಿನಾಡಿನ ಸಮಾಜದಲ್ಲಿ ಮನೆಗಳಲ್ಲಿ ಆಹಾರ ತಯಾರಿಸಲು, ತಯಾರಿಸಿದ ಆಹಾರವನ್ನಿಡಲು ಮತ್ತು ಮತ್ತಿತರ ಉಪಯೋಗಕ್ಕಾಗಿ ಮಣ್ಣಿನ ಪಾತ್ರೆಗಳನ್ನು ತಯಾರಿಸುವ ಕುಂಬಾರ ವರ್ಗದವರಿದ್ದರು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–...ಹಿಡಿವತ್ತಿ ಕಂಬಿಗೆ ಮಡಕೆ ಒಂದು ॥ ಶಾಂತಿನಾಥ ದೇವರ ನಿತ್ಯಾಭಿಷೇಕಕ್ಕೆ ಕೊಡಲಾದ ವಿವಿಧ ದಾನಗಳನ್ನು ಸೂಚಿಸಿರುವ ವಿವರಗಳಲ್ಲಿ ಮಡಕೆಯ ಪ್ರಸ್ತಾಪವಿದೆ.[೪೭] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ಕುಂಭಾಱರು ದೇವರ ಅಷ್ಟವಿಧಾರ್ಚ್ಚನೆ ಆಹಾರದಾನ
ನಡವನ್ತಾಗಿ ದಾನಶಾಲೆಗೆ ಆವಗೆ ಗಲನ ಬಿಟ್ಟರು......

ಕುಂಬಾರರು ದೇವರ ಅಷ್ಟವಿಧಾರ್ಚನೆ ಮತ್ತು ಆಹಾರದಾನ ನಿರಂತರವಾಗಿ ಮುಂದುವರೆಯಲು ದಾನಶಾಲೆಗೆ ಅವಗೆ ಗಲನ ದಾನ ಮಾಡಿದ ನಿರೂಪಣೆಯಿದೆ.[೪೮] ಹೀಗೆ ಕೂಹುಂಡಿನಾಡಿನ ಪ್ರದೇಶದಲ್ಲಿ ಜನಸಾಮಾನ್ಯರ ಜೀವನಕ್ಕೆ ಮುಖ್ಯವಾದ ಪಾತ್ರೆಗಳನ್ನು ತಯಾರಿಸುವ ಗೃಹ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವೆಂಬುದು ಸ್ಪಷ್ಟವಾಗುತ್ತದೆ.

೬.೯. ವರ್ತಕರು ಮತ್ತು ವರ್ತಕ ಸಂಘಗಳು

ವರ್ತಕರು ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡಿದ್ದರು. ಇವರನ್ನು ಕೇವಲ ವ್ಯಾಪಾರ ವೃತ್ತಿಯನ್ನು ಮಾಡುವ 'ವಿನಿಮಯ ವರ್ತಕರು' (ಸೆಟ್ಟಿ–ಬಣಂಜಿಗರು, ಸೆಟ್ಟಿಗುತ್ತರು, ನಖರರು, ಮುಮ್ಮರಿದಂಡರು, ವಡ್ಡವ್ಯವಹಾರಿಗಳು, ಗವರೆಯರು, ಗಾತ್ರಿಗರು, ಸೆಟ್ಟಿಕಾರರು, ಕಲರು, ಎಳಮೆಯರು, ಸಾಲಿಕೆಬಲ್ಲಾಳರು, ಹೊರಗಿನವರು ಇತ್ಯಾದಿ) ಮತ್ತು ಗೃಹ ಕೈಗಾರಿಕೆಗಳ ಮೂಲಕ ತಾವೇ ಉತ್ಪಾದಿಸಿದ ವಸ್ತುಗಳನ್ನು ತಾವೇ ಮಾರಾಟ ಮಾಡುವ 'ಉತ್ಪಾದಕ–ವಿನಿಮಯ ವರ್ತಕರು' (ಕುಂಬಾರರು, ಅಕ್ಕಸಾಲಿಗರು, ಮಾದಿಗರು, ಸಮಗಾರರು, ಮೇದರು ಇತ್ಯಾದಿ) ಎಂಬೆರಡು ಪ್ರಕಾರಗಳಲ್ಲಿ ವಿಂಗಡಿಸಬಹುದು. ಈ ವರ್ತಕರಲ್ಲಿ ಕೆಲವರು ಮಾತ್ರ ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಸಂಘಗಳನ್ನು ಕಟ್ಟಿಕೊಂಡಿದ್ದರು.[೪೯] ಭಾರತದಲ್ಲಿ ವೈದಿಕ ಯುಗದ ಪೂರ್ವದಿಂದಲೂ ವರ್ತಕರು ಕಾರ್ಯಚಟುವಟಿಕೆಗಳು ಗೋಚರಿಸುತ್ತವೆ. ಕರ್ನಾಟಕದಲ್ಲಿ ಕ್ರಿ.ಶ. ಸುಮಾರು ೭–೮ನೆಯ ಶತಮಾನದಿಂದಲೂ ವರ್ತಕರ ಕಾರ್ಯಚಟುವಟಿಕೆಗಳು ಕಂಡುಬರುತ್ತವೆ.[೫೦] ವರ್ತಕ ಸಂಘಗಳಿಂದ ಉತ್ಪಾದನೆಗೊಂಡ ವಸ್ತುಗಳ ವ್ಯಾಪಾರ ಆಯಾ ನಾಡಿನ ಆರ್ಥಿಕ ವ್ಯವಸ್ಥೆಯನ್ನು ನಿರ್ಧರಿಸುತ್ತವೆ.

ವರ್ತಕರು ಪಾದಮಾರ್ಗ, ಜಲಮಾರ್ಗದ ಮೂಲಕ ವೈಯಕ್ತಿಕವಾಗಿ ಇಲ್ಲವೇ ಸಾಂಘಿಕವಾಗಿ ಸರಕುಗಳನ್ನು ಎತ್ತು, ಕೋಣ, ಎಮ್ಮೆ, ಕತ್ತೆ, ಕುದುರೆ, ಎತ್ತಿನ ಬಂಡಿಗಳ ಮೂಲಕ ವ್ಯಾಪಾರ ಮಾಡುತ್ತಿದ್ದರು. ಕೂಹುಂಡಿನಾಡಿನ ಶಾಸನಗಳೋಕ್ತ ವರ್ತಕರು ಮತ್ತು ವರ್ತಕ ಸಂಘಗಳು, ಅವರು ಕೈಗೊಂಡ ಆರ್ಥಿಕ, ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

೬.೯.೧. ಸೆಟ್ಟಿ–ಬಣಂಜರು

ವರ್ತಕರ ಸಮಾನಾರ್ಥಕ ಶಬ್ದಗಳಾಗಿ ಸೆಟ್ಟಿಗಳು, ಬಣಂಜರು (ಬಣಜಿಗರು) ಪದಗಳು ಶಾಸನಗಳಲ್ಲಿ ಬಳಕೆಯಾಗಿವೆ. ಮೊದಲು ವೃತ್ತಿವಾಚಕವಾಗಿದ್ದ ಇವು ಕಾಲಕ್ರಮೇಣ ಜಾತಿ ಸೂಚಿಗಳಾದವು. ಸಂಸ್ಕೃತದ 'ವಣಿಜ' ಮತ್ತು 'ಶ್ರೇಷ್ಠ' ಎಂಬ ಪದಗಳು ಕನ್ನಡದ ಬಣಜಿಗ, ಸೆಟ್ಟಿ ಎಂಬ ಪದಗಳಿಗೆ ಸಮಾನವಾಗಿವೆ. ಮೂಲದಲ್ಲಿ ಸೆಟ್ಟಿ ಪ್ರತಿಷ್ಠಾ ಸೂಚಿಯಾಗಿದೆ. ವಣಿಜ ವೃತ್ತಿ ಸೂಚಿಯಾಗಿದೆ. ಕಾಲಕ್ರಮೇಣ ಎರಡೂ ಪದಗಳು ವೃತ್ತಿವಾಚಿಯಾಗಿ ಪರಿಣಮಿಸಿರುವಂತೆ ತೋರುತ್ತದೆ.[೫೧] ಇವರ ಮುಖ್ಯ ಉದ್ಯೋಗ ವ್ಯಾಪಾರವಾಗಿತ್ತು. ಇವರು ತಮ್ಮ ಸರಕುಗಳನ್ನು ಪ್ರಾಣಿಗಳ ಮೇಲೆ ಮತ್ತು ತಲೆಯ ಮೇಲೆ ಹೊತ್ತುಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದರು. ಕೂಹುಂಡಿನಾಡಿನ ಕೆಲವು ಶಾಸನಗಳಲ್ಲಿ ಬಣಜಿಗ ಮತ್ತು ಸೆಟ್ಟಿಗಳ ಪ್ರಸ್ತಾಪಗಳಿವೆ. ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ–

ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕೃತಸತ್ಯಶೌಚಾಚಾರಚಾರುಚರಿತ್ರ ನಯವಿನಯವಿಜ್ಞಾನ
ವೀರಾವತಾರ ವೀರಬಣಂಜುಸಮಯಧರ್ಮ್ಮಪ್ರತಿಪಾಳಕರಪ್ಪ..........

ವೀರಬಣಂಜುಸಮಯಧರ್ಮ ಪ್ರತಿಪಾಳಕರಪ್ಪ ಹಂನಿರ್ವ್ವರ್ಗಾವುಂಡಗಳ ನಿರೂಪಣೆಯಿದೆ.[೭] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಮತ್ತಮಾವೂರ ಸಂತೆಯಂ ಮಾಡಲುವೇಡಿ ಬೆಳಗಲೆ
ಮುಖ್ಯವಾಗಿ ನಾಲ್ಕುಂ ಪಟ್ಟಣದ ಸೆಟ್ಟಿಯರುಂ...........

ಬೆಳಗಲೆ ಮುಖ್ಯವಾಗಿ ನಾಲ್ಕು ಪಟ್ಟಣದ ಸೆಟ್ಟಿಯರ ಪ್ರಸ್ತಾಪವಿದೆ.[೫೩] ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಪನ್ನಿಸೆಟ್ಟಿ, ಸಾತಿಸೆಟ್ಟಿ, ಆದಿಸೆಟ್ಟಿ, ವಾಪ್ಪಸೆಟ್ಟಿ, ಹಲಿಸೆಟ್ಟಿ, ಜಾಯಿಸೆಟ್ಟಿ, ಬಮ್ಮಿಸೆಟ್ಟಿ, ಪಾರಿಸೆಟ್ಟಿ, ನಾಗಿಸೆಟ್ಟಿ, ಬೆಳ್ಳಿಯಮಸೆಟ್ಟಿ, ಕೇತಿಸೆಟ್ಟಿ, ಹೊಟ್ಟೆಸೆಟ್ಟಿ, ಕನ್ನಿಸೆಟ್ಟಿ, ರೇವಿಸೆಟ್ಟಿ, ಗುಡ್ಡಿಸೆಟ್ಟಿ, ಯೀಶ್ವರಸೆಟ್ಟಿ, ವಿಷ್ಣುಸೆಟ್ಟಿಯ ನಿರೂಪಣೆಗಳಿವೆ.[೫೪] ಕೆಲವು ಸೆಟ್ಟಿಯರು ಇಲ್ಲಿಯ ಆಡಳಿತದಲ್ಲಿ ಭಾಗಿಗಳಾಗಿದ್ದರು. ಹಣ್ಣಿಕೇರಿಯ ಕ್ರಿ.ಶ. ೧೨೫೪ರ ಶಾಸನದಲ್ಲಿ–'ಶ್ರೀಮನ್ಮಹಾಪ್ರಧಾನಂ ಸರ್ವ್ವಾಧಿಕಾರಿ ಚೌಡಿಸೆಟ್ಟಿಯರ ಬೆಸದಿಂ....' ಮಹಾಪ್ರಧಾನ ಚೌಡಿಸೆಟ್ಟಿಯ ಆಳ್ವಿಕೆಯ ಪರಿಚಯವಿದೆ.[೫೫] ಇದರಿಂದ ಸೆಟ್ಟಿಯರು ವ್ಯಾಪಾರ ಮತ್ತು ರಾಜಕೀಯ ಎರಡರಲ್ಲಿಯೂ ತಮ್ಮ ಛಾಪನ್ನು ಮೂಡಿಸಿರುವುದು ಗೋಚರಿಸುತ್ತದೆ.

೬.೯.೨. ಸೆಟ್ಟಿಗುತ್ತರು

ವಿನಿಮಯ ವರ್ತಕರ ಪಂಗಡಗಳಲ್ಲಿ ಸೆಟ್ಟಿಗುತ್ತರು ಸೆಟ್ಟಿಯರಲ್ಲಿಯೇ ಉನ್ನತರಾಗಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಪಡಪನಾಯಕ ಕೊಂಡ ನಂಬಿಸೆಟ್ಟಿ ಪೊರೆಯಂಚಸೆಟ್ಟಿ
ಮೊದಲಾದೆಲ್ಲಾ ಮಲೆಯಾಳವ್ಯವಹಾರಿಗಳುಂ..........

ಪಡಪನಾಯಕ, ಕೊಂಡನಬಿಸೆಟ್ಟಿ, ಪೊರೆಯಚಸೆಟ್ಟಿ ಮೊದಲಾದ ಮಲೆಯಾಳಿ ವ್ಯವಹಾರಿಗಳು ಶಾಂತಿನಾಥ ಬಸದಿಗೆ ಕೊಡಮಾಡಿದ ದಾನದ ಪ್ರಸ್ತಾಪವಿದೆ. ಅದೇ ಶಾಸನದಲ್ಲಿ ಸೆಟ್ಟಿಗುತ್ತ ನಾಗಣ್ಣನ ನಿರೂಪಣೆಯಿದೆ. ರಾಯಬಾಗದ ಕ್ರಿ.ಶ. ೧೦೪೦ರ ಶಾಸನವು–

ಸೆಟ್ಟಿಗುತ್ತ ಗೆಯಿ ೫೦೦ ಗೃಹಂ ಹಸ್ತ ೭ ‖ ....

ಬ್ರಹ್ಮೇಶ್ವರ ದೇವರಿಗೆ ಕೊಟ್ಟ ದಾನವನ್ನು ಹೆಸರಿಸುವಾಗ ಸೆಟ್ಟಿಗುತ್ತಗೆ ಎಂದು ಹೇಳಿರುವುದು ಇಲ್ಲಿಯೂ ಸೆಟ್ಟಿಗುತ್ತರ ಅಸ್ತಿತ್ವವನ್ನು ಸ್ಪಷ್ಟಪಡಿಸುತ್ತದೆ. ಸೆಟ್ಟಿಗುತ್ತರ ಸ್ಥಾನಮಾನ ಮತ್ತು ವ್ಯತ್ಯಾಸವನ್ನು ನಿರ್ಧರಿಸುವುದು ಸಧ್ಯದ ಸಾಮಗ್ರಿಗಳ ಬಲದಿಂದ ಸಾಧ್ಯವಾಗುವುದಿಲ್ಲ.

೬.೯.೩. ನಕರರು

ವಿನಿಮಯ ವರ್ತಕರಲ್ಲಿ ಪ್ರಮುಖರಾದ ನಕರರು ಹೆಚ್ಚಾಗಿ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಕೂಹುಂಡಿನಾಡಿನ ಶಾಸನಗಳಲ್ಲಿ ಅಂಗಡಿ ಸೆಟ್ಟಿಯರೆಂದು ಕರೆಯಲ್ಪಟ್ಟಿರುವ ಇವರು ಸಂತೆ–ಪಟ್ಟಣಗಳಲ್ಲಿ ಸ್ಥಿರವಾದ ಅಂಗಡಿ ವ್ಯಾಪಾರಿಗಳೆಂಬುದು ಸ್ಪಷ್ಟವಾಗುತ್ತದೆ. ಇವರು ಹಳ್ಳಿಯಿಂದ ಪಟ್ಟಣಕ್ಕೆ ವ್ಯಾಪಾರಕ್ಕೆಂದು ಬರುವ ಜನರಿಂದ ಮುಕ್ತವಾಗಿ ಸರಕುಗಳನ್ನು ಖರೀದಿಸಿ, ಬಯಲು ಅಂಗಡಿ ಮತ್ತು ಮಳಿಗೆಗಳಲ್ಲಿಟ್ಟು ಮಾರಾಟ ಮಾಡುತ್ತಿದ್ದರು. ಜೊತೆಗೆ ತಮ್ಮ ಸಮೂಹದಲ್ಲಿ ಸಂಘಗಳನ್ನು ಕಟ್ಟಿಕೊಂಡು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನೂ ಕೈಗೊಳ್ಳುತ್ತಿದ್ದರು. ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ–

ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕೃತಸತ್ಯಶೌಚೌಚಾರಚಾರುಚರಿತ್ರ ನಯವಿನಯವಿಜ್ಞಾನ
ವೀರಾವತಾರ ವೀರಬಣಂಜುಸಮಯಧರ್ಮ್ಮಪ್ರತಿಪಾಳಕರಪ್ಪ
ಸುಗಂಧವರ್ತ್ತಿಯ ಹಂನಿರ್ವ್ವರ್ಗಾವುಂಡಗಳು ಮುಖ್ಯವಾಗಿ
ಸಮಸ್ತನಖರ ಮುಂಮುರಿದಂಡಂಗಳು ಸನ್ತೆಯ ದೆವಸ
ಮಹಾಸಭೆಯಾಗಿರ್ದು ತಂಮೊಳೈಕಮತ್ಯವಾಗಿ ಆ
ಮಲ್ಲಿನಾಥದೇವರಿಗೆ ಬಿಟ್ಟ ಆಯವೆಂತೆದೆಡೆ ಎಲೆಯ
ಹೇಜೆಂಗೆ ನೂಱೆಲೆಯ ಕೊಟ್ಟರು ಹೊತ್ತಲಿಂಗಯ್ವತ್ತೆಲೆಯ
ಕೊಟ್ಟರು...

ಮತ್ತು ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ಗೊಂಕಜಿನಾಲಯಕ್ಕೆ ಪನ್ನಿರ್ವ್ವರ್ಗ್ಗಾವುಂಡುಗಳುಮಂ ಸಮಸ್ತ
ಪರಿವಾರಪ್ರಜೆಗಳಮಂ ಆ ಸ್ಥಳದ ಸೆಟ್ಟಿಗುತ್ತ ಮುಖ್ಯ ಸಮಸ್ತ
ನಕರಂಗಳುಮಂ ಬರಿಸಿ ನೇಮಿತೀರ್ತ್ಥೇಶ್ವರನ ಬಸದಿಯ

ರಿಷಿಯರಾಹಾರದಾನಕ್ಕಂ ದೇವರಷ್ಟವಿಧಾರ್ಚ್ಚನೆಂಗ ಖಣ್ಡಸ್ಫುಟಿತ
ಜೀರ್ಣ್ಣೋರ್ದ್ಧಾರಕ್ಕಂ ಪೆಸರ್ಗ್ಗೊಣ್ಡು ತನುಮುನೀಶ್ವರರ ದಿವ್ಯ
ಶ್ರೀಪಾದಪದ್ಮಗಳಂ ದಿವ್ಯತೀರ್ತ್ಥ ಜಳಂಗಳಿಂ ತೊಳೆದು
ಶಾತಕುಂಭಕುಂಭಸಂಭೃತ ಜಳಂಗಳಿಂ ಧಾರಾಪೂರ್ವ್ವಕಂ
ಮಾಡಿ ತೇಳಿರಿದಾಳದ ಪಶ್ಚಿಮ ಭಾಗದಲು ಹಾರುನಗೇರಿಯ
ಬಟ್ಟೆಯಿಂ ಬಡಗಲು ಯಿಪ್ಪತ್ತನಾಲ್ಗೇಣ ಕೋಲೊಳು
ಕೊಟ್ಟ ಮತ್ತರೆಪ್ಪತ್ತೆರಡು...

ಎಂದು ನಕರರ ವ್ಯಾಪಾರ ಮತ್ತು ಧಾರ್ಮಿಕ ಚಟುವಟಿಕೆಗಳ ಪ್ರಸ್ತಾಪಗಳಿವೆ.[೫೯]

೬.೯.೪. ಮುಮ್ಮುರಿದಂಡರು

ವಿನಿಮಯ ವರ್ತಕರಲ್ಲಿ ಪ್ರಮುಖರಾದ ಮುಮ್ಮುರಿದಂಡರು ಅಡಿಕೆ, ಅರಿಷಿಣ, ಮೆಣಸು ಮೊದಲಾದ ಸರಕುಗಳನ್ನು ಸಂತೆ-ಪೇಟೆಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ಕೆಲವೊಮ್ಮೆ ಅಲ್ಲಿಯೇ ಸರಕುಗಳನ್ನು ಖರೀದಿಸಿ ಬೇರೆ ಸ್ಥಳಗಳಲ್ಲಿ ಮಾರುತ್ತಿದ್ದರು.[೬೦] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ಮತ್ತಮೇಳುವರೆ ಹಂನೊಂದುವರೆಯ ಸಮಸ್ತ ಮುಂಮುರಿದಂಡಂ
ಮುಖ್ಯವಾಗಿ ನಾಡುಗಳು ಬಿಟ್ಟಾಯದ ಕ್ರಮಮೆಂತೆಂದೊಡೆ ।
ಸಕಳಧಾನ್ಯಮಾವುದು ಬಂದಡಂ ಹೇಱಿಂಗೊಂಮನಂ ಭಂಡಿಗೆ
ಬಳ್ಳವೆರಡು ಹಸರಕ್ಕಡಕೆ ಆಯ್ದು ಹೇಱಿಂಗೆಲೆ ನೂಱು ಹೊತ್ತಳಕ್ಕಯ್ವತ್ತು
ಹಾಡಕ್ಕೆ ಸೊಲ್ಲಗೆ ಎಣ್ಣೆ ಓಲೆಯ ಹೊಱೆ ಮಾಱಿತಕ್ಕೆ ಒಂದು ಕಟ್ಟೋಲೆ
ಕಿಱುಕುಳವೇನು ಮಾಱಿದಡು ಸುಟ್ಟುಗಾಯಂ ಹಿಡಿವತ್ತಿ ಕಂಬಿಗೆ
ಮಡಕೆ ಒಂದು ॥

ಎಂದು ಮುಮ್ಮುರಿದಂಡರ ಧಾರ್ಮಿಕ ಚಟುವಟಿಕೆಗಳ ನಿರೂಪಣೆಯಿದೆ. ಸವದತ್ತಿಯ ಕ್ರಿ.ಶ. ೧೨೨೮ರ, ಬೆಳಗಾವಿಯ ಕ್ರಿ.ಶ. ೧೨೦೪ರ, ಹಣ್ಣಿಕೇರಿಯ ಕ್ರಿ.ಶ. ೧೨೮೯ರ, ಯಕ್ಸಂಬಾದ ಕ್ರಿ.ಶ. ೧೧೬೫ರ ಮೊದಲಾದ ಶಾಸನಗಳಲ್ಲಿಯೂ ಮುಮ್ಮುರಿದಂಡರ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳ ಪ್ರಸ್ತಾಪಗಳಿವೆ.[೬೧] ಇವರು ಈ ನಾಡಿನಲ್ಲಿ ವ್ಯಾಪಾರದ ಜೊತೆಗೆ ಸಾಮಾಜಿಕ ಮತ್ತು ಧಾರ್ಮಿಕ ವಿಷಯದಲ್ಲಿ ಔದಾರ್ಯತೆ ತೋರಿ ಅನೇಕ ದೇವಾಲಯಗಳು ಮತ್ತು ಬಸದಿಗಳಿಗೆ ದಾನ ಕೊಡುವುದರ ಮೂಲಕ ತಮ್ಮ ಧಾರ್ಮಿಕ ವೈಶಾಲ್ಯತೆಯನ್ನು ಮೆರೆದಿದ್ದಾರೆ.

೬.೯.೫. ಗವರೆ–ಗಾತ್ರಿಗರು

ವಿನಿಮಯ ವರ್ತಕರಲ್ಲಿ ಪ್ರಮುಖರಾದ ಗವರೆ–ಗಾತ್ರಿಗರು ಕುದುರೆ, ಕತ್ತೆ, ಎತ್ತು, ಕೋಣಗಳ ಮೇಲೆ ವಿಳ್ಯದೆಲೆಯನ್ನು ಹೇರಿಕೊಂಡು ಸಂತೆ–ಪೇಟೆಗಳಿಗೆ ಹೋಗಿ ವ್ಯಾಪಾರ ಮಾಡುತ್ತಿದ್ದರು.[೬೨] ಗವರೇಶ್ವರ ಇವರ ಮನೆಯ ದೇವರಾಗಿತ್ತು. ಯಕ್ಸಂಬಾದ ಕ್ರಿ.ಶ. ೧೧೬೫ರ ಮತ್ತು ತೇರದಾಳದ ಕ್ರಿ.ಶ. ೧೧೨೩ರ ಶಾಸನಗಳಲ್ಲಿ ಗವರೆ–ಗಾತ್ರಿಗರು ಸ್ಥಳೀಯ ಬಸದಿಗಳಿಗೆ ಎಲೆಯನ್ನು ದಾನ ಮಾಡಿದ ಪ್ರಸ್ತಾಪಗಳಿವೆ.[೬೩]

೬.೯.೬. ನಾನಾದೇಶಿಗಳು

ಮಧ್ಯಕಾಲೀನ ಕರ್ನಾಟಕದಲ್ಲಿ 'ದೇಶಿ' ಎಂಬ ಪದ ಒಂದು ನಾಡಿನ ವ್ಯಾಪ್ತಿಯನ್ನು ಒಳಗೊಳ್ಳುವ ಪದವಾಗಿತ್ತು. ನಾನಾದೇಶಿಗಳು ಎಂದರೆ ಸ್ವದೇಶದ ವಿವಿಧ ಪ್ರದೇಶದವರು ಎಂದು ಗುರುತಿಸಲಾಗಿದೆ. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ವೇಣುಗ್ರಾಮದ ಸ್ಥಳದ ಸಮಸ್ತಮುಮ್ಮುರಿದಂಡಂಗಲುಂ
> ಕೂಂಡಿಮೂಸಾಸಿರದ ಪಟ್ಟಣಿಗ ಮೊದಲಾದುಭಯ
> ನಾನಾದೇಶಿ ಮುಮ್ಮುರಿದಂಡಂಗಲುಂ......................

ಉಭಯ ನಾನಾದೇಶಿ ಮುಮ್ಮುರಿದಂಡಂಗಳಪ್ರಸ್ತಾಪವಿದೆ.[೬೪] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

> ಸಾಸಿರದೇಳ್ನೂರು ಬವರಿಯುಂ ಮುಮ್ಮುರಿದಂಡಮುಂ
> ಉಭಯನಾನಾದೇಶಿಯಂ ಎಕ್ಕಸಂಬುಗೆಯ ತಳಸಮಸ್ತ
> ಮಿರ್ದ್ದು.............................

ಉಭಯ ನಾನಾದೇಶಿಗಳ ನಿರೂಪಣೆಯಿದೆ.[೬೫] ಇಲ್ಲಿಯ ನಾನಾದೇಶಿಯ ವರ್ತಕರಲ್ಲಿ ಪರಶುರಾಮ ನಾಯಕ, ಪೊಮ್ಮಣನಾಯಕ, ಅಮ್ಮಗಿನಾಯಕ ಮೊದಲಾದವರು ಪ್ರಮುಖರಾಗಿದ್ದಾರೆ.

೬.೯.೭. ಮಲೆಯಾಳಿ ವ್ಯಾಪಾರಿಗಳು

ಕೂಹುಂಡಿನಾಡಿನಲ್ಲಿ ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಇಲ್ಲಿಯ ರಾಜಧಾನಿ ಬೆಳಗಾವಿ ಪಟ್ಟಣವು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿಗೆ ಮಲೆಯಾಳಿ (ಇಂದಿನ ಕೇರಳ ರಾಜ್ಯದ ಪ್ರದೇಶ) ವರ್ತಕರು ವ್ಯಾಪಾರಕ್ಕೆ ಬರುತ್ತಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

> ಪಡಪನಾಯಕ ಕೊಂಡ ನಂಬಿಸೆಟ್ಟಿ ಪೊರೆಯಂಚಸೆಟ್ಟಿ
> ಮೊದಲಾದೆಲ್ಲಾ ಮಲೆಯಾಳ ವ್ಯವಹಾರಿಗಳುಂ...............

ಎಂದು ಮಲೆಯಾಳಿ ವ್ಯವಹಾರಿಗಳ ಪ್ರಸ್ತಾಪವಿದೆ.[೬೬] ಇದು ಮಲೆಯಾಳಿ ವ್ಯಾಪಾರಿಗಳು ಕುದುರೆಗಳ ಮೇಲೆ ಕೂಹುಂಡಿನಾಡಿನ ಪ್ರದೇಶಕ್ಕೆ ಬಂದು ವ್ಯಾಪಾರವನ್ನು ನಿರ್ವಹಿಸುತ್ತಿದ್ದುದನ್ನು ಸೂಚಿಸುತ್ತದೆ. ಕೂಹುಂಡಿನಾಡಿನ ತೆಂಕಣದಿಂದಲೂ ವ್ಯಾಪಾರಿಗಳು ವೇಣುಗ್ರಾಮ ಪರಿಸರಕ್ಕೆ ಆಗಮಿಸುತ್ತಿದ್ದರು.

೬.೯.೮. ಅಯ್ಯಾವೊಳೆ ಐನೂರ್ವರು

ಕೇವಲ ವ್ಯಾಪಾರ ವೃತ್ತಿಯಿಂದ ಜೀವನ ನಡೆಸುತ್ತಿದ್ದ ವರ್ತಕರಲ್ಲಿ ಅಯ್ಯಾವೊಳೆ ಐನೂರ್ವರು ಪ್ರಸಿದ್ಧರಾಗಿದ್ದಾರೆ. ಐನೂರು ಮತ್ತು ಇದಕ್ಕಿಂತಲೂ ಹೆಚ್ಚು ಸದಸ್ಯರುಳ್ಳ ಈ ವರ್ತಕ ಸಂಘದ ಕೇಂದ್ರಸ್ಥಳ ಇಂದಿನ ಬಾಗಲಕೋಟ ಜಿಲ್ಲೆಯ ಐಹೊಳೆ ಗ್ರಾಮವಾಗಿತ್ತು. ಈ ಸಂಘವು ಕ್ರಿ.ಶ. ೯೯೧ ರಿಂದ ೧೩೯೮ರವರೆಗೂ ಅಸ್ತಿತ್ವದಲ್ಲಿತ್ತು. ಇದು ರಾಜಕೀಯ, ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೈಗೊಂಡ ಚಟುವಟಿಕೆಗಳು ಗಮನೀಯವಾಗಿವೆ.[೬೭] ಈ ವರ್ತಕ ಸಂಘವು ದಕ್ಷಿಣ ಭಾರತದಲ್ಲಿ ಯಾವ ಸಂಘ–ಸಂಸ್ಥೆಗಳು ಪಡೆಯದ ಪ್ರಚಾರ, ಪ್ರಸಿದ್ಧಿಯನ್ನು ಪಡೆದಿತ್ತು. ಈ

ವಿನಿಮಯ ವ್ಯಾಪಾರ ಸಂಘದ ಪ್ರಾಚೀನತೆ, ಮೂಲ, ರಚನೆ, ದೈವ, ಧರ್ಮ, ಲಾಂಛನ ಪ್ರಶಸ್ತಿಗಳ ಕುರಿತಾಗಿ ಸಮಕಾಲೀನ ಶಾಸನಗಳಲ್ಲಿ ಸವಿಸ್ತಾರವಾದ ಪ್ರಸ್ತಾಪಗಳಿವೆ. ಬೇಡಕಿಹಾಳದ ಕ್ರಿ.ಶ. ೧೦೦೦ರ ತಾಮ್ರಪಟ ಶಾಸನದಲ್ಲಿ–

ಸ್ವಸ್ತಿ ಸಮಸ್ತಭುವನ ವಿಖ್ಯಾತಂ ಪಂಚಸತ ವೀರಶಾಸನಲಬ್ಧಾನೇಕ
ಗುಣಗಣಾಳಂಕಿತ ಸತ್ತ್ಯಸೌಚಾಚಾರ ಚಾರಿತ್ರ ನಯವಿನಯಸಂಪ
ನ್ನರಪ್ಪ ಶ್ರೀವೀರಬಳಂಜದ ಧರ್ಮ್ಮಪ್ರತಿಪಾಳನ ವಿಸುದ್ಧಗುಡ್ಡಧ್ವಜ
ವಿರಾಜಿತಮಪ್ಪ ಲಕ್ಷ್ಮೀವಕ್ಷಸ್ಥಳಂ ಸರಾಳಿಂಗಿತ ಭುವನಪರಾಕ್ರಮಂ
ವಾಸುದೇವ ಕಣ್ಡಳಿ ಮೂಳಭದ್ರೋದ್ಭವಂ ಭಗವತೀವರಪ್ರಸಾದಂ
ದ್ವಾತ್ರಿಂಸ ವೇಳಾವುಳ ಅಷ್ಟಾದಸ ಪಟ್ಟಣಂ ಚೌಸಷ್ಟ ಯೋಗಪೀಠಂ
ಅಱುವತ್ತನಾಲ್ಕು ಘಟಿಕಸ್ಥಾನಂ ನಾನಾದೇಸ ಭ್ರಮಂತ ವಿದಗ್ಧ
ಸಿದ್ಧಾಗಮ ವಾಕುಸಿದ್ಧರುಂ ಭಲ್ಲುಂಕಿದಣ್ಡಹಸ್ತರ್ ಐಯವೊಳೆಯ
ಪುರಪರಮೇಶ್ವರರ್ ಕಲಹ ಸಂಪುಂನರಾಚಾರಗಲಿಗಳ್ ತೊಡರೆ
ಬಲುಗಂಡರ್ ಪೆಣಕೆ ಕಡುಗೊರ್ಪ್ಪರ್ ಕ್ರಿತಯುಗಂ ತ್ರೇತೆದ್ವಾಪರಂ
ಕಲಿಯುಗಂ ನಾಲ್ಕು ಯುಗದೊಳಂ ಬ್ರಹ್ಮಾವಿಷ್ಣು ಮಹೇಶ್ವರರ
ಮತಮೆ ಪಸುಂಬೆಯಾಗೆಯು ಅಷ್ಟಲೋಕಪಾಳಕರ್ ಗೊಂಟಾಗೆಯು
ಎಂಟುಂ ದೆಸೆಯ ದೇವತೆಗಳೆ ಗೊಳಸಾಗೆಯು ವಾಸುಗೆಯೆ
ಬಳಸಾಗೆಯುಂ ಫಣಿಕುಳಮೆ ದಾರಮಾಗೆಯುಂ ಬೊಕ್ಕಣಮೆ
ಒಳವಸುಂಬೆಯಾಗೆಯುಂ ಖಟ್ವಾಂಗಮೆ ಕೋಲಾಗೆ
ಚಂದ್ರಾದಿತ್ತ್ಯರ್ಕ್ಕಳಣಸಾಗೆಯುಂ ಚಕ್ರಮೆ ಬೇಳಮಾಗೆಯುಂ
ವಜ್ರಕವಚಮೆ ಕುಂಚುಳಿಕೆಯಾಗೆಯಂ ದ್ವಾವತಿಯ ಭಂಡಮೆ
ತಾಯಿ ಭಂಡಮಾಗೆಯುಂ ಐಸಂಬರಮ ಅಮೌಲ್ಯವಸುಗಳಾಗೆಯುಂ
ನಡೆದುಂ ನುಡಿದುಂ ಸಂದಸ್ರೀ ಮತೆಂಟುನಾಡ ಪದಿನಱುವರು
ಮಾದಿಯಾಗೆ ಐನೂರ್ಬರು ಸ್ವಾಮಿಗಳ್ಗೆ ಸಾಷ್ಟಾಂಗಮೆರಱಿಗಿ
ಪೊಡವಟ್ಟು...............................

ಎಂದು ಐಯ್ಯಾವೊಳೆಯ ಐನೂರ್ವ್ವರ ಸಂಘದ ಸದಸ್ಯರ ವಿವಿಧ ಬಿರುದಾವಳಿಗಳು, ಹಿರಿಮೆ ಮತ್ತು ಧಾರ್ಮಿಕ, ಸಾಮಾಜಿಕ ಕಾರ್ಯಗಳು ನಿರೂಪಣೆಯಾಗಿವೆ.

ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ–

ಸ್ವಸ್ತಿಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕೃತ ಸತ್ಯಾಶೌ ಚಾಂಚಾರಕ್ಷಿಚಾರಿತ್ರ ನಯವಿನಯ
ವಿಜ್ಞಾನ ವೀರಸಮಯ ಬಣಂಜುಧರ್ಮ್ಮ ಪತಿಪಾಳಕರಪ್ಪ
ಶ್ರೀಮದಯ್ಯಾವೊಳೆಯ್ಯೂರ್ವ್ವ ಸ್ವಾಮಿಗಳಂ ॥

ಎಂದು ಈ ಸಂಘದ ಸದಸ್ಯರ ಪ್ರಶಸ್ತಿಗಳ ನಿರೂಪಣೆಯಿದೆ.[೮] ತೇರದಾಳದ ಕ್ರಿ.ಶ. ೧೧೮೧ರ ಶಾಸನದಲ್ಲಿ–

ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ
ಗುಣಗಣಾಳಂಕ್ರಿತ ಸತ್ಯಶೌಚಾಚಾರಚಾರುಚಾರಿತ್ರನಯವಿನಯ
ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನ ವಿಶುದ್ಧಗುಡ್ಡಧ್ವಜ
ವಿರಾಜಿತಾನೇಕಸಾಹಸ ಲಕ್ಷ್ಮೀಸಮಾಲಿಂಗಿತವಕ್ಷಸ್ಥಳಭುವನ

ಪರಾಕ್ರಮೋನ್ನತರುಂ ಮುಖಪಟ್ಟಿಗುರೂತ್ಪತ್ತಿ ಬಲದೇವ
ವಾಸುದೇವಖಣ್ಡಳಿ ಮೂಳಭದ್ರವಂಶೋಭದ್ರವಂಶೋದ್ಭವರುಂ
ಪದ್ಮಾವತೀದೇವಿಲಬ್ಧವರಪ್ರಸಾದರುಮಪ್ಪ ಶ್ರೀಮದಯ್ಯವಳೆಯ
ಯ್ಞೂರ್ವ್ವಸ್ವಾಮಿಗಳು ಕುನ್ತಳವಿಷಯದೊಳು ಗ್ರಾಮನಗರಖೇಡ
ಕರ್ವ್ವಡಮಡಂಬದ್ರೋಣಾಮುಖ ಪತ್ತಣಂಗಳಿಂದಮನೇಕಮಾಟ
ಕೂಟಪ್ರಸಾದದೇವಾಯತನಂಗಳಿಂದಮೊಪ್ಪುವಗ್ರಹಾರಪಟ್ಟಣಂ
ಗಳಿಂದಮತಿಶಯವಪ್ಪ ಶ್ರೀಮತು ಕೂಂಡಿ ಮೂಱುಸಾಸಿರದೊಳಗೆ
ಹನ್ನೆರಡಕ್ಕಂ ಮೊದಲಬಾಡಂ ಬಣಂಜುವಟ್ಟಣಂ ನಡವೆಯಮನೆ
ತೇರಿದಾಳದಲು.......................................

ಎಂದು ಐಯ್ಯಾವೊಳೆ ಐನೂರ್ವ್ವರು ಸಂಘದ ಸದಸ್ಯರ ವಿವಿಧ ಪ್ರಶಸ್ತಿಗಳು ಮತ್ತು ಅವರ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳ ಉಲ್ಲೆಖವಿದೆ.[೯]

೬.೯.೯. ಅರುವತ್ತೊಕ್ಕಲರು

ಗ್ರಾಮದ ರೈತರು ತಮ್ಮ ಕಾರ್ಯಸೌಕರ್ಯ, ಸಾಮಾಜಿಕ ಸ್ಥಾನಮಾನ, ಸ್ವಹಿತ ಸಂರಕ್ಷಣೆ ಮೊದಲಾದವುಗಳಿಗಾಗಿ ಕಟ್ಟಿಕೊಂಡ ಸಂಘಗಳಲ್ಲಿ ಅರುವತ್ತೊಕ್ಕಲು ಸಂಘವೂ ಒಂದಾಗಿದೆ. ಈ ಸಂಘದ ಸದಸ್ಯರ ಸಂಖ್ಯೆ ಸಾಂಪ್ರದಾಯಿಕವಾಗಿ ಅರವತ್ತು ಎಂದು ಪರಿಗಣಿಸಲ್ಪಟ್ಟಿತ್ತು. ಇದಕ್ಕೆ ಗ್ರಾಮದ ಪ್ರಭುಗಾವುಂಡ ಮತ್ತು ಹೆಗ್ಗಡೆ ಪ್ರಮುಖರಾಗಿದ್ದರು. ತಾವು ಇಲ್ಲವೇ ಇತರರು ಕೈಗೊಂಡ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಗ್ರಾಮದ ಭೂಮಿಗಳನ್ನು ಹಾಗೂ ಅವುಗಳ ಮೇಲಿನ ತೇರಿಗೆಗಳನ್ನು ದಾನ ಮಾಡುವ ಹಕ್ಕನ್ನು ಈ ಸಂಘ ಪಡೆದಿತ್ತು. ಅದೇ ರೀತಿ ಆ ದಾನಗಳನ್ನು ಸಂರಕ್ಷಿಸುವುದೂ ಇದರ ಹೊಣೆಯಾಗಿತ್ತು.[೨೦] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ಅಲ್ಲಿಯ ಪನ್ನಿರ್ವ್ವರ್ಗ್ಗಾವುಣ್ಡುಗಳುಂ
ಅಱವತ್ತೊಕ್ಕಲುಂ ಹನ್ನಿಧಾನಕ್ಕೆ ರಾಸಿಗೊಳಗವಂ ಬಿಟರು
ಅಲ್ಲಿಯ ಸೆಟ್ಟಿಗುತ್ತ ಮುಖ್ಯ ನಗರಂಗಳು ತಾವು ಮಾಱಿಕೊಣ್ಡ
ಭಣ್ಡಮಾಣಿಕ ಪಟ್ಟಸೂತ್ರವಾದಡಂ..........

ಈ ಸಂಘದ ಸದಸ್ಯರ ಧಾರ್ಮಿಕ ಕಾರ್ಯಗಳ ಪ್ರಸ್ತಾಪವಿದೆ.[೨೧]

೬.೧೦. ನಾಣ್ಯ ಚಲಾವಣೆ

ಪ್ರಾಚೀನ ಕರ್ನಾಟಕದಲ್ಲಿ ಕೊಡು–ಕೊಳ್ಳುವ ವ್ಯವಹಾರ ರೂಢಿಯಲ್ಲಿತ್ತು. ಅಂದರೆ ಒಂದು ವಸ್ತುವಿಗೆ ಬದಲಾಗಿ ಪ್ರತಿ ವಸ್ತುಕೊಡುವ 'ನಿಮಾನ' ಪದ್ಧತಿ ಜಾರಿಯಲ್ಲಿತ್ತು.[೨೨] ಕಾಲಾಂತರದಲ್ಲಿ ಗದ್ಯಾಣ, ಪಣ, ಅಡ್ಡ, ಹಾಗ, ವೀಸ, ಬೇಳೆ, ಕಾಕಿಣಿ, ನಿಷ್ಕ, ಸುವರ್ಣ, ಧಾರಣ, ದ್ರಮ್ಮ, ದೀನಾರ, ಪುಷ್ಪ, ಸಲಿಕೆ, ಗುಳಿಕೆ, ಚೌವಲ, ಧಾರಣಿ, ಗಾವಲಿ, ಕಾಣಿ, ವರಹ, ಹೊನ್ನು, ಕಾಸು, ಕಳಂಜು, ಮಂಜಾಡಿ, ಅಕ್ಕಂ ಮೊದಲಾದ ನಾಣ್ಯಗಳನ್ನು ವ್ಯಾಪಾರದ ಮಾಧ್ಯಮವಾಗಿ ಬಳಸುವುದು ರೂಢಿಗೆ ಬಂದಿತು. ನಾಣ್ಯಗಳನ್ನು ಟಂಕಿಸುವ ಸ್ಥಳಗಳನ್ನು 'ಟಂಕಶಾಲೆಗಳು' ಎಂದು ಕರೆಯಲಾಗುತ್ತಿತ್ತು. ತಮ್ಮನ್ನು ವಿಶ್ವಕರ್ಮರೆಂದು ಕರೆದುಕೊಳ್ಳುತ್ತಿದ್ದ ಅಕ್ಕಸಾಲಿಗರು ಟಂಕಸಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಕೂಹುಂಡಿನಾಡಿನಲ್ಲಿ ಕೊಡುಕೊಳ್ಳುವ ವ್ಯವಹಾರವನ್ನು ಸುಗಮ ಮಾಡಿಕೊಳ್ಳುವುದಕ್ಕಾಗಿ ಟಂಕಶಾಲೆಗಳಲ್ಲಿ 'ಅಕ್ಕಸಾಲಿಗರ' ಸಹಾಯದಿಂದ ರಾಜನ ಹೆಸರಿನ ಮುದ್ರೆಯ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು.

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹಾಗ, ವೀಸ, ಗದ್ಯಾಣ, ಕಾಣಿ ಎಂಬ ನಾಣ್ಯಗಳ ಪ್ರಸ್ತಾಪವಿದೆ.[೭೪] ಹಣ್ಣಿಕೇರಿಯ ಕ್ರಿ.ಶ. ೧೨೮೯ರ ಶಾಸನದಲ್ಲಿ ವೀಸ ಎಂಬ ನಾಣ್ಯದ ನಿರೂಪಣೆಯಿದೆ.[೭೫] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಮಾನ ಎಂಬ ನಾಣ್ಯದ ಉಲ್ಲೇಖವಿದೆ.[೭೬] ಉಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೮೯-೩೦ರ ಶಾಸನದಲ್ಲಿ ಗದ್ಯಾಣ, ಪಣ ಎಂಬ ನಾಣ್ಯಗಳ ಪ್ರಸ್ತಾಪವಿದೆ.[೭೭] ಬಡ್ಲಿಯ ಕ್ರಿ.ಶ. ೧೨೪೬ರ ಶಾಸನದಲ್ಲಿ ಹೊಂಗೆ ಎಂಬ ನಾಣ್ಯದ ನಿರೂಪಣೆಯಿದೆ.[೭೮] ಬೆಳವಿಯ ಕ್ರಿ.ಶ. ೧೦೫೩ರ ಶಾಸನದಲ್ಲಿ ಗದ್ಯಾಣ ಎಂಬ ನಾಣ್ಯದ ಉಲ್ಲೇಖವಿದೆ.[೭೯] ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಗದ್ಯಾಣ, ಪೊನ್ನ ಎಂಬ ನಾಣ್ಯಗಳ ಉಲ್ಲೇಖವಿದೆ.[೮೦] ಹಣ್ಣಿಕೇರಿಯ ಕ್ರಿ.ಶ. ೧೨೮೯ರ ಶಾಸನದಲ್ಲಿ ಕಾಂಚನ ಎಂಬ ನಾಣ್ಯದ ಪ್ರಸ್ತಾಪವಿದೆ.[೮೧] ಈ ನಾಡಿನಲ್ಲಿ ಗದ್ಯಾಣ, ಪೊನ್ನ ಎಂಬ ನಾಣ್ಯಗಳು ಹೆಚ್ಚು ಬಳಕೆಯಲ್ಲಿದ್ದವು. ಗದ್ಯಾಣ ಚಿನ್ನದ ನಾಣ್ಯವಾದ್ದರಿಂದ ಇದನ್ನು 'ಪೊನ್ನ ಅಥವಾ ಹೊನ್ನ' ಎಂದು ಕರೆಯಲಾಗುತ್ತಿತ್ತು. ಇದರ ತೂಕ ೯೬ ಗ್ರೇನಗಳೆಂದು ಕಾಂಗ್ರಿಂಗಟನ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[೮೨] ಆದರೆ ಅಲ್ತೇಕರ ಅವರು ಇದರ ತೂಕ ೬೩ ಗ್ರೇನಗಳೆಂದು ಅಭಿಪ್ರಾಯ ಪಟ್ಟಿದ್ದಾರೆ.[೮೩] ಕೂಹುಂಡಿನಾಡಿನ ಪ್ರದೇಶದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳ ಪರಸ್ಪರ ಸಂಬಂಧ ಮತ್ತು ವ್ಯತ್ಯಾಸಗಳು ಈ ಕೆಳಗಿನಂತಿವೆ.[೮೪]

೧ ಗದ್ಯಾಣ	=	೧೦ ಪಣ
೧ ಪಣ	=	೨೦ ವೀಸ
೧ ಪಣ	=	೪ ಹಾಗ
೧ ಹಾಗ	=	೨ ಬೇಳೆ
೧ ಪಣ	=	೬೪ ಕಾಣಿ
೧೧/೨ ತಾರ	=	೧ ಕಾಣಿ
೧ ಪಣ	=	೪ ಕಾಕಿಣಿ
೧ ದ್ರಮ್ಮ	=	೧೬ ಪಣ
೧ ನಿಷ್ಕ	=	೪ ಸುವರ್ಣ
೧ ನಿಷ್ಕ	=	೧೦ ಪಣ

ಕೂಹುಂಡಿನಾಡಿನ ರಾಯಬಾಗದ ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರ ಗಣಿತ' ಮತ್ತು 'ಲೀಲಾವತಿ ಗಣಿತ' ಎಂಬ ಕಾವ್ಯಗಳಲ್ಲಿ ಸಮಕಾಲೀನ ನಾಣ್ಯಗಳ ಪರಸ್ಪರ ಸಂಬಂಧ ಮತ್ತು ವ್ಯತ್ಯಾಸವನ್ನು ಈ ಕೆಳಗಿನಂತೆ ಗುರುತಿಸಿದ್ದಾನೆ.[೮೫]

೧ ವೀಸ	=	೪ ಕಾಣಿ
೧ ಗದ್ಯಾಣ	=	೧೦ ಪಣ
೧ ಹಣ	=	೨ ಅಡ್ಡ
೧ ಬೇಳೆ	=	೨ ವೀಸ
೧ ಕಾಣಿ	=	೪ ಗದ್ಯಾಣ

೧ ಹಾಗ	=	೫ ವೀಸ
೧ ವರಹ	=	೨ ಹೊನ್ನು
೧ ಅಡ್ಡ	=	೨ ಹಾಗ
೧ ವೀಸ	=	೨ ಅರೇವೀಸ
೧ ಪಣ	=	೪ ಹಾಗ
೧ ಹೊನ್ನು	=	೫ ಹಣ
೧ ಹಾಗ	=	೨ ಬೇಳೆ
೧ ಅರೇವೀಸ	=	೨ ಕಾಣಿ

ಸಾಮಾನ್ಯವಾಗಿ ಬಂಗಾರದ ನಾಣ್ಯಗಳು ೪೮ ಗುಂಜಿ ಎಂದರೆ ಅರ್ಧತೊಲೆ ತೂಕವನ್ನು ಹೊಂದಿದ್ದವು. 'ವೀಸ' ಎಂಬುದು ಚಿಕ್ಕ ನಾಣ್ಯವಾಗಿತ್ತು. ಒಂದು ಗದ್ಯಾಣದಲ್ಲಿ ೧೬೦ ವೀಸಗಳಿರುತ್ತಿದ್ದವು. ಒಂದು 'ಇಂಗಿನ ಪೆಟ್ಟಿಗೆಗೆ ಇಂಗು ಗದ್ಯಾಣಂ ತೂಕವಾರು ಹೊರಗಿನಿಂದ ಬಂದ ಗಂಧವನಕ್ಕೆ ಕಕ್ಷಭಂಡಕ್ಕೆ ಆ ಭಂಡಂ ಗದ್ಯಾಣಂ ತೂಕವಯ್ದು ಹೊರಗಿನಿಂದ ಬಂದ ಸೀರೆಯ ಕಡೆಗೆಗೆ ವೀಸ ಒಂದು, ಚೈತ್ರಕ್ಕೆ ಬೇಳೆ ಪವಿತ್ರಕ್ಕೆ ಬೇಳೆ, ಗದ್ಯಾಣ ಅಡ್ಡ ಹಾಗ, ಬೇಳೆ ವೀಸ' ಇವೆಲ್ಲವೂ ಪ್ರತ್ಯೇಕವಾದ ನಾಣ್ಯಗಳಾಗಿವೆ. ಇವುಗಳಲ್ಲಿ ವೀಸ ಅತ್ಯಂತ ಕನಿಷ್ಟ ಬೆಲೆ ಹೊಂದಿತ್ತು. ಈ ನಾಣ್ಯಗಳು ಕೂಹುಂಡಿನಾಡಿನಲ್ಲಿ ಬಳಕೆಯಲ್ಲಿದ್ದವು. ಇಲ್ಲಿ ತಾಮ್ರದ ನಾಣ್ಯಗಳ ಬಳಕೆಯೂ ಸಾಮಾನ್ಯವಾಗಿತ್ತು. ತಾಮ್ರದ ಒಂದು ನಾಣ್ಯಕ್ಕೆ 'ತಾರ' ಎಂದೂ, ಒಂದು ಹದಿನಾರನೆಯ ಭಾಗಕ್ಕೆ 'ವೀಸ' ಎಂದೂ, 'ಕಾಣಿ' ಎಂಬುದು ಚಿಕ್ಕ ನಾಣ್ಯವಿದ್ದು, ಅದು ಪಣದ ಅರವತ್ನಾಲ್ಕನೆಯ ಒಂದು ಭಾಗವಾಗಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ–

ವೀಸವೊಂದು ಹೊರಗಿನಿಂದ ಬಂದ ಗಂಧವಣಕ್ಕೆ
ಕಕ್ಷಭಂಡಕ್ಕೆ ಅ ಭಂಡಂ ಗದ್ಯಾಣಂ ತೂಕವಯ್ದು
ಹತ್ತಿಯ ಬಂಡಿಗೆ ತಾರ ಮೂರು, ಆ ಪೇರಿಂಗೆ
ಕಾಣಿವೊಂದು ‖ ಎಂದು ಪ್ರಸ್ತಾಪವಿದೆ.[೬೬]

೬.೧೧. ಬಡ್ಡಿ ವ್ಯವಹಾರ

ಕೂಹುಂಡಿನಾಡಿನ ಪ್ರದೇಶದಲ್ಲಿ 'ಬಡವರು' ಮತ್ತು 'ಧನಿಕರು' ಎಂಬೆರಡು ಪ್ರಮುಖ ವರ್ಗಗಳಿದ್ದವು. ಇವರಲ್ಲಿ ಅಧಿಕ ಆದಾಯ ಮತ್ತು ಸಂಪತ್ತನ್ನು ಹೊಂದಿದವರನ್ನು 'ಧನಿಕರು' ಎಂದು ಕರೆಯಲಾಗುತ್ತಿತ್ತು. ಈ ನಾಡಿನ ಆರ್ಥಿಕ ವ್ಯವಹಾರದಲ್ಲಿ ಬಡ್ಡಿ ವ್ಯವಹಾರ ಪ್ರಚಲಿತದಲ್ಲಿತ್ತೆಂಬುದು ಸಮಕಾಲೀನ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಬಡವರು ಧನಿಕರಿಂದ ಹಣವನ್ನು ಅಥವಾ ಮತ್ತಾವುದೋ ವಸ್ತುವನ್ನು ಸಾಲ ರೂಪದಲ್ಲಿ ಪಡೆದು ಅದನ್ನು ಹಿಂತಿರುಗಿಸುವ ಸಂದರ್ಭದಲ್ಲಿ ಅದಕ್ಕೆ ಸ್ವಲ್ಪ ಪ್ರಮಾಣವನ್ನು ಕೂಡಿಸಿ ಕೊಡುತ್ತಿದ್ದರು. ಇದನ್ನು ಬಡ್ಡಿ ವ್ಯವಹಾರ ಎಂದು ಕರೆಯಲಾಗುತ್ತದೆ. ಕೆಲವು ವ್ಯಕ್ತಿಗಳು ತಮ್ಮಲ್ಲಿದ್ದ ಹಣವನ್ನು ಬೇರೆಯವರಿಗೆ ಕೊಟ್ಟು ಅದಕ್ಕೆ ಬಡ್ಡಿ ಪಡೆಯುತ್ತಿದ್ದರು. ಇವರನ್ನು 'ಬಡ್ಡಿ ವ್ಯವಹಾರಿಗಳು' ಅಥವಾ 'ಬಡ್ಡಿವಂತರು' ಎಂದು ಕರೆಯಲಾಗುತ್ತಿತ್ತು. ಹಾಗೆಯೇ ಅಡಚಣಿ ಇರುವವರು

ಬೆಲೆಬಾಳುವ ವಸ್ತು ಅಥವಾ ಬಂಗಾರವನ್ನು ಅಡ ಇಟ್ಟು ಧನಿಕರಿಂದ ಹಣ ಪಡೆಯುವ ಪದ್ಧತಿ ಕೂಹುಂಡಿನಾಡಿನಲ್ಲಿ ಪ್ರಚಲಿತದಲ್ಲಿತ್ತು. ವ್ಯಕ್ತಿಗೆ ತ್ವರಿತವಾಗಿ ಬೇಕಾದ ಹಣವನ್ನು ಪೂರೈಸಲು ಇಂತಹ ಹಣವಂತರು ಮುಂದೆ ಬಂದು ಹಣ ಕೊಡುತ್ತಿದ್ದರು. ಅಂದು ವ್ಯಕ್ತಿಗೆ ಮತ್ತು ಅವನ ಮಾತಿನಲ್ಲಿ ಹೆಚ್ಚಿನ ವಿಶ್ವಾಸಗಳಿದ್ದವು. ಹೂಲಿಯ ಕ್ರಿ.ಶ. ೧೧೧೭ರ ಶಾಸನದಲ್ಲಿ–

ಕೊಟ್ಟನಾ ಕೆಯ್ಯ ತೆರೆಗೆ ಮೊದಲಿಕಿದಲೀಯದೆ
ಬಡ್ಡಿಯಿಂದು ತೆರೆಯನಿಕ್ಕುವನ್ತಾಗಿರಾರು ಗದ್ಯಾಣ
ಪೊನ್ನಂ ಕೊಟ್ಟನ್ತಿಧರ್ಮಮಂ ಸಾಸಿರ್ವ್ವರು
ಪ್ರತಿಪಾಳಿಸುವರ್ ॥

ಎಂಬ ಪ್ರಸ್ತಾಪವಿದೆ.[೮೭] ಜೀವನೋಪಾಯ ಇತ್ಯಾದಿ ಸಾಮಾಜಿಕ ಹಿನ್ನೆಲೆಯಲ್ಲಿ ವ್ಯಕ್ತಿಗಳು ಸಾಲ ಮಾಡುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಧನಿಕರಿಂದ ಸಾಲ ಪಡೆಯುವುದು ಕಳಂಕ ಎಂದು ಭಾವಿಸುತ್ತಿದ್ದರು. ಆದ್ದರಿಂದ ಬೇಗ ಸಾಲ ಮುಕ್ತರಾಗಬೇಕೆಂಬ ಭಾವನೆ ಹೊಂದಿದ್ದರು. ಅಡವಿಟ್ಟ ವಸ್ತುವನ್ನು ಬೇಗನೆ ಹಿಂಪಡೆಯಲು ಪ್ರಯತ್ನಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಾಲವನ್ನು ಬೇಗನೆ ತೀರಿಸುವ ಇಚ್ಚೆಯಿಂದ ಸಕಾಲದಲ್ಲಿ ಬಡ್ಡಿ ಸಮೇತವಾಗಿ ಹಿಂತಿರುಗಿಸುತ್ತಿದ್ದರು.

೬.೧೨. ಅಳತೆ ಮತ್ತು ತೂಕ ಮಾಪನಗಳು

ಕೂಹುಂಡಿನಾಡಿನ ಪ್ರದೇಶದಲ್ಲಿ ಭೂಮಿ, ಭತ್ತ, ಗೋಧಿ, ಸಾಸಿವೆ, ಮೆಣಸು, ಜೋಳ, ಸಜ್ಜೆ, ಕಡಲೆ, ಬೇಳೆಕಾಳು, ಮೆಣಸು ಮೊದಲಾದ ಧಾನ್ಯಗಳನ್ನು ಅಳೆಯಲು ವಿವಿಧ ಅಳತೆ ಮಾಪನಗಳು ಪ್ರಚಲಿತದಲ್ಲಿದ್ದವು. ಅವುಗಳಲ್ಲಿ ಕೊಳಗ, ಬಳ್ಳ, ಮಾನ, ಸಲ್ಲಗೆ, ಸಟ್ಟಿಗ, ಸೊಂಟಿಗೆ, ಸೊಳಸ, ದತಿ, ಪಳಿಗೆ, ದಳ, ಹಾಸಿ, ಸೆಡೆಗೆ ಮೊದಲಾದವುಗಳು ಪ್ರಮುಖವಾಗಿವೆ. ರಾಯಬಾಗದ ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರ ಗಣಿತ' ಕಾವ್ಯದಲ್ಲಿ–

೪ ಗಿದ್ದನ	=	೧ ಸೊಲ್ಲಗೆ
೪ ಸೊಲ್ಲಗೆ	=	೧ ಮಾನ
೪ ಮಾನ	=	೧ ಬಳ್ಳ
೪ ಬಳ್ಳ	=	೧ ಕೊಳಗ
೨೦ ಕೊಳಗ	=	೧ ಖಂಡುಗ

ಎಂದು ಸಮಕಾಲೀನ ಅಳತೆ ಮಾಪನಗಳನ್ನು ಪ್ರಸ್ತಾಪಿಸಿದ್ದಾನೆ.[೮೮] ಕಲ್ಲೊಳೆಯ ಕ್ರಿ.ಶ. ೧೨೦೪, ಬೆಳಗಾವಿಯ ಕ್ರಿ.ಶ. ೧೨೦೪ರ, ತೇರದಾಳದ ಕ್ರಿ.ಶ. ೧೧೨೩ರ ಮೊದಲಾದ ಶಾಸನಗಳಲ್ಲಿ ಸೊಲ್ಲಿಗೆ, ಬಳ್ಳ, ಹೇರು, ಮಣ, ಹೊತ್ತಳ, ಕಟ್ಟೋಲೆ, ಗೊಳವ, ಅಚ್ಚು ಇತ್ಯಾದಿ ಅಳತೆ ಮಾಪನಗಳ ನಿರೂಪಣೆಗಳಿವೆ. ಈ ಅಳತೆ ಮಾಪನಗಳು ವ್ಯಾಪಾರದ ಮಾನದಂಡಗಳಾಗಿ ಕೂಹುಂಡಿನಾಡಿನ ಪ್ರದೇಶದಲ್ಲಿ ಬಳಕೆಯಲ್ಲಿದ್ದವು. ವ್ಯಾಪಾರಸ್ಥರು ತಮ್ಮ ವ್ಯಾಪಾರದಲ್ಲಿ ಸರಕುಗಳನ್ನು ತೂಗಿ ಕೊಡಲು ವಿವಿಧ ತೂಕಗಳನ್ನು ಉಪಯೋಗಿಸುತ್ತಿದ್ದರು. ಅರಿಷಿಣ, ಅಜವಾನ, ಸಾಸಿವೆ, ಜೀರಿಗೆ, ಅಲ್ಲ, ಬೆಲ್ಲ, ಸಕ್ಕರೆ ಮೊದಲಾದ

ಸರಕುಗಳನ್ನು ತೂಗಿ ಕೊಡುತ್ತಿದ್ದರು. ಎಲೆ, ಅಡಿಕೆ, ಅರಿಷಿಣ, ಬೆಲ್ಲದಚ್ಚುಗಳನ್ನು ಎಣಿಕೆ ಮಾಡಿಕೊಡುತ್ತಿದ್ದರು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_

ಗದ್ಯಾಣಂ ತೂಕವಯ್ದುಮಾನ ಅರಿಷಿಣ ಫಲಹತ್ತು
ಅಡಕೆಯಿಪ್ಪತ್ತು ತೆಂಗಿನಕಾಯಿ ಹೇರಿಂಗೆ ಕಾಯೊಂದು
ಓಲೆಯ ಸೊಡೆರಡು ಬೆಲ್ಲದಚ್ಚು ಹದಿನೈದು ಬಾಳೆಯ
ಹೇರಿಂಗಾಕಾಯಾರು ಕಾಯ್ನೂರು ನೆಲ್ಲಿಯಕಾಯಿ
ಕಾಯಬಳ್ಳವೊಂದು ॥

ಎಂಬ ಉಲ್ಲೇಖವಿದೆ.[೯೦] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ_ಎತ್ತಿನ ಹೇರಿಂಗೊಂಮನ.................. ಎಂಬ ಪ್ರಸ್ತಾಪವಿದೆ.[೯೧] ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ 'ಸೊಟ್ಟಿಗೆ' ಎಂಬ ನಿರೂಪಣೆಯಿದೆ.[೯೨] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ_ಅಡಕೆಹೊಂಗೆ ಎಲೆಯ ಹೇರಿಂಗೆ |............
ಎಂಬ ಉಲ್ಲೇಖವಿದೆ.[೯೩] ಇಲ್ಲಿ ವಸ್ತುಗಳನ್ನು ವಿವಿಧ ತೂಕ ಮತ್ತು ಮಾಪನಗಳಿಂದ ಅಳೆದು ಅಥವಾ ಎಣಿಕೆ ಮಾಡಿ ದಾನ ಕೊಟ್ಟಿರುವುದು ಸ್ಪಷ್ಟವಾಗುತ್ತದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಭೂಮಿಯನ್ನು ಅಳೆಯಲು ಗೇಣಿ, ಗಳೆ, ಹಂಗಕೋಲು, ಗಡಿಗಂಬ, ಮತ್ತರು, ಕುಳಿ, ಹಸ್ತ, ಕಮ್ಮ, ಕೋಲು, ಕೊಳಗ, ಕೂಂಡಿಕೋಲು ಮೊದಲಾದ ಅಳತೆಗಳನ್ನು ಮಾನದಂಡವಾಗಿ ಬಳಸಲಾಗುತ್ತಿತ್ತು. ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ_

ಕೈಯ ಕೈಯಗಲ ಕೈನೀಳ ನಾವಿದಿಗೆಯ ೨೦೦ ಮನ ಕೈ ೬ |...............

ಎಂಬ ಅಳತೆಗಳ ಪ್ರಸ್ತಾಪವಿದೆ.[೯೪] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ_

ಕೋಲು ಗಳೆ ಮತ್ತರು ಕೋಲಾಳು ನಾಲ್ಗೇಣ |.........

ಎಂಬ ಅಳತೆಗಳ ನಿರೂಪಣೆಯಿದೆ.[೯೫] ಹಣ್ಣಿಕೇರಿಯ ಕ್ರಿ.ಶ. ೧೨೯೮ರ ಶಾಸನದಲ್ಲಿ_

ಕಂಬ ಹಸ್ತ ಕುಳಿ ಮತ್ತರು |.................... ಎಂಬ ಅಳತೆಗಳ ಉಲ್ಲೇಖವಿದೆ.[೯೬]

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_ಕೋಲು ಮತ್ತರು ಕಮ್ಮ ಹಾರುವಕೋಲು |.............. ಎಂಬ ಅಳತೆಗಳ ಪ್ರಸ್ತಾಪವಿದೆ.[೯೭] ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ_ಕಂಬ ಭೂಮಿಕಂಬ ಮುಗಿಲ ಹಸ್ತ ಬಣಂಬೆ ಹಸ್ತ ಉಬ್ಬಾನಿಕ ಗೆಯಿ ಗೃಹಹಸ್ತ ಕೊಳಗ ನೀಳಹಸ್ತ.....
ಎಂಬ ಅಳತೆಗಳ ಉಲ್ಲೇಖವಿದೆ.[೯೮] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ_ಕೂಂಡಿಯ ಕೋಲು ಕೊಂಡಿಯ ಕೋಲಹಸ್ತ |........ ಎಂಬ ಅಳತೆಗಳ ಪ್ರಸ್ತಾಪವಿದೆ.[೯೯] ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ 'ನಿವರ್ತನ' ಎಂಬ ಅಳತೆಯ ಉಲ್ಲೇಖವಿದೆ.[೧೦೦]

ಕೂಹುಂಡಿನಾಡಿನ ಪ್ರದೇಶದಲ್ಲಿ ಶೌರ್ಯ–ಸಾಹಸ ಮೆರೆದವರ ಸ್ಮರಣಾರ್ಥವಾಗಿ ಅವರ ಹೆಸರಿನ ಅಳತೆ ಮಾಪನಗಳೂ ಬಳಕೆಯಲ್ಲಿದ್ದವು. 'ಭರಮ ಭಾಮನಕೋಲ್', 'ಮರೆಪರ ಮಾರಿಯಕೋಲ್' ಮಲ್ಲಗಾಳಗದಲ್ಲಿ ಜಯಿಸಿ ಹೆಸರುವಾಸಿಯಾದ 'ಮುಳುಗುಂದದ ಮಲ್ಲಮಾರಿಯಕೋಲ್' ಎಂಬ ಅಳತೆಯ ಕೋಲುಗಳನ್ನು ಬಳಸಿ ಭೂಮಿಯನ್ನು ದಾನಬಿಟ್ಟ ಉದಾಹರಣೆಗಳಿವೆ.[೧೦೧] ನೇಸರಗಿಯ

ಕ್ರಿ.ಶ. ೧೨೧೯ರ ಶಾಸನದಲ್ಲಿ_ಕರಜದ ಕಡಿಮೆಣ್ಣಕೋಲಲ್ಲಿ ಶ್ರೀಹಬ್ಬೇಶ್ವರ ದೇವರಿಗೆ ಕೊಟ್ಟ ಕಂಮ ೨೦೦ |........ಹಸುಡಿಯ ದಾರಿಯಿಂ ಬಡಗಲು ಕಡಿಮಣಕೋಲಿನಲ್ಲೆಳೆದು|...ಎಂಬ ಅಳತೆ ಮಾಪನಗಳ ಪಸ್ತಾಪವಿದೆ.[೧೦೨] ಬಡ್ಲಿಯ ಕ್ರಿ.ಶ. ೧೨೪೬ರ ಶಾಸನದಲ್ಲಿ 'ಕಡಿಮಣ' ಎಂಬ ಅಳತೆಯ ನಿರೂಪಣೆಯಿದೆ.[೧೦೩] ಇದರಂತೆ ದೇವರ ಹೆಸರಿನಲ್ಲಿಯೂ ಅಳತೆ ಮಾಪನಗಳನ್ನು ಉಪಯೋಗಿಸಲಾಗುತ್ತಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ_ ಕೆಂನೇಶ್ವರ ದೇವರ ಕೆಯಂ |.......

ಎಂಬ ಅಳತೆಯ ಉಲ್ಲೇಖವಿದೆ.[೧೦೪] ಸವದತ್ತಿಯ ಕ್ರಿ.ಶ. ೧೦೮೭ರ ಶಾಸನದಲ್ಲಿ_ ಪೊಲದಂಕೇಶ್ವರದ ಗಡಿಗಂಬ |.......... ಎಂಬ ಅಳತೆ ಮಾಪನದ ಪ್ರಸ್ತಾಪವಿದೆ.[೧೦೫] ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ_ ದಿಡಿಗೇಶ್ವರದೇವರ ಕೋಲು |...........ಎಂಬ ಅಳತೆ ಮಾಪನದ ನಿರೂಪಣೆಯಿದೆ.[೧೦೬]

೬.೧೩. ಆದಾಯಗಳು

ರಾಜ್ಯದಲ್ಲಿ ಸುವ್ಯವಸ್ಥಿತವಾದ ಆಡಳಿತದ ಮುನ್ನಡೆಗೆ ಸುಭದ್ರವಾದ ಆರ್ಥಿಕ ವ್ಯವಸ್ಥೆ ಪ್ರಮುಖ ಅಂಶವಾಗಿತ್ತು. ಅಂತಾಗಿ ಕೂಹುಂಡಿನಾಡಿನ ಪ್ರದೇಶವನ್ನಾಳಿದ ಸಮಕಾಲೀನ ಆಳರಸರು ತಮ್ಮ ಖಜಾನೆಯನ್ನು ಯಾವಾಗಲೂ ತುಂಬಿಸಿಕೊಂಡಿರುತ್ತಿದ್ದರು. ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ' ಕೃತಿಯಲ್ಲಿ ರಾಜ್ಯದ ಸಪ್ತಾಂಗಗಳಾದ ರಾಜ, ಅಮಾತ್ಯ, ರಾಜ್ಯ, ದುರ್ಗ, ಕೋಶ, ಸೈನ್ಯ, ಮಿತ್ರ ಇವುಗಳನ್ನು ಮುನ್ನಡೆಸಿಕೊಂಡು ಹೋಗಬೇಕಾದರೆ ಹಣಕಾಸಿನ ಅವಶ್ಯಕತೆಯಿದೆ ಎಂದು ಸೂಚಿಸಿದ್ದಾನೆ. ಅರಸನು ತನ್ನ ರಾಜ್ಯ ಮತ್ತು ಪ್ರಜೆಗಳನ್ನು ಸುಖವಾಗಿರಿಸಲು ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾಗಿತ್ತು. ಪ್ರಜೆಗಳಿಗೆ ಆಹಾರ, ಬಟ್ಟೆ, ನೀರು, ದೀಪ, ಸಾರಿಗೆ ಮೊದಲಾದ ಮೂಲಭೂತ ಆವಶ್ಯಕತೆಗಳನ್ನು ಪೂರೈಸಲು ಹಣ ಮುಖ್ಯವಾಗಿತ್ತು. ಆಳರಸರು ಹಣ, ವಸ್ತು, ಧಾನ್ಯ, ಬಂಗಾರ, ಮುತ್ತು, ರತ್ನ ಮೊದಲಾದ ಆರ್ಥಿಕ ಮೂಲಗಳನ್ನು ತೆರಿಗೆ ರೂಪದಲ್ಲಿ ಸಂಗ್ರಹಿಸುತ್ತಿದ್ದರು. ದಾನ, ದತ್ತಿ, ದಂಡಗಳನ್ನು ವಿಧಿಸುವುದರ ಮೂಲಕ ಹಣ ರಾಜಬೊಕ್ಕಸ ಸೇರುತ್ತಿತ್ತು. ವಾರಸುದಾರರಿಲ್ಲದ ಆಸ್ತಿಗಳು ಅರಸನ ಬೊಕ್ಕಸವನ್ನು ಸೇರುತ್ತಿದ್ದವು. ಹೀಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಹಣದಿಂದ ಅರಸರು ಪ್ರಜೆಗಳ ಬೇಕು-ಬೇಡಿಕೆಗಳನ್ನು ಮತ್ತು ಅವಶ್ಯಕ ಅಭಿವೃದ್ಧಿಯನ್ನು ಕೈಗೊಳ್ಳಲು ಬಳಕೆ ಮಾಡುತ್ತಿದ್ದರು. ಪ್ರಜೆಗಳಿಂದ ಸಂಗ್ರಹಿಸುವ ತೆರಿಗೆ ಹಣ ರಾಜಬೊಕ್ಕಸ ಸೇರುತ್ತಿತ್ತು. ಆಳರಸರು ಇದನ್ನು ವ್ಯವಸ್ಥಿತವಾಗಿ ಸಂರಕ್ಷಿಸಿಕೊಂಡು ಬರುತ್ತಿದ್ದರು. ಪ್ರತಿಯೊಬ್ಬ ಪ್ರಜೆ ಕೊಡುವ ತೆರಿಗೆ ದೇಶದ ಸಂರಕ್ಷಣೆ, ನಿತ್ಯ ಸಾಮಗ್ರಿಗಳ ಪೂರೈಕೆ, ಗ್ರಾಮಗಳ ಸುಧಾರಣೆ ಮೊದಲಾದ ಕಾರ್ಯಗಳಿಗೆ ಉಪಯೋಗವಾಗುತ್ತಿತ್ತು. 'ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳು' ಎಂದು ಗೌತಮಸಂಹಿತೆ, ನಾರದಸಂಹಿತೆ ಮೊದಲಾದ ಸ್ಮೃತಿಗಳು ಭಾವಿಸುತ್ತವೆ.[೧೦೭] 'ಧರ್ಮದಿಂದ ನಮ್ಮನ್ನಾಳುವ ರಾಜನಿಗೆ ದೇಶದಲ್ಲಿ ಬೆಳೆಯುವ ಆರನೆಯ ಒಂದು ಭಾಗವನ್ನು ಸಲ್ಲಿಸಬೇಕೆಂದು' ವಶಿಷ್ಠರು ಅಭಿಪ್ರಾಯ ಪಡುತ್ತಾರೆ.[೧೦೮]

೬.೧೪. ತೆರಿಗೆ ಮತ್ತು ಸುಂಕಗಳು

ರಾಜ್ಯದ ಸಪ್ತಾಂಗಗಳಲ್ಲಿ ಕೋಶವೂ ಒಂದಾಗಿದೆ. ಇದು ಯಾವಾಗಲೂ ಸಮೃದ್ಧ ಮತ್ತು ಸುವ್ಯವಸ್ಥಿತವಾಗಿರಲು ಇದಕ್ಕೆ ನಿಯಮಿತವಾಗಿ ಆದಾಯ ಬರುವಂತೆ ಮಾಡಿಕೊಂಡ ವ್ಯವಸ್ಥೆಯೇ ತೆರಿಗೆ ಸಂಗ್ರಹಣೆಯಾಗಿದೆ. ಕೂಹುಂಡಿನಾಡಿನಲ್ಲಿ ತೆರಿಗೆ ಮತ್ತು ಸುಂಕಗಳು ಆಳರಸರ ಬೊಕ್ಕಸದ ಪ್ರಮುಖ ಆದಾಯದ ಮೂಲವಾಗಿದ್ದವು. ಈ ನಾಡಿನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ವಿವಿಧ ತೆರಿಗೆಗಳು ಮತ್ತು ಸುಂಕಗಳು ಈ ಕೆಳಗಿನಂತಿವೆ.

೬.೧೪.೧. ಭೂಮಿ ಮತ್ತು ಆಸ್ತಿ ತೆರಿಗೆ

ಕೂಹುಂಡಿನಾಡಿನ ಪ್ರದೇಶದಲ್ಲಿ ಭೂಮಿ ಮತ್ತು ಆಸ್ತಿಯ ಮೇಲೆ ತೆರಿಗೆಯನ್ನು ರಾಜ ಬೊಕ್ಕಸಕ್ಕೆ ಕೊಡುವ ವ್ಯವಸ್ಥೆ ಪ್ರಚಲಿತದಲ್ಲಿತ್ತು. ರಾಜ್ಯದ ಅಭಿವೃದ್ಧಿಯ ಸಲುವಾಗಿ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ಪ್ರಜೆಗಳ ವಾರ್ಷಿಕ ಉತ್ಪಾದನೆ ಮತ್ತು ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಭೂ–ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು. ದತ್ತಿಯಾಗಿ ಕೊಡಲಾಗಿದ್ದ ಭೂಮಿಗೆ ಇಂತಿಷ್ಟು 'ಅರುವಣ'ಗಳನ್ನು ಕೊಡಬೇಕಾಗಿತ್ತು. ಒಂದು ವೇಳೆ ಭೂಮಿಯಲ್ಲಿ ಫಸಲು ಬರದಿದ್ದರೆ ಮುಂದಿನ ವರ್ಷ ಎರಡನ್ನೂ ಸೇರಿಸಿ ಕೊಡುವ ರಿಯಾಯಿತಿ ವ್ಯವಸ್ಥೆಯಿತ್ತು. 'ಅಂತುಮತ್ತರಪನ್ನೆರಡಕಂ ಅರುವಣ ಗದ್ಯಾಣ ೧ ಪಣ ೩' ಎಂದು ನಿಗಧಿ ಮಾಡಲಾಗಿತ್ತು.[೧೦೯] ಭೂ ತೆರಿಗೆಯನ್ನು ರಾಜನ, ಅರ್ಥಮಂತ್ರಿಯ ಸಲಹೆಯಂತೆ ಹೆಚ್ಚಿಸಲಾಗುತ್ತಿತ್ತು. ಸ್ಥಿರಾಸ್ತಿಯಾದ ಮನೆಗಳ ಮೇಲೆ ತೆರಿಗೆಯನ್ನು ಹೇರುವ ಪದ್ಧತಿ ಜಾರಿಯಲ್ಲಿತ್ತು. ಮನೆ ನಿವೇಶನದ ಮಾಲೀಕರಿಗೆ ತೆರಿಗೆ ವಿಧಿಸಲಾಗುತ್ತಿತ್ತು. ರಾಜನ ಆಸ್ಥಾನದ ಪ್ರಜೆಗಳೂ ರಾಜನ ಬೊಕ್ಕಸಕ್ಕೆ ಮನೆ ತೆರಿಗೆಯನ್ನು ಕೊಡಬೇಕಾಗುತ್ತಿತ್ತು. ಅದನ್ನು 'ಮನೆಯ ನಿವೇಶನಂ ಮನೆಯ ನೆಲಸಣಂ' ಎಂದು ಮನೆಗಳಿಗೆ ಮತ್ತು ಮನೆಯ ನಿವೇಶನಗಳಿಗೆ ತೆರಿಗೆಯನ್ನು ಹಾಕುವ ಪದ್ಧತಿ ಜಾರಿಯಲ್ಲಿತ್ತು.[೧೧೦] ಆಳರಸರು ಪ್ರಜೆಗಳ ತೆರಿಗೆಯನ್ನು ರಾಜ್ಯದ ಅಭಿವೃದ್ಧಿಗೆ ವಿನಿಯೋಗಿಸುತ್ತಿದ್ದರು. ಭೂಮಿ ಮತ್ತು ಆಸ್ತಿ ತೆರಿಗೆಯನ್ನು ಸಂಗ್ರಹಿಸಲು 'ತೆರಿಗೆ ಸಂಗ್ರಹಕಾರ' ಎಂಬ ಅಧಿಕಾರಿಗಳಿದ್ದರು.

೬.೧೪.೨. ವೃತ್ತಿ ತೆರಿಗೆ

ಕೂಹುಂಡಿನಾಡಿನಲ್ಲಿ ಪ್ರಜೆಗಳು ಜೀವನೋಪಾಯಕ್ಕೆ ವಿವಿಧ ಕೆಲಸಗಳನ್ನು ಮಾಡುತ್ತಿದ್ದರು. ಕೆಲಸದಿಂದ ಬಂದ ಸಂಪಾದನೆಯ ಹಣದಲ್ಲಿ ತೆರಿಗೆ ಕೊಡುವ ಪದ್ಧತಿ ಜಾರಿಯಲ್ಲಿತ್ತು. ಬಂಗಾರದ ಕೆಲಸ ಮಾಡುವ ಅಕ್ಕಸಾಲಿಗರು ತಮ್ಮ ವೃತ್ತಿಯಿಂದ ಗಳಿಸುವ ಆದಾಯದಲ್ಲಿ ತೆರಿಗೆಯನ್ನು ಕೊಡುತ್ತಿದ್ದರು. ಇದನ್ನು 'ಚಿನ್ನದೆರೆ' ಎಂದು ಕರೆಯಲಾಗಿದೆ.[೧೧೧] ಅಗಸರು ಬಟ್ಟೆ ತೊಳೆಯುವ ಕಾರ್ಯದಿಂದ ಬಂದ ಆದಾಯದಲ್ಲಿ ತೆರಿಗೆ ಕೊಡುತ್ತಿದ್ದರು. ಇದನ್ನು 'ಅಗಸದೆರೆ' ಎಂದು ಕರೆಯಲಾಗಿದೆ.[೧೧೨] 'ಖನಿ'ಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಆದಾಯದ ಲಾಭದಲ್ಲಿ ಸುಂಕವನ್ನು ಸಂಗ್ರಹ ಮಾಡಲಾಗುತ್ತಿತ್ತು. ಖನಿ ಕೆಲಸ ಮಾಡುವವರಿಗೆ 'ವಡ್ಡರು' ಎಂದು ಕರೆಯಲಾಗುತ್ತಿತ್ತು. ಇವರಿಂದ ವಸೂಲಿ ಮಾಡುವ ಸುಂಕವನ್ನು 'ವಡ್ಡದೆರೆ' ಎಂದು ಕರೆಯಲಾಗಿದೆ.[೧೧೩] ಕ್ಷೌರಿಕರು ಕೊಡುವ ತೆರಿಗೆಯನ್ನು 'ನಾವಿದೆರೆ' ಎಂದು

ಕರೆಯಲಾಗುತ್ತಿತ್ತು.[೧೧೪] ಜೀವನೋಪಾಯಕ್ಕೆ ಕುರಿಗಳನ್ನು ಸಾಕುವ ಜನಾಂಗವನ್ನು ‘ಕುರುಬರು’ ಎಂದು ಕರೆಯಲಾಗುತ್ತಿತ್ತು. ಇವರು ‘ಕುರಿದೆರೆ’ ಎಂಬ ತೆರಿಗೆಯನ್ನು ಕೊಡುತ್ತಿದ್ದರು.[೧೧೫] ಕಟ್ಟಿಗೆಯ ಕೆಲಸ ಮಾಡುವ ಬಡಿಗರು ‘ಕೊಡತಿವಣ’ ಎಂಬ ತೆರಿಗೆ ಕೊಡುತ್ತಿದ್ದರು. ಸೌಂದರ್ಯ ನೋಡಿಕೊಳ್ಳಲು ಕನ್ನಡಿ ಬಳಸಲಾಗುತ್ತಿತ್ತು. ಕನ್ನಡಿ ತಯಾರಕರು ತಮ್ಮ ವ್ಯಾಪಾರ ವೃತ್ತಿಯಲ್ಲಿ ಬಂದ ಆದಾಯಕ್ಕೆ ಸುಂಕವನ್ನು ಕೊಡಬೇಕಾಗುತ್ತಿತ್ತು. ಇವರು ಕೊಡುವ ತೆರಿಗೆಯನ್ನು ‘ಕನ್ನಡಿವನ’ ಎಂದು ಕರೆಯಲಾಗುತ್ತಿತ್ತು.[೧೧೬] ಮಕ್ಕಳಿಗಾಗಿ ಆಟಿಕೆ ಸಾಮಾನುಗಳನ್ನು ಮಾರಾಟ ಮಾಡುವ ಮಣಿಗಾರರಿಗೆ ಸುಂಕ ಹಾಕುತ್ತಿದ್ದರು. ಈ ಸುಂಕವನ್ನು ‘ಮಣಿದೆರೆ’ ಎಂದು ಕರೆಯಲಾಗುತ್ತಿತ್ತು.[೧೧೭] ಗಂಧ ಮಾರುವ ವ್ಯಾಪಾರಸ್ಥರು ‘ಗಂಧದೆರೆ’ ಎಂಬ ತೆರಿಗೆಯನ್ನು ಕೊಡುತ್ತಿದ್ದರು.[೧೧೮]

ಸೂಳೆಗಾರಿಕೆ ವೃತ್ತಿ ಪ್ರಾಚೀನ ಕಾಲಾವಧಿಯ ಸಮಾಜದಲ್ಲಿ ಪ್ರಮುಖವಾದ ಸ್ಥಾನಮಾನವನ್ನು ಪಡೆದಿತ್ತು. ವಿವಾಹ ವ್ಯವಸ್ಥೆಯ ಅಸ್ತಿತ್ವದ ಜೊತೆಗೆ ‘ಸೂಳೆ’ ಸಮಾಜವೂ ಬೆಳೆದು ಬಂದಿದೆ. ಇವರನ್ನು ದೇವರ ಸೂಳೆಯರು, ವೈಯಕ್ತಿಕ ಸೂಳೆಯರು, ಸಾಮೂಹಿಕ ಸೂಳೆಯರು ಎಂದು ಮೂರು ರೀತಿಯಲ್ಲಿ ವಿಂಗಡಿಸಲಾಗಿತ್ತು. ಇವರು ತಮ್ಮ ವೃತ್ತಿಯಲ್ಲಿ ಬರುವ ಆದಾಯದಲ್ಲಿ ರಾಜ್ಯದ ಬೊಕ್ಕಸಕ್ಕೆ ತೆರಿಗೆಯನ್ನು ಕೊಡುವ ಪದ್ಧತಿಯಿತ್ತು. ಇದನ್ನು ‘ಸೂಳೆದೆರೆ’ ಎಂದು ಕರೆಯಲಾಗುತ್ತಿತ್ತು.[೧೧೯] ದೇವಭೋಗಕ್ಕೆ ಕೊಡಮಾಡಿದ ಸೂಳೆಯರನ್ನು ‘ದೇವಸೂಳೆಯರು’ ಎಂದು ಕರೆಯಲಾಗುತ್ತಿತ್ತು. ಇಂಥ ಸೂಳೆಯರಿಗೆ ದಾನ ಬಿಟ್ಟ ಉಲ್ಲೇಖಗಳು ಕೂಹುಂಡಿನಾಡಿನ ಶಾಸನಗಳಲ್ಲಿ ದೊರೆಯುತ್ತವೆ.[೧೨೦] ಹೀಗೆ ವ್ಯಾಪಾರ ಮಳಿಗೆಗಳಲ್ಲಿ ಸ್ಥಳೀಯ ಮತ್ತು ಬೇರೆಡೆಯಿಂದ ಆಗಮಿಸಿದ ವ್ಯಾಪಾರಸ್ಥರಿಂದ ವ್ಯಾಪಾರ ನಡೆಯುತಿತ್ತು.[೧೨೧] ವ್ಯಾಪಾರಸ್ಥರು ತಾವು ಮಾರಿದ ಸರಕುಗಳಿಗೆ ಸುಂಕ ಕೊಡುತ್ತಿದ್ದರು. ಇದನ್ನು ವಸೂಲಿ ಮಾಡಲು ಒಬ್ಬ ಅಧಿಕಾರಿಯನ್ನು ನೇಮಿಸಲಾಗಿತ್ತು. ಇವರು ವಸೂಲಿ ಮಾಡಿದ ತೆರಿಗೆಯನ್ನು ರಾಜ್ಯ ಬೊಕ್ಕಸಕ್ಕೆ ಒಪ್ಪಿಸುತ್ತಿದ್ದರು.

೬.೧೪.೩. ವಾಣಿಜ್ಯ ತೆರಿಗೆ

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಆಳರಸರು ವ್ಯಾಪಾರ ಮತ್ತು ವಾಣಿಜ್ಯಕ್ಕೆ ವಿಶೇಷವಾದ ಉತ್ತೇಜನ ಕೊಡಮಾಡಿದ್ದರು. ಇದರಿಂದ ಇಲ್ಲಿಗೆ ಬೇರೆಡೆಯ ವರ್ತಕರು ವ್ಯಾಪಾರಕ್ಕೆ ಬರುತ್ತಿದ್ದರು. ವ್ಯಾಪಾರಕ್ಕಾಗಿ ಮಲೆಯಾಳ (ಇಂದಿನ ಕೇರಳ), ಸೌರಾಷ್ಟ್ರ (ಇಂದಿನ ಗುಜರಾತ), ತೆಂಕಣದ (ಇಂದಿನ ದಕ್ಷಿಣ ಭಾರತದ ಪ್ರದೇಶ) ವ್ಯಾಪಾರಿಗಳು ಆಗಮಿಸುತ್ತಿದ್ದರು. ಈ ನಾಡಿಗೆ ಬೇರೆ ಬೇರೆ ಪ್ರದೇಶಗಳಿಂದ ಕುದುರೆಗಳನ್ನು ವ್ಯಾಪಾರಕ್ಕಾಗಿ ತೆಗೆದುಕೊಂಡು ಬರುತ್ತಿದ್ದರು. ಒಂದು ಕುದುರೆಯನ್ನು ಮಾರಿದರೆ ‘ಕುದುರೆಗೆನೆಲಮಟ್ಟು ಹಾಗವೊಂದು’ ತೆಂಕಣನಾಡಿನ ವ್ಯಾಪಾರಸ್ಥರಿಗೆ ಸುಂಕವನ್ನು ವಿಧಿಸಲಾಗುತ್ತಿತ್ತು. ಇಲ್ಲಿಯ ಕೆಲವು ಶಾಸನಗಳಲ್ಲಿ ‘ತೆಂಕಲನಡೆವವರ್ಕ್ಕೆ ಸುಂಕಹಾಗವೊಂದು’ ಎಂಬ ಸುಂಕ ವಿಧಿಸಿದ ವಿವರಗಳಿವೆ.[೧೨೨] ಮಲೆಯಾಳ ವ್ಯಾಪಾರಸ್ಥರು ವ್ಯಾಪಾರ ಮಾಡಲು ಕೂಹುಂಡಿನಾಡಿನ ಪಟ್ಟಣಗಳಿಗೆ ಆಗಮಿಸುತ್ತಿದ್ದರು. ಅವರ ವ್ಯಾಪಾರಕ್ಕೂ ಇಲ್ಲಿ ಸುಂಕವನ್ನು ವಿಧಿಸಲಾಗುತ್ತಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ—....’ಮಲೆಯಾಳದ ಕುದುರೆಗೆ ಹಾಗವೊಂದು’ |........ಎಂಬ ಸುಂಕವನ್ನು

ವಿಧಿಸಿದ ಉಲ್ಲೇಖವಿದೆ. ಈ ನಾಡಿಗೆ ಹೊರಗಿನಿಂದ ಬಂದು ಇಲ್ಲಿ ವಿವಿಧ ಸರಕುಗಳನ್ನು ಅಂದರೆ 'ಕಡೆಗಿಗೆ ವೀಸವೊಂದು', 'ಗಾಣಕ್ಕೆ ನಿಚ್ಚ ಎಣ್ಣೆಯದಂಡಿಕೆಯ ಹೇರಿಂಗೆಲೆಯಯ್ವತ್ತು', 'ತೆಂಗಿನಕಾಯ ಹೇರಿಂಗಾ ಕಾಯೊಂದು', 'ಓಲೆಯ ಹೇರಿಂಗೆ ಓಲೆಯ ಸೂಡೊಂದು', ಹೊರಗಿಂದ ಬಂದು ಮಾರುವ ಬೆಲ್ಲಕ್ಕೆ 'ಬೆಲ್ಲದಚ್ಚು ಹದಿನ್ಯೆದು', 'ಕರ್ವ್ವಿಸಹಗೆರಕ್ಕೆ ಒಂದು ಕರ್ವು', 'ಬಳಹದ ಹೇರಿಂಗೆ ಬಳಹೆ ವೊರ್ಪಲಂ', ಕೈಮಗ್ಗಗಳಿಂದ ತಯಾರಿಸುತ್ತಿರುವ ಸೀರೆಯ ವ್ಯಾಪಾರಸ್ಥರಿಗೆ 'ಕೈಮಗ್ಗದೆರೆ' ಎಂಬ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು.[೧೨೩]

೬.೧೪.೪. ಕೈಗಾರಿಕೆ ತೆರಿಗೆ

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಆಳರಸರು ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಕೈಗಾರಿಕೆಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸಿದ್ದಾರೆ. ಈ ನಾಡಿನಲ್ಲಿ ಅನೇಕ ಗೃಹ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಶೇಂಗಾ, ಎಳ್ಳು, ಕುಸುಬೆ, ಔಡಲ ಮೊದಲಾದ ಧಾನ್ಯಗಳಿಂದ ಎಣ್ಣೆಯನ್ನು ತೆಗೆಯುವ ಕೈಗಾರಿಕೆಗಳಿದ್ದವು. ಎಣ್ಣೆಯ ಗಾಣಗಳಿಗೆ ಎತ್ತುಗಳನ್ನು ಬಳಸಲಾಗುತ್ತಿತ್ತು. ಕೆಲವೊಮ್ಮೆ ವ್ಯಕ್ತಿಗಳೇ ಗಾಣದ ಕಟ್ಟಿಗೆಯನ್ನು ಎಳೆದು ಎಣ್ಣೆ ತೆಗೆಯುತ್ತಿದ್ದರು. ಸೀರೆ ನೇಯುವುದು ಗೃಹ ಕೈಗಾರಿಕೆಗಳಲ್ಲಿ ಪ್ರಮುಖವಾಗಿತ್ತು. ಈ ನಾಡಿನಲ್ಲಿ ಕೈಚಾಲಿತ ಮಗ್ಗಗಳು ಬಳಕೆಯಲ್ಲಿದ್ದವು. ಕೈಗಾರಿಕೆಗಳ ಮೇಲೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಇದರಿಂದ ಸಂಗ್ರಹವಾದ ತೆರಿಗೆಯನ್ನು ದೇವಾಲಯದ ದೇವರ ಪೂಜೆ, ನಿತ್ಯಾಭಿಷೇಕಕ್ಕೆ ಬಳಸಲಾಗುತ್ತಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಶಾಂತಿನಾಥ ಬಸದಿಯ ಅಂಗಭೋಗ, ರಂಗಭೋಗ ಮತ್ತು ಜೀರ್ಣೋದ್ಧಾರಕ್ಕೆ ಕೈಗಾರಿಕೆಗಳ ಮೇಲಿನ ತೆರಿಗೆಯನ್ನು ಕೊಟ್ಟಿರುವುದು ದಾಖಲಾಗಿದೆ.[೧೨೪]

೬.೧೪.೫. ಇತರೆ ತೆರಿಗೆಗಳು

ಕೂಹುಂಡಿನಾಡಿನ ಶಾಸನಗಳಲ್ಲಿ ಈ ಮೇಲಿನ ತೆರಿಗೆಗಳಲ್ಲದೆ ಇತರೆ ಕೆಲವು ತೆರಿಗೆಗಳ ಪ್ರಸ್ತಾಪಗಳಿವೆ. ಇಲ್ಲಿಯ ಆಳರಸರು ರಾಜ್ಯದ ಬೊಕ್ಕಸ ಬರಿದಾದ ಸಂದರ್ಭದಲ್ಲಿ ಶ್ರೀಮಂತರ ಆಸ್ತಿಯ ಮೇಲೆ ತೆರಿಗೆಯನ್ನು ವಿಧಿಸಿ ರಾಜ್ಯದ ಬೊಕ್ಕಸಕ್ಕೆ ಹಣವನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಹಣಕಾಸು ಮಂತ್ರಿಯ ಸಲಹೆಯಂತೆ ಅದರ ನಿರ್ವಹಣೆ ನಡೆಯುತ್ತಿತ್ತು. ಕ್ರಿ.ಶ. ೧೧೮೫ರ ಶಾಸನದಲ್ಲಿರುವ 'ದಾರಕಂಭೂಮಿ ರಾಮಶೆಟ್ಟಿಯ ಸನ್ತಾನವಿಲ್ಲದರ ಲಾಯದಿಬಣಂಬೆ ಮಳಸಹಿತಂಸರ್ವಭಾದಾ ಪೂರಕಪರಿಹಾರಮಾಗಿ' ಎಂಬ ಪ್ರಸ್ತಾಪವು ಉತ್ತಮ ನಿದರ್ಶವಾಗಿದೆ.[೧೨೫] ಮಕ್ಕಳಿಲ್ಲದವರ ಆಸ್ತಿಗಳನ್ನು ರಾಜ್ಯಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಅನ್ಯಾಯ ಮತ್ತು ಒತ್ತಾಯದಿಂದ ಆಸ್ತಿಯನ್ನು ಬೊಕ್ಕಸಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಶ್ರೀಮಂತರು ಮತ್ತು ಅಧಿಕ ಆಸ್ತಿಯನ್ನು ಹೊಂದಿದವರು ತಮ್ಮ ಉಪಜೀವನಕ್ಕೆ ಬೇಕಾದಷ್ಟನ್ನಿಟ್ಟುಕೊಂಡು ಉಳಿದದ್ದನ್ನು ದಾನ ಮಾಡುತ್ತಿದ್ದರು. ಅಂಥವರ ಮನವೊಲಿಸಿ ದಾನ ಮಾಡುವ ಆಸ್ತಿಯನ್ನು ರಾಜ ಬೊಕ್ಕಸಕ್ಕೆ ದಾನವಾಗಿ ಪಡೆದು ದಾನಪತ್ರದಲ್ಲಿ ದಾಖಲಿಸಲಾಗುತ್ತಿತ್ತು. ವಾರಸುದಾರರು ಇಲ್ಲದಂತಹ ವ್ಯಕ್ತಿಗಳ ಭೂಮಿಯನ್ನು ದಾನ ಮಾಡುವುದನ್ನು ಶಾಸನದಲ್ಲಿ_

ದಾರಕಂಭೂಮಿ ರಾಮಶೆಟ್ಟಿಯ ಸನ್ತಾನವಿಲ್ಲದರಲಾಯದಿ
ಬಣಂಬೆಮಳ ಸಹಿತಂಸರ್ವಭಾಧಾ ಪೂರಕಪರಿಹಾರಮಾಗಿ........

ಎಂದು ರಾಮಶೆಟ್ಟಿಗೆ ಮಕ್ಕಳಿಲ್ಲದ ಕಾರಣ ತನ್ನ ಆಸ್ತಿಯನ್ನು ರಾಜರು ದಾನವಾಗಿ ಪಡೆದ ಉಲ್ಲೇಖವಿದೆ.[೨೬] ತೆರಿಗೆಯನ್ನು ಸಂಗ್ರಹಿಸಲು ಸುಂಕದ ಅಧಿಕಾರಿ, ಆಯದ ಅಧಿಕಾರಿಗಳಿದ್ದರು.

೬.೧೫. ಸಾರಿಗೆ ಮತ್ತು ಸಂಪರ್ಕ

ಆರ್ಥಿಕ ಪ್ರಗತಿಯಲ್ಲಿ ಸಾರಿಗೆ ಮತ್ತು ಸಂಪರ್ಕವು ಪ್ರಮುಖ ಪಾತ್ರ ವಹಿಸುತ್ತದೆ. ಕೂಹುಂಡಿನಾಡಿನಲ್ಲಿ ರೈತರು ಮತ್ತು ವರ್ತಕರು ತಮ್ಮ ಉತ್ಪನ್ನಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸಲು ವಿವಿಧ ಸಾರಿಗೆ ಸಾಧನಗಳನ್ನು ಬಳಸುತ್ತಿದ್ದರು. ಅವುಗಳಲ್ಲಿ ಪ್ರಾಣಿಗಳೂ ಸೇರಿದ್ದವು. ಎತ್ತು, ಕತ್ತೆ, ಕುದುರೆ, ಕೋಣ ಮೊದಲಾದ ಸಾಕು ಪ್ರಾಣಿಗಳನ್ನು ಬಳಸುತ್ತಿದ್ದರು. ಬಂಡಿಗಳ ಮೂಲಕ ಸರಕುಗಳನ್ನು ಸಾಗಿಸುತ್ತಿದ್ದರು. ಇವೆಲ್ಲವೂ ಅಂದಿನ ಆರ್ಥಿಕ ವ್ಯವಸ್ಥೆಯ ಅಂಗಗಳಾಗಿದ್ದವು. ತೇರದಾಳದ ಕ್ರಿ.ಶ. ೧೧೮೧ರ ಶಾಸನದಲ್ಲಿ ವರ್ತಕರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಸ್ತುಗಳನ್ನು ಸಾಗಿಸಲು ಎಮ್ಮೆ, ಎತ್ತು, ಕೋಣ, ಬಂಡಿ ಮೊದಲಾದವುಗಳನ್ನು ಬಳಸುತ್ತಿದ್ದರು ಎಂಬುದು ದಾಖಲಾಗಿದೆ.[೧೨೭] ಇದಕ್ಕೆ ಅವರು ತೆರಿಗೆಯನ್ನು ಕೊಡುತ್ತಿದ್ದರು. ಇದು ರಾಜ್ಯದ ಆದಾಯದ ಮೂಲವಾಗಿತ್ತು. ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಕುದುರೆ, ಕೋಣ, ಎತ್ತಿನ ಬಂಡಿಯ ಪ್ರಸ್ತಾಪಗಳಿವೆ.[೧೨೮] ಬಂಡಿಯ ಉಲ್ಲೇಖವಿದ್ದುದರಿಂದ ಇಲ್ಲಿ ಎತ್ತುಗಳು ಇದ್ದಿರಲೇಬೇಕು. ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಕೋಣ, ಎತ್ತು, ಕತ್ತೆಯ ನಿರೂಪಣೆಯಿದೆ.[೧೨೯] ವರ್ತಕರು ಪ್ರಾಣಿಗಳು ಮತ್ತು ಬಂಡಿಯನ್ನು ಸಾರಿಗೆಯ ಸಾಧನವಾಗಿ ಉಪಯೋಗಿಸುತ್ತಿದ್ದರು. ಈ ಸಾರಿಗೆ ಸಂಪರ್ಕವು ಕೂಹುಂಡಿನಾಡಿನ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು.

ಈ ಮೇಲಿನ ಎಲ್ಲ ವಿಷಯಗಳನ್ನು ಅವಲೋಕಿಸಿದರೆ ಕೂಹುಂಡಿನಾಡಿನ ಪ್ರದೇಶದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿತ್ತೆಂಬುದು ಮನದಟ್ಟಾಗುತ್ತದೆ. ಈ ನಾಡಿನ ಆರ್ಥಿಕ ವ್ಯವಸ್ಥೆಯ ಪುನಾರಚನೆಯಲ್ಲಿ ಇಲ್ಲಿಯ ಶಾಸನಗಳ ಕೊಡುಗೆ ಅಪಾರವಾಗಿದೆ.

ಅಡಿಟಿಪ್ಪಣಿಗಳು

೧. ಕುಲಕರ್ಣಿ ನಾಗೇಶರಂಗ (ಅನು.), ಯಜ್ಞವಲ್ಕ್ಯ ಸ್ಮೃತಿ (೧೯೮೭), ಪು. ೧೯೧.

೨. ಕೆ.ಆಯ್. ಸಂ. V, ಶಾ.ಸಂ. ೨೧.

೩. ಇ.ಆಯ್. ಸಂ. XIII, ಶಾ.ಸಂ. ೩/ಎ-ಬಿ.

೪. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಪು. ೩೪೬.

೫. ಅದೇ.

೬. ಕುಂದಣಗಾರ ಕೆ.ಜಿ. (ಸಂ.), ಇನ್‌ಸ್ಕ್ರಿಪ್‌ನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ (೧೯೩೯), ಶಾ.ಸಂ. ೨೩.

೭. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧-೧೦೪.

೮. ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೨, ಪು. ೨೪೦.

೯. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೧೦. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೧. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೧೨. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೩. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೩ (ಜನೇವರಿ-೧೯೭೮), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೫. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೧೬. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೭. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೮. ಅದೇ.

೧೯. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦-೨೪೧.

೨೦. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೨೧. ಕೆ.ಆಯ್. ಸಂ. V, ಶಾ.ಸಂ. ೨೧.

೨೨. ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.

೨೩. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೨೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೨೫. ಗುರವ ಆರ್.ಎನ್., ಪೂರ್ವೋಕ್ತ.

೨೬. ಇ.ಆಯ್. ಸಂ. XIII, ಶಾ.ಸಂ. ೩/ಎ.

೨೭. ಅದೇ.

೨೮. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೨೩.

೨೯. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೩೦. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೩೧. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೩೬.

೩೨. ಅದೇ, ಶಾ.ಸಂ. ೮೪.

೩೩. ಅದೇ, ಶಾ.ಸಂ. ೧೨.

೩೪. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಪೂರ್ವೋಕ್ತ.

೩೫. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೨-೧೬೩.

೩೬. ಇ.ಆಯ್. ಸಂ. XIII, ಶಾ.ಸಂ. ೩/ಎ.

೩೭. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೩೮. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೩೯. ಇ.ಆಯ್. ಸಂ. XIII, ಶಾ.ಸಂ. ೩/ಎ.

೪೦. ಕೆ.ಆಯ್. ಸಂ. V, ಶಾ.ಸಂ. ೨೧.

೪೧. ಇ.ಆಯ್. ಸಂ. XIII, ಶಾ.ಸಂ. ೩/ಎ.

೪೨. ಅದೇ, ಶಾ.ಸಂ. ೩/ಬಿ.

೪೩. ಅದೇ, ಶಾ.ಸಂ. ೩/ಎ.

೪೫. ಅದೇ.

೪೬ ಅದೇ.

೪೭ ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೪೮. ಕೆ.ಆಯ್. ಸಂ. V, ಶಾ.ಸಂ. ೨೧.

೪೯. ಮಲ್ಲಿಕಾರ್ಜುನ ಕೆ., ಮಾಳಿ ವಿ.ಎಸ್., ಬಿರಾದಾರ ಬಿ.ಎಸ್., ನರೋಡೆ ಅಶೋಕ (ಸಂ.), ಡಾ. ಬಿ.ಆರ್. ಹಿರೇಮಠರ ಶಾಸನ ಅಧ್ಯಯನ (೨೦೧೨), ಪು. ೭೪.

೫೦. ಅದೇ.

೫೧. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು (೧೯೮೬), ಪು. ೧೨.

೫೨. ಕೆ.ಆಯ್. ಸಂ. VI, ಶಾ.ಸಂ. ೭೩.

೫೩. ಗುರವ ಆರ್.ಎನ್., ಪೂರ್ವೋಕ್ತ.

೫೪. ಗೋಗಿ ಹನುಮಾಕ್ಷಿ, ಪೂರ್ವೋಕ್ತ.

೫೫. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨೩.

೫೬. ಇ.ಆಯ್. ಸಂ. XIII, ಶಾ.ಸಂ. ೩/ಎ.

೫೭. ಅದೇ.

೫೮. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೫೯. ಕೆ.ಆಯ್. ಸಂ. VI, ಶಾ.ಸಂ. ೭೩. ಸಂ. V, ಶಾ.ಸಂ. ೨೧.

೬೦. ಹಿರೇಮಠ ಬಿ.ಆರ್., ಪೂರ್ವೋಕ್ತ, ಪು. ೪೧–೪೯.

೬೧. ಕೆ.ಆಯ್. ಸಂ. VI, ಶಾ.ಸಂ. ೧೪. ಇ.ಆಯ್. ಸಂ. XIII, ಶಾ.ಸಂ. ೩/ಎ. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨೩. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೬೨. ಹಿರೇಮಠ ಬಿ.ಆರ್., ಪೂರ್ವೋಕ್ತ, ಪು. ೫೯.

೬೩. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೬೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೬೫. ಗುರವ ಆರ್.ಎನ್., ಪೂರ್ವೋಕ್ತ.

೬೬. ಇ.ಆಯ್. ಸಂ. XIII, ಶಾ.ಸಂ. ೩/ಎ.

೬೭. ಹಿರೇಮಠ ಬಿ.ಆರ್., ಪೂರ್ವೋಕ್ತ, ಪು. ೭೩–೯೮.

೬೮. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೬೯. ಕೆ.ಆಯ್. ಸಂ. V, ಶಾ.ಸಂ. ೨೧.

೭೦. ಮಲ್ಲಿಕಾರ್ಜುನ ಕೆ., ಮಾಳಿ ವಿ.ಎಸ್., ಬಿರಾದಾರ ಬಿ.ಎಸ್., ನರೋಡೆ ಅಶೋಕ (ಸಂ.), ಪೂರ್ವೋಕ್ತ, ಪು. ೧೯೨.

೭೧. ಕೆ.ಆಯ್. ಸಂ. V, ಶಾ.ಸಂ. ೨೧.

೭೨. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೨೮೭.

೭೩. ಅದೇ, ಪು. ೩೮೯.

೭೪. ಇ.ಆಯ್. ಸಂ. XIII, ಶಾ.ಸಂ. ೩/ಎ.

೭೫. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨೩.

೭೬. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೭೭. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೮೪.

೭೮. ಕೆ.ಆಯ್. ಸಂ. I, ಶಾ.ಸಂ. ೩೩.

೭೯. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೧–೧೬೨.

೮೦. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.

೮೧. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ३೯೦.

೮೨. ಹಿರೇಮಠ ಬಿ.ಆರ್., ಪೂರ್ವೋಕ್ತ, ಪು. ೧३೧.

೮೩. ಗೋಪಾಲ್ ಆರ್. (ಸಂ.), ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೭೦.

೮೪. ಕೊಪ್ಪಾ ಎಸ್.ಕೆ., ತರ್ದವಾಡಿನಾಡು : ಒಂದು ಅಧ್ಯಯನ (೧೯೯೦), ಪು. ೨೨೧.

೮೫. ಇ.ಆಯ್. ಸಂ. XIII, ಶಾ.ಸಂ. ३/ಎ.

೮೬. ಅದೇ, ಸಂ. XVII, ಪು. ೮೪೯-೮೫೦.

೮೭. ಮರಿಯಪ್ಪಭಟ್ಟ ಎಂ. (ಸಂ.), ರಾಜಾದಿತ್ಯನ ವ್ಯವಹಾರ ಗಣಿತ (೧೯೫೫), ಪು. ೨.

೮೮. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ. ಇ.ಆಯ್. ಸಂ. XIII, ಶಾ.ಸಂ. ೧೮/ಎ. ಕೆ.ಆಯ್. ಸಂ. V, ಶಾ.ಸಂ. ೨೧.

೮೯. ಇ.ಆಯ್. ಸಂ. XIII, ಶಾ.ಸಂ. ३/ಎ.

೯೦. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೯೧. ಕೆ.ಆಯ್. ಸಂ. VI, ಶಾ.ಸಂ. ೭३.

೯೨. ಕೆ.ಆಯ್. ಸಂ. V, ಶಾ.ಸಂ. ೨೧.

೯೩. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೯೪. ಕೆ.ಆಯ್. ಸಂ. V, ಶಾ.ಸಂ. ೨೧.

೯೫. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨३.

೯೬. ಆಯ್.ಎ. ಸಂ. XIII, ಶಾ.ಸಂ. ३/ಬಿ.

೯೭. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ.

೯೮. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೯೯. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧३.

೧೦೦. ಪಾಟೀಲ ಶಿ.ಬಾ., ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ (೧೯೯೫), ಪು. ೫೭.

೧೦೧. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೧.

೧೦೨. ಪಾಟೀಲ ಶಿ.ಬಾ., ಪೂರ್ವೋಕ್ತ.

೧೦३. ಇ.ಆಯ್. ಸಂ. XIII, ಶಾ.ಸಂ. ३/ಎ.

೧೦೪. ಎಸ್.ಆಯ್.ಆಯ್. ಸಂ. XX, ಶಾ.ಸಂ. ೨೪೭.

೧೦೫. ಇ.ಆಯ್. ಸಂ. XVI, ಶಾ.ಸಂ. ೧.

೧೦೬. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೫೪.

೧೦೭. ಅದೇ.

೧೦೯. ಇ.ಆಯ್. ಸಂ. XIII, ಶಾ.ಸಂ. ೩/ಎ ಮತ್ತು ಬಿ.

೧೧೦. ಅದೇ.

೧೧೧. ಅದೇ.

೧೧೨. ಅದೇ.

೧೧೩. ಅದೇ.

೧೧೪. ಅದೇ, ಶಾ.ಸಂ. ೩/ಎ.

೧೧೫. ಅದೇ.

೧೧೬. ಅದೇ.

೧೧೭. ಅದೇ.

೧೧೮. ಅದೇ, ಶಾ.ಸಂ. ೩/ಬಿ.

೧೧೯. ಅದೇ.

೧೨೦. ಅದೇ.

೧೨೧. ಅದೇ, ಶಾ.ಸಂ. ೩/ಎ ಮತ್ತು ಬಿ.

೧೨೨. ಅದೇ.

೧೨೩. ಅದೇ.

೧೨೪. ಅದೇ, ಶಾ.ಸಂ. ೩/ಎ.

೧೨೫. ಪಾಟೀಲ ಶಿ.ಬಾ., ಪೂರ್ವೋಕ್ತ, ಪು. ೫೬.

೧೨೬. ಅದೇ.

೧೨೭. ಕೆ.ಆಯ್. ಸಂ. V, ಶಾ.ಸಂ. ೯೮.

೧೨೮. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೨೯. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

❖❖❖

ಅಧ್ಯಾಯ : ಏಳು

ಕೊಹುಂಡಿನಾಡಿನ ಧಾರ್ಮಿಕ ವ್ಯವಸ್ಥೆ

ಅಧ್ಯಾಯ : ಏಳು

ಧಾರ್ಮಿಕ ವ್ಯವಸ್ಥೆ

೭.೧. ಪೀಠಿಕೆ

ಧರ್ಮ ಎಂಬುದು ವಿಶಾಲ ಅರ್ಥವ್ಯಾಪ್ತಿಯುಳ್ಳ ಪದವಾಗಿದೆ. ಮಾನವನು ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಅವುಗಳ ಹಿಂದೆ ಯಾವುದೋ ಒಂದು ಅಗೋಚರವಾದ (ಮಾನವಾತೀತ) 'ಶಕ್ತಿ' ಇದೆಯೆಂದು ನಂಬಿ ಅವುಗಳನ್ನು ಭಯ-ಭಕ್ತಿಯಿಂದ ಆರಾಧಿಸುತ್ತ ಬಂದಿದ್ದಾನೆ. ಆ ಕಲ್ಪನೆಯೇ ಈತನ ಹಲವು ಬಗೆಯ ಚಿಂತನೆಗಳಿಗೆ ಪ್ರೇರಕವಾಗಿದೆ. ಆ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಧರ್ಮವು ಅನಾದಿ ಕಾಲದಿಂದಲೂ ಮಾನವನ ಜೀವನ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ, ಲೌಕಿಕ ಮತ್ತು ಅಲೌಕಿಕಗಳ ನಡುವಣ ಕೊಂಡಿಯಾಗಿ ವರ್ತಿಸುತ್ತ ಬಂದಿದೆ. ಒಬ್ಬ ವ್ಯಕ್ತಿ ಅಥವಾ ಜನಸಮುದಾಯ ನಂಬಿರುವ ಮೋಕ್ಷ ಸಾಧನೆ ಅಥವಾ ಉಪಾಸನೆಯ ರೀತಿಗೆ 'ಧರ್ಮ' ಪದವನ್ನು ಸಾಮಾನ್ಯವಾಗಿ ಬಳಸಲಾಗಿದ್ದರೂ, ಇದು ಅಷ್ಟಕ್ಕೆ ಮಾತ್ರ ಸೀಮಿತವಾಗಿರದೆ ಒಂದು ಸಮಾಜ ಒಪ್ಪಿಕೊಂಡಿರುವ ವೈವಿಧ್ಯಮಯವಾದ ಕಟ್ಟು-ಪಾಡುಗಳು, ಆಚಾರ-ವಿಚಾರಗಳ ಸಮಷ್ಠಿಯಾಗಿದೆ. ಇದರಲ್ಲಿ ಮೌಲಿಕ, ವೈಚಾರಿಕ, ನೈತಿಕ ಮತ್ತು ಸಾಮಾಜಿಕ ಕಟ್ಟುಪಾಡುಗಳೂ ಸೇರಿವೆ.[೧]

ಪ್ರಪಂಚದಾದ್ಯಂತ ಕಾಲ, ದೇಶ, ಪರಿಸರಗಳಿಗನುಗುಣವಾಗಿ ವಿಭಿನ್ನ ಧರ್ಮಾಚರಣೆಗಳು ಬೆಳೆದು ಬಂದಿವೆ. ಇವುಗಳಲ್ಲಿ ಕೆಲವು ತಮ್ಮ ಅನ್ವಯಿಕತೆಯನ್ನು ಕಾರಣಾಂತರಗಳಿಂದಾಗಿ ಕಳೆದುಕೊಂಡು ಕಾಲಗರ್ಭದಲ್ಲಿ ಲೀನವಾಗಿವೆ. ಇನ್ನೂ ಕೆಲವು ತಮ್ಮ ತತ್ವ, ದರ್ಶನ, ಆಚಾರ, ವಿಚಾರಗಳಲ್ಲಿ ಬಲಸಂವರ್ಧಿಸಿಕೊಂಡು ಸಮಕಾಲೀನ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಕೊಳ್ಳುತ್ತ ಜೀವಂತವಾಗಿ ಮುನ್ನಡೆದಿವೆ. ಭಾರತದಲ್ಲಿ ಮೂಡಿ ಬೆಳೆದು ಬಂದಿರುವ ಶೈವ, ವೈಷ್ಣವ, ಬೌದ್ಧ, ಜೈನ, ಆಜೀವಿಕ ಮೊದಲಾದ ಧರ್ಮಗಳು ಸ್ಥಳೀಯ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಸಮೃದ್ಧವಾಗಿಸಿವೆ. ಇವು ಕನ್ನಡನಾಡಿನ ಚರಿತ್ರೆ ಮತ್ತು ಸಂಸ್ಕೃತಿಯೊಂದಿಗೂ ಹಾಸುಹೊಕ್ಕಾಗಿವೆ. ಈ ನಾಡನ್ನಾಳಿದ ಶಾತವಾಹನರು, ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಬಂಕಾಪುರದ ಚಲ್ಲಕೇತನರು, ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಗೋವೆಯ ಕದಂಬರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಮೊದಲಾದ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳು ಮತ್ತು ಸಮಕಾಲೀನ ಆಡಳಿತಾಧಿಕಾರಿಗಳ ಪೋಷಣೆಯಲ್ಲಿ ಈ ಧರ್ಮಗಳು–

> ಜಯಂತಿ ಯಸ್ಯಾವದತೋಪಿ ಭಾರತೀ
> ವಿಭೂತಯಸ್ತೀರ್ಥ ಕೃತೋಪಿ ನೈಹ್ರಿತೇ
> ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
> ಜಿನಾಯ ತಸ್ಮೈ ಸಕಳಾತ್ಮನೇ ನಮಃ ॥

ಎಂದು ಅಭಿನ್ನವಾಗಿ (ವಿವಿಧತೆಯಲ್ಲಿ ಏಕತೆಯಿಂದ) ಬೆಳೆದು ಬಂದಿವೆ.[೨] ಕಾಲಾಂತರದಲ್ಲಿ ಈ ಧರ್ಮಗಳಲ್ಲಿ ಪರಸ್ಪರ ವಲಯಗಳ ವಿಸ್ತಾರ, ಮತಾಂತರ, ಧರ್ಮಪ್ರಸಾರ, ದೇವಾಲಯಗಳು ಮತ್ತು ಬಸದಿಗಳ ರೂಪಾಂತರ, ನಾಶ ಮೊದಲಾದ ಕಾರಣಗಳಿಂದ ಮತೀಯ ಘರ್ಷಣೆಗಳು ಸಂಭವಿಸಿದರೂ ಚತುಸ್ಸಮಯದೀಪಕರಾದ ಸಮಕಾಲೀನ ಆಳರಸರಾದಿ ಅಧಿಕಾರಿಗಳು ಪರಸ್ಪರ ಧರ್ಮೀಯರಲ್ಲಿ ಅನ್ಯೋನ್ಯತೆಯನ್ನು ಕಲ್ಪಿಸುತ್ತಲೇ ಬಂದಿರುವುದು ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಅದೇನಿದ್ದರೂ ಈ ಧರ್ಮಗಳು ಸ್ಥಳೀಯ ಸಂಸ್ಕೃತಿ, ಸಾಹಿತ್ಯ, ವಾಸ್ತು, ಶಿಲ್ಪ ಮೊದಲಾದ ಕ್ಷೇತ್ರಗಳಲ್ಲಿ ಸಲ್ಲಿಸಿದ ಕೊಡುಗೆಗಳು ಅಜರಾಮರವಾಗಿವೆ. ಈ ನಾಡಿನ ಸಂದರ್ಭದಲ್ಲಿ ಈ ಧರ್ಮಗಳು ಬೆಳೆದು ಬಂದ ಬಗೆಯನ್ನು ಗಮನಿಸುತ್ತ, ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೭೨ ಮತ್ತು ಈ ನಾಡಿಗೆ ಸಂಬಂಧಿಸಿದಂತೆ ಇತರೆಡೆಯಲ್ಲಿರುವ ೧೨ ಒಟ್ಟು ೧೮೪ ಶಾಸನಗಳ ಹಿನ್ನೆಲೆಯಲ್ಲಿ ಈ ಧರ್ಮಗಳ ಪ್ರಾಚೀನತೆ, ಪ್ರಸಾರ, ಬೆಳವಣಿಗೆ, ಧರ್ಮಾಚಾರ್ಯರು, ದೇವಾಲಯಗಳು, ಬಸದಿಗಳು, ಶಿಲ್ಪಗಳು ಮೊದಲಾದವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೭.೨. ಶೈವ ಧರ್ಮ

ಭಾರತದ ಪ್ರಾಚೀನ ಧರ್ಮಗಳಲ್ಲಿ ಶೈವ ಧರ್ಮವೂ ಒಂದಾಗಿದೆ. ಸಿಂಧೂ ನಾಗರಿಕತೆಯ ಕಾಲಾವಧಿಯಲ್ಲಾಗಲೇ (ಕ್ರಿ.ಪೂ. ಸುಮಾರು ೩೦೦೦ ರಿಂದ ೧೭೦೦) ಈ ಧರ್ಮ ಅಸ್ತಿತ್ವದಲ್ಲಿತ್ತೆಂಬುದನ್ನು ವಿದ್ವಾಂಸರು ದೃಢಪಡಿಸಿದ್ದಾರೆ. ಮೊಹೆಂಜೊದಾರೊ, ಹರಪ್ಪ, ಧೊಲಾವೀರಾ ನೆಲೆಗಳಲ್ಲಿ ಶಿವಲಿಂಗ ಮತ್ತು ಯೋನಿಯನ್ನು ಹೋಲುವ ಶಿಲೆ ಹಾಗೂ ಸುಡಾವೆ ಮಣ್ಣಿನ ಕುರುಹುಗಳು ಬೆಳಕಿಗೆ ಬಂದಿವೆ. ಕಾಲಿಬಂಗಾನ್ ನೆಲೆಯಲ್ಲಿ ಸುಟ್ಟ ಮಣ್ಣಿನ ಯೋನಿಪೀಠಸಹಿತ ಲಿಂಗ ದೊರೆತಿದೆ. ಕೆಲವು ಮುದ್ರೆಗಳಲ್ಲಿ ಪಶುಗಳ ಮಧ್ಯದಲ್ಲಿ ವಸ್ತ್ರಾಭರಣಗಳನ್ನು ಧರಿಸಿ ಪೀಠದ ಮೇಲೆ ಊರ್ಧ್ವಲಿಂಗಿತಾಗಿ ಯೋಗಿಯಂತೆ ಆಸೀನನಾಗಿರುವ ಪಶುಪತಿಯ ಚಿತ್ರಣಗಳಿವೆ.[೪] ಇದರಿಂದ ಶೈವ ಧರ್ಮವು ಪ್ರಪಂಚದ ಅತ್ಯಂತ ಪ್ರಾಚೀನ ಜೀವಂತ ಧರ್ಮ ಎಂಬುದು ಮನದಟ್ಟಾಗುತ್ತದೆ. ವೈದಿಕ ಯುಗದ ಋಗ್ವೇದದಲ್ಲಿ ಮೂರು ಸೂಕ್ತಗಳು ರುದ್ರನ ಕುರಿತಾಗಿವೆ. ಈ ವೇದದಲ್ಲಿ ಸುಮಾರು ಏಪ್ಪತ್ತೆಂಟು ಸಲ ರುದ್ರನ ಪ್ರಸ್ತಾಪ ಬಂದಿದೆ. ಈತನನ್ನು ಶಿವ, ಮಿಢ್ವಃ, ವೃಷಭ, ವೈದ್ಯರ ವೈದ್ಯ, ಕಪರ್ದಿನ್, ಪಾಪಕರ್ಮಾದಿಗಳಿಂದ ಜನರ ರಕ್ಷಕ, ಪಶುಗಳ ರಕ್ಷಕ, ಮುರುತ್ತುಗಳ ತಂದೆ ಎಂಬಿತ್ಯಾದಿಯಾಗಿ ಕರೆಯಲಾಗಿದೆ. ಅದೇ ರೀತಿ ಯುಜುರ್ವೇದದಲ್ಲಿ ಭೂಮಿಯ ಅಧಿಪತಿ ಮತ್ತು ಸ್ವರ್ಗದ ವೈದ್ಯನೆಂದು, ಶತರುದ್ರೀಯದಲ್ಲಿ ಆಕಾಶವಾಸಿ ಮತ್ತು ಭೂಮಿವಾಸಿಯೆಂದು, ಅಥರ್ವಣವೇದದಲ್ಲಿ ಜಲಚಿಕಿತ್ಸಕ, ನೀಲಿಬಣ್ಣದ ಶಿಖೆಯುಳ್ಳವ, ಭೂತಪತಿ, ಪಶುಪತಿ ಮತ್ತು ಮಹಾಕಾರ್ಯಗಳನ್ನು ಯಶಸ್ವಿಗೊಳಿಸುವವನೆಂದು, ಮೈತ್ರೇಯ ಸಂಹಿತೆಯಲ್ಲಿ ಮಹಾದೇವನೆಂದು ಕರೆಯಲಾಗಿದೆ. ಅಲ್ಲದೇ ಸದಾಶಿವ, ಸೃಷ್ಟಿಕರ್ತ, ವಿಶ್ವಾಧಿಪತಿ ಎಂತಲೂ ಕರೆಯಲ್ಪಟ್ಟಿದ್ದಾನೆ.[೫] ಈ ಪರಿಕಲ್ಪನೆಯೇ ನಂತರದ ಕಾಲದಲ್ಲಿ ಶಿವನನ್ನು ಊರ್ಧ್ವಲಿಂಗಿಯಾಗಿ ಮತ್ತು ವಿವಿಧ ರೂಪಗಳ ಶಿಲ್ಪಗಳಲ್ಲಿ ತೋರಿಸುವ ಪರಂಪರೆಗೆ ಮೂಲವಾಗಿದೆ.

ಮಹಾಭಾರತದ ವನಪರ್ವತದಲ್ಲಿ ಶಿವನು ಅರ್ಜುನನಿಗೆ ಪಾಶುಪತಾಸ್ತ್ರ ನೀಡಿದ ಉಲ್ಲೇಖವಿದೆ. ಅಲ್ಲದೇ ಶಿವನನ್ನು ಕಪ್ಪು ಜಿಂಕೆಯ ಚರ್ಮವನ್ನು ಧರಿಸಿದವ, ಭಸ್ಮಧಾರಿ, ಕೆಂಪು ವಸ್ತ್ರಧರಿಸಿದವ, ಪಿನಾಕಧನಸ್ಸುಧಾರಿ, ಜಟಾರಾಶಿವುಳ್ಳವನು, ಅರ್ಧನಾರೀಶ್ವರ, ರುಂಡಮಾಲೆ ಧರಿಸಿದವ, ಸರ್ಪಾಭರಣಧಾರಿ, ಕಾಲದಂಡಾಧಿದಾರಿ ಎಂದಿತ್ಯಾದಿಯಾಗಿ ವರ್ಣಿಸಲಾಗಿದೆ. ಯಜುರ್ವೇದದ ತೈತ್ತರೇಯ ಸಂಹಿತೆಯಲ್ಲಿ ರುದ್ರನನ್ನು ಗಿರೀಶ ಎಂದು ಕರೆಯಲಾಗಿದೆ. ವಾಜಸನೇಯ ಸಂಹಿತೆಯಲ್ಲಿ ರುದ್ರನ ನೂರು ಹೆಸರುಗಳ ನಿರೂಪಣೆಯಿದೆ, ರಾಮಾಯಣದ ಉತ್ತರಕಾಂಡದಲ್ಲಿ ರಾವಣನು ಯಾವಾಗಲೂ ಚಿನ್ನದ ಲಿಂಗವನ್ನೇ ಪೂಜಿಸುತ್ತಿದ್ದನೆಂಬ ಪ್ರಸ್ತಾಪವಿದೆ. ಅದೇ ರೀತಿ ಪುರುಷಸೂಕ್ತ, ಉಪನಿಷತ್ತುಗಳು, ಕೆಲವು ಪುರಾಣಗಳಲ್ಲಿಯೂ ಶಿವನ (ಲಿಂಗ) ವರ್ಣನೆಗಳಿವೆ.[೬] ಉಪನಿಷತ್ತುಗಳ ಕಾಲದಲ್ಲಿ ಈ ಧರ್ಮವು ಯೋಗಪರವಾಗಿದ್ದು, ಇದು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಪ್ರತಿಪಾದಿಸಲ್ಪಟ್ಟ ಯೋಗವಿಜ್ಞಾನದಿಂದ ಸ್ಪಷ್ಟವಾಗುತ್ತದೆ. ಈ ಧರ್ಮದ ಕ್ರಿಯಾಪದ, ಚರ್ಯಾಪದ, ಯೋಗಪಾದ, ಜ್ಞಾನಪಾದ ಎಂಬ ಆಗಮಗಳು ಇದರ ಪ್ರಧಾನ ಆಕರಗಳಾಗಿವೆ. ಹೀಗೆ ಬೆಳೆದು ಬಂದ ಶೈವ ಧರ್ಮದಲ್ಲಿ ಕಾಲಾಂತರದಲ್ಲಿ ಪಾಶುಪತ, ಕಾಪಾಲಿಕ, ಕಾಳಾಮುಖ, ಕೌಳ, ವೀರಶೈವ ಮೊದಲಾದ ಕೆಲವು ಪಂಥಗಳುಂಟಾದವು.

ಪಾಶುಪತ ಪಂಥವು ಮಹಾಭಾರತದ ಶಾಂತಿಪರ್ವದಲ್ಲಿ ಪ್ರಪ್ರಥಮವಾಗಿ ಗೋಚರಿಸುತ್ತದೆ. ಲಕುಲೀಶನು ಈ ಪಂಥದ ಸ್ಥಾಪಕನಾಗಿದ್ದು, ಈತನನ್ನು ನಕುಲೀಶ, ಲಗುಡೀಶ ಎಂತಲೂ ಕರೆಯಲಾಗಿದೆ. ಈತನು ಶಿವನ ಇಪ್ಪತ್ತೆಂಟನೆಯ ಅವತಾರವೆಂದು ಲಿಂಗ, ಕೂರ್ಮ, ವಾಯುಪುರಾಣಗಳು ಪ್ರಸ್ತಾಪಿಸಿವೆ. ಚಿಂತ್ರಪ್ರಶಸ್ತಿ ಒಂದನೆಯ ಅವತಾರವೆಂದು ಉಲ್ಲೇಖಿಸಿದೆ. ಎ. ಶಾಸ್ತ್ರಿ ಅವರು ಪಾಶುಪತ ಪಂಥದ ಹದಿನೆಂಟು ಆಚಾರ್ಯರ ಪಟ್ಟಿಯಲ್ಲಿ ನಕುಲೀಶನು ಪ್ರಥಮಾಚಾರ್ಯನೆಂದು ಸೂಚಿಸಿದ್ದಾರೆ. ಮಥುರಾದ ಕ್ರಿ.ಶ. ೩೮೦ರ ಸ್ತಂಭಶಾಸನವು ಈ ಪಂಥದ ಗುರುಪರಂಪರೆಯ ವಿವರಣೆಯನ್ನು ಉಲ್ಲೇಖಿಸುವ ಪ್ರಪ್ರಥಮ ಶಾಸನವಾಗಿದೆ.[೯] ಕಿಗ್ಗಲದ ಕ್ರಿ.ಶ. ೭೦೦ರ ಶಾಸನದಲ್ಲಿಯೂ ಈ ಪಂಥದ ಪ್ರಸ್ತಾಪವಿದೆ. ಶಿವನು ಲಕುಲೀಶನಾಗಿ ಅವತರಿಸಿದ ಪ್ರದೇಶವು ಇಂದಿನ ಗುಜರಾತದ ದಭೋಯಿ ಜಿಲ್ಲೆಯ ಕಾರವನವೆಂದು (ಕಾಯಾರೋಹಣ) ಗುರುತಿಸಲಾಗಿದೆ. ಅಲ್ಲಿಂದಲೇ ಈ ಪಂಥವು ಕನ್ನಡನಾಡಿನಲ್ಲಿ ಪ್ರಸಾರವಾದಂತೆ ತೋರುತ್ತದೆ. ಈ ಪಂಥದ ಅನುಯಾಯಿಗಳು ಮಾಹೇಶ್ವರರು ಎಂದು ಪ್ರಸಿದ್ಧರಾಗಿದ್ದರು.

ಕಾಪಾಲಿಕ ಪಂಥದ ಕುರಿತಾಗಿ ಯಾಜ್ಞವಲ್ಕ್ಯಸ್ಮೃತಿ, ಮೈತ್ರಾಯನಿ ಉಪನಿಷತ್ತು, ಹಾಲನ ಗಾಥಾಸಪ್ತಶತಿ, ಬೌದ್ಧ ಧರ್ಮದ ಲಲಿತವಿಸ್ತಾರ, ವರಾಹಮಿಹಿರನ ಬೃಹತ್ಸಂಹಿತೆ, ಭವಭೂತಿಯ ಮಾಲತಿಮಾಧವ, ಕಥಾಸರಿತ್ಸಾಗರ, ಸೋಮದೇವನ ಯಶಸ್ತಿಲಕ, ಚಾಮರಸನ ಪ್ರಭುಲಿಂಗಲೀಲೆ, ಮಹೇಂದ್ರ ವಿಕ್ರಮನ ಮತ್ತವಿಲಾಸ ಪ್ರಹಸನ, ಕೃಷ್ಣಮಿಶ್ರನ ಪ್ರಬೋಧ ಚಂದ್ರೋದಯ, ಆನಂದಗಿರಿಯ ಶಂಕರವಿಜಯ, ಮಾಧವ ವಿದ್ಯಾರಣ್ಯರ ಶಂಕರದಿಗ್ವಿಜಯ, ಚನ್ನಬಸವೇಶ್ವರನ ವಚನಗಳು ಮೊದಲಾದ ಕೃತಿ–ಕಾವ್ಯಗಳಲ್ಲಿ ಪ್ರಸ್ತಾಪಗಳಿವೆ.[೧೦] ಈ ಪಂಥದ ಅನುಯಾಯಿಗಳು ಕೈಗಳಲ್ಲಿ ಕಪಾಲ ಹಿಡಿದುಕೊಂಡು ಕಷಾಯವಸ್ತ್ರ ಮತ್ತು ಕರ್ಣಕುಂಡಲಗಳನ್ನು ಧರಿಸಿ ಭಸ್ಮಧಾರಿಗಳಾಗಿ ಅತಿಮಾರ್ಗಿಕ ವಾಮಾಚಾರಿಗಳಾಗಿದ್ದರು.

ಇವರು ಭೈರವ, ವೀರಭದ್ರ, ಉಮಾಮಹೇಶ್ವರನ ಶಿಲ್ಪಗಳನ್ನು ಪೂಜಿಸುತ್ತಿದ್ದರು. ಕಾಳಾಮುಖ ಪಂಥದ ಕುರಿತಾಗಿ ವೃತ್ತವಿಲಾಸನ ಧರ್ಮಪರೀಕ್ಷೆ, ಹರಿಭದ್ರಸೂರಿಯ ಷಡ್ದರ್ಶನ ಸಮುಚ್ಚಯ, ಯಮುನಾಚಾರ್ಯನ ಆಗಮಪ್ರಾಮಾಣ್ಯ, ಚನ್ನಬಸವಣ್ಣನ ವಚನಗಳು, ಬ್ರಹ್ಮಶಿವನ ಸಮಯಪರೀಕ್ಷೆ, ಗುಣರತ್ನಸೂರಿಯ ಷಡ್ದರ್ಶನ ಸಮುಚ್ಚಯದ ಮೇಲಿನ ತರ್ಕರಹಸ್ಯದೀಪಿಕಾ ಮೊದಲಾದ ಕೃತಿ–ಕಾವ್ಯಗಳಲ್ಲಿ ಪ್ರಸ್ತಾಪಗಳಿವೆ.[೧೧] ಈ ಪಂಥದ ಅನುಯಾಯಿಗಳು ಶುದ್ಧ ಸಾತ್ವಿಕರಾಗಿದ್ದರು. ಇವರು ತಮ್ಮ ಮುಖದ ಮೇಲೆ ಕಪ್ಪು ಗೆರೆಗಳನ್ನು ಲೇಪಿಸಿಕೊಳ್ಳುತ್ತಿದ್ದುದರಿಂದ ಇವರನ್ನು ಕಾಳಾಮುಖ ಎಂದು ಕರೆಯಲಾಗಿದೆ. ಕನ್ನಡನಾಡಿನಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದವರೆಗೂ ಇವರು ಪ್ರಬಲ ಮತ್ತು ಪ್ರಭಾವಶಾಲಿಯಾಗಿದ್ದರು. ದೇವಾಲಯ ಮತ್ತು ಮಠಗಳ ನಿರ್ಮಾಣ ಹಾಗೂ ಸಂಸ್ಕೃತ ಭಾಷೆಯಲ್ಲಿ ನಿಕ್ಷಿಪ್ತವಾಗಿದ್ದ ಜ್ಞಾನದ ಬೆಳಕು ಆರದಂತೆ ನೋಡಿಕೊಂಡಿರುವುದು ಇವರ ಬಹು ಮಹತ್ವದ ಕೊಡುಗೆಗಳಾಗಿವೆ. ಇವರು ಶಿವನನ್ನು ನಾನಾ ಹೆಸರುಗಳಿಂದ ಅರ್ಚಿಸುತ್ತ ನೂರಾರು ಶೈವ ದೇವಾಲಯಗಳ ಸ್ಥಾನಾಚಾರ್ಯರಾಗಿದ್ದರು. ಈ ಪಂಥದ ಆಚಾರ್ಯರ ಹೆಸರುಗಳ ಉತ್ತರಾರ್ಧದಲ್ಲಿ ಸಾಮಾನ್ಯವಾಗಿ ಜೀರ್ರು, ಜೀಯ, ಜೀ, ಶಕ್ತಿ, ಸಿಂಗಿ, ಪಂಡಿತ, ದೇವ, ಗೊರವ ಎಂಬ ಪದಗಳು ಗೋಚರಿಸುತ್ತವೆ. ಈ ಪಂಥವು ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ವೀರಶೈವ ಧರ್ಮದಲ್ಲಿ ವಿಲೀನವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.[೧೨]

ಕೌಳ ಪಂಥದ ಕುರಿತಾಗಿ ಬ್ರಹ್ಮಶಿವನ ಸಮಯಪರೀಕ್ಷೆ, ಸ್ಕಂಧಪುರಾಣದ ಪ್ರಭಾಸಖಂಡ, ರಾಜಶೇಖರನ ಕರ್ಪೂರಮಂಜರಿ, ಸೋಮದೇವನ ಯಶಸ್ತಿಲಕ, ಚನ್ನಬಸವಣ್ಣನ ವಚನಗಳು, ಶ್ರೀಧರಾಚಾರ್ಯನ ಜಾತಕತಿಲಕ, ಸೌಂದರ್ಯಲಹರಿ, ಜಕ್ಕಣಾಮಾತ್ಯನ ಕನ್ನಡ ಟೀಕೆ, ವಿವೇಕ ಚಿಂತಾಮಣಿ, ಅಕ್ಕಮಹಾದೇವಿಯ ವಚನಗಳು, ಅಲ್ಲಮಪ್ರಭುವಿನ ವಚನಗಳು, ಶಂಕರದಾಸಿಮಯ್ಯನ ಪುರಾಣ ಮೊದಲಾದ ಕೃತಿ–ಕಾವ್ಯಗಳಲ್ಲಿ ಪ್ರಸ್ತಾಪಗಳಿವೆ.[೧೩] ಪಾಶುಪತ ಗುರುವಾದ ವಿಶ್ವರೂಪನ ಶಿಷ್ಯ ಭಾವರಕ್ತನು ಈ ಪಂಥದ ಮೂಲ ಪ್ರವರ್ತಕನಾಗಿದ್ದಾನೆ. ಈ ಪಂಥದ ಅನುಯಾಯಿಗಳು ಬ್ರಹ್ಮ, ರುದ್ರ, ವಿಷ್ಣುವಿನ ಆರಾಧಕರಾಗಿದ್ದರು. ಮದ್ಯ, ಮಾಂಸ, ಮತ್ಸ್ಯ, ಮುದ್ರಾ, ಮೈಥುನ ಈ ಪಂಥದ ಪಂಚತತ್ವಗಳಾಗಿದ್ದವು. ಇವರು ಶಕ್ತಿ ಮತ್ತು ಲಿಂಗವನ್ನು ಆರಾಧಿಸುತ್ತಿದ್ದರು. ಹೋಮವನ್ನು ಮಾಡುತ್ತಿದ್ದು ಸಾಧನೆಯ ಹೆಸರಿನಲ್ಲಿ ಮಾಂಸ ಮತ್ತು ಮದ್ಯವನ್ನು ಸೇವಿಸುತ್ತಿದ್ದರು. ಸ್ತ್ರೀ ಪ್ರಿಯರಾಗಿದ್ದರು. ಇದರಿಂದ ಒದಗುವ ಸುಖವೇ ಇವರಿಗೆ ಮೋಕ್ಷವಾಗಿತ್ತು. ಈ ಪಂಥದಲ್ಲಿ ಪೂರ್ವಕೌಳ ಮತ್ತು ಉತ್ತರಕೌಳ ಎಂಬೆರಡು ಪಂಗಡಗಳಿದ್ದವು. ಇವೆರಡೂ ತ್ರಿಪುರ ಸುಂದರಿಯನ್ನು ಆರಾಧಿಸುತ್ತಿದ್ದವು. ಬಸವಣ್ಣನವರು (ಕ್ರಿ.ಶ. ೧೧೦೫–೧೧೬೭) ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಈ ಮೇಲಿನ ಪಂಥಗಳ ಕೆಲವು ಅಂಶಗಳನ್ನು ಒಂದೆಡೆ ಕ್ರೋಢೀಕರಿಸಿ ಇದಕ್ಕೊಂದು ವ್ಯವಸ್ಥೆ, ಆಚಾರ, ದರ್ಶನ ಪದ್ಧತಿಯನ್ನು ಕಲ್ಪಿಸಿದರು.[೧೪] ಇದುವೇ 'ವೀರಶೈವ ಧರ್ಮ' ಎಂದು ಪ್ರಸಿದ್ಧವಾಯಿತು. ಇದನ್ನು 'ಲಿಂಗಾಯತ ಧರ್ಮ' ಎಂತಲೂ ಕರೆಯಲಾಗುತ್ತದೆ. ಬಸವಣ್ಣನವರನ್ನು ಈ ಧರ್ಮದ ಸಂಸ್ಥಾಪಕರೆಂದು ಕರೆಯಲಾಗಿದೆ. ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣ ಪಟ್ಟಣವು ಈ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳ

ಪ್ರಧಾನ ಕೇಂದ್ರವಾಗಿತ್ತು. ಈ ಧರ್ಮವನ್ನು ಮಹಾನುಭಾವರಾದ ಪಂಚಾಚಾರ್ಯರು ಸ್ಥಾಪಿಸಿದ್ದರೆಂದು ಒಂದು ಅಖ್ಯಾಯಿಕೆಯಿದೆ. ಈ ಧರ್ಮದ 'ಶಕ್ತಿವಿಶಿಷ್ಟಾದ್ವೈತ ದರ್ಶನ'ವು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ಜೀವ ಮತ್ತು ಜಗತ್ತಿನ ಬಗೆಗೆ ವೈಜ್ಞಾನಿಕವಾಗಿ ವಿವರಿಸುತ್ತದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಈ ಮೇಲೆ ಗಮನಿಸಲಾದ ಶೈವ ಧರ್ಮದ ಎಲ್ಲ ಪಂಥಗಳ ಅನುಯಾಯಿಗಳ ಚಟುವಟಿಕೆಗಳು ಗೋಚರಿಸುತ್ತವೆ. ಈ ಪಂಥಗಳಲ್ಲಿ ಪಾಶುಪತ ಮತ್ತು ಕಾಳಾಮುಖ ಪಂಥಗಳು ಈ ನಾಡಿನಲ್ಲಿ ಪ್ರಭಾವಶಾಲಿಯಾಗಿದ್ದವು. ಇದು ಕೊಣ್ಣೂರಿನ ಕ್ರಿ.ಶ. ೧೦೮೭ರ ಶಾಸನದಲ್ಲಿರುವ–

ಮಹಾಪಾಶುಪತರೊಳಂ ಶ್ರೌತ್ರಿಯರೋಳೆ
ನೆಗಳ್ದದಗಣಿತದ ಮೆಯೆನಲ್ವೊಳಲ್ದಪೆ
ಖಾಳಾಮುಖಿಯಸುಧರ್ಮಪ್ರಮುಖಂ
ಅಂತೆನಿಸಿದ ಹೊಂನಯಂಗಳನ್ವಯಮಂ ॥

ಎಂಬ ನಿರೂಪಣೆಯಿಂದ ಸ್ಪಷ್ಟವಾಗುತ್ತದೆ.[೧೫] ಈ ನಾಡನ್ನಾಳಿದ ಆಳರಸರು ಮತ್ತು ಅಧಿಕಾರಿಗಳು ಶೈವ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ಕೊಡಮಾಡಿದ್ದಾರೆ. ಜೊತೆಗೆ ಈ ಧರ್ಮದ ದೇವಾಲಯಗಳ ಅಂಗಭೋಗ, ರಂಗಭೋಗ, ಜೀರ್ಣೋದ್ಧಾರಕ್ಕೆ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ. ಅಂತಾಗಿ ಈ ನಾಡಿನಲ್ಲಿ ಶೈವ ಧರ್ಮದ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಮೊದಲಾದ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿಶಿಷ್ಟವಾಗಿ ಬೆಳೆದು ಬಂದಿವೆ.

ಸವದತ್ತಿಯ ರಟ್ಟರ ಳನೆಯ ಕಾರ್ತವೀರ್ಯನ ಪಟ್ಟದರಸಿ ಏಚಲಾದೇವಿ ಜೈನಳಾಗಿದ್ದರೂ ಶೈವ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉದಾರತೆಯನ್ನು ತೋರಿಸಿದ್ದಾಳೆ. ಇವಳು ಅಂಕರಸನು ಸವದತ್ತಿಯಲ್ಲಿ ಕಟ್ಟಿಸಿದ್ದ ಅಂಕೇಶ್ವರ ದೇವಾಲಯಕ್ಕೆ ಉದಾರವಾಗಿ ದಾನ ಮಾಡಿದ್ದಾಳೆ.[೧೬] ಇದು ಏಚಲಾದೇವಿಯ ಪರಧರ್ಮ ಸಹಿಷ್ಣುತೆಗೆ ಉತ್ತಮ ನಿದರ್ಶನವಾಗಿದೆ. ಸೊಗಲದ ಸುವರ್ಣಾಕ್ಷಿದೇವರಿಗೆ ಕಂಚಿಯಬ್ಬೆಯು ಕ್ರಿ.ಶ. ೯೮೦ರಲ್ಲಿ ದತ್ತಿ ಕೊಟ್ಟಿದ್ದಾಳೆ.[೧೭] ಗೋಕಾಕ ಪಾಲ್ಸ್‌ದ ಮಹಾಲಿಂಗೇಶ್ವರ ದೇವಾಲಯಕ್ಕೆ ಮುಮ್ಮಡಿ ಕಾರ್ತವೀರ್ಯನು ಕೂಹುಂಡಿನಾಡಿನ ಕುಂದರಗಿ ಕಂಪಣದ ಕೊಣ್ಣೂರು ಗ್ರಾಮವನ್ನು ದತ್ತಿ ಬಿಟ್ಟಿದ್ದಾನೆ.[೧೮] ಳನೆಯ ಕಾರ್ತವೀರ್ಯನ ಆಳ್ವಿಕೆಯ ಕಾಲದಲ್ಲಿ ಇಲ್ಲಿಯ ಹೆಬ್ಬೆಯನಾಯಕನು ಹಣ್ಣಿಕೇರಿಯಲ್ಲಿ ಶಿವಾಲಯವನ್ನು ನಿರ್ಮಿಸಿ ಇದರ ಅಂಗಭೋಗ ಮತ್ತು ರಂಗಭೋಗಕ್ಕೆ ಭೂದಾನ ಮಾಡಿದ್ದಾನೆ.[೧೯] ಇಮ್ಮಡಿ ಕಾರ್ತವೀರ್ಯನ ಅಜ್ಜ ಅಂಕರಸನು ಸವದತ್ತಿಯಲ್ಲಿ ನಿರ್ಮಿಸಿದ ಅಂಕೇಶ್ವರ ದೇವಾಲಯಕ್ಕೆ ಹೂಲಿಯ ಮಠದ ಜ್ಞಾನಪಂಡಿತದೇವನ ಸನ್ನಿಧಿಯಲ್ಲಿ ಭಾಗಲದೇವಿ ಭೂದಾನ ಮಾಡಿದ್ದಾಳೆ. ಜಿನಭಕ್ತೆಯಾದ ಇವಳು ಶೈವಧರ್ಮಕ್ಕೆ ಅಪಾರ ಸೇವೆ ಸಲ್ಲಿಸಿರುವುದು ಗಮನಾರ್ಹವಾಗಿದೆ.

ಸವದತ್ತಿಯ ರಟ್ಟರ ಕಣ್ಣಕೈರನು ಶಾಸ್ತ್ರ, ಸಿದ್ಧಾಂತ, ವೇದಾಂತದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿದ್ದನು. ಸಮಕಾಲೀನ ಪ್ರತಿಯೊಂದು ಧರ್ಮಗಳಿಗೆ ಪ್ರೋತ್ಸಾಹವನ್ನು ಕೊಡುವುದರೊಂದಿಗೆ ಆಯಾ ಧರ್ಮಗಳ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಅವುಗಳ ಅಂಗಭೋಗ ಮತ್ತು ರಂಗಭೋಗಕ್ಕೆ ಉದಾರವಾಗಿ ದಾನ ಮಾಡಿದ್ದಾನೆ.[೨೧] ಇಮ್ಮಡಿ ಲಕ್ಷ್ಮೀದೇವನು ಶ್ರೀಶೈಲದ ಮಲ್ಲಿಕಾರ್ಜುನನ

ದರ್ಶನ ಪಡೆದು ಅಲ್ಲಿಂದ ಪವಿತ್ರ ಲಿಂಗವನ್ನು ತಂದು ಸವದತ್ತಿಯ ನಾಗರಕೆರೆಯ ದಡದಲ್ಲಿ ತನ್ನ ತಂದೆ ಮಲ್ಲಿಕಾರ್ಜುನನ ಹೆಸರಿನಲ್ಲಿ ಪ್ರತಿಷ್ಠಾಪನೆ ಮಾಡಿ ದೇವಾಲಯವನ್ನು ನಿರ್ಮಿದ್ದಾನೆ.[೨೨] ಇದು ಈತನ ಶೈವ ಧರ್ಮದ ಭಕ್ತಿಯನ್ನು ಎತ್ತಿ ತೋರಿಸುತ್ತದೆ. ರಾಯಬಾಗದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾಗಿರುವ ಸೋಮೇಶ್ವರ ದೇವಾಲಯವು ಶೈವ ಧರ್ಮದ ಮೇರುಕೃತಿಯಾಗಿದೆ. ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಪಟ್ಟದರಸಿ ಏಚಲಾದೇವಿ ಶಿವಭಕ್ತೆಯಾಗಿದ್ದಳು. ಇವಳು ನೇಸರಗಿಯಲ್ಲಿ ಹೆಬ್ಬೇಶ್ವರ, ಮಾಣಿಕೇಶ್ವರ ಮತ್ತು ವೀರಭದ್ರ ದೇವಾಲಯಗಳನ್ನು ನಿರ್ಮಿಸುವ ಮೂಲಕ ಶೈವ ಭಕ್ತಿಯನ್ನು ಮೆರೆದಿದ್ದಾಳೆ.[೨೩] ಹಾಗೆಯೇ ಈ ಕಾಲಾವಧಿಯಲ್ಲಿ ಸವದತ್ತಿಯ ಅಂಕೇಶ್ವರ, ಬೆಳವಡಿಯ ವೀರಭದ್ರ, ನೇಸರಗಿಯ ವೀರಭದ್ರ, ವಣ್ಣೂರಿನ ಬಸವೇಶ್ವರ, ಸಂಕೇಶ್ವರದ ಶಂಕರಲಿಂಗ ಮೊದಲಾದ ಅನೇಕ ಶೈವ ದೇವಾಲಯಗಳು ನಿರ್ಮಾಣವಾಗಿವೆ. ಈ ದೇವಾಲಯಗಳ ಅಂಗಭೋಗ, ರಂಗಭೋಗ, ಜೀರ್ಣೋದ್ಧಾರ, ಸ್ಥಾನಾಚಾರ್ಯರ ಆಹಾರದಾನ ಇತ್ಯಾದಿ ಚಟುವಟಿಕೆಗಳಿಗೆ ಸಮಕಾಲೀನ ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳು ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ. ಸವದತ್ತಿಯ ರಟ್ಟ ಮನೆತನದ ಆಳರಸರು ಜೈನಧರ್ಮೀಯರಾಗಿದ್ದರೂ ಶೈವ ಧರ್ಮಕ್ಕೆ ಪ್ರೋತ್ಸಾಹ ಕೊಡಮಾಡಿರುವುದು ಇವರ ಧರ್ಮಸಹಿಷ್ಣುತೆಯನ್ನು ಎತ್ತಿ ತೋರಿಸುತ್ತದೆ.

೬.೨.೧. ಶೈವ ಆಚಾರ್ಯರು

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ಶೈವ ಧರ್ಮದ ವಿವಿಧ ಪಂಥಗಳ ಆಚಾರ್ಯರ ಸಿದ್ಧಾಂತ, ತಪಸ್ಸು, ವಿದ್ವತ್ತು, ತರ್ಕ, ಜ್ಞಾನಾರ್ಜನೆ ಮತ್ತು ಅವರು ಕೈಗೊಂಡಿರುವ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಚಿತ್ರಿತವಾಗಿವೆ. ಈ ಆಚಾರ್ಯರ ಕಾಲಮಾನ ಮತ್ತು ಇವರು ಕೈಗೊಂಡಿರುವ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

೬.೨.೧.೧. ಮಲೆಯಾಳಪಂಡಿತದೇವ

ಕಲಬಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಶೈವ ಧರ್ಮದ ಲಾಕುಳೀಶ-ಪಾಶುಪತ ಪಂಥದ ಮಲೆಯಾಳಪಂಡಿತದೇವನ ಪ್ರಸ್ತಾಪವಿದೆ.[೨೪] ಈತನು ಇಂದಿನ ನವಲಗುಂದ ತಾಲ್ಲೂಕಿನ ಅಣ್ಣಿಗೇರಿಯ ನಗರೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನು.

೬.೨.೧.೨. ತೇಜೋರಾಶಿಪಂಡಿತದೇವ

ಕಲಬಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಶೈವ ಧರ್ಮದ ಲಾಕುಳೀಶ-ಪಾಶುಪತ ಪಂಥದ ತೇಜೋರಾಶಿಪಂಡಿದೇವನ ಉಲ್ಲೇಖವಿದೆ. ಈತನು ಈ ಮೇಲಿನ ಮಲೆಯಾಳಪಂಡಿತದೇವನ ಶಿಷ್ಯನಾಗಿದ್ದು, ಕೂಡನಪೂರ್ವದವಳ್ಳಿಯ (ಇಂದಿನ ಖೋದನಾಪುರ) ನಗರೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನು.[೨೫]

೬.೨.೧.೩. ರುದ್ರಶಕ್ತಿ

ನೇಸರಗಿಯ ಕ್ರಿ.ಶ. ೧೨೯೯ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ರುದ್ರಶಕ್ತಿಯ ಪ್ರಸ್ತಾಪವಿದೆ.[೨೬] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೨.೧.೪. ವಾಮಶಕ್ತಿ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ವಾಮಶಕ್ತಿಯ ಪ್ರಸ್ತಾಪವಿದೆ.[೨೭] ಈತನು ಈ ಮೇಲಿನ ರುದ್ರಶಕ್ತಿಯ ಶಿಷ್ಯನು.

೭.೨.೧.೫. ಜ್ಞಾನಶಕ್ತಿ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಜ್ಞಾನಶಕ್ತಿಯ ಪ್ರಸ್ತಾಪವಿದೆ.[೨೮] ಸವದತ್ತಿ ತಾಲ್ಲೂಕಿನ ಹೂಲಿಯ ಕಲ್ಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದ ಈತನು ಈ ಮೇಲಿನ ವಾಮಶಕ್ತಿಯ ಶಿಷ್ಯನು.

೭.೨.೧.೬. ನಾಗರಾಶಿಮುನಿ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ನಾಗರಾಶಿಮುನಿಯ ಪ್ರಸ್ತಾಪವಿದೆ.[೨೯] ಈತನು ಈ ಮೇಲಿನ ಜ್ಞಾನಶಕ್ತಿಯ ಶಿಷ್ಯನು.

೭.೨.೧.೭. ಹೊನ್ನಯ್ಯ

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಹೊನ್ನಯ್ಯನ ಪ್ರಸ್ತಾಪವಿದೆ.[೩೦] ಈ ಮೇಲಿನ ನಾಗರಾಶಿಮುನಿಯ ಶಿಷ್ಯನಾದ ಈತನು ನೇಸರಗಿಯ ಹಬ್ಬೇಶ್ವರ, ಮಾಣಿಕೇಶ್ವರ, ಸಿದ್ಧೇಶ್ವರ ದೇವಾಲಯಗಳ ಸ್ಥಾನಾಚಾರ್ಯನಾಗಿದ್ದನು. ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನು ಈ ಆಚಾರ್ಯನ ಸನ್ನಿಧಿಯಲ್ಲಿ ಪ್ರಸ್ತುತ ದೇವಾಲಯಗಳ ಅಂಗಭೋಗ, ನಿತ್ಯನೈವೇದ್ಯ, ಚೈತ್ರಪವಿತ್ರ ಆಚರಣೆ, ತಪೋಧನರ ಆಹಾರದಾನ, ದೇವಾಲಯಗಳ ಖಂಡಸ್ಫುಟಿತ ಜೀರ್ಣೋದ್ಧಾರ, ಸಕಲ ಶ್ರೀಕಾರ್ಯಕ್ಕೆ ಭೂದಾನ ಮಾಡಿದ್ದಾನೆ.

೭.೨.೧.೮. ಬಾಳಚಂದ್ರಪಂಡಿತದೇವ

ವಣ್ಣೂರದ ಕ್ರಿ.ಶ. ೧೧೧೪ರ ಶಾಸನದಲ್ಲಿ ಬಾಳಚಂದ್ರಪಂಡಿತದೇವನ ಪ್ರಸ್ತಾಪವಿದೆ.[೩೧] ಪ್ರಸ್ತುತ ಶಾಸನದಲ್ಲಿ ಈತನನ್ನು–

> ಹರಿಹರಾದಿತ್ಯದೇವರಾಚಾರ್ಯ ಕಾಳಾಮುಖ
> ಪರ್ಬ್ಬತಾವಳಿ ಸಿಂಹಪುರುಷ ಲಾಕುಳಾಗಮದ
> ಸಮಸ್ತ ಶಾಸ್ತ್ರದಲ್ಲಿ ಪಾರಂಗತನಾದ
> ಶಿವದ್ರೋಹ ನಿವಾರಣುಮಪ್ಪ ॥

ಎಂದು ಕೊಂಡಾಡಲಾಗಿದೆ. ಈತನು ವಣ್ಣೂರದಲ್ಲಿ ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಪುತ್ರ ಯುವರಾಜ ಜಯಸಿಂಘದೇವನ (ಜಯಸಿಂಹ) ಹೆಸರಿನಲ್ಲಿ ನಿರ್ಮಾಣವಾಗಿದ್ದ ಜಯಸಿಂಘೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಪ್ರಭು ನಾಗಗಾವುಂಡನು ಪ್ರಸ್ತುತ ದೇವಾಲಯದ ಅಂಗಭೋಗ, ತಪೋಧನರ ಆಹಾರದಾನ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಈ ಆಚಾರ್ಯನ ಸನ್ನಿಧಿಯಲ್ಲಿ ಹನ್ನೆರಡು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ.

೭.೨.೧.೯. ಸರ್ವೇಶ್ವರಪಂಡಿತ

ಮುನವಳ್ಳಿಯ ಕ್ರಿ.ಶ. ೧೨೫೨ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಸರ್ವೇಶ್ವರಪಂಡಿತನ ಪ್ರಸ್ತಾಪವಿದೆ.[೩೨] ಈತನು ಸ್ಥಳೀಯ ಜಗದೀಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಪ್ರಸ್ತುತ ದೇವಾಲಯದ ಧಾರ್ಮಿಕ ಮತ್ತು ಸಾಮಾಜಿಕ ವಿವಿಧ ಚಟುವಟಿಕೆಗಳಿಗೆ ಅರವತ್ತು ವಕ್ಕಲುಗಳು ಈ ಆಚಾರ್ಯನ ಸನ್ನಿಧಿಯಲ್ಲಿ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ.

೭.೨.೧.೧೦. ಸೋಮೇಶ್ವರಪಂಡಿತದೇವ

ಸವದತ್ತಿಯ ಕ್ರಿ.ಶ. ೧೦೪೮ರ ಮತ್ತು ಕ್ರಿ.ಶ. ೧೦೮೭ರ ಶಾಸನಗಳಲ್ಲಿ ಸೋಮೇಶ್ವರಪಂಡಿತದೇವನ ಪ್ರಸ್ತಾಪವಿದೆ.[೩೩] ಈತನು ಹೂಲಿಯ ಮಠದ ಸ್ಥಾನಾಚಾರ್ಯನಾಗಿದ್ದನು. ಸವದತ್ತಿಯ ರಟ್ಟರ ಅಂಕರಸನು ಪ್ರಸ್ತುತ ದೇವಾಲಯದ ಅಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರ, ತಪೋಧನರ ಆಹಾರದಾನ, ವಿದ್ಯಾಭ್ಯಾತ್ರಕ್ಕೆ ಈ ಆಚಾರ್ಯನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ.

೭.೨.೧.೧೧. ತ್ರಿಭುವನಸಿಂಗಿಪಂಡಿತ

ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ತ್ರಿಭುವನಸಿಂಗಿಪಂಡಿತನ ಪ್ರಸ್ತಾಪವಿದೆ.[೩೪] ಈತನು ಸ್ಥಳೀಯ ಸುವರ್ಣಾಕ್ಷಿದೇವ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಪ್ರಸ್ತುತ ದೇವಾಲಯದ ವಿವಿಧ ಕಾರ್ಯಗಳಿಗೆ ಕುರುಬ ಹಾಲುಮತ ಜನಾಂಗದ (ಧನಗರ ಗೋತ್ರ) ಮಾತಾರತ್ನ ದಾನಧರ್ಮದ ಪರಿಣತಿಕೆ ಪರಮಮಾಹೇಶ್ವರಿ ಕಂಚಿಯಬ್ಬೆ ಎಂಬಾತಳು ಈ ಆಚಾರ್ಯನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾಳೆ. ಈ ಆಚಾರ್ಯನ ಧರ್ಮಪ್ರವಚನವನ್ನು ಹುಲಿಗಳೂ ಏಕಾಗ್ರಚಿತ್ತದಿಂದ ಆಲಿಸುತ್ತಿದ್ದವು ಎಂದು ಪ್ರಸ್ತುತ ಶಾಸನದಲ್ಲಿ ನಿರೂಪಣೆಯಿದೆ.

೭.೨.೧.೧೨. ಪದ್ಮರಾಶಿಪಂಡಿತ

ಜಗನೂರದ ಕ್ರಿ.ಶ. ೧೧೬೭ರ ಶಾಸನದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಪದ್ಮರಾಶಿಪಂಡಿತನ ನಿರೂಪಣೆಯಿದೆ.[೩೫] ಈತನು ಸ್ಥಳೀಯ ಸ್ವಯಂಭೂ ಸಿದ್ಧೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಪ್ರಸ್ತುತ ದೇವಾಲಯದ ವಿವಿಧ ಕಾರ್ಯಗಳಿಗೆ ವೈಜರಾಸಯ್ಯ, ವಿಟ್ಟರಾಸಯ್ಯ, ಗುಡ್ಡಗಾವುಂಡ ಮೊದಲಾದವರು ಕೂಡಿಕೊಂಡು ಈ ಆಚಾರ್ಯನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾರೆ.

೭.೨.೧.೧೩. ಅಮೃತರಾಶಿಪಂಡಿತ

ಗೋಕಾಕ ಜಲಪಾತದ ಕ್ರಿ.ಶ. ೧೧೭೧ರ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಅಮೃತರಾಶಿಪಂಡಿತನ ಉಲ್ಲೇಖವಿದೆ.[೩೬] ಈತನು ಸ್ಥಳೀಯ ತಟ್ಟೇಶ್ವರ (ಇಂದಿನ ಮಹಾಲಿಂಗೇಶ್ವರ) ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಪ್ರಸ್ತುತ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಸವದತ್ತಿಯ ರಟ್ಟರ ಕತ್ತಮದೇವನು ಈ ಆಚಾರ್ಯನ ಸನ್ನಿಧಿಯಲ್ಲಿ ಕೂಹುಂಡಿನಾಡಿನ ಕುಂದುರುಗೆ ಕಂಪಣದ ಬಳಿಯ ಕೊಂಡನೂರು (ಇಂದಿನ ಕೊಣ್ಣೂರು) ಗ್ರಾಮವನ್ನು ದತ್ತಿ ಕೊಟ್ಟಿದ್ದಾನೆ.

೭.೨.೧.೧೪. ತ್ರೈಂಬಕೇಶ

ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ಶೈವ ಧರ್ಮದ ಪಾಶುಪತ ಪಂಥದ ತ್ರೈಂಬಕೇಶನ ಪ್ರಸ್ತಾಪವಿದೆ.[೩೭] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೨.೧.೧೫. ವಿಮಳಶಿವಮುನಿ

ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ಶೈವ ಧರ್ಮದ ಪಾಶುಪತ ಪಂಥದ ವಿಮಳಶಿವಮುನಿಯ ಪ್ರಸ್ತಾಪವಿದೆ.[೩೮] ಈತನು ಈ ಮೇಲಿನ ತ್ರೈಂಬಕೇಶನ ಶಿಷ್ಯನು. ದೇವಗಿರಿಯ ಸೇವುಣ ಮನೆತನದ ಕನ್ನರದೇವನ ಮಹಾಪ್ರಧಾನ ಸರ್ವಾಧಿಕಾರಿ ಚಾಮುಂಡನು ಮಮದಾಪುರದಲ್ಲಿ ತ್ರಿಕೂಟ ಪ್ರಾಸಾದವನ್ನು (ತ್ರಿಕೂಟಾಚಲ ದೇವಾಲಯ) ನಿರ್ಮಿಸಿ, ತನ್ನು ಗುರು ಸೋಮನಾಥನ ಅನುಗ್ರಹದಿಂದ ಈ ದೇವಾಲಯದ ವಿವಿಧ ಧಾರ್ಮಿಕ ಕಾರ್ಯಗಳಿಗೆ ಪುಲಿಗೆರೆ (ಇಂದಿನ ಲಕ್ಷ್ಮೇಶ್ವರ) ನಗರದಲ್ಲಿ ಈ ಆಚಾರ್ಯನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ.

೭.೨.೧.೧೬. ಮಾಳವೇಂದ್ರ

ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ಶೈವ ಧರ್ಮದ ಪಾಶುಪತ ಪಂಥದ ಮಾಳವೇಂದ್ರನ ಪ್ರಸ್ತಾಪವಿದೆ.[೩೯] ಈತನು ಈ ಮೇಲಿನ ವಿಮಳಶಿವಮುನಿಯ ಶಿಷ್ಯನು. ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೨.೧.೧೭. ಪಂಚಮಠದ ಆಚಾರ್ಯರು

ಮುಧೋಳದ ಕ್ರಿ.ಶ. ೧೨೩೩ರ ಶಾಸನದಲ್ಲಿ ಮುದುವೊಳಲಿನ ಪಂಚಮಠದ ಆಚಾರ್ಯರ ನಿರೂಪಣೆಯಿದೆ.[೪೦] ಈ ಆಚಾರ್ಯರು ಶೈವಾಗಮಗಳಲ್ಲಿ ಪರಿಣತರಾಗಿದ್ದರು. ಧರ್ಮಾಧರ್ಮಗಳನ್ನು ತಿಳಿದಿದ್ದರು. ಸವದತ್ತಿಯ ರಟ್ಟರ ಲಕ್ಷ್ಮೀದೇವನ ಮಹಾಪ್ರಧಾನ ಕಲ್ಲಚಮೂಪ ದಂಡನಾಯಕನು ಗಾಜೇಶ್ವರ(?) ದೇವಾಲಯದ ವಿವಿಧ ಧಾರ್ಮಿಕ ಕಾರ್ಯಗಳಿಗೆ ಈ ಆಚಾರ್ಯರ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ.

೭.೨.೨. ಶೈವ ದೇವಾಲಯಗಳು

ಸಿಂಧೂ ನಾಗರಿಕತೆಯ ಹರಪ್ಪ, ಮೊಹೆಂಜೋದಾರೊ, ಕಾಲಿಬಂಗಾನ್ ಮೊದಲಾದ ನೆಲೆಗಳಲ್ಲಿ ದೊರೆತ ಶಿವಲಿಂಗವನ್ನು ಹೋಲುವ ಕುರುಹುಗಳು, ಪಶುಪತಿ ಮುದ್ರೆಗಳು, ವೈದಿಕ ಸಾಹಿತ್ಯದ ಮಂತ್ರಗಳಲ್ಲಿ ಪ್ರಸ್ತಾಪಿತ ರುದ್ರ, ಪಶುಪ, ಶಿವ, ವೃಷಭ, ಮೀಢ್ವ, ಕಪರ್ದಿನ್ ಮೊದಲಾದ ಪದಗಳು, ಮಹಾಕಾವ್ಯಗಳು, ಪುರಾಣಗಳು ಮೊದಲಾದ ಸಾಹಿತ್ಯದಲ್ಲಿ ಪ್ರಸ್ತಾಪಿತ ವಿಚಾರಗಳಿಂದ ಶೈವ ಧರ್ಮದ ಪ್ರಾಚೀನತೆಯು ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದಕ್ಕೋಗುತ್ತದೆ.[೪೧] ಆದರೆ ಈ ಧರ್ಮದ ದೇವಾಲಯಗಳಾದಿ ವಿವಿಧ ಧಾರ್ಮಿಕ ನಿರ್ಮಾಣಗಳು ಶಾತವಾಹನರು, ಚುಟುಗಳು, ಇಕ್ಷ್ವಾಕುಗಳು, ಅಭೀರ ಅರಸು ಮನೆತನಗಳ ಆಳ್ವಿಕೆಯ ಕಾಲಾವಧಿಯಿಂದೀಚೆಗೆ ಕಂಡುಬರುತ್ತವೆ.[೪೨] ಕನ್ನಡನಾಡಿನ ಸಂದರ್ಭದಲ್ಲಿ ನರಗುಂದ ತಾಲ್ಲೂಕಿನ ವಾಸನ ಮತ್ತು ಶಿಕಾರಿಪುರ ತಾಲ್ಲೂಕಿನ ಮಲವಳ್ಳಿಯ ಕ್ರಿ.ಶ.

ಸುಮಾರು ೩ನೆಯ ಶತಮಾನದ ಶಾಸನಗಳೋಕ್ತ ಶಿವನ ದೇವಾಲಯಗಳ ಉಲ್ಲೇಖಗಳೇ ಅತ್ಯಂತ ಪ್ರಾಚೀನವಾಗಿವೆ.[೪೩] ತರುವಾಯ ಬನವಾಸಿ ಕದಂಬರು (ತಾಳಗುಂದ, ಶಿರಸಿ, ಸಾರೆ, ಇಂಗುಣ, ಅರವೇಲಂ ಇತ್ಯಾದಿ), ಬಾದಾಮಿ ಚಲುಕ್ಯರು (ಬಾದಾಮಿ, ಮಾಹಾಕೂಟ, ಐಹೊಳೆ, ಪಟ್ಟದಕಲ್ಲು, ಆಲಂಪುರ ಇತ್ಯಾದಿ), ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ದೇವಗಿರಿಯ ಸೇವುಣರು, ಕಲ್ಯಾಣದ ಕಲಚೂರಿಯರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು ಮೊದಲಾದ ಮನೆತನಗಳ ಆಳರಸರಾದಿ ಅಧಿಕಾರಿಗಳ ಆಶ್ರಯ-ಪ್ರೋತ್ಸಾಹ, ಪ್ರಸ್ತುತ ಧರ್ಮದ ಆಚಾರ್ಯರ ಧರ್ಮಪ್ರಸಾರ ಮತ್ತು ಪ್ರಭಾವ, ಜನಸಾಮಾನ್ಯರ ಬೆಂಬಲದಿಂದ ಶೈವ ಧರ್ಮದ ದೇವಾಲಯಗಳ ನಿರ್ಮಾಣ ಪರಂಪರೆ ಅವಿಚ್ಛಿನ್ನವಾಗಿ ಬೆಳೆದು ಬಂದಿದೆ. ಕೂಹುಂಡಿನಾಡಿನ ಪ್ರದೇಶದ ಶಾಸನಗಳಲ್ಲಿ ಪ್ರಸ್ತಾಪಿತವಾದ ಶೈವ ದೇವಾಲಯಗಳ ಕಾಲಮಾನ, ನಿರ್ಮಾತೃರು, ದಾನ-ದತ್ತಿಗಳು ಮತ್ತು ಇವುಗಳ ವಿಶೇಷವಾದ ವಾಸ್ತು ಲಕ್ಷಣಗಳು ಈ ಕೆಳಗಿನಂತಿವೆ.

೭.೨.೨.೧. ಮುಗಟಖಾನ ಹುಬ್ಬಳ್ಳಿಯ ನಗರೇಶ್ವರ ದೇವಾಲಯ

ಮುಗಟಖಾನ ಹುಬ್ಬಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ನಗರೇಶ್ವರ ದೇವಾಲಯದ ಪ್ರಸ್ತಾಪವಿದೆ.[೪೪] ಕಾಲಮಾನ ಮತ್ತು ವಾಸ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ಶೈವ ಧರ್ಮದ ಲಾಕುಳೀಶ-ಪಾಶುಪತ ಪಂಥದ ತೇಜೋರಾಶಿಪಂಡಿತದೇವನು ಈ ದೇವಾಲಯದ ಸ್ಥಾನಾಚಾರ್ಯನಾಗಿದ್ದನು. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಕಾಳಾಮುಖ ಪಂಥದ ಆಚಾರ್ಯರ ಮಠವಿತ್ತು. ಈ ಮಠದಲ್ಲಿ ನಡೆಯುವ ವಿದ್ಯಾದಾನಕ್ಕಾಗಿ ಭೂದಾನ ಮಾಡಲಾಗಿದೆ. ಈ ದೇವಾಲಯ ಮತ್ತು ಮಠಗಳು ಇಂದು ಉಳಿದು ಬಂದಿಲ್ಲ.

೭.೨.೨.೨. ಬೈಲಹೊಂಗಲದ ಮಾಚೇಶ್ವರ ದೇವಾಲಯ

ಬೈಲಹೊಂಗಲದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ ಮಾಚೇಶ್ವರ ದೇವಾಲಯದ ನಿರೂಪಣೆಯಿದೆ.[೪೫] ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯದ ವಿವಿಧ ಕಾರ್ಯಗಳಿಗೆ ಮಹಾಸಾಮಂತ ಗಂಡಮರಸನು ದಾನ ಮಾಡಿದ್ದಾನೆ. ಈ ದೇವಾಲಯವು ಇಂದಿನ ಶಿವನ ದೇವಾಲಯವಾಗಿರುವ ಸಾಧ್ಯತೆಯಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಹೀಗಾಗಿ ಇದರ ಪ್ರಾಚೀನ ವಾಸ್ತು ಲಕ್ಷಣಗಳು ತಿಳಿಯುವುದಿಲ್ಲ.

೭.೨.೨.೩. ವಣ್ಣೂರದ ಜಯಸಿಂಘೇಶ್ವರ ದೇವಾಲಯ

ವಣ್ಣೂರದ ಕ್ರಿ.ಶ. ೧೧೧೪ರ ಶಾಸನದಲ್ಲಿ ಜಯಸಿಂಘೇಶ್ವರ ದೇವಾಲಯದ ಉಲ್ಲೇಖವಿದೆ.[೪೬] ಇದನ್ನು ಚೋಳದೇವ ಮತ್ತು ನಾಡಪ್ರಭುಗಳು ಕೂಡಿಕೊಂಡು ಕಲ್ಯಾಣದ ಚಾಳುಕ್ಯರ ೬ನೆಯ ವಿಕ್ರಮಾದಿತ್ಯನ ಪುತ್ರ ಜಯಸಿಂಘದೇವನ ಹೆಸರಿನಲ್ಲಿ ನಿರ್ಮಿಸಿದ್ದಾರೆ. ಈ ದೇವಾಲಯದ ಅಂಗಭೋಗ,

ತಪೋಧನರ ಆಹಾರದಾನ, ವಿದ್ಯಾದಾನ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಪ್ರಭು ನಾಗಗಾವುಂಡನು ಜೈನಾಚಾರ್ಯ ಬಾಳಚಂದ್ರಪಂಡಿತದೇವನ ಸನ್ನಿಧಿಯಲ್ಲಿ ಭೂದಾನ ಮಾಡಿರುವುದು ಗಮನೀಯವಾಗಿದೆ. ಈ ದೇವಾಲಯವನ್ನು ಇಂದು ಪ್ರಭುದೇವ ದೇವಾಲಯ ಎಂದು ಕರೆಯಲಾಗುತ್ತಿದೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ದ್ವಾರಬಂಧದಲ್ಲಿ ಸ್ತಂಭಶಾಖೆ ಪ್ರಧಾನವಾಗಿದೆ. ಉತ್ತರಾಂಗಣದಲ್ಲಿ ಐದು ದ್ರಾವಿಡ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ಅಂತರಾಳದಲ್ಲಿ ನಂದಿಯಿದೆ. ಸಭಾಮಂಟಪದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿದ್ದು, ಇವು ಕ್ರಮವಾಗಿ ಪೀಠ, ಕಾಂಡ, ಕಳಸ, ಕಂಠ, ಫಲಕ, ಬೋಧಿಗೆಯಿಂದ ಕೂಡಿವೆ. ದ್ವಾರಬಂಧವು ಪಂಚಶಾಖಾ ರೀತಿಯದ್ದಾಗಿದ್ದು, ಅಲಂಕಾರಿಕ ಚಿತ್ರಣಗಳೆಲ್ಲವೂ ತ್ರುಟಿತವಾಗಿವೆ. ಉತ್ತರಾಂಗಣದಲ್ಲಿ ಫಾಂಸನಾ ಶೈಲಿಯ ಐದು ಶಿಖರಗಳ ಪ್ರತಿಕೃತಿಗಳಿವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ಕಂಠ, ಕಪೋತ, ಪದ್ಮ, ಮಕರಪಟ್ಟಿಕಾ ಅಂಗಗಳಿವೆ. ಭಿತ್ತಿಯು ಭದ್ರ ಮತ್ತು ಸಲಿಲಾಂತರಗಳಿಂದ ಕೂಡಿದೆ. ಇವುಗಳ ಮಧ್ಯದಲ್ಲಿ ಸ್ತಂಭಪಂಜರದ ಅಲಂಕಾರಗಳಿವೆ. ಭಿತ್ತಿಯ ಸುತ್ತಲೂ ಶೃಂಗಗಳಿಂದ ಕೂಡಿದ ಶಿಖರ, ದ್ವಿತಳ ವಿಮಾನ ಮಾದರಿಯ ದ್ರಾವಿಡ ಶಿಖರ, ಭೂಮಿಜ ರೀತಿಯ ನಾಗರ ಶಿಖರ, ಶೃಂಗಗಳಿಂದ ಕೂಡಿದ ನಾಗರ ಶಿಖರ, ನಕ್ಷತ್ರಾಕಾರದ ಶಿಖರ ಮಾದರಿಯ ಶಿಖರಗಳ ಪ್ರತಿರೂಪಗಳನ್ನು ತೋರಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಶಿಖರವು ಜೀರ್ಣೋದ್ಧಾರವಾಗಿದೆ.

೭.೨.೨.೪. ವಣ್ಣೂರದ ಕಲಿದೇವ ದೇವಾಲಯ

ವಣ್ಣೂರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲಿದೇವ ದೇವಾಲಯದ ಉಲ್ಲೇಖವಿದೆ.[೪೭] ಈ ದೇವಾಲಯವನ್ನು ಮಹಾಪ್ರಭು ಚಟ್ಟಯರ ಕಲ್ಲಗಾಮುಂಡನು ನಿರ್ಮಿಸಿ, ಇದರಲ್ಲಿ ಜರುಗುವ ಚೈತ್ರದ ಪರ್ವಗಳ ಆಚರಣೆ, ಸರ್ವ್ವಾರ್ಚನೆ, ರಂಗಪೂಜೆ ಮತ್ತು ಈ ದೇವಾಲಯದ ಜೀರ್ಣೋದ್ಧಾರಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಹೀಗಾಗಿ ಪ್ರಾಚೀನ ವಾಸ್ತು ಲಕ್ಷಣಗಳು ಸ್ಪಷ್ಟವಾಗುವುದಿಲ್ಲ.

೭.೨.೨.೫. ಚುಳಕಿಯ ಕಲ್ಮೇಶ್ವರ ದೇವಾಲಯ

ಚುಳಕಿಯ ಕಲ್ಮೇಶ್ವರ ದೇವಾಲಯದ ಎಡಬದಿಯ ಕಟ್ಟೆಯ ಭಿತ್ತಿಯಲ್ಲಿರುವ ಶಾಸನದಲ್ಲಿ ಬೈತಿಮಯ್ಯ ಮಠಪತಿ ಎಂಬಾತನು ಕ್ರಿ.ಶ. ೧೨೭೨ರಲ್ಲಿ ಈ ದೇವಾಲಯವನ್ನು ನಿರ್ಮಿಸಿದನು ಎಂಬ ಪ್ರಸ್ತಾಪವಿದೆ.[೪೮] ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದಿಗೂ ಉಳಿದು ಬಂದಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಈ ಎಲ್ಲ ಮಂಟಪಗಳ ವಿತಾನಗಳಲ್ಲಿ ಪದ್ಮಮಂಡಲಗಳ ಅಲಂಕಾರಗಳಿವೆ. ಸಭಾಮಂಟಪದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ದ್ವಾರಬಂಧಗಳು ಸರಳವಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿದ್ದ ಶಿಖರವು ನಾಶವಾಗಿದೆ.

೭.೨.೨.೬. ಅಸುಂಡಿಯ ಶಂಕರನಾರಾಯಣ ದೇವಾಲಯ

ಅಸುಂಡಿಯ ಕ್ರಿ.ಶ. ೧೦೯೩ರ ಶಾಸನದಲ್ಲಿ ಶಂಕರನಾರಾಯಣ ದೇವಾಲಯದ ಪ್ರಸ್ತಾಪವಿದೆ.[೪೯] ಈ ದೇವಾಲಯವು ಕಾಲಮಾನದ ಹಿನ್ನೆಲೆಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ಕಲ್ಯಾಣದ ಚಾಲುಕ್ಯರ ೬ನೆಯ ವಿಕ್ರಮಾದಿತ್ಯನು ಅಸುಂಡಿಯ ಎರಡುನೂರು ಮಹಾಜನರಿಗೆ (ಅಗ್ರಹಾರದ ಬ್ರಾಹ್ಮಣರು) ಸೇರಿದ ಮಾಣಿಕೇಶ್ವರ ಎಂಬಲ್ಲಿಯ ಭೂಮಿಯನ್ನು ಖರೀದಿಸಿ ಸರ್ವಮಾನ್ಯ ನಿತ್ಯಭೂಮಿ ಎಂದು ಘೋಷಿಸಿ, ಇದನ್ನು ಶಂಕರನಾರಾಯಣ ದೇವಾಲಯಕ್ಕೆ ರಾಜಕೊಡುಗೆಯಾಗಿ ದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ. ಇದು ಶೈವ ಮತ್ತು ವೈಷ್ಣವ ಧರ್ಮಗಳ ಸಾಮರಸ್ಯದ ಸಂಕೇತವಾಗಿದೆ.

೭.೨.೨.೭. ಮುನವಳ್ಳಿಯ ಪಂಚಲಿಂಗೇಶ್ವರ ದೇವಾಲಯ

ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಪಂಚಲಿಂಗೇಶ್ವರ ದೇವಾಲಯದ ನಿರೂಪಣೆಯಿದೆ.[೫೦] ಪ್ರಾಯಶಃ ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ದೇವಗಿರಿಯ ಸೇವುಣ ಮನೆತನದ ಸಿಂಘಣದೇವನ ಅಧಿಕಾರಿ ಜೋಗದೇವ ಚಮೂಪನು ಈ ದೇವಾಲಯದ ಮಾಟಕೂಟ ಪ್ರಾಸಾದ, ಖಂಡಸ್ಫುಟಿತ ಜೀರ್ಣೋದ್ಧಾರ, ನಿತ್ಯನೈವೇದ್ಯ, ರಂಗಭೋಗ, ಚೈತ್ರಪವಿತ್ರಕ್ಕೆ ಭೂದಾನ ಮಾಡಿದ್ದಾನೆ. ಇದೇ ದೇವಾಲಯಕ್ಕೆ ಉಗುರಮುನ್ನೂರ್ವರು, ಭೋಜಗರು, ತಂಬುಲಿಗರು ಹಣವನ್ನು ಮತ್ತು ಮುನ್ನೂರು ಕಮ್ಮ ಅಳತೆಯ ಭೂಮಿಯನ್ನು ದಾನ ಮಾಡಿದ್ದಾರೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಐದು ಶಿವಲಿಂಗಗಳಿವೆ. ಇವುಗಳನ್ನು ಭೂಮಿ, ಆಕಾಶ, ವಾಯು, ಅಗ್ನಿ, ನೀರು ಎಂದು ಕರೆಯಲಾಗುತ್ತದೆ. ದ್ವಾರಬಂಧದ ಲಲಾಟ ಪಟ್ಟಿಯಲ್ಲಿ ಓಂ ಎಂಬ ನಿರೂಪಣೆಯಿದೆ. ಅಷ್ಟಕೋನಾಕೃತಿಯ ವಿತಾನದ ಮಧ್ಯಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಅಂತರಾಳದ ದ್ವಾರಬಂಧದ ಇಕ್ಕೆಲಗಳಲ್ಲಿ ಎರಡು ಭದ್ರಕ ಪ್ರಕಾರದ ಸ್ತಂಭಗಳಿವೆ. ಸಭಾಮಂಟಪದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಸುತ್ತಲೂ ಭಿತ್ತಿಗಳಲ್ಲಿ ಹನ್ನೆರಡು ಭದ್ರಕ ಪ್ರಕಾರದ ಭಿತ್ತಿಗಂಬಗಳಿವೆ. ವಿತಾನವ ಮಧ್ಯದಲ್ಲಿರುವ ಪದ್ಮಮಂಡಲ ಅಲಂಕಾರವು ಗಮನೀಯವಾಗಿದೆ. ಸಭಾಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ. ಈ ದೇವಾಲಯದಲ್ಲಿ ಸೂರ್ಯ, ಗಣೇಶ, ಸಪ್ತಮಾತೃಕೆಯರ ಶಿಲ್ಪಗಳಿವೆ. ಅಧಿಷ್ಠಾನವು ಖುರಕ, ಪದ್ಮ ಪತ್ರಿಕಾ, ಕಂಠ, ಕುಮುದ, ಕಪೋತ ಭಾಗಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ. ಶಿಖರದ ಮುಂಭಾಗದಲ್ಲಿರುವ ಸುಖನಾಸದಲ್ಲಿ ನಟರಾಜನ ಶಿಲ್ಪವಿದ್ದು, ಮೇಲ್ಭಾಗದಲ್ಲಿ ನಾಸಿಯ ಅಲಂಕಾರವಿದೆ. ಶಿಖರದ ಮೇಲೆ ಶಿಲೆಯ ಕಳಸವಿದೆ.

೭.೨.೨.೮. ಮುನವಳ್ಳಿಯ ಜಗದೀಶ್ವರ ದೇವಾಲಯ

ಮುನವಳ್ಳಿಯ ಕ್ರಿ.ಶ. ೧೨೫೨ರ ಶಾಸನದಲ್ಲಿ ಜಗದೀಶ್ವರ ದೇವಾಲಯದ ನಿರೂಪಣೆಯಿದೆ.[೫೧] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ವಿವಿಧ

ಧಾರ್ಮಿಕ ಚಟುವಟಿಕೆಗಳಿಗೆ ಮುನವಳ್ಳಿಯ ಅರವತ್ತು ವಕ್ಕಲುಗಳು ಕಾಳಾಮುಖ ಪಂಥದ ಆಚಾರ್ಯ ಸರ್ವೇಶ್ವರಪಂಡಿತನ ಸನ್ನಿಧಿಯಲ್ಲಿ ದಾನ ಮಾಡಿದ್ದಾರೆ. ಈ ದೇವಾಲಯವು ಪಂಚಲಿಂಗೇಶ್ವರ ದೇವಾಲಯದ ಆವರಣದಲ್ಲಿದೆ. ಇದನ್ನು ಈಗ ಮೂರು ಲಿಂಗೇಶ್ವರ ದೇವಾಲಯವೆಂದು ಕರೆಯಲಾಗುತ್ತದೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಪೂರ್ವ, ದಕ್ಷಿಣ, ಉತ್ತರಾಭಿಮುಖವಾಗಿ ಮೂರು ಗರ್ಭಗೃಹಗಳು, ಒಂದು ಅಂತರಾಳ, ಒಂದು ನವರಂಗ, ಒಂದು ಸಭಾಮಂಟಪಗಳಿವೆ. ಮೂರೂ ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಚಿತ್ರಣವಿದೆ. ಮಧ್ಯದ ದ್ವಾರಬಂಧವು ರತ್ನ, ಲತಾ, ಸ್ತಂಭ ಅಲಂಕಾರದ ತ್ರಿಶಾಖೆಗಳನ್ನೊಳಗೊಂಡಿದೆ. ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಮೂರು ಫಾಂಸನಾ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ದ್ವಾರಬಂಧಗಳ ಇಕ್ಕೆಲಗಳಲ್ಲಿ ಕಂಜೂರಾಕ್ಷ ಪ್ರಕಾರದ ಜಾಲಂಧ್ರಗಳಿವೆ. ಅಂತರಾಳದ ದ್ವಾರಬಂಧದ ಪಾರ್ಶ್ವಗಳಲ್ಲಿ ಜಾಲಂಧ್ರಗಳಿವೆ. ನವರಂಗದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇವು ಪೀಠ, ಪಾದ, ದಂಡ, ಕಲಶ, ತಾಟಿಕಾ, ಘಟ, ಮಂಡಿ, ಫಲಕ, ಬೋಧಿಗೆಯನ್ನು ಒಳಗೊಂಡಿವೆ. ಇಲ್ಲಿರುವ ಎರಡು ದೇವಕೋಷ್ಠಗಳಲ್ಲಿ ಒಂದರಲ್ಲಿ ಭೈರವಿಯ ಶಿಲ್ಪವಿದೆ. ವಿತಾನದ ಮಧ್ಯದಲ್ಲಿ ಅಲಂಕಾರಮಯವಾದ ಪದ್ಮಮಂಡಲದ ಕೆತ್ತನೆಯಿದೆ. ಸಭಾಮಂಟಪಕ್ಕೆ ಮೂರು ಪ್ರವೇಶದ್ವಾರಗಳಿವೆ. ಇಲ್ಲಿ ಒಟ್ಟು ಇಪ್ಪತ್ತೆರಡು ಸ್ತಂಭಗಳಿವೆ. ಸುತ್ತಲೂ ಕಕ್ಷಾಸನವಿದೆ. ಅಧಿಷ್ಠಾನದಲ್ಲಿ ಖುರಕ, ಪದ್ಮ, ಪತ್ರಿಕಾ, ಅಂತರಿತ, ಕುಮುದ, ಕಪೋತ, ಮಕರ ಪಟ್ಟಿಕೆ, ವೇದಿ ಭಾಗಗಳಿವೆ. ಭಿತ್ತಿಯಲ್ಲಿ ಹಿಂಚಾಚು-ಮುಂಚಾಚುಗಳಿದ್ದು, ಅಲ್ಲಲ್ಲಿ ಕುಡ್ಯಸ್ತಂಭಗಳಿವೆ. ಇವುಗಳ ಮೇಲೆ ಫಾಂಸನಾ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ಈ ದೇವಾಲಯದ ಗರ್ಭಗೃಹದ ಮೇಲ್ಭಾಗದಲ್ಲಿ ಮೂಲತಃ ಫಾಂಸನಾ ಶೈಲಿಯ ಶಿಖರವಿದ್ದ ಕುರುಹುಗಳಿವೆ.

೭.೨.೨.೯. ಮುನವಳ್ಳಿಯ ಕಲಿದೇವ ದೇವಾಲಯ

ಮುನವಳ್ಳಿಯ ಕ್ರಿ.ಶ. ೧೨೫೨ರ ಶಾಸನದಲ್ಲಿ ಕಲಿದೇವ ದೇವಾಲಯದ ನಿರೂಪಣೆಯಿದೆ.[೫೨] ಈ ದೇವಾಲಯವು ಪಂಚಲಿಂಗೇಶ್ವರ ದೇವಾಲಯದ ಆವರಣದಲ್ಲಿದ್ದು, ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳು ತಿಳಿಯುವುದಿಲ್ಲ.

೭.೨.೧೦. ಯಡ್ರಾವಿಯ ಬ್ರಹ್ಮೇಶ್ವರ ದೇವಾಲಯ

ಯಡ್ರಾವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಬ್ರಹ್ಮೇಶ್ವರ ದೇವಾಲಯದ ಉಲ್ಲೇಖವಿದೆ.[೫೩] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಈ ದೇವಾಲಯದ ಪರಿಸರದಲ್ಲಿ ಮೂಲ ದೇವಾಲಯದ ಬಿಡಿ ವಾಸ್ತು ಅವಶೇಷಗಳು ಹರಡಿಕೊಂಡಿವೆ.

೭.೨.೨.೧೧. ಯೆಕ್ಕೇರಿಯ ಮಹಾದೇವ ದೇವಾಲಯ

ಯೆಕ್ಕೇರಿಯ ಕ್ರಿ.ಶ. ೫೪೯ರ ಬಂಡೆ ಶಾಸನದಲ್ಲಿ ಮಹಾದೇವ ದೇವಾಲಯದ ಪ್ರಸ್ತಾಪವಿದೆ.[೫೪] ಈ ದೇವಾಲಯವು ಕಾಲಮಾನದ ಹಿನ್ನೆಲೆಯಲ್ಲಿ ಬಾದಾಮಿಯ ಚಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ

ನಿರ್ಮಾಣವಾಗಿರುವಂತೆ ತೋರುತ್ತದೆ. ೧ನೆಯ ಪುಲಕೇಶಿಯ ಆಳ್ವಿಕೆಯ ಸಂದರ್ಭದಲ್ಲಿ ಹರಸೇನ ಎಂಬಾತನು ತನ್ನ ತಂದೆ–ತಾಯಿಯರಿಗೆ ಪುಣ್ಯಗೊಸ್ಕರ ಈ ದೇವಾಲಯಕ್ಕೆ ಬೇನಿಪುರದಲ್ಲಿ ನಾಲ್ಕು ನಿವರ್ತನ ಭೂಮಿಯನ್ನು ದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೧೨. ಸೊಗಲದ ಅಡಿಗೇಶ್ವರ ದೇವಾಲಯ

ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಸವದತ್ತಿಯ ಮಲ್ಲಿನಾಥ (ಮಲ್ಲಿಕಾರ್ಜುನ) ದೇವಾಲಯಕ್ಕೆ ಅಗ್ರಹಾರ ಅಸುಂಡಿಯ ನೂರು ಮಹಾಜನರು, ಹನ್ನೆರಡು ಗಾವುಂಡರು ಕೂಡಿಕೊಂಡು ಸೊಗಲದ ಅಡಿಗೇಶ್ವರ ದೇವಾಲಯದ ಕೋಲಿನಿಂದ ಅಳೆದು ಮುನ್ನೂರು ಕಂಬಗಳ ಅಳತೆಯ ಭೂಮಿಯನ್ನು ದಾನ ಮಾಡಿರುವ ನಿರೂಪಣೆಯಿದೆ.[೫೫] ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ನಿರ್ಮಾಣದಲ್ಲಿ ಕೆಂಪು ಮರಳು ಶಿಲೆಯನ್ನು ಬಳಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಗರ್ಭಗೃಹ ಮತ್ತು ಅಂತರಾಳದ ದ್ವಾರಬಂಧಗಳು ದ್ವಿಶಾಖಾ ರೀತಿಯದ್ದಾಗಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ವಿತಾನದ ಮಧ್ಯದಲ್ಲಿರುವ ಪದ್ಮದ ಅಲಂಕಾರವು ಗಮನೀಯವಾಗಿದೆ. ಇಲ್ಲಿರುವ ಎರಡು ದೇವಕೋಷ್ಠಗಳಲ್ಲಿ ಪ್ರಸ್ತುತ ಯಾವುದೇ ಶಿಲ್ಪಗಳಿಲ್ಲ. ದ್ವಾರಬಂಧವು ದ್ವಿಶಾಖಾ ರೀತಿಯಲ್ಲಿದ್ದು, ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಪದ್ಮಪತ್ರಿಕಾ, ಅಂತರಿತ, ಕುಮುದ, ಕಪೋತ ಭಾಗಗಳಿವೆ. ಕಪೋತವು ನಾಸಿಗಳಿಂದ ಅಲಂಕಾರವಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ.

೭.೨.೨.೧೩. ಉಮರಾಣಿಯ ಹೆಮ್ಮೇಶ್ವರ ದೇವಾಲಯ

ಉಮರಾಣಿಯ ಕ್ರಿ.ಶ. ೧೧೨೩ರ ಶಾಸನದಲ್ಲಿ ಹೆಮ್ಮೇಶ್ವರ ದೇವಾಲಯದ ಉಲ್ಲೇಖವಿದೆ.[೫೬] ಮಹಾಮಂಡಳೇಶ್ವರ ಹೆಮ್ಮಡಿದೇವನ ಪಟ್ಟಮಹಾದೇವಿ ಚಂದಲದೇವಿ ಮತ್ತು ಪುತ್ರರಾದ ಕುಮಾರ ದೋಲರಸದೇವ, ವನಸಿಂಹ ಕೂಡಿಕೊಂಡು ಈ ದೇವಾಲಯದ ಜೀರ್ಣೋದ್ಧಾರ ಮತ್ತು ತಪೋಧನರ ಆಹಾರದಾನಕ್ಕಾಗಿ ಹದಿನೈದು ಮತ್ತರು ಭೂಮಿಯನ್ನು ದಾನ ಮಾಡಿದ್ದಾರೆ. ಈ ದೇವಾಲಯವು ವಾಸ್ತು ಲಕ್ಷಣಗಳ ಹಿನ್ನೆಲೆಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ಉಳಿದ ವಾಸ್ತು ಲಕ್ಷಣಗಳು ಈ ಮೇಲಿನ ದೇವಾಲಯದಂತಿವೆ.

೭.೨.೨.೧೪. ಕಬ್ಬೂರದ ಕಲಿದೇವಸ್ವಾಮಿ ದೇವಾಲಯ

ಕಬ್ಬೂರದ ಕ್ರಿ.ಶ. ೧೨೦೪ರ ಶಾಸನದಲ್ಲಿ ಕಲಿದೇವಸ್ವಾಮಿ ದೇವಾಲಯದ ಪ್ರಸ್ತಾಪವಿದೆ.[೫೭] ಈ ದೇವಾಲಯವನ್ನು ಸ್ವಯಂಭೂಚಕ್ರವರ್ತಿ ಕಲಿದೇವಸ್ವಾಮಿ ದೇವಾಲಯ ಎಂತಲೂ ಕರೆಯಲಾಗಿದೆ. ಈ ದೇವಾಲಯವು ಕಾಲಮಾನದ ಹಿನ್ನೆಲೆಯಲ್ಲಿ ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ

ನಿರ್ಮಾಣವಾಗಿದೆ. ಅಗ್ರಹಾರ ಕಬ್ಬೂರಿನ ಹಿಳವಿದಾಸನು ಹೊಳ್ಳಯ್ಯ ನಾಯಕನ ಮುಂದಾಳತ್ವದಲ್ಲಿ ಕುದುರೆಗಳ ಮಾರಾಟಕ್ಕೆ ವಿಧಿಸಲಾಗುತ್ತಿದ್ದ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಇದರ ಮೂಲ ವಾಸ್ತು ಲಕ್ಷಣಗಳು ಗೋಚರಿಸುವುದಿಲ್ಲ.

೭.೨.೨.೧೫. ಕೆರೂರದ ದೇವಾಲಯ

ಕೆರೂರದ ಕ್ರಿ.ಶ. ೧೧೪೯ರ ಶಾಸನದಲ್ಲಿ ದೇವಾಲಯದ ನಿರೂಪಣೆಯಿದೆ.[೫೮] ಕಲಚೂರಿಯರ ಮಹಾಮಂಡಳೇಶ್ವರ ಇಮ್ಮಡಿ ಬಿಜ್ಜಳದೇವನು ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಕೂಹುಂಡಿನಾಡಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಈತನ ಮಹಾಪ್ರಧಾನ ಸೇನಾದಂಡನಾಯಕನಾದ ಜಯದೇವಯ್ಯನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೧೬. ಖಡಕಲಾಟದ ಹಂಚಿಕೇಶ್ವರ ದೇವಾಲಯ

ಖಡಕಲಾಟದ ಕ್ರಿ.ಶ. ೧೧೪೭ರ ಶಾಸನದಲ್ಲಿ ಅಗ್ರಹಾರ ಲಟ್ಟಿಯ (ಇಂದಿನ ಖಡಕಲಾಟ) ಹಂಚಿಕೇಶ್ವರ ದೇವಾಲಯದ ಉಲ್ಲೇಖವಿದೆ.[೫೯] ಅಯ್ಯಾವೊಳೆಯ ಸ್ವಾಮಿಗಳು, ಗವರೆಯರು, ಮುಮ್ಮುರಿದಂಡರು, ಉಭಯ ನಾನಾದೇಸಿಯರು ಸಭೆ ಸೇರಿ ಈ ದೇವಾಲಯಕ್ಕೆ ಇಪ್ಪತ್ತು ಕೋಣಗಳನ್ನು ದಾನ ಮಾಡಿದ್ದಾರೆ. ಈ ದೇವಾಲಯವು ಯಾವುದೋ ಕಾಲಾವಧಿಯಲ್ಲಿ ಸಂಪೂರ್ಣ ನಾಶವಾಗಿದ್ದು, ಮೂಲ ದೇವಾಲಯದ ಬಿಡಿ ವಾಸ್ತು ಅವಶೇಷಗಳು ಅಲ್ಲಲ್ಲಿ ಹರಡಿಕೊಂಡಿವೆ.

೭.೨.೨.೧೭. ಜಗನೂರದ ಸಿದ್ಧೇಶ್ವರ ದೇವಾಲಯ

ಜಗನೂರದ ಕ್ರಿ.ಶ. ೧೧೬೭ರ ಶಾಸನದಲ್ಲಿ ಸ್ವಯಂಭೂ ಸಿದ್ಧೇಶ್ವರ ದೇವಾಲಯದ ಪ್ರಸ್ತಾಪವಿದೆ.[೬೦] ಕಲ್ಯಾಣದ ಕಲಚೂರಿ ಮನೆತನದ ಮಹಾಮಂಡಳೇಶ್ವರ ಇಮ್ಮಡಿ ಬಿಜ್ಜಳದೇವನು ಕೂಹುಂಡಿನಾಡಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸಂದರ್ಭದಲ್ಲಿ ವೈಜರಾಸಯ್ಯ, ವಿಟ್ಟರಾಸಯ್ಯ, ಗುಡ್ಡಗಾವುಂಡ ಮೊದಲಾದವರು ಕಾಳಾಮುಖ ಪಂಥದ ಆಚಾರ್ಯ ಪದ್ಮರಾಶಿಪಂಡಿತನ ಸನ್ನಿಧಿಯಲ್ಲಿ ಈ ದೇವಾಲಯಕ್ಕೆ ಭೂದಾನ ಮಾಡಿದ್ದಾರೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೧೮. ದೊನವಾಡದ ಕಲಿದೇವ ದೇವಾಲಯ

ದೊನವಾಡದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಕಲಿದೇವ ದೇವಾಲಯದ ನಿರೂಪಣೆಯಿದೆ.[೬೧] ಕೊಲ್ಲಾಪುರದ ಶಿಲಾಹಾರ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಗಾವುಂಡನೊಬ್ಬನು ಈ ದೇವಾಲಯಕ್ಕೆ ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ.

೭.೨.೨.೧೯. ಕವಿಳಾಸಪುರದ ಕಲ್ಲಿನಾಥ ದೇವಾಲಯ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಕಲ್ಲಿನಾಥ ದೇವಾಲಯದ ಪ್ರಸ್ತಾಪವಿದೆ.[೬೨] ಪ್ರಸ್ತುತ ಶಾಸನದ ವಿಚಾರಗಳು ಮತ್ತು ಕಾಲಮಾನದ ಹಿನ್ನೆಲೆಯಲ್ಲಿ ಇದು ಕಲ್ಯಾಣದ ಕಲಚೂರಿಯರ

ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ. ಆದರೆ ಅಲ್ಲಲ್ಲಿ ಮೂಲ ದೇವಾಲಯದ ಬಿಡಿ ವಾಸ್ತು ಅವಶೇಷಗಳು ಚದುರಿಕೊಂಡಿವೆ.

೭.೨.೨.೨೦. ಕವಿಳಾಸಪುರದ ಮಲ್ಲಿಕಾರ್ಜುನ ದೇವಾಲಯ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಮಲ್ಲಿಕಾರ್ಜುನ ದೇವಾಲಯದ ಪ್ರಸ್ತಾಪವಿದೆ.[೬೩] ಈ ದೇವಾಲಯವೂ ಕಲಚೂರಿಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಇದು ಇಂದಿನ ಹಾಲಶಂಕರಲಿಂಗ ದೇವಾಲಯವಾಗಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಈ ದೇವಾಲಯದ ಪರಿಸರದಲ್ಲಿ ಮೂಲ ದೇವಾಲಯದ ಬಿಡಿ ವಾಸ್ತು ಅವಶೇಷಗಳು ಹರಡಿಕೊಂಡಿವೆ.

೭.೨.೨.೨೧. ಕವಿಳಾಸಪುರದ ಸಂಗಮೇಶ್ವರ ದೇವಾಲಯ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ಸಂಗಮೇಶ್ವರ ದೇವಾಲಯದ ಪ್ರಸ್ತಾಪವಿದೆ.[೬೪] ಈ ದೇವಾಲಯವೂ ಕಲಚೂರಿಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಇದು ಇಂದಿನ ಮೊಸರು ಶಂಕರಲಿಂಗ ದೇವಾಲಯವಾಗಿದೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳೆಲ್ಲವೂ ನೂತನ ಸ್ವರೂಪವನ್ನು ಪಡೆದಿವೆ.

೭.೨.೨.೨೨. ಕವಿಳಾಸಪುರದ ನಾಗೇಶ್ವರ ದೇವಾಲಯ

ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನದಲ್ಲಿ ನಾಗೇಶ್ವರ ದೇವಾಲಯದ ಪ್ರಸ್ತಾಪವಿದೆ.[೬೫] ಈ ದೇವಾಲಯವೂ ಕಲಚೂರಿಯರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಇದು ಇಂದಿನ ಶಂಕರಲಿಂಗ ದೇವಾಲಯವಾಗಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳು ತಿಳಿಯುವುದಿಲ್ಲ.

೭.೨.೨.೨೩. ಅಮ್ಮಣಗಿಯ ದೇವಾಲಯ

ಅಮ್ಮಣಗಿಯ ಕ್ರಿ.ಶ. ೧೨೫೭ರ ಶಾಸನದಲ್ಲಿ ದೇವಾಲಯದ ಪ್ರಸ್ತಾಪವಿದೆ.[೬೬] ಪ್ರದೇಶ ಮತ್ತು ಕಾಲಮಾನದ ಹಿನ್ನೆಲೆಯಲ್ಲಿ ಈ ದೇವಾಲಯವು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ಇದು ಇಂದಿನ ರಾಮಲಿಂಗೇಶ್ವರ ದೇವಾಲಯವಾಗಿರುವ ಸಾಧ್ಯತೆಯಿದೆ. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ.

೭.೨.೨.೨೪. ಕೋಚರಿಯ ತ್ರಿಕೂಟೇಶ್ವರ ದೇವಾಲಯ

ಕೋಚರಿಯ ಕ್ರಿ.ಶ. ೧೦೫೬ರ ಶಾಸನದಲ್ಲಿ ತ್ರಿಕೂಟೇಶ್ವರ ದೇವಾಲಯದ ನಿರೂಪಣೆಯಿದೆ.[೬೭] ಕಾಲಮಾನ ಪ್ರದೇಶದ ಹಿನ್ನೆಲೆಯಲ್ಲಿ ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವುದು ಸ್ಪಷ್ಟಪಡುತ್ತದೆ. ಕಲ್ಯಾಣದ ಚಾಳುಕ್ಯರ ೧ನೆಯ ಸೋಮೇಶ್ವರನ ಆಳ್ವಿಕೆಯ ಸಂದರ್ಭದಲ್ಲಿ ಈ ದೇವಾಲಯಕ್ಕೆ ದಾನ-ದತ್ತಿಗಳನ್ನು ಕೊಡಲಾಗಿದೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೨೫. ರಾಯಬಾಗದ ಕಲಿದೇವಸ್ವಾಮಿ ದೇವಾಲಯ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಕಲಿದೇವಸ್ವಾಮಿ ದೇವಾಲಯದ ಪ್ರಸ್ತಾಪವಿದೆ.[೧೮] ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ. ಈ ಮನೆತನದ ಎರೆಗನ ದಂಡನಾಯಕನಾದ ಮಾದಿರಾಜನು ಈ ದೇವಾಲಯಕ್ಕೆ ೫೫೦ ಕಂಬಗಳ ಅಳತೆಯ ಭೂಮಿ, ತೋಟ, ಎಂಟು ಹಸ್ತದ ಅಳತೆಯ ಮನೆಯನ್ನು ದಾನ ಮಾಡಿದ್ದಾನೆ. ಈ ದೇವಾಲಯವು ಬಡಿಗೇರ ಓಣಿಯಲ್ಲಿರುವ ಇಂದಿನ ಸೋಮೇಶ್ವರ ದೇವಾಲಯವಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ದ್ವಾರಬಂಧವು ರತ್ನ, ಬಳ್ಳಿ, ಸ್ತಂಭ ಅಲಂಕಾರಿಕ ತ್ರಿಶಾಖಾ ರೀತಿಯದ್ದಾಗಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಅಂತರಾಳದ ವಾಸ್ತು ಲಕ್ಷಣಗಳು ಗರ್ಭಗೃಹದಂತಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇದರ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ರತ್ನ, ಬಳ್ಳಿ, ಸ್ತಂಭ ಅಲಂಕಾರಿಕ ತ್ರಿಶಾಖಾ ರೀತಿಯದ್ದಾಗಿದೆ. ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಮುಖಮಂಟಪದಲ್ಲಿ ಸುತ್ತಲೂ ಕಕ್ಷಾಸನ ಇರುವುದು. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ಕುಮುದ, ಕಪೋತ, ಮಕರಪಟ್ಟಿಕೆ ಭಾಗಗಳಿವೆ. ಭಿತ್ತಿಯಲ್ಲಿ ನಿಯೋಜಿತ ಅಂತರದಲ್ಲಿ ಕುಡ್ಯಸ್ತಂಭಗಳಿವೆ. ಶಿಖರವು ದ್ರಾವಿಡ ಶೈಲಿಯಲ್ಲಿದ್ದು, ಜೀರ್ಣೋದ್ಧಾರವಾಗಿದೆ.

೭.೨.೨.೨೬. ರಾಯಬಾಗದ ಬ್ರಹ್ಮೇಶ್ವರ ದೇವಾಲಯ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಬ್ರಹ್ಮೇಶ್ವರ ದೇವಾಲಯದ ಪ್ರಸ್ತಾಪವಿದೆ.[೧೯] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಈ ದೇವಾಲಯವು ಇಂದಿನ ದೇಶಪಾಂಡೆ ಓಣಿಯುಲ್ಲಿರುವ ಬಂಕನಾಥ ದೇವಾಲಯುವಾಗಿರುವಂತೆ ತೋರುತ್ತದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ದ್ವಾರಬಂಧವು ದ್ವಿಶಾಖಾ ರೀತಿಯದ್ದಾಗಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಈ ದೇವಾಲಯದ ಹೊರಭಾಗವು ಸಂಪೂರ್ಣ ಜೀರ್ಣೋದ್ಧಾರವಾಗಿದೆ.

೭.೨.೨.೨೭. ರಾಯಬಾಗದ ಅಷ್ಟೇಶ್ವರ ದೇವಾಲಯ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಅಷ್ಟೇಶ್ವರ ದೇವಾಲಯದ ಪ್ರಸ್ತಾಪವಿದೆ.[೨೦] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಈ ದೇವಾಲಯವೂ ಇಂದು ಉಳಿದು ಬಂದಿಲ್ಲ.

೭.೨.೨.೨೮. ರಾಯಬಾಗದ ಭಳಾರಿ ದೇವಾಲಯ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಭಳಾರಿ ದೇವಾಲಯದ ಪ್ರಸ್ತಾಪವಿದೆ?[೨೧] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಈ ದೇವಾಲಯವೂ ಇಂದು ಉಳಿದು ಬಂದಿಲ್ಲ.

೭.೨.೨.೨೯. ರಾಯಬಾಗದ ವಿನಾಯಕ ದೇವಾಲಯ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ವಿನಾಯಕ ದೇವಾಲಯದ ಪ್ರಸ್ತಾಪವಿದೆ.[೨] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾದ ಈ ದೇವಾಲಯವೂ ಇಂದು ಉಳಿದು ಬಂದಿಲ್ಲ.

೭.೨.೨.೩೦. ಕೊಣ್ಣೂರದ ಕಯಮೇಶ್ವರ ದೇವಾಲಯ

ಕೊಣ್ಣೂರದ ಕ್ರಿ.ಶ. ೧೦೩೭ರ ಶಾಸನದಲ್ಲಿ ಕಯಮೇಶ್ವರ ದೇವಾಲಯದ ಪ್ರಸ್ತಾಪವಿದೆ.[೭೩] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯಕ್ಕೆ ಕಲಿಯಗಾವುಂಡನು ಭೂಮಿ, ಮನೆಯ ನಿವೇಶನ, ಎಣ್ಣೆಯ ಗಾಣ, ಆರು ಗದ್ಯಾನ, ಪೊನ್ನ, ಅರುವಣ ಎಂಬ ನಾಣ್ಯಗಳನ್ನು ದಾನ ಮಾಡಿದ್ದಾನೆ. ಇದು ಇಂದಿನ ಚಿಕಲೇಶ್ವರ ದೇವಾಲಯವಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ದ್ವಿಶಾಖಾ ರೀತಿಯ ದ್ವಾರಬಂಧದ ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಎರಡು ರೇಖಾನಾಗರ ಮತ್ತು ಮೂರು ದ್ರಾವಿಡ ಮಾದರಿಯ ಶಿಖರಗಳ ಪ್ರತಿರೂಪಗಳಿವೆ. ಅಂತರಾಳದಲ್ಲಿ ಎರಡು ದೇವಕೋಷ್ಠಗಳಿದ್ದು, ಇವುಗಳಲ್ಲಿ ಪ್ರಸ್ತುತ ಯಾವುದೇ ಶಿಲ್ಪಗಳಿಲ್ಲ. ಇದರ ದ್ವಾರಬಂಧದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಈ ದೇವಾಲಯದ ಅಧಿಷ್ಠಾನದಲ್ಲಿ ಖುರಕ, ಜಗತಿ, ಅಂತರಿತ, ಕುಮುದ, ಕಪೋತ ಭಾಗಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ. ಇದರ ಮುಖಪಟ್ಟಿಕೆಯಲ್ಲಿ ಶಿವನ ಪದ್ಮಾಸೀನ ಶಿಲ್ಪವಿದೆ.

೭.೨.೨.೩೧. ಮಮದಾಪುರದ ತ್ರಿಕೂಟಪ್ರಾಸಾದ ದೇವಾಲಯ

ಮಮದಾಪುರದ ಕ್ರಿ.ಶ. ೧೨೪೬ರ ಶಾಸನದಲ್ಲಿ ತ್ರಿಕೂಟಪ್ರಾಸಾದ ದೇವಾಲಯದ ಪ್ರಸ್ತಾಪವಿದೆ.[೪] ಈ ದೇವಾಲಯವನ್ನು ದೇವಗಿರಿಯ ಸೇವುಣರ ಕನ್ನರದೇವನ ದಂಡನಾಯಕನಾದ ಚಾಮುಂಡನು ತನ್ನ ಗುರು ಸೋಮನಾಥದೇವನ ಅನುಗ್ರಹದಿಂದ ನಿರ್ಮಿಸಿ, ಇದರ ವಿವಿಧ ಧಾರ್ಮಿಕ ಕಾರ್ಯಗಳಿಗೆ ಇಂದಿನ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ ನಗರದಲ್ಲಿ ವಿಮಳಶಿವಮುನಿಯ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ. ಶಾಸನದ ಮೇಲ್ಭಾಗದ ಶಿಲ್ಪಪಟ್ಟಿಕೆಯಲ್ಲಿ ಮೂರು ಗರ್ಭಗೃಹಗಳುಳ್ಳ ದೇವಾಲಯದ ಪ್ರತಿರೂಪವಿದೆ. ಇದಕ್ಕೆ ಫಾಂಸನಾ ಶೈಲಿಯ ಶಿಖರವಿದೆ. ಮಧ್ಯದ ಗರ್ಭಗೃಹದಲ್ಲಿ ಶಿವಲಿಂಗ, ಇಕ್ಕೆಲಗಳ ಗರ್ಭಗೃಹಗಳಲ್ಲಿ ವಿಷ್ಣು ಮತ್ತು ಬ್ರಹ್ಮನ ಶಿಲ್ಪಗಳಿವೆ. ಇದರಿಂದ ಈ ದೇವಾಲಯವು ತ್ರೈಪುರುಷ ದೇವಾಲಯವಾಗಿರುವುದು ಸೂಚಿತವಾಗುತ್ತದೆ. ಇಂದಿನ ಬಸವಣ್ಣ ದೇವಾಲಯವೇ ಈ ಶಾಸನೋಕ್ತ ತ್ರಿಕೂಟಪ್ರಾಸಾದ ದೇವಾಲಯವಾಗಿದೆ.

ಪಶ್ಚಿಮಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಒಂದು ನವರಂಗ, ಒಂದು ಮುಖಮಂಟಪಗಳಿವೆ. ಪಶ್ಚಿಮ, ದಕ್ಷಿಣ, ಉತ್ತರಾಭಿಮುಖವಾಗಿರುವ ಮೂರೂ ಗರ್ಭಗೃಹಗಳ ವಿತಾನಗಳ ಮಧ್ಯದಲ್ಲಿ ಪದ್ಮಮಂಡಲದ

ಅಲಂಕಾರಗಳಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇದರ ವಿತಾನದಲ್ಲಿರುವ ಪದ್ಮಮಂಡಲದ ಅಲಂಕಾರವು ಗಮನೀಯವಾಗಿದೆ. ಇದರಲ್ಲಿ ಆರು ದೇವಕೋಷ್ಠಗಳಿವೆ. ಮುಖಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ. ಮುಂಭಾಗದಲ್ಲಿ ರುದ್ರಕಾಂತ ಪ್ರಕಾರದ ಎರಡು ಸ್ವತಂತ್ರ ಸ್ತಂಭಗಳಿವೆ. ಇದರ ದ್ವಾರಬಂಧವು ರತ್ನ, ಬಳ್ಳಿ, ಸ್ತಂಭ ಅಲಂಕಾರಿಕ ತ್ರಿಶಾಖಾ ರೀತಿಯದ್ದಾಗಿದೆ. ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಮೂರು ರೇಖಾನಾಗರ ಶೈಲಿಯ ಶಿಖರಗಳ ಪ್ರತಿರೂಪಗಳಿದ್ದು, ಇವುಗಳ ಮಧ್ಯದಲ್ಲಿ ಗವಾಕ್ಷಗಳ ಅಲಂಕಾರಗಳಿವೆ. ಈ ದೇವಾಲಯದ ಅಧಿಷ್ಠಾನದಲ್ಲಿ ಖುರಕ, ಜಗತಿ, ಪದ್ಮ, ಅಂತರಿತ, ಕುಮುದ, ಅಂತರಿತ, ಕಪೋತ ಭಾಗಗಳಿವೆ. ಭಿತ್ತಿಯಲ್ಲಿ ಕುಡ್ಯಸ್ತಂಭಗಳಿವೆ. ಸುತ್ತಲೂ ಬಾಂಧನಾ ಪಟ್ಟಿಯಿದೆ. ಭಿತ್ತಿಯ ಹೊರತಲ ವಿನ್ಯಾಸವು ಪಂಚರಥ ಮಾದರಿಯಲ್ಲಿದೆ. ಶಿಖರವು ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಪ್ರಸ್ತುತ ಶಾಸನದ ಶಿಲ್ಪಪಟ್ಟಿಕೆಯಲ್ಲಿ ಕಂಡರಿಸಿರುವ ಉಬ್ಬುಶಿಲ್ಪಗಳನ್ನಾಧರಿಸಿ ಹಾಗೂ ಭಿತ್ತಿಯ ಸರಳತೆಯನ್ನು ಗಮನಿಸಿ ಮೂಲತಃ ಗರ್ಭಗೃಹಗಳ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರಗಳಿದ್ದವೆಂದು ತರ್ಕಿಸಬಹುದು.

೭.೨.೨.೩೨. ಅಂಬೆವಾಡಿಯ ಗಳಿಗೇಶ್ವರ ದೇವಾಲಯ

ಅಂಬೇವಾಡಿಯ ಕ್ರಿ.ಶ. ೧೧೮೫ರ ಶಾಸನದಲ್ಲಿ ಗಳಿಗೇಶ್ವರ ದೇವಾಲಯದ ನಿರೂಪಣೆಯಿದೆ.[೭೫] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ಅಂಗಭೋಗಕ್ಕೆ ಸವದತ್ತಿಯ ರಟ್ಟ ಮನೆತನದ ಲಕ್ಷ್ಮೀದೇವನು ದತ್ತಿ ಕೊಟ್ಟಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೩೩. ಬೆಳಗಾವಿಯ ಈಶ್ವರ ದೇವಾಲಯ

ಬೆಳಗಾವಿಯ ಕ್ರಿ.ಶ. ೧೧೯೯ರ ಶಾಸನದಲ್ಲಿ ಈಶ್ವರ ದೇವಾಲಯದ ಉಲ್ಲೇಖವಿದೆ.[೭೬] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ಪೂಜೆ ಮತ್ತು ನೈವೇದ್ಯಕ್ಕೆ ಗದ್ಯಾಣ ಮತ್ತು ಧರಣ ಎಂಬ ನಾಣ್ಯಗಳನ್ನು ದಾನ ಕೊಡಲಾದ ಕುರಿತು ಪ್ರಸ್ತುತ ಶಾಸನದಲ್ಲಿ ನಿರೂಪಣೆಯಿದೆ. ಕೋಟೆಯ ಆವರಣದಲ್ಲಿದ್ದ ಈ ದೇವಾಲಯವು ಇಂದು ಉಳಿದು ಬಂದಿಲ್ಲ. ಈ ದೇವಾಲಯದ ಸ್ತಂಭ ಇತ್ಯಾದಿ ಬಿಡಿ ವಾಸ್ತು ಅವಶೇಷಗಳನ್ನು ಸ್ಥಳೀಯ ಸೋಫಾ ಮಸೀದಿಯ ನಿರ್ಮಾಣಕ್ಕೆ ಬಳಸಿಕೊಳ್ಳಲಾಗಿದೆ.

೭.೨.೨.೩೪. ಮುಧೋಳದ ಗಾಜೇಶ್ವರ ದೇವಾಲಯ

ಮುಧೋಳದ ಕ್ರಿ.ಶ. ೧೨೩೩ರ ಶಾಸನದಲ್ಲಿ ಗಾಜೇಶ್ವರ ದೇವಾಲಯದ ಪ್ರಸ್ತಾಪವಿದೆ.[೭೭] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯಕ್ಕೆ ಪ್ರಸ್ತುತ ಮನೆತನದ ಲಕ್ಷ್ಮೀದೇವನ ಮಹಾಪ್ರಧಾನನಾದ ಕಲ್ಲಚಮೂಪನು ಸ್ಥಳೀಯ ಪಂಚಮಠದ ಆಚಾರ್ಯರ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೨.೨.೩೫. ಸೊಗಲದ ಸೋಮೇಶ್ವರ ದೇವಾಲಯ

ಸೊಗಲದ ಸೋಮೇಶ್ವರ ದೇವಾಲಯಕ್ಕೆ ಬೆಳವಡಿಯ ಕೇತಿಮಯ್ಯನ ಮಡದಿ ಕಂಚಿಕಬ್ಬೆಯು ದಾನ ಮಾಡಿದ್ದಾಳೆ.[೭೮] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಕೆಂಪು ಮರಳು ಶಿಲೆಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯವು ಕೂಹುಂಡಿನಾಡಿನ ಪ್ರದೇಶದ ಕೆಲವು ಅಪರೂಪದ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ಪೂರ್ವಾಭಿಮುಖವಾಗಿರುವ ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ರತ್ನ, ಬಳ್ಳಿ, ಸ್ತಂಭ, ಸಿಂಹ, ಬಳ್ಳಿ ಅಲಂಕಾರಿಕ ಪಂಚಶಾಖಾ ರೀತಿಯಲ್ಲಿದೆ. ಶಾಖೆಗಳ ಕೆಳಭಾಗದಲ್ಲಿ (ಪೇದ್ಯಾಪಿಂಡ ಭಾಗ) ಶೈವ ದ್ವಾರಪಾಲಕರ ತ್ರಿಭಂಗಿಯ ಉಬ್ಬುಶಿಲ್ಪಗಳಿವೆ. ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಐದು ಕೋಷ್ಠಗಳಿದ್ದು, ಇವುಗಳಲ್ಲಿ ಗಣೇಶ, ಬ್ರಹ್ಮ, ಕಾರ್ತಿಕೇಯ, ಶಿವ, ಪಾರ್ವತಿಯ ಉಬ್ಬುಶಿಲ್ಪಗಳಿವೆ.

ಅಂತರಾಳದಲ್ಲಿ ನಂದಿಯ ಶಿಲ್ಪವಿದೆ. ಇದರಲ್ಲಿ ಎರಡು ದೇವಕೋಷ್ಠಗಳಿದ್ದು, ಇವುಗಳಲ್ಲಿ ಗಣೇಶ ಮತ್ತು ಮಹಿಷಮರ್ದಿನಿಯ ಶಿಲ್ಪಗಳಿವೆ. ಅಷ್ಟಕೋನಾಕೃತಿಯ ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ನವರಂಗಕ್ಕೆ ಉತ್ತರ ಮತ್ತು ದಕ್ಷಿಣಾಭಿಮುಖವಾಗಿ ಇನ್ನೆರಡು ದ್ವಾರಬಂಧಗಳಿವೆ. ಈ ಮಂಟಪದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇವುಗಳು ಪೀಠ, ಪಾದ, ಕಾಂಡ, ಕುಂಭ, ಕಲಶ, ಯಾಟಿಕಾ, ಘಟ, ಮಂಡಿ, ಫಲಕ, ಗ್ರೀವ, ಬೋಧಿಗೆ ಭಾಗಗಳನ್ನು ಹೊಂದಿವೆ. ಸ್ತಂಭಗಳ ಮೇಲೆ ವರಾಹ, ನರಸಿಂಹ, ನಟರಾಜ, ಅಪ್ಸರೆಯರು, ಸೂರ್ಯ, ದುರ್ಗೆ, ವೀರಭದ್ರ, ಗಜಾಸುರ ಸಂಹಾರ, ಬೈರವಿ, ಭೈರವ, ಬ್ರಹ್ಮ, ವಿಷ್ಣು, ಶಿವ ಇತ್ಯಾದಿ ದೇವತೆಗಳ ಉಬ್ಬುಶಿಲ್ಪಗಳಿವೆ. ಇಲ್ಲಿಯೂ ಎರಡು ದೇವಕೋಷ್ಠಗಳಿದ್ದು, ಇವುಗಳಲ್ಲಿ ಗಣೇಶ ಮತ್ತು ಮಹಿಷಮರ್ದಿನಿಯ ಶಿಲ್ಪಗಳಿವೆ. ದ್ವಾರಬಂಧವು ರತ್ನ, ಬಳ್ಳಿ, ಸ್ತಂಭ, ಸಿಂಹ, ಬಳ್ಳಿ ಅಲಂಕಾರಿಕ ಪಂಚಶಾಖಾ ರೀತಿಯಲ್ಲಿದೆ. ಲಲಾಟ ಪಟ್ಟಿಯಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಐದು ಕೋಷ್ಠಕಗಳಿದ್ದು, ಇವುಗಳಲ್ಲಿ ಗಣೇಶ, ಬ್ರಹ್ಮ, ಕಾರ್ತಿಕೇಯ, ಶಿವ, ಪಾರ್ವತಿಯ ಉಬ್ಬುಶಿಲ್ಪಗಳಿವೆ. ಈ ದೇವಾಲಯದ ಅಧಿಷ್ಠಾನದಲ್ಲಿ ಖುರಕ, ಪದ್ಮಪತ್ರಿಕಾ, ಅಂತರಿತ, ಕುಮುದ, ಕಪೋತ ಭಾಗಗಳಿವೆ. ಕಪೋತದ ಮೇಲೆ ನಾಸಿಗಳ ಅಲಂಕಾರಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ. ಶಿಖರದ ಮುಂದಿನ ಭಾಗದಲ್ಲಿರುವ ಸುಖನಾಸದಲ್ಲಿ ನಟರಾಜನ ಶಿಲ್ಪವಿದ್ದು, ಮೇಲ್ಭಾಗದಲ್ಲಿ ಕೀರ್ತಿಮುಖದ ಅಲಂಕಾರವಿದೆ.

೭.೨.೨.೩೬. ನೇಸರಗಿಯ ಹೆಬ್ಬೇಶ್ವರ ಮತ್ತು ಮಾಣಿಕೇಶ್ವರ ದೇವಾಲಯಗಳು

ನೇಸರಗಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಹಬ್ಬೇಶ್ವರ, ಮಾಣಿಕೇಶ್ವರ, ಸಿದ್ಧೇಶ್ವರ ದೇವಾಲಯಗಳ ಪ್ರಸ್ತಾಪಗಳಿವೆ.[೭೯] ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನು ವೇಣುಗ್ರಾಮ ನೆಲೆವೀಡಿನಿಂದ ರಾಜ್ಯವಾಳುತ್ತಿದ್ದ ಸಂದರ್ಭದಲ್ಲಿ ಈತನ ಸೇವಕನಾದ ಹೆಬ್ಬೆಯನಾಯಕ ಮತ್ತು ಕಾಳವ್ವೆ ದಂಪತಿಗಳ ಪುತ್ರ ಬಾಚೆಯನಾಯಕ ಮತ್ತು ಈತನ ಧರ್ಮಪತ್ನಿ ಮಾಯಾದೇವಿ 'ಶ್ರೀ ವೀರಭೈರವ ದೇವರ'

ಸೇವಕರಾದ ನೇಸರಗಿಯ ಗಾವುಂಡರ ಪ್ರೀತಿಗೆ ಪಾತ್ರರಾಗಿದ್ದರು. ಹೆಬ್ಬೆಯನಾಯಕನು ಹೆಬ್ಬೇಶ್ವರ ದೇವಾಲಯವನ್ನು ಮತ್ತು ಈತನ ಧರ್ಮಪತ್ನಿ ಮಾಯಾದೇವಿ ಮಾಣಿಕೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳನ್ನು ನಿರ್ಮಿಸಿದರು. ಈ ದೇವಾಲಯಗಳಲ್ಲಿ ಲಿಂಗಗಳನ್ನು ಪ್ರತಿಷ್ಠಾಪಿಸಿ ತಮ್ಮ ಕುಲಗುರು ಹೊನ್ನಯ್ಯನ ಆಜ್ಞೆಯಂತೆ ದೇವರ ನೈವೇದ್ಯ, ತಪೋಧನರ ಆಹಾರದಾನ, ದೇವಾಲಯಗಳ ಜೀರ್ಣೋದ್ಧಾರಕ್ಕೆ ಕಾರ್ತವೀರ್ಯನ ನಿಯಾಮದಿಂದ ಧನ, ಕನಕ, ಭೂಮಿ, ಎಲೆ ತೋಟಗಳನ್ನು ದಾನ ಮಾಡಿದ್ದಾರೆ. ಮಾಣಿಕೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳು ಇಂದಿನ ಜೋಡುಗುಡಿಯಾಗಿದೆ.

ಪೂರ್ವಾಭಿಮುಖವಾಗಿರುವ ಜೋಡುಗುಡಿ ಕರ್ನಾಟಕ ದ್ರಾವಿಡ ಮಾದರಿಯಲ್ಲಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಅಂತರಾಳದ ದ್ವಾರಬಂಧವು ತ್ರಿಶಾಖಾ ರೀತಿಯದ್ದಾಗಿದ್ದು, ಇದರಲ್ಲಿ ಸ್ತಂಭಶಾಖೆ ಪ್ರಧಾನವಾಗಿದೆ. ಇದರ ಪಾರ್ಶ್ವಗಳಲ್ಲಿ ಜಾಲಂಧ್ರಗಳಿವೆ. ಸಭಾಮಂಟಪಕ್ಕೆ ದಕ್ಷಿಣ ಮತ್ತು ಉತ್ತರಾಭಿಮುಖವಾಗಿ ಇನ್ನೆರಡು ದ್ವಾರಬಂಧಗಳಿವೆ. ಇದರಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇವು ಕ್ರಮವಾಗಿ ಪೀಠ, ಕಾಂಡ, ಕಳಸ, ಕಂಠ, ಫಲಕ, ಬೋಧಿಗೆಯಿಂದ ಕೂಡಿವೆ. ಈ ಮಂಟಪದಲ್ಲಿ ಎರಡು ದೇವಕೋಷ್ಠಗಳಿದ್ದು, ಒಂದರಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ಈ ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ಪದ್ಮ, ಕಪೋತ ಭಾಗಗಳಿವೆ. ಭಿತ್ತಿಯಲ್ಲಿ ಹಿಂಚಾಚು ಮತ್ತು ಮುಂಚಾಚುಗಳಿವೆ. ಸುತ್ತಲೂ ಬಾಂಧನಾ ಪಟ್ಟಿಯಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ.

೭.೨.೨.೩೭. ಗೋಕಾಕ ಜಲಪಾತದ ತಟ್ಟೇಶ್ವರ ದೇವಾಲಯ

ಗೋಕಾಕ ಜಲಪಾತದ ಕ್ರಿ.ಶ. ೧೧೭೧ರ ಮತ್ತು ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ತಟ್ಟೇಶ್ವರ ದೇವಾಲಯದ ಪ್ರಸ್ತಾಪವಿದೆ.[೮೦] ಸವದತ್ತಿಯ ರಟ್ಟರ ಕತ್ತಮದೇವನು ಈ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಕೊಣ್ಣೂರು ಗ್ರಾಮವನ್ನು ಕಾಳಾಮುಖ ಪಂಥದ ಆಚಾರ್ಯ ಅಮೃತರಾಶಿಪಂಡಿತನ ಸನ್ನಿಧಿಯಲ್ಲಿ ದತ್ತಿ ಕೊಟ್ಟಿದ್ದಾನೆ. ಇದೇ ದೇವಾಲಯದ ಅಂಗಭೋಗ, ನೈವೇದ್ಯ, ಜೀರ್ಣೋದ್ಧಾರಕ್ಕಾಗಿ ಕಲ್ಯಾಣದ ಕಲಚೂರಿಯರ ಭುಜಬಲಮಲ್ಲದೇವನ ದಂಡನಾಯಕನಾದ ಪೆರ್ಗ್ಗಡೆ ಧನ್ನುಗಿದೇವನು ಕ್ರಿಶ. ಸುಮಾರು ೧೨ನೆಯ ಶತಮಾನದಲ್ಲಿ ಕೊಣ್ಣೂರು ಗ್ರಾಮವನ್ನು ಸ್ಥಳೀಯ ನಾಯಕರು ಮತ್ತು ಕರಣಿಕರ ಸಮ್ಮುಖದಲ್ಲಿ ದತ್ತಿ ಕೊಟ್ಟಿದ್ದಾನೆ. ಇದೇ ದೇವಾಲಯಕ್ಕೆ ಕಲ್ಯಾಣದ ಕಲಚೂರಿಯರ ಸೋವಿದೇವನ ದಂಡನಾಯಕ ಸೋವಣ ಮತ್ತು ಸವದತ್ತಿಯ ರಟ್ಟರ ಮಹಾಮಂಡಳೇಶ್ವರ ಕತ್ತಮದೇವ ಕ್ರಿಶ. ಸುಮಾರು ೧೨ನೆಯ ಶತಮಾನದಲ್ಲಿ ಭೇಟಿ ನೀಡಿ ಪೂಜೆ-ಪುನಸ್ಕಾರ ಮತ್ತು ಜೀರ್ಣೋದ್ಧಾರಕ್ಕಾಗಿ ದಾನ ಮಾಡಿದ್ದಾರೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿ

ಅಂತರಾಳವಿದೆ. ಸಭಾಮಂಟಪದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಈ ಮಂಟಪವನ್ನು ಪ್ರವೇಶಿಸಲು ಮೂರೂ ದಿಕ್ಕುಗಳಲ್ಲಿ ದ್ವಾರಗಳಿವೆ. ಅಂತರಾಳದ ದ್ವಾರಬಂಧದ ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಅಂತರಾಳದ ದ್ವಾರಬಂಧದ ಪಟ್ಟಿಕೆಗಳ ಕೆಳಭಾಗದಲ್ಲಿ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಮುಖಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದೆ. ಈ ದೇವಾಲಯವು ಕಪೋತಬಂಧ ಪ್ರಕಾರದ ಅಧಿಷ್ಠಾನವನ್ನು ಹೊಂದಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ತ್ರಿತಲ ಮಾದರಿಯ ದ್ರಾವಿಡ ಶಿಖರವಿದೆ. ಶಿಖರದಲ್ಲಿ ವಿಷ್ಣು, ಸ್ತ್ರೀ, ಕಾಲಭೈರವ, ಗಣೇಶ, ಶಿವ, ಆಕಾಶದಲ್ಲಿ ತೇಲುತ್ತಿರುವ ಗಂಧರ್ವರು, ಮೃದಂಗ ನುಡಿಸುತ್ತಿರುವ ಸ್ತ್ರೀ, ನೃತ್ಯ ಮಾಡುತ್ತಿರುವ ಇಬ್ಬರು ಸ್ತ್ರೀಯರು, ದಕ್ಷಬ್ರಹ್ಮ ಮೊದಲಾದ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವಿದೆ.

೭.೨.೨.೩೮. ಸವದತ್ತಿಯ ಅಂಕೇಶ್ವರ ದೇವಾಲಯ

ಸವದತ್ತಿಯ ಕ್ರಿ.ಶ. ೧೦೪೮ರ ಮತ್ತು ಕ್ರಿ.ಶ. ೧೦೮೭ರ ಶಾಸನಗಳಲ್ಲಿ ಅಂಕೇಶ್ವರ ದೇವಾಲಯದ ಪ್ರಸ್ತಾಪವಿದೆ.[೮೧] ಈ ದೇವಾಲಯವನ್ನು ಸವದತ್ತಿಯ ರಟ್ಟರ ಅಂಕರಸನು ನಿರ್ಮಿಸಿ, ಇದರ ಅಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರ, ತಪೋಧನರ ಆಹಾರದಾನ, ವಿದ್ಯಾಛಾತ್ರಕ್ಕೆ ಕಾಳಾಮುಖ ಪಂಥದ ಆಚಾರ್ಯ ಸೋಮೇಶ್ವರಪಂಡಿತನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ. ಸುಗಂಧವರ್ತಿ (ಇಂದಿನ ಸವದತ್ತಿ) ಪ್ರದೇಶದ ಮೇಲೆ ದಾಳಿ ಮಾಡಿದ ತಂಜಾವೂರಿನ ಚೋಳರನ್ನು ಹಿಮ್ಮೆಟ್ಟಿಸಿದ ಅಂಕರಸನು, ಈ ಜಯದ ನೆನಪಿಗಾಗಿ ಸವದತ್ತಿಯಲ್ಲಿ ಅಂಕೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ.

ಈ ದೇವಾಲಯದ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳವು ಚಿಕ್ಕದಾಗಿದ್ದು, ಇದರ ದ್ವಾರಬಂಧವು ಸರಳವಾಗಿದೆ. ವಿಶಾಲವಾದ ನವರಂಗದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಈ ಮಂಟಪದಲ್ಲಿರುವ ದೇವಕೋಷ್ಠಕದಲ್ಲಿ ನಾರಾಯಣ, ಗಣಪತಿ ಮತ್ತು ಒಂದೇ ಶಿಲೆಯಲ್ಲಿ ಬ್ರಹ್ಮಪೀಠ, ರುದ್ರಪೀಠ, ವಿಷ್ಣುಪೀಠಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ.

೭.೨.೨.೩೯. ಸವದತ್ತಿಯ ಮಲ್ಲಿನಾಥ ದೇವಾಲಯ

ಸವದತ್ತಿಯ ಕ್ರಿ.ಶ. ೧೨೨೮ರ ಶಾಸನದಲ್ಲಿ ಮಲ್ಲಿನಾಥ ದೇವಾಲಯದ ನಿರೂಪಣೆಯಿದೆ.[೮೨] ಈ ದೇವಾಲಯವನ್ನು ಸವದತ್ತಿಯ ರಟ್ಟರ ಇಮ್ಮಡಿ ಲಕ್ಷ್ಮೀದೇವನು ತನ್ನ ತಂದೆ ಮಲ್ಲಿಕಾರ್ಜುನನ ಪರೋಕ್ಷ ವಿನಯಾರ್ಥವಾಗಿ ನಿರ್ಮಿಸಿದ್ದಾನೆ. ಈ ದೇವಾಲಯದ ಅಂಗಭೋಗ, ರಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ರಟ್ಟ ಮನೆತನದ ರಾಜಗುರು ಜೈನಾಚಾರ್ಯ ಮುನಿಚಂದ್ರದೇವನ ಆಜ್ಞೆಯಂತೆ ಸವದತ್ತಿಯ ಹನ್ನೆರಡು ಗಾವುಂಡರು ಆರುನೂರು ಕಂಬಗಳ ಅಳತೆಯ ಮನೆಯನ್ನು ದಾನ ಮಾಡಿದ್ದಾರೆ. ಇದೇ ದೇವಾಲಯಕ್ಕೆ ಸವದತ್ತಿಯ ಸಮಸ್ತ ಪ್ರಜೆಗಳು, ಕೌದಿಯ ಮಾದಿಗಾವುಂಡ, ಕಡಲೆಯ ನಾಗಗಾವುಂಡ, ಪಂಚಮಠದ ತಪೋಧನರು, ಎಂಟುಹಿಟ್ಟುಗಳು, ವೀರಬಣಂಜರು, ಸಮಸ್ತ ನಖರರು, ಮುಮ್ಮುರಿದಂಡರು, ಅಯ್ವತ್ತೊಕ್ಕಲರು, ಯಡ್ರಾವಿಯ ಹನ್ನೆರಡು ಗಾವುಂಡರು, ಬೆಟ್ಟಸುರದ ಮನೆಯ ಸಿಂದರ ಮೈಲೆಯನಾಯಕ ಮೊದಲಾದವರು ಭೂಮಿ, ಭತ್ತ, ಎಣ್ಣೆಯನ್ನು ದಾನ ಮಾಡಿದ್ದಾರೆ.

ಇಂದಿನ ಪುರುದೇಶ್ವರ ದೇವಾಲಯುವೇ ಮಲ್ಲಿನಾಥ ದೇವಾಲಯುವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಲವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಒಂದು ನವರಂಗ, ಒಂದು ಮುಖಮಂಟಪವಿದೆ. ಗರ್ಭಗೃಹಗಳಲ್ಲಿ ಶಿವಲಿಂಗಗಳಿವೆ. ಮೂರು ಗರ್ಭಗಹಗಳ ದ್ವಾರಬಂಧಗಳು ತ್ರಿಶಾಖಾ ರೀತಿಯಲ್ಲಿದ್ದು, ಇವುಗಳಲ್ಲಿ ಸ್ತಂಭಶಾಖೆ ಪ್ರಧಾನವಾಗಿದೆ. ಮಧ್ಯದ ದ್ವಾರಬಂಧದ ಲಲಾಟ ಪಟ್ಟಿಯಲ್ಲಿ ಗಣೇಶನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಐದು ಫಾಂಸನಾ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ಈ ಎಲ್ಲ ಗರ್ಭಗೃಹಗಳ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಅಂತರಾಳಗಳ ದ್ವಾರಬಂಧಗಳು ತ್ರಿಶಾಖಾ ರೀತಿಯಲ್ಲಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ಇವುಗಳ ಪಾರ್ಶ್ವಗಳಲ್ಲಿ ಜಾಲಂಧ್ರಗಳಿವೆ. ಮಧ್ಯದ ದ್ವಾರಬಂಧದ ಉತ್ತರಾಂಗಣದಲ್ಲಿ ಮೂರು ಫಾಂಸನಾ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಇದರ ವಿತಾನದ ಮಧ್ಯದಲ್ಲಿರುವ ಪದ್ಮಮಂಡಲದ ಅಲಂಕಾರವು ಗಮನೀಯವಾಗಿದೆ. ಸಭಾಮಂಟಪದಲ್ಲಿ ಇಪ್ಪತ್ತು ಸ್ತಂಭಗಳಿವೆ. ಇದರಲ್ಲಿ ನಾಲ್ಕು ದೇವಕೋಷ್ಠಗಳಿದ್ದು, ಆದರೆ ಇವುಗಳಲ್ಲಿ ಪ್ರಸ್ತುತ ಯಾವುದೇ ಶಿಲ್ಪಗಳಿಲ್ಲ. ಈ ದೇವಾಲಯದ ಅಧಿಷ್ಠಾನವು ನಾಶವಾಗಿದ್ದು, ಪ್ರಸ್ತುತ ಕಪೋತ, ಮಕರಪಟ್ಟಿಕೆ, ವೇದಿ ಭಾಗಗಳು ಮಾತ್ರ ಕಾಣಿಸುತ್ತವೆ. ಮಕರಪಟ್ಟಿಕೆಯಲ್ಲಿ ಮಿಥುನ ಇತ್ಯಾದಿ ಉಬ್ಬುಶಿಲ್ಪಗಳಿವೆ. ಭಿತ್ತಿಯಲ್ಲಿ ಭದ್ರ ಮತ್ತು ಸಲಿಲಾಂತರಗಳಿವೆ. ಕುಡ್ಯಸ್ತಂಭಗಳ ಮೇಲೆ ಫಾಂಸನಾ ಶೈಲಿಯ ಶಿಖರಗಳ ಚಿತ್ರಣಗಳಿವೆ. ಇವುಗಳ ಮಧ್ಯದಲ್ಲಿ ನೃತ್ಯಭಂಗಿಯಲ್ಲಿರುವ ನಟರಾಜನ ಉಬ್ಬುಶಿಲ್ಪಗಳಿವೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವಿದೆ. ಗರ್ಭಗೃಹದ ಮೇಲಿನ ಶಿಖರವು ನಾಶವಾಗಿದ್ದು, ಕುಡ್ಯಸ್ತಂಭಗಳ ಮೇಲಿರುವ ಶಿಖರಗಳ ಪ್ರತಿರೂಪಗಳ ಆಧಾರದಿಂದ ಮೂಲತಃ ಇದರ ಶಿಖರವು ಫಾಂಸನಾ ಶೈಲಿಯದ್ದಾಗಿರುವಂತೆ ತೋರುತ್ತದೆ.

೭.೩. ವೈಷ್ಣವ ಧರ್ಮ

ಭಾರತದ ಪ್ರಾಚೀನ ಧರ್ಮಗಳಲ್ಲಿ ವೈಷ್ಣವ ಧರ್ಮವೂ ಒಂದಾಗಿದೆ. ವೈದಿಕ ಯುಗದಿಂದಲೂ ವಿಷ್ಣುಪಾಸನೆ ಜನಪ್ರಿಯವಾಗಿ ಬೆಳೆದು ಬಂದಿದೆ.[೮೩] ಋಗ್ವೇದ ಸಂಹಿತೆಯಲ್ಲಿ ಪ್ರಪ್ರಥಮವಾಗಿ ವಿಷ್ಣುವಿನ (ವಾಮನ–ತ್ರಿವಿಕ್ರಮ) ಪ್ರಸ್ತಾಪ ಬಂದಿದೆ. ತರುವಾಯದ ಶತಪತ ಬ್ರಾಹ್ಮಣ, ತೈತ್ತಿರೀಯ ಅರಣ್ಯಕ, ಮಹಾನಾರಾಯಣ ಉಪನಿಷತ್ತು. ಮಹಾಭಾರತ, ಭಗವದ್ಗೀತೆ, ಬೌದ್ಧಾಯನನ ಧರ್ಮಸೂತ್ರ, ಪಾಣಿನಿಯ ಅಷ್ಟಾಧ್ಯಾಯ, ಪತಂಜಲಿಯ ಮಹಾಭಾಷ್ಯ, ಕಾಳಿದಾಸನ ಶಾಕುಂತಲ ನಾಟಕ ಮೊದಲಾದ ಕೃತಿ–ಕಾವ್ಯಗಳಲ್ಲಿ ವಿಷ್ಣುವಿನ ವಿವಿಧ ಹೆಸರುಗಳು, ರೂಪಗಳು, ಅವತಾರಗಳು, ಇತರ ದೇವತೆಗಳೊಂದಿಗೆ ಸಮೀಕರಣ, ಸಿದ್ಧಾಂತ, ದರ್ಶನ, ಆಚಾರ, ವಿಚಾರ ಮೊದಲಾದ ಸಂಗತಿಗಳು ಪ್ರಸ್ತಾಪವಾಗಿವೆ. ಈ ಧರ್ಮದಲ್ಲಿ ವಿಷ್ಣುನನ್ನೇ ಪರಮೋಚ್ಛ ದೈವವೆಂದು ಪರಿಗಣಿಸಿ ಈತನನ್ನು ವಿವಿಧ ರೂಪ ಮತ್ತು ಅವತಾರಗಳಲ್ಲಿ ಆರಾಧಿಸುತ್ತಿದ್ದ ತಮ್ಮದೇಯಾದ ಸಿದ್ಧಾಂತವನ್ನೊಳಗೊಂಡ ಭಾಗವತ ಮತ್ತು ವೈಖಾನಸಾಗಮ ಎಂಬೆರಡು ಪಂಥಗಳಿದ್ದವು. ಇವು ಸಮಕಾಲೀನ ಪರಿಸರಕ್ಕನುಗುಣವಾಗಿ ತಮ್ಮ ತತ್ವ, ದರ್ಶನ, ಆಚರಣೆ, ಚಿಂತನೆಗಳಲ್ಲಿ ಬಲಸಂವರ್ಧಿಸಿಕೊಂಡು ಬದಲಾಗುತ್ತಿರುವ ಸಾಂಸ್ಕೃತಿಕ ಪರಿಸರಕ್ಕೆ ಒಗ್ಗಿಕೊಂಡು ಇಂದಿಗೂ ಅಸ್ತಿತ್ವದಲ್ಲಿವೆ.[೮೪]

ಭಾಗವತ ಪಂಥದ ಉಗಮದ ಕುರಿತಾಗಿ ಮಹಾಭಾರತದ ಶಾಂತಿಪರ್ವದ ನಾರಾಯಣೀಯ ಪರಿಚ್ಛೇದದಲ್ಲಿ ಪ್ರಸ್ತಾಪವಿದೆ. ಇದನ್ನು ಸಾತ್ತ್ವತ, ಏಕಾಂತಿಕ, ಪಾಂಚರಾತ್ರ ಎಂತಲೂ ಕರೆಯಲಾಗಿದೆ. ಈ ಪಂಥವನ್ನು ಕೃಷ್ಣನು ಸ್ಥಾಪಿಸಿದ್ದಾನೆ. ಈತನೇ ಈ ಪಂಥದ ಪ್ರಧಾನ ದೈವನಾಗಿದ್ದಾನೆ. ಈತನು ಬೋಧಿಸಿದ ಭಗವದ್ಗೀತೆ ಈ ಪಂಥದ ಪ್ರಧಾನ ಗ್ರಂಥವಾಗಿದೆ. ಇಂಡೋ-ಬ್ಯಾಕ್ಟ್ರಿಯನ್ ಅರಸ ಹೇಲಿಯೋಡೋರಸನ ಬೇಸನಗರದ ಗರುಡಧ್ವಜ ಸ್ತಂಭಶಾಸನ, ಮೇವಾಡ ಜಿಲ್ಲೆಯ ಚಿತ್ತೂರಿನ ಹತ್ತಿರದ ನಗರಿ ಮತ್ತು ಘೋಸುಂಡಿ, ಮಧ್ಯಪ್ರದೇಶದ ವಿಲಾಸಪುರ ಜಿಲ್ಲೆಯ ಬರ್ಹಿಖಡ, ಮಥುರಾ, ಮೋರಾ ಮೊದಲಾದೆಡೆಯ ಶಾಸನಗಳು ಈ ಪಂಥದ ಪ್ರಾಚೀನತೆಗೆ ಐತಿಹಾಸಿಕ ಕುರುಹುಗಳಾಗಿವೆ. ಮಹಾಭಾರತದಲ್ಲಿ ವಿಷ್ಣು ಮತ್ತು ಕೃಷ್ಣನ ಪರಸ್ಪರ ಸಮೀಕರಣದ ಪ್ರಸ್ತಾಪವಿದೆ. ಇದರಿಂದ ವೈಷ್ಣವ ಧರ್ಮವು ಭಾಗವತ ಪಂಥದ ಇನ್ನೊಂದು ಹೆಸರಾಗಿ ಮತ್ತು ಭಾಗವತ ಪಂಥವು ವೈಷ್ಣವ ಧರ್ಮವಾಗಿ ಪರಿಣಮಿಸಿದ ವಿಚಾರ ಮನದಟ್ಟಾಗುತ್ತದೆ. ಈ ಸಂಗತಿ ಭಗವದ್ಗೀತೆಯಲ್ಲಿಯೂ ಸೂಚಿತವಾಗಿದೆ. ಹೀಗೆ ಬೆಳೆದು ಬಂದ ಈ ಪಂಥವನ್ನು ತಮಿಳುನಾಡಿನ ಹನ್ನೆರಡು ಆಳ್ವಾರರು (ಕ್ರಿ.ಶ. ಸುಮಾರು ೨ನೆಯ ಶತಮಾನದಿಂದ ೯ನೆಯ ಶತಮಾನದವರೆಗೆ) ಮುಂದುವರಿಸಿಕೊಂಡು ಬಂದರು. ಕ್ರಿ.ಶ. ಸುಮಾರು ೮-೯ನೆಯ ಶತಮಾನದಲ್ಲಿ ಶಂಕರಾಚಾರ್ಯರು ವೈಷ್ಣವ ಧರ್ಮದಿಂದ ಭಾಗವತ ಪಂಥವನ್ನು ಬೇರ್ಪಡಿಸಿ ವೈಷ್ಣವ ಧರ್ಮವನ್ನು ಕ್ರಮಬದ್ಧಗೊಳಿಸಿದರು. ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಕ್ರಮವಾಗಿ ರಾಮಾನುಜಾಚಾರ್ಯ, ಮಧ್ವಾಚಾರ್ಯ ಮತ್ತು ವೇದಾಂತದೇಶಿಕರು ಈ ಪಂಥವನ್ನು ಮುಂದುವರಿಸಿಕೊಂಡು ಬಂದರು. ಇವರು ಇದಕ್ಕೆ ತಮ್ಮದೇಯಾದ ಸಿದ್ಧಾಂತ ಮತ್ತು ದರ್ಶನಗಳನ್ನು ಕಲ್ಪಿಸಿದರು. ಏಕದೇವೋಪಾಸನೆ ಮತ್ತು ನಿರ್ಹೇತುಕವಾದ ಭಕ್ತಿ ಈ ಪಂಥದ ವೈಶಿಷ್ಟ್ಯಗಳಾಗಿವೆ.[೮೫]

ವೈಖಾನಸಾಗಮ ಪಂಥವು ವಿಷ್ಣುವನ್ನೇ ಪರಮೋಚ್ಚ ದೈವವೆಂದು ಆರಾಧಿಸುತ್ತದೆ. ಆದರೆ ತನ್ನದೇಯಾದ ಸಿದ್ಧಾಂತ-ದರ್ಶನವನ್ನೊಳಗೊಂಡು ಕೆಲವು ಆಚಾರ-ವಿಚಾರಗಳಲ್ಲಿ ಭಾಗವತ ಪಂಥಕ್ಕಿಂತಲೂ ಬೇರೆಯಾಗಿದ್ದು ಮತ್ತು ಅದಕ್ಕಿಂತಲೂ ಪ್ರಾಚೀನವಾಗಿದೆ. ಋಗ್ವೇದ, ಕಾಳಿದಾಸನ ಶಾಕುಂತಲ ನಾಟಕ ಮೊದಲಾದ ಪ್ರಾಚೀನ ಕೃತಿ-ಕಾವ್ಯಗಳಲ್ಲಿ ಈ ಪಂಥದ ಸಿದ್ಧಾಂತ, ದರ್ಶನ, ಆಚಾರ, ವಿಚಾರಗಳ ಪ್ರಸ್ತಾಪಗಳಿವೆ. ವಿಷ್ಣುವೇ ಪರಮೋಚ್ಚ ದೈವನಾಗಿದ್ದು, ಈತನು ನಿಷ್ಕಲ ಮತ್ತು ಸಕಲನಾಗಿದ್ದಾನೆ. ಪರಮಾತ್ಮನು ತನ್ನ ಸಂಕಲ್ಪದಿಂದ ಸೃಷ್ಟಿಸುವ ವೈಷ್ಣವಾಂಡದಲ್ಲಿ ನಾಲ್ಕು ವ್ಯೂಹಾಂಡಗಳಿವೆ. ಮುಕ್ತಜೀವರು ಅನುಕ್ರಮವಾಗಿ ಆಮೋದ, ಪ್ರಮೋದ, ಸಮ್ಮೋದ, ವೈಕುಂಠ ಎಂಬ ನಾಲ್ಕು ವ್ಯೂಹಾಂಡಗಳನ್ನೇರಿ ಹೋಗುವಾಗ ಕ್ರಮವಾಗಿ ಅವರಿಗೆ ವಿಷ್ಣು, ಮಹಾವಿಷ್ಣು, ಸದಾವಿಷ್ಣು, ಸರ್ವವ್ಯಾಪ್ತಿ ವಿಷ್ಣುವಿನ ಸಾಕ್ಷಾತ್ಕಾರವಾಗುತ್ತದೆ. ಈ ನಾಲ್ಕು ವ್ಯೂಹಾಂಡಗಳಲ್ಲಿ ಪರಮಾತ್ಮನ ಅಂಶಗಳಾಗಿ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ತೋರಿಕೊಳ್ಳುತ್ತಾರೆ. ಈ ನಾಲ್ಕು ವ್ಯೂಹಮೂರ್ತಿಗಳಿಗೆ ಕ್ರಮವಾಗಿ ಧರ್ಮ, ಜ್ಞಾನ, ಐಶ್ವರ್ಯ, ವೈರಾಗ್ಯ ಎಂಬ ನಾಲ್ಕು ಗುಣಗಳಿರುತ್ತವೆ. ಈ ನಾಲ್ಕು ವ್ಯೂಹಗಳನ್ನಲ್ಲದೇ ಆದಿಮೂರ್ತಿಯನ್ನೊಳಗೊಂಡು ಐದು ವ್ಯೂಹಗಳೆಂದೂ ಹೇಳಲಾಗುತ್ತದೆ. ಹೀಗಾಗಿ ವಿಷ್ಣುವಿನ ದೇವಾಲಯಗಳಲ್ಲಿ

ಧ್ರುವಬೇರ, ಕೌತುಕಬೇರ, ಉತ್ಸವಬೇರ, ಸ್ವಪ್ನಬೇರ ಮತ್ತು ಬಲಿಬೇರ ಎಂಬ ಐದು ಮೂರ್ತಿಗಳನ್ನು (ಶಿಲ್ಪಗಳು) ಪೂಜಿಸಲಾಗುತ್ತದೆ. ಜೀವಾತ್ಮನು ಕ್ರಮವಾಗಿ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಮಾರ್ಗವಾಗಿ ಮೇಲೇರಿ ಆದಿಮೂರ್ತಿಯನ್ನು ತಲುಪುವುದು. ಇದು ಈ ಪಂಥದ ಸಿದ್ಧಾಂತ ಮತ್ತು ದರ್ಶನವಾಗಿದೆ.[೬೨]

ಕನ್ನಡನಾಡಿನಲ್ಲಿ ಕ್ರಿ.ಶ. ಸುಮಾರು ೧ನೆಯ ಶತಮಾನದಿಂದಲೂ ಭಾಗವತ ಮತ್ತು ವೈಖಾನಸಾಗಮ ಪಂಥಗಳ ಪ್ರಭಾವ ಗೋಚರಿಸುತ್ತದೆ. ಈ ನಾಡಿನ ಹಲ್ಮಿಡಿಯ ಕ್ರಿ.ಶ. ೪೫೦ರ ಶಾಸನವು ಐತಿಹಾಸಿಕ ದೃಷ್ಟಿಯಿಂದ ಈ ಧರ್ಮದ ಪ್ರಪ್ರಥಮ ಆಕರವಾಗಿದೆ. ಈ ನಾಡನ್ನಾಳಿದ ಬಹುತೇಕ ಅರಸು ಮನೆತನಗಳು ಈ ಧರ್ಮದ ಸಿದ್ಧಾಂತ ಮತ್ತು ಆಚಾರ್ಯ ಪರಂಪರೆಯ ಪ್ರಭಾವದಿಂದಾಗಿ ಇದರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ ವಿಚಾರ ಸಮಕಾಲೀನ ಶಾಸನಗಳಾದಿ ವಿವಿಧ ಪುರಾತತ್ವ ಕುರುಹುಗಳಿಂದ ಮನದಟ್ಟಾಗುತ್ತದೆ. ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದೀಚೆಗೆ ರಾಮಾನುಜಾಚಾರ್ಯರು ಈ ನಾಡಿನಲ್ಲಿ ಭಾಗವತ ಪಂಥದ ಹಿನ್ನೆಲೆಯ ಶ್ರೀವೈಷ್ಣವ ಧರ್ಮವನ್ನು ಪ್ರಸಾರ ಮಾಡಿದರು. ಇದು ಈ ನಾಡಿನ ದಕ್ಷಿಣ ಭಾಗದಲ್ಲಿ ತನ್ನ ಪ್ರಭಾವವನ್ನು ವ್ಯಾಪಕಗೊಳಿಸಿದೆ. ತರುವಾಯ ಹರಿದಾಸ ಪರಂಪರೆಯ ನರಹರಿತೀರ್ಥ, ಶ್ರೀಪಾದರಾಜ, ವ್ಯಾಸರಾಯ, ಪುರಂದರದಾಸ, ಕನಕದಾಸ ಮೊದಲಾದವರು ಸಾಹಿತ್ಯ ಮತ್ತು ಕೀರ್ತನೆಗಳ ಮೂಲಕ ಮುಂದುವರಿಸಿಕೊಂಡು ಬಂದರು. ಕನ್ನಡ ನಾಡಿನಲ್ಲಿ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೂ ವೈಷ್ಣವ ಮತ್ತು ಶೈವ ಧರ್ಮಗಳು ಪರಸ್ಪರ ಸಾಮರಸ್ಯದಿಂದ ಬೆಳೆದು ಬಂದಿವೆ. ಇದು ಸಮಕಾಲೀನ ವಾಸ್ತು-ಶಿಲ್ಪ ಕಲಾಪರಂಪರೆಯಿಂದ (ಹರಿಹರ, ತ್ರೈಪುರುಷ, ಶಂಕರನಾರಾಯಣ ಇತ್ಯಾದಿ) ಮತ್ತು ಶಾಸನಗಳ ಪ್ರಾರ್ಥನಾ ಪದ್ಯಗಳಿಂದ (ಕೇಶವಾಯ ಶಿವಾಯ ಚಃ) ಸ್ಪಷ್ಟವಾಗುತ್ತದೆ.[೬೭]

ಕೂಹುಂಡಿನಾಡಿನ ಪ್ರದೇಶದಲ್ಲಿ ವೈಷ್ಣವ ಧರ್ಮವು ಉನ್ನತ ಸ್ಥಾನಮಾನವನ್ನು ಪಡೆದಿತ್ತು. ಈ ಧರ್ಮದ ಅನುಯಾಯಿಗಳಾದ ಬ್ರಾಹ್ಮಣರಿಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನಮಾನಗಳಿದ್ದವು. ಸವದತ್ತಿಯ ರಟ್ಟ ಮನೆತನದ ಶಾಸನಗಳಲ್ಲಿ ಬ್ರಾಹ್ಮಣರನ್ನು 'ಭೂಮಿಯ ಮೇಲಿನ ಪೂಜ್ಯನೀಯರು' ಎಂದು ವರ್ಣಿಸಲಾಗಿದೆ. ಹಾಗೆಯೇ ಕೆಲವು ಶಾಸನಗಳಲ್ಲಿ ಇವರನ್ನು 'ಭುವನೈಕ್ಯರಾಧ್ಯ ವಿಪ್ರೋತ್ತಮ ಕುಳತಿಳಕಂ' ಎಂತಲೂ ಕರೆಯಲಾಗಿದೆ.[೬೮] ಮತ್ತೆ ಕೆಲವು ಶಾಸನಗಳಲ್ಲಿ ಇವರು ಕೈಗೊಳ್ಳುವ ಕಾರ್ಯಗಳನ್ನು ಕುರಿತು 'ಷಟ್ಕರ್ಮನಿರತರು' ಎಂದು ವರ್ಣಿಸಲಾಗಿದೆ.[೬೯] ಇದರಿಂದ ಕೂಹುಂಡಿನಾಡಿನಲ್ಲಿ ಬ್ರಾಹ್ಮಣರನ್ನು ಗೌರವದಿಂದ ಕಾಣಲಾಗುತ್ತಿತ್ತೆಂಬುದು ವೇದ್ಯವಾಗುತ್ತದೆ. ಶಾಸನಗಳ ಸಂದೇಶ ಸೂರ್ಯಚಂದ್ರರಿರುವರೆಗೂ ಉಳಿಯಲೆಂಬ ಉದ್ದೇಶದಿಂದ ಶಾಸನದ ಕೊನೆಯಲ್ಲಿ (ಶಾಪಾಶಯದ ಭಾಗದಲ್ಲಿ) ಶಾಸನವನ್ನು ನಾಶ ಮಾಡಿದವರಿಗೆ ಸಾವಿರ ಬ್ರಾಹ್ಮಣರನ್ನು ಕೊಂದ ಪಾಪ ಬರುವುದೆಂಬ ಪ್ರಸ್ತಾಪವೂ ಬ್ರಾಹ್ಮಣರ ಉನ್ನತ ಸ್ಥಾನಮಾನಗಳಿಗೆ ನಿದರ್ಶನವಾಗಿದೆ. ಈ ನಾಡಿನ ಶಾಸನವೊಂದರಲ್ಲಿ 'ಪ್ರಸಾದ ನಿಲಯದ ಧರ್ಮಪ್ರತಿಷ್ಠಾಪನೆಯಲ್ಲಿ ಬ್ರಾಹ್ಮಣರ ಹೆಣ್ಣು ಮಕ್ಕಳು ಅಡುಗೆಯನ್ನು ಮಾಡುವಂತಾಗಲಿ, ಅವರಿಗೆ ಸುಖ ಮತ್ತು ಭಾಗ್ಯ ದೊರೆಯುವುದು' ಎಂದು ನಿರೂಪಣೆಯಿದೆ.[೭೦] ಸವದತ್ತಿಯ ರಟ್ಟ ಮನೆತನದ

ಆಳ್ವಿಕೆಯ ಕಾಲಾವಧಿಯಲ್ಲಿ ಬ್ರಾಹ್ಮಣರು ಆಡಳಿತದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಅಂಥವರಲ್ಲಿ ರುದ್ರಭಟ್ಟನು (ರುದ್ರಟ) ಪ್ರಮುಖನಾಗಿದ್ದಾನೆ. ಈತನು ವರಕವಿಯಾಗಿದ್ದು, ಕನ್ನರದೇವನಿಂದ ಇಂದಿನ ಜಮಖಂಡಿ ತಾಲ್ಲೂಕಿನ ಬನಹಟ್ಟಿಯನ್ನೊಳಗೊಂಡಂತೆ ಹದಿನೆಂಟು ಗ್ರಾಮಗಳನ್ನು ದಾನ ಪಡೆದಿದ್ದನು.[೯೧] ಕೂಹುಂಡಿನಾಡಿನ ಪ್ರದೇಶವನ್ನಾಳಿದ ಅರಸರು ರಾಜ್ಯವನ್ನು ರಕ್ಷಿಸುವದೆಷ್ಟು ಮುಖ್ಯವೋ ವರ್ಣಾಶ್ರಮ ಧರ್ಮದಲ್ಲಿ ಬ್ರಾಹ್ಮಣರನ್ನು ಸಂರಕ್ಷಿಸುವುದೂ ಅಷ್ಟೇ ಪವಿತ್ರ ಕರ್ತವ್ಯವೆಂದು ಭಾವಿಸಿದ್ದರು.

ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಪಾದಪದ್ಮೋಪಜೀವಿಯಾದ ಪೂವಿನಬಾಗೆಯ (ಇಂದಿನ ರಾಯಬಾಗ) ಹೆಮ್ಮರಸನ ನಾಲ್ವರು ಪುತ್ರರಲ್ಲಿ ಒಬ್ಬನಾದ ಚಾವುಂಡರಾಯನು ವರ್ಣಾಶ್ರಮ ಧರ್ಮವನ್ನು ಅನುಸರಿಸುವುದರೊಂದಿಗೆ ಪ್ರತಿಯೊಂದು ವರ್ಣದವರಿಗೂ ಒಂದೊಂದು ಕೇರಿಯನ್ನು ನಿರ್ಮಿಸಿದ್ದನು. ಈತನು ಪೂವಿನಬಾಗೆಯಲ್ಲಿದ್ದ ಬ್ರಹ್ಮಪುರಿಗೆ ಉದಾರವಾಗಿ ಭೂದಾನ ಮಾಡಿದ್ದಾನೆ.[೯೨] ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ 'ಕುಲಹೀನರೂ ಶಾಸ್ತ್ರಹೀನರೂ ಪೂಜೆಗೆ ಅನರ್ಹರು' ಎಂದು ಪ್ರಸ್ತಾಪವಿದೆ.[೯೩] ಇದೇ ಶಾಸನದಲ್ಲಿ ಇಲ್ಲಿಯ ಬ್ರಹ್ಮಪುರಿಯ ಅಶೇಷ ಮಹಾಜನರು ಶ್ರೀಲಕ್ಷ್ಮೀನರಸಿಂಹ ದೇವರ ಅಷ್ಟವಿಧಾರ್ಚನೆ ಮತ್ತು ಚಿಕ್ಕೇಶ್ವರದೇವರ ಪೂಜಾದಿಗಳಿಗೆ ತೆರಿಗೆಯನ್ನು ದಾನ ಮಾಡಿರುವ ಉಲ್ಲೇಖವಿದೆ. ಸೊಗಲದ ಕ್ರಿ.ಶ. ೯೮೦ರ ಶಾಸನದಲ್ಲಿ ಬ್ರಾಹ್ಮಣರು ಮತ್ತು ಸನ್ಯಾಸಿಗಳಿಗೆ ಉದಾರವಾಗಿ ದಾನ ಮಾಡಬೇಕೆಂದು ಪ್ರಸ್ತಾಪವಿದೆ.[೯೪] ಬೆಳವಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಐವತ್ತು ಮಹಾಜನರಿಗೆ ಸತ್ರವನ್ನು ನಡೆಸಲು ಊರೊಡೆಯನಾದ ಕಾಳಿಮಯ್ಯನ ನೇತೃತ್ವದಲ್ಲಿ ಹಣವನ್ನು ದಾನ ಮಾಡಿರುವ ನಿರೂಪಣೆಯಿದೆ.[೯೫] ಬಡ್ಲಿ ಮತ್ತು ಅಸುಂಡಿಯಲ್ಲಿ ವೈಷ್ಣವ ಧರ್ಮದ ದೇವಾಲಯಗಳಿದ್ದವು. ಈಗ ಅವು ಮಲಪ್ರಭಾ ನದಿಯ ನವಿಲುತೀರ್ಥ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾಗಿವೆ. ಸೊಗಲದ ಸೋಮೇಶ್ವರ ದೇವಾಲಯವು ಶೈವ ಧರ್ಮದ ದೇವಾಲಯವಾಗಿದ್ದರೂ ಇದರಲ್ಲಿ ಶಾಕ್ತ, ಸೌರ ಮತ್ತು ವೈಷ್ಣವ ಧರ್ಮಗಳ ಅನೇಕ ಶಿಲ್ಪಗಳು ಗೋಚರಿಸುತ್ತವೆ. ಇದರಿಂದ ಕೂಹುಂಡಿನಾಡಿನ ಪ್ರದೇಶದಲ್ಲಿ ವೈಷ್ಣವ ಧರ್ಮವು ಇತರೆ ಧರ್ಮಗಳೊಂದಿಗೆ ಹೊಂದಾಣಿಕೆಯನ್ನು ಹೊಂದಿತ್ತೆಂಬುದು ಮನದಟ್ಟಾಗುತ್ತದೆ. ಸವದತ್ತಿಯ ರಟ್ಟ ಮನೆತನದ ಆಳರಸರು ಜೈನಧರ್ಮೀಯರಾಗಿದ್ದರೂ ವೈಷ್ಣವ ಧರ್ಮಕ್ಕೆ ಉದಾರವಾಗಿ ಆಶ್ರಯ-ಪ್ರೋತ್ಸಾಹವನ್ನು ಕೊಡಮಾಡಿದ್ದಾರೆ. ಇವರ ಪರಧರ್ಮ ಸಹಿಷ್ಣುತೆಯಿಂದ ವೈಷ್ಣವ ಧರ್ಮವು ಕೂಹುಂಡಿನಾಡಿನಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ.

೭.೩.೧. ವೈಷ್ಣವ ಆಚಾರ್ಯರು

ಕೂಹುಂಡಿನಾಡಿನ ಪ್ರದೇಶದ ಕೆಲವು ಶಾಸನಗಳಲ್ಲಿ ವೈಷ್ಣವ ಧರ್ಮದ ವಿವಿಧ ಪಂಥಗಳ ಆಚಾರ್ಯರ ಸಿದ್ಧಾಂತ, ತಪಸ್ಸು, ವಿದ್ವತ್ತು, ತರ್ಕ, ಜ್ಞಾನಾರ್ಜನೆ ಹಾಗೂ ಅವರು ಕೈಗೊಂಡಿರುವ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಚಿತ್ರಿತವಾಗಿವೆ. ಈ ಆಚಾರ್ಯರ ಕಾಲಮಾನ ಮತ್ತು ಇವರು ಕೈಗೊಂಡಿರುವ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳು ಈ ಕೆಳಗಿನಂತಿವೆ.

೭.೩.೧.೧. ನಾಗವರ್ಧನ ಚಂದ್ರಾದಿತ್ಯ ಭಟ್ಟಾರಕ

ಸವದತ್ತಿಯ ಕ್ರಿ.ಶ. ೬೯೯ರ ಶಾಸನದಲ್ಲಿ ನಾಗವರ್ಧನ ಚಂದ್ರಾದಿತ್ಯ ಭಟ್ಟಾರಕನ ಪ್ರಸ್ತಾಪವಿದೆ.[೯೬] ಬಾದಾಮಿ ಚಲುಕ್ಯ ಮನೆತನದ ೧ನೆಯ ವಿಕ್ರಮಾದಿತ್ಯನು ಈ ಆಚಾರ್ಯನ ಕೋರಿಕೆಯ ಮೇರೆಗೆ ಮೇಘಸ್ವಾಮಿಯ ಮೊಮ್ಮಗನೂ ದೇವಸ್ವಾಮಿ ದಿಕ್ಷಿತನ ಪುತ್ರನೂ ಆದ ಕಾಶ್ಯಪಗೋತ್ರದ ಬ್ರಾಹ್ಮಣ ಕುಮಾರಸ್ವಾಮಿಗೆ ಕೂಹುಂಡಿನಾಡಿನ ಅವುಗನೂರು ಗ್ರಾಮದ ಜೊತೆಗೆ ಭ್ರಮರದಾಳ ಪ್ರದೇಶವನ್ನು ದತ್ತಿ ಕೊಟ್ಟಿದ್ದಾನೆ. ಬ್ರಾಹ್ಮಣ ಕುಮಾರಸ್ವಾಮಿ ನಾಲ್ಕು ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನು.

೭.೩.೧.೨. ಲಕ್ಷ್ಮೀಧರ ಪಟ್ಟವರ್ಧನ

ಬೆಳಗಾವಿಯ ಕ್ರಿ.ಶ. ೧೨೯೧ರ ಶಾಸನದಲ್ಲಿ ಲಕ್ಷ್ಮೀಧರ ಪಟ್ಟವರ್ಧನ ಎಂಬ ಬ್ರಾಹ್ಮಣ ವಿದ್ವಾಂಸನ ನಿರೂಪಣೆಯಿದೆ.[೯೭] ಈತನು ಋಗ್ವೇದ ಶಾಖಾದಲ್ಲಿ ಪಂಡಿತನಾಗಿದ್ದನು. ಇಕ್ಷ್ವಾಕು ಚಕ್ರವರ್ತಿ ಇಕ್ಷುಗ್ರಾಮ ಅಗ್ರಹಾರದಲ್ಲಿ (ಇಂದಿನ ಬೆಳಗಾವಿ) ಅಶ್ವಮೇಧ ಯಾಗವನ್ನು ಕೈಗೊಂಡು ಹದಿನಾರು ಋತ್ವಿಕ್ ಗಣಗಳಿಗೆ ದಾನ ಮಾಡಿದ್ದಾನೆ. ಅವರಲ್ಲಿ ಲಕ್ಷ್ಮೀಧರ ಪಟ್ಟವರ್ಧನ ವಿದ್ವಾಂಸನೂ ಒಬ್ಬನಾಗಿದ್ದಾನೆ.

೭.೩.೨. ವೈಷ್ಣವ ದೇವಾಲಯಗಳು

ವೈದಿಕ ಯುಗದ ಸಾಹಿತ್ಯದಲ್ಲಿ ವೈಷ್ಣವ ಧರ್ಮದ ಪ್ರಸ್ತಾಪಗಳಿವೆ.[೯೮] ಆದರೆ ಆ ಯುಗದಲ್ಲಿ ಈ ಧರ್ಮದ ಧಾರ್ಮಿಕ ನಿರ್ಮಾಣಗಳಿದ್ದ ಕುರಿತಾಗಿ ಸ್ಪಷ್ಟತೆಯಿಲ್ಲ. ಅಂತಾಗಿ ಕ್ರಿ.ಪೂ. ಸುಮಾರು ೪-೩ನೆಯ ಶತಮಾನದ ನಗರೀ (ಚಿತ್ತೂರು) ಶಾಸನ, ಹೇಲಿಯೋಡೋರಸನ ಬೆಸನಗರದ ಕ್ರಿ.ಪೂ. ಸುಮಾರು ೨ನೆಯ ಶತಮಾನದ ಗರುಡಸ್ತಂಭ ಶಾಸನ, ರಾಜಸ್ಥಾನದ ಗೌಸುಂದಿಯ ಕ್ರಿ.ಶ. ಸುಮಾರು ೧ನೆಯ ಶತಮಾನದ ನಾರಾಯಣ ವಾಟಿಕ, ತಿಗುವಾದ ವಿಷ್ಣು ದೇವಾಲಯ ಮೊದಲಾದವುಗಳು ಈ ಧರ್ಮದ ದೇವಾಲಯಗಳ ಪರಂಪರೆಗೆ ಸಂಬಂಧಿಸಿದಂತೆ ಪ್ರಾಚೀನ ನಿದರ್ಶನಗಳಾಗಿವೆ.[೯೯] ಕನ್ನಡನಾಡಿನ ಸಂದರ್ಭದಲ್ಲಿ ಶಾತವಾಹನರು ಮತ್ತು ಸಮಕಾಲೀನ ಮನೆತನಗಳು, ಬನವಾಸಿ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಲ್ಯಾಣದ (ಮಂಗಳವೇಡೆ) ಕಲಚೂರಿಯರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಮೈಸೂರಿನ ಒಡೆಯರು ಮೊದಲಾದ ಮನೆತನಗಳ ಆಳರಸರು ವೈಷ್ಣವ ಧರ್ಮದ ಆಚಾರ್ಯರಿಗೆ ಆಶ್ರಯ-ಪ್ರೋತ್ಸಾಹವನ್ನು ಕೊಡುವುದರೊಂದಿಗೆ ಧಾರ್ಮಿಕ ನಿರ್ಮಾಣಗಳ ಪರಂಪರೆಯನ್ನೂ ಮುಂದುವರೆಸಿಕೊಂಡು ಬಂದಿದ್ದಾರೆ.[೧೦೦]

ಕೂಹುಂಡಿನಾಡಿನ ಪ್ರದೇಶದ ಶಾಸನಗಳಲ್ಲಿ ಕ್ರಿ.ಶ. ಸುಮಾರು ೭ನೆಯ ಶತಮಾನದಿಂದಲೂ ವೈಷ್ಣವ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳು ಗೋಚರಿಸುತ್ತವೆ. ಈ ನಾಡಿನಲ್ಲಿ ಆಳ್ವಿಕೆ ಕೈಗೊಂಡಿದ್ದ ಮತ್ತು ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಲ್ಯಾಣದ ಕಲಚೂರಿಯರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ದೇವಗಿರಿಯ ಸೇವುಣರು ಮೊದಲಾದ ಅರಸು ಮತ್ತು ಮಹಾಮಂಡಳೇಶ್ವರ ಮನೆತನಗಳು ವೈಷ್ಣವ

ಧರ್ಮಕ್ಕೆ ಉದಾರವಾಗಿ ಆಶ್ರಯ-ಪ್ರೋತ್ಸಾಹವನ್ನು ಕೊಡಮಾಡಿವೆ. ಅಂತಾಗಿ ಈ ನಾಡಿನಲ್ಲಿ ಕೆಲವು ವೈಷ್ಣವ ಧರ್ಮದ ದೇವಾಲಯಗಳು ನಿರ್ಮಾಣವಾಗಿವೆ. ಇಲ್ಲಿಯ ಶಾಸನಗಳಲ್ಲಿ ಪ್ರಸ್ತಾಪಿತವಾದ ವೈಷ್ಣವ ದೇವಾಲಯಗಳ ಕಾಲಮಾನ, ನಿರ್ಮಾತೃರು, ದಾನ-ದತ್ತಿಗಳು ಮತ್ತು ಇವುಗಳ ವಿಶೇಷವಾದ ವಾಸ್ತು ವಿವರಗಳು ಈ ಕೆಳಗಿನಂತಿವೆ.

೭.೩.೨.೧. ಸಂಕೇಶ್ವರದ ಲಕ್ಷ್ಮೀನರಸಿಂಹ ದೇವಾಲಯ

ಸಂಕೇಶ್ವರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಲಕ್ಷ್ಮೀನರಸಿಂಹ ದೇವಾಲಯದ ಪ್ರಸ್ತಾಪವಿದೆ.[೧೦೧] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದ ಅಷ್ಟವಿಧಾರ್ಚನೆಗೆ ಕಾರ್ತವೀರ್ಯನ ಆಳ್ವಿಕೆಯ ಸಂದರ್ಭದಲ್ಲಿ ಪನ್ನಿಸೆಟ್ಟಿ, ಸಾತಿಸೆಟ್ಟಿ, ಆದಿಸೆಟ್ಟಿ, ಬಮ್ಮಿಸೆಟ್ಟಿ, ಪಾರಿಸೆಟ್ಟಿ, ನಾಗಿಸೆಟ್ಟಿ, ಕನ್ನಿಸೆಟ್ಟಿ, ರೇವಿಸೆಟ್ಟಿ, ಈಶ್ವರಸೆಟ್ಟಿ, ವಿಷ್ಣುಸೆಟ್ಟಿ ಮೊದಲಾದ ವರ್ತಕರು ತಮ್ಮ ವ್ಯಾಪಾರದ ಸರಕುಗಳ ಮೇಲಿನ ಸುಂಕಗಳನ್ನು ದಾನ ಮಾಡಿದ್ದಾರೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿದೆ.

೭.೩.೨.೨. ಬಡ್ಲಿಯ ಜನಾರ್ಧನ ದೇವಾಲಯ

ಬಡ್ಲಿಯ ಕ್ರಿ.ಶ. ೧೨೪೬ರ ಶಾಸನದಲ್ಲಿ ಜನಾರ್ಧನ ದೇವಾಲಯದ ನಿರೂಪಣೆಯಿದೆ.[೧೦೨] ಈ ದೇವಾಲಯವನ್ನು ಸವದತ್ತಿಯ ರಟ್ಟರ ಕಾರ್ತವೀರ್ಯನು ನಿರ್ಮಿಸಿದ್ದಾನೆ. ಇದರ ಅಂಗಭೋಗ, ರಂಗಭೋಗಕ್ಕೆ ನೂರು ಮಹಾಜನರು ಸಾವಿರ ಕಮ್ಮ ಅಳತೆಯ ಭೂಮಿ, ಹೂದೋಟ, ಹನ್ನೆರಡು ನೀಳ ಅಳತೆಯ ಮನೆಯನ್ನು ದಾನ ಮಾಡಿದ್ದಾರೆ. ಈ ದೇವಾಲಯದಲ್ಲಿ ಕಾರ್ತಿಕ ಮಾಸದಲ್ಲಿ ಜರುಗುವ ಆರಾಧನೆಗೆ ಕುಂಬಾರರು ಒಂದು ಗಾಣವನ್ನು ದಾನ ಮಾಡಿದ್ದಾರೆ. ಇದೇ ದೇವಾಲಯಕ್ಕೆ ತೆಲ್ಲಿಗರ ಸೋಯಿಸೆಟ್ಟಿ ಮತ್ತು ಈತನ ಹಿರಿಯ ಸಹೋದರ ಮಲ್ಲಿಸೆಟ್ಟಿ ಕೂಡಿಕೊಂಡು ನಾಲ್ಕುನೂರು ಕಮ್ಮ ಅಳತೆಯ ಭೂಮಿಯನ್ನು ದಾನ ಮಾಡಿದ್ದಾರೆ. ಇದೇ ದೇವಾಲಯಕ್ಕೆ ಮಲ್ಲಿಸೆಟ್ಟಿಯ ಪುತ್ರ ಸರ್ವಾಧಿಕಾರಿ ಚೌಡಿಸೆಟ್ಟಿ ಕೂಹುಂಡಿನಾಡಿನಲ್ಲಿ ತನ್ನಾಳ್ವಿಕೆಯ ಪ್ರದೇಶದ ಸುಂಕವನ್ನು ದಾನ ಮಾಡಿದ್ದಾನೆ. ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳ ಸ್ಪಷ್ಟತೆಯಿಲ್ಲ.

೭.೩.೨.೩. ಮುನವಳ್ಳಿಯ ಮಾಧವನಾರಾಯಣ ದೇವಾಲಯ

ಮುನವಳ್ಳಿಯ ಕ್ರಿ.ಶ. ೧೨೨೨ರ ಶಾಸನದಲ್ಲಿ ಮಾಧವನಾರಾಯಣ ದೇವಾಲಯದ ಉಲ್ಲೇಖವಿದೆ.[೧೦೩] ಈ ದೇವಾಲಯವನ್ನು ದೇವಗಿರಿಯ ಸೇವುಣ ಮನೆತನದ ಸಿಂಘಣದೇವನ ಆಳ್ವಿಕೆಯ ಸಂದರ್ಭದಲ್ಲಿ ಜೋಗದೇವ ನಾಯಕನು (ಚಮೂಪ) ನಿರ್ಮಿಸಿ, ಇದರ ಅಂಗಭೋಗ ಮತ್ತು ರಂಗಭೋಗಕ್ಕೆ ಭೂದಾನ ಮಾಡಿದ್ದಾನೆ. ಇಂದಿನ ಪಂಚಲಿಂಗೇಶ್ವರ ದೇವಾಲಯದ ಸಮುಚ್ಚಯದಲ್ಲಿರುವ ಈ ದೇವಾಲಯವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ.

೭.೩.೨.೪. ರಾಯಬಾಗದ ಕೇಶವೇಶ್ವರ ದೇವಾಲಯ

ರಾಯಬಾಗದ ಕ್ರಿ.ಶ. ೧೧೨೭ರ ಶಾಸನದಲ್ಲಿ ಕೇಶವೇಶ್ವರ ದೇವಾಲಯದ ಪ್ರಸ್ತಾಪವಿದೆ.[೧೦೪] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯಕ್ಕೆ ಮಹಾಸಾಮಂತನೊಬ್ಬನು (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರು ಸ್ಪಷ್ಟವಿಲ್ಲ) ನೈವೇದ್ಯ ಮತ್ತು ಪೂಜಾರಿಯ ಉಪಜೀವನಕ್ಕೆ ಹದಿನಾರು ಮತ್ತರು ಭೂಮಿಯನ್ನು ದಾನ ಮಾಡಿದ್ದಾನೆ. ಈ ದೇವಾಲಯವು ಇಂದು ಉಳಿದು ಬಂದಿಲ್ಲ.

೭.೪. ಜೈನ ಧರ್ಮ

ಭಾರತದ ಪ್ರಾಚೀನ ಧರ್ಮಗಳಲ್ಲಿ ಜೈನ ಧರ್ಮವೂ ಒಂದಾಗಿದೆ. ಈ ಧರ್ಮದ ವಿಚಾರ ಪ್ರಣಾಳಿಕೆಯಂತೆ ಕಾಲಮಾನವು ಭೂತ, ವರ್ತಮಾನ, ಭವಿಷ್ಯ ಎಂಬ ಮೂರು ನಿರಂತರವಾದ ಘಟ್ಟಗಳನ್ನೊಳಗೊಂಡಿದೆ. ಅನಾದಿಯೂ ಅನಂತವೂ ಆಗಿರುವ ಈ ಕಾಲಮಾನವು ಚಕ್ರಾಕಾರವಾಗಿದ್ದು, ಏರಿಳಿತಗಳು ಇದರ ಲಕ್ಷಣಗಳಾಗಿವೆ. ಏರುವಿಕೆಯನ್ನು 'ಉತ್ಸರ್ಪಿಣಿ' ಎಂದೂ, ಇಳಿಯುವಿಕೆಯನ್ನು 'ಅವಸರ್ಪಿಣಿ' ಎಂದೂ ಕರೆಯಲಾಗುತ್ತದೆ. ಈ ಕಾಲವಿಭಾಗಗಳು ತಿರುಗುತ್ತಿರುವ ಚಕ್ರದ ಅರೆಗಳು ಕೆಳಗಿನಿಂದ ಮೇಲಕ್ಕೂ ಮೇಲಿನಿಂದ ಕೆಳಕ್ಕೂ ಆಗುವಂತೆ ಒಂದರ ಹಿಂದೊಂದು ಬಂದು ಹೋಗುತ್ತಿರುತ್ತವೆ. ಹೀಗಾಗಿ ಪ್ರಪಂಚವು ಒಮ್ಮೆ ಸುಖದಿಂದ ದುಃಖದೆಡೆಗೂ ಮತ್ತೊಮ್ಮೆ ದುಃಖದಿಂದ ಸುಖದೆಡೆಗೂ ಚಲಿಸುತ್ತಿರುತ್ತದೆ. ಈ ಎರಡೂ ಕಾಲಗಳ ಪ್ರಮಾಣ ಹತ್ತುಸಾವಿರ ಕೋಟಿ ವರ್ಷಗಳು. ಇವೆರಡೂ ಕಾಲಗಳು ಒಟ್ಟು ಸೇರಿದರೆ ಒಂದು ಕಲ್ಪಕಾಲವಾಗುತ್ತದೆ. ಈ ಕಲ್ಪದ ಅವಧಿ ಇಪ್ಪತ್ತು ಸಾಗರೋಪಮ ಕೋಟಿ ಕೋಟಿ ವರ್ಷಗಳು.[೧೦೫]

ಉತ್ಸರ್ಪಿಣಿ ಕಾಲದ ಸುಷಮಾ-ದುಷಮಾ (ಸುಖ-ದಃಖ) ಮತ್ತು ಅವಸರ್ಪಿಣಿ ಕಾಲದ ದುಷಮಾ-ಸುಷಮಾ (ದುಃಖ-ಸುಖ) ಅವಧಿಗಳಲ್ಲಿ ಕಾಲಾಂತರದಲ್ಲಿ ಇಪ್ಪತ್ನಾಲ್ಕು ತೀರ್ಥಂಕರರು ಜನ್ಮವೆತ್ತಿ ತಮ್ಮ ದಿವ್ಯತ್ವದ ಮೂಲಕ ಕೇವಲಜ್ಞಾನವನ್ನು ಪಡೆದು ಭವಸಾಗರದಲ್ಲಿ ಮುಳುಗಿ ಧರ್ಮವನ್ನೇ ಮರೆತ ಜೀವಾತ್ಮರಿಗೆ ಆತ್ಮಕಲ್ಯಾಣದ ಮಾರ್ಗವನ್ನು ಉಪದೇಶಿಸಿ ಸನ್ಮಾರ್ಗದ ದಾರಿಯನ್ನು ತೋರಿಸುತ್ತ ಧರ್ಮವನ್ನು ಪುನರುಜ್ಜೀವನ ಕೈಗೊಳ್ಳುತ್ತಿರುತ್ತಾರೆ. ಪ್ರಸ್ತುತ ಪ್ರಗತಿಯಲ್ಲಿರುವ ಅವಸರ್ಪಿಣಿ ಕಾಲಕ್ಕಿಂತ ಮುಂಚಿನ ಉತ್ಸರ್ಪಿಣಿ ಕಾಲದ ಸುಷಮಾ-ದುಷಮಾ ಅವಧಿಯಲ್ಲಿ ಇಪ್ಪತ್ನಾಲ್ಕು ತೀರ್ಥಂಕರರು ಜನ್ಮವೆತ್ತಿ ಧರ್ಮವನ್ನು ಪುನರುಜ್ಜೀವನ ಕೈಗೊಂಡಿದ್ದಾರೆ. ಅವರನ್ನು 'ಭೂತಕಾಲದ ತೀರ್ಥಂಕರರು' ಎಂದು ಕರೆಯಲಾಗುತ್ತದೆ. ಈಗ ಪ್ರಗತಿಯಲ್ಲಿರುವ ಅವಸರ್ಪಿಣಿ ಕಾಲದಲ್ಲಿ ನಾವು ದುಷಮಾ ಅವಧಿಯಲ್ಲಿ ಜೀವಿಸುತ್ತಿದ್ದೇವೆ. ಇದರ ಮುಂಚಿನ ಅವಧಿಯಲ್ಲಿ ಇಪ್ಪತ್ನಾಲ್ಕು ತೀರ್ಥಂಕರರು ಜನ್ಮವೆತ್ತಿ ಧರ್ಮೋಪದೇಶ ಕೈಗೊಂಡಿದ್ದಾರೆ. ಇವರನ್ನು 'ವರ್ತಮಾನ ಕಾಲದ ತೀರ್ಥಂಕರರು' ಎಂದು ಕರೆಯಲಾಗುತ್ತದೆ. ಮುಂದಣ ಉತ್ಸರ್ಪಿಣಿ ಕಾಲದಲ್ಲಿ ಜನ್ಮವೆತ್ತುವ ಇಪ್ಪತ್ನಾಲ್ಕು ತೀರ್ಥಂಕರರನ್ನು 'ಭವಿಷ್ಯತ್ಕಾಲದ ತೀರ್ಥಂಕರರು' ಎಂದು ಕರೆಯಲಾಗುತ್ತದೆ. ವರ್ತಮಾನ ಕಾಲದ ಕೊನೆಯ ತೀರ್ಥಂಕರ ಮಹಾವೀರನ

ತರುವಾಯ ಧರ್ಮದ ಪುನರುಜ್ಜೀವನ ಕಾರ್ಯವನ್ನು ಕ್ರಮವಾಗಿ ಮೂವರು ಕೇವಲಿಗಳು, ಐವರು ದ್ವಾದಶಾಂಗ ಶ್ರುತಕೇವಲಿಗಳು, ಹನ್ನೊಂದು ದಶಪೂರ್ವಧರರು, ಐವರು ಏಕಾದಶಾಂಗ ಶ್ರುತಧರರು, ನಾಲ್ವರು ಅಂಗಶ್ರುತಧರರು ಮತ್ತು ಐವರು ಏಕಾಂಗ ಶ್ರುತಧರರು ಮುಂದುವರೆಸಿಕೊಂಡು ಬಂದಿದ್ದಾರೆ.[೧೦೬]

ಜೈನಧರ್ಮೀಯರು ಮಹಾವೀರ ತೀರ್ಥಂಕರನು ಉಪದೇಶಿಸಿದ ತತ್ವಗಳನ್ನು ದ್ವಾದಶಾಂಗ ಮತ್ತು ಅಂಗಬಾಹ್ಯ ಶ್ರುತಗಳಲ್ಲಿ ಸಂಗ್ರಹಿಸಿ ಅವು ತಮ್ಮ ಸಿದ್ಧಾಂತಗಳೆಂದು ಪಾಲಿಸಿಕೊಂಡು ಬಂದಿದ್ದಾರೆ.[೧೦೭] ಈ ಸಿದ್ಧಾಂತದ ಪ್ರಕಾರ ಲೋಕ ಮತ್ತು ಕರ್ಮ ಅನಾದಿಯಾಗಿವೆ. ಅನಾದಿಯಿಂದಲೂ ಸ್ವಭಾವತಃ ಶುದ್ಧವಾದ ಜೀವವು ಕರ್ಮದೊಡನೆ ಸೇರಿ ದುಃಖ ಪಡುತ್ತಿದೆ. ಜೀವವು ಸ್ವಾಭಾವಿಕವಾಗಿ ಜ್ಞಾನಮಯವಾದರೂ ದೇಹಯುಕ್ತವಾಗಿ ಸರ್ವಕರ್ಮಗಳನ್ನೂ ಮಾಡುತ್ತದೆ. ತಪ್ಪಸ್ಸು, ಧ್ಯಾನ, ಸಂಯಮ ಮೊದಲಾದವುಗಳ ಸಾಧನೆಯಿಂದ ಕರ್ಮಗಳಿಂದ ಪರಿಪೂರ್ಣವಾಗಿ ಮುಕ್ತಿಯನ್ನು ಪಡೆಯಲು ಸಾಧ್ಯವಿದೆ. ಹೀಗೆ ಮುಕ್ತಿಯನ್ನು ಪಡೆದ ಜೀವಿಯನ್ನೇ ಜೈನಧರ್ಮೀಯರು ದೇವರು ಎಂದು ಆರಾಧಿಸುತ್ತಾರೆ. ಸಮ್ಯಗ್ ದರ್ಶನ, ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರ್ಯ ಇವು ಈ ಧರ್ಮದ ಪ್ರಧಾನ ತತ್ವಗಳಾಗಿವೆ. ಈ ಧರ್ಮದ ದರ್ಶನವು ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ ಎಂಬ ಏಳು ತತ್ವಗಳನ್ನು ಒಳಗೊಂಡಿದೆ. ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಇವು ಈ ಧರ್ಮದ ಆರು ದ್ರವ್ಯಗಳಾಗಿವೆ. ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಇವು ಈ ಧರ್ಮದ ಪಂಚಾಸ್ತಿಕಾಯಗಳಾಗಿವೆ. ಇತರೆ ಧರ್ಮಗಳಲ್ಲಿ ಕರ್ಮಬಂಧನಕ್ಕೊಳಗಾದ ಜೀವವನ್ನು ದೇವರು ಕರುಣಿಸಿ ಕರ್ಮಗಳಿಂದ ಬಿಡುಗಡೆಗೊಳಿಸುತ್ತಾನೆ. ಆದರೆ ಜೈನ ಧರ್ಮದಲ್ಲಿ ಜೀವವೇ ಸ್ವಪ್ರಯತ್ನದಿಂದ ಎಂಟು ಪ್ರಕಾರದ ಕರ್ಮಬಂಧನದಿಂದ ಬಿಡುಗಡೆಯಾಗುವುದು ವೈಶಿಷ್ಟ್ಯವಾಗಿದೆ. ಈ ಧರ್ಮವು ಸೃಷ್ಟಿಯ ಮೂರು ಸ್ಥಿತಿಗಳನ್ನು ಒತ್ತಿ ಹೇಳುವುದರಲ್ಲಿ ತೃಪ್ತವಾಗದೇ ಅನೇಕಾಂತ (ಸ್ಯಾದ್ವಾದ) ದೃಷ್ಟಿಯ ಆಧಾರದ ಮೇಲೆ 'ಅನೇಕಾಂತವಾದ' ಎಂಬ ವಿಚಾರ ಸಿದ್ಧಾಂತವನ್ನು ಸೂತ್ರೀಕರಿಸಿದೆ. ಇದು ವಸ್ತುಗಳನ್ನು ಗಮನಿಸುವ ಒಂದು ಸಮಂಜಸ ದೃಷ್ಟಿಯ ಸುವ್ಯವಸ್ಥಿತ ರೂಪವನ್ನು ಸೂಚಿಸುತ್ತದೆ.[೧೦೮]

ಕನ್ನಡನಾಡಿನಲ್ಲಿ ಪ್ರಥಮ ತೀರ್ಥಂಕರ ಆದಿನಾಥನ ಕಾಲದಿಂದಲೂ ಜೈನ ಧರ್ಮದ ಪ್ರಸಾರದ ಚಟುವಟಿಕೆಗಳು ಗೋಚರಿಸುತ್ತವೆ. ದ್ವಾದಶಾಂಗ ಏಕಾಂಗ ಶ್ರುತಕೇವಲಿಗಳಲ್ಲಿ ಕೊನೆಯವರಾದ ಭದ್ರಬಾಹು ಭಟ್ಟಾರಕರು (ಕ್ರಿ.ಪೂ. ೩೯೪–೩೬೫) ಉಜ್ಜೈನಿಯಲ್ಲಿದ್ದ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳ ಕಾಲ ಕ್ಷಾಮವುಂಟಾಗುತ್ತದೆ ಎಂಬುದನ್ನು ದಿವ್ಯದೃಷ್ಟಿಯಿಂದ ಅರಿತು ಮುನಿಸಮುದಾಯದ ಚಾರಿತ್ರ್ಯ ಮತ್ತು ಸಂಯಮದ ಪಾಲನೆಗಾಗಿ ತಮ್ಮ ಪ್ರಧಾನ ಶಿಷ್ಯ ಮಗಧದ ನಂದ ಮನೆತನದ ಚಂದ್ರಗುಪ್ತ (ಕ್ರಿ.ಪೂ.೩೭೨–೩೬೬) ಹಾಗೂ ಹನ್ನೆರಡು ಸಾವಿರ ಮುನಿಗಳೊಂದಿಗೆ ಈ ನಾಡಿನ ಕಳ್ವಪ್ಪು (ಇಂದಿನ ಶ್ರವಣಬೆಳಗೊಳ) ಪರಿಸರಕ್ಕೆ ಆಗಮಿಸಿದರೆಂದು ಅನಂತರ ಕಾಲದ ಅನೇಕ ಶಾಸನಗಳು ಮತ್ತು ಕೃತಿ–ಕಾವ್ಯಗಳು ಉಲ್ಲೇಖಿಸಿವೆ.[೧೦೯] ಭದ್ರಬಾಹು ಭಟ್ಟಾರಕರು ನೇರವಾಗಿ ಕನ್ನಡನಾಡಿಗೆ ಬರಬೇಕಾದರೆ ಆ ಮೊದಲು ಇಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತು. ಕಾರಣ ಅವರಿಗೆ ಇಲ್ಲಿ ತಮ್ಮ ಮುನಿಸಮುದಾಯದ

ಸಂರಕ್ಷಣೆ ಸುವ್ಯವಸ್ಥಿತವಾಗಿ ಜರುಗುವುದೆಂಬ ನಂಬಿಕೆಯಿತ್ತು. ಆದಿನಾಥ ತೀರ್ಥಂಕರನು ಕೊಂಗು, ವೆಂಗಡ, ಶಂಕಟ, ಕರ್ನಾಟ, ಕುಟಚೌದ್ರಿಗಳ ಮಧ್ಯದಲ್ಲಿ ನಿರ್ವಾಣ ಹೊಂದಿದನೆಂದು 'ಭಾಗವತ ಪುರಾಣ'ದಲ್ಲಿ ಪ್ರಸ್ತಾಪವಿದೆ.[೧೧೦] ಪಾರ್ಶ್ವನಾಥ ತೀರ್ಥಂಕರನ ಉಗ್ರವಂಶಕ್ಕೂ ಕನ್ನಡನಾಡಿಗೂ ಪರಸ್ಪರ ಸಂಬಂಧವಿದೆ. ಮಹಾವೀರ ತೀರ್ಥಂಕರನ ಸಮವಸರಣ (ಧರ್ಮಸಭೆ) ದಕ್ಷಿಣಾಪಥದೆಡೆಗೆ ಆಗಮಿಸಿದ್ದ ಸಂದರ್ಭದಲ್ಲಿ ಕನ್ನಡನಾಡಿನ ಹೇಮಾಂಗ ಪ್ರದೇಶವನ್ನಾಳುತ್ತಿದ್ದ ಜೀವಂಧರ ಎಂಬ ಜೈನ ಅರಸನು ಆತನಿಂದ ದೀಕ್ಷೆ ಪಡೆದನೆಂದು 'ಜೀವಂಧರಚರಿತೆ' ಕಾವ್ಯದಲ್ಲಿ ನಿರೂಪಣೆಯಿದೆ. ಇಂತಹ ಇನ್ನೂ ಅನೇಕ ಜೈನ ಮತ್ತು ಜೈನೇತರ ಸಾಹಿತ್ಯಿಕ ಕುರುಹುಗಳು ಈ ನಾಡಿನಲ್ಲಿ ಬಹು ಪ್ರಾಚೀನ ಕಾಲದಿಂದಲೂ ಜೈನಧರ್ಮ ಪ್ರಚಲಿತದಲ್ಲಿತ್ತೆಂಬುದನ್ನು ದೃಢಪಡಿಸುತ್ತವೆ.

ಕನ್ನಡನಾಡಿನಲ್ಲಿ ಅನೇಕ ಜೈನಾಚಾರ್ಯರು (ಕುಂದಕುಂದಾಚಾರ್ಯ, ಉಮಾಸ್ವಾಮಿ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ದೇವನಂದಿ, ಅಕಲಂಕ, ಜಿನಸೇನ, ಗುಣಭದ್ರ, ಸಿಂಹನಂದಿ, ವಿಮಲಚಂದ್ರ, ಯತಿಸಾಗರ, ಪುಷ್ಪಸೇನ, ಸುದತ್ತಾಚಾರ್ಯ, ಮಾಘಣಂದಿ ಇತ್ಯಾದಿ) ವಿಹಾರದ ಮೂಲಕ ಜೈನ ಧರ್ಮದ ಪುನರುಜ್ಜೀವನವನ್ನು ಕೈಗೊಳ್ಳುತ್ತ ಸಮಾಜವನ್ನು ಜಾಗೃತಗೊಳಿಸುತ್ತ ಬಂದಿದ್ದಾರೆ. ಹಾಗೆಯೇ ನೂರಾರು ಜೈನ ಕವಿಗಳು (ಭ್ರಾಜಿಷ್ಣು, ಪಂಪ, ಪೊನ್ನ, ರನ್ನ, ನೇಮಿಚಂದ್ರ, ಆಂಡಯ್ಯ, ಪಾರ್ಶ್ವಪಂಡಿತ, ಭಾಸ್ಕರ, ದ್ವಾರಪಾಲ, ಬ್ರಹ್ಮಶಿವ, ದೇವನಂದಿ, ರತ್ನಾಕರವರ್ಣಿ, ನಾಗಚಂದ್ರ ಇತ್ಯಾದಿ) ಈ ಧರ್ಮದ ತತ್ವ–ಸಿದ್ಧಾಂತಗಳನ್ನು ಕೇಂದ್ರವಾಗಿಟ್ಟುಕೊಂಡು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಕೃತಿ–ಕಾವ್ಯಗಳನ್ನು ರಚಿಸಿ ಧರ್ಮಪ್ರಸಾರವನ್ನು ಕೈಗೊಳ್ಳುತ್ತ ಬಂದಿದ್ದಾರೆ. ಕ್ರಿ.ಶ. ಸುಮಾರು ೧೦ನೆಯ ಶತಮಾನದವರೆಗೂ ಕನ್ನಡನಾಡಿನ ಸಂಸ್ಕೃತಿಯಲ್ಲಿ ಆಳವಾಗಿ ಬೆರೆತುಹೋಗಿದ್ದ ಜೈನ ಧರ್ಮವು ಮುಂದಣ ಕಾಲದಲ್ಲಿ ಪ್ರಾದೇಶಿಕವಾಗಿ ಅಸ್ತಿತ್ವಕ್ಕೆ ಬಂದ ಸಮಕಾಲೀನ ವಿವಿಧ ಧರ್ಮಗಳೊಂದಿಗೆ (ಶಿವಬ್ರಾಹ್ಮಣ, ಶ್ರೀವೈಷ್ಣವ ಇತ್ಯಾದಿ) ಹೊಂದಾಣಿಕೆ ಮಾಡಿಕೊಂಡು–

ಜಿನಧರ್ಮ್ಮಾವಾಸಮಾದತ್ತಮಳ ವಿನಯದಾಗಾರಮಾದತ್ತು
ಪದ್ಮಾಸನನಿರ್ಪ್ಪಾಸದ್ಮವಾದತ್ತತಿವಿಶದ ಯಶೋಧಾಮಮಾದತ್ತು
ವಿದ್ಯಾಧನಜನ್ಮಸ್ಥಾನಮಾದತ್ತಸಮತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂಚಾರುಕರ್ಣ್ಣಾಟದೇಶಂ ॥

ಎಂದು ವಿನಯಕ್ಕೆ ಆಗರವಾದ, ಬ್ರಹ್ಮಣ ಮನೆಯಾದ, ವಿದ್ಯೆಯ ನಿಧಿಗೆ ಜನ್ಮಸ್ಥಾನವಾದ, ಸಾಟಿಯಿಲ್ಲದ ಹೊಳೆಯುವ ಗಂಭೀರ ಶ್ರೇಷ್ಠ ಗೃಹವಾದ, ಅನೇಕ ಮಹಿಮೆಗಳಿಂದ ಕೂಡಿ ಕಂಗೊಳಿಸುತ್ತಿದ್ದ ಕನ್ನಡನಾಡನ್ನು ತನ್ನ ಆವಾಸಸ್ಥಾನವನ್ನಾಗಿಸಿಕೊಂಡು, ಈ ನಾಡಿನ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿದೆ.[೧೧೧]

ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಪೂ. ಸುಮಾರು ೪ನೆಯ ಶತಮಾನದಿಂದಲೂ ಜೈನ ಧರ್ಮದ ಚಟುವಟಿಕೆಗಳು ಗೋಚರಿಸುತ್ತವೆ. ಭದ್ರಬಾಹು ಭಟ್ಟಾರಕನು ತನ್ನ ಶಿಷ್ಯ ನಂದ ಮನೆತನದ

ಚಂದ್ರಗುಪ್ತ ಮತ್ತು ಹನ್ನೆರಡು ಸಾವಿರ ಮುನಿಗಳೊಂದಿಗೆ ಶ್ರವಣಬೆಳಗೋಳಕ್ಕೆ ಹೋಗುವಾಗ ಕೂಹುಂಡಿನಾಡಿನ ಕೊಣ್ಣೂರಿನ ಮುಖಾಂತರವೇ ಹೋಗಿರುವ ಸಾಧ್ಯತೆಯಿದೆ. ಈ ಗ್ರಾಮದ ಹೊರವಲಯದಲ್ಲಿರುವ ಗುಂಫಾಗಳಲ್ಲಿ ಕೆಲವು ಕಾಲ ನೆಲೆನಿಂತು ತಪಸ್ಸು ಗೈದರೆಂದು ಪ್ರತೀತಿಯಿದೆ.[೧೧೩] ಆದರೆ ವಾಸ್ತವವಾಗಿ ಈ ಗುಂಫಾಗಳು ಬೃಹತ್ ಶಿಲಾಯುಗ ಕಾಲಾವಧಿಯ ಕಂಡಿಕೋಣೆ ಪ್ರಕಾರದ ಗೋರಿಗಳಾಗಿವೆ. ಆದರೂ ಈ ಗೋರಿಗಳನ್ನು ಕಾಲಾಂತರದಲ್ಲಿ ಅನೇಕ ಜೈನ ಮುನಿಗಳು (ಆಚಾರ್ಯಶ್ರೀ ಶಾಂತಿಸಾಗರ, ಸುಬಲಸಾಗರ ಇತ್ಯಾದಿ) ತಮ್ಮ ಏಕಾಂತ ಕಠಿಣ ತಪಸ್ಸಿಗೆ ಬಳಸಿಕೊಂಡು ಇವುಗಳನ್ನು ಭಕ್ತಿಯಿಂದ ಗೌರವಿಸುತ್ತ ಕಾಪಾಡಿಕೊಂಡು ಬಂದಿದ್ದಾರೆ. ಹಾಗಾಗಿ ಇವು ಇಂದಿಗೂ ಸುರಕ್ಷಿತವಾಗಿ ಉಳಿದು ಬಂದಿವೆ. ಈಗ ಕೇವಲ ಐದಾರು ಶಿಲಾಗೋರಿಗಳು ಮಾತ್ರ ಗೋಚರಿಸುತ್ತವೆ. ಅ. ಸುಂದರ ಅವರು ಈ ಶಿಲಾಗೋರಿಗಳ ಕಾಲಮಾನವನ್ನು ಕ್ರಿ.ಪೂ. ಸುಮಾರು ೧೨೦೦ ರಿಂದ ೮೦೦ರವರೆಗೆ ಎಂದು ಗುರುತಿಸಿದ್ದಾರೆ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯು ಈ ಶಿಲಾಗೋರಿಗಳ ಪ್ರದೇಶವನ್ನು ತನ್ನ ಸಂರಕ್ಷಣೆಯ ಕಕ್ಷೆಯಲ್ಲಿ ತೆಗೆದುಕೊಂಡು ಇದನ್ನು 'ಸಂರಕ್ಷಿತ ಸ್ಮಾರಕ ಪ್ರದೇಶ' ಎಂದು ಘೋಷಿಸಿದೆ. ಈ ಶಿಲಾಗೋರಿಗಳ ಪ್ರದೇಶದಲ್ಲಿ ಭದ್ರಬಾಹು ಭಟ್ಟಾರಕರ ವಿನಯಾರ್ಥವಾಗಿ ನಿಷಿಧಿ ಮಂಟಪವನ್ನು ನಿರ್ಮಿಸಲಾಗಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಜೈನ ಶಾಸನಗಳಾದಿ ವಿವಿಧ ಪುರಾತತ್ವ ಅವಶೇಷಗಳ ಹಿನ್ನೆಲೆಯಲ್ಲಿ ಈ ಧರ್ಮದ ಪ್ರಾಚೀನತೆ ಕ್ರಿ.ಶ. ಸುಮಾರು ೫ನೆಯ ಶತಮಾನದಷ್ಟು ಹಿಂದಕ್ಕೋಗುತ್ತದೆ. ಖಾನಾಪುರ ತಾಲ್ಲೂಕಿನ ಹಲಸಿಯಲ್ಲಿ ದೊರೆತ ಬನವಾಸಿ ಕದಂಬ ಮನೆತನದ ಜೈನ ತಾಮ್ರಪಟ ಶಾಸನಗಳೇ ಈ ಪ್ರದೇಶದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಅತೀ ಪ್ರಾಚೀನ ಕುರುಹುಗಳಾಗಿವೆ.[೧೧೪] ಕೂಹುಂಡಿನಾಡಿನ ಪ್ರದೇಶವನ್ನಾಳಿದ ಬಹುತೇಕ ಅರಸರು, ಅಧಿಕಾರಿಗಳು ಜೈನ ಧರ್ಮಕ್ಕೆ ಉದಾರವಾಗಿ ಆಶ್ರಯ-ಪ್ರೋತ್ಸಾಹವನ್ನು ನೀಡಿ ಬೆಳೆಸಿದ್ದಾರೆ. ಕ್ರಿ.ಶ. ಸುಮಾರು ೧೦ನೆಯ ಶತಮಾನದಲ್ಲಿ ಮಳಖೇಡದ ರಾಷ್ಟ್ರಕೂಟರ ಆಳ್ವಿಕೆಯ ಸಂದರ್ಭದಲ್ಲಿ ಅವರ ಸಾಮಂತರಾಗಿ ರಟ್ಟರು ಕೂಹುಂಡಿನಾಡಿನ ಸವದತ್ತಿಯನ್ನು ರಾಜಧಾನಿ ಮಾಡಿಕೊಂಡು ಆಡಳಿತ ಪ್ರಾರಂಭಿಸಿದರು. ಇವರು ಜೈನ ಧರ್ಮವನ್ನು ರಾಜಧರ್ಮವನ್ನಾಗಿಸಿಕೊಂಡು ಇದರ ಏಳಿಗೆಗೆ ವಿಶೇಷವಾಗಿ ಶ್ರಮಿಸಿದ್ದಾರೆ. ರಾಷ್ಟ್ರಕೂಟ ಮನೆತನದ ಮುಮ್ಮಡಿ ಕೃಷ್ಣನ ಸಾಮಂತನಾದ ರಟ್ಟ ಮನೆತನದ ಪೃಥ್ವೀರಾಮನು ಯಾಪನೀಯ ಸಂಘದ ಮೈಳಾಪಾನ್ವಯ ಪರಂಪರೆಯ ಇಂದ್ರಕೀರ್ತಿ ಮುನಿಯ ಶಿಷ್ಯನಾಗಿದ್ದನು.[೧೧೫] ಈತನು ಸವದತ್ತಿಯಲ್ಲಿ ಬಸದಿಯನ್ನು ಕಟ್ಟಿಸಿ ಇಂದಿನ ಗದಗ ತಾಲ್ಲೂಕಿನ ಮುಳುಗುಂದ ಗ್ರಾಮದಲ್ಲಿ ಈ ಬಸದಿಯ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಭೂದಾನ ಮಾಡಿದ್ದಾನೆ.[೧೧೬]

೭.೪.೧. ದಿಗಂಬರ ಮತ್ತು ಶ್ವೇತಾಂಬರ ಪಂಥಗಳು

ಉತ್ತರ ಭಾರತದಲ್ಲಿ ಕ್ರಿ.ಪೂ. ಸುಮಾರು ೪ನೆಯ ಶತಮಾನದಲ್ಲಿ ಉಂಟಾದ ಹನ್ನೆರಡು ವರ್ಷಗಳ ಅವಧಿಯ ಬರಗಾಲವು ಜೈನ ಧರ್ಮದಲ್ಲಿ ಎರಡು ಪಂಥಗಳುಂಟಾಗಲು ಕಾರಣವಾಯಿತು.[೧೧೭]

ಆ ಸಂದರ್ಭದಲ್ಲಿ ಅಲ್ಲಿದ್ದ ಮುನಿಗಳಲ್ಲಿ ಕೆಲವರು ಭದ್ರಬಾಹು ಭಟ್ಟಾರಕ ಮತ್ತು ಈತನ ಶಿಷ್ಯ ನಂದ ಮನೆತನದ ಚಂದ್ರಗುಪ್ತನ ನೇತೃತ್ವದಲ್ಲಿ ದಕ್ಷಿಣಾಪಥಕ್ಕೆ ಆಗಮಿಸಿದರು. ಮತ್ತೆ ಕೆಲವರು ರಾಮಿಲಾಚಾರ್ಯ, ಸ್ಥೂಲಾಚಾರ್ಯ ಮತ್ತು ಸ್ಥೂಲಭದ್ರಾಚಾರ್ಯರ ನೇತೃತ್ವದಲ್ಲಿ ಸಿಂಧ ಪ್ರದೇಶಕ್ಕೆ (ಭಾರತದ ವಾಯವ್ಯ ಪ್ರಾಂತ) ಹೋದರು. ಆ ಪ್ರದೇಶದಲ್ಲಿ ಅತೀ ಕ್ಷಾಮದ ಪರಿಣಾಮವಾಗಿ ಹಗಲು ಹೊತ್ತು ನರಭಕ್ಷಕರ ಹಿಂಸೆ ನಡೆಯುತ್ತಿತ್ತು. ಹೀಗಾಗಿ ಜೈನ ಮುನಿಗಳು ರಾತ್ರಿಹೊತ್ತು ಭಿಕ್ಷೆ ಮಾಡಿ ಹಗಲು ಆಹಾರ ಸೇವಿಸುತ್ತಿದ್ದರು. ಒಂದು ದಿನ ರಾತ್ರಿ ಗರ್ಭಿಣಿಯೊಬ್ಬಳು ದಿಗಂಬರ ಮುನಿಯನ್ನು ಕಂಡು ಹೆದರಿದರಿಂದ ಅವಳಿಗೆ ಗರ್ಭಪಾತವಾಯಿತು. ಅಂದಿನಿಂದ ಅಲ್ಲಿಯ ಜೈನ ಮುನಿಗಳೆಲ್ಲರೂ ಅರ್ಧವಸ್ತ್ರವನ್ನು ಧರಿಸಲು ಪ್ರಾರಂಭಿಸಿದರು. ಹನ್ನೆರಡು ವರ್ಷಗಳ ಬರಗಾಲದ ತರುವಾಯ ಈ ಎರಡೂ ಮುನಿಸಮುದಾಯಗಳು ತಮ್ಮ ಮೂಲ ಸ್ಥಾನಕ್ಕೆ (ಉಜ್ಜೈನಿ) ಆಗಮಿಸಿದರು. ಇವರಲ್ಲಿ ದಕ್ಷಿಣಾಪಥಕ್ಕೆ ಆಗಮಿಸಿದ್ದ ಮುನಿಗಳೆಲ್ಲರೂ ದಿಗಂಬರರಾಗಿಯೇ ಇದ್ದರು. ಆದರೆ ಉತ್ತರಾಪಥಕ್ಕೆ ತೆರಳಿದ್ದ ಮುನಿಗಳು ಅರ್ಧವಸ್ತ್ರವನ್ನು ಧರಿಸುವ ಪರಂಪರೆಯನ್ನು ಮುಂದುವರಿಸಿ ಶ್ವೇತಾಂಬರ ಪಂಥದ ಉಗಮಕ್ಕೆ ಅಡಿಪಾಯ ಹಾಕಿದರು.

ದಿಗಂಬರ ಮತ್ತು ಶ್ವೇತಾಂಬರ ಪಂಥಗಳ ಆಚಾರ-ವಿಚಾರಗಳಲ್ಲಿ ಕೆಲವೊಂದು ಭಿನ್ನಾಭಿಪ್ರಾಯಗಳಿವೆ. ದಿಗಂಬರ ಪಂಥದ ಪ್ರಕಾರ ಸ್ತ್ರೀಯರಿಗೆ ಮೋಕ್ಷವಿಲ್ಲ. ಸ್ತ್ರೀಯರು ಮುಂದಣ ಜನ್ಮದಲ್ಲಿ ಪುರುಷರಾಗಿ ಜನ್ಮವೆತ್ತಿ ಮೋಕ್ಷ ಪಡೆಯಬೇಕು. ಶ್ವೇತಾಂಬರ ಪಂಥದ ಪ್ರಕಾರ ಸ್ತ್ರೀಯರಿಗೆ ಈ ಜನ್ಮದಲ್ಲಿಯೇ ಮೋಕ್ಷ ಸಾಧ್ಯವಿದೆ. ದಿಗಂಬರರ ಪ್ರಕಾರ ಜೈನ ಧರ್ಮದ ಪ್ರಾಚೀನ ಕೃತಿಗಳೆಲ್ಲವೂ ಹಾಳಾಗಿದ್ದು, ಆದರೆ ಶ್ವೇತಾಂಬರರ ಪ್ರಕಾರ ಹಾಳಾಗಿಲ್ಲ. ದಿಗಂಬರ ಪಂಥದ ತೀರ್ಥಂಕರರ ಶಿಲ್ಪಗಳು ನಗ್ನ ಮತ್ತು ನಿರಲಂಕೃತವಾಗಿದ್ದು, ಶ್ವೇತಾಂಬರ ಪಂಥದ ತೀರ್ಥಂಕರರ ಶಿಲ್ಪಗಳು ವಸ್ತ್ರಾಭರಣಗಳಿಂದ ಅಲಂಕೃತವಾಗಿರುತ್ತವೆ. ದಿಗಂಬರರ ಪ್ರಕಾರ ಕೇವಲಜ್ಞಾನಿಗೆ ಆಹಾರದ ಅವಶ್ಯವಿಲ್ಲ. ಶ್ವೇತಾಂಬರರ ಪ್ರಕಾರ ಅವಶ್ಯವಿದೆ. ದಿಗಂಬರರ ಪ್ರಕಾರ ಮಾಹಾವೀರ ತೀರ್ಥಂಕರನಿಗೆ ವಿವಾಹವಾಗಿಲ್ಲ. ಶ್ವೇತಾಂಬರರ ಪ್ರಕಾರ ವಿವಾಹವಾಗಿದ್ದು, ಅನೂಜ್ಞಾ ಎಂಬ ಮಗಳೂ ಇದ್ದಳು. ಕನ್ನಡನಾಡಿನಲ್ಲಿ ದಿಗಂಬರ ಮತ್ತು ಯಾಪನೀಯ ಪಂಥಗಳೇ ಪ್ರಧಾನವಾಗಿವೆ. ಇವುಗಳೊಂದಿಗೆ ಅಲ್ಲಲ್ಲಿ (ಮಳಖೇಡ, ಹಲಸಿ ಇತ್ಯಾದಿ) ಶ್ವೇತಾಂಬರ ಪಂಥವೂ ಅಸ್ತಿತ್ವದಲ್ಲಿತ್ತೆಂಬ ವಿಚಾರ ಸಮಕಾಲೀನ ಶಾಸನಗಳು ಮತ್ತು ಸಾಹಿತ್ಯಿಕ ಕುರುಹುಗಳಿಂದ ಸ್ಪಷ್ಟವಾಗುತ್ತದೆ. ಉತ್ತರ ಭಾರತದಿಂದ ಕಳೆದ ಶತಮಾನದಿಂದೀಚೆಗೆ ವ್ಯಾಪಾರದ ದೃಷ್ಟಿಯಿಂದ ಕೂಹುಂಡಿನಾಡಿನ ಪ್ರದೇಶಕ್ಕೆ (ಇಂದಿನ ಬೆಳಗಾವಿ, ಬಾಗಲಕೋಟ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶ) ಆಗಮಿಸಿರುವ ಶ್ವೇತಾಂಬರರು ಸ್ಥಳೀಯ ದಿಗಂಬರ ಪಂಥದೊಂದಿಗೆ ಸಾಮರಸ್ಯವನ್ನು ಸಾಧಿಸಿ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ.[೧೧೮]

೭.೪.೨. ಸಂಘ, ಗಣ, ಗಚ್ಛ, ಅನ್ವಯ, ಬಳಿ

ಜೈನ ಪರಂಪರೆಯ ಮುನಿಸಮುದಾಯವನ್ನು 'ನಿರ್ಗ್ರಂಥ ಮಹಾಶ್ರಮಣಸಂಘ' ಎಂದು ಕರೆಯುವುದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಕ್ರಿ.ಶ. ಸುಮಾರು ೫ನೆಯ ಶತಮಾನದಿಂದೀಚೆಗೆ

ಮುನಿಗಳು ಮತ್ತು ಕಂತಿಯರು ತಮ್ಮನ್ನು ವಿವಿಧ ಪ್ರಕಾರದ ಸಂಘ, ಗಣ, ಗಚ್ಛ, ಅನ್ವಯ, ಬಳಿ ಇವುಗಳಿಂದ ಗುರುತಿಸಿಕೊಳ್ಳುವ ಸಂಪ್ರದಾಯ ಪ್ರಾರಂಭವಾಯಿತು. ಕುಂದಕುಂದಾಚಾರ್ಯರ ತರುವಾಯದ ಅರ್ಹದ್ಬಲಿ ಆಚಾರ್ಯರು ಐದು ವರ್ಷಗಳಿಗೊಮ್ಮೆ ಕೈಗೊಳ್ಳುತ್ತಿದ್ದ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸುತ್ತಿದ್ದ ವಿವಿಧ ಪ್ರದೇಶಗಳ ಮುನಿಗಳಿಗೆ ಪಂಗಡಗಳಲ್ಲಿ ಬಾಳಬೇಕೆಂದು ಸೂಚಿಸುತ್ತ, ಆಯಾ ಪ್ರದೇಶಗಳಿಂದ ಆಗಮಿಸಿದ್ದ ಮುನಿಸಮುದಾಯಗಳಿಗೆ ನಂದಿಸಂಘ, ದೇವಸಂಘ, ಸೇನಸಂಘ, ಗುಪ್ತಸಂಘ, ಸಿಂಹಸಂಘ ಎಂದು ಸಂಜ್ಞೆಗಳನ್ನು ನೀಡಿದರೆಂದು ಇಂದ್ರನಂದಿಯ 'ಶ್ರುತಾವತಾರ' ಮತ್ತು ಶ್ರವಣಬೆಳಗೊಳದ ಕ್ರಿ.ಶ. ೧೩೯೮ರ ಶಾಸನದಲ್ಲಿ ನಿರೂಪಣೆಯಿದೆ. ಮೂಲಸಂಘದ ಕವಲುಗಳಾದ ಈ ಐದು ಸಂಘಗಳಲ್ಲದೇ ಕಾಲಕ್ರಮೇಣ ದ್ರಾವಿಡಸಂಘ, ಯಾಪನೀಯಸಂಘ, ಶ್ರೀಸಂಘ, ಕಿತ್ತೂರುಸಂಘ, ನವಿಲೂರುಸಂಘ, ಕೊಳತ್ತೂರುಸಂಘ, ಕಾಷ್ಠಸಂಘ ಮೊದಲಾದವುಗಳು ಪ್ರಚಲಿತಕ್ಕೆ ಬಂದವು.

ಈ ಮೇಲಿನ ವಿವಿಧ ಸಂಘಗಳಲ್ಲಿ ಬಲತ್ಕಾರಗಣ, ಸೂರ್ಯಸ್ಥಗಣ, ಕಾಣೂರುಗಣ, ದೇಸಿಯಗಣ, ವೃಷಭಗಣ, ಸಂದ್ವಿಗಗಣ, ದೇವಗಣ, ಕೋಟಿಮಡುವಗಣ, ಪುನ್ನಾಗವೃಕ್ಷಮೂಲಗಣ, ನಂದಿಗಣ, ಗವಾಟಗಣ, ಕಾರೆಯಗಣ, ಆಜಿಗಣ, ಕುಮುದಿಗಣ, ಸೇನಗಣ, ದ್ರಮಿಳಗಣ, ಪರಲೂರುಗಣ, ವಲಿಯೂರುಗಣ, ಬಾಗೆಗಣ ಮೊದಲಾದ ಗಣಗಳಿದ್ದವು. ಈ ಗಣಗಳಲ್ಲಿ ಒಳಗುಂಪುಗಳಾಗಿ ಸರಸ್ವತಿಗಚ್ಛ, ಪುಷ್ಕರಗಚ್ಛ, ಚಂದ್ರಕಪಾಟಗಚ್ಛ, ಪುಸ್ತಕಗಚ್ಛ, ವಕ್ರಗಚ್ಛ, ಮಂಡತಗಚ್ಛ, ಪೊಗರಿಗಚ್ಛ, ತಗರಿಗಲಗಚ್ಛ, ಕೌರೂರುಗಚ್ಛ, ಚಿತ್ರಕೂಟಗಚ್ಛ, ಮೇಷಪಾಷಾಣಗಚ್ಛ, ತಿಂತ್ರಿಣಿಗಚ್ಛ, ಸ್ವರ್ಣಪಾಷಾಣಗಚ್ಛ ಮೊದಲಾದ ಗಚ್ಛಗಳಿದ್ದವು. ಈ ಪ್ರತಿಯೊಂದು ಗಚ್ಛದ ಶಾಖೆಗಳಾಗಿ ಕುಂದಕುಂದಾನ್ವಯ, ನವಿಲ್ಗುಂದಾನ್ವಯ, ಶ್ರೀಪೂರಾನ್ವಯ, ಪಂಚಸ್ತೂಪಾನ್ವಯ, ಅರುಂಗುಲಾನ್ವಯ, ಇರುಂಗೊಳಾನ್ವಯ, ಪೊರಳಾನ್ವಯ, ಪಾಷಾಣಾನ್ವಯ, ಕೀರ್ತಾಚಾರ್ಯಾನ್ವಯ, ಮೈಳಾಪಾನ್ವಯ, ಚಿತ್ರಕೂಟಾನ್ವಯ, ಚಂದ್ರಕಾವಾಟಾನ್ವಯ ಮೊದಲಾದ ಅನ್ವಯಗಳಿದ್ದವು. ಈ ಪ್ರತಿಯೊಂದು ಅನ್ವಯಕ್ಕೆ ಹೊಂದಿಕೊಂಡಂತೆ ಇಂಗಳೇಶ್ವರಬಳಿ, ಹನಸೋಗೆಬಳಿ ಮೊದಲಾದ ಬಳಿಗಳಿದ್ದವು.

ಸಾಮಾನ್ಯವಾಗಿ ಮುನಿಸಮುದಾಯದ ಒಕ್ಕೂಟಕ್ಕೆ ಸಂಘವೆಂದೂ, ಮೂವರು ಮುನಿಗಳ ಸಮೂಹಕ್ಕೆ ಗಣವೆಂದೂ, ಏಳು ಮುನಿಗಳ ಸಂಚಾರಿ ತಂಡಕ್ಕೆ ಗಚ್ಛವೆಂದೂ ಕರೆಯಲಾಗುತ್ತದೆ. ಯಾವುದೋ ಒಂದು ಸಂಘದಿಂದ ಹೊರಟು ಬೇರೆ ಬೇರೆ ಶಾಖೆಗಳನ್ನು (ಗಚ್ಛಗಳು) ಸ್ಥಾಪಿಸಿದ ಮುನಿಗಳು ತಮ್ಮ ಹಿಂದಿನ ಸಂಘಗಳೆರಡನ್ನೂ ಹೇಳಿಕೊಂಡರು. ಈ ಗಣ, ಗಚ್ಛ, ಅನ್ವಯಾದಿಗಳಲ್ಲಿ ಕೆಲವು ವ್ಯಕ್ತಿಗಳು, ಮತ್ತೆ ಕೆಲವು ಊರುಗಳು, ಇನ್ನೂ ಕೆಲವು ಪ್ರದೇಶಗಳ ಹೆಸರುಗಳನ್ನು ಸೂಚಿಸುತ್ತವೆ. ಸಮಕಾಲೀನ ಶಾಸನಗಳು ಮತ್ತು ಸಾಹಿತ್ಯದಲ್ಲಿ ಮುನಿಗಳು, ಕಂತಿಯರು, ಶಿಷ್ಯರು, ಬಸದಿಗಳ ಪ್ರಸ್ತಾಪದ ಸಂದರ್ಭಗಳಲ್ಲಿ ಈ ಸಂಜ್ಞೆಗಳ ಪ್ರಸ್ತಾಪಗಳು ಸಾಮಾನ್ಯವಾಗಿರುತ್ತವೆ.[೧೧೯]

ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಜೈನ ಶಾಸನಗಳಲ್ಲಿ ಮೂಲಸಂಘ, ಯಾಪನೀಯ ಸಂಘ, ಕಾರೆಯಗಣ, ಪುನ್ನಾಗವೃಕ್ಷಮೂಲಗಣ, ಬಳತ್ಕಾರಗಣ, ಸೂರಸ್ತಗಣ, ಪುಸ್ತಕಗಚ್ಛಗಳ ಪ್ರಸ್ತಾಪಗಳಿವೆ. ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ_

ಯಾಪನೀಯಸಂಘದೊಳೆ ಭಾವಿಸೆಕಾರೆಯಗಣವುಂ
ಅನ್ತಾಕಾರೆಯಯಗಣದೊಳತಿ ಪ್ರಸಿದ್ಧರುಂ
ಮಹಾಪ್ರಬುದ್ಧಶಾಸನರುಂ ಸಕಳಶಾಸ್ತ್ರವಿಚಕ್ಷಭರುಮೆನಿಸಿ
ನೆಗಳ್ದ ಮಹಾಮಂಡಳಾಚಾರ್ಯ್ಯ ತಪೋಮಂಡನರೆಸೆವ
ಮಾಧವಭಟ್ಟಾರಕರನಾಮ................ ॥

ಎಂದು ಕಾರೆಯಗಣದ ನಿರೂಪಣೆಯಿದೆ.[೧೨೦] ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಪುಸ್ತಕಗಚ್ಛದ ಪ್ರಸ್ತಾಪವಿದೆ.[೧೨೧] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ ಮೂಲಸಂಘ, ಕೊಂಡಕುಂದಾನ್ವಯ, ದೇಶಿಯಗಣ, ಪುಸ್ತಕಗಚ್ಛದ ಉಲ್ಲೇಖವಿದೆ.[೧೨೨] ಹೂಲಿಯ ಕ್ರಿ.ಶ. ೧೦೪೩ರ ಶಾಸನದಲ್ಲಿ ಯಾಪನೀಯ ಸಂಘ, ಪುನ್ನಾಗವೃಕ್ಷಮೂಲಗಣದ ನಿರೂಪಣೆಯಿದೆ.[೧೨೩] ಯಕ್ಸಂಬಾದ ಕ್ರಿ.ಶ. ೧೧೬೫ರ ಶಾಸನದಲ್ಲಿ ಯಾಪನೀಯ ಸಂಘ, ಪುನ್ನಾಗವೃಕ್ಷಮೂಲಗಣದ ಪ್ರಸ್ತಾಪವಿದೆ.[೧೨೪] ಅಮ್ಮಣಗಿಯ ಶಾಸನದಲ್ಲಿ ಮೂಲಸಂಘ, ಸೂರ್ಯಸ್ತಗಣದ ಪ್ರಸ್ತಾಪವಿದೆ.[೧೨೫]

೭.೪.೩. ಜೈನ ಆಚಾರ್ಯರು

ಕೂಹುಂಡಿನಾಡಿನ ಪ್ರದೇಶದಾದ್ಯಂತ ಜೈನ ಧರ್ಮದ ಪ್ರಸಾರದೊಂದಿಗೆ ಆಳರಸರು, ಅಧಿಕಾರಿಗಳು, ವ್ಯಾಪಾರಿಗಳು, ಪ್ರಜೆಗಳು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಲು ಇಲ್ಲಿಯ ಜೈನ ಆಚಾರ್ಯರ ಪ್ರಭಾವ ಹಾಗೂ ಪ್ರೇರಣೆ ಅಪಾರವಾಗಿದೆ. ಈ ಮುನಿಗಳು ಕಠಿಣ ತಪಸ್ಸು, ಅಪಾರ ವಿದ್ವತ್ತು, ವಿಭಿನ್ನ ಶಾಸ್ತ್ರಗಳಲ್ಲಿ ಪಾರಂಗತೆ, ಸ್ವಾಧ್ಯಾಯ ಸಂಪತ್ತು, ದೃಢನಿಷ್ಠೆ, ಮೌಲ್ಯಯುತ ಆಚಾರ, ಗಂಭೀರ ವಿಚಾರ, ಅವಿರತ ಸಾಧನೆಯಿಂದ ಜೈನ ಸಾಹಿತ್ಯವನ್ನು ಶ್ರೀಮಂತವಾಗಿಸಿದರು. ಜೊತೆಗೆ ಜೈನ ಧರ್ಮವನ್ನೂ ಉನ್ನತಿಗೇರಿಸಿದರು. ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನದವರೆಗೂ ರಾಜ್ಯಧರ್ಮವಾಗಿ ಮೆರೆದ ಜೈನ ಧರ್ಮವು ತದನಂತರದ ಕಾಲದಲ್ಲಿ ಆಂತರಿಕ ಅಸ್ಥಿರತೆಯಿಂದ ಹಾಗೂ ಇದನ್ನು ಮೂಲೋತ್ಪಾಟನೆಗೊಳಿಸಲು ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂಘರ್ಷಣೆಗಳ ಮೂಲಕ ನಡೆಸಿದ ಸಂಚುಗಳಿಂದಾಗಿ ಅವನತಿಯೆಡೆಗೆ ಸಾಗಿತು. ೧೯ನೆಯ ಶತಮಾನದಲ್ಲಿ ಇದಕ್ಕೆ ಮತ್ತೆ ಪುನರುಜ್ಜೀವನ ಕಲ್ಪಿಸಿದ ಕೀರ್ತಿ ಇಲ್ಲಿಯ ಆಚಾರ್ಯಶ್ರೀ ಶಾಂತಿಸಾಗರಮುನಿ ಮೊದಲಾದ ಅರ್ವಾಚೀನ ಮುನಿಗಳಿಗೆ ಸಲ್ಲುತ್ತದೆ.

ಪದ್ಮಿನೀ ರಾಜಹಂಸಾಶ್ಚ ನಿರ್ಗ್ರಂಥಶ್ಚ ತಪೋಧನಾಃ ।
ಯಂ ದೇಶಮುಪಸರ್ಪಂತಿ ಸುಭಿಕ್ಷಂ ನಿದಿಶೇತ್ ॥

ಪದ್ಮಿನಿ ಸ್ತ್ರೀ, ರಾಜಹಂಸ ಪಕ್ಷಿ ಮತ್ತು ನಿರ್ಗ್ರಂಥ ಮುನಿಗಳು ವಿಹಾರ ಮಾಡುವ ಪ್ರದೇಶವು ಯಾವಾಗಲೂ ಸುಭೀಕ್ಷೆಯನ್ನು ಹೊಂದಿರುತ್ತದೆ.[೧೨೬] ಆ ಹಿನ್ನೆಲೆಯಲ್ಲಿ ಯಾವತ್ತಿಗೂ ಸುಭೀಕ್ಷವಾಗಿರುವ ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಪೂ. ಸುಮಾರು ೫ನೆಯ ಶತಮಾನದಿಂದ ಇಂದಿನವರೆಗೂ ಜೈನ ಮುನಿಗಳ ವಿಹಾರ, ಧರ್ಮಪ್ರಸಾರ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸ್ಫೂರ್ತಿ-ಪ್ರೇರಣೆ ಅವಿಚ್ಛಿನ್ನವಾಗಿ

ಸಾಗಿಬಂದಿದೆ. ಈ ನಾಡಿನಲ್ಲಿ ಆಳಿದ ಮತ್ತು ಆಳ್ವಿಕೆಯ ಪ್ರಭಾವವನ್ನು ಹೊಂದಿದ್ದ ಆಳರಸರು ಹಾಗೂ ಸಮಕಾಲೀನ ಪ್ರಜೆಗಳು ಆಶಾಧರಸೂರಿಯು 'ಸಾಗಾರಧರ್ಮಾಮೃತ' ಮತ್ತು ಸೋಮದೇವಸೂರಿಯು 'ಯಶಸ್ತಿಲಕ'ದಲ್ಲಿ ಸೂಚಿಸಿರುವಂತೆ_

ವಿನ್ಯಸ್ಯೈದಂ ಯುಗಿನೇಷು ಪ್ರತಿಮಾಸ್ಯ ಜಿನಾನಿವ ।
ಭಕ್ತ್ಯಾಪೂರ್ವ ಮುನೀನರ್ಚೇತಕುತಃ ಶ್ರೇಯ್ಯೋತಿ ಚರ್ಚಿನಾಮ್ ॥
ಭುಕ್ತಿಮಾತ್ರ ಪ್ರಧಾನೇ ತು ಕಾ ಪರೀಕ್ಷಾ ತಪಸ್ವಿನಾಮ್ ।
ತೇ ಸನ್ತಃ ಸನ್ತ್ವಸಂತೊ ವಾ ಗ್ರಹೀ ದಾಸೀನ ಶುದ್ಧ್ಯತಿ ॥

ಮುನಿಗಳಲ್ಲಿ ಭೇದ-ಭಾವ ತೋರದೆ ಅವರಲ್ಲಿ ಅತ್ಯಂತ ಭಕ್ತಿಭಾವವನ್ನಿಟ್ಟು ಬಸದಿಗಳ ಪೂಜೆ, ಜೀರ್ಣೋದ್ಧಾರ, ಆಹಾರದಾನ ಇತ್ಯಾದಿ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗಾಗಿ ಆ ಮುನಿಗಳ ಸನ್ನಿಧಿಯಲ್ಲಿಯೇ ಉದಾರವಾಗಿ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ. ಹಾಗಾಗಿಯೇ ಈ ನಾಡಿನಲ್ಲಿ ಮುನಿಪರಂಪರೆ, ಬಸದಿಗಳ ನಿರ್ಮಾಣ, ಶಿಲ್ಪಗಳ ಪ್ರತಿಷ್ಠಾಪನೆ ಸಮೃದ್ಧವಾಗಿ ಸಾಗಿಬಂದಿವೆ. ಇಂದಿಗೂ ಅವು ವಿಜೃಂಭನೆಯಿಂದ ಮುಂದುವರೆಯುತ್ತಿವೆ. ಈ ನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಜೈನ ಶಾಸನಗಳಲ್ಲಿ ಪ್ರಸ್ತಾಪಿತ ಜೈನ ಆಚಾರ್ಯರು ಜೈನ ಧರ್ಮದ ಪುನರುಜ್ಜೀವನ ಮತ್ತು ಪ್ರಸಾರ ಕಾರ್ಯದಲ್ಲಿ ತೊಡಗಿ ಜೈನ ಮತ್ತು ಜೈನೇತರ ಸಮುದಾಯಗಳನ್ನು ಜಾಗೃತಗೊಳಿಸಿದ್ದಾರೆ. ಆ ಮುನಿಗಳು ಕೈಗೊಂಡ ಕಠಿಣ ತಪಸ್ಸು, ಧರ್ಮಪ್ರಸಾರ, ವ್ರತಗಳ ಪಾಲನೆ ಮತ್ತು ಜೈನಾಗಮಗಳಲ್ಲಿ ಅವರಿಗಿದ್ದ ನಿಷ್ಠೆ, ಪಾಂಡಿತ್ಯ, ವಿದ್ವತ್ತು, ಅಂದಿನ ಸಮಾಜದಲ್ಲಿ ಅವರಿಗಿದ್ದ ಸ್ಥಾನ-ಮಾನ, ಗೌರವ ಮೊದಲಾದವುಗಳು ಬಹು ಮಾರ್ಮಿಕವಾಗಿವೆ. ಅವರ ವಿವರಗಳು ಈ ಕೆಳಗಿನಂತಿವೆ.

೭.೪.೩.೧. ಆರ್ಯನಂದಿ

ಗೋಕಾಕ ನಗರದ ಕ್ರಿ.ಶ. ಸುಮಾರು ೬ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ ಉಲ್ಲೇಖಿತ ಆರ್ಯನಂದಿಮುನಿ ಜಂಬೂಖಂಡಗಣ (ಇಂದಿನ ಜಮಖಂಡಿ) ಪರಂಪರೆಗೆ ಸಂಬಂಧಿಸಿದ್ದಾನೆ. ರಾಷ್ಟ್ರಕೂಟ ಮನೆತನದ ದೆಜ್ಜಮಹಾರಾಜನ ಪುತ್ರ ಇಂದ್ರನಂದಿ ರಾಜನು ತನ್ನ ಹಾಗೂ ತನ್ನ ಪೂರ್ವಜರ ಪುಣ್ಯಗೋಸ್ಕರ ಕಷ್ಮಾಂಡಿ ವಿಷಯದಲ್ಲಿದ್ದ (>ಕುಹುಣ್ಡಿವಿಷಯ>ಕೂಹುಂಡಿನಾಡು>ಕೂಹುಂಡಿ ಮೂಸಾವಿರ) ಜಳಾರ ಗ್ರಾಮದಲ್ಲಿ ಅರಹಂತ ತೀರ್ಥಂಕರನ ಪೂಜೆ-ಪನಸ್ಕಾರಕ್ಕೆ ಮತ್ತು ಶಿಕ್ಷಕರು, ರೋಗಿಗಳು, ವೃದ್ಧರು, ತಪಸ್ವಿಗಳ ಆಹಾರಕ್ಕಾಗಿ ಈ ಮುನಿಯ ಸನ್ನಿಧಿಯಲ್ಲಿ ಐವತ್ತು ನಿವರ್ತನ ಭೂಮಿಯನ್ನು ದಾನ ಮಾಡಿದ್ದಾನೆ.[೧೨]

೭.೪.೩.೨. ಗುಣಚಂದ್ರ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಗುಣಚಂದ್ರನು ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನವು ಈ ಮುನಿ ಬಲತ್ಕಾರಗಣ ಎಂಬ ಸರೋವರದಲ್ಲಿ ಹಂಸಪಕ್ಷಿಯಂತೆ ಶೋಭಿಸುತ್ತಿದ್ದನೆಂದೂ, ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದನೆಂದೂ, ಮುನಿಗಣದಲ್ಲಿ ಹುಣ್ಣಿಮೆಯ ಚಂದ್ರನಂತೆ ಶೋಭಿಸುತ್ತಿದ್ದನೆಂದೂ,

ಸ್ವಭಾವದಲ್ಲಿ ಶಾಂತನೂ, ಗುಣದಲ್ಲಿ ಶ್ರೇಷ್ಠನೂ, ಜೈನ ಧರ್ಮದ ಏಳ್ಗೆಗಾಗಿ ಶ್ರಮಿಸುವವನೂ ಆಗಿದ್ದನೆಂದು ವರ್ಣಿಸಿದೆ.[೧೨೮]

೨.೪.೩.೩. ನಯನಂದಿ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ನಯನಂದಿಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಗುಣಚಂದ್ರ ಮುನಿಯ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯು ಹದಿನೈದು ದಿನಗಳವರೆಗೂ ಉಪವಾಸ ಕೈಗೊಳ್ಳುತ್ತಿದ್ದನೆಂದೂ, ಈತನ ಪಾದಗಳು ಮಧುರವಾಗಿದ್ದವೆಂದೂ, ಶೀಲವಂತನಾಗಿದ್ದನೆಂದೂ, ಜನಸಾಮಾನ್ಯರನ್ನು ರಕ್ಷಿಸುವ ಶಕ್ತಿ ಹೊಂದಿದ್ದನೆಂದೂ, ಧರ್ಮಜ್ಞಾನದಲ್ಲಿ ಪಾರಂಗತನಾಗಿದ್ದನೆಂದೂ ವರ್ಣಿಸಿದೆ.[೧೨೯]

೨.೪.೩.೪. ಶ್ರೀಧರಾಚಾರ್ಯ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಶ್ರೀಧರಾಚಾರ್ಯನು ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ನಯನಂದಿ ಮುನಿಯ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು ಅನೇಕ ವಿದ್ಯೆಗಳಲ್ಲಿ ಪರಿಣಿತನಾಗಿದ್ದನೆಂದು ವರ್ಣಿಸಿದೆ. ಈತನು ಮುನಿಗಣದಲ್ಲಿ ಪ್ರಮುಖನಾಗಿದ್ದು, ಆಚಾರ್ಯ ಪದವಿಯಲ್ಲಿದ್ದನು. ಸವದತ್ತಿಯ ರಟ್ಟ ಮನೆತನದ ಇಮ್ಮಡಿ ಕನ್ನಕೈರನು ಕೊಣ್ಣೂರದಲ್ಲಿ ಮಹಾಪ್ರಭು ನಿದಿಯಮ ಗಾವುಂಡನು ನಿರ್ಮಿಸಿದ್ದ ಪಾರ್ಶ್ವನಾಥ ಬಸದಿಯ ಜೀರ್ಣೋದ್ಧಾರಕ್ಕಾಗಿ ಈ ಮುನಿಯ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ.[೧೩೦]

೨.೪.೩.೫. ಚಂದ್ರಕೀರ್ತಿ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಚಂದ್ರಕೀರ್ತಿಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಶ್ರೀಧರಾಚಾರ್ಯನ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯು ಸನ್ಮಾರ್ಗಿಯೂ, ಮಿಥ್ಯಾಕಥೆಗಳನ್ನು ಬಿಂಬಿಸಿದವನೂ, ಚಂದ್ರನಂತೆ ಕೀರ್ತಿವುಳ್ಳವನೂ, ಸರ್ವರಿಂದ ಪೂಜಿತನಾಗಿದ್ದನೆಂದೂ ವರ್ಣಿಸಿದೆ.[೧೩೧] ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ ಶಾಸನದಲ್ಲಿ ಪ್ರಸ್ತಾಪಿತ ಚಂದ್ರಕೀರ್ತಿಮುನಿ ಪ್ರಸ್ತುತ ಮುನಿಯೇ ಆಗಿರುವಂತೆ ತೋರುತ್ತದೆ.[೧೩೨]

೨.೪.೩.೬. ನೇಮಿಚಂದ್ರ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ನೇಮಿಚಂದ್ರನು ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಇವರು ಈ ಮೇಲಿನ ಚಂದ್ರಕೀರ್ತಿಯ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು ಚಾರಿತ್ರ್ಯವಂತನೂ, ಭೂಮಿಪತಿಯೂ, ಕಿರೀಟಪ್ರಾಯನೂ, ಚಂದ್ರನ ಕಿರಣದಂತೆ ಶಾಂತನೂ ಆಗಿದ್ದನೆಂದು ವರ್ಣಿಸಿದೆ.[೧೩೩]

೨.೪.೩.೭. ಶ್ರೀಧರ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಶ್ರೀಧರಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈ ಮೇಲಿನ ಚಂದ್ರಕೀರ್ತಿಮುನಿಯ ಪುತ್ರನಾದ

ಇವನು ನೇಮಿಚಂದ್ರನ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು ಮಹಾವಾಗ್ಮಿಯೂ, ಅಪಾರ ಶಬ್ಧಭಂಡಾರ ಉಳ್ಳವನೂ ಆಗಿದ್ದನೆಂದು ವರ್ಣಿಸಿದೆ. ಈತನು ಸ್ಥಳೀಯ ಮಹಾಪ್ರಭು ನಿಧಿಯಮ ಗಾವುಂಡನ ಗುರುವಾಗಿದ್ದನು.[೧೩೪] ಉಳ್ಳಾಗಡ್ಡಿ ಖಾನಾಪುರದ ಕ್ರಿ.ಶ. ೧೦೭೬ರ, ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ, ಹಣ್ಣಿಕೇರಿಯ ಕ್ರಿ.ಶ. ೧೨೦೮ರ, ಬಡ್ಲಿಯ ಕ್ರಿ.ಶ. ೧೨೯೯ರ ಮತ್ತು ಹೂಲಿಯ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನಗಳಲ್ಲಿ ಉಲ್ಲೇಖಿತ ಶ್ರೀಧರಮುನಿ ಪ್ರಸ್ತುತ ಮುನಿಯೇ ಆಗಿರುವಂತೆ ತೋರುತ್ತದೆ.[೧೩೫]

೭.೪.೩.೮. ಧರಸೇನ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಧರಸೇನಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಶ್ರೀಧರಮುನಿಯ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು 'ಅತಿಚತುರಕವಿ' ಎಂದು ವರ್ಣಿಸಿದೆ.[೧೩೬] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೯. ವಾಸುಪೂಜ್ಯ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ವಾಸುಪೂಜ್ಯಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈ ಮುನಿ ಮೂರು ವಿದ್ಯೆಗಳಲ್ಲಿ (ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯ) ಪ್ರವೀಣನೂ, ಪರಿಣಿತನೂ, ಜನರ ಮುಖವನ್ನು ನೋಡಿ ಅವರ ಹಿಂದಿನ ಜನ್ಮದ ವೃತ್ತಾಂತವನ್ನು ಹೇಳುವವನೂ, ಧರ್ಮದ ವಿಷಯದಲ್ಲಿ ಪ್ರವಾದಿಗಳನ್ನು ಸೋಲಿಸುವವನೂ, ಲಾವಣ್ಯವಂತನೂ ಆಗಿ ಭೂಮಿಯಲ್ಲಿ ಪ್ರಸಿದ್ಧನಾಗಿದ್ದನು. ಈತನು ಮಲೆಯಾಳ ದೇಶದಿಂದ (ಇಂದಿನ ಕೇರಳ ಪ್ರದೇಶ) ಆಗಮಿಸಿದ್ದ ಬೌದ್ಧ ಧರ್ಮದ ಸನ್ಯಾಸಿಯನ್ನು ಧರ್ಮವಾದದಲ್ಲಿ ಸೋಲಿಸಿದ್ದನು.[೧೩೭] ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ ಶಾಸನದಲ್ಲಿ ಪ್ರಸ್ತಾಪಿತ ವಾಸುಪೂಜ್ಯಮುನಿ ಪ್ರಸ್ತುತ ಮುನಿಯೇ ಆಗಿರುವಂತೆ ತೋರುತ್ತದೆ.[೧೩೮] ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದ ಪ್ರಾರಂಭದಲ್ಲಿ ತನ್ನ ಗುರುವಾಗಿದ್ದ ಈ ಮುನಿ–

ಭಾವತಪದಿಂದೆಬೆದಚೆಸಿ ।
ಭಾವಜನಂ ಪರಮಸಂಯಮೋಪಾಯಮನು ॥
ಜಿವಿಸಿದ ವಾಸುಪೂಜ್ಯ ।
ತ್ರೈವಿದ್ಯಪದಂಗಳಲ್ತೆ ಲೋಕನುತಂಗಳ್ ॥

ಭಾವತಪಸ್ಸಿನಿಂದ ಭಾವಜನನ್ನು (ಮನ್ಮಥ) ಭಯಪಡಿಸಿ ಓಡಿಸಿ ಪರತಪಸ್ಸಿಗೆ ದಾರಿಯನ್ನು ವೃದ್ಧಿಗೊಳಿಸಿಕೊಂಡಿದ್ದನು. ಈತನ ಪಾದಗಳು ಲೋಕಖ್ಯಾತಿ ಹೊಂದಿದ್ದವು ಎಂದು ವರ್ಣಿಸಿದ್ದಾನೆ.[೧೩೯]

೭.೪.೩.೧೦. ಶ್ರುತಕೀರ್ತಿ

ಕೊಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಶ್ರುತಕೀರ್ತಿಮುನಿ ಮೂಲಸಂಘದ

ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ವಾಸುಪೂಜ್ಯಮುನಿಯ ಪುತ್ರನಾಗಿದ್ದು, ಈತನಿಂದಲೇ ಮುನಿದೀಕ್ಷೆಯನ್ನು ಪಡೆದು ಆತನ ಶಿಷ್ಯನಾಗಿದ್ದನು. ಪ್ರಸ್ತುತ ಶಾಸನವು ಈ ಮುನಿ ಮಾತನಾಡಿದರೆ ಬೆಳದಿಂಗಳು ಹರಡಿದಂತಾಗುತ್ತಿತ್ತು ಎಂದು ವರ್ಣಿಸಿದೆ.[೧೪೦] ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ ಶಾಸನದಲ್ಲಿ ಪ್ರಸ್ತಾಪಿತ ಶ್ರುತಕೀರ್ತಿಮುನಿ ಪ್ರಸ್ತುತ ಮುನಿಯೇ ಆಗಿರುವಂತೆ ತೋರುತ್ತದೆ.[೧೪೧] ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದ ಪ್ರಾರಂಭದಲ್ಲಿ–

> ಏವೊಗಟ್ವೆವಾಸುಪೂಜ್ಯ ।
> ತ್ರೈವಿದ್ಯರ ವಿದ್ಯೆಯೇಟ್ವೆಯಂ ಶ್ರುತಕೀರ್ತಿ ॥
> ತ್ರೈವಿದ್ಯಾರ್ ಸಕಳಕಳಾ ।
> ಕೋವಿದರೆನೆನೆಗಟ್ದಗುಣಿಗಳವರ್ಗಗಳ ಶಿಷ್ಯರ್ ॥

ವಾಸುಪೂಜ್ಯಮುನಿಯ ಶಿಷ್ಯನಾಗಿದ್ದ ಶ್ರುತಕೀರ್ತಿಮುನಿ ಸಕಲ ವಿದ್ಯಾಪಾರಂಗತನೂ ಸಕಲ ಸದ್ಗುಣಶಾಲಿಯೂ ಆಗಿ ವಿದ್ಯಾ ಪ್ರೌಢಿಮೆಯನ್ನು ಹೊಂದಿದ್ದನು ಎಂದು ವರ್ಣಿಸಿದ್ದಾನೆ.[೧೪೨]

೭.೪.೩.೧೧. ಪದ್ಮಪ್ರಭ

ಕೋಣ್ಣೂರದ ಕ್ರಿ.ಶ. ೧೦೮೭ರ ಶಾಸನದಲ್ಲಿ ಉಲ್ಲೇಖಿತ ಪದ್ಮಪ್ರಭಮುನಿ ಮೂಲಸಂಘದ ಬಲತ್ಕಾರಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ವಾಸುಪೂಜ್ಯಮುನಿಯ ಪುತ್ರನಾಗಿದ್ದು, ಈತನಿಂದಲೇ ಮುನಿದೀಕ್ಷೆಯನ್ನು ಪಡೆದು ಆತನ ಶಿಷ್ಯನಾಗಿದ್ದನು. ಪ್ರಸ್ತುತ ಶಾಸನವು ಈ ಮುನಿಯನ್ನು 'ಅತಿಚತುರಕವಿ ಕದಂಬಕನುತಪ್ಪದ್ಮಪ್ರಭ' ಎಂದು ವರ್ಣಿಸಿದೆ.[೧೪೩] ಪ್ರಾಯಶಃ ಈ ಮುನಿ ಜೈನಾಗಮಗಳನ್ನು ರಚಿಸಿರಬಹುದಾದ ಕಾರಣ ಈತನಿಗೆ 'ಅತಿಚತುರಕವಿ' ಎಂಬ ಬಿರುದಿದ್ದಂತೆ ತೋರುತ್ತದೆ. ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ ಶಾಸನದಲ್ಲಿ ಪ್ರಸ್ತಾಪಿತ ಪದ್ಮಪ್ರಭಮುನಿ ಪ್ರಸ್ತುತ ಮುನಿಯೇ ಆಗಿರುವಂತೆ ತೋರುತ್ತದೆ.[೧೪೪]

೭.೪.೩.೧೨. ಕುಮಾರಸೇನ

ಕೋಣ್ಣೂರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲೇಖಿತ ಕುಮಾರಸೇನಮುನಿ ಮೂಲಸಂಘದ ಪರಂಪರೆಗೆ ಸಂಬಂಧಿಸಿದ್ದಾನೆ.[೧೪೫] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೧೩. ನಾಗಸೇನ

ಕೋಣ್ಣೂರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲೇಖಿತ ನಾಗಸೇನಮುನಿ ಮೂಲಸಂಘದ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಕುಮಾರಸೇನಮುನಿಯ ಶಿಷ್ಯನು.[೧೪೬] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೧೪. ರವಿಚಂದ್ರ

ಗೋಕಾಕ ನಗರದ ಕ್ರಿ. ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲೇಖಿತ ರವಿಚಂದ್ರಮುನಿ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನ ಶಿಷ್ಯ ಸವದತ್ತಿಯ

ರಟ್ಟ ಮನೆತನದ ಎರೆಗನು ಗೋಕಾಕ ನಗರದಲ್ಲಿ ಸುಪಾರ್ಶ್ವನಾಥ (?) ಬಸದಿಯನ್ನು ಮಾಡಿಸಿದ್ದಾನೆ.[೧೪೭] ಈ ಮುನಿಯ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೧೫. ಮಲಧಾರಿ

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಮಲಧಾರಿಮುನಿ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛದ ಹನಸೋಗೆಬಳಿ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನವು ಈ ಮುನಿಯನ್ನು ಗುರುಕುಲ ತಿಳಕಪ್ರಾಯನೂ, ಚಾರಿತ್ರ್ಯವಂತನೂ, ವಿಷಮವಿಷಯಗಳಿಗೆ ರಾಮಬಾಣನೂ, ಮೋಹಕ್ಕೆ ಅಂಕುಶನೂ, ಮಂತ್ರದಿಂದ ಮಂಗಲಕರನೂ, ಔಷಧಜ್ಞಾನವುಳ್ಳವನೂ, ಉತ್ತಮ ತಪಸ್ವಿಯೂ ಆಗಿದ್ದನೆಂದು ವರ್ಣಿಸಿದೆ.[೧೪೮] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿಯೂ ಈ ಮುನಿಯ ಪ್ರಸ್ತಾಪವಿದೆ.[೧೪೯]

೭.೪.೩.೧೬. ನೇಮಿಚಂದ್ರ

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ನೇಮಿಚಂದ್ರಮುನಿ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛದ ಹನಸೋಗೆಬಳಿ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಮಲಧಾರಿಮುನಿಯ ಅಗ್ರ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು ಶಾಂತನೂ, ಧರ್ಮಜ್ಞಾನವುಳ್ಳವನೂ, ಶ್ರುತಜ್ಞಾನವಂತನೂ, ಸಕಲಶಾಸ್ತ್ರ ಪಾರಂಗತನೂ, ಒಳ್ಳೆಯ ಚಾರಿತ್ರ್ಯವಂತನೂ ಆಗಿದ್ದನೆಂದು ವರ್ಣಿಸಿದೆ.[೧೫೦] ಖಾನಾಪುರ ತಾಲ್ಲೂಕಿನ ಗೋಲಿಹಳ್ಳಿಯ ಕ್ರಿ.ಶ. ೧೧೭೬ರ ಮತ್ತು ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನಗಳಲ್ಲಿ ಈ ಮುನಿಯ ನಿರೂಪಣೆಗಳಿವೆ.[೧೫೧] ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದ ಪ್ರಾರಂಭದಲ್ಲಿ–

> ಶ್ರೀ ಶಾರದೇಂದು ಕೈರವ ।
> ಕಾಶಸಮುತ್ಫುಲ್ಲ ಮಲ್ಲಿಕಾಸಂಕುಳಸಂ ॥
> ಕಾಶವಿಶುದ್ಧಯಶೋಗಂ ।
> ಗೇಶಂ ಶ್ರೀನೇಮಿಚಂದ್ರ ಸೈದ್ಧಾಂತೇಶ ॥

ನೇಮಿಚಂದ್ರ ಸೈದ್ಧಾಂತೇಶಮುನಿ ಶರತ್ಕಾಲದ ಚಂದ್ರ, ನೈದಿಲೆ, ಕಾಗಿದಬ್ಬೆಹೂವು, ಅರಳಿದ ಮಲ್ಲಿಗೆಯ ಹೂಗೊಂಚಲುಗಳಂತೆ ಶುಭ್ರವಾದ ಯಶಸ್ಸೆಂಬ ಗಂಗೆಯ ಒಡೆಯನಂತಿದ್ದನು ಎಂದು ವರ್ಣಿಸಿದ್ದಾನೆ.[೧೫೨]

೭.೪.೩.೧೭. ಶುಭಚಂದ್ರ ಭಟ್ಟಾರಕ

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಶುಭಚಂದ್ರಮುನಿ ಮೂಲಸಂಘದ ದೇಸಿಯಗಣದ ಪುಸ್ತಕಗಚ್ಛದ ಹನಸೋಗೆಬಳಿ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ನೇಮಿಚಂದ್ರಮುನಿಯ ಶಿಷ್ಯನು. ಪ್ರಸ್ತುತ ಶಾಸನವು ಈ ಮುನಿಯನ್ನು ಉತ್ತಮ ಚಾರಿತ್ರ್ಯವಂತನೂ, ಸೂರ್ಯನಂತೆ ಪ್ರಭಾವಿಯೂ, ಸ್ವಗುಣದಲ್ಲಿ ಸತ್ಯವಂತನೂ, ಚಂದ್ರಿಕಾಶುದ್ಧಿಯಿಂದ ದಿಗಂಬರ ಕುಲ(ಪಂಥ)ವನ್ನು ವೃದ್ಧಿಸುವವನೂ, ರಾಜನಿಂದ ಪೂಜಿತನೂ ಆಗಿದ್ದನೆಂದು ವರ್ಣಿಸಿದೆ. ಈ

ಮುನಿ ಕಲ್ಲೊಳೆಯ ಶಾಂತಿನಾಥ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನು ಆ ಬಸದಿಯ ಪೂಜೆ, ಜೀರ್ಣೋದ್ಧಾರ, ಮುನಿಗಳ ಆಹಾರದಾನ ಮೊದಲಾದ ಕಾರ್ಯಗಳಿಗಾಗಿ ಈ ಮುನಿಯ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾನೆ.[೧೫೩] ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿಯೂ ಈ ಮುನಿಯ ಪ್ರಸ್ತಾಪವಿದೆ.[೧೫೪] ಪಾರ್ಶ್ವಪಂಡಿತನು 'ಪಾರ್ಶ್ವನಾಥ ಪುರಾಣ'ದ ಪ್ರಾರಂಭದಲ್ಲಿ_

ಚಾರುಚರಿತ್ರಕೈರವವಿಕಾಸಿವಿಲಿರ್ಮಳಕೀರ್ತಿಚಂದ್ರಿಕಾ ।
ಶ್ರೀರುಚಿಸತ್ಪಥೋಚಿತಕಳಾವಿಳಸಚ್ಛುಭವಚಂದ್ರದೇವ ॥

ಸಚ್ಚಾರಿತ್ರವೆಂಬ ನೈದಿಲೆಯನ್ನು ಆರಳಿಸುವ, ನಿರ್ಮಲವಾದ ಕೀರ್ತಿಯೆಂಬ ಬೆಳದಿಂಗಳಂತಿರುವ, ಉಚಿತವಾದ ಸನ್ಮಾರ್ಗವೆಂಬ ಪ್ರತಿಭೆಯುಳ್ಳ ಶುಭಚಂದ್ರ ಭಟ್ಟಾರಕನು ಮೇಲ್ಮೆಯನ್ನು ಬೆಳಗುವ ಶರತ್ಕಾಲದ ಚಂದ್ರನಂತಿದ್ದನು ಎಂದು ವರ್ಣಿಸಿದ್ದಾನೆ.[೧೫೫]

೭.೪.೩.೧೮. ಶ್ರೀಧರತ್ರೈವಿದ್ಯದೇವ

ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೇಖಿತ ಶ್ರೀಧರತ್ರೈವಿದ್ಯದೇವ ಮುನಿಯನ್ನು ಪ್ರಸ್ತುತ ಶಾಸನದಲ್ಲಿ 'ತ್ರೈವಿದ್ಯದೇವರು' ಎಂದು ಕರೆಯಲಾಗಿದೆ.[೧೫೬] ಇದರಿಂದ ಈತನು ಸಮ್ಯಗ್ ದರ್ಶನ, ಜ್ಞಾನ, ಚಾರಿತ್ರ್ಯಗಳಲ್ಲಿ ಪಾರಂಗತನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಶಾಸನದ ಅಕ್ಷರಗಳು ತುಂಬಾ ಸವೆದಿರುವುದರಿಂದ ಈ ಮುನಿಯ ಕುರಿತು ಹೆಚ್ಚಿನ ವಿವರಗಳು ದೊರಕುವುದಿಲ್ಲ.

೭.೪.೩.೧೯. ಶ್ರೀನಂದಿ ಭಟ್ಟಾರಕದೇವ

ಅಮ್ಮಣಗಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲೇಖಿತ ಶ್ರೀನಂದಿ ಭಟ್ಟಾರಕದೇವನು ಮೂಲಸಂಘದ ಸೂರಸ್ತಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈತನನ್ನು 'ಶ್ರೀನಂದಿಭಟ್ಟಾರಕದೇವರ್' ಎಂದು ಕರೆಯಲಾಗಿದೆ. ಪ್ರಾಯಶಃ ಈತನು ಸ್ಥಳೀಯ ಜೈನ ಬಸದಿಯ ಮುಖ್ಯಸ್ಥನಾಗಿದ್ದಂತೆ ತೋರುತ್ತದೆ.[೧೫೭]

೭.೪.೩.೨೦. ಮುಳ್ಳಕೀರ್ತಿ ಭಟ್ಟಾರಕ

ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಉಲ್ಲೇಖಿತ ಮುಳ್ಳಕೀರ್ತಿ ಭಟ್ಟಾರಕನನ್ನು ಪ್ರಸ್ತುತ ಶಾಸನದಲ್ಲಿ 'ಶ್ರೀಮನ್ಮೈಳಾದತೀರ್ತ್ಥಜೀ ಕಾರೆಯನಾಮಿನ ಬಭೂವೋಗ್ರಪೋಯುಕ್ತ ಮುಳ್ಳಭಟ್ಟಾರಕ' ಎಂದು ಕರೆಯಲಾಗಿದೆ.[೧೫೮] ಈತನು ಯಾಪನೀಯ ಸಂಘದ ಪರಂಪರೆಗೆ ಸಂಬಂಧಿಸಿದ್ದಾನೆ. ಉಗ್ರತಪಸ್ವಿಯಾಗಿದ್ದ ಈತನು ಜೈನಾಗಮಗಳಲ್ಲಿ ಪಾರಂಗತನಾಗಿದ್ದನು.

೭.೪.೩.೨೧. ಇಂದ್ರಕೀರ್ತಿ

ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಉಲ್ಲೇಖಿತ ಇಂದ್ರಕೀರ್ತಿ ಮುನಿಯು ಯಾಪನೀಯ ಸಂಘದ ಮೈಳಾಪತೀರ್ಥದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ತಸ್ಯಾಥಾಸೀಂದ್ರ ಕೀರ್ತಿಸ್ವಾಮಿ ಕಾಮಮದಾಪಹಃ' ಎಂದು ಕರೆಯಲಾಗಿದೆ.[೧೫೯]

೭.೪.೩.೨೨. ಕನಕಪ್ರಭ

ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಉಲ್ಲೀಖಿತ ಕನಕಪ್ರಭಮುನಿಯು ಯಾಪನೀಯ ಸಂಘದ ಮೈಳಾಪಾನ್ವಯ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸವದತ್ತಿಯ ರಟ್ಟ ಮನೆತನದ ಕನ್ನರಸನ ಗುರುವಾಗಿದ್ದನು. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ತ್ರೈವಿದ್ಯೋಭೂಪೌಸರ್ವ ಶಾಸ್ತ್ರಶಾರದಃ ಕನಕಪ್ರಭಸಿದ್ಧಾನ್ತದೇವೋ ಗಣಧರರೂಪ' ಎಂದು ಕರೆಯಲಾಗಿದೆ.[೧೬೦]

೭.೪.೩.೨೩. ಗುಣಕೀರ್ತಿ

ಸವದತ್ತಿಯ ಕ್ರಿ.ಶ. ೮೭೫–೭೬ರ ಶಾಸನದಲ್ಲಿ ಉಲ್ಲೀಖಿತ ಗುಣಕೀರ್ತಿಮುನಿಯು ಯಾಪನೀಯ ಸಂಘದ ಮೈಳಾಪತೀರ್ಥದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ತತ್ಪಾಶ್ಯೋಗುಣವಾನ್ಸೂರಿಃ ಗುಣಕೀರ್ತ್ತಿರ್ಮುನೀಶ್ವರ' ಎಂದು ಕರೆಯಲಾಗಿದೆ.[೧೬೧]

೭.೪.೩.೨೪. ಕನಕಪ್ರಭಸಿದ್ಧಾಂತದೇವ

ಸವದತ್ತಿಯ ಕ್ರಿ.ಶ. ೧೦೯೮ರ ಶಾಸನದಲ್ಲಿ ಉಲ್ಲೀಖಿತ ಕನಕಪ್ರಭಸಿದ್ಧಾಂತದೇವನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈ ಬಸದಿಯ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಹನ್ನೆರಡು ಗಾವುಂಡರು ಈ ಮುನಿಯ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾರೆ.[೧೬೨]

೭.೪.೩.೨೫. ಅರ್ಹನಂದಿಮುನಿ

ಎಲಿಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲೀಖಿತ ಅರ್ಹನಂದಿ ಮುನಿಯು ಮೂಲಸಂಘದ ಕುಂದಕುಂದಾನ್ವಯ ದೇಸಿಯಗಣ ಸುಪೋನ್ತರಬಳಿ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ಶ್ರೀಮೂಲಸಂಘ ನಿರ್ಮಳರಾಮಂ' ಎಂದು ಕರೆಯಲಾಗಿದೆ.[೧೬೩]

೭.೪.೩.೨೬. ಬಾಹುಬಲಿದೇವ

ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ಉಲ್ಲೀಖಿತ ಬಾಹುಬಲಿದೇವ ಮುನಿಯು ಯಾಪನೀಯ ಸಂಘದ ಕಂಡೂರುಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೪] ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು–

> ಕಣ್ಡೂರಗಣೋಯನ್ನವೃದ್ಧಿಕರಃ ಬಾಹುಬಲಿದೇವ
> ಚಂದ್ರೋಜಿನಸಮಯ ಭಳೇಭಾಶಿವ್ಯಾಕರಣತೀಕ್ಷ್ಣದಂ
> ಷಟ್ರಸ್ಸಿದ್ಧಾನ್ತನಖ ಪ್ರಮಾಣಕೇಸರಭಾರಃ ಬಾಹುಬಲಿದೇವ
> ಸಿಂಹಪ್ರವಾದಿಗಜ ತೀವ್ರಮದಹರಸ್ಸಂಜಯತಿ ॥

ಎಂದು ಕೊಂಡಾಡಲಾಗಿದೆ.

೭.೪.೩.೨೭. ರವಿಚಂದ್ರಸ್ವಾಮಿ

ಸವದತ್ತಿಯ ೯೮೦ರ ಮತ್ತು ಕ್ರಿ.ಶ. ೧೧ನೆಯ ಶತಮಾನದ ಶಾಸನಗಳಲ್ಲಿ ಉಲ್ಲೀಖಿತ ರವಿಚಂದ್ರಸ್ವಾಮಿ ಮುನಿಯು ಯಾಪನೀಯ ಸಂಘದ ಕಂಡೂರುಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೫]

ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ಭುಜಚಾರಿತ್ರ್ಯರತ್ನಾಕರ' ಎಂದು ಕರೆಯಲಾಗಿದೆ. ಈತನು 'ಚಾರಿತ್ರ್ಯ ಚಕ್ರವರ್ತಿ' ಎಂಬ ಬಿರುದನ್ನು ಹೊಂದಿದ್ದನು.

೭.೪.೩.೨೮. ಅರ್ಹನಂದಿಮುನಿ

ಸವದತ್ತಿಯ ಕ್ರಿ.ಶ. ೯೮೦ರ ಮತ್ತು ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನಗಳಲ್ಲಿ ಉಲ್ಲೀಖಿತ ಅರ್ಹನಂದಿಮುನಿಯು ಯಾಪನೀಯ ಸಂಘದ ಕಂಡೂರುಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೬] ಈತನು ಈ ಮೇಲಿನ ರವಿಚಂದ್ರಸ್ವಾಮಿ ಮುನಿಯ ಶಿಷ್ಯನು. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು–

ಕಣ್ಡೂರ್ಗ್ಗಣಾಬ್ಧಿಚಂದ್ರ ನಖಣ್ಡಿತಸುತ
ಮೋಭಾವಿಖಣ್ಡಿ ತಮನಂದಿಣ್ಡೀರ ಪಿಣ್ಡಸುರ
ವೇದಣ್ಡಯಶಪ್ಪಿಣ್ಡನರ್ಹಣನ್ದಿಮುನೀಂದ್ರ ‖ಎಂದು ವರ್ಣಿಸಲಾಗಿದೆ.

೭.೪.೩.೨೯. ಶುಭಚಂದ್ರಸಿದ್ಧಾಂತದೇವ

ಸವದತ್ತಿಯ ಕ್ರಿ.ಶ. ೯೮೦ರ ಶಾಸನದಲ್ಲಿ ಉಲ್ಲೀಖಿತ ಶುಭಚಂದ್ರಸಿದ್ಧಾಂತದೇವ ಮುನಿಯು ಯಾಪನೀಯ ಸಂಘದ ಕಂಡೂರುಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೭] ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು–

ಕಾಂತವಾಗ್ವನಿತಾಮನೋರಮ್ರನುಗ್ರವೀರ
ತಪೋಮಯಂಶಾನ್ತಮೂರ್ತ್ತಿದಿಗನ್ತ
ಕೀರ್ತ್ತಿವಿರಾಜಿತಂ ಶುಭಚಂದ್ರ ಸಿದ್ಧಾನ್ತದೇವ
ನಿಳೇಶವಂದಿತ ಪಾದಪಂಕರುಹದ್ವಯ ‖ ಎಂದು ಬಣ್ಣಿಸಲಾಗಿದೆ.

೭.೪.೩.೩೦. ಮುಳ್ಳಭಟ್ಟಾರಕ

ಬೈಲಹೊಂಗಲದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ಮುಳ್ಳಭಟ್ಟಾರಕನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈತನು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಜಿನದೇವಸೂರಿಯ ಶಿಷ್ಯನು. ಈ ಭಟ್ಟಾರಕನ ಸನ್ನಿಧಿಯಲ್ಲಿ ಸವದತ್ತಿಯ ರಟ್ಟ ಮನೆತನದ ಅಂಕರಸನು ಸ್ಥಳೀಯ ಬಸದಿಗೆ ದಾನ ಮಾಡಿದ್ದಾನೆ.[೧೬೮]

೭.೪.೩.೩೧. ಕುಮಾರಕೀರ್ತಿಪಂಡಿತದೇವ

ಯಕ್ಸಂಬಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ಕುಮಾರಕೀರ್ತಿಪಂಡಿತದೇವ ಮುನಿಯು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ಕುಮಾರಕೀರ್ತಿಯ ತಿಪಸ್ಸ್ಯಾದ್ವಾದವಿದ್ಯಾನಿಧಿ' ಎಂದು ಕರೆಯಲಾಗಿದೆ.[೧೬೯]

೭.೪.೩.೩೨. ವಿಜಯಕೀರ್ತಿಪಂಡಿತದೇವ

ಯಕ್ಸಂಬಾದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ವಿಜಯಕೀರ್ತಿಪಂಡಿತದೇವ ಮುನಿಯು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೦] ಈತನು ಈ ಮೇಲಿನ ಕುಮಾರಕೀರ್ತಿಪಂಡಿತದೇವ ಮುನಿಯ ಶಿಷ್ಯನು.

೭.೪.೩.೩೩. ಕನಕಸ್ವಾಮಿ

ಉಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ಕನಕಸ್ವಾಮಿ ಮುನಿಯು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೧] ಈ ಮುನಿ 'ಸಿದ್ಧಾಂನ್ತೇಶ' ಎಂಬ ಬಿರುದನ್ನು ಹೊಂದಿದ್ದನು.

೭.೪.೩.೩೪. ಮಾಘನಂದಿ

ಉಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ಮಾಘನಂದಿ ಮುನಿಯು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈತನನ್ನು 'ಸಕಳೋತ್ಥಪ್ರಜಾನಾಂಸಚ್ಚಾರಿತ್ರಂಭಧೋತ್ರಂ' ಎಂದು ಕರೆಯಲಾಗಿದೆ.[೧೬೨]

೭.೪.೩.೩೫. ಶ್ರೀಧರದೇವ

ಉಳಾಗಡ್ಡಿ ಖಾನಾಪುರದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಉಲ್ಲೀಖಿತ ಶ್ರೀಧರದೇವ ಮುನಿಯು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣ ಪರಂಪರೆಗೆ ಸಂಬಂಧಿಸಿದ್ದಾನೆ.[೧೬೩] ಈತನು ಈ ಮೇಲಿನ ಮಾಘನಂದಿ ಮುನಿಯ ಶಿಷ್ಯನು.

೭.೪.೩.೩೬. ಮುನಿಚಂದ್ರದೇವ

ಬೆಳಗಾವಿಯ ಕ್ರಿ.ಶ. ೧೨೦೪ರ ಮತ್ತು ಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನಗಳಲ್ಲಿ ಉಲ್ಲೀಖಿತ ಮುನಿಚಂದ್ರದೇವ ಮುನಿಯು ಸವದತ್ತಿಯ ರಟ್ಟ ಮನೆತನದ ೪ನೆಯ ಕಾರ್ತವೀರ್ಯನ ಗುರುವಾಗಿದ್ದನು.[೧೬೪] ಪ್ರಸ್ತುತ ಶಾಸನದಲ್ಲಿ ಈ ಮುನಿಯನ್ನು 'ರಟ್ಟರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂದು ಕರೆಯಲಾಗಿದೆ. ಈತನು ಸುಗಂಧವರ್ತಿ-೧೨ ಉಪ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನು ಮುನವಳ್ಳಿಯಲ್ಲಿ ಸಿರಿಯಾದೇವಿ ನಿರ್ಮಿಸಿದ್ದ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಮುನವಳ್ಳಿಯಲ್ಲಿ ಸನ್ಯಸನ ವಿಧಿಯಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ಈತನ ಶಿಷ್ಯೆ ಕುಳ್ಳೆಯ ಕೇತಗಾವುಂಡನ ಪುತ್ರಿ ಗಂಗವ್ವೆ ನಿಷಿಧಿಗಲ್ಲನ್ನು ನಿಲ್ಲಿಸಿದ್ದಾಳೆ.[೧೬೫]

೭.೪.೩.೩೭. ಪಾಳ್ಯಕೀರ್ತಿದೇವ

ಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಪಾಳ್ಯಕೀರ್ತಿದೇವ ಮುನಿಯ ಪ್ರಸ್ತಾಪವಿದೆ. ಈತನು ಮುನವಳ್ಳಿಯಲ್ಲಿ ಸನ್ಯಸನ ವಿಧಿಯಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ನಿಷಿಧಿಗಲ್ಲನ್ನು ನಿಲ್ಲಿಸಲಾಗಿದೆ.[೧೬೬]

೭.೪.೩.೩೮. ಶುಭಚಂದ್ರ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಶುಭಚಂದ್ರ ಮುನಿಯು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.[೧೭೭] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೩೯. ಮಾಧವಚಂದ್ರ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಮಾಧವಚಂದ್ರ ಮುನಿಯು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.[೧೭೮] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೪೦. ಮಲಧಾರಿದೇವ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಮಲಧಾರಿದೇವ ಮುನಿಯು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.[೧೭೯] ಈತನ ಶಿಷ್ಯ ಬೀಚಿರಾಜನು ಬೆಳಗಾವಿಯಲ್ಲಿ ನೇಮಿನಾಥ ತೀರ್ಥಂಕರನ ಬಸದಿಯನ್ನು (ಇಂದಿನ ಕಮಲ ಬಸದಿ) ಮಾಡಿಸಿ ದಾನ–ದತ್ತಿಗಳನ್ನು ಕೊಟ್ಟಿದ್ದಾನೆ.

೭.೪.೩.೪೧. ನೇಮಿಚಂದ್ರ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ನೇಮಿಚಂದ್ರ ಮುನಿಯು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.[೧೮೦] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೪೨. ಬಾಳಚಂದ್ರದೇವ

ಬೆಳಗಾವಿಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಉಲ್ಲೇಖಿತ ಶುಭಚಂದ್ರ ಮುನಿಯು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.[೧೮೧] ಈತನು ಈ ಮೇಲಿನ ಮಾಧವಚಂದ್ರ ಮುನಿಯ ಶಿಷ್ಯನು.

೭.೪.೩.೪೩. ವೀರಸ್ವಾಮಿ

ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ ವೀರಸ್ವಾಮಿಮುನಿಯ ಪ್ರಸ್ತಾಪವಿದೆ.[೧೮೨] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೪೪. ಕನಕಪ್ರಭಮುನಿ

ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಮತ್ತು ಯಡ್ರಾವಿಯ ಕ್ರಿ.ಶ. ೯೭೬ರ, ಸವದತ್ತಿಯ ಕ್ರಿ.ಶ. ೧೦೯೮ರ ಶಾಸನಗಳಲ್ಲಿ ಕನಕಪ್ರಭಮುನಿಯ ಪ್ರಸ್ತಾಪವಿದೆ.[೧೮೩] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈತನು ಈ ಮೇಲಿನ ವೀರಸ್ವಾಮಿಯ ಶಿಷ್ಯನು.

೭.೪.೩.೪೫. ಶ್ರೀಧರದೇವ

ಹಣ್ಣಿಕೇರಿಯ ಕ್ರಿ.ಶ. ೧೨೦೯ರ ಶಾಸನದಲ್ಲಿ ಶ್ರೀಧರದೇವ ಮುನಿಯ ಪ್ರಸ್ತಾಪವಿದೆ.[೧೮೪] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈತನು ಈ ಮೇಲಿನ ಕನಕಪ್ರಭಮುನಿಯ ಶಿಷ್ಯನು.

೭.೪.೩.೪೬. ಕನಕಪ್ರಭಪಂಡಿತದೇವ

ಹಣ್ಣಿಕೇರಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಕನಕಪ್ರಭಪಂಡಿತದೇವ ಮುನಿಯ ಪ್ರಸ್ತಾಪವಿದೆ.[೮೫] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈತನು ಈ ಮೇಲಿನ ಶ್ರೀಧರದೇವ ಮುನಿಯ ಶಿಷ್ಯನು.

೭.೪.೩.೪೭. ಮಾಧವಭಟ್ಟಾರಕ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಮಾಧವ ಭಟ್ಟಾರಕನ ಪ್ರಸ್ತಾಪವಿದೆ.[೧೮೬] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಜೈನ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೪೮. ಕನಕಪ್ರಭ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಕನಕಪ್ರಭ ಮುನಿಯ ಪ್ರಸ್ತಾಪವಿದೆ.[೧೮೭] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೪೯. ಶ್ರೀಧರಮುನಿ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಶ್ರೀಧರಮುನಿಯ ಪ್ರಸ್ತಾಪವಿದೆ.[೧೮೮] ಈತನು ಯಾಪನೀಯ ಸಂಘದ ಕಾರೆಯುಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯು ಬಸದಿಯು ಸ್ಥಾನಾಚಾರ್ಯನಾಗಿದ್ದನು.

೭.೪.೩.೫೦. ಸುಕೀರ್ತಿಮುನಿ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಸುಕೀರ್ತಿಮುನಿಯ ಪ್ರಸ್ತಾಪವಿದೆ.[೧೮೯] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೫೧. ಮುನಿಚಂದ್ರ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಮುನಿಚಂದ್ರ ಮುನಿಯ ಪ್ರಸ್ತಾಪವಿದೆ.[೧೯೦] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೫೨. ಕುಮಾರಕೀರ್ತಿ

ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಕುಮಾರಕೀರ್ತಿ ಮುನಿಯ ಪ್ರಸ್ತಾಪವಿದೆ.[೧೯೧] ಈತನು ಯಾಪನೀಯ ಸಂಘದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು.

೭.೪.೩.೫೩. ಜಿನದೇವಸೂರಿ

ಬೈಲಹೊಂಗಲದ ಕ್ರಿ.ಶ. ಸುಮಾರು ೧೧ನೆಯ ಶತಮಾನದ, ಕ್ರಿ.ಶ. ೧೧೬೪-೬೫ರ ಮತ್ತು ಬಡ್ಲಿಯ ಕ್ರಿ.ಶ. ೧೨೧೯ರ ಶಾಸನದಲ್ಲಿ ಜಿನದೇವಸೂರಿ ಮುನಿಯ ಪ್ರಸ್ತಾಪವಿದೆ.[೯೨] ಈತನು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಸ್ಥಳೀಯ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಈತನು 'ಸಿದ್ಧಾಂತ ಕೋವಿದ' ಎಂಬ ಬಿರುದನ್ನು ಹೊಂದಿದ್ದನು.

೭.೪.೩.೫೪. ಕನಕಚಂದ್ರಮುನಿ

ನಾಗನೂರದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಕನಕಚಂದ್ರಮುನಿಯ ಪ್ರಸ್ತಾಪವಿದೆ.[೯೩] ಈತನ ಶಿಷ್ಯ ಸವದತ್ತಿಯ ರಟ್ಟ ಮನೆತನದ ಕನ್ನರದೇವನ ಪ್ರೀತಿಯ ಮಂತ್ರಿ ಜಿನಪ್ರತಿಮೆಯನ್ನು ಮಾಡಿಸಿ ಕೊಟ್ಟಿದ್ದಾನೆ. ಈ ಮುನಿಯ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೫೫. ಗುಣಕೀರ್ತಿದೇವ

ಬೆಳವಡಿಯ ಕ್ರಿ.ಶ. ೧೦೭೦ರ ಶಾಸನದಲ್ಲಿ ಗುಣಕೀರ್ತಿದೇವ ಮುನಿಯ ಉಲ್ಲೇಖವಿದೆ.[೯೪] ಈತನು ಮೈಳಾಪಾನ್ವಯ ಪರಂಪರೆಗೆ ಸಂಬಂಧಿಸಿದ್ದಾನೆ. ಪ್ರಸ್ತುತ ಶಾಸನದಲ್ಲಿ ಈತನನ್ನು ಗುಣಲೋಕೋತ್ತಮನೆಂದು ಕರೆಯಲಾಗಿದೆ. ಈತನ ಶಿಷ್ಯರು ಬೆಳವಡಿಯ ಸಹಸ್ರಕೂಟ ಬಸದಿಗೆ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ.

೭.೪.೩.೫೬. ಮುನಿಚಂದ್ರತ್ರೈವಿದ್ಯದೇವ

ಬೆಳವಡಿಯ ಕ್ರಿ.ಶ. ೧೦೭೫ರ ಶಾಸನದಲ್ಲಿ ಮುನಿಚಂದ್ರತ್ರೈವಿದ್ಯದೇವ ಮುನಿಯ ನಿರೂಪಣೆಯಿದೆ.[೯೫] ಈತನ ಶಿಷ್ಯರು ಬೆಳವಡಿಯ ಸಹಸ್ರಕೂಟ ಬಸದಿಗೆ ದಿನಾರಗಳನ್ನು (ನಾಣ್ಯಗಳು) ದಾನ ಮಾಡಿದ್ದಾರೆ.

೭.೪.೩.೫೭. ನಾಗಚಂದ್ರಸಿದ್ಧಾಂತದೇವ

ಬೆಳವಡಿಯ ಕ್ರಿ.ಶ. ೧೦೭೫ರ ಶಾಸನದಲ್ಲಿ ನಾಗಚಂದ್ರಸಿದ್ಧಾಂತದೇವ ಮುನಿಯ ನಿರೂಪಣೆಯಿದೆ.[೯೬] ಈತನ ಶಿಷ್ಯರು ಬೆಳವಡಿಯ ಸಹಸ್ರಕೂಟ ಬಸದಿಗೆ ಕಾಂಚನಗಳನ್ನು (ನಾಣ್ಯಗಳು) ದಾನ ಮಾಡಿದ್ದಾರೆ.

೭.೪.೩.೫೮. ಮೋನಿಭಟ್ಟಾರಕ

ಉಗರಗೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠ ಶಾಸನದಲ್ಲಿ ಕಂಡೂರುಗಣ ಪರಂಪರೆಯ ಮೋನಿಭಟ್ಟಾರಕನ ಪ್ರಸ್ತಾಪವಿದೆ.[೯೭] ಈ ಭಟ್ಟಾರಕನ ಕುರಿತು ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

೭.೪.೩.೫೯. ಚಂದ್ರಮತಿಕಂತಿ

ಉಗರಗೋಳದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠ ಶಾಸನದಲ್ಲಿ ಕಂಡೂರುಗಣ ಪರಂಪರೆಯ ಮೋನಿಭಟ್ಟಾರಕನ ಶಿಷ್ಯೆ ಚಂದ್ರಮತಿಕಂತಿಯ ಉಲ್ಲೇಖವಿದೆ.[೯೮] ಈ ಕಂತಿಯ (ಜೈನ ಸನ್ಯಾಸಿನಿ) ಕುರಿತು ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

೭.೪.೩.೬೦. ಸಕಳಚಂದ್ರಸಿದ್ಧಾಂತದೇವ

ಎಲ್ಲಮ್ಮಗುಡ್ಡದ ರೇಣುಕಾದೇವಿ (ಎಲ್ಲಮ್ಮದೇವಿ) ದೇವಾಲಯದ ಅಧಿಷ್ಠಾನದ ಪಟ್ಟಿಕೆಯ ಮೇಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಸಕಳಚಂದ್ರಸಿದ್ಧಾಂತದೇವನ ಉಲ್ಲೇಖವಿದೆ.[೧೯೯] ಈ ಮುನಿಯ ಕುರಿತು ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

೭.೪.೩.೬೧. ಸಿದ್ಧಾಂತದೇವ

ಹಿರೇಕುಂಬಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಸಿದ್ಧಾಂತದೇವ (ಶಾಸನದ ಅಕ್ಷರಗಳು ಸವೆದಿರುವುದರಿಂದ ಪೂರ್ವಪದ ಸ್ಪಷ್ಟವಿಲ್ಲ) ಮುನಿಯ ಪ್ರಸ್ತಾಪವಿದೆ.[೨೦೦] ಈತನು ಯಾಪನೀಯ ಸಂಘ ಪರಂಪರೆಗೆ ಸಂಬಂಧಿಸಿದ್ದಾನೆ. ಈತನ ಕುರಿತು ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

೭.೪.೩.೬೨. ಪದ್ಮನಂದಿ

ಹಿರೇಕುಂಬಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಾಸನದಲ್ಲಿ ಪದ್ಮನಂದಿ ಮುನಿಯ ಪ್ರಸ್ತಾಪವಿದೆ.[೨೦೧] ಈತನು ಯಾಪನೀಯ ಸಂಘ ಪರಂಪರೆಗೆ ಸಂಬಂಧಿಸಿದ್ದಾನೆ. ಈತನು ಈ ಮೇಲಿನ ಸಿದ್ಧಾಂತದೇವ ಮುನಿಯ ಶಿಷ್ಯನು.

೭.೪.೩.೬೩. ಗುಣಚಂದ್ರ ಭಟ್ಟಾರಕದೇವ

ಬೋರಗಾಂವದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಗುಣಚಂದ್ರ ಭಟ್ಟಾರಕದೇವನ ಉಲ್ಲೇಖವಿದೆ.[೨೦೨] ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೭.೪.೩.೬೪. ಸಕಲಚಂದ್ರದೇವ

ಬೋರಗಾಂವದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಸಕಲಚಂದ್ರದೇವ ಮುನಿಯ ಉಲ್ಲೇಖವಿದೆ.[೨೦೩] ಈತನು ಈ ಮೇಲಿನ ಗುಣಚಂದ್ರ ಭಟ್ಟಾರಕದೇವನ ಶಿಷ್ಯನು. ಈತನು ಬೋರಗಾಂವದಲ್ಲಿ ಸಲ್ಲೇಖನ ವಿಧಿಯಿಂದ ಸಮಾಧಿಮರಣವನ್ನಪ್ಪಿದ ಪರೋಕ್ಷ ವಿನಯಾರ್ಥವಾಗಿ ನಿಷಿಧಿಗಲ್ಲನ್ನು ನಿಲ್ಲಿಸಲಾಗಿದೆ.

೭.೪.೪. ಬಸದಿಗಳು

ತೀರ್ಥಂಕರರಿಗೆ ಕೇವಲಜ್ಞಾನದ (ಜ್ಞಾನೋದಯ) ತರುವಾಯ ಅವರು ಪ್ರಥಮೋಪದೇಶ ಕೈಗೊಳ್ಳಲು ಇಂದ್ರಾದಿದೇವತೆಗಳು ಅಂತರಿಕ್ಷದಲ್ಲಿ (ಎತ್ತರವಾದ ಪ್ರದೇಶ) ನಿರ್ಮಿಸಿದ ಸರ್ವತೋಭದ್ರ ರೀತಿಯ 'ಸಮವಸರಣ ಮಂಟಪ'ದ ವಾಸ್ತುರೂಪವೇ ಬಸದಿಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನೆಗೆ ಸ್ಫೂರ್ತಿ-ಪ್ರೇರಣೆಯಾಗಿದೆ. ಪ್ರಾಚೀನ ಬಸದಿಗಳು ನಿರ್ಮಾಣವಾಗಿರುವ ಸ್ಥಳ ಮತ್ತು ವಾಸ್ತುವಿನ್ಯಾಸವನ್ನು ಅವಲೋಕಿಸಿದಾಗ ಈ ತಾತ್ವಿಕ ವಿಚಾರ ಸ್ಪಷ್ಟವಾಗುತ್ತದೆ. ಮಾನವರಾಗಿದ್ದವರು ಸ್ವತಃ ತಪೋಬಲದಿಂದ ಕರ್ಮಗಳಿಂದ ಮುಕ್ತರಾಗಿ ಮೋಕ್ಷವನ್ನು ಸಂಪಾದಿಸಿ ಸಿದ್ಧಪರಮೇಷ್ಠಿ ಸ್ಥಾನವನ್ನು ಪಡೆದ ತೀರ್ಥಂಕರರು ತಮ್ಮ ಜೀವಿತ ಕಾಲದಲ್ಲಿ ಮಾಡಿದ ಮಹತ್ಸಾಧನೆಗೆ, ಏರಿದ ಎತ್ತರಕ್ಕೆ, ಅವರು

ತೋರಿದ ತ್ಯಾಗದ ಹಾದಿಯಲ್ಲಿ ಮುಂದುವರೆಯಲು ಸ್ಫೂರ್ತಿ–ಪ್ರೇರಣೆಯ ಉದ್ದೇಶದಿಂದ ಬಸದಿಗಳಲ್ಲಿ ಅವರ ಪ್ರತಿರೂಪಗಳನ್ನು (ಶಿಲ್ಪಗಳು) ಪ್ರತಿಷ್ಠಾಪಿಸಿ ಭಾವಪೂಜೆಯ ಮೂಲಕ ಗೌರವಿಸಲಾಗುತ್ತದೆ. ಕಾಲಕ್ರಮೇಣ ತೀರ್ಥಂಕರರನ್ನು ಇಷ್ಟಾರ್ಥಗಳ ಅನುಗ್ರಹಕ್ಕಾಗಿ ಆರಾಧಿಸುವುದು, ಪೂಜಿಸುವುದು ಮತ್ತು ಅವರಿಗೆ ನೈವೇದ್ಯ–ಫಲಪುಷ್ಪಾದಿಗಳನ್ನು ಅರ್ಪಿಸುವುದು ಇತ್ಯಾದಿ ವಿಧಿ–ವಿಧಾನಗಳು ಇತರೆ ಧರ್ಮಗಳ ಪ್ರಭಾವದಿಂದ ರೂಢಿಗೆ ಬಂದವು. ಬಸದಿ ಮತ್ತು ಶಿಲ್ಪಗಳ ಪರಿಕಲ್ಪನೆ, ಪ್ರಾಚೀನತೆ, ವಾಸ್ತು ವೈವಿಧ್ಯ, ಶೈಲಿ, ವಿನ್ಯಾಸ, ಬೆಳವಣಿಗೆ, ಶಿಲ್ಪಗಳ ಪ್ರತಿಮಾ ಲಕ್ಷಣಗಳು ಮೊದಲಾದವುಗಳ ಅಧ್ಯಯನದ ದೃಷ್ಟಿಯಿಂದ ಕನ್ನಡನಾಡು ನಿಜಕ್ಕೂ ಪ್ರಯೋಗ ಮತ್ತು ಪ್ರದರ್ಶನ ಶಾಲೆಯಾಗಿದೆ. ಈ ನಾಡಿನಲ್ಲಿ ಮೊದಮೊದಲು ಬಸದಿಗಳ ನಿರ್ಮಾಣದಲ್ಲಿ ಮರ, ಮಣ್ಣು, ಇಟ್ಟಿಗೆಗಳನ್ನು ಬಳಸಲಾಗುತ್ತಿತ್ತು. ಅಂತಾಗಿ ಅವು ಇಂದು ಉಳಿದು ಬಂದಿಲ್ಲ. ಆದರೆ ಆ ಬಸದಿಗಳಲ್ಲಿ ಪ್ರತಿಷ್ಠಾಪಿತವಾಗಿದ್ದ ಶಿಲ್ಪಗಳಲ್ಲಿ ಕೆಲವು ಇಂದಿಗೂ ಉಳಿದು ಬಂದಿವೆ. ತಲಕಾಡಿನ ಗಂಗರು ಮತ್ತು ಬಾದಾಮಿಯ ಚಲುಕ್ಯರ ಕಾಲದಿಂದ ಬಸದಿಗಳ ನಿರ್ಮಾಣದಲ್ಲಿ ಶಿಲೆಗಳ ಬಳಕೆ ಮೊದಲುಗೊಂಡಂತೆ ತೋರುತ್ತದೆ. ಈ ನಾಡಿನ ನೈಸರ್ಗಿಕ (ಭೌಗೋಳಿಕ) ಸಂಪದ್ಭರಿತ ಸಂಪನ್ಮೂಲಗಳು, ಆರ್ಥಿಕ ಸದೃಢತೆ ಮತ್ತು ಸಮೃದ್ಧತೆ, ಜೈನ ಮುನಿಗಳು ಮತ್ತು ಕವಿಗಳ ಸ್ಫೂರ್ತಿ–ಪ್ರೇರಣೆ, ಆಳರಸರ ವಿಶಾಲವಾದ ಉದಾರತೆ, ಜನಪದರ ಹೊಂದಾಣಿಕೆಯ ಮನೋಭೂಮಿಕೆ, ಜೈನಧರ್ಮೀಯರ (ಜಿನನ ಹಿಂಬಾಲಕರು) ಮೋಕ್ಷ ಸಂಪಾದನೆಯ ಆಶಯ ಮೊದಲಾದವುಗಳು ನಾಡಿನುದ್ದಗಲ್ಲಕ್ಕೂ ಸಹಸ್ರಾರು ಬಸದಿಗಳ ನಿರ್ಮಾಣ ಮತ್ತು ಶಿಲ್ಪಗಳ ಪ್ರತಿಷ್ಠಾಪನೆಗೆ ಪ್ರೇರಕವಾಗಿವೆ.[೨೦೪]

ಕೂಹುಂಡಿನಾಡಿನ ಪ್ರದೇಶದ ಬೆಟ್ಟ–ಗುಡ್ಡಗಳು, ನದಿ–ಹಳ್ಳಗಳು, ಫಲವತ್ತಾದ ಭೂಮಿ, ಹಿತಕರ ಮತ್ತು ಆರೋಗ್ಯಕರವಾದ ಹವಾಮಾನ, ಖನಿಜಸಂಪತ್ತು, ಅರಣ್ಯಸಂಪತ್ತು, ಸಸ್ಯಸಂಪತ್ತು, ಪ್ರಾಣಿಸಂಪತ್ತು ಇತ್ಯಾದಿ ಸಂಪದ್ಭರಿತವಾದ ನೈಸರ್ಗಿಕ ಸಂಪನ್ಮೂಲಗಳು ಇತಿಹಾಸಪೂರ್ವ ಕಾಲದಿಂದಲೂ ವಿವಿಧ ಕಾಲಘಟ್ಟಗಳ ಮಾನವ ಸಂಸ್ಕೃತಿಗಳನ್ನು ಪೋಷಿಸುವುದರೊಂದಿಗೆ, ಚರಿತ್ರೆ ಕಾಲದ ಕೆಲವು ಅರಸು ಮನೆತನಗಳ ರಾಜಕೀಯ, ಆಡಳಿತ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ, ವಾಸ್ತುಕಲೆ, ಶಿಲ್ಪಕಲೆ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿಗೂ ಪೂರಕವಾಗಿವೆ. ಈ ನಾಡಿನ ಆರ್ಥಿಕ ಸದೃಢತೆ ಮತ್ತು ಸಮೃದ್ಧತೆ ಸಮಕಾಲೀನ ಧರ್ಮಗಳ ಸಾಂಸ್ಕೃತಿಕ ಚಟುವಟಿಕೆಗಳು ವಿಜೃಂಭಣೆಯಿಂದ ಸಾಗಿಬರಲು ಮಹತ್ತರ ಪಾತ್ರವಹಿಸಿವೆ. ಆ ಧರ್ಮಗಳಲ್ಲಿ ಜೈನ ಧರ್ಮವು ಈ ನಾಡಿನ ಚರಿತ್ರೆ ಮತ್ತು ಸಂಸ್ಕೃತಿಯೊಂದಿಗೆ ವಿಶಿಷ್ಟವಾಗಿ ಹಾಸುಹೊಕ್ಕಾಗಿದೆ.

ಯಸ್ಮಿಞ್ಜಿನೇನ್ದ್ರ ಪೂಜಾ ಪ್ರವರ್ತ್ತತೇ
ತತ್ರತತ್ರ ದೇಶ ಪರಿವೃದ್ಧಿಃ ನಗರಾಣಾಂ ನಿರ್ಭಯತಾ
ತದ್ದೇಶಸ್ವಾಮಿನಾಞ್ಜೋರ್ಜ್ಜಾ ॥ ನಮೋ ನಮಃ ॥

ಎಲ್ಲೆಲ್ಲಿ ಜಿನೇಂದ್ರನ ಪೂಜೆ ಸಾಂಗವಾಗಿ ನಡೆಯುತ್ತದೋ ಅಲ್ಲೆಲ್ಲ ದೇಶದ ಅಭಿವೃದ್ಧಿ ಹೆಚ್ಚುತ್ತದೆ,

ನಗರದಲ್ಲಿ ನಿರ್ಭಯತೆ ಉಂಟಾಗುತ್ತದೆ, ದೇಶಸ್ವಾಮಿಗಳ (ಅರಸರು) ಬಲ ಪ್ರಬಲಿಸುತ್ತದೆ.[೨೦೫] ಇಂತಹ ಜೈನ ಶಾಸನಾದಿ ಸಾಹಿತ್ಯಿಕ ಪ್ರೇರಣೆಗಳು ಹಾಗೂ ಜೀವದಯೆ, ಅಹಿಂಸೆ, ಅಪರಿಗ್ರಹ, ಅನೇಕಾಂತವಾದ, ದಾನಗುಣ, ಬ್ರಹ್ಮಚರ್ಯ, ಶಾಖಾಹಾರ ಮೊದಲಾದ ಸರ್ವಜನ ಹಿತಕಾರಿಯಾದ ತತ್ವ–ಸಿದ್ಧಾಂತಗಳು ಮತ್ತು ಸಮಕಾಲೀನ ಮುನಿ–ಕವಿಗಳ ಕಠಿಣ ತಪಸ್ಸು, ಪಾಂಡಿತ್ಯ, ಆಕರ್ಷಕ ಧರ್ಮೋಪದೇಶಗಳಿಂದ ಪ್ರೇರಕರಾದ ಈ ನಾಡನ್ನಾಳಿದ ಮತ್ತು ಇಲ್ಲಿ ತಮ್ಮ ಆಳ್ವಿಕೆಯ ಪ್ರಭಾವ ಹೊಂದಿದ್ದ ಅರಸರು, ರಾಣಿಯರು, ಯುವರಾಜರು, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ಅಧಿಕಾರಿಗಳು ಜೈನ ಧರ್ಮದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ಮುನಿ–ಕವಿಗಳಿಗೆ ವಿಶೇಷವಾಗಿ ರಾಜಾಶ್ರಯ ಮತ್ತು ಪ್ರೋತ್ಸಾಹವನ್ನಿತ್ತು ಪೋಷಿಸಿದ್ದಾರೆ. ಈ ನಿಟ್ಟಿನಲ್ಲಿ ಸಮಕಾಲೀನ ವರ್ತಕರು, ಶ್ರಾವಕರು ಮತ್ತು ಜೈನಾಭಿಮಾನಿಗಳ (ಇತರೆ ಧರ್ಮೀಯರು) ಕೊಡುಗೆಯೂ ಅಪಾರವಾಗಿದೆ. ಹಾಗಾಗಿ ಈ ನಾಡಿನಲ್ಲಿ ಜೈನ ಮುನಿಪರಂಪರೆ, ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನೆ, ದಾನ–ದತ್ತಿಗಳ ಚಟುವಟಿಕೆಗಳು ಬನವಾಸಿಯ ಕದಂಬ ಮನೆತನದ ಆಳರಸರಾದಿ ಅಧಿಕಾರಿಗಳಿಂದ ಕ್ರಿ.ಶ. ಸುಮಾರು ೫ನೆಯ ಶತಮಾನದಿಂದಲೂ ಅವಿಚ್ಛಿನ್ನವಾಗಿ ಬೆಳೆದು ಬಂದಿವೆ. ಆ ಪರಂಪರೆ ಇಂದಿಗೂ ಸಾಂಗವಾಗಿ ಮುಂದುವರೆದಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ರಿ.ಶ. ಸುಮಾರು ೬ನೆಯ ಶತಮಾನದಿಂದಲೂ ಬಸದಿಗಳ ನಿರ್ಮಾಣ ಪರಂಪರೆ ಅವಿರತವಾಗಿ ಸಾಗಿಬಂದಿದೆ.[೨೦೬] ಈ ನಾಡು ಮಗಧದ ನಂದರು, ಮೌರ್ಯರು, ಪೈಠಣದ ಶಾತವಾಹನರ ಆಳ್ವಿಕೆಯ ಪ್ರಭಾವದಲ್ಲಿದ್ದ ಸಂದರ್ಭದಲ್ಲಿ ಇಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಜರುಗಿರಬಹುದಾದ ಚಟುವಟಿಕೆಗಳ ಯಾವುದೇ ಕುರುಹುಗಳು ಇದುವರೆಗೂ ಬೆಳಕಿಗೆ ಬಂದಿಲ್ಲ. ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು ಈ ನಾಡಿನಲ್ಲಿ ಬಸದಿಗಳನ್ನು ನಿರ್ಮಿಸಿದ ಕುರಿತಾಗಿ ಶಾಸನಾಧಾರಗಳಿವೆ. ಆದರೆ ಆ ಬಸದಿಗಳು ಇಂದು ಉಳಿದು ಬಂದಿಲ್ಲ. ತದನಂತರದ ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಗಳು, ದೇವಗಿರಿಯ ಸೇವುಣರ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣವಾಗಿದ್ದ ಬಸದಿಗಳಲ್ಲಿ ಕೆಲವು ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿವೆ. ಮತ್ತೆ ಕೆಲವು ಪರಧರ್ಮದ ದೇವಾಲಯಗಳಾಗಿ ಪರಿವರ್ತನೆಯಾಗಿವೆ. ಇನ್ನೂ ಕೆಲವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿವೆ. ಕೆಲವೇ ಕೆಲವು ಬಸದಿಗಳು ಮಾತ್ರ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಈ ನಾಡಿನ ಶಾಸನಗಳಲ್ಲಿ ಉಲ್ಲೇಖಿತವಾದ, ಅವುಗಳಲ್ಲಿ ಪ್ರಸ್ತುತ ಉಳಿದು ಬಂದಿರುವ, ಪರಧರ್ಮದ ದೇವಾಲಯಗಳಾಗಿ ರೂಪಾಂತರವಾಗಿರುವ, ಯಾವುದೋ ಕಾಲಘಟ್ಟದಲ್ಲಿ ಸಮೂಲನಾಶವಾಗಿರುವ ಮತ್ತು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗಿರುವ ಬಸದಿಗಳ ವಿವರಗಳು ಈ ಕೆಳಗಿನಂತಿವೆ.

೭.೪.೪.೧. ಕೊಣ್ಣೂರದ ಪಾರ್ಶ್ವನಾಥ ಬಸದಿ

ಸವದತ್ತಿಯ ರಟ್ಟ ಮನೆತನದ ಆಳ್ವಿಕೆಯ ಕಾಲದಲ್ಲಿ ಕೊಣ್ಣೂರದಲ್ಲಿ ಗಾವುಂಡಗೈಯುತ್ತಿದ್ದ

ಮಹಾಪ್ರಭು ನಿಧಿಯಮನು ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿ ಇದರ ನಿರ್ವಹಣೆಗಾಗಿ ತನ್ನ ಮಾನ್ಯದೊಳಗಿನ (ತನಗೆ ಉಂಬಳಿಯಾಗಿ ಕೊಟ್ಟಿದ್ದ ಭೂಮಿ) ಭೂಮಿ, ಮನೆ, ಗಾಣ ಮತ್ತು ತೋಟಗಳನ್ನು ತಳವೃತ್ತಿಯಾಗಿ ದಾನ ಕೊಟ್ಟಿದ್ದಾನೆ. ರಟ್ಟ ಮನೆತನದ ಅರಸ ಇಮ್ಮಡಿ ಸೇನನು ಈ ಬಸದಿಯ ದರ್ಶನಕ್ಕಾಗಿ ಆಗಮಿಸಿದ್ದ ಸಂದರ್ಭದಲ್ಲಿ ಇದರ ಅಂಗಭೋಗ (ದೇವರ ವಿಗ್ರಹದ ಅಭಿಷೇಕ, ಅರ್ಚನೆ, ಹೂವು, ಆಭರಣಗಳು ಇತ್ಯಾದಿ), ರಂಗಭೋಗ (ಬಸದಿಯ ರಂಗಮಂಟಪದಲ್ಲಿ ನಡೆಯುವ ನೃತ್ಯ, ಗೀತ, ನಾಟಕ ಇತ್ಯಾದಿ ಸೇವೆಗಳು), ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ (ಬಸದಿಯ ಒಡೆದ, ಮುರಿದ ಭಾಗಗಳನ್ನು ದುರಸ್ತಿ ಮಾಡುವುದು) ತನ್ನ ಸೀವಟದೊಳಗಣ ಭೂಮಿಯನ್ನು ಶ್ರೀಧರಪಂಡಿತದೇವ ಮುನಿಯ ಪಾದಗಳನ್ನು ತೊಳೆದು ದಾನ ಮಾಡಿದ್ದಾನೆ. ಇದೇ ಬಸದಿಯ ಅಂಗಭೋಗ, ರಂಗಭೋಗ ಮತ್ತು ಮುನಿಗಳ ಆಹಾರದಾನಕ್ಕೆ ಕಲ್ಯಾಣದ ಚಾಳುಕ್ಯ ಮನೆತನದ ೬ನೆಯ ವಿಕ್ರಮಾದಿತ್ಯನ ಪುತ್ರ ಜಯಕರ್ಣನು ವಾಸುಪೂಜ್ಯಮುನಿಯ ಪಾದಗಳನ್ನು ತೊಳೆದು ಎರಡು ಗದ್ಯಾಣಗಳನ್ನು (ಚಿನ್ನದ ನಾಣ್ಯಗಳು) ದಾನ ಮಾಡಿದ್ದಾನೆ. ಈ ಬಸದಿಯಲ್ಲಿ ಸ್ತಂಭ (ಮಾನಸ್ತಂಭ) ಸ್ಥಾಪನೆಯ ಸಂದರ್ಭದಲ್ಲಿ ಮಹಾಪ್ರಭು ನಿಧಿಯಮ ಗಾವುಂಡನು ಸರ್ವಬಾಧಾ ಪರಿಹಾರವಾಗಿ ಒಂದು ಮನೆಯನ್ನು, ಕೂಹುಂಡಿನಾಡಿನಲ್ಲಿ ಪ್ರಸಿದ್ಧವಾಗಿದ್ದ ಕೂಂಡಿ ಎಂಬ ಕೋಲಿನ ಅಳತೆಯ ಪ್ರಕಾರ ನೂರೈವತ್ತು ಕಮ್ಮ (ಒಕ್ಕಲುತನದ ಭೂಮಿಯ ಒಂದು ನಿಶ್ಚಿತ ಪ್ರಮಾಣ) ಭೂಮಿಯನ್ನು ದಾನ ಮಾಡಿದ್ದಾನೆ.[೨೦೭] ಮೂಲಸಂಘದ ಬಳತ್ಕಾರಗಣ ಪರಂಪರೆಯ ಶ್ರೀಧರಪಂಡಿತ ಮತ್ತು ಈತನ ಶಿಷ್ಯ ವಾಸುಪೂಜ್ಯ ಮುನಿಗಳಿಬ್ಬರೂ ಈ ಬಸದಿಯು ಸ್ಥಾನಾಚಾರ್ಯರಾಗಿದ್ದರು. ಇವರು ಈ ಬಸದಿಗೆ ವಿವಿಧ ಮೂಲಗಳಿಂದ ಹರಿದು ಬರುತ್ತಿದ್ದ ದಾನ-ದತ್ತಿಗಳ ಮೇಲ್ವಿಚಾರಕರಾಗಿದ್ದರು. ಜೊತೆಗೆ ಈ ಬಸದಿಯಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದರು. ಈ ಬಸದಿಯನ್ನು ೧೯೬೮ರಲ್ಲಿ ಜೀರ್ಣೋದ್ಧಾರ ಮಾಡಿಸುತ್ತಿದ್ದ ಸಂದರ್ಭದಲ್ಲಿ ಪ್ರಾಚೀನ ಕೆಲವು ವಾಸ್ತು ಭಾಗಗಳು ನೂತನ ಸ್ವರೂಪವನ್ನು ಪಡೆದಿವೆ.

ಈ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದಿಗೂ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿದೆ. ಜೀರ್ಣೋದ್ಧಾರದ ಸಂದರ್ಭದಲ್ಲಿ ಪ್ರಾಚೀನ ಕೆಲವು ವಾಸ್ತು ಭಾಗಗಳು ನೂತನ ಸ್ವರೂಪವನ್ನು ಪಡೆದಿವೆ. ಕಪ್ಪುಮಿಶ್ರಿತ ಕೆಂಪು ಮರಳು ಶಿಲೆಯಲ್ಲಿ ಉತ್ತರಾಭಿಮುಖವಾಗಿ ನಿರ್ಮಾಣವಾಗಿರುವ ಈ ಬಸದಿ ಏಕಕೂಟಾಚಲ ವಿನ್ಯಾಸದಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹವು ಚೌಕಾಕಾರವಾಗಿದೆ. ಇದರ ದ್ವಾರಬಂಧವು ಸ್ತಂಭಶಾಖೆ ಪ್ರಧಾನವಾಗಿರುವ ತ್ರಿಶಾಖಾ ರೀತಿಯದ್ದಾಗಿದೆ. ಉತ್ತರಾಂಗಣದಲ್ಲಿ ಐದು ದ್ರಾವಿಡ ಶೈಲಿಯ ಶಿಖರಗಳ ಪ್ರತಿಕೃತಿಗಳಿವೆ. ಅಂತರಾಳವು ಆಯತಾಕಾರವಾಗಿದ್ದು, ಇದರ ದ್ವಾರಬಂಧದ ಪಾರ್ಶ್ವಗಳಲ್ಲಿ ಭದ್ರಕ ಪ್ರಕಾರದ ಎರಡು ಭಿತ್ತಿಗಂಬಗಳಿವೆ. ಇವುಗಳ ಕಾಂಡಭಾಗದ ಮೇಲಿರುವ ಹೂಮಾಲೆಯನ್ನು ಹಿಡಿದುಕೊಂಡಿರುವ ಯಕ್ಷ, ರತ್ನಪಟ್ಟಿ, ಕೀರ್ತಿಮುಖ, ಕಾಯೋತ್ಸರ್ಗದಲ್ಲಿರುವ ತೀರ್ಥಂಕರ, ಹೂಬಳ್ಳಿಯ

ಉಬ್ಬುಕೆತ್ತನೆಗಳು ಆಕರ್ಷಕವಾಗಿವೆ. ಸಭಾಮಂಟಪವು ಸಂಪೂರ್ಣ ಜೀರ್ಣೋದ್ಧಾರವಾಗಿ ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಮುಂಭಾಗದಲ್ಲಿರುವ ಮಡಿಗೆಯ ಎರಡಂತಸ್ತಿನ ತೆರೆದ ಮುಖಮಂಟಪವು ಗಮನೀಯವಾಗಿದೆ. ಅಧಿಷ್ಠಾನದಲ್ಲಿ ಖುರಕ, ಜಗತಿ, ಪದ್ಮ, ಅಂತರಿತ, ತ್ರಿಪಟ್ಟ ಕುಮುದ, ಕಪೋತ, ಮಕರಪಟ್ಟಿಕೆ ಭಾಗಗಳಿವೆ. ಮಕರಪಟ್ಟಿಕೆಯನ್ನು ಕೀರ್ತಿಮುಖ, ಮಕರಗಳು, ಮನುಷ್ಯರು ಇತ್ಯಾದಿ ಉಬ್ಬುಶಿಲ್ಪಗಳಿಂದ ಅಲಂಕರಿಸಲಾಗಿದೆ. ಭಿತ್ತಿಯಲ್ಲಿ ಭದ್ರ ಮತ್ತು ಸಲಿಲಾಂತರಗಳಿವೆ. ಭದ್ರಗಳಲ್ಲಿ ದ್ರಾವಿಡಕೂಟ ಮತ್ತು ಸ್ತಂಭಕೂಟಗಳ ಅಲಂಕಾರಗಳಿವೆ. ದ್ರಾವಿಡ ಕೂಟಗಳ ಮಧ್ಯದಲ್ಲಿ ತೀರ್ಥಂಕರರ ಕಾಯೋತ್ಸರ್ಗ ಉಬ್ಬುಶಿಲ್ಪಗಳಿವೆ. ಸ್ತಂಭಕೂಟಗಳ ಮೇಲೆ ಲತಿನಕೂಟ ಮಾದರಿಯ ಪ್ರತಿಕೃತಿಗಳಿವೆ. ಈ ಲತಿನಕೂಟದಲ್ಲಿ ಗವಾಕ್ಷ ಮತ್ತು ಸಲಿಲಾಂತರಗಳಲ್ಲಿ ಮಕರತೋರಣದ ಅಲಂಕಾರಗಳಿವೆ. ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ ಜೀರ್ಣೋದ್ಧಾರವಾಗಿವೆ.

೭.೪.೪.೨. ಕಲ್ಲೊಳೆಯ ಶಾಂತಿನಾಥ ಬಸದಿ

ಕಲ್ಯಾಣದ ಚಾಳುಕ್ಯ ಮನೆತನದ ಅಧೀನದಲ್ಲಿ ಕೂಹುಂಡಿ-೩೦೦೦ ಆಡಳಿತ ಪ್ರಾಂತದಲ್ಲಿ ಆಳ್ವಿಕೆ ಕೈಗೊಂಡಿದ್ದ ಸವದತ್ತಿಯ ರಟ್ಟ ಮನೆತನದ ಲಕ್ಷ್ಮೀದೇವನು, ಹಗರಟಗೆ ನಾಡಿನಲ್ಲಿ ಮಹಾಮಂಡಳೇಶ್ವರ ಗೈಯುತ್ತಿದ್ದ ಯದುವಂಶದ ಇಮ್ಮಡಿ ರಾಜರಸ ಮತ್ತು ಮೈಳಲದೇವಿ ದಂಪತಿಗಳ ಪುತ್ರಿ ಚಂದ್ರಿಕಾದೇವಿಯನ್ನು ವಿವಾಹನಾಗಿದ್ದನು.[೨೦೮] ಹಾಗಾಗಿ ಈ ಎರಡೂ ಮನೆತನಗಳ ಮಧ್ಯದಲ್ಲಿ ಪರಸ್ಪರ ಸಾಂಸ್ಕೃತಿಕ ಸಂಬಂಧಗಳಿದ್ದವು. ಹಗರಟಗೆ ನಾಡಿನ ಅರಸರು ಕೂಹುಂಡಿ-೩೦೦೦ ಆಡಳಿತ ಪ್ರಾಂತದ ಕೆಲವೆಡೆಗಳಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ರಟ್ಟ ಮನೆತನದ ಲಕ್ಷ್ಮೀದೇವನ ಪುತ್ರ ೪ನೆಯ ಕಾರ್ತವೀರ್ಯನ ಆಳ್ವಿಕೆಯ ಕಾಲದಲ್ಲಿ ಇಮ್ಮಡಿ ರಾಜರಸನು ಕಲ್ಲೊಳೆಯಲ್ಲಿ ಕ್ರಿ.ಶ. ೧೨೦೪ರಲ್ಲಿ ತ್ರಿಕೂಟಮಂಡಿತ ಶಾಂತಿನಾಥ ಬಸದಿಯನ್ನು ನಿರ್ಮಿಸಿ ಬಂಗಾರದ ಕಳಸ, ಮಕರತೋರಣ, ಮಾನಸ್ತಂಭ ಮೊದಲಾದವುಗಳನ್ನು ಮಾಡಿಸಿ ಇದನ್ನು ತನ್ನ ಗುರುಗಳಾದ ಶುಭಚಂದ್ರ ಭಟ್ಟಾರಕರ ಸನ್ನಿಧಿಗೆ ಒಪ್ಪಿಸಿದನು. ಕಾರ್ತವೀರ್ಯನು ಈ ಬಸದಿಗೆ ಭೂಮಿ, ಮನೆಯ ನಿವೇಶನ, ಎಣ್ಣೆಗಾಣ, ಅಂಗಡಿ, ಹೂದೋಟಗಳನ್ನು ದಾನ ಮಾಡಿದ್ದಾನೆ. ಇದೇ ಬಸದಿಗೆ ಬೆಳಗಲೆ ಮುಖ್ಯವಾಗಿ ನಾಲ್ಕು ಪಟ್ಟಣದ ಸೆಟ್ಟಿಯರು (ವ್ಯಾಪಾರಿಗಳು) ಮತ್ತು ಸಮಸ್ತ ಮುಮ್ಮುರಿದಂಡರು (ಮುಮ್ಮುರಿದಂಡವನ್ನು ಚಿಹ್ನೆಯನ್ನಾಗಿ ಹೊಂದಿದ್ದ ವ್ಯಾಪಾರಸ್ಥ ಸಂಘದ ಸದಸ್ಯರು) ಕೆಲವು ದಾನಗಳನ್ನು ಕೊಟ್ಟಿದ್ದಾರೆ.[೨೦೯] ಈ ಎಲ್ಲ ವಿಚಾರಗಳನ್ನು ಸವಿಸ್ತಾರವಾಗಿ ನಿರೂಪಿಸಿರುವ ಕ್ರಿ.ಶ. ೧೨೦೪ರ ಶಾಸನವನ್ನು 'ಪಾರ್ಶ್ವನಾಥ ಪುರಾಣ' ಕಾವ್ಯದ ಕರ್ತೃ ಪಾರ್ಶ್ವಪಂಡಿತನು ರಚಿಸಿರುವುದು ಗಮನೀಯವಾಗಿದೆ. ಗೋಕಾಕದ ಪತ್ರಾವಳಿ ಮನೆತನದವರು ಕಲ್ಲೊಳೆಯ ಬಸದಿಯ ಪೂಜೆ-ಪುನಸ್ಕಾರ ಮತ್ತು ಪುರೋಹಿತರ ಉಪಜೀವನಕ್ಕಾಗಿ ಹದಿನೈದು ಎಕರೆ ಭೂಮಿಯನ್ನು ದಾನ ಮಾಡಿದ್ದರು. ಅದರಲ್ಲಿ ಪ್ರಸ್ತುತ ಏಳು ಎಕರೆ ಭೂಮಿ ಮಾತ್ರ ಉಳಿದು ಬಂದಿದೆ.

ಈ ಬಸದಿ ಇಂದಿಗೂ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿದೆ. ಕಪ್ಪುಮಿಶ್ರಿತ ಕೆಂಪು

ಮರಳು ಶಿಲೆಯಲ್ಲಿ ದಕ್ಷಿಣಾಭಿಮುಖವಾಗಿ ನಿರ್ಮಾಣವಾಗಿರುವ ಈ ಬಸದಿ ತ್ರಿಕೂಟಾಚಲ ವಿನ್ಯಾಸದಲ್ಲಿದೆ. ತಲವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಒಂದು ನವರಂಗ ಮತ್ತು ಒಂದು ಮುಖಮಂಟಪವಿದೆ. ಮೂರೂ ಗರ್ಭಗೃಹಗಳು ಚೌಕಾಕಾರವಾಗಿವೆ. ಪ್ರಧಾನ ಗರ್ಭಗೃಹವು ದಕ್ಷಿಣಾಭಿಮುಖವಾಗಿದೆ. ಉಳಿದೆರಡು ಗರ್ಭಗೃಹಗಳು ಪೂರ್ವ ಮತ್ತು ಪಶ್ಚಿಮಾಭಿಮುಖವಾಗಿವೆ. ಪ್ರಧಾನ ಗರ್ಭಗೃಹದ ವಿತಾನವು ಅಷ್ಟಕೋನಾಕೃತಿಯಲ್ಲಿದ್ದು, ಮಧ್ಯದಲ್ಲಿ ನಕ್ಷತ್ರಾಕಾರ ಪದ್ಮಮಂಡಲದ ಅಲಂಕಾರವಿದೆ. ಇದರ ದ್ವಾರಬಂಧವು ಸ್ತಂಭಶಾಖೆ ಪ್ರಧಾನವಾಗಿರುವ ತ್ರಿಶಾಖಾ ರೀತಿಯದ್ದಾಗಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದ ದ್ವಾರಬಂಧವು ಸ್ತಂಭ, ನಾಗ, ರತ್ನಗಳಿಂದ ಅಲಂಕೃತವಾಗಿರುವ ತ್ರಿಶಾಖೆಗಳನ್ನೊಳಗೊಂಡಿದೆ. ಉತ್ತರಾಂಗಣದಲ್ಲಿ ಐದು ರೇಖಾನಾಗರ ಶೈಲಿಯ ಶಿಖರಗಳ ಪ್ರತಿಕೃತಿಗಳಿದ್ದು, ಇವುಗಳ ಮಧ್ಯದಲ್ಲಿ ಗವಾಕ್ಷಗಳ ಅಲಂಕಾರಗಳಿವೆ. ಪಶ್ಚಿಮಾಭಿಮುಖವಾಗಿರುವ ಗರ್ಭಗೃಹದ ದ್ವಾರಬಂಧದ ವಾಸ್ತು ಲಕ್ಷಣಗಳೂ ಪೂರ್ವಾಭಿಮುಖವಾಗಿರುವ ಗರ್ಭಗೃಹದ ದ್ವಾರಬಂಧದಂತಿವೆ. ಈ ಮೂರೂ ಗರ್ಭಗೃಹಗಳ ಮುಂಭಾಗಗಳಲ್ಲಿ ಅಂತರಾಳಗಳಿವೆ. ಇವುಗಳ ದ್ವಾರಬಂಧಗಳು ನಿರಲಂಕೃತವಾಗಿದ್ದು, ಪಾರ್ಶ್ವಗಳಲ್ಲಿ ಜಾಲಂಧ್ರಗಳನ್ನು ಅಳವಡಿಸಲಾಗಿದೆ.

ಮೂರೂ ಅಂತರಾಳಗಳಿಗೆ ಹೊಂದಿಕೊಂಡಂತೆ ವಿಶಾಲವಾದ ನವರಂಗ ಮಂಟಪವಿದೆ. ಇದರ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇವು ಕ್ರಮವಾಗಿ ಪೀಠ, ಪಾದ, ದಂಡ, ಗ್ರೀವ, ಕಂಠ, ಫಲಕ, ಬೋದಿಗೆಯಿಂದ ಕೂಡಿವೆ. ಈ ಮಂಟಪದ ವಿತಾನವು ಅಷ್ಟಕೋನಾಕೃತಿಯಲ್ಲಿದ್ದು, ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಇದರ ಭಿತ್ತಿಗಳಲ್ಲಿ ಸುತ್ತಲೂ ಭದ್ರಕ ಪ್ರಕಾರದ ಹನ್ನೆರಡು ಅರ್ಧಗಂಬಗಳಿವೆ. ಪಾರ್ಶ್ವದ ಭಿತ್ತಿಗಳಲ್ಲಿ ಎರಡು ದೇವಕೋಷ್ಠಗಳಿವೆ. ನವರಂಗದ ಮುಂಭಾಗದಲ್ಲಿ ಚಿಕ್ಕದಾದ ಮುಖಮಂಟಪವಿದೆ. ಇದರ ವಿತಾನವು ಸಮತಲವಾಗಿದ್ದು, ಸುತ್ತಲೂ ಇಳಿಜಾರಾದ ಛಜ್ಜವಿದೆ. ಈ ಮಂಟಪದಲ್ಲಿ ಸುತ್ತಲೂ ಕಕ್ಷಾಸನವಿದ್ದು, ಇದರ ನಾಲ್ಕೂ ಮೂಲೆಗಳಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಕಿರಿದಾದ ಸ್ತಂಭಗಳಿವೆ. ಅಧಿಷ್ಠಾನವು ಕಪೋತಬಂಧ ರೀತಿಯದ್ದಾಗಿದೆ. ಇದರಲ್ಲಿ ಖುರಕ, ಜಗತಿ, ಪದ್ಮ, ಅಂತರಿತ, ಕುಮುದ, ಕಪೋತ ಭಾಗಗಳಿವೆ. ಕಪೋತ ಪಟ್ಟಿಯನ್ನು ನಾಸಿಗಳಿಂದ ಅಲಂಕರಿಸಲಾಗಿದೆ. ಭಿತ್ತಿಯು ನಿರಲಂಕೃತವಾಗಿದೆ. ಮೂರೂ ಗರ್ಭಗೃಹಗಳ ಹಿಂಭಿತ್ತಿಗಳಲ್ಲಿ ದೇವಕೋಷ್ಠಗಳಿವೆ. ಭಿತ್ತಿಯ ಮೇಲಿನ ಭಾಗವು (ಪ್ರಸ್ತರ) ವರಾಂಡ ಮತ್ತು ಕಪೋತವನ್ನು ಹೊಂದಿದೆ. ಇವುಗಳ ಮೇಲಿನ ಭಾಗವು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗಿದೆ. ಪ್ರಧಾನ ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ (ಕದಂಬನಾಗರ) ಶೈಲಿಯ ಶಿಖರವಿದೆ. ಇದು ಆರು ಸ್ತರಗಳನ್ನೊಳಗೊಂಡಿದೆ. ಪ್ರತಿಯೊಂದು ಸ್ತರವನ್ನು ನಾಸಿಗಳಿಂದ ಅಲಂಕರಿಸಲಾಗಿದೆ. ಈ ಬಸದಿಯ ಹೊರಗಿನ ತಲವಿನ್ಯಾಸವು ಸಪ್ತರಥ ಮಾದರಿಯಲ್ಲಿ ಗೋಚರಿಸುತ್ತದೆ.

೭.೪.೪.೦೩. ತೇರದಾಳದ ಗೊಂಕ ಜಿನಾಲಯ

ಸವದತ್ತಿಯ ರಟ್ಟ ಮನೆತನದ ಇಮ್ಮಡಿ ಕಾರ್ತವೀರ್ಯನ ಮಾಂಡಳಿಕನಾದ ಗೊಂಕದೇವರಸನು ಕೂಹುಂಡಿನಾಡಿನ ತೇರಿದಾಳ-೧೨ ಆಡಳಿತ ವಿಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈ

ಸಂದರ್ಭದಲ್ಲಿ ಈತನು ತೇರಿದಾಳದಲ್ಲಿ (ಇಂದಿನ ತೇರದಾಳ) ತನ್ನ ಹೆಸರಿನಲ್ಲಿ ಗೊಂಕ ಜಿನಾಲಯವನ್ನು (ನೇಮಿನಾಥ ಬಸದಿ) ನಿರ್ಮಿಸಿ, ದಾನ-ದತ್ತಿಗಳನ್ನು ಕೊಡಮಾಡಿದ್ದಾನೆ.[೨೧೦] ಈ ಬಸದಿಯು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದಿಗೂ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ನೇಮಿನಾಥ ತೀರ್ಥಂಕರನ ಪರ್ಯಂಕಾಸೀನ ಶಿಲ್ಪವಿದೆ. ಇದರ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ತ್ರಿಶಾಖಾ ರೀತಿಯದ್ದಾಗಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ಅಂತರಾಳದ ವಾಸ್ತು ಲಕ್ಷಣಗಳು ಗರ್ಭಗೃಹದಂತಿವೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಸುತ್ತಲೂ ಭಿತ್ತಿಯಲ್ಲಿ ಹನ್ನೆರಡು ಭದ್ರಕ ಪ್ರಕಾರದ ಭಿತ್ತಿಗಂಭಗಳಿವೆ. ಇದರ ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ರತ್ನ, ಬಳ್ಳಿ, ಮಿಥುನ, ಸ್ತಂಭ, ಬಳ್ಳಿ ಅಲಂಕಾರಿಕ ಪಂಚಶಾಖಾ ರೀತಿಯಲ್ಲಿದೆ. ಲಲಾಟ ಪಟ್ಟಿಯಲ್ಲಿ ಪರ್ಯಂಕಾಸೀನ ತೀರ್ಥಂಕರನ ಉಬ್ಬುಶಿಲ್ಪವಿದೆ. ತೆರದ ಮುಖಮಂಟಪದಲ್ಲಿ ಎರಡು ಸ್ತಂಭಗಳಿದ್ದು, ಸುತ್ತಲೂ ಕಕ್ಷಾಸನವಿದೆ. ಈ ಬಸದಿಯ ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ಕಪೋತ, ವೇದಿ ಭಾಗಗಳಿವೆ. ಭಿತ್ತಿಯಲ್ಲಿ ನಿಯೋಜಿತ ಅಂತರದಲ್ಲಿ ಕುಡ್ಯಸ್ತಂಭಗಳಿವೆ. ಇವುಗಳ ಮೇಲೆ ಫಾಂಸನಾ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ಶಿಖರವು ಜೀರ್ಣೋದ್ಧಾರವಾಗಿದೆ.

೭.೪.೪.೪. ಯಕ್ಸಂಬಾದ ಬಸದಿ

ಕೊಲ್ಲಾಪೂರದ ಶಿಲಾಹಾರ ಮನೆತನದ ವಿಜಯಾದಿತ್ಯನ ಸೈನ್ಯಾಧಿಕಾರಿಯಾದ ಕಾಳಿಯಣ್ಣನು ಕೂಹುಂಡಿನಾಡಿನ ಕೊರವಳ್ಳಿ ಕಂಪಣದ ಯಕ್ಸಂಬಾ ಗ್ರಾಮದಲ್ಲಿ ನೇಮಿನಾಥ ಬಸದಿಯನ್ನು ಕಟ್ಟಿಸಿ, ತನ್ನ ಗುರು ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣದ ಮಂಡಳಾಚಾರ್ಯ ಕೀರ್ತಿಪಂಡಿತದೇವನ ಶಿಷ್ಯ ವಿಜಯಕೀರ್ತಿಪಂಡಿತನಿಗೆ ಒಪ್ಪಿಸಿದ್ದಾನೆ.[೨೧೧] ಈ ಬಸದಿಯನ್ನು ನೋಡಲು ಆಗಮಿಸಿದ್ದ ಸವದತ್ತಿಯ ರಟ್ಟ ಮನೆತನದ ಕಾರ್ತವೀರ್ಯನು ಇದರಲ್ಲಿ ಜರುಗುವ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಕೂಹುಂಡಿನಾಡಿನ ಕಲ್ಲೊಳೆ ಗ್ರಾಮದಲ್ಲಿ ಭೂದಾನ ಮಾಡಿದ್ದಾನೆ. ಈ ಬಸದಿಯ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದು ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಆದರೂ ಕೆಲವು ಭಾಗಗಳಲ್ಲಿ ಪ್ರಾಚೀನ ವಾಸ್ತು ಲಕ್ಷಣಗಳನ್ನು ಉಳಿಸಿಕೊಳ್ಳಲಾಗಿದೆ. ಇದರ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ನವರಂಗದ ಮುಂಭಾಗದಲ್ಲಿ ಕಳೆದ ದಶಕದಲ್ಲಿ ಸಭಾಮಂಟಪವನ್ನು ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ನೇಮಿನಾಥ ತೀರ್ಥಂಕರನ ಪರ್ಯಂಕಾಸೀನ ಶಿಲ್ಪವಿದೆ. ಇದರ ದ್ವಾರಬಂಧವು ಸರಳವಾಗಿದೆ. ಲಲಾಟ ಪಟ್ಟಿಯಲ್ಲಿ ಪರ್ಯಂಕಾಸೀನ ತೀರ್ಥಂಕರನ ಉಬ್ಬುಶಿಲ್ಪವಿದೆ. ನವರಂಗದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ತ್ರಿಶಾಖಾ ರೀತಿಯಲ್ಲಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ಈ ಬಸದಿಯ ಹೊರಗಿನ ಭಾಗವೆಲ್ಲವೂ ಜೀರ್ಣೋದ್ಧಾರವಾಗಿದ್ದು, ಮೂಲ ವಾಸ್ತು ಲಕ್ಷಣಗಳು ತಿಳಿಯುವುದಿಲ್ಲ.

೭.೪.೪.೫. ಹಣ್ಣಿಕೇರಿಯ ಪಾರ್ಶ್ವನಾಥ ಬಸದಿ

ಸವದತ್ತಿಯ ರಟ್ಟರ ೧ನೆಯ ಲಕ್ಷ್ಮೀದೇವನ ಆಳ್ವಿಕೆಯ ಸಂದರ್ಭದಲ್ಲಿ ಮೂಲಿಗ ಮುರಿಯರ ಅಮ್ಮಗಾವುಂಡನು ಏಳ್ಕೋಟಿ (ಕಾಳಾಮುಖ ಪಂಥ) ಮಹಾದೇವನ ಆಜ್ಞೆಯ ಮೇರೆಗೆ ಜೋಗವಟ್ಟಿಗೆಯನ್ನು (ಯೋಗಪಟ್ಟಿಕೆ) ಧರಿಸಿ ಹಣ್ಣಿಕೇರಿ ಗ್ರಾಮದ ಮಧ್ಯದಲ್ಲಿ ಕ್ರಿ.ಶ. ೧೨೦೯ರಲ್ಲಿ ಮಾನಸ್ತಂಭ, ಮಕರತೋರಣ ಸಹಿತವಾಗಿ ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ್ದಾನೆ. ಈ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರ, ಮುನಿಗಳ ಆಹಾರದಾನ, ಔಷಧದಾನ, ಅಭಯದಾನ, ಶಾಸ್ತ್ರದಾನಕ್ಕೆ ಸವದತ್ತಿಯ ರಟ್ಟ ಮನೆತನದ ಲಕ್ಷ್ಮೀದೇವನ ಒಪ್ಪಿಗೆಯನ್ನು ಪಡೆದು ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಕನಕಪ್ರಭಪಂಡಿತದೇವನನ ಪಾದಗಳನ್ನು ತೊಳೆದು ಭೂದಾನ ಮಾಡಿದ್ದಾನೆ.[೨೧೨] ಪ್ರಸ್ತುತ ಈ ಬಸದಿಯ ಗರ್ಭಗೃಹ ಮಾತ್ರ ಉಳಿದಿದೆ. ಬಸದಿ ತುಂಬಾ ಶಿಥಿಲಾವಸ್ಥೆಯಲ್ಲಿದೆ.

೭.೪.೪.೬. ಬೆಳಗಾವಿಯ ಶಾಂತಿನಾಥ ಬಸದಿ

ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನ ಮಂತ್ರಿ ಬೀಚಿರಾಜನು ಕ್ರಿ.ಶ. ೧೨೦೪ರಲ್ಲಿ ಬೆಳಗಾವಿಯ ಕೋಟೆಯ ಆವರಣದಲ್ಲಿ ಶಾಂತಿನಾಥ ಬಸದಿಯನ್ನು ಕಟ್ಟಿಸಿ, ಭೂದಾನ ಮಾಡಿದ್ದಾನೆ.[೨೧೩] ಈ ಬಸದಿಯ ಗರ್ಭಗೃಹದಲ್ಲಿ ಕಾಲಾಂತರದಲ್ಲಿ ನೇಮಿನಾಥ ತೀರ್ಥಂಕರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಅಂತಾಗಿ ಇದನ್ನು ನೇಮಿನಾಥ ಬಸದಿ ಎಂದು ಕರೆಯಲಾಗುತ್ತದೆ. ಇದನ್ನು 'ರಟ್ಟರ ಪಟ್ಟಜಿನಾಲಯ' ಎಂತಲೂ ಕರೆಯಲಾಗಿದೆ. ಉತ್ತರಾಭಿಮುಖವಾಗಿರುವ ಈ ಬಸದಿ ಕಪ್ಪು ಬಳಪದ ಶಿಲೆಯಲ್ಲಿ ನಿರ್ಮಾಣವಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳಿವೆ. ಅಧಿಷ್ಠಾನದಲ್ಲಿ ಉಪಾನ, ಕಂಠ, ಕುಮುದ, ಪಾದಪಟ್ಟಿಕೆಗಳು, ಜಗತಿ, ಪಾದ, ಬಂಧ ಪಟ್ಟಿಕೆಗಳಿವೆ. ಕಕ್ಷಾಸನದ ಹೊರಬದಿಗೆ ಉಬ್ಬುಶಿಲ್ಪಗಳಿವೆ. ಚೌಕಾಕಾರದ ಗರ್ಭಗೃಹದಲ್ಲಿ ನೇಮಿನಾಥ ತೀರ್ಥಂಕರನ ಪರ್ಯಂಕಾಸೀನ ಶಿಲ್ಪವಿದ್ದು, ಹಿಂಬದಿಯಲ್ಲಿ ಪ್ರಭಾವಳಿಯಿದೆ. ಪ್ರಭಾವಳಿಯ ಪಾರ್ಶ್ವಗಳಲ್ಲಿ ಗಜವಿನ್ಯಾಸದ ಮೇಲೆ ಲತಾಸುರಳಿಯಲ್ಲಿ ನೃತ್ಯಗಾರರ ಉಬ್ಬುಶಿಲ್ಪಗಳಿವೆ. ಇದೊಂದು ಅಪರೂಪದ ಕಲಾಕೃತಿಯಾಗಿದೆ. ಗರ್ಭಗೃಹದ ದ್ವಾರಬಂಧದ ಉತ್ತರಾಂಗಣದಲ್ಲಿ ಸುಂದರ ಕುಸುರಿನ ಕೆತ್ತನೆಯಿದೆ. ಗರ್ಭಗೃಹದ ಮೇಲೆ ಕದಂಬನಾಗರ ಶೈಲಿಯ ಶಿಖರವಿದೆ. ಕಿರಿದಾದ ಸುಖನಾಸಿಯ ವಿತಾನದಲ್ಲಿ ಕಮಲವನ್ನು ಕೆತ್ತಲಾಗಿದೆ.

ನವರಂಗದ ದ್ವಾರಬಂಧದ ಲಲಾಟ ಪಟ್ಟಿಯಲ್ಲಿ ಪರ್ಯಂಕಾಸೀನ ತೀರ್ಥಂಕರನ ಉಬ್ಬುಶಿಲ್ಪವಿದೆ. ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿದ್ದು, ಇವುಗಳ ಮಧ್ಯದಲ್ಲಿ ಚೌಕಾಕಾರದ ವೇದಿಕೆಯಿದೆ. ಭಿತ್ತಿಗಳಲ್ಲಿ ಸುತ್ತಲೂ ಜಾಲಂಧ್ರಗಳನ್ನು ಅಳವಡಿಸಲಾಗಿದೆ. ಇದರಲ್ಲಿ ಪಾರ್ಶ್ವನಾಥ, ಇಪ್ಪತ್ನಾಲ್ಕು ತೀರ್ಥಂಕರರ ಪ್ರಭಾವಳಿಯುಳ್ಳ ಆದಿನಾಥ ತೀರ್ಥಂಕರರ ಶಿಲ್ಪಗಳಿವೆ. ಪೂರ್ವದಿಕ್ಕಿನ ಭಿತ್ತಿಯಲ್ಲಿ ಅಂದರೆ ಪ್ರವೇಶದ್ವಾರಕ್ಕೆ ಹೊಂದಿಕೊಂಡಂತೆ ಮುನಿಗಳ ಏಕಾಂತ ತಪಸ್ಸಿನ ಅನುಕೂಲಕ್ಕಾಗಿ ಎರಡು ಗುಂಫಾಗಳನ್ನು ಮಾಡಲಾಗಿದೆ. ದಕ್ಷಿಣದ ಭಿತ್ತಿಯಲ್ಲಿ ಯಕ್ಷ-ಯಕ್ಷಿಯರಿಗಾಗಿ ಎರಡು ಕೋಷ್ಠಗಳನ್ನು

ರೂಪಿಸಲಾಗಿದೆ. ಪಶ್ಚಿಮ ಭಾಗದ ಕೋಷ್ಠದಲ್ಲಿ ಸವ್ಯಲಲಿತಾಸನದಲ್ಲಿರುವ ಪದ್ಮಾವತಿಯ ಶಿಲ್ಪವಿದೆ. ಪೂರ್ವಭಾಗದ ಕೋಷ್ಠದಲ್ಲಿ ಆದಿನಾಥ ತೀರ್ಥಂಕರನ ಶಿಲ್ಪವಿದೆ. ಇದರ ದ್ವಾರಬಂಧದ ಪಾರ್ಶ್ವಗಳಲ್ಲಿ ಜಾಲಂಧ್ರಗಳಿವೆ. ವಿಶಾಲವಾದ ಮುಖಮಂಟಪಕ್ಕೆ ಮೂರು ಪ್ರವೇಶ ದ್ವಾರಗಳಿವೆ. ಪೂರ್ವಕ್ಕೆ ಮುಖ್ಯ ಪ್ರವೇಶದ್ವಾರವಿದೆ. ಇದರಲ್ಲಿ ಚತುಸ್ರಾಕಾರದ ಹದಿನಾಲ್ಕು ಸುಂದರ ಸ್ತಂಭಗಳಿವೆ. ಈ ಕಂಬಗಳು ಪಾದ, ಪೀಠ, ದಂಡ, ಬೋಧಿಗೆಯಿಂದ ಕೂಡಿವೆ. ವಿತಾನದ ಮಧ್ಯದಲ್ಲಿ ಇಳಿಬಿಟ್ಟ ಕಮಲದ ವಿನ್ಯಾಸವಿದೆ. ಇದು ಕನ್ನಡನಾಡಿನಲ್ಲಿಯೇ ಅಪರೂಪದ ಕಲಾವಿನ್ಯಾಸವಾಗಿದೆ. ಆಳವಾಗಿ ಕೊರೆದ ಕಮಲದ ಪಕಳೆಗಳಲ್ಲಿ ಏಪ್ಪತ್ತೆರಡು ಜಿನಶಿಲ್ಪಗಳಿವೆ. ಈ ಅಪರೂಪದ ಕಮಲದ ವಿನ್ಯಾಸದಿಂದಲೇ ಈ ಬಸದಿಯನ್ನು ಕಮಲ ಬಸದಿ ಎಂದು ಕರೆಯಲಾಗುತ್ತದೆ.

೭.೪.೪.೭. ರಾಯಬಾಗದ ಆದಿನಾಥ ಬಸದಿ

ರಾಯಬಾಗದ ಕ್ರಿ.ಶ. ೧೦೪೦ರ ಶಾಸನದಲ್ಲಿ ಸವದತ್ತಿಯ ರಟ್ಟರ ಎರಗನು ತನ್ನ ದಂಡಾಧಿಕಾರಿ ಮಾದಿರಾಜನ ವಿನಂತಿಯ ಮೇರೆಗೆ ಯಾಪನೀಯಸಂಘ ಪರಂಪರೆಯ ಮೂಲಬಸದಿ ಮತ್ತು ಮೂಲಸಂಘ ಪರಂಪರೆಯ ಬಸದಿಗಾಗಿ ಸರ್ವಬಾಧಾಪರಿಹಾರವಾಗಿ ಭೂದಾನ ಮಾಡಿದ ನಿರೂಪಣೆಯಿದೆ.[೨೧೪] ಇದರಿಂದ ರಾಯಬಾಗದಲ್ಲಿ ಒಂದು ದಿಗಂಬರ ಮತ್ತು ಒಂದು ಯಾಪನೀಯ ಸಂಘದ ಬಸದಿಗಳಿದ್ದುದು ಸ್ಪಷ್ಟವಾಗುತ್ತದೆ. ಈ ಬಸದಿಗಳನ್ನು ಪ್ರಭು ಮಾದಿರಾಜನು ಜೀರ್ಣೋದ್ಧಾರ ಮಾಡಿಸಿದ್ದಾನೆ. ಇಂದಿನ ಆದಿನಾಥ ಬಸದಿಯೇ ಮೂಲಬಸದಿಯಾಗಿದೆ. ಈ ಬಸದಿಯ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಆದಿನಾಥ ತೀರ್ಥಂಕರನ ಪರ್ಯಂಕಾಸೀನ ದುಂಡುಶಿಲ್ಪವಿದೆ. ಇದರ ದ್ವಾರಬಂಧವು ರತ್ನ, ಬಳ್ಳಿ, ಪದ್ಮ, ಸ್ತಂಭ ಅಲಂಕಾರಿಕ ಚತುಃಶಾಖಾ ರೀತಿಯದ್ದಾಗಿದ್ದು, ಲಲಾಟ ಪಟ್ಟಿಯಲ್ಲಿ ಪರ್ಯಂಕಾಸೀನ ತೀರ್ಥಂಕರನ ಉಬ್ಬುಶಿಲ್ಪವಿದೆ. ಅಂತರಾಳದ ದ್ವಾರಬಂಧವು ದ್ವಿಶಾಖಾ ರೀತಿಯದ್ದಾಗಿದ್ದು, ಸ್ತಂಭಶಾಖೆ ಪ್ರಧಾನವಾಗಿದೆ. ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ತಂಭಗಳಿವೆ. ಭಿತ್ತಿಗಳಲ್ಲಿ ಯಕ್ಷ–ಯಕ್ಷಿಯರಿಗೆ ಕೋಷ್ಠಗಳನ್ನು ನಿರ್ಮಿಸಲಾಗಿದೆ. ವಿತಾನದ ಮಧ್ಯದಲ್ಲಿ ಪದ್ಮಮಂಡಲದ ಅಲಂಕಾರವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕಂಠ, ಕಪೋತ, ವೇದಿ ಭಾಗಗಳಿವೆ. ಭಿತ್ತಿಯಲ್ಲಿ ಹಿಂಚಾಚು ಮತ್ತು ಮುಂಚಾಚುಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ.

೭.೪.೪.೮. ಬಡ್ಲಿಯ ಬ್ರಹ್ಮಜಿನಾಲಯ

ಬಡ್ಲಿಯ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಶಾಸನದಲ್ಲಿ ದೋರಸಮುದ್ರದ ಹೊಯ್ಸಳರ ವೀರಬಲ್ಲಾಳದೇವನ ಆಳ್ವಿಕೆಯ ಸಂದರ್ಭದಲ್ಲಿ ನಾರಣಭಟ್ಟರ ಪುತ್ರ ಹರಿಹರ, ಕೀರ್ತಿಪಂಡಿತ ಚಿಕ್ಕಯ್ಯ, ನಾಗಿಸೆಟ್ಟಿ, ದೂಸಿಗ ಪಾರಿಸಸೆಟ್ಟಿ ಮೊದಲಾದವರು ಗಂಗಕಂದರ್ಪ ಬ್ರಹ್ಮಜಿನಾಲಯಕ್ಕೆ ಮನೆ ಮತ್ತು ದಾನ ಮಾಡಿದ್ದಾರೆ.[೨೧೫] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ಈ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಬಂದಿರುವುದರಿಂದ ಮೂಲ ವಾಸ್ತು ಲಕ್ಷಣಗಳು ಸ್ಪಷ್ಟವಾಗುವುದಿಲ್ಲ.

೭.೪.೪.೯. ಪರಿವರ್ತಿತ, ಸಮೂಲನಾಶ ಮತ್ತು ಜೀರ್ಣೋದ್ಧಾರವಾಗಿರುವ ಬಸದಿಗಳು

ಜೈನ ಧರ್ಮದ ಸಮಾಜ, ಸಂಸ್ಕೃತಿ, ಮುನಿಗಳು, ಕವಿಗಳಿಗೆ ಉದಾರವಾಗಿ ರಾಜಾಶ್ರಯ ಮತ್ತು ದಾನ–ದತ್ತಿಗಳನ್ನು ಕೊಡುವುದರೊಂದಿಗೆ ಇದರ ವಾಸ್ತು, ಶಿಲ್ಪ, ಸಾಹಿತ್ಯ ಇತ್ಯಾದಿ ಪರಂಪರೆಗಳನ್ನು ಪೋಷಿಸಿ ಬೆಳೆಸಿದ ಬನವಾಸಿಯ ಕದಂಬರು, ಬಾದಾಮಿಯ ಚಲುಕ್ಯರು, ತಲಕಾಡಿನ ಗಂಗರು, ಕಲ್ಯಾಣದ ಚಾಳುಕ್ಯರು, ಪುಲಿಗೆರೆಯ ಸಗರರು (ಮಣಲೆಯರು), ಲಕ್ಕುಂಡಿಯ ವಾಜಿವಂಶ, ನವಲಗುಂದದ ಕತ್ತಲೆಕುಲ, ಹೊಂಬುಜದ ಸಾಂತರರು, ಮಳಖೇಡದ ರಾಷ್ಟ್ರಕೂಟರು, ಬಂಕಾಪುರದ ಚಲ್ಲಕೇತನರು, ದೋರಸಮುದ್ರದ ಹೊಯ್ಸಳರು, ಸವದತ್ತಿಯ ರಟ್ಟರು ಮೊದಲಾದ ಅನೇಕ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳ ಪತನದ ತರುವಾಯದಲ್ಲಿ ಇದಕ್ಕೆ ಮುಂಚೆ ದೊರೆಯುತ್ತಿದ್ದಂತಹ ಪ್ರಭುವರ್ಗದ ಬಲ, ಉತ್ತೇಜನ, ದಾನ–ದತ್ತಿಗಳು ಇಳಿಮುಖವಾಗುತ್ತ ಮುಂದುವರೆದವು.[೨೧೬]

ಕ್ರಿ.ಶ. ಸುಮಾರು ೧೧ನೆಯ ಶತಮಾನದಿಂದೀಚೆಗೆ ಜೈನಧರ್ಮೀಯರು ಮತ್ತು ಬಸದಿಗಳ ಮೇಲೆ ತಂಜಾವೂರಿನ ಚೋಳರು, ಕಾಳಾಮುಖ ಶೈವರು, ವೈಷ್ಣವರು, ಶ್ರೀವೈಷ್ಣವರು, ವೀರಶೈವರು, ಮುಸಲ್ಮಾನರು ನಡೆಸುತ್ತ ಬಂದ ರಾಜಕೀಯ, ಧಾರ್ಮಿಕ, ಸಾಮಾಜಿಕ ಆಕ್ರಮಣಗಳಲ್ಲಿ ಸಾವಿರಾರು ಬಸದಿಗಳು ನಾಶವಾದವು. ಇದಕ್ಕೆ ನಾಡಿನಾದ್ಯಂತ ದೊರೆಯುವ ಹಲವು ಶಾಸನಗಳು, ಪರಧರ್ಮದ ಧಾರ್ಮಿಕ ಸ್ಮಾರಕಗಳಾಗಿ ಪರಿವರ್ತಿತವಾಗಿರುವ (ರೂಪಾಂತರ) ನೂರಾರು ಬಸದಿಗಳು, ಅಜ್ಞಾನ ಧನಲೋಭಿಗಳು ನಿಧಿಯ ಆಸೆಗಾಗಿ ಅಗೆದು ಭಗ್ನಗೊಳಿಸಿರುವ ಅನೇಕ ಜೈನ ಸ್ಮಾರಕಗಳು ಹಾಗೂ ಕೋಟೆ–ಕೊತ್ತಲಗಳು, ಕೆರೆಕಟ್ಟೆಗಳು, ಬಾವಿಗಳು, ಕೆಲವು ದೇವಾಲಯಗಳ ನಿರ್ಮಾಣಗಳಲ್ಲಿ ಬಳಸಲಾಗಿರುವ ಜೈನ ಶಾಸನ–ಶಿಲ್ಪ–ವಾಸ್ತು ಅವಶೇಷಗಳು ಮತ್ತು ಕೆಲವು ಶಾಸನಗಳಾದಿ ಕೃತಿ–ಕಾವ್ಯಗಳಲ್ಲಿರುವ ಧಾರ್ಮಿಕ, ಸಾಮಾಜಿಕ ಸಂಘರ್ಷಣೆಯ ಉಲ್ಲೇಖಗಳು ಜ್ವಲಂತ ನಿದರ್ಶನಗಳಾಗಿವೆ.[೨೧೭]

ಬಸದಿಗಳು ಸಮೂಲನಾಶ ಮತ್ತು ಪರಿವರ್ತಿತವಾಗಿರುವುದಕ್ಕೆ ಮತದ್ವೇಷದ ದುಳ್ಳುರಿಗಳೇ ಪ್ರಮುಖ ಕಾರಣವಾಗಿವೆ. ಆದರೂ ಕೆಲವೊಮ್ಮೆ ಬಸದಿಗಳನ್ನು ಪಣಕ್ಕೊಡ್ಡಿ ಪರಧರ್ಮದ ಆಚಾರ್ಯರು ಮತ್ತು ವಿದ್ವಾಂಸರೊಂದಿಗೆ (ದೇವರ ದಾಸಿಮಯ್ಯ, ಏಕಾಂತದ ರಾಮಯ್ಯ, ಲಕ್ಷ್ಮೇಶ್ವರದ ಆದಯ್ಯ, ಕೋವೂರದ ಬೊಮ್ಮಯ್ಯ, ಜಾಜೂರದ ಚಂದ್ರಭೂಷಣಪಂಡಿತ, ಹಗರಟಗೆ ನಾಡಿನ ವಿರುಪರಸ, ಅಣ್ಣಿಗೇರಿಯ ವೀರಗೊಗ್ಗಿದೇವ ಇತ್ಯಾದಿ) ಧರ್ಮ, ದರ್ಶನ, ತತ್ವ, ಶಾಸ್ತ್ರ, ಸಿದ್ಧಾಂತ ಮೊದಲಾದವುಗಳಿಗೆ ಸಂಬಂಧಿಸಿದಂತೆ ವಾದ–ವಿವಾದಗಳಲ್ಲಿ ಭಾಗವಹಿಸುತ್ತಿದ್ದ ಜೈನ ಧರ್ಮದ ಮುನಿಗಳು, ವಿದ್ವಾಂಸರ ಸೋಲೂ ಕಾರಣವಾಗಿರುವಂತೆ ತೋರುತ್ತದೆ. ಹಾಗೆಯೇ ಬಸದಿಗಳ ನಾಶ, ಪರಿವರ್ತನೆ, ಸ್ವಾಧೀನಕ್ಕೆ ಜೈನಧರ್ಮೀಯರ ವಿವಿಧ ಒಳಪಂಗಡಗಳು, ಆಂತರಿಕ ಅಸ್ಥಿರತೆ, ಸ್ವಪ್ರತಿಷ್ಠೆ, ಅಹಂಕಾರ, ಸ್ವಸಮಯ ವಿರುದ್ಧವಾದ ನಡವಳಿಕೆಗಳು, ಪರಧರ್ಮಗಳಿಗೆ ಮತಾಂತರ, ತತ್ವ–ಸಿದ್ಧಾಂತಗಳಲ್ಲಿ ಭಿನ್ನಾಭಿಪ್ರಾಯಗಳು, ಮೇಲು–ಕೀಳೆಂಬ ತಾತ್ವಿಕ ನಂಬುಗೆಗಳು, ಆಚಾರ–ವಿಚಾರಗಳಲ್ಲಿ ಗೊಂದಲಗಳು, ತತ್ವಾಚರಣೆಯ

ಡಂಭಾಚಾರ, ಸಂಘಟನೆ ಮತ್ತು ಐಕ್ಯತೆಯ ಅಭಾವ ಮೊದಲಾದವುಗಳನ್ನೂ ಅಲ್ಲಗಳೆಯುವಂತಿಲ್ಲ.

ಜೈನಧರ್ಮೀಯರು ರಕ್ಷಣೆಯ ದೃಷ್ಟಿಯಿಂದ ತಮ್ಮ ಧರ್ಮೀಯರು ಅಧಿಕವಾಗಿದ್ದ ಪ್ರದೇಶಗಳೆಡೆಗೆ ವಲಸೆಹೋದ ಸಂದರ್ಭದಲ್ಲಿ ರಕ್ಷಣೆ, ಪೋಷಣೆ, ಪೂಜೆ-ಪುನಸ್ಕಾರಗಳಿಲ್ಲದೇ ದುಸ್ಥಿತಿಗಿಳಿದ ಬಸದಿಗಳನ್ನು ಪರಧರ್ಮೀಯರು ತಮ್ಮ ದೇವಾಲಯಗಳಾಗಿ ಪರಿವರ್ತಿಸಿರಲೂಬಹುದು. ಪರಧರ್ಮಗಳ ತತ್ವ-ಸಿದ್ಧಾಂತಗಳು, ಆಚಾರ-ವಿಚಾರಗಳ ಆಕರ್ಷಣೆ, ಗುರುಗಳ ಪ್ರಭಾವ, ಒತ್ತಾಯ ಮತ್ತು ಪರಧರ್ಮೀಯರಿಂದ ತಮ್ಮ ಮೇಲಾಗುತ್ತಿದ್ದ ಹಿಂಸಾತ್ಮಕ ಆಕ್ರಮಣಗಳಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸಾಮೂಹಿಕವಾಗಿ ಮತಾಂತರವಾಗುತ್ತಿದ್ದ ಜೈನಧರ್ಮೀಯರು ತಮ್ಮ ಬಸದಿಗಳು ನಿಷ್ಪ್ರಯೋಜಕವಾಗಿ ಉಳಿಯಬಾರದೆಂದು ತಾವೇ ಅವುಗಳನ್ನು ತಾವು ಮತಾಂತರವಾದ ಧರ್ಮದ ದೇವಾಲಯಗಳನ್ನಾಗಿ ಪರಿವರ್ತಿಸಿರಲೂಬಹುದು.[೨೧೮] ಕೂಹುಂಡಿನಾಡಿನ ಪ್ರದೇಶದಲ್ಲಿ ಈ ಮೇಲಿನ ಯಾವುದೋ ಕಾರಣದಿಂದ ಪರಧರ್ಮದ ದೇವಾಲಯವಾಗಿ ಪರಿವರ್ತಿತವಾಗಿರುವ ಮತ್ತು ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿರುವ ಹಾಗೂ ಕಾಲಾಂತರದಲ್ಲಿ ಸಂಪೂರ್ಣ ಜೀರ್ಣೋದ್ಧಾರವಾಗಿ ನೂತನ ವಾಸ್ತು ಸ್ವರೂಪವನ್ನು ಪಡೆದಿರುವ ಕೆಲವು ಬಸದಿಗಳ ವಿವರಗಳು ದೊರೆಯುತ್ತವೆ.

೭.೪.೪.೯.೧. ಯಾದವಾಡದ ಕಾಶಿ ಈಶ್ವರಲಿಂಗ ದೇವಾಲಯ

ಯಾದವಾಡದ ಪಿಂಜಾರ ಓಣಿಯಲ್ಲಿರುವ ಕಾಶಿ ಈಶ್ವರಲಿಂಗ ದೇವಾಲಯದ ವಾಸ್ತು ಲಕ್ಷಣಗಳ ಅಂತರಿಕ-ಬಾಹ್ಯ ಅಧ್ಯಯನದಿಂದ ಇದು ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ನಿರ್ಮಾಣವಾಗಿರುವಂತೆ ತೋರುತ್ತದೆ. ಕೆಂಪು ಮರಳು ಶಿಲೆಗಳಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಏಕಕೂಟಾಚಲ ವಿನ್ಯಾಸದಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ರತ್ನ, ಬಳ್ಳಿ, ಸ್ತಂಭಗಳಿಂದ ಅಲಂಕೃತವಾಗಿರುವ ತ್ರಿಶಾಖೆಗಳನ್ನೊಳಗೊಂಡಿದೆ. ಲಲಾಟ ಪಟ್ಟಿಯಲ್ಲಿ ತೀರ್ಥಂಕರನ ಪರ್ಯಂಕಾಸೀನ ಉಬ್ಬುಶಿಲ್ಪವಿದೆ. ಉತ್ತರಾಂಗಣದಲ್ಲಿ ಐದು ರೇಖಾನಾಗರ ಶೈಲಿಯ ಶಿಖರಗಳ ಪ್ರತಿರೂಪಗಳಿವೆ. ಅಂತರಾಳದಲ್ಲಿ ಗರ್ಭಗೃಹಕ್ಕೆ ಎದುರಾಗಿ ನಂದಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ವಿತಾನದಲ್ಲಿ ಪದ್ಮಮಂಡಲದ ಅಲಂಕಾರವಿದೆ. ದ್ವಾರಬಂಧವು ರತ್ನ ಮತ್ತು ಸ್ತಂಭಗಳಿಂದ ಅಲಂಕೃತವಾಗಿರುವ ದ್ವಿಶಾಖೆಗಳನ್ನೊಳಗೊಂಡಿದೆ. ಉತ್ತರಾಂಗಣದಲ್ಲಿ ಐದು ರೇಖಾನಾಗರ ಶೈಲಿಯ ಶಿಖರಗಳ ಪ್ರತಿಕೃತಿಗಳಿವೆ. ಉತ್ತರಾಂಗಣದ ಮೇಲ್ಭಾಗದಲ್ಲಿರುವ ಇಪ್ಪತ್ನಾಲ್ಕು ತೀರ್ಥಂಕರರ ಕಾಯೋತ್ಸರ್ಗ ಉಬ್ಬುಶಿಲ್ಪಗಳ ಸಾಲು ಗಮನೀಯವಾಗಿದೆ.[೨೧೯]

ಈ ದೇವಾಲಯದ ನವರಂಗದ ಮಧ್ಯದಲ್ಲಿ ರುದ್ರಕಾಂತ ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಇವು ಕ್ರಮವಾಗಿ ಪೀಠ, ಪಾದ, ದಂಡ, ಗ್ರೀವ, ಕಂಠ, ಫಲಕ, ಬೋದಿಗೆಯಿಂದ ಕೂಡಿವೆ. ಈ ಮಂಟಪದ ಪಾರ್ಶ್ವದ ಭಿತ್ತಿಗಳಲ್ಲಿ ಎರಡು ದೇವಕೋಷ್ಠಗಳಿವೆ. ಮುಖಮಂಟಪದಲ್ಲಿ ರುದ್ರಕಾಂತ

ಪ್ರಕಾರದ ನಾಲ್ಕು ಸ್ವತಂತ್ರ ಸ್ತಂಭಗಳಿವೆ. ಈ ಮಂಟಪದ ಸುತ್ತಲೂ ಇರುವ ಕಕ್ಷಾಸನವು ಭಗ್ನವಾಗಿದೆ. ಕಕ್ಷಾಸನದ ಮೇಲ್ಭಾಗದಲ್ಲಿ ಸುತ್ತಲೂ ಇಳಿಜಾರಾದ ಚಜ್ಜವಿದೆ. ದೇವಾಲಯದ ಹೊರಭಾಗವು ಸಂಪೂರ್ಣ ಶಿಥಿಲವಾಗಿದೆ. ಹೀಗಾಗಿ ಹೊರಗಿನ ವಾಸ್ತು ಲಕ್ಷಣಗಳ ಸ್ವರೂಪವು ಸ್ಪಷ್ಟವಾಗುವುದಿಲ್ಲ. ಈ ದೇವಾಲಯದ ಗರ್ಭಗೃಹ ಮತ್ತು ಅಂತರಾಳದ ದ್ವಾರಬಂಧಗಳ ಲಲಾಟ ಪಟ್ಟಿಯಲ್ಲಿರುವ ತೀರ್ಥಂಕರನ ಉಬ್ಬುಶಿಲ್ಪಗಳು ಮತ್ತು ಅಂತರಾಳದ ದ್ವಾರಬಂಧದ ಉತ್ತರಾಂಗಣದ ಮೇಲ್ಭಾಗದಲ್ಲಿರುವ ಇಪ್ಪತ್ನಾಲ್ಕು ತೀರ್ಥಂಕರರ ಉಬ್ಬುಶಿಲ್ಪಗಳ ಸಾಲು ಈ ದೇವಾಲಯವು ಮೂಲತಃ ಬಸದಿಯಾಗಿದ್ದು, ಯಾವುದೋ ಒಂದು ಕಾಲಘಟ್ಟದಲ್ಲಿ ಶೈವ ಧರ್ಮದ ದೇವಾಲಯವಾಗಿ ಪರಿವರ್ತಿತವಾಗಿರುವುದನ್ನು ದೃಢಪಡಿಸುತ್ತವೆ. ಈ ದೇವಾಲಯವು ಈಗ ತುಂಬಾ ಶಿಥಿಲಾವಸ್ಥೆಯಲ್ಲಿದೆ.

೭.೪.೪.೯.೨. ಗೋಕಾಕದ ಶಾಂತಿನಾಥ ಬಸದಿ

ಗೋಕಾಕದ ಕ್ರಿ.ಶ. ಸುಮಾರು ೮ನೆಯ ಶತಮಾನದ ತಾಮ್ರಪಟ ಶಾಸನದಲ್ಲಿ ಆಗುಪ್ತಾಯಿಕ ಅರಸನ ಆಳ್ವಿಕೆಯ ಕಾಲದಿಂದ ೮೪೫ ವರುಷಗಳು ಕಳೆದಿದ್ದಾಗ ರಾಷ್ಟ್ರಕೂಟ ಮನೆತನದ ದೇಜ್ಜಮಹಾರಾಜನ ಪುತ್ರ ಇಂದ್ರನಂದಿ ರಾಜನು ತನ್ನ ಮತ್ತು ತನ್ನ ಪೂರ್ವಜರ ಪುಣ್ಯಗೋಸ್ಕರ ಕಷ್ಮಾಂಡಿ ವಿಷಯದಲ್ಲಿದ್ದ (ಇದು ಕೂಹುಂಡಿನಾಡಿನ ಪ್ರಾಚೀನ ಹೆಸರು) ಜಳಾರ ಗ್ರಾಮದಲ್ಲಿ ಅರಿಹಂತ ತೀರ್ಥಂಕರನ ಪೂಜೆಗೆ, ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾದ ಅಧ್ಯಾಪಕರಿಗೆ, ರೋಗಿಗಳಿಗೆ, ವೃದ್ಧರಿಗೆ, ತಪಸ್ವಿಗಳಿಗೆ ಜಂಬೂಖಂಡಗಣ ಪರಂಪರೆಯ ಆರ್ಯನಂದಿ ಆಚಾರ್ಯನ ಸನ್ನಿಧಿಯಲ್ಲಿ ಐವತ್ತು ನಿವರ್ತನ ಭೂಮಿಯನ್ನು ದಾನ ಮಾಡಿದ ವಿವರಗಳಿವೆ.[೨೨೦] ಇದರಿಂದ ಗೋಕಾಕ ನಗರದಲ್ಲಿ ಕ್ರಿ.ಶ. ಸುಮಾರು ೬ನೆಯ ಶತಮಾನದಲ್ಲಾಗಲೇ ಬಸದಿ ಇತ್ತೆಂಬುದು ಸ್ಪಷ್ಟವಾಗುತ್ತದೆ. ಪ್ರಸ್ತುತ ಶಾಸನದ ತಾಮ್ರಪಟಗಳನ್ನು ಬಂಧಿಸಿರುವ ಬಳೆಯ ಮುದ್ರೆಯ ಮೇಲೆ ಜಿಂಕೆಯನ್ನು ತೋರಿಸಿರುವುದು ಗಮನಾರ್ಹವಾಗಿದೆ. ಜೈನ ಪರಂಪರೆಯ ಇಪ್ಪತ್ನಾಲ್ಕು ತೀರ್ಥಂಕರರಲ್ಲಿ ೧೬ನೆಯ ತೀರ್ಥಂಕರ ಶಾಂತಿನಾಥನ ಲಾಂಛನ ಜಿಂಕೆಯಾಗಿದೆ. ಈ ಹಿನ್ನೆಲೆಯಲ್ಲಿ ಅಂದು ಗೋಕಾಕ ನಗರದಲ್ಲಿದ್ದ ಬಸದಿ ಶಾಂತಿನಾಥ ತೀರ್ಥಂಕರನದ್ದಾಗಿತ್ತೆಂಬುದು ಮನದಟ್ಟಾಗುವುದು. ಆ ಬಸದಿ ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿದೆ.

೭.೪.೪.೯.೩. ಕಲ್ಲೊಳೆ ಪರಿಸರದ(?) ಪಂಚಕೂಟ ಬಸದಿ

ಕಲ್ಲೊಳೆಯ ಕ್ರಿ.ಶ. ೧೨೦೪ರ ಶಾಸನದಲ್ಲಿ ಹಗರಟಗೆ ನಾಡಿನಲ್ಲಿ ಮಹಾಮಂಡಳೇಶ್ವರ ಗೈಯುತ್ತಿದ್ದ ಯದುವಂಶದ ಇಮ್ಮಡಿ ರಾಜರಸನು ಕಲ್ಲೊಳೆಯಲ್ಲಿ ನಿರ್ಮಿಸಿದ್ದ ತ್ರಿಕೂಟಮಂಡಿತ ಶಾಂತಿನಾಥ ಬಸದಿಗೆ ಸವದತ್ತಿಯ ರಟ್ಟರ ೪ನೆಯ ಕಾರ್ತವೀರ್ಯನು ದಾನ ಮಾಡಿದ ಭೂಮಿಯ ಮೇರೆಗಳನ್ನು ಸೂಚಿಸಿರುವ ವಿವರಗಳಲ್ಲಿ (ತೆಂಕಮುಖಂ ಪಂಚವಸದಿಯಮಾನ್ಯದಿಂ) ಪಂಚವಸದಿಯ ಪ್ರಸ್ತಾಪವಿದೆ.[೨೨೧] ಪಂಚವಸದಿಯು ಪಂಚಕೂಟ ಬಸದಿಯ ಸೂಚನೆಯಾಗಿದೆ. ಅಂತಾಗಿ ಇಂದಿನ ಕಲ್ಲೊಳೆಯ ಸುತ್ತಮುತ್ತಲಿನ ಯಾವುದೋ ಒಂದು ಗ್ರಾಮದಲ್ಲಿ ಪಂಚಕೂಟ ತಲವಿನ್ಯಾಸದ ಬಸದಿ (ಐದು ಗರ್ಭಗೃಹಗಳುಳ್ಳ

ಬಸದಿ) ಇತ್ತೆಂಬುದು ಖಚಿತವಾಗುತ್ತದೆ. ಇದು ಇಂದಿನ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮದಲ್ಲಿರುವ ಪಂಚಕೂಟ ಬಸದಿಯಾಗಿರುವ (ಮಾಣಿಕ್ಯತೀರ್ಥ ಬಸದಿ>ಆದಿನಾಥ ಬಸದಿ) ಸಾಧ್ಯತೆಯೂ ಇರುವುದು. ಆ ಬಸದಿಯೂ ಯಾವುದೋ ಒಂದು ಕಾಲಘಟ್ಟದಲ್ಲಿ ಪಂಚಲಿಂಗೇಶ್ವರ ದೇವಾಲಯವಾಗಿ ಪರಿವರ್ತಿತವಾಗಿದೆ.[೨೨೨]

೭.೪.೪.೯.೪. ಕುಂದರಗಿಯ ಬಸದಿ

ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ನಂದವಾಡಗಿಯ ಕ್ರಿ.ಶ. ೧೦೬೫ರ ಶಾಸನವು ಕಲ್ಯಾಣದ ಚಾಳುಕ್ಯರ ತ್ರೈಲೋಕ್ಯಮಲ್ಲದೇವನ (ಇಮ್ಮಡಿ ಸೋಮೇಶ್ವರ) ಮಹಾಸಾಮಂತ ಭಾವಣದಂಧವಾರಣನು ಕಲ್ಯಾಣ, ಅಣ್ಣಿಗೇರಿ, ಬನವಾಸಿ, ನಂದವಾಡಗಿ ಮೊದಲಾದೆಡೆಗಳಲ್ಲಿ ದೇವಾಲಯಗಳು, ಮಠಗಳು, ಕೆರೆಗಳನ್ನು ನಿರ್ಮಿಸಿದ ಮತ್ತು ಜೀರ್ಣೋದ್ಧಾರ ಮಾಡಿಸಿದ ವಿವರಗಳನ್ನು ಸೂಚಿಸುತ್ತ ಕುಂದರಗೆ ಗ್ರಾಮದಲ್ಲಿದ್ದ ಬಸದಿಯನ್ನೂ ಜೀರ್ಣೋದ್ಧಾರ ಮಾಡಿಸಿದನೆಂದು ನಿರೂಪಿಸಿದೆ.[೨೨೩] ಆದರೆ ಈ ಶಾಸನದಲ್ಲಿ ಆ ಬಸದಿ ಯಾವ ತೀರ್ಥಂಕರನದು ಮತ್ತು ಅದನ್ನು ಯಾವಾಗ ಕಟ್ಟಿಸಿದನೆಂಬುದು ಸ್ಪಷ್ಟವಿಲ್ಲ. ಕುಂದರಗೆ ಗ್ರಾಮವು ಇಂದಿನ ಗೋಕಾಕ ತಾಲ್ಲೂಕಿನ ಕುಂದರಗಿ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಮಾರ್ಕಂಡೇಯ ನದಿ ತೀರದಲ್ಲಿ ಶಿಥಿಲಾವಸ್ಥೆಯಲ್ಲಿರುವ ಸಂಗಮೇಶ್ವರ ದೇವಾಲಯವಿದೆ. ಇದು ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಏಕಕೂಟಾಚಲ ವಿನ್ಯಾಸದಲ್ಲಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಫಾಂಸನಾ ಶೈಲಿಯ ಶಿಖರವಿದೆ. ಈ ದೇವಾಲಯವೇ ಇಮ್ಮಡಿ ಸೋಮೇಶ್ವರನ ಮಹಾಸಾಮಂತ ಭಾವಣಗಂಧವಾರಣನು ನಿರ್ಮಿಸಿದ ಬಸದಿಯಾಗಿದ್ದು, ಯಾವುದೋ ಒಂದು ಕಾಲಘಟ್ಟದಲ್ಲಿ ಶೈವ ಧರ್ಮದ ದೇವಾಲಯವಾಗಿ ಪರಿವರ್ತಿತವಾಗಿದೆ ಎಂದು ಬಾಹುಬಲಿ ಹಂದೂರ ಅವರು ಅಭಿಪ್ರಾಯ ಪಡುತ್ತಾರೆ.[೨೨೪] ಆದರೆ ಈ ದೇವಾಲಯದ ವಾಸ್ತು ಲಕ್ಷಣಗಳಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದಂತೆ ಯಾವುದೇ ಕುರುಹುಗಳು ಗೋಚರಿಸುವುದಿಲ್ಲ. ಪ್ರಾಯಶಃ ಈ ಗ್ರಾಮದ ಮಾರ್ಕಂಡೇಯ ನದಿ ತೀರದಲ್ಲಿದ್ದ ಆ ಬಸದಿ ಯಾವುದೋ ಒಂದು ಕಾಲಘಟ್ಟದಲ್ಲಿ ಸಮೂಲನಾಶವಾಗಿರಬಹುದು.

೭.೪.೪.೩.೫. ಯಾದವಾಡದ ಪಾರ್ಶ್ವನಾಥ ಬಸದಿ

ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಯಾದವಾಡದಲ್ಲಿ ಪಾರ್ಶ್ವನಾಥ ಬಸದಿ ನಿರ್ಮಾಣವಾಗಿತ್ತು. ಇದು ಈಗಿರುವ ಬಸದಿಯಲ್ಲಿ ಪ್ರತಿಷ್ಠಾಪಿತವಾಗಿರುವ ಸಮಕಾಲೀನ ಪಾರ್ಶ್ವನಾಥ ತೀರ್ಥಂಕರನ ಕಾಯೋತ್ಸರ್ಗ ಶಿಲ್ಪದಿಂದ ಖಚಿತವಾಗುತ್ತದೆ. ಆ ಬಸದಿ ಕಾಲಾಂತರದಲ್ಲಿ ಜರುಗಿದ ಧಾರ್ಮಿಕ ಮತ್ತು ರಾಜಕೀಯ ಘರ್ಷಣೆಗಳಲ್ಲಿ ಜೀರ್ಣವಾಗಿದ್ದರಿಂದ ಅದನ್ನು ಕ್ರಿ.ಶ. ೧೫೯೨ರಲ್ಲಿ ಶಿಲೆ, ಗಚ್ಚು, ಕಟ್ಟಿಗೆ ಮತ್ತು ಮಣ್ಣಿನ ಇಟ್ಟಿಗೆಗಳಿಂದ ಪುನರ್ ನಿರ್ಮಿಸಲಾಗಿದೆ. ಇದನ್ನು ಶ್ರೀ ಸುರೇಂದ್ರ ಶೇಡಬಾಳೆ ಅವರು ಶ್ರಾವಕ ಸಮುದಾಯದ

ತನುಮನಧನದ ಸಹಕಾರದಿಂದ ೨೦೦೦ರಲ್ಲಿ ಜೀರ್ಣೋದ್ಧಾರ ಮಾಡಿಸಿದ್ದಾರೆ. ಈ ಬಸದಿಯ ಪೂಜೆ–ಪುನಸ್ಕಾರಗಳು, ಮುನಿಗಳ ಆಹಾರದಾನ ಮತ್ತು ಪುರೋಹಿತರ ಉಪಜೀವನಕ್ಕಾಗಿ ಬ್ರಿಟಿಷ ಸಾಮ್ರಾಜ್ಞೆ ವಿಕ್ಟೋರಿಯಾ ಮಹಾರಾಣಿಯು ೧೯ನೆಯ ಶತಮಾನದಲ್ಲಿ ಬೆಳಗಾವಿ ಜಿಲ್ಲೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಬ್ರಿಟಿಷ ಅಧಿಕಾರಿಗಳಿಂದ ಭೂದಾನ ಮಾಡಿಸಿದಳೆಂದು ಸ್ಥಳೀಕರಿಂದ ತಿಳಿದುಬರುತ್ತದೆ. ಆ ಭೂದಾನದಲ್ಲಿ ಸುಮಾರು ಏಪ್ಪತ್ತು ಎಕರೆಯಷ್ಟು ಭೂಮಿ ಇಂದಿಗೂ ಉಳಿದು ಬಂದಿದೆ. ಇದರ ಆದಾಯವನ್ನು ಬಸದಿಯ ಧಾರ್ಮಿಕ ಚಟುವಟಿಕೆಗಳಿಗೆ ಮತ್ತು ಪುರೋಹಿತರ ಉಪಜೀವನಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

೭.೪.೪.೯.೬. ಗೋಕಾಕದ ಸುಪಾರ್ಶ್ವನಾಥ ಬಸದಿ

ಗೋಕಾಕದ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಕಾರೆಯಗಣ ಪರಂಪರೆಯ ರವಿಚಂದ್ರಮುನಿಯ ಶಿಷ್ಯ ಬಮ್ಮದೇವನೃಪನ ಪುತ್ರನೂ ತ್ರೈವಿದ್ಯೆಗಳಲ್ಲಿ ಪಾರಂಗತನೂ ಆದ ಎರಗನು ಬಸದಿಯನ್ನು ನಿರ್ಮಿಸಿದನೆಂದು ಪ್ರಸ್ತಾಪವಿದೆ.[೨೨೫] ಸವದತ್ತಿಯ ರಟ್ಟ ಮನೆತನದಲ್ಲಿ ೧ನೆಯ ಕನ್ನಕೈರನ ಪುತ್ರ ಎರಗ ಎಂಬ ಅರಸನು ಆಳ್ವಿಕೆ ಕೈಗೊಂಡಿದ್ದಾನೆ. ಪ್ರಾಯಶಃ ಆತನೇ ಈ ಬಸದಿಯನ್ನು ನಿರ್ಮಿಸಿರುವ ಸಾಧ್ಯತೆಯಿದೆ. ಗೋಕಾಕ ನಗರದ ರವಿವಾರ ಪೇಟೆಯಲ್ಲಿರುವ ಇಂದಿನ ಸುಪಾರ್ಶ್ವನಾಥ ಬಸದಿಯೇ ಎರಗನು ನಿರ್ಮಿಸಿದ್ದ ಪ್ರಾಚೀನ ಬಸದಿಯಾಗಿದೆ. ಮೂಲಸಂಘದ ದೇಸಿಯಗಣದ ಕೊಂಡಕುಂದಾನ್ವಯ ಪರಂಪರೆಯ ಶಾಂತಿಕೀರ್ತಿಮುನಿ ಸಾಂಗತ್ಯದಲ್ಲಿ ಅಮೂಲ್ಯವಾದ ಕೃತಿ–ಕಾವ್ಯಗಳನ್ನು ರಚಿಸುವ ಮೂಲಕ ಜೈನ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾಕವಿಗಳಲ್ಲಿಯೂ ಒಬ್ಬನಾಗಿದ್ದಾನೆ. ಈತನು–

ಧಾರುಣೀಶ್ವರ ಶಕಕಾಲ ಸಾಸಿರದರು
ನೂರರುವತ್ತಮೂರನೆಯ
ಚಾರುದುರ್ಮತಿವತ್ಸರದ ಮಾಘ ಪೌರ್ಣಮಿ
ತಾರಾಧಿಪನವಾರದೊಳು ॥
ಭರತಾರ್ಯಖಂಡ ಕುಂತಳ ದೇಶದ
ಮೆರೆವ ಗೋಕಾವಿ ನಗರದ
ಪರಮ ಸುಪಾರ್ಶ್ವಜಿನೇಶ್ವರ ಶ್ರೀಪಾದ
ಸರಸಿಜಂಗಳ ಸನ್ನಿಧಿಯೊಳು ॥

'ಷೋಡಶಭಾವನಾ ಚರಿತೆ' ಎಂಬ ಸಾಂಗತ್ಯ ಕಾವ್ಯವನ್ನು ಗೋಕಾಕ ನಗರದ ಸುಪಾರ್ಶ್ವನಾಥ ಬಸದಿಯಲ್ಲಿ ಕ್ರಿ.ಶ. ೧೭೪೨ರ ಫೆಬ್ರುವರಿ ೮ರಂದು ಬರೆದು ಪೂರ್ಣಗೊಳಿಸಿದ್ದಾನೆ.[೨೨೬]

೭.೪.೯.೭. ಸವದತ್ತಿಯ ಬಸದಿ

ಸವದತ್ತಿಯ ರಟ್ಟರ ಶಾಂತಿವರ್ಮನು ಕ್ರಿ.ಶ. ೯೮೦ರಲ್ಲಿ ಸುಗಂಧವರ್ತಿಯಲ್ಲಿ ಬಸದಿಯನ್ನು ಮಾಡಿಸಿ, ತನ್ನ ಗುರು ಬಾಹುಬಲಿ ಭಟ್ಟಾರಕನ ಕಾಲುಗಳನ್ನು ತೊಳೆದು ನೂರೈವತ್ತು ಮತ್ತರು

ಭೂಮಿಯನ್ನು ದಾನ ಮಾಡಿದ್ದಾನೆ.[೨೨೭] ಈ ಬಸದಿಯನ್ನು 'ರಟ್ಟರ ಪಟ್ಟಜಿನಾಲಯ' ಎಂದು ಕರೆಯಲಾಗಿದೆ. ಪ್ರಸ್ತುತ ಇದರ ಅವಶೇಷಗಳು ಉಳಿದಿಲ್ಲ..

೭.೪.೯.೮. ಸವದತ್ತಿಯ ಬಸದಿ

ಸವದತ್ತಿಯ ರಟ್ಟರ ೧ನೆಯ ಶಾಖೆಯ ಮೂಲಪುರುಷನಾದ ಮೇರಡನ ಪುತ್ರ ಪೃಥ್ವೀರಾಮನು ಸುಗಂಧವರ್ತಿ–೧೨ ಆಡಳಿತ ವಿಭಾಗದ ಕೇಂದ್ರ ಪಟ್ಟಣದಲ್ಲಿ (ಇಂದಿನ ಸವದತ್ತಿ) ಕ್ರಿ.ಶ. ೮೭೫–೭೬ರಲ್ಲಿ ಬಸದಿಯನ್ನು ನಿರ್ಮಿಸಿ, ಇದರ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಹದಿನೆಂಟು ನಿವರ್ತನ ಭೂಮಿಯನ್ನು ದಾನ ಮಾಡಿದ್ದಾನೆ.[೨೨೮] ಇದೇ ಬಸದಿಯ ವಿವಿಧ ಕಾರ್ಯಗಳಿಗೆ ರಟ್ಟರ ೨ನೆಯ ಶಾಖೆಯ ಇಮ್ಮಡಿ ಕಾರ್ತವೀರ್ಯ ಮತ್ತು ಈತನ ಪಟ್ಟದರಸಿ ನಾಗಲಾಂಬಿಕಾದೇವಿ ಭೂದಾನ ಮಾಡಿದ್ದಾರೆ.[೨೨೯] ಈ ಬಸದಿ ಯಾವುದೋ ಒಂದು ಕಾಲಘಟ್ಟದಲ್ಲಿ ರೇಣುಕಾದೇವಿ (ಎಲ್ಲಮ್ಮದೇವಿ) ದೇವಾಲಯವಾಗಿ ರೂಪಾಂತರವಾಗಿದೆ.

೭.೪.೯.೯ ಸವದತ್ತಿಯ ಬಸದಿ

ಸವದತ್ತಿಯ ರಟ್ಟರ ಕಾಳಸೇನನು ಕ್ರಿ.ಶ. ೧೦೯೮ರ ಸುಗಂಧವರ್ತಿಯಲ್ಲಿ ಬಸದಿ ಕಟ್ಟಿಸಿ ದಾನ ಮಾಡಿದ್ದಾನೆ.[೨೩೦] ಈ ಬಸದಿ ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ಇಂದು ನೂತನ ವಾಸ್ತು ಸ್ವರೂಪವನ್ನು ಪಡೆದಿದೆ. ಈಗ ಇದನ್ನು ಅನಂತನಾಥ ಬಸದಿ ಎಂದು ಕರೆಯಲಾಗುತ್ತದೆ.

೭.೪.೯.೧೦. ಬೆಳವಡಿಯ ಸಹಸ್ರಕೂಟ ಬಸದಿ

ಸವದತ್ತಿಯ ರಟ್ಟರ ೧ನೆಯ ಕನ್ನಕೈರನು ಬೆಳವಡಿಯಲ್ಲಿ ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ಮೈಳಾಪಾನ್ವಯ ಪರಂಪರೆಯ ಸಹಸ್ರಕೂಟ ಬಸದಿಯನ್ನು ಮಾಡಿಸಿದ್ದಾನೆ. ಈ ಬಸದಿಯ ಧಾರ್ಮಿಕ ಚಟುವಟಿಕೆಗಳಿಗೆ ಕ್ರಿ.ಶ. ೧೦೭೦ರಲ್ಲಿ ನರಸಿಂಹಪ್ರಭು, ಈತನ ಧರ್ಮಪತ್ನಿ ಪಿಟ್ಟಿಕಬ್ಬೆ, ಪುತ್ರರಾದ ಜಯದೇವ, ದೇವಣ್ಣ, ಚಾವುಂಡಮಯ್ಯ, ಆಯ್ತವರ್ಮ, ನಾದಿನಿ ಸತಿಯಬ್ಬೆ, ಸಹೋದರ ಪೊಲ್ಲ ಜೊತೆಗೂಡಿ ಗುಣಲೋಕೋತ್ತಮನಾದ ಗುಣಕೀರ್ತಿದೇವ ಮುನಿಯ ಸನ್ನಿಧಿಯಲ್ಲಿ ದಾನ ಮಾಡಿದ್ದಾರೆ.[೨೩೧] ಈ ಬಸದಿಯ ಮುನಿಗಳ ಆಹಾರದಾನಕ್ಕೆ ಮಲಧಾರಿದೇವ ಮುನಿಯ ಗುಡ್ಡ (ಶಿಷ್ಯ) ಮುದ್ದಿಸೆಟ್ಟಿಯು ಐವತ್ತು ನಿಷ್ಕಗಳು, ಗುಣಕೀರ್ತಿಮುನಿಯ ಗುಡ್ಡರಾದ ಮಾರಸಿಂಗನು ಐವತ್ತು ಪೊನ್ನಗಳು, ನಾಗಚಂದ್ರಸಿದ್ಧಾಂತಮುನಿಯ ಶಿಷ್ಯರಾದ ಮಾರಸಿಂಗ ಗಾವುಂಡನ ಧರ್ಮಪತ್ನಿ ಲೋಕಲೆ ಮತ್ತು ಪುತ್ರ ಇಪ್ಪತ್ತು ಕಾಂಚಣಗಳನ್ನು ಕ್ರಿ.ಶ. ೧೦೭೫ರಲ್ಲಿ ದಾನ ಮಾಡಿದ್ದಾರೆ.[೨೩೨] ಇದೇ ಬಸದಿಯ ಧಾರ್ಮಿಕ ಕಾರ್ಯಗಳಿಗೆ ಸವದತ್ತಿಯ ರಟ್ಟ ಮನೆತನದ ಕನ್ನಕೈರನ ಪುತ್ರಿ ಭಾಗಿಯಬ್ಬೆ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಗುಣಕೀರ್ತಿಮುನಿಯ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾಳೆ.[೨೩೩] ಈ ಬಸದಿಯು ಯಾವುದೋ ಒಂದು ಕಾಲಘಟ್ಟದಲ್ಲಿ ವೀರಭದ್ರ ದೇವಾಲಯವಾಗಿ ಪರಿವರ್ತನೆಯಾಗಿದೆ. ಈ ದೇವಾಲಯವು ಬೆಳಗಾವಿಯ ಕಮಲ ಬಸದಿಯ ಮಾದರಿಯಲ್ಲಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯವನ್ನು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ,

ಸುಖನಾಸಿ, ಮುಖಮಂಟಪವನ್ನು ಹೊಂದಿದೆ. ಆಯತಾಕಾರದ ಗರ್ಭಗೃಹದಲ್ಲಿ ವೀರಭದ್ರನ ಶಿಲ್ಪವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶೈಲಿಯ ಶಿಖರವಿದೆ. ಮುಖಮಂಟಪದಲ್ಲಿ ರುದ್ರಕಾಂತ ಪ್ರಕಾರದ ಸ್ತಂಭಗಳಿವೆ. ದ್ವಾರಬಂಧದ ಲಲಾಟ ಪಟ್ಟಿಯನ್ನು ಮುಚ್ಚಲಾಗಿದೆ.

೭.೪.೯.೧೧. ಉಳಾಗಡ್ಡಿ ಖಾನಾಪುರದ ಬಸದಿ

ಸವದತ್ತಿಯ ರಟ್ಟರ ಅಂಕರಸನ ಮಹಾಪ್ರಧಾನನಾಗಿದ್ದ ಪೆರ್ಗ್ಗಡೆ ಬಮ್ಮಣಯ್ಯನು ಕ್ರಿ.ಶ. ೧೧೨೯-೩೦ರಲ್ಲಿ ಉಳಾಗಡ್ಡಿ ಖಾನಾಪುರದಲ್ಲಿ ಬಸದಿಯನ್ನು ಮಾಡಿಸಿ, ಉದಾರವಾಗಿ ದಾನ ಮಾಡಿದ್ದಾನೆ.[೨೩೪] ಆದರೆ ಈ ಬಸದಿ ಪ್ರಸ್ತುತ ಕಾಣಸಿಗುವುದಿಲ್ಲ.

೭.೪.೯.೧೨. ಉಳಾಗಡ್ಡಿ ಖಾನಾಪುರದ ಗಾವುಂಡರ ಬಸದಿ

ಉಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೨೯-೩೦ರ ಶಾಸನದಲ್ಲಿ ಪೆರ್ಗ್ಗಡೆ ಬಮ್ಮಣಯ್ಯನು ಮಾಡಿಸಿದ ಬಸದಿಗೆ ಕೊಡಮಾಡಿದ ದಾನದ ವಿವರಗಳನ್ನು ಸೂಚಿಸಿರುವ ವಿವರಗಳಲ್ಲಿ ಗಾವುಂಡರ ಬಸದಿ ಎಂಬ ಪ್ರಸ್ತಾಪವಿದೆ.[೨೩೫] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೯.೧೩. ಉಳಾಗಡ್ಡಿ ಖಾನಾಪುರದ ಬಾಹುಬಲಿ ಬಸದಿ

ಉಳಾಗಡ್ಡಿ ಖಾನಾಪುರದ ಕ್ರಿ.ಶ. ೧೧೪೪ರ ಶಾಸನದಲ್ಲಿ ಆಲ್ಗೋಡದ ಸುಮತಿಯಣ್ಣನು ಬಾಹುಬಲಿಯ ದೇಹಾರವನ್ನು (ಬಸದಿ) ಮಾಡಿಸಿದ ಪ್ರಸ್ತಾಪವಿದೆ.[೨೩೬] ಈ ಬಸದಿಗೆ ಸವದತ್ತಿಯ ರಟ್ಟರ ಕತ್ತಮದೇವನು (ಮುಮ್ಮಡಿ ಕಾರ್ತವೀರ್ಯ) ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣದ ಕನಕಸ್ವಾಮಿ ಸಿದ್ಧಾಂತದೇವನ ಕಾಲುಗಳನ್ನು ತೊಳೆದು ನೂರು ಕಮ್ಮ ಭೂಮಿಯನ್ನು ದಾನ ಮಾಡಿದ್ದಾನೆ. ಕನ್ನಡನಾಡಿನಲ್ಲಿರುವ ಕೆಲವೇ ಕೆಲವು ಬಾಹುಬಲಿಯ ಬಸದಿಗಳಲ್ಲಿ ಈ ಬಸದಿಯೂ ಒಂದಾಗಿದೆ.[೨೩೭] ಈ ಬಸದಿಯ ಅವಶೇಷಗಳು ಉಳಿದು ಬಂದಿಲ್ಲ.

೭.೪.೯.೧೪. ಬೈಲಹೊಂಗಲದ ಬಸದಿ

ಸವದತ್ತಿಯ ರಟ್ಟರ ಆಳ್ವಿಕೆಯ ಸಂದರ್ಭದಲ್ಲಿ ಅಂದರೆ ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ಬೈಲಹೊಂಗಲದಲ್ಲಿ ಬಸದಿಯೊಂದು ನಿರ್ಮಾಣವಾಗಿತ್ತು. ಈ ಬಸದಿಯ ಧಾರ್ಮಿಕ ಕಾರ್ಯಗಳಿಗೆ ಅಂಕರಸ ಮತ್ತು ಈತನ ಪಟ್ಟದರಸಿ ಶಾಂತಿಯಕ್ಕ ಯಾಪನೀಯ ಸಂಘದ ಮೈಳಾಪಾನ್ವಯದ ಕಾರೆಯಗಣ ಪರಂಪರೆಯ ಜಿನದೇವಸೂರಿ ಮತ್ತು ಮುಳ್ಳಭಟ್ಟಾರಕನ ಸನ್ನಿಧಿಯಲ್ಲಿ ಭೂದಾನ ಮಾಡಿದ್ದಾರೆ.[೨೩೮] ಇದೇ ಬಸದಿಗೆ ಕಾರ್ತವೀರ್ಯನು ಭೂದಾನ ಮಾಡಿದ್ದಾನೆ.[೨೩೯] ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೯.೧೫. ದೊಡವಾಡದ ಬಸದಿ

ಸವದತ್ತಿಯ ರಟ್ಟರ ಅರಸನೊಬ್ಬನ (ಶಾಸನದ ಅಕ್ಷರಗಳು ಸವೆದಿರುವುದರಿಂದ ಹೆಸರು ಸ್ಪಷ್ಟವಿಲ್ಲ) ಮಹಾಪ್ರಧಾನನಾದ ಕಾಳಿಸೆಟ್ಟಿಯು ದೊಡವಾಡದಲ್ಲಿ ಬಸದಿಯನ್ನು ನಿರ್ಮಿಸಿದ್ದಾನೆ. ಈ ಬಸದಿಯ

ಮುನಿಗಳ ಆಹಾರದಾನಕ್ಕೆಂದು ಮಹಾಸಾಮಂತ ಕಾವದೇವರಸ ಮತ್ತು ಈತನ ಧರ್ಮಪತ್ನಿ ಚಿಕಬ್ಬೆಯರಸಿ, ಇಪ್ಪತ್ತು ಗಾವುಂಡರು ಕೂಡಿಕೊಂಡು ಕಾರೆಯಗಣ ಪರಂಪರೆಯ ಕುಕ್ಕುಟಸೇನದೇವ ಮುನಿಯ ಪಾದಗಳನ್ನು ತೊಳೆದು ಭೂದಾನ ಮಾಡಿದ್ದಾರೆ.[೨೪೦] ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೯.೧೬ ಹುಣಸಿಕಟ್ಟಿಯ ಮಾಣಿಕ್ಯದೇವ ಬಸದಿ

ಹುಣಸಿಕಟ್ಟಿಯ ಕ್ರಿ.ಶ. ೧೧೩೧ರ ಶಾಸನದಲ್ಲಿ ಕೊಲ್ಲಾಪುರದ ಶಿಲಾಹಾರ ಮನೆತನದ ಮಹಾಮಂಡಳೇಶ್ವರ ಮಾರಸಿಂಗದೇವನು ಅಗ್ರಹಾರ ಕೊಡನಪೂರ್ವದವಳ್ಳಿಯ (ಇಂದಿನ ಖೋದಾನಪುರ) ಮಾಣಿಕ್ಯದೇವ ಬಸದಿಯ ಯೆಕಸಾಲೆಯ ಪಾರ್ಶ್ವನಾಥ ತೀರ್ಥಂಕರನ ವಿವಿಧ ಪೂಜಾ ವಿಧಾನಗಳಿಗೆ ಗದ್ದೆಯನ್ನು ದಾನ ಮಾಡಿರುವ ಪ್ರಸ್ತಾಪವಿದೆ.[೨೪೧] ಮಾಣಿಕ್ಯದೇವ ಎಂಬುದು ಆದಿನಾಥ ತೀರ್ಥಂಕರನ ಹಲವು ಹೆಸರುಗಳಲ್ಲಿ ಒಂದಾಗಿದೆ. ಅಂತಾಗಿ ಇದು ಆದಿನಾಥ ಬಸದಿಯೆಂಬುದು ಸ್ಪಷ್ಟವಾಗುತ್ತದೆ. ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೯.೧೭. ಮುನವಳ್ಳಿಯ ಬಸದಿ

ಮುನವಳ್ಳಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ನಿಷಿಧಿ ಶಾಸನದಲ್ಲಿ ಸಿರಿಯಾದೇವಿ ನಿರ್ಮಿಸಿದ್ದ ಬಸದಿಯ ಪ್ರಸ್ತಾಪವಿದೆ.[೨೪೨] ಯಾಪನೀಯ ಸಂಘದ ಮುನಿಚಂದ್ರದೇವನು ಈ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೯.೧೮. ಯಡ್ರಾವಿಯ ಬಸದಿ

ಯಡ್ರಾವಿಯ ಕ್ರಿ.ಶ. ೯೭೯ರ ಶಾಸನದಲ್ಲಿ ಬಸದಿಯೊಂದಕ್ಕೆ ಸೂರಸ್ತಗಣ ಪರಂಪರೆಯ ಕನಕಪ್ರಭಮುನಿಯ ಸನ್ನಿಧಿಯಲ್ಲಿ ಆರುನೂರು ಮತ್ತರು ಭೂಮಿಯನ್ನು ದಾನ ಮಾಡಿದ ವಿವರಗಳಿವೆ.[೨೪೩] ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ನಿರ್ಮಾಣವಾಗಿದ್ದ ಈ ಬಸದಿಯೂ ಇಂದು ಉಳಿದು ಬಂದಿಲ್ಲ.

೭.೪.೫. ಮಾನಸ್ತಂಭಗಳು

ತೀರ್ಥಂಕರರು ಕೇವಲಜ್ಞಾನದ ತರುವಾಯ ಪ್ರಥಮೋಪದೇಶ ಕೈಗೊಳ್ಳುವ ಸಮವಸರಣ ಮಂಟಪದ ನಾಲ್ಕೂ ದಿಕ್ಕುಗಳ ದ್ವಾರಬಂಧಗಳ ಮುಂಭಾಗಗಳಲ್ಲಿ ಒಂದೊಂದು ಮಾನಸ್ತಂಭಗಳಿರುತ್ತವೆ. ಬಸದಿಗಳ ವಾಸ್ತು ನಿರ್ಮಾಣದ ಸಂಕೀರ್ಣದಲ್ಲಿ ಬೆಳೆದು ಬಂದಿರುವ ಮಾನಸ್ತಂಭಗಳು ಆ ಸ್ತಂಭಗಳ ಪ್ರತಿನಿಧಿಯಾಗಿವೆ. ಇವು ಆಕಾರ, ಪ್ರಮಾಣ, ಸ್ವರೂಪ ಇತ್ಯಾದಿ ಲಕ್ಷಣಗಳಲ್ಲಿಯೂ ಆ ಸ್ತಂಭಗಳನ್ನೇ ಅನುಸರಿಸುತ್ತವೆ. ಈ ಸ್ತಂಭಗಳು ಭಕ್ತರು ಬಸದಿಗಳನ್ನು ಪ್ರವೇಶಿಸುವ ಮುನ್ನ ಅವರಲ್ಲಿರುವ ಕಷಾಯಗಳನ್ನು (ಕ್ರೋಧ, ಮಾನ, ಮಾಯಾ, ಲೋಭ) ದೂರಮಾಡಿ ಅವರಲ್ಲಿ ಧಾರ್ಮಿಕ ಶ್ರದ್ಧೆಯನ್ನುಂಟು ಮಾಡುತ್ತವೆ. ಅಂತಾಗಿ ಇವುಗಳನ್ನು 'ಮಾನಸ್ತಂಭ' ಎಂದು ಕರೆಯಲಾಗಿದೆ. ಮಾನಸ್ತಂಭಗಳ ಎತ್ತರವು ಅವು

ನಿರ್ಮಾಣವಾಗುವ ಬಸದಿಗಳ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾದ ತೀರ್ಥಂಕರರ ಶರೀರಾಕೃತಿಯ ಹನ್ನೆರಡು ಪಟ್ಟು ಎತ್ತರವಾದಾಗ ಮಾತ್ರ ಅವು ಭಕ್ತರಲ್ಲಿರುವ ಕಷಾಯಾದಿಗಳನ್ನು ದೂರ ಮಾಡಲು ಸಾಧ್ಯವೆಂದು ಜೈನಾಗಮಗಳು ಮತ್ತು ಶಿಲ್ಪಶಾಸ್ತ್ರಗಳು ನಿರ್ದೇಶಿಸುತ್ತವೆ. ಪ್ರಾಚೀನ ಮತ್ತು ಅರ್ವಾಚೀನ ಬಹುತೇಕ ಮಾನಸ್ತಂಭಗಳ ಎತ್ತರವನ್ನು ಗಮನಿಸಿದರೆ ಶಿಲ್ಪಿಗಳು ಇವುಗಳ ನಿರ್ಮಾಣದಲ್ಲಿ ಆ ನಿರ್ದೇಶನವನ್ನು ಪಾಲಿಸಿರುವಂತೆ ತೋರುತ್ತದೆ. ಆದರೆ ಉಡುಪಿ ಜಿಲ್ಲೆಯ ಕಾರ್ಕಳದ ಹಿರಿಯಂಗಡಿ ಮೊದಲಾದೆಡೆಗಳಲ್ಲಿ ನಿರ್ಮಾಣವಾಗಿರುವ ಕೆಲವು ಮಾನಸ್ತಂಭಗಳನ್ನು ಭವ್ಯಾಕರ್ಷಕವಾಗಿ ತೋರಿಸುವ ಉದ್ದೇಶದಿಂದ ಆ ನಿರ್ದೇಶನವನ್ನು ಮೀರಿದ ನಿದರ್ಶನಗಳೂ ಗೋಚರಿಸುತ್ತವೆ.[೨೪೪]

ಕನ್ನಡನಾಡಿನಲ್ಲಿ ಮೊದಮೊದಲು ಚಿನ್ನ, ಬೆಳ್ಳಿ, ಹಿತ್ತಾಳೆ, ತಾಮ್ರ ಮೊದಲಾದ ಲೋಹಗಳಲ್ಲಿ ಮಾನಸ್ತಂಭಗಳನ್ನು ಮಾಡಿಸಿ ಬಸದಿಗಳಲ್ಲಿಯೇ ಪ್ರತಿಷ್ಠಾಪಿಸುವುದು ರೂಢಿಯಲ್ಲಿತ್ತು. ತರುವಾಯ ಬಸದಿಗಳ ಮುಂಭಾಗಗಳಲ್ಲಿ ಮರದಿಂದ ಮಾಡಿಸಿದ ಮಾನಸ್ತಂಭಗಳನ್ನು ನಿಲ್ಲಿಸಲಾಗುತ್ತಿತ್ತು. ತಲಕಾಡಿನ ಗಂಗರು ಮತ್ತು ಮಳಖೇಡದ ರಾಷ್ಟ್ರಕೂಟರ ಕಾಲದಿಂದ ಬಸದಿಗಳ ಮುಂಭಾಗಗಳಲ್ಲಿ ಶಿಲೆಯಲ್ಲಿ ಬೃಹತ್ತಾಕಾರದ ಭವ್ಯವಾದ ಮಾನಸ್ತಂಭಗಳನ್ನು ನಿರ್ಮಿಸುವ ಪರಂಪರೆ ಪ್ರಾರಂಭವಾಯಿತು. ಆ ಪರಂಪರೆ ಇಂದಿಗೂ ಸಾಂಗವಾಗಿ ಮುಂದುವರೆದಿದೆ. ಕೂಹುಂಡಿನಾಡಿನಲ್ಲಿ ಬಸದಿಗಳ ನಿರ್ಮಾಣದೊಂದಿಗೆ ಅವುಗಳ ಮುಂಭಾಗಗಳಲ್ಲಿ ಮಾನಸ್ತಂಭಗಳ ನಿರ್ಮಾಣ ಪರಂಪರೆಯೂ ಸಾಗಿಬಂದಿದೆ. ಇಲ್ಲಿಯ ಕೆಲವು ಶಾಸನಗಳಲ್ಲಿ ಆ ಮಾನಸ್ತಂಭಗಳ ಉಲ್ಲೇಖಗಳು ದೊರೆಯುತ್ತವೆ. ಆದರೆ ಅವು ಇಂದು ಉಳಿದು ಬಂದಿಲ್ಲ. ಶಾಸನಗಳಲ್ಲಿ ಉಲ್ಲೇಖಿತ ಮಾನಸ್ತಂಭಗಳ ವಿವರಗಳು ಈ ಕೆಳಗಿನಂತಿವೆ.

೭.೪.೫.೧. ಕೊಣ್ಣೂರದ ಮಾನಸ್ತಂಭ

ಸವದತ್ತಿಯ ರಟ್ಟರ ಆಳ್ವಿಕೆಯ ಕಾಲದಲ್ಲಿ ಕೊಣ್ಣೂರದಲ್ಲಿ ಗಾವುಂಡಗೈಯುತ್ತಿದ್ದ ಮಹಾಪ್ರಭು ನಿಧಿಯಮನು ಕ್ರಿ.ಶ. ಸುಮಾರು ೧೧ನೆಯ ಶತಮಾನದಲ್ಲಿ ತಾನು ನಿರ್ಮಿಸಿದ ಪಾರ್ಶ್ವನಾಥ ಬಸದಿಯಲ್ಲಿ ಸ್ತಂಭವನ್ನು ಸ್ಥಾಪಿಸಿ ಮನೆ ಮತ್ತು ಭೂಮಿಯನ್ನು ದಾನ ಮಾಡಿದನೆಂದು ಸ್ಥಳೀಯ ಶಾಸನದಲ್ಲಿ ಪ್ರಸ್ತಾಪವಿದೆ.[೨೪೫] ಆ ಸ್ತಂಭವು ಮಾನಸ್ತಂಭವೇ ಆಗಿದೆ. ಆದರೆ ಅದು ಇಂದು ಉಳಿದು ಬಂದಿಲ್ಲ.

೭.೪.೫.೨. ಕಲ್ಲೊಳೆಯ ಮಾನಸ್ತಂಭ

ಹಗರಟಗೆ ನಾಡಿನ ಮಹಾಮಂಡಳೇಶ್ವರ ಇಮ್ಮಡಿ ರಾಜರಸನು ಕ್ರಿ.ಶ. ೧೨೦೪ರಲ್ಲಿ ಕಲ್ಲೊಳೆಯಲ್ಲಿ ತ್ರಿಕೂಟಮಂಡಿತ ಶಾಂತಿನಾಥ ಬಸದಿಯನ್ನು ನಿರ್ಮಿಸಿ ಬಂಗಾರದ ಕಳಸ, ಮಕರತೋರಣ, ಮಾನಸ್ತಂಭಗಳನ್ನು ಮಾಡಿಸಿದನೆಂದು ಸ್ಥಳೀಯ ಶಾಸನದಲ್ಲಿ ನಿರೂಪಣೆಯಿದೆ.[೨೪೬] ಆದರೆ ಅವೆಲ್ಲವೂ ಈಗ ಎಲ್ಲಿವೆ ಎಂಬುದು ಸ್ಪಷ್ಟವಿಲ್ಲ. ಪ್ರಾಯಶಃ ಅವೆಲ್ಲವೂ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ವಿದೇಶಕ್ಕೆ ಸಾಗಿಸಲ್ಪಟ್ಟಿರುವ ಸಾಧ್ಯತೆಯಿದೆ.

೭.೪.೫.೩. ಹಣ್ಣಿಕೇರಿಯ ಮಾನಸ್ತಂಭ

ಹಣ್ಣಿಕೇರಿಯ ಕ್ರಿ.ಶ. ೧೨೮೯ರ ಶಾಸನದಲ್ಲಿ ಮಾನಸ್ತಂಭದ ಪ್ರಸ್ತಾಪವಿದೆ.[೨೪೭] ಈ ಮಾನಸ್ತಂಭವನ್ನು ಮಹಾಪ್ರಭು ಮೂಲಿಗ ಮುರಿಯರ ಅಮ್ಮಗಾಮುಂಡನು ಮಾಡಿಸಿದ್ದಾನೆ. ಇದು ಇಂದು ಉಳಿದು ಬಂದಿಲ್ಲ.

೭.೪.೬. ಶಿಲ್ಪಗಳು

ತ್ರಿಕಾಲಾಭಾದಿತವಾಗಿರುವ ಜೈನ ಪರಂಪರೆಯ ತೀರ್ಥಂಕರರು, ಯಕ್ಷ–ಯಕ್ಷಿಯರು, ಬಾಹುಬಲಿ, ಪಂಚಪರಮೇಷ್ಠಿ, ನವದೇವತೆಗಳು, ನಂದೀಶ್ವರದ್ವೀಪ, ಸಹಸ್ರಕೂಟ, ವಿದ್ಯಾದೇವಿಯರು, ಸರಸ್ವತಿ, ಶ್ರುತಸ್ಕಂಧ, ಮೇರುಪರ್ವತ, ಬ್ರಹ್ಮದೇವ, ಅಶ್ವಾರೂಢ ಕ್ಷೇತ್ರಪಾಲ, ದ್ವಾರಪಾಲಕರು, ಪ್ರತೀಹಾರರು, ಗಣಧರರ ಪಾದುಕೆಗಳು, ಯಂತ್ರಪಟಗಳು ಮೊದಲಾದ ಶಿಲ್ಪಗಳು (ಶಿಲೆಯಲ್ಲಿ ಮಾಡಿದವುಗಳು) ಮತ್ತು ಪ್ರತಿಮೆಗಳಿಗೆ (ವಿವಿಧ ಲೋಹಗಳಲ್ಲಿ ಮಾಡಿದವುಗಳು) ಸಂಬಂಧಿಸಿದ ಕಲಾಕೃತಿಗಳು ಸಮಕಾಲೀನ ಶಿಲ್ಪಶಾಸ್ತ್ರಗಳು ಮತ್ತು ಜೈನಾಗಮಗಳ ನಿರ್ದೇಶನಗಳ ಚೌಕಟ್ಟಿನಲ್ಲಿ ಅಹಿಂಸೆ, ವೈರಾಗ್ಯ, ತ್ಯಾಗ, ಅಪರಿಗ್ರಹ, ದಿಗಂಬರತ್ವ, ವೀತರಾಗಭಾವ, ಕಷಾಯರಹಿತ, ಶೋಕರಹಿತ, ಅನೇಕಾಂತವಾದ ಮೊದಲಾದ ತತ್ವ–ಸಿದ್ಧಾಂತಗಳು, ಆಚಾರ–ವಿಚಾರಗಳು, ನಂಬುಗೆ–ಸಂಪ್ರದಾಯಗಳನ್ನು ತನ್ನದೇ ಆದ ಪರಿಕಲ್ಪನೆಗಳ ಮೂಲಕ ಬೆಳೆಸಿಕೊಂಡು ಬಂದಿವೆ. ಹಾಗಾಗಿ ಜೈನ ಶಿಲ್ಪಕಲಾ ಪರಂಪರೆ ಬಹು ವೈಶಿಷ್ಟ್ಯತೆಯಿಂದ ಕೂಡಿದೆ. ಅಷ್ಟೇ ಸ್ವಾರಸ್ಯಕರವೂ ಆಗಿದೆ. ಅಂತಾಗಿ ಭಾರತೀಯ ಶಿಲ್ಪಕಲೆಯ ಪರಂಪರೆ ಮತ್ತು ಅಧ್ಯಯನದಲ್ಲಿ ಜೈನ ಶಿಲ್ಪಕಲೆಗೆ ಬಹು ವಿಶೇಷವಾದ ಸ್ಥಾನವಿದೆ.

ತೀರ್ಥಂಕರರೆಲ್ಲರೂ ಸ್ವಯಂ ಪ್ರಯತ್ನದಿಂದ ಸದಾಚಾರ, ಸತ್‌ಚಿಂತನೆ, ಸತ್‌ಸಾಧನೆ, ತಪಸ್ಸುಗಳಿಂದ ಸಂಸಾರ ಸಾಗರದ ದುಃಖಗಳಿಗೆ ಮತ್ತು ಜನನ–ಮರಣಗಳಿಗೆ ಕಾರಣೀಭೂತವಾದ ನಾಲ್ಕು ಘಾತಿ (ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯ) ಮತ್ತು ನಾಲ್ಕು ಅಘಾತಿ (ವೇದನೀಯ, ಆಯು, ನಾಮ, ಗೋತ್ರ) ಕರ್ಮಗಳ ಬಂಧನದಿಂದ ಮುಕ್ತಿಯನ್ನು ಪಡೆದು ತಮ್ಮಲ್ಲಿರುವ ಕಾಮ, ಕ್ರೋದಾಧಿ ವಿಕಾರಗಳ ಮೇಲೆ ವಿಜಯವನ್ನು ಸಾಧಿಸಿ ಅನಂತ ಚತುಷ್ಟಯ ಗುಣಗಳನ್ನು ಪಡೆದು ಭವಸಾಗರದಲ್ಲಿ ಸಿಲುಕಿ ತೊಳಲಾಡುತ್ತಿರುವ ಜೀವಾತ್ಮರಿಗೆ ಸನ್ಮಾರ್ಗವನ್ನು ಉಪದೇಶಿಸಿದ್ದಾರೆ. ಆಚಾರ್ಯ ಉಮಾಸ್ವಾಮಿ ಅವರು 'ತತ್ವಾರ್ಥಸೂತ್ರ' ಕೃತಿಯ ಮಂಗಲಾಚರಣದಲ್ಲಿ–

ಮೋಕ್ಷಮಾರ್ಗಸ್ಯ ನೇತಾರಂ ಭೇತ್ತಾರಂ ಕರ್ಮಭೂಭೃತಾಂ ।
ಜ್ಞಾತಾರಂ ವಿಶ್ವತತ್ತ್ವಾನಾಂ ವಂದೇತದ್ಗುಣಲಬ್ಧಯೇ ॥

'ಯಾರು ಮೋಕ್ಷಮಾರ್ಗದ ಪ್ರವರ್ತಕರಿದ್ದಾರೋ, ಕರ್ಮರೂಪಿಪರ್ವತವನ್ನು ಭೇದನ (ನಾಶ) ಮಾಡಿದ್ದಾರೋ, ವಿಶ್ವದ ಸಮಸ್ತ ತತ್ತ್ವಗಳನ್ನೂ ತಿಳಿದಿದ್ದಾರೋ ಅವರನ್ನು ನಾನು ಆ ಗುಣಗಳ ಪ್ರಾಪ್ತಿಗಾಗಿ ನಮಸ್ಕರಿಸುತ್ತೇನೆ' ಎಂದು ಸೂಚಿಸಿರುವಂತೆ ಜೈನಧರ್ಮೀಯರು ತೀರ್ಥಂಕರರು ತೋರಿದ ತ್ಯಾಗದ ಹಾದಿಯಲ್ಲಿ ಸಾಗುತ್ತ ತಾವೂ ಅವರಂತೆ ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳಲು ಅವರಲ್ಲಿರುವ

ಮಹಾಗುಣಗಳು ತಮಗೂ ಸ್ಫೂರ್ತಿ–ಪ್ರೇರಣೆ ಮತ್ತು ಪ್ರಾಪ್ತಿಯಾಗಲೆಂಬ ಉದ್ದೇಶದಿಂದ ಅವರ ಮಾನವ ರೂಪದ ಸಹಜ ಪ್ರತಿರೂಪಗಳನ್ನು ಬಸದಿಗಳಲ್ಲಿ ಪ್ರತಿಷ್ಠಾಪಿಸಿ ಆರಾಧಿಸುತ್ತಾರೆ. ಇದರಿಂದ ತೀರ್ಥಂಕರರ ಪೂಜೆ ಮತ್ತು ಆರಾಧನೆಯನ್ನು ಮಾಡುವುದು ಅವರಲ್ಲಿರುವ ಗುಣಗಳು ತಮಗೆ ಸ್ಫೂರ್ತಿ–ಪ್ರೇರಣೆಯಾಗಲೆಂಬ ಉದ್ದೇಶವೇ ಹೊರತು ಪ್ರಾಪಂಚಿಕ ಕಷ್ಟಗಳ ಪರಿಹಾರವಾಗಲೆಂದಲ್ಲ ಎಂಬುದು ಖಚಿತವಾಗುತ್ತದೆ. ವೈರಾಗ್ಯ ಮೂಲವಾಗಿರುವ ತೀರ್ಥಂಕರರ ಶಿಲ್ಪ ಮತ್ತು ಪ್ರತಿಮೆಗಳು ಬಾಹ್ಯ ಸೌಂದರ್ಯಕ್ಕಿಂತ ಅಂತರ್ಮುಖ (ಅಂತಃಶಕ್ತಿ, ಶಾಂತಮುಖಮುದ್ರೆ) ಸೌಂದರ್ಯದೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಿವೆ. ಅಂತಾಗಿ ಆತ್ಮದ ಪರಿಶುದ್ಧತೆಯನ್ನು ಹೊರತರುವುದು ಹಾಗೂ ಆತ್ಮೋನ್ನತಿಗಾಗಿ ವ್ಯವಹಾರಿಕವಾದ ಮತ್ತು ಸಮಧುರವಾದ ಹಿನ್ನೆಲೆಯನ್ನೇರ್ಪಡಿಸುವುದು ಜೈನ ಶಿಲ್ಪಕಲೆಯ ಪ್ರಧಾನ ಉದ್ದೇಶವಾಗಿದೆ.[೨೪೮]

ಕೂಹುಂಡಿನಾಡಿನ ಪ್ರದೇಶದಲ್ಲಿ ಬಾದಾಮಿ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ದೇವಗಿರಿಯ ಸೇವುಣರು, ಕೊಲ್ಲಾಪುರದ ಶಿಲಾಹಾರರು, ಸವದತ್ತಿಯ ರಟ್ಟರು, ಕಲ್ಯಾಣದ ಕಲಚೂರಿಯರು ಮೊದಲಾದವರ ಆಳ್ವಿಕೆಯ ಕಾಲಾವಧಿಯಲ್ಲಿ ಜೈನ ಶಿಲ್ಪಗಳ ಪ್ರತಿಷ್ಠಾಪನೆ ಮತ್ತು ಆರಾಧನಾ ಪರಂಪರೆ ನಿರಂತರವಾಗಿ ಮುಂದುವರೆದು ಬಂದಿದೆ. ಈ ಮನೆತನಗಳ ಅರಸರು, ರಾಣಿಯರು, ಯುವರಾಜರು, ಮಹಾಮಂಡಳೇಶ್ವರರು, ಮಹಾಸಾಮಂತರು, ಗಾವುಂಡರು, ಅಧಿಕಾರಿಗಳು, ಶ್ರಾವಕರು, ವರ್ತಕರು, ಜೈನಾಭಿಮಾನಿಗಳು ಜೈನ ತತ್ವ–ಸಿದ್ಧಾಂತಗಳ ಪ್ರಭಾವ ಮತ್ತು ಮುನಿಗಳ ಸ್ಫೂರ್ತಿ–ಪ್ರೇರಣೆಯಿಂದ, ಜೈನ ಧರ್ಮದ ಸರ್ವತೋಮುಖ ಪ್ರಗತಿ ಮತ್ತು ತಮ್ಮ ಶ್ರೇಯೋಭಿವೃದ್ಧಿಗಾಗಿ ಬಸದಿಗಳ ನಿರ್ಮಾಣದೊಂದಿಗೆ ತೀರ್ಥಂಕರರು, ಯಕ್ಷ–ಯಕ್ಷಿಯರು, ಬಾಹುಬಲಿ, ಸಹಸ್ರಕೂಟ, ಕ್ಷೇತ್ರಪಾಲ ಮೊದಲಾದ ಶಿಲ್ಪಗಳನ್ನು ಪ್ರತಿಷ್ಠಾಪಿಸಿದ್ದಾರೆ. ಕೆಲವರು ತಮ್ಮ ಇಷ್ಟಾರ್ಥಸಿದ್ಧಿಗಾಗಿ ಆಚರಿಸುತ್ತಿದ್ದ ವಿವಿಧ ನೋಂಪಿಗಳ ಉದ್ಯಾಪನ ಸಂದರ್ಭದಲ್ಲಿ ಚತುರ್ವಿಧ (ಅಭಯ, ಆಹಾರ, ಔಷಧ, ಶಾಸ್ತ್ರ) ದಾನಗಳ ಜೊತೆಗೆ ತೀರ್ಥಂಕರರಾದಿಯಾಗಿ ವಿವಿಧ ಶಿಲ್ಪಗಳು ಮತ್ತು ಪ್ರತಿಮೆಗಳನ್ನು ಮಾಡಿಸಿ ಬಸದಿಗಳಲ್ಲಿ ಪ್ರತಿಷ್ಠಾಪಿಸಲು ದಾನ ಮಾಡುತ್ತಿದ್ದರು. ಕೆಲವು ಮಹಾದಾನಿಗಳು ತಮ್ಮ ಸಂಪತ್ತವನ್ನೆಲ್ಲವನ್ನೂ ಧರ್ಮಪ್ರಭಾವನೆ, ಚತುರ್ವಿಧದಾನ, ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಇತ್ಯಾದಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿನಿಯೋಗಿಸಿದ್ದಾರೆ.

ನಾಗನೂರದ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಮೂಲಸಂಘದ ಕಾಣೂರುಗಣ ಪರಂಪರೆಯ ಕನಕಚಂದ್ರಮುನಿಯ ಶಿಷ್ಯ ಕನ್ನರದೇವನ ಪ್ರೀತಿಯ ಮಂತ್ರಿ ಜಿನಪ್ರತಿಮೆಯನ್ನು ಮಾಡಿಸಿದ ಪ್ರಸ್ತಾಪವಿದೆ.[೨೪೯] ಈ ಶಿಲ್ಪವು ಇಂದಿಗೂ ಉಳಿದು ಬಂದಿದೆ. ಆದರೆ ತುಂಬಾ ತ್ರುಟಿತವಾಗಿದೆ. ಅಂತಾಗಿ ಪ್ರತಿಮಾ ಲಕ್ಷಣಗಳು ಸ್ಪಷ್ಟವಾಗುವುದಿಲ್ಲ. ಉಗರಗೋಳದ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠದ ಪಟ್ಟಿಕೆಯ ಮೇಲಿರುವ ಶಾಸನದಲ್ಲಿ ಶ್ರೀ ಕಂಡೂರುಗಣ ಪರಂಪರೆಯ ಮೋನಿಭಟ್ಟಾರಕನ ಶಿಷ್ಯೆ ಚಂದ್ರಮತಿಕಂತಿ ತೀರ್ಥಂಕರನ

ಶಿಲ್ಪವನ್ನು ಮಾಡಿಸಿದ ನಿರೂಪಣೆಯಿದೆ.[೨೫೦] ಈ ಪೀಠದ ಮೇಲೆ ಪ್ರತಿಷ್ಠಾಪಿತವಾಗಿದ್ದ ಶಿಲ್ಪ ಇಂದು ಉಳಿದು ಬಂದಿಲ್ಲ. ಹಿರೇಕುಂಬಿಯ ಕಲ್ಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ತೀರ್ಥಂಕರನ ಶಿಲ್ಪದ ಪಾದಪೀಠದ ಮೇಲಿರುವ ಶಾಸನದಲ್ಲಿ ಯಾಪನೀಯ ಸಂಘದ ಸಿದ್ಧಾಂತದೇವನ ಶಿಷ್ಯ ಪದ್ಮನಂದಿ ಮಾಡಿಸಿದ ಪ್ರತಿಮೆ ಎಂಬ ನಿರೂಪಣೆಯಿದೆ.[೨೫೧] ಈ ಶಿಲ್ಪವು ತುಂಬಾ ತ್ರುಟಿತವಾಗಿದೆ. ಅಂತಾಗಿ ಪ್ರತಿಮಾ ಲಕ್ಷಣಗಳು ಸ್ಪಷ್ಟವಾಗುವುದಿಲ್ಲ. ಕರೋಶಿಯ ಕೋಟೆಯ ಆವರಣದಲ್ಲಿರುವ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಸಿಂಹಪೀಠದ ಮೇಲಿರುವ ಅಕ್ಷರಗಳೆಲ್ಲವೂ ಸವೆದಿವೆ.[೨೫೨] ಹೀಗಾಗಿ ಇದರ ವಿವರಗಳು ಮತ್ತು ಇದರ ಮೇಲೆ ಪ್ರತಿಷ್ಠಾಪಿತವಾಗಿದ್ದ ತೀರ್ಥಂಕರನ ಶಿಲ್ಪದ ಕುರಿತಾಗಿ ಮಾಹಿತಿಗಳು ಲಭ್ಯವಿಲ್ಲ.

೭.೫. ಬೌದ್ಧ ಧರ್ಮ

ಭಾರತದ ಪ್ರಾಚೀನ ಧರ್ಮಗಳಲ್ಲಿ ಬೌದ್ಧ ಧರ್ಮವೂ ಒಂದಾಗಿದೆ. ವೈದಿಕ ಧರ್ಮದ ಮೌಢ್ಯತೆಯಿಂದ ಬೇಸತ್ತ ಜನಸಾಮಾನ್ಯರು ಸರಳ ತತ್ವಗಳ ಧರ್ಮಗಳತ್ತ ನೋಡುತ್ತಿರುವಾಗ ಕ್ರಿ.ಪೂ. ಸುಮಾರು ೬ನೆಯ ಶತಮಾನದಲ್ಲಿ ಗೌತಮ ಬುದ್ಧನಿಂದ ಬೌದ್ಧ ಧರ್ಮವು ಹುಟ್ಟಿಕೊಂಡಿತು. ಈ ಧರ್ಮವು ಹಿಂದೂ ಧರ್ಮದ ವರ್ಣಾಶ್ರಮ ವ್ಯವಸ್ಥೆಯ ಮೇಲೆ ಪ್ರಭಾವ ಬೀರಿ ಅದರ ಕಟ್ಟಳೆಗಳನ್ನು ಜನಸಾಮಾನ್ಯರಿಗೆ ತಿಳಿಯಪಡಿಸಿತು. ಅಂತಾಗಿ ಈ ಧರ್ಮವು ಬಹು ಬೇಗನೆ ಜನಪ್ರಿಯವಾಯಿತು. ಇದು ಮೌರ್ಯ ಮನೆತನದ ಅಶೋಕ ಚಕ್ರವರ್ತಿಯಿಂದ ಕ್ರಿ.ಪೂ. ಸುಮಾರು ೩ನೆಯ ಶತಮಾನದಲ್ಲಿ ದೇಶ–ವಿದೇಶಗಳಲ್ಲಿ ವ್ಯಾಪಕವಾಗಿ ಪ್ರಸಾರವಾಯಿತು. ದೇಶದಲ್ಲಿ ಪ್ರಚಾರವಾದಂತೆ ಕನ್ನಡನಾಡಿನಲ್ಲಿಯೂ ಈ ಧರ್ಮವು ಪ್ರಸಾರವಾಯಿತು. ಈ ನಾಡಿನಲ್ಲಿ ಚಿತ್ರದುರ್ಗ ಜಿಲ್ಲೆಯ ಸಿದ್ಧಾಪೂರ, ಜಟಿಂಗರಾಮೇಶ್ವರ, ಬ್ರಹ್ಮಗಿರಿ, ರಾಯಚೂರು ಜಿಲ್ಲೆಯ ಮಸ್ಕಿ, ಕೊಪ್ಪಳ, ಬಳ್ಳಾರಿ ಜಿಲ್ಲೆಯ ಉದೆಗೋಳಂ, ನಿಟ್ಟೂರು, ಗುಲಬರ್ಗಾ ಜಿಲ್ಲೆಯ ಸನ್ನತಿಗಳಲ್ಲಿ ಅಶೋಕನ ಧರ್ಮಶಾಸನಗಳು ಬೆಳಕಿಗೆ ಬಂದಿವೆ. ಆದರೆ 'ಬೌದ್ಧ ಧರ್ಮವು ಕರ್ನಾಟಕದಲ್ಲಿ ಪ್ರಬಲವಾಗಿತ್ತು ಎನ್ನುವುದಕ್ಕಿಂತ ಮೌರ್ಯ ಸಾಮ್ರಾಜ್ಯ ಇಲ್ಲಿಯವರೆಗೂ ಹಬ್ಬಿತ್ತು ಎಂಬುದಕ್ಕೆ ಇವು ಪ್ರಬಲ ಸಾಧನಗಳು' ಎಂದು ಎಂ. ಚಿದಾನಂದಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೫೩] ಚಂದ್ರವಳ್ಳಿಯಲ್ಲಿ ಕ್ರಿ.ಪೂ. ಆರಂಭದ ಬುದ್ಧನ ಶಿಲ್ಪಗಳು ದೊರಕಿರುವುದರಿಂದ ಇಲ್ಲಿ ಬೌದ್ಧ ಧರ್ಮದ ಅನುಯಾಯಿಗಳು ನೆಲೆಸಿದ್ದರೆಂಬುದು ಸ್ಪಷ್ಟವಾಗುತ್ತದೆ.[೨೫೪] ತೇರದಾಳದ ಕ್ರಿ.ಶ. ೧೧೨೩ರ ಶಾಸನದಲ್ಲಿ–

ನಿರುಪಮ ಗನ್ಧಶಾಳಿವನದಿಂ ಬನದಿಂ ಕೊಳದಿಂ
ತಟಾಕದಿಂ ಗಿರಿವನ ತೋಯದುರ್ಗ್ಗಕುಳದಿಂದಗಳಿಂ
ಬುಧ ಮಾಧವಾರ್ಕ್ಕ ಶಂಕರ ಜಿನಸದುಮದಿಂ ವಿಪಣಿ
ಮಾರ್ಗದಿನೊಪ್ಪುವ ತೇರಿದಾಳ ಪಂನ್ನೆರಡಱ ಚೆಲ್ವನೆಯ್ದೆ
ಪೊಗಳಲುಕಜನುಂ ನಱಿಯಂ ಧರಿತ್ರಿಯೊಳು ॥

ಎಂದು ಬುದ್ಧನ ಪ್ರಸ್ತಾಪವಿದೆ.[೨೫೫] ಆದರೆ ಇಲ್ಲಿ ಬೌದ್ಧ ಧರ್ಮದ ಕುರಿತು ಯಾವುದೇ ಶಿಲ್ಪಾವಶೇಷಗಳು ಗೋಚರಿಸುವುದಿಲ್ಲ. ಕೂಹುಂಡಿನಾಡಿನ ಕೆಲವೆಡೆಗಳಲ್ಲಿ ಬೌದ್ಧ ಧರ್ಮದ ಅನುಯಾಯಿಗಳು ಇದ್ದರೆಂಬುದು ಸ್ಪಷ್ಟವಾಗುತ್ತದೆ.

ಹೀಗೆ ಕೂಹುಂಡಿನಾಡಿನ ಪ್ರದೇಶದಲ್ಲಿ ಶೈವ, ವೈಷ್ಣವ, ಜೈನ ಮತ್ತು ಬೌದ್ಧ ಧರ್ಮಗಳು ವಿಶಿಷ್ಟವಾದ ಸ್ಥಾನ–ಮಾನವನ್ನು ಹೊಂದಿದ್ದವು. ಈ ಎಲ್ಲ ಧರ್ಮಗಳು ಸೌಹಾರ್ದತೆ ಮತ್ತು ಸಾಮರಸ್ಯದಿಂದ ಕೂಡಿದ್ದವು. ಆಯಾ ಧರ್ಮಗಳ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ದಾನ–ದತ್ತಿಗಳು ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳು ಸಾಂಗವಾಗಿ ಜರುಗಲು ಆಯಾ ಧರ್ಮಗಳ ಆಚಾರ್ಯರ ಪಾತ್ರ ಮಹತ್ವದ್ದಾಗಿದೆ. ಈ ನಾಡಿನಲ್ಲಿ ಮತೀಯ ಗಲಭೆಗಳಾಗಿರುವ ಕುರಿತಾಗಿ ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗಳಿಲ್ಲ. ಈ ನಾಡಿನ ಜನಸಾಮಾನ್ಯರಲ್ಲಿ ಸೌಹಾರ್ದತೆ ಮತ್ತು ಸದ್ಭಾವನೆಯಿತ್ತು. ಎಲ್ಲಿಯೂ ಮತೀಯ ಗಲಭೆಗಳೂ ಸಂಭವಿಸಿಲ್ಲ. ಆದರೂ ಕೆಲವು ದೇವಾಲಯಗಳು ಮತ್ತು ಬಸದಿಗಳು ಸಮೂಲನಾಶವಾಗಿರುವುದು ಮತ್ತು ರೂಪಾಂತರವಾಗಿರುವುದು ಗಮನೀಯವಾಗಿದೆ. ಸವದತ್ತಿಯ ರಟ್ಟರು ಜೈನರಾಗಿದ್ದೂ, ಉಳಿದ ಧರ್ಮಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ಧಾರ್ಮಿಕ ಸಹಿಷ್ಣುತೆಯನ್ನು ಮೆರೆದಿದ್ದಾರೆ. ಇದಕ್ಕೆ ಅವರು ಕಟ್ಟಿಸಿರುವ ಮತ್ತು ಅವರ ಕಾಲಾವಧಿಯಲ್ಲಿ ನಿರ್ಮಾಣವಾಗಿರುವ ದೇವಾಲಯಗಳು, ಬಸದಿಗಳೇ ಸಾಕ್ಷಿಗಳಾಗಿವೆ. ಈ ಎಲ್ಲ ವಿಚಾರಗಳು ಕನ್ನಡನಾಡಿನ ಧಾರ್ಮಿಕ ವ್ಯವಸ್ಥೆಯ ತಲಸ್ಪರ್ಶಿ ಅಧ್ಯಯನದಲ್ಲಿ ಕೂಹುಂಡಿನಾಡಿನ ಕೊಡುಗೆಯೂ ಅಪಾರವಾಗಿದೆ ಎಂಬುದನ್ನು ದೃಢಪಡಿಸುತ್ತವೆ.

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಸ್.ಕೆ., ಮೂರ್ತಿಶಿಲ್ಪ ನೆಲೆ–ಹಿನ್ನೆಲೆ (೧೯೭೫), ಪು. ೪–೫.

೨. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (೧೯೬೬), ಪು. ೫೨.

೩. ಕಲಬುರ್ಗಿ ಎಂ.ಎಂ., ಮಾರ್ಗ ಸಂ. ೩ (೧೯೯೮), ಪು. ೧೪–೫೫.

೪. ಪಾಡಿಗಾರ ಶ್ರೀನಿವಾಸ, ಪುರಾತತ್ವ ಮತ್ತು (ವೀರ)ಶೈವ ಪರಂಪರೆ, ವೀರಶೈವ ದರ್ಶನ (೨೦೦೩), ಪು. ೨೯೫.

೫. ಕಡಪಟ್ಟಿ ಎಂ.ಎನ್., ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ (೨೦೦೮), ಪು. ೧೧–೧೭.

೬. ಅದೇ, ಪು. ೧೬–೧೯.

೭. ಹನುಮಂತರಾವ್ ಜಿ., ಪಾಶುಪತ ಆಗಮಗಳು (೧೯೭೨), ಪು. ೪.

೮. ಕಡಪಟ್ಟಿ ಎಂ.ಎನ್., ಪೂರ್ವೋಕ್ತ, ಪು. ೨೦.

೯. ಇ.ಆಯ್. ಸಂ. ೨೧, ಶಾ.ಸಂ. ೧.

೧೦. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೫೧–೧೫೨.

೧೧. ಅದೇ, ಪು. ೧೨೮–೧೫೮.

೧೨. ಅದೇ.

೧೩. ಚಿದಾನಂದಮೂರ್ತಿ ಎಂ., ಸಂಶೋಧನ ತರಂಗ (೧೯೬೬), ಪು. ೮೦–೮೬ ಮತ್ತು ೨೪೮–೨೪೯.

೧೪. ಹಿರೇಮಲ್ಲೂರ ಈಶ್ವರನ್, ಲಿಂಗಾಯತ ಧರ್ಮ : ಒಂದು ಅಧ್ಯಯನ (೧೯೯೭), ಪು. ೨೨.

೧೫. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೧.

೧೬. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೨೭.

೧೭. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೧.

೧೮. ಇ.ಆಯ್. ಸಂ. XIII, ಶಾ.ಸಂ. ೩/ಎ.

೧೯. ಪಾಟೀಲ ಶಿ.ಬಾ., ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ (೧೯೯೫), ಪು. ೯೭.

೨೦. ಕುಂದಣಗಾರ ಕೆ.ಜಿ. (ಸಂ.), ಇನ್ಸ್ಕ್ರಿಪ್ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಹಾಪುರ ಸ್ಟೇಟ್ (೧೯೩೯), ಶಾ.ಸಂ. ೨೨.

೨೧. ಜಂಬನವರ ಆಯ್.ಡಿ., ಸವದತ್ತಿ ತಾಲ್ಲೂಕಿನ ಪುಣ್ಯ ಕ್ಷೇತ್ರಗಳು : ಒಂದು ಅಧ್ಯಯನ (೧೯೯೭), ಪು. ೨೧.

೨೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೫.

೨೩. ಎಸ್.ಆಯ್.ಆಯ್. ಸಂ. XX, ಪು. ೩೦೩.

೨೪. ಅನುಬಂಧ : ಒಂದು, ಶಾ.ಸಂ. ೨.

೨೫. ಅದೇ.

೨೬. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೦–೨೪೧.

೨೭. ಅದೇ.

೨೮. ಅದೇ.

೨೯. ಅದೇ.

೩೦. ಅದೇ.

೩೧. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೧೯).

೩೨. ಕೆ.ಆಯ್. ಸಂ. I, ಶಾ.ಸಂ. ೩೧.

೩೩. ಅದೇ, ಶಾ.ಸಂ. ೫೧ ಮತ್ತು ೫೨.

೩೪. ಇ.ಆಯ್. ಸಂ. XVI, ಶಾ.ಸಂ. ೧.

೩೫. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.

೩೬. ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧ ಮತ್ತು ೫೨.

೩೭. ಇ.ಆಯ್. ಸಂ. XIX, ಪು. ೨೬.

೩೮. ಅದೇ.

೩೯. ಅದೇ.

೪೦. ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ. ೧೩.

೪೧. ಕಡಪಟ್ಟಿ ಎಂ.ಎನ್., ಪೂರ್ವೋಕ್ತ, ಪು. ೧೧-೩೨.

೪೨. ಅದೇ, ಪು. ೩೭.

೪೩. ಅದೇ, ಪು. ೪೯-೫೧.

೪೪. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೨).

೪೫. ಅಪ್ರಕಟಿತ ಶಾಸನ(ಅನುಬಂಧ : ಒಂದು, ಶಾ.ಸಂ. ೧೧).

೪೬. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೧೯).

೪೭. ಅಪ್ರಕಟಿತ ಶಾಸನ (ಅನುಬಂಧ : ಒಂದು, ಶಾ.ಸಂ. ೨೦).

೪೮. ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೧೧), ಪು. ೯೫-೯೬, ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು.

೪೯. ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೨, ಪು. ೨೪೦.

೫೦. ಕೆ.ಆಯ್. ಸಂ. I, ಶಾ.ಸಂ. ೩೦.

೫೧. ಅದೇ, ಶಾ.ಸಂ. ೩೧.

೫೨. ಅದೇ.

೫೩. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೭-೧೬೮.

೫೪. ಆಯ್.ಎ. ಸಂ. V, ಶಾ.ಸಂ. ೨.

೫೫. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೬೦.

೫೬. ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೧೫೨.

೫೭. ಅದೇ, ಪು. ೧೫೬.

೫೮. ಅದೇ, ಪು. ೧೫೨.

೫೯. ಅದೇ, ಪು. ೧೫೭.

೬೦. ಅದೇ, ಪು. ೧೫೨.

೬೧. ಅದೇ, ಪು. ೧೫೭.

೬೨. ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧-೧೦೪.

೬೩. ಅದೇ.

೬೪. ಅದೇ.

೬೫. ಅದೇ.

೬೬. ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦.

೬೭. ಅದೇ.

೬೮. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೬೯. ಅದೇ.

೭೦. ಅದೇ.

೭೧. ಅದೇ.

೭೨. ಅದೇ.

೭೩. ಕೆ.ಆಯ್. ಸಂ. V, ಶಾ.ಸಂ. ೬

೭೪. ಇ.ಆಯ್. ಸಂ. XIX, ಪು. ೨೬.

೭೫. ಇತಿಹಾಸ ದರ್ಶನ ಸಂ. ೭.

೭೬. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್ಟಿವ್ ಲಿಸ್ಟ ಆಫ್ ಸ್ಟೋನ್ ಅಂಡ್ ಕಾಪರ್-ಪ್ಲೇಟ್ ಇನ್ಸ್‌ಕ್ರಿಪ್‌ಶನ್ಸ್ ಎಗ್‌ಝಾಮಿನ್ಡ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೩೦, ಪು. ೬.

೭೭. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯ (ಬಾಗಲಕೋಟೆ ಜಿಲ್ಲೆ-೨೦೦೫), ಶಾ.ಸಂ. ೮, ಪು. ೧೩೬-೧೩೭.

೭೮. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೬.

೭೯. ಅದೇ, ಪು. ೨೪೦-೨೪೧.

೮೦. ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧, ೫೨, ೫೩.

೮೧. ಕೆ.ಆಯ್. ಸಂ. V, ಶಾ.ಸಂ. ೫೧ ಮತ್ತು ೫೨.

೮೨. ಕೆ.ಆಯ್. ಸಂ. VI, ಶಾ.ಸಂ. ೭೩.

೮೩. ಪಾಡಿಗಾರ ಶ್ರೀನಿವಾಸ, ವಿಷ್ಣು ಕಲ್ಟ್ ಇನ್ ಕರ್ನಾಟಕ (೧೯೯೬), ಪು. ೧೨-೨೩.

೮೪. ಅದೇ.

೮೫. ಅದೇ.

೮೬. ಅದೇ.

೮೭. ಅದೇ.

೮೮. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೬೭.

೮೯. ಎಸ್.ಆಯ್.ಆಯ್. ಸಂ. XVIII, ಪು. ೩೦೩.

೯೦. ಅದೇ, ಸಂ. IX, ಪು. ೧೪೨.

೯೧. ಇ.ಆಯ್. ಸಂ. XVI, ಶಾ.ಸಂ. ೧.

೯೨. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೭೬೦.

೯೩. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೨.

೯೪. ಇ.ಆಯ್. ಸಂ. XVI, ಶಾ.ಸಂ. ೧.

೯೫. ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ. ೪೪೮, ಪು. ೯೭.

೯೬. ಪಾಡಿಗಾರ ಶ್ರೀನಿವಾಸ ವ್ಹಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಆಫ್ ದಿ ಚಲುಕ್ಯಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೪೭, ಪು. ೭೮-೮೦.

೯೭. ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ಪೂರ್ವೋಕ್ತ, ಶಾ.ಸಂ. ೪೦, ಪು. ೭.

೯೮. ಪಾಡಿಗಾರ ಶ್ರೀನಿವಾಸ ವ್ಹಿ., ವಿಷ್ಣು ಕಲ್ಟ್ ಇನ್ ಕರ್ನಾಟಕ (೧೯೯೬), ಪು. ೧೩-೨೨.

೯೯. ಪ್ರಭಾಕರ ಎಂ.ಎನ್., ದೇವಾಲಯ ವಾಸ್ತು ಚಂದ್ರಿಕೆ (೨೦೦೦), ಪು. ೧೭

೧೦೦. ಪಾಡಿಗಾರ ಶ್ರೀನಿವಾಸ ವ್ಹಿ., ಪೂರ್ವೋಕ್ತ, ಪು. ೧-೧೧.

೧೦೧. ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೧೬೨-೧೬೩.

೧೦೨. ಕೆ.ಆಯ್. ಸಂ. I, ಶಾ.ಸಂ. ೩೩.

೧೦೩. ಅದೇ, ಶಾ.ಸಂ. ೩೦.

೧೦೪. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೬.

೧೦೫. ಶಾಂತಿರಾಜಶಾಸ್ತ್ರಿ ಎ. (ಸಂ.), ಮಹಾಪುರಾಣ ಸಂ. ೧ (೧೯೮೧), ಪರ್ವ ೩, ಪ.ಸಂ. ೧೩-೨೨, ಪು. ೭೦-೭೨.

೧೦೬. ಅದೇ.

೧೦೭. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ : ಒಂದು ಸಾಂಸ್ಕೃತಿಕ ಅಧ್ಯಯನ (೨೦೦೨), ಪು. ೧೪-೧೬.

೧೦೮. ಅದೇ.

೧೦೯. ಹಂಜೆ ಅಪ್ಪಣ್ಣ ಎನ್., "ಸಾಹಿತ್ಯ ಮತ್ತು ಶಾಸನಗಳಲ್ಲಿ ಭದ್ರಬಾಹು ಭಟ್ಟಾರಕರು ಮತ್ತು ಚಂದ್ರಗುಪ್ತ", ಅರವಂಟಿಗೆ ಸಂ. ೧/೧ (ಜೂನ್-೨೦೦೮), ಪು. ೧೦-೧೯, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.

೧೧೦. ಹಂಜೆ ಅಪ್ಪಣ್ಣ ಎನ್., "ಆದಿನಾಥ ತೀರ್ಥಂಕರನ ಶಿಲ್ಪಗಳ ಪ್ರತಿಮಾ ಲಕ್ಷಣಗಳು", ಅರವಂಟಿಗೆ ಸಂ. ೩/೧ (ಸಪ್ಟೆಂಬರ್-೨೦೧೦), ಪು. ೧೫-೧೯, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.

೧೧೨. ಕಮಲಾ ಹಂಪನಾ, "ಮರೆತುಹೋದ ಜೈನ ಮಹಾಕ್ಷೇತ್ರಗಳು", ಬದ್ದವಣ (೨೦೦೩), ಪು. ೭೧.

೧೧೩. ನಾವಲಗಿ ಸಿ.ಕೆ., "ಕೊಣ್ಣೂರು : ಒಂದು ಜೈನ ಐತಿಹ್ಯ", ಜೈನ ಕ್ಷೇತ್ರಗಳ ಐತಿಹ್ಯ (೧೯೯೦), ಕೆಂಪಣ್ಣವರ ಪಿ.ಜಿ. ಮತ್ತು ಜೋಡಟ್ಟಿ ಟಿ.ಆರ್. (ಸಂ.), ಪು. ೮೬-೮೭.

೧೧೪. ಹಂಜೆ ಅಪ್ಪಣ್ಣ ಎನ್., "ಬೆಳಗಾವಿ ಜಿಲ್ಲೆಯ ಬಸದಿಗಳು ಮತ್ತು ಶಿಲ್ಪಗಳು", ಶೋಧ (ಜನೇವರಿ-೨೦೧೦), ಪು. ೬-೩೯, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.

೧೧೫. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೦೪.

೧೧೬. ಅದೇ.

೧೧೭. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೭೧-೮೦.

೧೧೮. ಮಿರ್ಜಿ ಅಣ್ಣಾರಾಯ, ಜೈನಧರ್ಮ (೧೯೯೭), ಪು. ೫೩-೮೪.

೧೧೯. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೨೫. ಶಿರೂರ ಬಿ.ವ್ಹಿ., ಶ್ರವಣಬೆಳ್ಗೊಳ : ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ (೧೯೭೬), ಪು. ೮೬. ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪು. ೪೫.

೧೨೦. ಕೆ.ಆಯ್. ಸಂ. I, ಶಾ.ಸಂ. ೩೨.

೧೨೧. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ-೧೯೭೪), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೨೨. ಇ.ಆಯ್. ಸಂ. XIII, ಶಾ.ಸಂ. ೩/ಎ-ಬಿ.

೧೨೩. ಅದೇ, ಸಂ. XVIII, ಶಾ.ಸಂ. ೨೨/ಬಿ.

೧೨೪. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೨೫. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೭.

೧೨೬. ಮಹೀಶವಾಡಿ ಬಿ.ಬಿ., "ಮುನಿಧರ್ಮ", ಕರ್ನಾಟಕ ಭಾರತಿ ಸಂ. ೭/೧ (ಅಗಸ್ಟ್-೧೯೭೪), ಪು. ೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೨೭. ಎ.ಆಯ್. ಸಂ. XXI, ಶಾ.ಸಂ. ೪೩.

೧೨೮. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೨೦-೨೩೯.

೧೨೯. ಅದೇ.

೧೩೦. ಅದೇ.

೧೩೧. ಅದೇ.

೧೩೨. ಕೆ.ಆಯ್. ಸಂ. V, ಶಾ.ಸಂ. ೩೩.

೧೩೩. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೩೪. ಅದೇ.

೧೩೫. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ–೨೦೦೨), ಪು. ೫೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಕೆ.ಆಯ್. ಸಂ. V, ಶಾ.ಸಂ. ೩೩. ಎ.ಆಯ್. ಸಂ. XXXII, ಪು. ೨೧೭. ಕೆ.ಆಯ್. ಸಂ. I, ಶಾ.ಸಂ. ೩೨. ಎ.ಆರ್.ಎಸ್.ಆಯ್.ಇ. ೧೯೬೧–೬೨, ಶಾ.ಸಂ. ೬೧, ಪು. ೯೭.

೧೩೬ ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೩೭. ಅದೇ.

೧೩೮. ಕೆ.ಆಯ್. ಸಂ. V, ಶಾ.ಸಂ. ೩೩.

೧೩೯. ಬೊಮ್ಮರಸ ಪಂಡಿತ ಎಸ್. (ಸಂ.), ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣ (೧೯೫೬), ಪು. ೮.

೧೪೦. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೪೧. ಕೆ.ಆಯ್. ಸಂ. V, ಶಾ.ಸಂ. ೩೩.

೧೪೨. ಬೊಮ್ಮರಸ ಪಂಡಿತ ಎಸ್. (ಸಂ.), ಪೂರ್ವೋಕ್ತ, ಪು. ೧೦.

೧೪೩. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೪೪. ಕೆ.ಆಯ್. ಸಂ. V, ಶಾ.ಸಂ. ೩೩.

೧೪೫. ತಬೋಜಿ ಚಂದ್ರಶೇಖರ ಬಿ., "ಕೊಣ್ಣೂರಿನ ಜಿನಬಿಂಬ ಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೨೦–೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೪೬ ಅದೇ.

೧೪೭ ತಬೋಜಿ ಚಂದ್ರಶೇಖರ ಬಿ., "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್–VII (೨೦೦೬), ಪು. ೧೭೩.

೧೪೮. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೪೯. ಎ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೧೫೦. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೫೧. ಕೆ.ಆಯ್. ಸಂ. V, ಶಾ.ಸಂ. ೩೩. ಎ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೧೫೨. ಬೊಮ್ಮರಸ ಪಂಡಿತ ಎಸ್. (ಸಂ.), ಪೂರ್ವೋಕ್ತ, ಪು. ೧೧.

೧೫೩. ಜೆ.ಬಿ.ಬಿ.ಆರ್.ಎ.ಎಸ್., ಪೂರ್ವೋಕ್ತ.

೧೫೪. ಎ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೧೫೫. ಬೊಮ್ಮರಸ ಪಂಡಿತ ಎಸ್. (ಸಂ.), ಪೂರ್ವೋಕ್ತ, ಪು. ೧೨.

೧೫೬. ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೨, ಪು. ೨೩.

೧೫೭. ಅದೇ, ಶಾ.ಸಂ. ೧೭, ಪು. ೩೩.

೧೫೮. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.

೧೫೯. ಅದೇ.

೧೬೦. ಅದೇ.

೧೬೧. ಅದೇ.

೧೬೨. ಅದೇ, ಶಾ.ಸಂ. ೬೨.

೧೬೩. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೮, ಪು. ೩೪.

೧೬೪. ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.

೧೬೫. ಅದೇ. ಕೆ.ಆಯ್. ಸಂ. VI, ಶಾ.ಸಂ. ೧೪.

೧೬೬. ಅದೇ.

೧೬೭. ಅದೇ.

೧೬೮. ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ೩೩, ಪು. ೧೨.

೧೬೯. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್–೧೯೭೮), ಪು. ೩೩, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೭೦. ಅದೇ.

೧೭೧. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ–೨೦೦೨), ಶಾ.ಸಂ. ೪, ಪು. ೫೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೭೨. ಅದೇ, ಶಾ.ಸಂ. ೫, ಪು. ೫೭.

೧೭೩. ಅದೇ.

೧೭೪. ಇ.ಆಯ್. ಸಂ. XIII, ಶಾ.ಸಂ. ೩/ಎ–ಬಿ. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩, ಪು. ೨೪೫.

೧೭೫. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩ ಮತ್ತು ೬೫, ಪು. ೨೪೫.

೧೭೬. ಅದೇ, ಶಾ.ಸಂ. ೬೪, ಪು. ೨೪೫.

೧೭೭. ಇ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೧೭೮. ಅದೇ.

೧೭೯. ಅದೇ.

೧೮೦. ಅದೇ.

೧೮೧. ಅದೇ.

೧೮೨. ಆಯ್.ಎ. ಸಂ. XXXII, ಪು. ೨೧೭.

೧೮೩. ಅದೇ. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೬. ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.

೧೫–೩೬. ಶಿವಾನಂದ ಎಸ್., ಕನ್ನಡ ಜೈನ ಪುರಾಣಗಳು : ಒಂದು ಸಮಗ್ರ ಅಧ್ಯಯನ (೨೦೦೮), ಪು. ೭೭–೯೯.

೨೦೫. ಗೋಪಾಲ ಬಾ.ರಾ., ಬನವಾಸಿ ಕದಂಬರು (೧೯೮೩), ಶಾ.ಸಂ. ೨೪.

೨೦೬. ಹಂಜೆ ಅಪ್ಪಣ್ಣ ಎನ್., "ಬೆಳಗಾವಿ ಜಿಲ್ಲೆಯ ಬಸದಿಗಳು ಮತ್ತು ಶಿಲ್ಪಗಳು", ಶೋಧ (ಜನೇವರಿ–೨೦೧೧), ಪು. ೬–೩೯, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.

೨೦೭. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೨೦೮. ಹಗರಟಗೆನಾಡು ಇಂದಿನ ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ನೈರುತ್ಯಭಾಗ, ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಉತ್ತರಭಾಗ, ಸಿಂದಗಿ ತಾಲ್ಲೂಕಿನ ದಕ್ಷಿಣಭಾಗದ ಭೂಪ್ರದೇಶವನ್ನೊಳಗೊಂಡಂತೆ ಒಟ್ಟು ಮುನ್ನೂರು ಗ್ರಾಮಗಳ ಆಡಳಿತ ಪ್ರಾಂತವಾಗಿತ್ತು. ಸುರಪುರ ತಾಲ್ಲೂಕಿನ ಇಂದಿನ ಹಗರಟಗಿ ಗ್ರಾಮವು ಆ ಪ್ರಾಂತದ ರಾಜಧಾನಿ ಕೇಂದ್ರವಾಗಿತ್ತು. ಆ ಪ್ರಾಂತವು ಕ್ರಿ.ಶ. ಸುಮಾರು ೧೦ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಕುಂತಲನಾಡಿನಲ್ಲಿ ಒಂದು ಪ್ರಮುಖ ವಿಭಾಗವಾಗಿತ್ತು. ಕಲ್ಯಾಣದ ಚಾಳುಕ್ಯ, ಕಲಚೂರಿ, ದೇವಗಿರಿಯ ಸೇವುಣ (ಯಾದವ) ಮನೆತನಗಳ ಆಳ್ವಿಕೆಗಳ ಸಂದರ್ಭದಲ್ಲಿ ಆ ಪ್ರಾಂತದಲ್ಲಿ ಯದುವಂಶದ (ಹೈಹಯವಂಶ?) ಮಹಾಮಂಡಳೇಶ್ವರರು ಆಳ್ವಿಕೆ ಮಾಡುತ್ತಿದ್ದರು. ಆ ಮನೆತನದ ಆಳರಸರು ಜೈನರಾಗಿದ್ದರೂ ಸರ್ವಧರ್ಮಗಳ ಪೋಷಕರಾಗಿ ಧರ್ಮಸಹಿಷ್ಣುತೆಯನ್ನು ಮೆರೆದಿದ್ದಾರೆ. (ಗೋಗಿ ಹನುಮಾಕ್ಷಿ, "ಹಗರಟಗಿನಾಡು ಮತ್ತು ಹಗರಟಗಿಯ ಶಾಸನಗಳು" ಮತ್ತು "ಹಗರಟಗಿಯ ಅಪ್ರಕಟಿತ ಶಾಸನಗಳು", ಅನುಶಾಸನ (೨೦೦೨), ಪು. ೫೦–೭೪ ಮತ್ತು ೨೧೩–೨೧೫.

೨೦೯. ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೩ (ಜನೇವರಿ–೧೯೭೪), ಪು. ೪೩–೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೨೧೦. ಕೆ.ಆಯ್. ಸಂ. V, ಶಾ.ಸಂ. ೨೧.

೨೧೧. ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಪೂರ್ವೋಕ್ತ.

೨೧೨. ಆಯ್.ಎ. ಸಂ. XXXII, ಪು. ೨೧೭.

೨೧೩. ಇ.ಆಯ್. ಸಂ. XIII, ಶಾ.ಸಂ. ೩/ಎ–ಬಿ.

೨೧೪. ಕುಂದಣಗಾರ ಕೆ.ಜಿ. (ಸಂ.), ಪೂರ್ವೋಕ್ತ, ಶಾ.ಸಂ. ೨೩.

೨೧೫. ಕೆ.ಆಯ್. ಸಂ. I, ಶಾ.ಸಂ. ೨೯.

೨೧೬. ಕಲಬುರ್ಗಿ ಎಂ.ಎಂ., "ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳ ನಾಶ", ಮಾರ್ಗ ಸಂ. ೩ (೧೯೯೮), ಪು. ೪೦.

೨೧೭. ಹಂಜೆ ಅಪ್ಪಣ್ಣ ಎನ್., ಧಾರವಾಡ ಪರಿಸರದಲ್ಲಿ ಜೈನಧರ್ಮ (೨೦೦೮), ಪು. ೫೦–೫೩. "ಕೃಷ್ಣಾನದಿ ತೀರದ ಜಿನಾಲಯಗಳು : ನಾಶ, ರೂಪಾಂತರ, ಜೀರ್ಣೋದ್ಧಾರ ಮತ್ತು ಪ್ರತಿಬದ್ಧ", ಕೃಷ್ಣಾತೀರ ಜಿನಸಿರಿ (ದಕ್ಷಿಣ ಭಾರತ ಜೈನ ಸಭೆಯ ೮೯ನೇ ವಾರ್ಷಿಕ ಅಧಿವೇಶನದ ಸ್ಮರಣ ಸಂಚಿಕೆ–೨೦೦೮), ಪು. ೮೪–೮೮, ಜಮಖಂಡಿ.

೨೧೮. ಶರ್ಮ ಎಸ್.ಆರ್., ಜೈನಿಜಂ ಆ್ಯಂಡ್ ಕರ್ನಾಟಕ ಕಲ್ಚರ್ (೧೯೪೦), ಪು. ೧೫೧–೧೫೭. ಸಣ್ಣಯ್ಯ ಬಿ.ಎಸ್. (ಸಂ.), ದೇವಚಂದ್ರ ವಿರಚಿತ ರಾಜಾವಳಿ ಕಥಾಸಾರ (೧೯೮೮), ಪು. xix-xxxix. ಅನಂತರಾಮು ಕೆ., ಕವಿ ಬ್ರಹ್ಮಶಿವ : ಒಂದು ಅಧ್ಯಯನ (೧೯೯೧), ಪು. ೮೮–೮೯, ३४५–३४७. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ : ಒಂದು ಸಾಂಸ್ಕೃತಿಕ ಅಧ್ಯಯನ (೨೦೦೨), ಪು. ೧೧೮–೧೩೪. ಹಂಪ ನಾಗರಾಜಯ್ಯ, "ಶಾಸನಗಳಲ್ಲಿ ಸಾದಕುಲ" ಮತ್ತು "ಶಾಸನಗಳಲ್ಲಿ ಚತುರ್ಥಕುಲ", ಮೂಲ–ಚೂಲ (೨೦೦೬), ಪು. ೧೬೧–೧೬೮. "ಜೈನ ಸಮಾಜ ಮತ್ತು ಮತಾಂತರ", ಅನನ್ಯ (೨೦೦೩), ಪು. ೫೮–೮೯.

೨೧೯. ಸವದತ್ತಿಯ ರಟ್ಟರ ಆಳ್ವಿಕೆಯ ಕಾಲಾವಧಿಯಲ್ಲಿ ಕೂಹುಂಡಿನಾಡಿನಲ್ಲಿ ನಿರ್ಮಾಣವಾಗಿರುವ ಬಸದಿಗಳ ನವರಂಗ, ಮುಖಮಂಟಪ, ಮಹಾಮಂಟಪಗಳ ವಿತಾನಗಳ ಅಡ್ಡ ತೊಲೆಗಳ ಮೇಲೆ ಸಾಲಾಗಿ ಇಪ್ಪತ್ನಾಲ್ಕು ಇಲ್ಲವೇ ಎಪ್ಪತ್ತೆರಡು ತ್ರಿಕಾಲ ತೀರ್ಥಂಕರರ ಉಬ್ಬುಶಿಲ್ಪಗಳನ್ನು ತೋರಿಸಿರುವುದು ವಿಶೇಷವಾಗಿದೆ. ಇಂತಹ ಉಬ್ಬುಶಿಲ್ಪಗಳನ್ನು ಬೆಳಗಾವಿಯ ನೇಮಿನಾಥ ಬಸದಿಯ (ಕಮಲ ಬಸದಿ) ಮಹಾಮಂಟಪದ ವಿತಾನದಲ್ಲಿ ಮತ್ತು ಬೈಲಹೊಂಗಲ ತಾಲ್ಲೂಕಿನ ನೇಸರಗಿಯ ವಿರೂಪಾಕ್ಷ ದೇವಾಲಯದ ನವರಂಗದ ವಿತಾನದಲ್ಲಿಯೂ ಕೆತ್ತಲಾಗಿದೆ. ನೇಸರಗಿಯ ವಿರೂಪಾಕ್ಷ ದೇವಾಲಯವು ಮೂಲತಃ ಬಸದಿಯಾಗಿತ್ತು. ಯಾವುದೋ ಒಂದು ಕಾಲಘಟ್ಟದಲ್ಲಿ ಶೈವ ಧರ್ಮದ ದೇವಾಲಯವಾಗಿ ರೂಪಾಂತರವಾಗಿದೆ.

೨೨೦. ಎ.ಆಯ್. ಸಂ. XXI, ಶಾ.ಸಂ. ೪೩, ಪು. ೨೮೯–೨೯೨.

೨೨೧. ಗುರವ ಆರ್.ಎನ್., ಪೂರ್ವೋಕ್ತ.

೨೨೨. ಪಾಟೀಲ ಕೆ.ಎಸ್., ಹೂಲಿ ಮತ್ತು ಲಕ್ಕುಂಡಿ ದೇವಾಲಯಗಳು : ಒಂದು ತೌಲನಿಕ ಅಧ್ಯಯನ (೨೦೧೦), ಪು. ೪೬–೫೩.

೨೨೩. ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೧೦೩.

೨೨೪. ಹಂದೂರ ಬಿ.ಆರ್., ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ (೨೦೦೩), ಪು. ೧೩೪–೧೩೫.

೨೨೫. ತಬೋಜಿ ಚಂದ್ರಶೇಖರ ಬಿ., "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಸ್ ಇನ್ ಕರ್ನಾಟಕ ಹಿಸ್ಟ್ರಿ ಆ್ಯಂಡ್ ಕಲ್ಚರ್ ಪ್ರೋಸಿಡಿಂಗ್ಸ್ ವಾಲ್ಯೂಮ್ VII (೨೦೦೬), ಪು. ೧೭೩.

೨೨೬. ಮಹೀಶವಾಡಿ ಬಿ.ಬಿ., "ಕವಿ ಶಾಂತಿಕೀರ್ತಿಮುನಿ", ಜೈನ ವಾಙ್ಮಯ ಪರಿಶೋಧನೆ (೧೯೭೭), ಪು. ೪೯.

೨೨೭. ಎಸ್.ಆಯ್.ಆಯ್. ಸಂ. XX, ಶಾ.ಸಂ. ೩೦.

೨೨೮. ಅದೇ, ಶಾ.ಸಂ. ೧೩.

೨೨೯. ಅದೇ.

೨೩೦. ಅದೇ, ಶಾ.ಸಂ. ೬೨.

೨೩೧. ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೩೬, ಪು. ೫೪–೫೫.

೨೩೨. ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಪೂರ್ವೋಕ್ತ.

೨೩೩. ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ ೧೬೭೮–೧೯೭೮ (೧೯೭೯), ಪು. ೧೬–೧೮.

೨೩೪. ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಪೂರ್ವೋಕ್ತ, ಶಾ.ಸಂ. ૩, ಪು. ೫೫.

೨೩೫. ಅದೇ.

೨೩೬. ಅದೇ, ಶಾ.ಸಂ. ೪, ಪು. ೫೫.

೨೩೭. ಹಂಜೆ ಅಪ್ಪಣ್ಣ ಎನ್., "ಕರ್ನಾಟಕದಲ್ಲಿ ಬಾಹುಬಲಿ ಬಸದಿಗಳು ಮತ್ತು ಶಿಲ್ಪಗಳು", ಕ್ಷಿತಿಸಂಪೂಜ್ಯ (ಅಖಿಲ ಕರ್ನಾಟಕ ಜೈನ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಸಂಚಿಕೆ–೨೦೦೫), ಪು. ೫೫–೬೩, ಜೈನ ಮಠ ಶ್ರವಣಬೆಳಗೊಳ.

೨೩೮. ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ૩૩, ಪು. ೧೨.

೨೩೯. ಎ.ಆರ್.ಎಸ್.ಆಯ್.ಇ. ೧೯೪೫–೪೬, ಶಾ.ಸಂ. ૩೪೯, ಪು. ೪೦.

೨೪೦. ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಮ. ૩೭, ಪು. ೧೨.

೨೪೧. ಆಯ್.. ಸಂ. X, ಪು. ೧૩೧.

೨೪೨. ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬૩, ಪು. ೨೪೫.

೨೪૩. ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೬.

೨೪೪. ಹಂಪ ನಾಗರಾಜಯ್ಯ, ಮಾನಸ್ತಂಭ : ಜೈನ್ ಪಿಲ್ಲರ್ ಆಫ್ ಎಮಿನೆನ್ಸ್ (೨೦೦೦), ಪು. ೧೫–೨೫.

೨೪೫. ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.

೨೪೬. ಗುರವ ಆರ್. ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಪೂರ್ವೋಕ್ತ.

೨೪೭. ಆಯ್.ಎ. ಸಂ. XXXII, ಪು. ೨೧೭.

೨೪೮. ಹಂಜೆ ಅಪ್ಪಣ್ಣ ಎನ್., "ಜೈನ ಶಿಲ್ಪಗಳು : ಹಿನ್ನೆಲೆ ಮತ್ತು ಪ್ರತಿಮಾ ಲಕ್ಷಣಗಳು", ರತ್ನಕರಂಡಕ (ಡಾ. ಎಚ್.ಎ. ಪಾರ್ಶ್ವನಾಥ ಅಭಿನಂದನ ಗ್ರಂಥ–೨೦೦೭), ಪು. ૩೨೬–૩೪೬. ಮೈಸೂರು.

೨೪೯. ಎ.ಆರ್.ಎಸ್.ಆಯ್.ಇ. ೧೯೭૩–೭೪, ಶಾ.ಸಂ. ೯೨.

೨೫೦. ಹಂಜೆ ಅಪ್ಪಣ್ಣ ಎನ್., "ಉಗರಗೋಳದ ಜೈನ ಸಿಂಹಪೀಠ ಶಾಸನ", ಪೂರ್ವೋಕ್ತ.

೨೫೧. ಅಂಗಡಿ ಮಹೇಶ ಬ., ಪೂರ್ವೋಕ್ತ.

೨೫೨. ಷಡಕ್ಷರಯ್ಯ ಆರ್.ಎಂ., "ಕರೋಶಿಯಲ್ಲಿ ಜೈನ ಸಿಂಹಪೀಠ ಪತ್ತೆ", ಸಂಯುಕ್ತ ಕರ್ನಾಟಕ ದಿನಪತ್ರಿಕೆ (೧೯೯೮ರ ಫೆಬ್ರುವರಿ ೨೨), ಪು. ೬.

೨೫૩. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೧૩.

೨೫೪. ಕೃಷ್ಣ ಎಂ.ಎಚ್., ಕನಾಟಕದ ಪೂರ್ವ ಚರಿತ್ರೆ, ಪು. ೨೯–૩૩.

೨೫೫. ಕೆ.ಆಯ್. ಸಂ. V, ಶಾ.ಸಂ. ೨೧.

❖❖❖

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು
ಸಮಾರೋಪ

ಕನ್ನಡನಾಡಿನ ಅರಸು ಮನೆತನಗಳಾದ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ದೇವಗಿರಿಯ ಸೇವುಣರು ಕಾವೇರಿ ನದಿಯಿಂದ ಗೋದಾವರಿ ನದಿಯನ್ನು ದಾಟಿ ನರ್ಮದಾ ನದಿಯವರೆಗೂ ಆಳ್ವಿಕೆ ನಡೆಸಿ, ಕನ್ನಡನಾಡು ಮತ್ತು ನುಡಿಯ ಹಿರಿಮೆ-ಗರಿಮೆಗಳ ಪತಾಕೆಯನ್ನು ಭಾರತದಾದ್ಯಂತ ಹಾರಿಸಿರುವುದು ಸಮಕಾಲೀನ ಶಾಸನಗಳು ಮತ್ತು ಕೃತಿ-ಕಾವ್ಯಗಳಿಂದ ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಇವರ ಮಾಂಡಲಿಕರಾದ ಅಲಕ್ತಕ ನಗರದ ಸೇಂದ್ರಕರು, ಬಂಕಾಪುರದ ಚಲ್ಲಕೇತನರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ (ಇವರ ಪ್ರಾರಂಭದ ರಾಜಧಾನಿ ಇಂದಿನ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ತಾಲ್ಲೂಕು ಕೇಂದ್ರ ಮಂಗಳವಾಡ) ಕಲಚೂರಿಯರು ಮೊದಲಾದವರ ಕೊಡುಗೆಯೂ ಅಪಾರವಾಗಿದೆ. ಇದನ್ನು ಕನ್ನಡದ ಮೊದಲ ಉಪಲಬ್ಧ ಕೃತಿಯಾದ ಶ್ರೀವಿಜಯನ 'ಕವಿರಾಜಮಾರ್ಗ'ದಲ್ಲಿ (ಕ್ರಿ.ಶ. ಸುಮಾರು ೮೫೦)-

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ ‖

ಕಾವೇರಿ ನದಿಯಿಂದ ಗೋದಾವರಿ ನದಿಯವರೆಗೂ ಇರುವ ಕನ್ನಡನಾಡು ಪ್ರಸಿದ್ಧವಾದ ಜನಪದವೆನಿಸಿದೆ ಎಂಬ ಮಾತೂ ದೃಢಪಡಿಸುತ್ತದೆ. ಬಾದಾಮಿಯ ಚಲುಕ್ಯರು ಮತ್ತು ಮಳಖೇಡದ ರಾಷ್ಟ್ರಕೂಟರು ವಿಶಾಲವಾಗಿದ್ದ ಸಾಮ್ರಾಜ್ಯವನ್ನು ಸುವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಅನೇಕ ಆಡಳಿತ ವಿಭಾಗಗಳಲ್ಲಿ ವಿಂಗಡಿಸಿದ್ದರು. ಅಂತಹ ಆಡಳಿತ ವಿಭಾಗಗಳಲ್ಲಿ ಕುಹುಣ್ಡಿವಿಷಯ ಅಥವಾ ಕೂಹುಂಡಿನಾಡು ಒಂದಾಗಿದೆ. ಈ ನಾಡು ಇಂದಿನ ಉತ್ತರ ಕರ್ನಾಟಕದ ಬಾಗಲಕೋಟ, ಬೆಳಗಾವಿ ಮತ್ತು ದಕ್ಷಿಣ ಮಹಾರಾಷ್ಟ್ರದ ಕೊಲ್ಲಾಪುರ, ಸಾಂಗಲಿ, ಸಾತಾರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಸ್ತಾರವಾಗಿತ್ತು. ಇದು ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿತ್ತು.

ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಉತ್ತರ ಕರ್ನಾಟಕದಲ್ಲಿರುವ (ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳು) ಶಾಸನಗಳ ಸಾಂಸ್ಕೃತಿಕ ಮಹತ್ವವನ್ನು ಕಂಡುಕೊಳ್ಳುವ ಪ್ರಯತ್ನವಾಗಿದ್ದರೂ ಸಮಗ್ರವಾಗಿಲ್ಲ. ಹಾಗೆಯೇ ಈ ನಾಡಿಗೆ ಸಂಬಂಧಿಸಿದಂತೆ ದಕ್ಷಿಣ ಮಹಾರಾಷ್ಟ್ರದಲ್ಲಿರುವ (ಕೊಲ್ಲಾಪುರ ಜಿಲ್ಲೆ) ಶಾಸನಗಳು ಹೊರನಾಡಿನ ಶಾಸನಗಳೆಂದು ಕರ್ನಾಟಕದ ಸಂಶೋಧಕರು, ಇವು ಅನ್ಯ ಭಾಷೆಯ ಶಾಸನಗಳೆಂದು ಮಹಾರಾಷ್ಟ್ರದ ಸಂಶೋಧಕರು ಉಪೇಕ್ಷಿಸಿ, ಇವುಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವ ಪ್ರಯತ್ನವನ್ನು ಅಷ್ಟಾಗಿ ಮಾಡಿಲ್ಲ. ಒಟ್ಟಾರೆ ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಇದುವರೆಗೂ ಸಮಗ್ರವಾಗಿ ಅಧ್ಯಯನ ನಡೆದಿರಲಿಲ್ಲ. ಹೀಗಾಗಿ ಪ್ರಸ್ತುತ "ಕೊಹುಂಡಿನಾಡಿನ ಶಾಸನಗಳು : ಸಾಂಸ್ಕೃತಿಕ

ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಈ ನಾಡಿನ ಪ್ರದೇಶದಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ೧೭೨ ಮತ್ತು ಈ ನಾಡಿನ ಪ್ರಸ್ತಾಪವಿರುವ ಇತರೆಡೆಯ ೧೨ ಒಟ್ಟು ೧೮೪ ಶಾಸನಗಳ ಹಿನ್ನೆಲೆಯಲ್ಲಿ ಈ ನಾಡಿನ ಭೌಗೋಳಿಕ ಸ್ವರೂಪ, ಸ್ಥಳನಾಮಗಳು, ಅರಸು ಮನೆತನಗಳು, ಅರಸರು, ಅವರ ರಾಜಕೀಯ ಚಟುವಟಿಕೆಗಳು, ಆಡಳಿತ ವ್ಯವಸ್ಥೆ, ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು, ದಂಡನಾಯಕರು, ಸೇನಬೋವರು, ಪಡೆವಳರು ಮೊದಲಾದ ಆಡಳಿತಾಧಿಕಾರಿಗಳು, ಆಡಳಿತ ವಿಭಾಗಗಳು, ಧಾರ್ಮಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಶಿಕ್ಷಣ ಮತ್ತು ಸಾಹಿತ್ಯ ಮೊದಲಾದವುಗಳ ಸಾಂಸ್ಕೃತಿಕ ಮಹತ್ವವನ್ನು ವಸ್ತುನಿಷ್ಠವಾಗಿ ಇದೇ ಪ್ರಪ್ರಥಮವಾಗಿ ಅವಲೋಕಿಸಲಾಗಿದೆ.

ಕೂಹುಂಡಿನಾಡಿಗೆ ಸಂಬಂಧಿಸಿದಂತೆ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳು ಈ ನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಜೀವನಾಡಿಯಾಗಿವೆ. ಈ ನಾಡಿನ ಚರಿತ್ರೆ ಮತ್ತು ಸಂಸ್ಕೃತಿಗೆ ಸ್ಪಷ್ಟತೆ ಹಾಗೂ ಖಚಿತತೆಯನ್ನು ತಂದುಕೊಡುವಲ್ಲಿ ಈ ಶಾಸನಗಳು ಸಹಕಾರಿಯಾಗಿವೆ. ಇವುಗಳ ಹಿನ್ನೆಲೆಯಲ್ಲಿ ಭವ್ಯ ಪರಂಪರೆಯನ್ನು ಹೊಂದಿದ್ದ ಉತ್ತರ ಕರ್ನಾಟಕದ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಾವಧಿಯ ಜನಜೀವನ ಹಾಗೂ ಸಾಂಸ್ಕೃತಿಕ ಪರಿಸರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಜೊತೆಗೆ ಇದಕ್ಕೆ ಪೂರಕವಾಗಿ ಸಮಕಾಲೀನ ಕೃತಿ–ಕಾವ್ಯಗಳ ನೆರವನ್ನೂ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ಆಯಾ ಕಾಲದ ಶಾಸನಗಳಲ್ಲಿ ಅಂದಿನ ಸಾಂಸ್ಕೃತಿಕ ಜೀವನದ ಅನೇಕ ಅಂಶಗಳು ದಾಖಲಾಗಿವೆ. ಒಟ್ಟಿನಲ್ಲಿ ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಅಂದಂದಿನ ಸ್ಪಷ್ಟವಾದ ಚಿತ್ರಣವನ್ನು ಕೊಡುವಲ್ಲಿ ಈ ಶಾಸನಗಳು ಬಹುಮಟ್ಟಿಗೆ ಯಶಸ್ವಿಯಾಗಿವೆ. ಹಾಗೆಯೇ ಈ ಶಾಸನಗಳು ಪ್ರಾಚೀನ ಕರ್ನಾಟಕದ ಭಾಗವೇ ಆಗಿದ್ದ ಇಂದಿನ ಮಹಾರಾಷ್ಟ್ರದ ಪ್ರಾದೇಶಿಕ ಪ್ರಾಚೀನ ಮತ್ತು ಮಧ್ಯಯುಗೀನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯಗಳ ಅಧ್ಯಯನಕ್ಕೆ ತುಂಬಾ ಮಹತ್ವದ ಆಕರಗಳಾಗಿವೆ. ಈ ಶಾಸನಗಳು ಪ್ರಾಚೀನ ಕರ್ನಾಟಕದ ಗಡಿರೇಖೆ ಹೇಗೆ ಹಿಗ್ಗುತ್ತಾ ಕುಗ್ಗುತ್ತಾ ಸಾಗಿತು ಎಂಬುದನ್ನು ಕಂಡುಕೊಳ್ಳಲೂ ಪ್ರಮುಖ ಸಾಧನಗಳಾಗಿವೆ.

ದೇವಗಿರಿಯ (ಇಂದಿನ ಔರಂಗಾಬಾದ ಜಿಲ್ಲೆಯ ದೌಲತಾಬಾದ) ಸೇವುಣರನ್ನು 'ಯಾದವರು' ಎಂದು ಇಂದಿಗೂ ಕರೆಯಲಾಗುತ್ತಿದೆ. ಮೂಲತಃ ಇವರು 'ಉತ್ತರ ಭಾರತದವರು', 'ಯದುವಂಶಕ್ಕೆ ಸೇರಿದವರು', 'ಮರಾಠರು' ಎಂಬೆಲ್ಲ ಭಿನ್ನಾಭಿಪ್ರಾಯಗಳಿನ್ನೂ ಜೀವಂತವಾಗಿವೆ. ಈ ಊಹೆಗೆ, ವಾದ–ವಿವಾದಕ್ಕೆ ಮಂಗಳ ಹಾಡಲು ಕೂಹುಂಡಿನಾಡಿನ ಪ್ರದೇಶದಲ್ಲಿರುವ ಸೇವುಣರ ಕನ್ನಡ ಶಾಸನಗಳು ಸಹಾಯಕವಾಗಿವೆ. ಸೇವುಣರು ಬರೆಯಿಸಿದ ಅನೇಕ ಕನ್ನಡ ಶಾಸನಗಳು ಕೂಹುಂಡಿನಾಡಿನಲ್ಲಿ ಬೆಳಕಿಗೆ ಬಂದಿವೆ. ಈ ಶಾಸನಗಳು ಸ್ಪಷ್ಟವಾಗಿ ಇವರನ್ನು ಸೇವುಣರು ಎಂತಲೇ ಕರೆದಿವೆ. ಇವರು ಮೂಲತಃ ಕನ್ನಡಿಗರೇ ಆಗಿದ್ದರು. ಅವರ ಹೆಸರುಗಳಲ್ಲಿಯೂ (ಸಿಂಗ+ಅಣ್ಣ=ಸಿಂಗಣ, ಭಿಲ್ಲ+ಅಮ್ಮ=ಭಿಲ್ಲಮ, ಧಡಿಯ+ಅಪ್ಪ=ಧಡಿಯಪ್ಪ ಇತ್ಯಾದಿ) ಕನ್ನಡತನ ಎದ್ದು ಕಾಣಿಸುತ್ತದೆ. ಹೀಗೆ ಚರಿತ್ರೆಯ ಅನೇಕ

ಗೊಂದಲಗಳ ನಿವಾರಣೆಗಳಲ್ಲಿ ಇಲ್ಲಿಯ ಕನ್ನಡ ಶಾಸನಗಳು ನಿರ್ಣಾಯಕವಾದ ಪಾತ್ರವನ್ನು ವಹಿಸಿವೆ. ಈ ನಾಡಿನಲ್ಲಿ ಆಳ್ವಿಕೆ ಮಾಡಿದ ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರು ಮೊದಲಾದ ಸಣ್ಣ-ಪುಟ್ಟ ಅರಸು ಮನೆತನಗಳು, ಈ ಮನೆತನಗಳ ಅರಸರು ಕೈಗೊಂಡ ಸಾಧನೆಗಳು, ಇವರ ಕೈಕೆಳಗಿನ ಅಧಿಕಾರಿಗಳು ಇವರಿಗೆಲ್ಲ ಚಾರಿತ್ರಿಕ ನ್ಯಾಯ ಸಲ್ಲಿಸುವ ಪ್ರಯತ್ನಗಳನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿ (ಇಂದಿನ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ) ಶಿಲಾಹಾರ ಮನೆತನದ ಕೆಲವು ಶಾಖೆಗಳು ಆಳ್ವಿಕೆ ಮಾಡಿವೆ. ಶಿಲಾಹಾರರೂ ಮೂಲತಃ ಕನ್ನಡಿಗರೇ ಆಗಿದ್ದರು. ಇವರು ಕನ್ನಡದಲ್ಲಿಯೂ ಹಲವು ಶಾಸನಗಳನ್ನು ಬರೆಸಿದ್ದಾರೆ. ಜೊತೆಗೆ ಕನ್ನಡದ ಅರಸು ಮನೆತನಗಳ ಅಧೀನದಲ್ಲಿ ಸಾಮಂತರಾಗಿ ಬಹುಕಾಲ ಆಳ್ವಿಕೆ ಮಾಡಿದ್ದಾರೆ. ಇವರು ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರೊಂದಿಗೆ ಹೊಂದಿದ್ದ ಸಂಬಂಧದ ಸ್ವರೂಪವು ಇಲ್ಲಿಯ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಕನ್ನಡನಾಡಿನ ಪ್ರಾಚೀನ ಮತ್ತು ಮಧ್ಯಯುಗೀನ ಕಾಲಾವಧಿಯ ಪ್ರಾದೇಶಿಕ ಚರಿತ್ರೆ ಹಾಗೂ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪುನಾರಚಿಸುವ ನಿಟ್ಟಿನಲ್ಲಿ ಕೈಗೊಂಡ ಈ ಸಂಶೋಧನ ಅಧ್ಯಯನವು ಮೂರುಸಾವಿರ ಗ್ರಾಮಗಳ ಆಡಳಿತ ವಿಭಾಗಗಳಲ್ಲೊಂದಾದ ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ರೂಪುರೇಷೆಗಳನ್ನು ಅರ್ಥಮಾಡಿಕೊಳ್ಳಲು ನೆರವಾಗಿದೆ. ಮೊಟ್ಟಮೊದಲ ಬಾರಿಗೆ ಈ ನಾಡನ್ನು ಶಾಸನಗಳ ಹಿನ್ನೆಲೆಯಲ್ಲಿ ಸಮಗ್ರ ಸಂಶೋಧನೆಯ ವ್ಯಾಪ್ತಿಗೆ ಒಳಪಡಿಸಿ ಕೈಗೊಂಡಿರುವ ಈ ಸಂಶೋಧನ ಅಧ್ಯಯನದಲ್ಲಿ ಹೊಸ ಹೊಸ ಅಭಿಪ್ರಾಯಗಳೊಂದಿಗೆ ಈ ಮೊದಲಿನ ತಪ್ಪು ನಿರ್ಣಯಗಳನ್ನು ಪರಿಷ್ಕರಿಸಲಾಗಿದೆ. ಕೂಹುಂಡಿನಾಡಿನ ರಾಜಕೀಯ ಇತಿಹಾಸವನ್ನು ಇದುವರೆಗೂ ಸವದತ್ತಿಯ ರಟ್ಟರಿಗೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ ಈ ಸಂಶೋಧನ ಅಧ್ಯಯನದ ಮೂಲಕ ಕೂಹುಂಡಿನಾಡು ಕ್ರಿ.ಶ. ಸುಮಾರು ೫ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಸಂಗತಿ ಸ್ಪಷ್ಟವಾಯಿತು. ಈ ನಾಡಿನ ಚರಿತ್ರೆ ಬಾದಾಮಿಯ ಚಲುಕ್ಯರ ಕಾಲದಿಂದಲೇ ಪ್ರಾರಂಭವಾಗಿದೆ. ಅಂದರೆ ಬಾದಾಮಿಯ ಚಲುಕ್ಯರ ೧ನೆಯ ಪುಲಕೇಶಿಯ ಶಾಸನಗಳಲ್ಲಿ ಈ ನಾಡಿನ ಪ್ರಸ್ತಾಪವು ಪ್ರಥಮವಾಗಿ ಗೋಚರಿಸುತ್ತದೆ. ಕೂಹುಂಡಿನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳನ್ನು ಒಂದೆಡೆಗೆ ಕಲೆಹಾಕಿ ಕೈಗೊಂಡಿರುವ ಈ ಸಂಶೋಧನ ಅಧ್ಯಯನದಲ್ಲಿ ಸಮಕಾಲೀನ ಅನೇಕ ಮಹತ್ವದ ಹೊಸ ಹೊಸ ವಿಚಾರಗಳು ಸ್ಪಷ್ಟವಾದವು.

ಕನ್ನಡನಾಡಿನ ಇತರ ಪ್ರದೇಶಗಳಂತೆ ಕೂಹುಂಡಿನಾಡಿನ ಪ್ರದೇಶವೂ ಮಗಧದ ನಂದರು, ಮೌರ್ಯರು, ಶಾತವಾಹನರು, ಬನವಾಸಿಯ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಬನವಾಸಿಯ ಕದಂಬರ ತರುವಾಯ ಉತ್ತರ ಕರ್ನಾಟಕದಲ್ಲಿ ರಾಜಕೀಯ ರಂಗವನ್ನು ಪ್ರವೇಶಿಸಿದ ಬಾದಾಮಿಯ ಚಲುಕ್ಯರು ಕಾಲಕ್ರಮೇಣ ತಮ್ಮ ಸಾಮ್ರಾಜ್ಯವನ್ನು ಇಂದಿನ ಕನ್ನಡನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಒಡಿಸ್ಸಾ,

ಗುಜರಾತ ಪ್ರದೇಶಗಳಲ್ಲಿ ವಿಸ್ತರಿಸಿದರು. ಹೀಗೆ ವಿಶಾಲವಾಗಿದ್ದ ಸಾಮ್ರಾಜ್ಯವನ್ನು ವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ಕೆಲವು 'ವಿಷಯ'ಗಳಲ್ಲಿ ವಿಂಗಡಿಸಿದ್ದರು. ಅಂತಹ ವಿಷಯಗಳಲ್ಲಿ 'ಕುಹುಣ್ಡಿವಿಷಯ' ಒಂದಾಗಿತ್ತು. ಈ ವಿಷಯದ ಆಡಳಿತವನ್ನು ಅಲಕ್ತಕ ನಗರದ ಸೇಂದ್ರಕರು ಮತ್ತು ಮಾನಪುರದ ರಾಷ್ಟ್ರಕೂಟರು ನೋಡಿಕೊಳ್ಳುತ್ತಿದ್ದರು. ಬಾದಾಮಿಯ ಚಲುಕ್ಯರ ತರುವಾಯ ಕೂಹುಂಡಿನಾಡಿನ ಆಡಳಿತವು ಮಳಖೇಡದ ರಾಷ್ಟ್ರಕೂಟರ ಅಧೀನಕ್ಕೊಳಪಟ್ಟಿತ್ತು. ಅಂದು ಈ ನಾಡು 'ಕಷ್ಮಾಂಡಿವಿಷಯ', 'ಕೂಂಡಿಕಸಾಸಿರ' ಎಂದು ಕರೆಯಲ್ಪಡುತ್ತಿತ್ತು. ಅಂದು ಈ ನಾಡಿನ ವ್ಯಾಪ್ತಿಯಲ್ಲಿ ಸಾವಿರ ಗ್ರಾಮಗಳಿದ್ದವು. ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಈ ವಿಭಾಗವು ವಿಸ್ತಾರವಾಗುತ್ತ ಮೂರುಸಾವಿರ ಗ್ರಾಮಗಳು ಇದರ ವ್ಯಾಪ್ತಿಗೆ ಒಳಪಟ್ಟವು. ರಾಷ್ಟ್ರಕೂಟರ ಅಧೀನದಲ್ಲಿ ಕ್ರಿ.ಶ. ಸುಮಾರು ೯ನೆಯ ಶತಮಾನದಲ್ಲಿ ರಟ್ಟರು ಈ ನಾಡಿನ ಪೂರ್ವಭಾಗದಲ್ಲಿ ಸುಗಂಧವರ್ತಿಯನ್ನು (ಇಂದಿನ ಸವದತ್ತಿ) ರಾಜಧಾನಿ ಮಾಡಿಕೊಂಡು ಆಡಳಿತ ಪ್ರಾರಂಭಿಸಿದರು. ರಾಷ್ಟ್ರಕೂಟರ ಅವನತಿಯ ತರುವಾಯ ಕೂಹುಂಡಿನಾಡಿನ ಪ್ರದೇಶವು ಕಲ್ಯಾಣದ ಚಾಳುಕ್ಯರ ಆಡಳಿತಕ್ಕೊಳಪಟ್ಟಿತ್ತು ಈ ಮನೆತನದ ಆಳ್ವಿಕೆಯ ಸಂದರ್ಭದಲ್ಲಿ ಸವದತ್ತಿಯ ಪರಿಸರದಲ್ಲಿ ರಟ್ಟರು ಪ್ರಾರಂಭದಲ್ಲಿ ಮಹಾಸಾಮಂತರಾಗಿ, ತರುವಾಯ ಮಹಾಮಂಡಳೇಶ್ವರರಾಗಿ ತಮ್ಮ ಆಳ್ವಿಕೆಯನ್ನು ಮುಂದುವರೆಸಿದರು. ಇವರು ಸುರಕ್ಷತೆಯ ದೃಷ್ಟಿಯಿಂದ ತಮ್ಮ ರಾಜಧಾನಿಯನ್ನು ಸವದತ್ತಿಯಿಂದ ಬೆಳಗಾವಿಗೆ ವರ್ಗಾಯಿಸಿದರು. ಈ ಸಂದರ್ಭದಲ್ಲಿ ಕೆಲಕಾಲ ಸ್ವತಂತ್ರರಾಗಿ ಆಳ್ವಿಕೆ ಮಾಡಿರುವಂತೆ ತೋರುತ್ತದೆ. ಸವದತ್ತಿ ತಾಲ್ಲೂಕಿನ ಸೊಗಲವೂ ಕೆಲಕಾಲ ಇವರ ರಾಜಧಾನಿಯಾಗಿದ್ದನ್ನು ಗುರುತಿಸಲಾಗಿದೆ.

ಕೊಲ್ಲಾಪುರದ ಶಿಲಾಹಾರರು ಕಲ್ಯಾಣದ ಚಾಳುಕ್ಯರ ಮಹಾಸಾಂತರರಾಗಿ ಮತ್ತು ಕೆಲಕಾಲ ಮಹಾಮಂಡಳೇಶ್ವರರಾಗಿ ಆಳ್ವಿಕೆ ಮಾಡಿದ್ದಾರೆ. ಹಾಗೆಯೇ ಮಂಗಳವೇಡದ ಕಲಚೂರಿಯರು ಪ್ರಾರಂಭದಲ್ಲಿ ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಕ್ರಮೇಣ ಸ್ವತಂತ್ರರಾಗಿ ಆಳ್ವಿಕೆ ಪ್ರಾರಂಭಿಸಿದರು. ಈ ಮನೆತನದ ಇಮ್ಮಡಿ ಬಿಜ್ಜಳನು ಅಧಿಕಾರಕ್ಕೆ ಬರುವ ಮುನ್ನವೇ ಮಹಾಮಂಡಳೇಶ್ವರನಾಗಿ ಕೈಗೊಂಡ ವಿವಿಧ ಯುದ್ಧಗಳ ವಿವರಣೆಯೂ ಇಲ್ಲಿಯ ಶಾಸನಗಳಲ್ಲಿ ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಈತನು ಮಂಗಳವೇಡದಲ್ಲಿದ್ದಾಗಲೂ ಅವನ ಗುರಿ ಕರ್ನಾಟಕದ ಮೇಲಿತ್ತು. ಸ್ವತಂತ್ರನಾಗಲು ಆತನು ಸಂಧಿಕಾಯುತ್ತಿದ್ದ ವಿಷಯವೂ ಇಲ್ಲಿಯ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಕಲಚೂರಿಯರು ಕೂಹುಂಡಿನಾಡಿನ ಪ್ರದೇಶದ ಮೇಲೆ ತಮ್ಮ ಆಳ್ವಿಕೆಯ ಪ್ರಭಾವವನ್ನು ಸ್ಥಾಪಿಸಿ, ರಟ್ಟರನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಇದೇ ಸಂದರ್ಭದಲ್ಲಿ ದೇವಗಿರಿಯ ಸೇವುಣರು ಪ್ರಬಲರಾಗುತ್ತ ಕೂಹುಂಡಿನಾಡಿನ ಪೂರ್ವಭಾಗದ ಮೇಲೆ ಆಕ್ರಮಣಗಳನ್ನು ಪ್ರಾರಂಭಿಸಿದರು. ರಟ್ಟ ಮನೆತನದ ಕೊನೆಯ ಅರಸನಾದ ಇಮ್ಮಡಿ ಲಕ್ಷ್ಮೀದೇವನು ವೇಣುಗ್ರಾಮವನ್ನು (ಇಂದಿನ ಬೆಳಗಾವಿ) ರಾಜಧಾನಿ ಮಾಡಿಕೊಂಡು ಆಳುತ್ತಿದ್ದನು. ಈ ಸಂದರ್ಭದಲ್ಲಿ ದೇವಗಿರಿಯ ಸೇವುಣ ಮನೆತನದ ಸಿಂಘಣದೇವನು ಸಾಮ್ರಾಜ್ಯದ ವಿಸ್ತರಣೆಗಾಗಿ ಕೊಲ್ಲಾಪುರದ ಭೋಜನನ್ನು ಸೋಲಿಸಿದನು. ಕಾಲಕ್ರಮೇಣ ರಟ್ಟರು ಮತ್ತು ಸೇವುಣರ ಮಧ್ಯದಲ್ಲಿಯೂ ರಾಜಕೀಯ

ಸಂಘರ್ಷಗಳು ಪ್ರಾರಂಭವಾದುದ್ದನ್ನು ಗುರುತಿಸಲಾಗಿದೆ. ಸಿಂಘಣದೇವನು ತನ್ನ ದಂಡನಾಯಕನಾದ ಬೀಚಣ್ಣನ ನೇತೃತ್ವದಲ್ಲಿ ರಟ್ಟ ರಾಜ್ಯದ ಮೇಲೆ ದಾಳಿ ಮಾಡಿದನು. ಈ ಯುದ್ಧದಲ್ಲಿ ಇಮ್ಮಡಿ ಲಕ್ಷ್ಮೀದೇವನಿಗೆ ಸೋಲುಂಟಾಯಿತು. ಸಿಂಘಣನ ನಂತರ ಇಮ್ಮಡಿ ಕೃಷ್ಣನು ಪಟ್ಟಕ್ಕೆ ಬಂದನು. ಈತನ ಕಾಲದಲ್ಲಿಯೂ ರಟ್ಟರು ಮತ್ತು ಸೇವುಣರ ಮಧ್ಯದಲ್ಲಿ ಮತ್ತೊಮ್ಮೆ ಘರ್ಷಣೆ ಉಂಟಾಯಿತು. ಈ ಘರ್ಷಣೆಯಲ್ಲಿ ಸೇವುಣ ಮನೆತನದ ಮಹಾಪ್ರಧಾನ ನಾಗರಸನು ಯುದ್ಧದ ನೇತೃತ್ವವನ್ನು ವಹಿಸಿದ್ದನು. ನಾಗರಸನು ಈ ಯುದ್ಧದಲ್ಲಿ ರಟ್ಟರನ್ನು ಸಂಪೂರ್ಣವಾಗಿ ಸದೆಬಡೆದು ಕೂಹುಂಡಿ ಪ್ರದೇಶವನ್ನು ವಶಪಡಿಸಿಕೊಂಡು ಸೇವುಣ ರಾಜ್ಯದ ಮೇರೆಯನ್ನು ವಿಸ್ತರಿಸಿದನು. ರಾಜ್ಯವನ್ನು ಕಳೆದುಕೊಂಡ ಇಮ್ಮಡಿ ಲಕ್ಷ್ಮೀದೇವನು ಸನ್ಯಾಸತ್ವವನ್ನು ಸ್ವೀಕರಿಸಿರಬಹುದು ಅಥವಾ ಬೇರೆ ಪ್ರದೇಶಕ್ಕೆ ಪಲಾಯನ ಮಾಡಿರುವ ಸಾಧ್ಯತೆಯಿದೆ. ಈತನ ಅಂತಿಮ ದಿನಗಳ ಕುರಿತು ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಈತನ ಆಳ್ವಿಕೆಯ ಕೊನೆಯೊಂದಿಗೆ ಸವದತ್ತಿಯ ರಟ್ಟ ಸಾಮ್ರಾಜ್ಯವು ಅವನತಿಯಾಯಿತು.

ದೇವಗಿರಿಯ ಸೇವುಣರ ಆಳ್ವಿಕೆಯ ಕಾಲಾವಧಿಯಲ್ಲಿ ಅಂದರೆ ಕ್ರಿ.ಶ. ಸುಮಾರು ೧೩ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರ ಭಾರತದ ಖಿಲ್ಜಿ ಮತ್ತು ತುಘಲಕ್ ಮುಸ್ಲಿಂ ಮನೆತನಗಳು ದಕ್ಷಿಣ ಭಾರತದ ಮೇಲೆ ರಾಜಕೀಯ ಆಕ್ರಮಣಗಳನ್ನು ಕೈಗೊಂಡವು. ಈ ಸಂದರ್ಭದಲ್ಲಿ ಕೂಹುಂಡಿನಾಡಿನ ಪ್ರದೇಶದ ಪಶ್ಚಿಮ ಭಾಗವು ಮುಸ್ಲಿಂ ಅಧಿಕಾರಗಳ ಆಡಳಿತಕ್ಕೊಳಪಟ್ಟಿತ್ತು. ಪೂರ್ವಭಾಗವು ತೊರಗಲೆ ನಾಡಿನಲ್ಲಿ (ತೊರಗಲೆ-೬೦೦೦) ಸೇರ್ಪಡೆಯಾಯಿತು. ದೇವಗಿರಿಯ ಸೇವುಣರ ಅವನತಿಯ ತರುವಾಯ ಕೂಹುಂಡಿನಾಡಿನ ಪ್ರದೇಶವು ಕ್ರಮವಾಗಿ ವಿಜಯನಗರದ ಅರಸರು, ದೆಹಲಿಯ ಸುಲ್ತಾನರು (ಖಿಲ್ಜಿ ಮತ್ತು ತುಘಲಕ್ ಮನೆತನಗಳು), ಬಹಮನಿಯ ಸುಲ್ತಾನರು, ವಿಜಾಪುರದ ಆದಿಲ್‌ಷಾಹಿಗಳು, ಮೊಘಲರು, ಮರಾಠರ ಶಿವಾಜಿ, ಪೇಶ್ವೆಗಳು, ಪಟವರ್ಧನರು, ಸಂಸ್ಥಾನಗಳು (ಕಿತ್ತೂರು, ಬೆಳವಡಿ, ಜಮಖಂಡಿ, ಮುಧೋಳ, ರಾಮದುರ್ಗ, ವಂಟಮುರಿ, ನಿಪ್ಪಾಣಿ, ಪಟ್ಟಣಕೋಡಿ, ಖಡಕಲಾಟ, ನಾಗರಮುನ್ನೊಳ್ಳಿ, ಸಾಂಗಲಿ, ಕೊಲ್ಲಾಪುರ ಇತ್ಯಾದಿ), ಬ್ರಿಟಿಷರ ಆಳ್ವಿಕೆಗೊಳಪಟ್ಟಿತು. ಬ್ರಿಟಿಷರು ೧೮೩೬ರಲ್ಲಿ ಧಾರವಾಡ ಜಿಲ್ಲೆಯ ಪ್ರದೇಶವನ್ನು ಉತ್ತರ-ದಕ್ಷಿಣ ಎಂದು ವಿಂಗಡಿಸಿ ಉತ್ತರ ಭಾಗಕ್ಕೆ ಬೆಳಗಾವಿಯನ್ನು ಕೇಂದ್ರವನ್ನಾಗಿ ಮಾಡಿದರು. ೧೯೫೬ರವರೆಗೂ ಮುಂಬೈ ಪ್ರಾಂತದಲ್ಲಿದ್ದ ಈ ಪ್ರದೇಶವು ಅನಂತರ ಕರ್ನಾಟಕ ರಾಜ್ಯದ ಬೆಳಗಾವಿ, ಬಾಗಲಕೋಟ ಮತ್ತು ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಗಳಾಗಿ ಅಭಿವೃದ್ಧಿಯಾಯಿತು.

ಕೂಹುಂಡಿನಾಡಿನ ಶಾಸನಗಳಲ್ಲಿ ಅನೇಕ ಸಾಂಸ್ಕೃತಿಕ ವಿಚಾರಗಳು ದಾಖಲಾಗಿವೆ. ಈ ಸಂಶೋಧನ ಅಧ್ಯಯನದಲ್ಲಿ ಕ್ರಿ.ಶ. ಸುಮಾರು ೭ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಕಾಲಾವಧಿಯಲ್ಲಿ ಬಾಳಿ-ಬದುಕಿದ ಜನಸಾಮಾನ್ಯರ ಜೀವನ ಶೈಲಿ, ಬದುಕು, ಸ್ವಭಾವ, ಪರಿಸ್ಥಿತಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಮಹತ್ವವನ್ನು ಆಧುನಿಕತೆಯೊಂದಿಗೆ ತಾಳೆ ಹಾಕಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸಮಕಾಲೀನ ಶಾಸನಗಳು, ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳು, ದೇವಾಲಯಗಳು,

ಬಸದಿಗಳು ಮೊದಲಾದ ಪುರಾತತ್ವ ಆಧಾರಗಳ ಹಿನ್ನೆಲೆಯಲ್ಲಿ ಸಮಕಾಲೀನ ಸಾಂಸ್ಕೃತಿಕ ಆಯಾಮಗಳ ಮಹತ್ವವನ್ನು ಸ್ಪಷ್ಟಪಡಿಸಲು ಪ್ರಯತ್ನಿಸಲಾಗಿದೆ. ಈ ನಾಡಿನಲ್ಲಿ ಇದುವರೆಗೂ ಬೆಳಕಿಗೆ ಬಂದಿರುವ ಶಾಸನಗಳ ಆಧಾರದ ಮೇಲೆ ಕೂಹುಂಡಿನಾಡಿನ ಭೌಗೋಳಿಕ ವ್ಯಾಪ್ತಿ ಮತ್ತು ಪ್ರಾಚೀನತೆಯನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ಇಲ್ಲಿಯ ಶಾಸನಗಳೋಕ್ತ ಸ್ಥಳನಾಮಗಳಿಂದ ಗ್ರಾಮ ವಿವೇಚನೆ ಮಾಡಿ ಈ ಪ್ರದೇಶದ ಉತ್ತರ, ಮಧ್ಯ, ಪೂರ್ವ ಅಕ್ಷಾಂಶ ರೇಖಾಂಶಗಳನ್ನು, ಈ ಪ್ರದೇಶವು ಸಮುದ್ರ ಪಾತಳಿಯಿಂದ ಎತ್ತರವಾದ ಬಗೆಯನ್ನು, ಕೂಹುಂಡಿನಾಡಿನ ವ್ಯಾಪ್ತಿಯನ್ನು ದಕ್ಷಿಣೋತ್ತರ ಮತ್ತು ಪೂರ್ವಪಶ್ಚಿಮಾಭಿಮುಖವಾಗಿ ಗುರುತಿಸಲಾಗಿದೆ. ಇಲ್ಲಿಯ ಭೌಗೋಳಿಕ ಲಕ್ಷಣಗಳಾದ ಬೆಟ್ಟ, ಶಿಖರ, ಅರಣ್ಯ, ಹವಾಗುಣ, ಗುಡ್ಡಗಾಡು, ನದಿ, ಹಳ್ಳ–ಕೊಳ್ಳ ಮೊದಲಾದವುಗಳ ವೈಶಿಷ್ಟ್ಯತೆಯನ್ನು ಗುರುತಿಸಲಾಗಿದೆ. ಇವುಗಳ ಆಧಾರದ ಮೇಲೆ ಕೂಹುಂಡಿನಾಡಿನ ವ್ಯಾಪ್ತಿಯನ್ನು ಇದೇ ಮೊದಲ ಬಾರಿಗೆ ಸ್ಪಷ್ಟವಾಗಿ ನಿರ್ದಿಷ್ಟಪಡಿಸಲಾಗಿದೆ. ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಿತ ಗ್ರಾಮನಾಮಗಳ ಪ್ರಾಚೀನತೆ ಮತ್ತು ಇವುಗಳ ಭಾಷಿಕ ಬದಲಾವಣೆಗಳನ್ನು ಸ್ಥೂಲವಾಗಿ ಗುರುತಿಸುವ ಮೂಲಕ ಕೂಹುಂಡಿನಾಡಿನ ಚರಿತ್ರೆಯನ್ನು ಈ ಅಧ್ಯಯನದ ಮೂಲಕ ಪ್ರಪ್ರಥಮವಾಗಿ ವ್ಯವಸ್ಥಿತವಾಗಿ ಕಟ್ಟಿಕೊಡಲಾಗಿದೆ. ಕನ್ನಡನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಪುನಾರಚಿಸುವಲ್ಲಿ ಇಲ್ಲಿಯ ಶಾಸನಗಳಲ್ಲಿ ದಾಖಲಾದ ವ್ಯಕ್ತಿನಾಮ ಮತ್ತು ಸ್ಥಳನಾಮಗಳು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತವೆ.

ಕೂಹುಂಡಿನಾಡಿನ ಶಾಸನಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಪ್ರದೇಶವನ್ನಾಳಿದ ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣರು, ದೋರಸಮುದ್ರದ ಹೊಯ್ಸಳರ ರಾಜಕೀಯ ಚಟುವಟಿಕೆಗಳನ್ನು ಗಮನಿಸಲಾಗಿದೆ. ಈ ಎಲ್ಲ ಮನೆತನಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕೂಹುಂಡಿನಾಡಿನ ಪ್ರದೇಶದಲ್ಲಿ ಇದುವರೆಗೂ ಉಪಲಬ್ಧವಾಗಿರುವ ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಸವಿಸ್ತಾರವಾಗಿ ಗಮನಿಸಲಾಗಿದೆ. ಈ ಮನೆತನಗಳ ಆಳ್ವಿಕೆಯ ಕಾಲಾವಧಿಗಳಲ್ಲಿ ಈ ನಾಡಿನಲ್ಲಿ ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಆಡಳಿತಾಧಿಕಾರಿಗಳ ರಾಜಕೀಯ ಚಟುವಟಿಕೆಗಳು ಮತ್ತು ಅವರು ಕೈಗೊಂಡ ಸಾಂಸ್ಕೃತಿಕ ಕಾರ್ಯಗಳನ್ನೂ ಅವಲೋಕಿಸಲಾಗಿದೆ. ಸವದತ್ತಿಯ ರಟ್ಟ ಮನೆತನದಲ್ಲಿ ಮೂರು ಶಾಖೆಗಳು ಆಳ್ವಿಕೆ ನಡೆಸಿರುವುದು ಗೋಚರಿಸುತ್ತದೆ. ಅವುಗಳನ್ನು ಅಮರ್ಧಕಪುರದ ರಟ್ಟರು, ಶಿಲಾಹಾರ ರಟ್ಟರು, ಸವದತ್ತಿಯ ರಟ್ಟರು ಎಂದು ಗುರುತಿಸಲಾಗಿದೆ. ಸವದತ್ತಿಯ ರಟ್ಟ ಮನೆತನದ ವಂಶಾವಳಿಯನ್ನು ಇದೇ ಮೊದಲ ಬಾರಿಗೆ ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಮನೆತನದ ಪ್ರತಿಯೊಬ್ಬ ಅರಸನ ಆಡಳಿತದ ವೈಖರಿ, ಇವರ ಕೀರ್ತಿ, ಯುದ್ಧನೀತಿ ಮತ್ತು ಸಾಧನೆಗಳನ್ನು ಕಾಲಾನುಸಾರವಾಗಿ ಕ್ರೋಢೀಕರಿಸಲಾಗಿದೆ. ರಟ್ಟರು ಇತರೆ ಅರಸರಿಗಿಂತ ಹೇಗೆ ಭಿನ್ನರಾಗಿದ್ದಾರೆ ಎಂಬುದನ್ನು ಸವಿಸ್ತಾರವಾದ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಕೂಹುಂಡಿನಾಡಿನ ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ತೇರಿದಾಳ-೧೨, ಕುರುಂಬೆಟ್ಟ ಕಂಪಣ, ಸುಗಂಧವರ್ತಿ-೧೨, ಹೊರಘಟ್ಟ-೭೦, ಹುಬ್ಬಳ್ಳಿ-೧೨, ವೇಣುಗ್ರಾಮ-೭೦, ಉತ್ಸುಗ್ರಾಮೆ-೩೦, ಕೊರವಳ್ಳಿ-೧೫೦, ನೂಲೆನಾಡು, ಕುಂದುರುಗೆ ಕಂಪಣ, ಪೂವಿನಬಾಗೆ, ಪಸಣಕಾಗೆ(?), ಸೊಗಲ-೩೦ ಮೊದಲಾದ ಕೆಲವು ಆಡಳಿತ ವಿಭಾಗಗಳಲ್ಲಿ ವಿಂಗಡಿಸಲಾಗಿತ್ತು. ಇಂದಿನ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯತಗಳಂತೆ ಈ ನಾಡಿನಲ್ಲಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು ಎಂಬುದಕ್ಕೆ ಈ ಆಡಳಿತ ವಿಭಾಗಗಳು ಸಾಕ್ಷಿಗಳಾಗಿವೆ. ಪ್ರಾಚೀನ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ತಿಳಿಹೇಳುವಲ್ಲಿ ಈ ಆಡಳಿತ ವಿಭಾಗಗಳು ಮಹತ್ವದ ಪಾತ್ರವನ್ನು ವಹಿಸಿವೆ. ಅಷ್ಟಾಗಿ ಚರ್ಚೆಗೆ ಒಳಗಾಗದ ಈ ಆಡಳಿತ ವಿಭಾಗಗಳನ್ನು ಇದೇ ಪ್ರಪ್ರಥಮವಾಗಿ ವಿಸ್ತೃತವಾಗಿ ಪರಿಶೀಲಿಸಲಾಗಿದೆ. ಇಲ್ಲಿಯ ಆಳರಸರು ಸುವ್ಯವಸ್ಥಿತವಾದ ಆಡಳಿತದ ಅನುಕೂಲಕ್ಕಾಗಿ ದಂಡನಾಯಕರು, ಸೇನಬೋವರು, ಪಡೆವಳರು, ಪೆರ್ಗಡೆಗಳು ಮೊದಲಾದ ಹಲವು ಅಧಿಕಾರಿಗಳನ್ನು ನೇಮಕ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಕೂಹುಂಡಿನಾಡಿನ ಪ್ರದೇಶದ ಆಡಳಿತ ವ್ಯವಸ್ಥೆಯ ಆಯಾಮಗಳನ್ನು ಕಂಡುಕೊಳ್ಳಲಾಗಿದೆ.

ಕೂಹುಂಡಿನಾಡಿನ ಸಾಮಾಜಿಕ ವ್ಯವಸ್ಥೆ ಸುವ್ಯವಸ್ಥಿತವಾಗಿ ಮತ್ತು ಸಾಮರಸ್ಯದಿಂದ ಕೂಡಿತ್ತೆಂಬುದು ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಇಲ್ಲಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಅಸ್ತಿತ್ವದಲ್ಲಿದ್ದವು. ಈ ವರ್ಣಗಳ ಜೊತೆಗೆ ಕುಂಬಾರರು, ಗಾಣಿಗರು, ಲಾಳದವರು, ದೊಸಿಗರು, ಕಡವರು, ಅಕ್ಕಸಾಲಿಗರು, ಬಡಿಗರು, ಮಣಿಗಾರರು ಎಂಬ ವೃತ್ತಿ ಆಧಾರಿತ ಜಾತಿಗಳು, ವರ್ಗವ್ಯವಸ್ಥೆ, ಸಂಘ-ಸಂಸ್ಥೆಗಳು ಮೊದಲಾದ ವ್ಯವಸ್ಥೆಗಳು ಇರುವುದು ಕಂಡುಬರುತ್ತದೆ. ಇಲ್ಲಿಯ ಸಮುದಾಯಗಳು ವೃತ್ತಿಗಳಿಗನುಗುಣವಾಗಿ ವಿಂಗಡಿತವಾಗಿರುವುದು ಗೋಚರಿಸುತ್ತದೆ. ಇದನ್ನು ಕೂಹುಂಡಿನಾಡಿನ ಶಾಸನಗಳು ಸ್ಪಷ್ಟಪಡಿಸುತ್ತವೆ. ಈ ನಾಡಿನ ಸಮಕಾಲೀನ ಜನಜೀವನ ಮತ್ತು ಜೀವನ ವಿಧಾನಗಳು ಇಲ್ಲಿಯ ಶಾಸನಗಳಲ್ಲಿ ಸೊಗಸಾಗಿ ಪ್ರತಿಬಿಂಬಿತವಾಗಿವೆ. ಸ್ತ್ರೀಯರ ಸ್ಥಾನಮಾನಗಳು, ವಿದ್ಯಾಭ್ಯಾಸ ಮತ್ತು ಅವರು ತಮ್ಮ ಪತಿಗಳಿಗೆ ರಾಜಕೀಯ ವಿಷಯವಾಗಿ ನೀಡಿರುವ ಸಹಾಯ-ಸಹಕಾರಗಳು, ಇವರು ಕೈಗೊಂಡಿರುವ ಧಾರ್ಮಿಕ ಚಟುವಟಿಕೆಗಳು, ಕಟ್ಟಿಸಿದ ದೇವಾಲಯಗಳು ಮತ್ತು ಬಸದಿಗಳು, ವಿವಿಧ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಕೊಡಮಾಡಿರುವ ದಾನ-ದತ್ತಿಗಳು ಗಮನೀಯವಾಗಿವೆ. ಈ ನಿಟ್ಟಿನಲ್ಲಿ ಸವದತ್ತಿಯ ರಟ್ಟ ಮನೆತನದ ಅರಸರ ಪಟ್ಟದರಸಿಯರಾದ ನೀಜಿಯಬ್ಬರಸಿ, ಲಚ್ಚಬ್ಬರಸಿ, ಮೈಳಲದೇವಿ, ಭಾಗಲದೇವಿ, ಲಕ್ಷ್ಮೀದೇವಿ, ಪದ್ಮಲಾದೇವಿ, ಏಚಲಾದೇವಿ ಮತ್ತು ಸಮಕಾಲೀನ ಇತರೆ ಸ್ತ್ರೀಯರು ಕೈಗೊಂಡಿರುವ ಸಾಂಸ್ಕೃತಿಕ ಚಟುವಟಿಕೆಗಳು ಗಮನಾರ್ಹವಾಗಿವೆ.

ಕೂಹುಂಡಿನಾಡಿನ ಪ್ರದೇಶದ ಶಿಕ್ಷಣ ಮತ್ತು ಸಾಹಿತ್ಯವನ್ನು ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಕರ್ನಾಟಕದಲ್ಲಿದ್ದ ಶಿಕ್ಷಣ

ಕ್ರಮವೇ ಈ ಪ್ರದೇಶದಲ್ಲಿಯೂ ಪ್ರಚಲಿತದಲ್ಲಿತ್ತು. ಈ ನಾಡಿನಲ್ಲಿ ಅಸುಂಡಿ, ಖಡಕಲಾಟ, ಕಬ್ಬೂರು, ಬೆಳವಿ, ಚಚಡಿ, ನೇಸರಗಿ, ತೇರದಾಳ ಮೊದಲಾದ ಅಗ್ರಹಾರಗಳು, ಸಂಕೇಶ್ವರ, ರಾಯಬಾಗ ಮೊದಲಾದ ಬ್ರಹ್ಮಪುರಿಗಳು, ರಾಯಬಾಗ, ಸವದತ್ತಿ, ಹಣ್ಣಿಕೇರಿ ಮೊದಲಾದ ಘಟಿಕಾಸ್ಥಾನಗಳು, ಮಮದಾಪುರದ ತ್ರಿಕೂಟಪ್ರಾಸಾದ (ತ್ರೈಪುರುಷ) ದೇವಾಲಯ, ಕಲ್ಲೊಳೆಯ ತ್ರಿಕೂಟಮಂಡಿತ ಶಾಂತಿನಾಥ ಬಸದಿ ಮೊದಲಾದ ತ್ರಿಕೂಟಾಚಲ ತಲವಿನ್ಯಾಸದ ದೇವಾಲಯಗಳು, ಮಠಗಳು ಶಿಕ್ಷಣ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಈ ಪ್ರದೇಶದಲ್ಲಿ ಶೈವ ಧರ್ಮದ ಕಾಳಾಮುಖ ಪಂಥದ ಆಚಾರ್ಯರು ಬಹು ಪ್ರಭಾವಶಾಲಿಗಳಾಗಿದ್ದರು. ಇವರು ದೇವಾಲಯಗಳ ನಿರ್ಮಾಣ ಮತ್ತು ಶಿಕ್ಷಣ–ಸಾಹಿತ್ಯಕ್ಕೆ ವಿಶೇಷವಾದ ಮನ್ನಣೆಯನ್ನು ಕೊಟ್ಟಿದ್ದರು. ಇಲ್ಲಿಯ ಶಿಕ್ಷಣ ಪದ್ಧತಿ ಏಕೋಪಾಧ್ಯಾಯವಾಗಿರುವಂತೆ ಗೋಚರಿಸುತ್ತದೆ. ಈ ನಾಡಿನ ಕೆಲವು ಶಾಸನಗಳನ್ನು ಕವಿಗಳು ಮತ್ತು ಆಚಾರ್ಯರು ರಚಿಸಿದ್ದಾರೆ. ಈ ಎಲ್ಲ ಕವಿಗಳು ಮತ್ತು ಆಚಾರ್ಯರ ಕುರಿತಾಗಿ ವಿಸ್ತಾರವಾಗಿ ಅಧ್ಯಯನ ಮಾಡಲಾಗಿದೆ. ಇಲ್ಲಿಯ ಆಳರಸರ ಆಶ್ರಯದಲ್ಲಿದ್ದ ಕಮಳಾದಿತ್ಯ, ಸೋರಿಗಾಂಕ, ಶ್ರುತಕೀರ್ತಿ, ಲಕ್ಷ್ಮಣ, ಇಮ್ಮಡಿ ಆಚಣ್ಣ, ಸಮತೋಜ, ಬೊಮ್ಮರಸ, ಮಾದಿರಾಜ, ಬಾಳಚಂದ್ರ, ರುದ್ರಭಟ್ಟ, ಪಾರ್ಶ್ವಕವಿ, ಪಾರ್ಶ್ವಪಂಡಿತ, ಇಮ್ಮಡಿ ಗುಣವರ್ಮ, ನೇಮಿಚಂದ್ರ, ಕರ್ಣಪಾರ್ಯ ಮೊದಲಾದ ಕವಿಗಳು ಅಪರೂಪದ ಕಾವ್ಯಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತವಾಗಿಸಿದ್ದಾರೆ. ಬಾದಾಮಿಯ ಚಲುಕ್ಯರು, ಮಳಖೇಡದ ರಾಷ್ಟ್ರಕೂಟರು, ಸೇಂದ್ರಕರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರು, ಕಲ್ಯಾಣದ ಕಲಚೂರಿಯರು, ದೇವಗಿರಿಯ ಸೇವುಣ ಮನೆತನಗಳ ಆಳರಸರಾದಿ ರಾಣಿಯರು, ಅಧಿಕಾರಿಗಳು ಶಿಕ್ಷಣ ಮತ್ತು ಸಾಹಿತ್ಯದ ಅಭಿವೃದ್ಧಿಗಾಗಿ ಉದಾರವಾಗಿ ದಾನ–ದತ್ತಿಗಳನ್ನು ಕೊಡಮಾಡಿದ್ದಾರೆ.

ಕೂಹುಂಡಿನಾಡಿನ ಶಾಸನಗಳು ಸಾಹಿತ್ಯದ ದೃಷ್ಟಿಯಿಂದಲೂ ಗಮನಾರ್ಹವಾಗಿವೆ. ಇಲ್ಲಿ ಶಾಸನಗಳನ್ನು ಬರೆಯುತ್ತಿದ್ದವರಿಗೆ ಪೂರ್ಣಪ್ರಮಾಣದಲ್ಲಿ ಪ್ರಾದೇಶಿಕ ಕನ್ನಡ ಭಾಷೆಯ ಪರಿಚಯವಿತ್ತೆಂಬುದೂ ವೇದ್ಯವಾಗುತ್ತದೆ. ಇಲ್ಲಿನ ಶಾಸನಗಳ ಮೇಲೆ ಸಮಕಾಲೀನ ಕವಿಗಳ ಪ್ರಭಾವ ದಟ್ಟವಾಗಿದೆ. ಕೆಲವು ಶಾಸನಗಳು ಕನ್ನಡ ಛಂದಸ್ಸಿನ ವಿವಿಧ ಮಟ್ಟುಗಳು ಮತ್ತು ಅವುಗಳ ವಿಶೇಷತೆಗೆ ಉತ್ತಮ ನಿದರ್ಶನಗಳಾಗಿವೆ. ಸಾಹಿತ್ಯ ರಚನೆಯೂ ಈ ನಾಡಿನಲ್ಲಿ ಸಹಜವಾಗಿ ನಡೆಯುತ್ತಿತ್ತು ಎಂಬುದಕ್ಕೂ ಈ ಶಾಸನಗಳಲ್ಲಿ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಕಲ್ಲೊಳೆ, ಬೆಳಗಾವಿ, ಯಕ್ಸಂಬಾ, ಕೊಣ್ಣೂರು, ವಣ್ಣೂರು, ಬೆಳವಡಿ, ರಾಯಬಾಗ, ತೇರದಾಳ, ತೇರ್ಣಿ, ಕೊಲ್ಲಾಪುರ, ಸವದತ್ತಿ ಮೊದಲಾದೆಡೆಯ ಶಾಸನಗಳಿಗೆ ಸಾಹಿತ್ಯಿಕ ದೃಷ್ಟಿಯಿಂದ ಗಮನಾರ್ಹವಾದ ಸ್ಥಾನಮಾನವಿದೆ.

ಕೂಹುಂಡಿನಾಡಿನ ಪ್ರದೇಶದ ಆರ್ಥಿಕ ಪರಿಸ್ಥಿತಿಯ ವಿವಿಧ ಆಯಾಮಗಳನ್ನು ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಸವಿಸ್ತಾರವಾಗಿ ಗುರುತಿಸಲಾಗಿದೆ. ಇಲ್ಲಿಯ ಜನಸಾಮಾನ್ಯರು ಕೃಷಿಯನ್ನೇ ತಮ್ಮ ಜೀವನದ ಪ್ರಮುಖ ಉದ್ಯೋಗವಾಗಿರಿಸಿಕೊಂಡಿದ್ದರು. ಇದಕ್ಕೆ ಬೇಕಾದ ನೀರಾವರಿ ವ್ಯವಸ್ಥೆಯನ್ನು ನದಿಗಳು, ಕೆರೆಗಳು, ಬಾವಿಗಳಿಂದ ಮಾಡಿಕೊಂಡಿದ್ದರು. ಹಾಗೆಯೇ ಇಲ್ಲಿಯ ಕೆಲವು ಭೂಮಿಗಳು

ಮಳೆಯನ್ನು ಅವಲಂಬಿಸಿದ್ದವು. ಜೊತೆಗೆ ಈ ನಾಡಿನಲ್ಲಿ ಹರಿದಿರುವ ಕೃಷ್ಣಾ, ಘಟಪ್ರಭಾ, ಮಲಪ್ರಭಾ, ಹಿರಣ್ಯಕೇಶಿ ಮೊದಲಾದ ನದಿಗಳೂ ಇಲ್ಲಿಯ ನೀರಾವರಿ ವ್ಯವಸ್ಥೆಯ ಆಸರೆಗಳಾಗಿದ್ದವು. ಅರಸರು ಮತ್ತು ಪ್ರಜೆಗಳು ಭೂಮಿಯ ಒಡೆಯರಾಗಿದ್ದರು. ಇಲ್ಲಿಯ ಶಾಸನಗಳಲ್ಲಿ ಬೆಲ್ಲ ಮತ್ತು ಸಕ್ಕರೆ ಕೈಗಾರಿಕೆ, ಎಣ್ಣೆ ಕೈಗಾರಿಕೆ, ಬಟ್ಟೆ ಕೈಗಾರಿಕೆ, ಆಭರಣಗಳ ಕೈಗಾರಿಕೆ, ಮರಗೆಲಸದ ಕೈಗಾರಿಕೆ, ಸುಣ್ಣ ಕೈಗಾರಿಕೆ, ಕುಂಬಾರಿಕೆ ಮೊದಲಾದ ಕೆಲವು ಕೈಗಾರಿಕೆಗಳ ಪ್ರಸ್ತಾಪಗಳಿವೆ. ಈ ಕೈಗಾರಿಕೆಗಳ ಹಿನ್ನೆಲೆಯಲ್ಲಿ ಇಲ್ಲಿಯ ಜನಸಾಮಾನ್ಯರು ಆರ್ಥಿಕವಾಗಿ ಸಬಲರಾಗಿದ್ದರೆಂಬುದು ಮನದಟ್ಟಾಗುತ್ತದೆ. ಈ ನಾಡಿನಲ್ಲಿ ಸ್ಥಳೀಯ ಮತ್ತು ಇತರೆಡೆಯ ಸೆಟ್ಟಿಗುತ್ತರು, ಬಣಜಿಗರು, ವೀರಬಣಂಜುಗಳು, ಮುಮ್ಮುರಿದಂಡರು, ವಡ್ಡವ್ಯವಹಾರಿಗಳು, ಗವರೆಯರು, ಗಾತ್ರಿಗರು, ಅಯ್ಯಾವೊಳೆಯ ಐನೂರ್ವರು, ಅರುವತ್ತೊಕ್ಕಲರು, ಮಲೆಯಾಳಿ ವ್ಯಾಪಾರಿಗಳು, ದೇಶಿಗಳು ಮೊದಲಾದ ವರ್ತಕ ಸಂಘಗಳು ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಕೈಗೊಂಡಿವೆ. ಈ ಸಂಘಗಳ ಸದಸ್ಯರು ವ್ಯಾಪಾರದ ಜೊತೆಗೆ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ ಮೊದಲಾದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಗೊಂಡು ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಭೂಮಿ ಮತ್ತು ವ್ಯಾಪಾರದ ಸರಕುಗಳನ್ನು ಅಳೆಯಲು ಕೊಳಗ, ಬಳ್ಳ, ಮಾನ, ಸೊಲ್ಲಗೆ, ಸೊಂಟಿಗೆ, ಪಳಿಗೆ, ಖಂಡುಗ, ಹಸ್ತ, ಗಳೆ, ಕಂಬ, ಕಮ್ಮ, ಮತ್ತರು, ಗೇಣು, ಕೋಲು, ನಿವರ್ತನ ಮೊದಲಾದ ನಿಖರವಾದ ತೂಕ ಮತ್ತು ಅಳತೆ ಮಾಪನಗಳಿದ್ದವು. ಇವುಗಳಲ್ಲಿ ಈ ನಾಡಿನ ಹೆಸರಿನಲ್ಲಿದ್ದ ಕೂಹುಂಡಿಕೋಲು ಎಂಬುದು ಗಮನೀಯವಾಗಿದೆ. ಈ ಕೋಲು ಕೂಹುಂಡಿನಾಡಿನ ಹೊರಭಾಗದಲ್ಲಿಯೂ ಭೂಮಿಯನ್ನು ಅಳೆಯಲು ಬಳಕೆಯಾಗಿರುವುದು ಗಮನಾರ್ಹವಾಗಿದೆ. ಈ ನಾಡಿನಲ್ಲಿ ಗದ್ಯಾಣ, ಪಣ, ಕಾಂಚನ, ವೀಸ, ಕಾಣೆ ಮೊದಲಾದ ಪ್ರಕಾರದ ನಾಣ್ಯಗಳು ಚಲಾವಣೆಯಲ್ಲಿದ್ದವು. ಇಲ್ಲಿ ಬಳಕೆಯಲ್ಲಿದ್ದ ನಾಣ್ಯಗಳ ಕುರಿತು ಜೈನಕವಿ ರಾಜಾದಿತ್ಯನು ತನ್ನ 'ವ್ಯವಹಾರಗಣಿತ' ಕಾವ್ಯದಲ್ಲಿ ಸವಿಸ್ತಾರವಾಗಿ ನಿರೂಪಿಸಿದ್ದಾನೆ. ಈ ನಾಡಿನಲ್ಲಿ ವೃತ್ತಿ ತೆರಿಗೆ, ಭೂಮಿ ಮತ್ತು ಆಸ್ತಿ ತೆರಿಗೆ, ವಾಣಿಜ್ಯ ತೆರಿಗೆ, ಕೈಗಾರಿಕೆ ತೆರಿಗೆ ಮೊದಲಾದ ತೆರಿಗೆಗಳು ರಾಜ್ಯದ ಆದಾಯಗಳಾಗಿದ್ದವು. ಒಟ್ಟಾರೆ ಭೌಗೋಳಿಕವಾಗಿ ಸಂಪದ್ಭರಿತ ಸಂಪನ್ಮೂಲಗಳನ್ನು ಒಳಗೊಂಡಿದ್ದ ಈ ನಾಡಿನ ಆರ್ಥಿಕ ಪರಿಸ್ಥಿತಿ ಸುವ್ಯವಸ್ಥಿತವಾಗಿತ್ತೆಂಬುದು ಇಲ್ಲಿಯ ಶಾಸನಗಳು ಮತ್ತು ಸಮಕಾಲೀನ ಸಾಹಿತ್ಯಿಕ ಕುರುಹುಗಳಿಂದ ಸ್ಪಷ್ಟವಾಗುತ್ತದೆ.

ಕೂಹುಂಡಿನಾಡಿನ ಪ್ರದೇಶವನ್ನಾಳಿದ ಒಂದೊಂದು ಅರಸು ಮನೆತನಗಳ ಆಳ್ವಿಕೆಯ ಕಾಲಾವಧಿಯಲ್ಲಿ ಒಂದೊಂದು ಧರ್ಮವು ರಾಜ್ಯಧರ್ಮವಾಗಿ ಮೆರೆದದ್ದು ನಿಜವಾದರೂ ಅನ್ಯ ಧರ್ಮಗಳ ಬಗೆಗೆ ಇಲ್ಲಿಯ ಆಳರಸರು ಉದಾರವಾಗಿ ನಡೆದುಕೊಂಡಿರುವುದು ಗೋಚರಿಸುತ್ತದೆ. ಈ ನಾಡಿನಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ಧರ್ಮಗಳು ಪ್ರಚಲಿತದಲ್ಲಿದ್ದವು. ಇವುಗಳ ಜೊತೆಯಲ್ಲಿ ಶಾಕ್ತ, ಸೌರ, ಗಾಣಪತ್ಯ ಮೊದಲಾದ ಪಂಥಗಳೂ ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಜೈನ ಧರ್ಮವು ಈ ನಾಡಿನ

ಪ್ರಧಾನ ಧರ್ಮವಾಗಿತ್ತು. ಇದನ್ನು ಬಾದಾಮಿಯ ಚಲುಕ್ಯರು, ಸೇಂದ್ರಕರು, ಮಳಖೇಡದ ರಾಷ್ಟ್ರಕೂಟರು, ಸವದತ್ತಿಯ ರಟ್ಟರು, ಕೊಲ್ಲಾಪುರದ ಶಿಲಾಹಾರರು ವಿಶೇಷವಾಗಿ ಪೋಷಿಸಿ ಬೆಳೆಸಿದ್ದಾರೆ. ಜೈನ ಧರ್ಮದ ಶ್ರೀಧರದೇವ, ಶ್ರೀನಂದಿ ಭಟ್ಟಾರಕ, ಚಂದ್ರಕೀರ್ತಿ, ಮುಳ್ಳಕೀರ್ತಿ ಭಟ್ಟಾರಕ, ಇಂದ್ರಕೀರ್ತಿ, ಕನಕಪ್ರಭ, ಗುಣಕೀರ್ತಿ, ಕನಕಪ್ರಭಸಿದ್ಧಾಂತದೇವ, ಅರ್ಹನಂದಿಮುನಿ, ಬಾಹುಬಲಿ, ಚಂದ್ರಸ್ವಾಮಿ, ಶುಭಚಂದ್ರ, ಕುಮಾರಕೀರ್ತಿಪಂಡಿತ, ವಿಜಯಕೀರ್ತಿಪಂಡಿತ, ಮಾಘನಂದಿ, ಧರಸೇನ, ನೇಮಿಚಂದ್ರ, ಮಲಧಾರಿದೇವ, ಸಮಂತಭದ್ರ, ಗುಣಭದ್ರ, ಲಲಿತಕೀರ್ತಿ, ಇಂದ್ರಕೀರ್ತಿ, ಮಾಧವಭಟ್ಟಾರಕ, ಜಿನದೇವ, ಸುಕೀರ್ತಿಮುನಿ, ಮುನಿಚಂದ್ರ, ಕುಕ್ಕುಟಸೇನ, ಪೂಜ್ಯಪಾದಮುನಿ, ಜಿನಸೇನ ಭಟ್ಟಾರಕ, ಪದ್ಮನಂದಿ, ನಯನಂದಿ, ಶ್ರುತಕೀರ್ತಿ, ವಾಸುಪೂಜ್ಯ, ಮಾಧವಚಂದ್ರ, ವೀರಸ್ವಾಮಿ, ನಯದೇವ, ಕುಮಾರಸೇನದೇವ, ನಾಗಸೇನದೇವ, ಶಾಂತಿನಂದಿಮುನಿ, ಚಂದ್ರಯತಿ, ಮೋನಿಭಟ್ಟಾರಕ, ಚಂದ್ರಮತಿಕಂತಿ, ಸಕಲಚಂದ್ರಸಿದ್ಧಾಂತದೇವ, ಪಾಳ್ಯಕೀರ್ತಿದೇವ, ತ್ರೈಕೀರ್ತಿಸಿದ್ಧಾಂತದೇವ, ವರ್ಧಮಾನತ್ರೈವಿದ್ಯದೇವ, ಪಕ್ಷೋಪವಾಸಿ ಭಟ್ಟಾರಕ, ಸಿದ್ಧನಂದಿ, ಜಿನನಂದಿ ಮೊದಲಾದ ಅನೇಕ ಆಚಾರ್ಯರು, ಶೈವ ಧರ್ಮದ ಮಲೆಯಾಳಪಂಡಿತದೇವ, ತೇಜೋರಾಶಿಪಂಡಿತದೇವ, ರುದ್ರಶಕ್ತಿ, ವಾಮಶಕ್ತಿ, ಜ್ಞಾನಶಕ್ತಿ, ನಾಗರಾಶಿಮುನಿ, ಹೊನ್ನಯ್ಯ, ಸರ್ವೇಶ್ವರಪಂಡಿತ, ಸೋಮೇಶ್ವರಪಂಡಿತದೇವ, ತ್ರಿಭುವನಸಿಂಗಿಪಂಡಿತ, ಪದ್ಮರಾಶಿಪಂಡಿತ, ಅಮೃತರಾಶಿಪಂಡಿತ, ವಿಮಳಶಿವಮುನಿ, ಮಾಳವೇಂದ್ರ ಮೊದಲಾದ ಕಾಳಾಮುಖ ಪಂಥದ ಕೆಲವು ಆಚಾರ್ಯರು, ವೈಷ್ಣವ ಧರ್ಮದ ನಾಗವರ್ಧನ ಚಂದ್ರಾದಿತ್ಯ ಭಟ್ಟಾರಕ, ಲಕ್ಷ್ಮೀಧರ ಪಟ್ಟವರ್ಧನ ಮೊದಲಾದ ಕೆಲವರು ಧರ್ಮಪ್ರಸಾರದೊಂದಿಗೆ ದೇವಾಲಯಗಳು, ಬಸದಿಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಇವುಗಳ ವಿವಿಧ ಚಟುವಟಿಕೆಗಳಿಗೆ ಉದಾರವಾಗಿ ದಾನ-ದತ್ತಿಗಳು ಹರಿದು ಬರಲು ಪ್ರೇರಕರಾಗಿದ್ದಾರೆ. ಹೀಗಾಗಿ ಈ ನಾಡಿನಲ್ಲಿ ನೂರಾರು ದೇವಾಲಯಗಳು ಮತ್ತು ಬಸದಿಗಳು ನಿರ್ಮಾಣವಾಗಿವೆ. ಇವುಗಳಲ್ಲಿ ಕೆಲವು ದೇವಾಲಯಗಳು ಮತ್ತು ಬಸದಿಗಳು ಕಾಲಾಂತರದಲ್ಲಿ ನಾಶವಾಗಿವೆ. ಮತ್ತೆ ಕೆಲವು ಜೀರ್ಣೋದ್ಧಾರವಾಗುತ್ತ ಮೂಲ ವಾಸ್ತು ಸ್ವರೂಪವನ್ನು ಕಳೆದುಕೊಂಡಿವೆ. ಕೆಲವೇ ದೇವಾಲಯಗಳು ಮತ್ತು ಬಸದಿಗಳು ಮಾತ್ರ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಇವೆಲ್ಲವೂ ಇಲ್ಲಿಯ ವಾಸ್ತುಕಲೆಯ ಅಧ್ಯಯನಕ್ಕೆ ಅಪರೂಪದ ಆಕರಗಳಾಗಿವೆ.

ಕಲ್ಯಾಣದ ಕಲಚೂರಿಯರು ಮತ್ತು ದೇವಗಿರಿಯ ಸೇವುಣರು ಶೈವ ಮತ್ತು ವೀರಶೈವ ಧರ್ಮದ ಉನ್ನತಿಗೆ ವಿಶೇಷವಾಗಿ ಶ್ರಮಿಸಿದ್ದಾರೆ. ಕಲಚೂರಿಯರ ಇಮ್ಮಡಿ ಬಿಜ್ಜಳನು ಮಂಗಳವೇಡದಲ್ಲಿ ಮಹಾಮಂಡಳೇಶ್ವರನಾಗಿ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ ಅಂದರೆ ಕ್ರಿ.ಶ. ಸುಮಾರು ೧೨ನೆಯ ಶತಮಾನದಲ್ಲಿ ಬಸವಣ್ಣನವರು ಮಂಗಳವೇಡಕ್ಕೆ ಹೋಗಿ ಆತನ ಮಂತ್ರಿಯಾಗಿ ಅಧಿಕಾರ ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಇವರ ನೇತೃತ್ವದಲ್ಲಿ ವೀರಶೈವ ಧರ್ಮದ ಪುನರುತ್ಥಾನ ಕಾರ್ಯವು ಚಾಲನೆ ಪಡೆಯಿತು. ಬಿಜ್ಜಳನು ಚಾಳುಕ್ಯರನ್ನು ಬದಿಗೊತ್ತಿ ಕಲ್ಯಾಣವನ್ನು ವಶಪಡಿಸಿಕೊಂಡ ತರುವಾಯ ಬಸವಣ್ಣನವರು ಕಲ್ಯಾಣದಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿದರು. ಈ ಸಂದರ್ಭದಲ್ಲಿ

ಕೂಹುಂಡಿನಾಡಿನ ಉತ್ತರಭಾಗದ ಕೆಲವು ಕಾಳಾಮುಖ ಪಂಥದ ದೇವಾಲಯಗಳು ವೀರಶೈವ ಧರ್ಮದ ದೇವಾಲಯಗಳಾಗಿ ರೂಪುಗೊಂಡವು. ಹುಕ್ಕೇರಿ ತಾಲ್ಲೂಕಿನ ಅರ್ಜುನವಾಡದ ಕ್ರಿ.ಶ. ೧೨೬೦ರ ಶಾಸನವು ಬಸವಣ್ಣನವರ ವಂಶಾವಳಿಯ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ. ದೇವಗಿರಿಯ ಸೇವುಣರಿಗೆ ಸೊನ್ನಲಿಗೆಯ (ಇಂದಿನ ಸೊಲ್ಲಾಪುರ) ಕಪಿಲಸಿದ್ಧ ಮಲ್ಲಿಕಾರ್ಜುನನ ಬಗೆಗೆ ವಿಶೇಷ ಭಕ್ತಿ–ಗೌರವಗಳಿದ್ದವು. ಹೀಗಾಗಿ ಇವರು ತಮ್ಮ ಆಳ್ವಿಕೆ ಪ್ರದೇಶದ ವಿವಿಧೆಡೆಗಳಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯಕ್ಕೆ ಅನೇಕ ದಾನ–ದತ್ತಿಗಳನ್ನು ಕೊಟ್ಟಿದ್ದಾರೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಕಾಳಾಮುಖ ಪಂಥದ ಆಚಾರ್ಯರ ಸ್ಫೂರ್ತಿ–ಪ್ರೇರಣೆಯಿಂದ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಈ ಆಚಾರ್ಯರು ವಿದ್ಯಾದಾನ, ಅನ್ನದಾನ, ಸಮಾಜಸೇವೆಯ ಮುಖಾಂತರ ಜನಮನ್ನಣೆಗೆ ಪಾತ್ರರಾಗಿದ್ದರು. ಇಲ್ಲಿಯ ಶಾಸನಗಳಲ್ಲಿ ಸೊಗಲದ ಸೋಮೇಶ್ವರ, ಅಡಿಗೇಶ್ವರ, ಅಣ್ಣಿಗೇರಿಯ ನಗರೇಶ್ವರ, ಮುಗಟಖಾನ ಹುಬ್ಬಳ್ಳಿಯ ನಗರೇಶ್ವರ, ನೇಸರಗಿಯ ಹಬ್ಬೇಶ್ವರ, ಮಾಣಿಕೇಶ್ವರ, ಸಿದ್ಧೇಶ್ವರ, ಗೋಕಾಕ ಜಲಪಾತದ ಮಹಾಲಿಂಗೇಶ್ವರ, ತಟ್ಟೇಶ್ವರ, ಸವದತ್ತಿಯ ಅಂಕೇಶ್ವರ, ಮಲ್ಲಿಕಾರ್ಜುನ, ಹೂಲಿಯ ಪಂಚಮಠ, ಬೈಲಹೊಂಗಲದ ಮಾಚೇಶ್ವರ, ವಣ್ಣೂರದ ಜಯಸಿಂಘೇಶ್ವರ, ಕಲಿದೇವ, ಅಸುಂಡಿಯ ಶಂಕರನಾರಾಯಣ, ಚುಳಕಿಯ ಕಲ್ಮೇಶ್ವರ, ಮುನವಳ್ಳಿಯ ಪಂಚಲಿಂಗೇಶ್ವರ, ಜಗದೀಶ್ವರ, ಕಲಿದೇವ, ಯಡ್ರಾವಿಯ ಬ್ರಹ್ಮೇಶ್ವರ, ಯೆಕ್ಕೇರಿಯ ಮಹಾದೇವ, ಉಮರಾಣಿಯ ಹೆಮ್ಮೇಶ್ವರ, ಕಬ್ಬೂರದ ಕಲಿದೇವಸ್ವಾಮಿ, ಕೇರೂರದ ಕಲಿದೇವ, ಖಡಕಲಾಟದ ಹಂಚಿಕೇಶ್ವರ, ಜಗನೂರದ ಸಿದ್ಧೇಶ್ವರ, ದೊನವಾಡದ ಕಲಿದೇವ, ಕವಿಳಾಸಪುರದ ಕಲ್ಲಿನಾಥ, ಮಲ್ಲಿಕಾರ್ಜುನ, ಸಂಗಮೇಶ್ವರ, ನಾಗೇಶ್ವರ, ಲಕ್ಷ್ಮೇಶ್ವರದ ಸೋಮನಾಥ, ಅಮ್ಮಣಗಿಯ ಕಲಿದೇವ, ಕೋಚರಿಯ ತ್ರಿಕೂಟೇಶ್ವರ, ರಾಯಬಾಗದ ಕಲಿದೇವಸ್ವಾಮಿ, ಬ್ರಹ್ಮೇಶ್ವರ, ಅಷ್ಟೇಶ್ವರ, ಭಳಾರಿ, ವಿನಾಯಕ, ಕೊಣ್ಣೂರದ ಕಯಮೇಶ್ವರ, ಮಮದಾಪುರದ ತ್ರಿಕೂಟಪ್ರಾಸಾದ, ಅಂಬೆವಾಡಿಯ ಗಳಿಗೇಶ್ವರ, ಬೆಳಗಾವಿಯ ಈಶ್ವರ, ಕೊಲ್ಲಾಪುರದ ಅಗಸ್ತ್ಯೇಶ್ವರ, ಕಣಗಿಲೇಶ್ವರ, ಮಹಾಲಕ್ಷ್ಮೀದೇವಿ, ಮುಧೋಳದ ಕಲಿದೇವ ಮೊದಲಾದ ಶೈವ ಧರ್ಮದ ದೇವಾಲಯಗಳ ಪ್ರಸ್ತಾಪಗಳಿವೆ. ಇವುಗಳಲ್ಲಿ ಸೊಗಲದ ಸೋಮೇಶ್ವರ, ನೇಸರಗಿಯ ಹಬ್ಬೇಶ್ವರ, ಗೋಕಾಕ ಜಲಪಾತದ ಮಹಾಲಿಂಗೇಶ್ವರ, ಸವದತ್ತಿಯ ಮಲ್ಲಿಕಾರ್ಜುನ, ವಣ್ಣೂರದ ಕಲಿದೇವ, ಮುನವಳ್ಳಿಯ ಪಂಚಲಿಂಗೇಶ್ವರ, ಲಕ್ಷ್ಮೇಶ್ವರದ ಸೋಮನಾಥ, ರಾಯಬಾಗದ ಕಲಿದೇವಸ್ವಾಮಿ (ಸೋಮೇಶ್ವರ), ಗೋಕಾಕ ಜಲಪಾತದ ತಟ್ಟೇಶ್ವರ, ಮಮದಾಪುರದ ತ್ರಿಕೂಟೇಶ್ವರ, ಕೊಲ್ಲಾಪುರದ ಮಹಾಲಕ್ಷ್ಮೀದೇವಿ ಮೊದಲಾದ ದೇವಾಲಯಗಳು ಇಂದಿಗೂ ಮೂಲ ವಾಸ್ತು ಸ್ವರೂಪದಲ್ಲಿ ಉಳಿದು ಬಂದಿವೆ. ಹಾಗೆಯೇ ಇಲ್ಲಿಯ ಶಾಸನಗಳಲ್ಲಿ ಸಂಕೇಶ್ವರದ ಲಕ್ಷ್ಮೀನರಸಿಂಹ, ಬಡ್ಲಿಯ ಜನಾರ್ಧನ, ಮುನವಳ್ಳಿಯ ಮಾಧವನಾರಾಯಣ, ರಾಯಬಾಗದ ಕೇಶವೇಶ್ವರ ಮೊದಲಾದ ವೈಷ್ಣವ ಧರ್ಮದ ದೇವಾಲಯಗಳ ನಿರೂಪಣೆಗಳಿವೆ. ಈ ಎಲ್ಲ ದೇವಾಲಯಗಳು ಕಾಲಾಂತರದಲ್ಲಿ ಜೀರ್ಣೋದ್ಧಾರವಾಗುತ್ತ ನೂತನ ವಾಸ್ತು ಸ್ವರೂಪವನ್ನು ಪಡೆದಿವೆ.

ಕೂಹುಂಡಿನಾಡಿನ ಪ್ರದೇಶದಲ್ಲಿ ಯಾಪನೀಯ ಸಂಘ ಪರಂಪರೆಯ ಜೈನಾಚಾರ್ಯರ ಸ್ಫೂರ್ತಿ-ಪ್ರೇರಣೆಯಿಂದ ಒಂದಾದರೂ ಬಸದಿಯನ್ನು ನಿರ್ಮಿಸಬೇಕು ಇಲ್ಲವೇ ನಿರ್ಮಿಸಿದ ಬಸದಿಗೆ ದಾನ-ದತ್ತಿಗಳನ್ನು ಕೊಡಬೇಕೆಂಬ ಮನೋಭಾವ ಆಳರಸರಾದಿ ಜನಸಾಮಾನ್ಯರಲ್ಲಿ ವ್ಯಾಪಿಸಿತ್ತು. ಹೀಗಾಗಿ ಈ ನಾಡಿನಲ್ಲಿ ಅನೇಕ ಬಸದಿಗಳು ನಿರ್ಮಾಣವಾಗಿವೆ. ಇಲ್ಲಿಯ ಶಾಸನಗಳಲ್ಲಿ ಸವದತ್ತಿಯ ಜಿನೇಂದ್ರಭವನ, ರಟ್ಟರ ಪಟ್ಟಜಿನಾಲಯ, ದೊಡವಾಡದ ಬಸದಿ, ಬೆಳವಡಿಯ ಸಹಸ್ರಕೂಟ ಬಸದಿ, ಉಳಾಗಡ್ಡಿ ಖಾನಾಪುರದ ಬಸದಿ, ದೇಹಾರ (ಬಾಹುಬಲಿ ಬಸದಿ?), ತೇರದಾಳದ ಗೊಂಕ ಜಿನಾಲಯ, ಕೊಣ್ಣೂರದ ಬಸದಿ, ಯಕ್ಸಂಬಾದ ನೇಮಿನಾಥ ಬಸದಿ, ಬೆನಿವಾಡದ ಬಸದಿ, ಹಣ್ಣಿಕೇರಿಯ ಪಾರ್ಶ್ವಜಿನೇಂದ್ರಭವನ, ಬೈಲಹೊಂಗಲದ ಬಸದಿ, ಬೆಳಗಾವಿ ಶಾಂತಿನಾಥ ಬಸದಿ, ಕಲ್ಲೊಳೆಯ ತ್ರಿಕೂಟಮಂಡಿತ ಶಾಂತಿನಾಥ ಬಸದಿ, ರಾಯಬಾಗದ ಆದಿನಾಥ ಬಸದಿ, ಮಾರಸಿಂಗಸೆಟ್ಟಿ ಬಸದಿ, ಹುಣಸಿಕಟ್ಟಿಯ ಮಾಣಿಕ್ಯದೇವ (ಆದಿನಾಥ) ಬಸದಿ, ಎಲ್ಲಮ್ಮಗುಡ್ಡದ ರಟ್ಟಜಿನಾಲಯ, ಬಡ್ಲಿಯ ಗಂಗಕಂದರ್ಪ ಬ್ರಹ್ಮಜಿನಾಲಯ, ಮುನವಳ್ಳಿಯ ಬಸದಿ, ಯಡ್ರಾವಿಯ ಬಸದಿ, ಸ್ತವನಿಧಿಯ ಬಸದಿ, ಗೋಕಾಕದ ಬಸದಿ, ಕೊಲ್ಲಾಪುರದ ರೂಪನಾರಾಯಣ ಬಸದಿ, ಗಡಹಿಂಗ್ಲಜದ ಚಂದ್ರಪ್ರಭನಾಥ ಬಸದಿ, ತೇರ್ಣಿಯ ರಟ್ಟಜಿನಾಲಯ, ಅಲಕ್ತನಗರದ (ಇಂದಿನ ಅಲ್ತೆ) ತ್ರಿಭುವನತಿಲಕ ಜಿನಾಲಯ, ಹೂಲಿಯ ಬಸದಿ ಮೊದಲಾದ ಜೈನ ಧರ್ಮದ ಬಸದಿಗಳ ಉಲ್ಲೇಖಗಳಿವೆ. ಇವುಗಳಲ್ಲಿ ಬೆಳಗಾವಿಯ ಕಮಲ ಬಸದಿ (ನೇಮಿನಾಥ ಬಸದಿ), ಕಲ್ಲೊಳೆಯ ತ್ರಿಕೂಟಮಂಡಿತ ಶಾಂತಿನಾಥ ಬಸದಿ (ಈಗ ಇದು ಪಾರ್ಶ್ವನಾಥನ ಬಸದಿಯಾಗಿದೆ), ತೇರದಾಳದ ನೇಮಿನಾಥ ಬಸದಿ (ಗೊಂಕ ಜಿನಾಲಯ) ಮೊದಲಾದವುಗಳು ಕೂಹುಂಡಿನಾಡಿನ ವಾಸ್ತುಕಲೆಯ ಅಧ್ಯಯನಕ್ಕೆ ತುಂಬಾ ಅಪರೂಪದ ಕೊಡುಗೆಗಳಾಗಿವೆ.

ಕೂಹುಂಡಿನಾಡಿನ ಧರ್ಮಗಳಲ್ಲಿ ಪರಸ್ಪರ ಸಾಮರಸ್ಯ ಗೋಚರಿಸುತ್ತದೆ. ಈ ಸರ್ವಧರ್ಮಗಳ ಸಮಾನತೆಗೆ ಇಲ್ಲಿಯ ಆಚಾರ್ಯರು, ಚತುಸ್ಸಮಯದೀಪಕರಾದ ಆಳರಸರಾದಿ ಅಧಿಕಾರಿಗಳು, ವಿಶಾಲ ಮನೋಭಾವದ ಪ್ರಜೆಗಳು ಮತ್ತು ಹಬ್ಬ-ಹರಿದಿನಗಳು ಸ್ಫೂರ್ತಿಯಾಗಿವೆ. ಇದೇ ಪ್ರಪ್ರಥಮ ಬಾರಿಗೆ ಈ ಎಲ್ಲ ಧರ್ಮಗಳ ಆಚಾರ್ಯರು, ದೇವಾಲಯಗಳು, ಬಸದಿಗಳು, ಶಿಲ್ಪಗಳ ವಿವಿಧ ಆಯಾಮಗಳನ್ನು ಸವಿಸ್ತಾರವಾಗಿ ಗಮನಿಸಲಾಗಿದೆ. ಇಲ್ಲಿಯ ಶಾಸನಗಳಲ್ಲಿ ಈ ಎಲ್ಲ ಧರ್ಮಗಳ ಆಚಾರ್ಯರು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಧಾರ್ಮಿಕ ವೈಶಿಷ್ಟ್ಯಗಳು, ತತ್ವಗಳು ಮತ್ತು ಪವಿತ್ರತೆಯ ಕುರಿತಾಗಿ ಸೊಗಸಾದ ನಿರೂಪಣೆಗಳಿವೆ. ಈ ಧರ್ಮಗಳ ತತ್ವ-ಸಿದ್ಧಾಂತಗಳು, ಆಚಾರ-ವಿಚಾರಗಳು, ನಂಬಿಕೆ-ಸಂಪ್ರದಾಯಗಳು ಸಮಕಾಲೀನ ಜನಸಾಮಾನ್ಯರ ಮೇಲೆ ತುಂಬಾ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಇಲ್ಲಿಯ ಕೆಲವು ಶಾಸನಗಳಲ್ಲಿ ಬೌದ್ಧ ಧರ್ಮದ ಪ್ರಸ್ತಾಪವಿದೆಯಾದರೂ ಇದರ ಚಟುವಟಿಕೆಗಳ ಕುರಿತಾಗಿ ಸ್ಪಷ್ಟತೆಯಿಲ್ಲ.

ಕೂಹುಂಡಿನಾಡು ಈ ಮೇಲ್ಕಾಣಿಸಿದ ಹಲವಾರು ವೈವಿಧ್ಯತೆಗಳು ಮತ್ತು ವೈಶಿಷ್ಟ್ಯತೆಗಳನ್ನು ಮೈಗೂಡಿಸಿಕೊಂಡು ವಿವಿಧತೆಯಲ್ಲಿ ಏಕತೆಯನ್ನು ಮೆರೆದಿರುವುದು ಈ ನಾಡಿನ ಶಾಸನಗಳ ತಲಸ್ಪರ್ಶಿ

ವಸ್ತುನಿಷ್ಠವಾದ ಅಧ್ಯಯನದಿಂದ ಮನದಟ್ಟಾಗುತ್ತದೆ. ಇಲ್ಲಿಯ ವೈಶಿಷ್ಟ್ಯತೆಗಳು ಕನ್ನಡನಾಡಿನ ಪ್ರಾಚೀನ ಹಾಗೂ ಮಧ್ಯಯುಗೀನ ಪ್ರಾದೇಶಿಕ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ತುಂಬಾ ಅಪರೂಪದ ಕೊಡುಗೆಗಳಾಗಿವೆ. ಈ ಸಂಶೋಧನ ಅಧ್ಯಯನದ ಕೆಲವು ಮಹತ್ವವಾದ ಫಲಿತಗಳು ಈ ಪ್ರದೇಶದಲ್ಲಿ ಮುಂದೆ ನಡೆಯುವ ಅಧ್ಯಯನಗಳು ಮತ್ತು ಅಧ್ಯಯನಕಾರರಿಗೆ ದಾರಿದೀಪಗಳಾಗಿವೆ. ಕೂಹುಂಡಿನಾಡು ಭೌಗೋಳಿಕವಾಗಿ ಇಂದಿನ ಬಾಗಲಕೋಟ, ಬೆಳಗಾವಿ, ಕೊಲ್ಲಾಪುರ ಜಿಲ್ಲೆಗಳ ಪ್ರದೇಶದಲ್ಲಿ ವಿಸ್ತಾರವಾಗಿತ್ತು. ಈ ಹಿನ್ನೆಲೆಯಲ್ಲಿ ಈ ನಾಡಿನ ಮೇರೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಇಂದಿನ ಚಿಕ್ಕೋಡಿ ತಾಲ್ಲೂಕಿನ ಪಟ್ಟಣಕೋಡಿ ಗ್ರಾಮದಿಂದ ಈ ಪ್ರದೇಶವು ಕೂಹುಂಡಿನಾಡು ಎಂದು ಕರೆಯಲ್ಪಟ್ಟಿರುವುದನ್ನು ಸ್ಪಷ್ಟಪಡಿಸಲಾಗಿದೆ. ಕೂಹುಂಡಿನಾಡಿನ ಪ್ರದೇಶದಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದ ಸಂದರ್ಭದಲ್ಲಿ ಹಲವು ವೀರಗಲ್ಲು ಶಾಸನಗಳು ಮತ್ತು ಜೈನ ಪಾದಪೀಠ ಶಾಸನಗಳು ಬೆಳಕಿಗೆ ಬಂದಿವೆ. ಹಾಗೆಯೇ ಶೈವ, ವೈಷ್ಣವ, ಜೈನ ಧರ್ಮಗಳ ಅನೇಕ ಶಿಲ್ಪಗಳು ಬೆಳಕಿಗೆ ಬಂದಿವೆ. ಕೆಲವು ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳನ್ನು ಇದೇ ಪ್ರಪ್ರಥಮವಾಗಿ ಬೆಳಕಿಗೆ ತರಲಾಗಿದೆ. ಇದುವರೆಗೂ ಕೂಹುಂಡಿನಾಡಿನಲ್ಲಿ ಕೆಲವೇ ಆಡಳಿತ ವಿಭಾಗಗಳನ್ನು ಗುರುತಿಸಲಾಗಿತ್ತು. ಈ ಅಧ್ಯಯನದ ಮೂಲಕ ಇನ್ನೂ ಕೆಲವು ಆಡಳಿತ ವಿಭಾಗಗಳು ಗುರುತಿಸಲಾಗಿದೆ. ಇವುಗಳ ಕೇಂದ್ರ ಪಟ್ಟಣ, ವ್ಯಾಪ್ತಿ ಮತ್ತು ಇವುಗಳಲ್ಲಿ ಸೇರ್ಪಡೆಯಾಗಿದ್ದ ಗ್ರಾಮಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ.

ಕೂಹುಂಡಿನಾಡಿನ ಪ್ರದೇಶದಲ್ಲಿರುವ ಜೈನ ಬಸದಿಗಳಲ್ಲಿ ಪಾರ್ಶ್ವನಾಥನ ಬಸದಿಗಳೇ ಅಧಿಕವಾಗಿ ಗೋಚರಿಸುತ್ತವೆ. ಇದಕ್ಕೆ ಮೈಳಾಪತೀರ್ಥದ ಯಾಪನೀಯ ಸಂಘದ ಆಚಾರ್ಯರ ಪ್ರಭಾವ ಕಾರಣವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಕೂಹುಂಡಿನಾಡಿನ ಆಡಳಿತ ವಿಭಾಗವಾದ ನೂಲೆನಾಡಿನ ವ್ಯಾಪ್ತಿಯಲ್ಲಿ ಬರುವ ಮಹಾರಾಷ್ಟ್ರದ ಗಡಹಿಂಗ್ಲಜ ತಾಲ್ಲೂಕಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ಇದೇ ಪ್ರಪ್ರಥಮವಾಗಿ ವರದಿ ಮಾಡಲಾಗಿದೆ. ಗೋಕಾಕ ತಾಲ್ಲೂಕಿನ ಕೊಣ್ಣೂರಿನಲ್ಲಿ ಹಲವು ಸ್ಮಾರಕಗಲ್ಲುಗಳು ಬೆಳಕಿಗೆ ಬಂದಿವೆ. ಇವುಗಳಲ್ಲಿ ರಕ್ಷಮ್ಮ ಎಂಬ ಮಹಾಸತಿಗಲ್ಲು ಮುಖ್ಯವಾಗಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ 'ರಕ್ಷಿ' ಎಂಬ ಗ್ರಾಮದಲ್ಲಿ ರಕ್ಷಮ್ಮ ಎಂಬ ದೇವಾಲಯವಿದೆ. ಪ್ರಾಯಶಃ ಮೂಲತಃ ಇದು ಯಕ್ಷಿಯ ದೇವಾಲಯವಾಗಿರಬಹುದು. ಯಕ್ಷಿ>ಯಕ್ಷಮ್ಮ>ರಕ್ಷಮ್ಮ>ರಕ್ಷೆ>ರಕ್ಷಿ ಎಂದಾಗಿರುವ ಸಾಧ್ಯತೆಯಿದೆ. ರಕ್ಷಮ್ಮ ಹೆಸರಿನಿಂದಲೇ ಈ ಗ್ರಾಮಕ್ಕೆ 'ರಕ್ಷಿ' ಎಂಬ ಹೆಸರು ಬಂದಿರುವುದು ವ್ಯಕ್ತವಾಗುತ್ತದೆ. ಕೂಹುಂಡಿನಾಡಿನ ಪ್ರದೇಶದ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಹೊರಭಾಗದ ವ್ಯಾಪಾರಿಗಳ ಪ್ರಭಾವ ವ್ಯಾಪಕವಾಗಿದೆ. ಈ ಪ್ರದೇಶದಲ್ಲಿ ಮಲಯಾಳಿ (ಇಂದಿನ ಕೇರಳ ಪ್ರದೇಶ) ವ್ಯಾಪಾರಿಗಳ ಚಟುವಟಿಕೆಗಳು ಅಧಿಕವಾಗಿವೆ. ಇವರು ಸ್ತ್ರೀಯರ ಶಿಕ್ಷಣಕ್ಕೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಸವದತ್ತಿಯಲ್ಲಿ ಸ್ತ್ರೀಯರ ಶಿಕ್ಷಣಕ್ಕಾಗಿ ಶಿಕ್ಷಣ ಕೇಂದ್ರವನ್ನು ಪ್ರಾರಂಭಿಸಿ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿದ್ದಾರೆ.

'ಮಹಾರಾಷ್ಟ್ರ' ಎಂಬ ಪರಿಕಲ್ಪನೆ ಈಚಿನದು. ಕ್ರಿ.ಶ. ಸುಮಾರು ೧೩ನೆಯ ಶತಮಾನದ ಅಂತ್ಯದವರೆಗೂ ಇಂದಿನ ಮಹಾರಾಷ್ಟ್ರದ ಬಹುಭಾಗ ಕನ್ನಡನಾಡಿನಲ್ಲಿ ಅಂತರ್ಗತವಾಗಿತ್ತು. ಅಲ್ಲದೇ

ಅದು ಕನ್ನಡ ಅರಸು ಮನೆತನಗಳ ಹತೋಟಿಯಲ್ಲಿತ್ತು. ಆದ್ದರಿಂದ ಇಂದು ಪ್ರಾಚೀನ ಮಹಾರಾಷ್ಟ್ರದ ಚರಿತ್ರೆ ಎಂದು ಯಾವುದನ್ನು ಕರೆಯಲಾಗುತ್ತದೆಯೋ ಅದು ಪ್ರಾಚೀನ ಕರ್ನಾಟಕದ ಚರಿತ್ರೆಯೇ ಆಗಿದೆ ಎಂಬುದು ಕೂಹುಂಡಿನಾಡಿನ ಪ್ರದೇಶದ ಶಾಸನಗಳ ಸಾಂಸ್ಕೃತಿಕ ಅಧ್ಯಯನದಿಂದ ಮತ್ತಷ್ಟು ಮನದಟ್ಟಾಗುತ್ತದೆ. ಆದರೆ ಇಲ್ಲಿ ಹಿಂದೊಮ್ಮೆ ಕನ್ನಡ ಸಂಸ್ಕೃತಿ ತಲೆಯೆತ್ತಿ ನಿಂತಿತ್ತೇ? ಎಂದು ಪ್ರಶ್ನಿಸುವಷ್ಟು ಮಾರ್ಪಾಡುಗಳಾಗಿವೆ. ಆದರೂ ಇಲ್ಲಿನ ಕನ್ನಡ ಶಾಸನಗಳಲ್ಲಿ ದಾಖಲಾದ ವ್ಯಕ್ತಿನಾಮಗಳ ಉತ್ತರ ಪದದಲ್ಲಿ (ಅಪ್ಪ, ಅಣ್ಣ, ಅಮ್ಮ, ಅಯ್ಯ, ಅಬ್ಬೆ, ಅವ್ವೆ, ಅಕ್ಕ ಇತ್ಯಾದಿ) ಮತ್ತು ಸ್ಥಳನಾಮಗಳಲ್ಲಿ ಕನ್ನಡತನ ಎದ್ದುಕಾಣುತ್ತದೆ. ಬಾಂಧವ್ಯ ಸೂಚಕ, ವೃತ್ತಿಸೂಚಕ, ಗೌರವಸೂಚಕ ವ್ಯಕ್ತಿನಾಮಗಳಲ್ಲಿಯೂ ಕನ್ನಡತನ ಎದ್ದುಕಾಣುತ್ತದೆ. ಹೆಸರಿಡುವ ಕ್ರಮ ರೀತಿಗಳೆಲ್ಲ ಪ್ರಾಚೀನ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಒಂದೇ ತೆರನಾಗಿತ್ತು. ಜನಾಂಗಿಕ ಅಧ್ಯಯನಕ್ಕೆ ಪೂರಕವಾದ ಅನೇಕ ಅಂಶಗಳನ್ನು ಈ ವ್ಯಕ್ತಿನಾಮಗಳು ತಮ್ಮ ಮಡಿಲಲ್ಲಿ ಇರಿಸಿಕೊಂಡಿವೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

ಕೂಹುಂಡಿನಾಡಿನ ಪ್ರದೇಶದ ಪಶ್ಚಿಮ ಮತ್ತು ಉತ್ತರ ಭಾಗದ (ಇಂದಿನ ದಕ್ಷಿಣ ಮಹಾರಾಷ್ಟ್ರ) ಬಹುತೇಕ ಸ್ಥಳನಾಮಗಳಲ್ಲಿ ಮೂಲ ದ್ರಾವಿಡ ಅಂಶಗಳುಳ್ಳ ಪ್ರಾಚೀನ ಸ್ಥಳನಾಮಗಳನ್ನು ಇಂದಿಗೂ ಗುರುತಿಸಬಹುದು. ಇಲ್ಲಿಯ ಕ್ರಿ.ಶ. ಸುಮಾರು ೧೧-೧೨ನೆಯ ಶತಮಾನದ ಕನ್ನಡ ಶಾಸನಗಳಲ್ಲಿ ದಾಖಲಾದ ಸ್ಥಳನಾಮಗಳಲ್ಲಿ ಕೆಲವು ಇಂದಿಗೂ ಯಥಾವತ್ತಾಗಿ ಉಳಿದು ಬಂದಿವೆ. ಕೆಲವು ಮರಾಠಿಯ ಪ್ರಭಾವದಿಂದ ಅಲ್ಪಸ್ವಲ್ಪ ವ್ಯತ್ಯಾಸಕ್ಕೆ ಒಳಗಾಗಿವೆ. ಬಹಳ ಕಡಿಮೆ ಪ್ರಮಾಣದಲ್ಲಿ ಇವು ಗುರುತಿಸಲಾರದಷ್ಟು ಮಾರ್ಪಾಡು ಕಂಡಿವೆ. ಈ ಸ್ಥಳನಾಮಗಳ ನಿರ್ದಿಷ್ಟ ಮತ್ತು ವಾರ್ಗಿಕಗಳೆರಡರಲ್ಲಿಯೂ ಹೇರಳವಾಗಿ ಕನ್ನಡ ಪದಗಳು ಬಳಕೆಯಾಗಿರುವುದು ಕಾಣುತ್ತದೆ. ಇಲ್ಲಿಯ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ, ಆದರ್ಶವಾಚಿ, ನಿರ್ಮಾಣವಾಚಿ ಸ್ಥಳನಾಮಗಳಲ್ಲಿ ಕನ್ನಡ ಭಾಷೆಯ ಪದಗಳೇ ಬಳಕೆಯಾಗಿವೆ. ಇವೆಲ್ಲ ಸ್ಥಳೀಯ ನಿವಾಸಿಗಳಾಗಿದ್ದ ಕನ್ನಡಿಗರೇ ಇಟ್ಟ ಹೆಸರುಗಳೆಂಬುದು ಖಚಿತವಾಗುತ್ತದೆ. ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಈ ಸ್ಥಳನಾಮಗಳು ಪಳೆಯುಳಿಕೆಯಂತೆ ಇಂದಿಗೂ ಇಲ್ಲಿ ಉಳಿದು ಬಂದಿರುವುದು ಚಾರಿತ್ರಿಕ ಸತ್ಯವಾಗಿದೆ.

ಹೀಗೆ ಕೂಹುಂಡಿನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಶಾಸನಾಧಾರಗಳ ಮೂಲಕ ಕೈಗೊಂಡಿರುವ ಈ ಸಂಶೋಧನ ಅಧ್ಯಯನದಲ್ಲಿ ಇದೇ ಪ್ರಪ್ರಥಮವಾಗಿ ಅನೇಕ ಹೊಸ ಹೊಸ ವಿಚಾರಗಳು ಬೆಳಕಿಗೆ ಬಂದಿವೆ. ಈ ನಾಡಿನಲ್ಲಿ ಇನ್ನೂ ಅನೇಕ ರೀತಿಯಲ್ಲಿ ಅಧ್ಯಯನಗಳನ್ನು ಕೈಗೊಳ್ಳಲು ಅವಕಾಶವಿದೆ. ಈ ನಾಡಿನ ಶಾಸನಗಳೋಕ್ತ ಮತ್ತು ಯಾವುದೇ ದಾಖಲೆಗಳಿರದ ದೇವಾಲಯಗಳು ಮತ್ತು ಬಸದಿಗಳ ವಾಸ್ತು ಲಕ್ಷಣಗಳ ಕುರಿತಾಗಿ ಅಧ್ಯಯನ ಮಾಡಲು ಸಾಕಷ್ಟು ಅವಕಾಶವಿದೆ. ಈ ನಾಡಿನ ಪ್ರದೇಶದಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳ ವೈವಿಧ್ಯಮಯವಾದ ಶಿಲ್ಪಗಳಿವೆ. ಈ ಎಲ್ಲ ಶಿಲ್ಪಗಳನ್ನು ಒಂದೆಡೆಗೆ ಕಲೆಹಾಕಿ ಆಯಾ ಧರ್ಮಗಳ ತತ್ವ-ಸಿದ್ಧಾಂತಗಳು, ಆಚಾರ-ವಿಚಾರಗಳು, ನಂಬಿಗೆ-ಸಂಪ್ರದಾಯಗಳು ಮತ್ತು ಪ್ರತಿಮಾ ಲಕ್ಷಣಗಳ ಹಿನ್ನೆಲೆಯಲ್ಲಿ ಅಧ್ಯಯನ

ಮಾಡಬಹುದಾಗಿದೆ. ಈ ನಾಡಿನಲ್ಲಿ ವೈವಿಧ್ಯಮಯ ಮತ್ತು ವಿಶಿಷ್ಟವಾದ ಸ್ಮಾರಕಗಲ್ಲುಗಳು (ವೀರಗಲ್ಲುಗಳು, ಮಹಾಸತಿಗಲ್ಲುಗಳು, ನಿಷಿಧಿಗಲ್ಲುಗಳು) ಗೋಚರಿಸುತ್ತವೆ. ಈ ಎಲ್ಲ ಸ್ಮಾರಕಗಲ್ಲುಗಳನ್ನು ಒಂದೆಡೆಗೆ ಸಂಗ್ರಹಿಸಿ ಸಮಕಾಲೀನ ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಬಹುದಾಗಿದೆ. ಈ ನಾಡಿನ ಸಾಮಂತ ಮನೆತನಗಳ ಕುರಿತಾಗಿ ಅಧ್ಯಯನ ಮಾಡಲು ಅವಕಾಶವಿದೆ. ಹಾಗೆಯೇ ಕ್ರಿ.ಶ. ಸುಮಾರು ೧೩ನೆಯ ಶತಮಾನದಿಂದ ೨೦ನೆಯ ಶತಮಾನದವರೆಗಿನ ರಾಜಕೀಯ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮೊದಲಾದವುಗಳ ಕುರಿತಾಗಿ ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ. ಕೂಹುಂಡಿನಾಡಿನ ಪಶ್ಚಿಮ ಮತ್ತು ಉತ್ತರ ಭಾಗದ ಮರಾಠಿ, ಸಂಸ್ಕೃತ ಶಾಸನಗಳಲ್ಲಿ ಕನ್ನಡ ಭಾಷೆಯ ಪದಗಳು, ಬಿರುದುಗಳು ಕಾಣಸಿಗುತ್ತವೆ. ಇವುಗಳ ಭಾಷಿಕ ಅಧ್ಯಯನವನ್ನು ಕೈಗೊಳ್ಳಲು ಅವಕಾಶವಿದೆ. ಈ ನಾಡಿನ ಶಾಸನಗಳಲ್ಲಿ ದಾಖಲಾದ ಸ್ಥಳನಾಮ ಮತ್ತು ವ್ಯಕ್ತಿನಾಮಗಳನ್ನು ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ವಹಿಸುವ ಪಾತ್ರವನ್ನು ಅಧ್ಯಯನ ಮಾಡಬಹುದಾಗಿದೆ. ಈ ಸಾಂಸ್ಕೃತಿಕ ಕೇಂದ್ರಗಳ ವೈಶಿಷ್ಟ್ಯಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಇಂದಿಗೂ ಪ್ರಚಲಿತದಲ್ಲಿರುವ ಐತಿಹ್ಯಗಳು ಮತ್ತು ಸ್ಥಳಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ನಡೆಸಬಹುದಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನವು ಮಾದರಿ ಮತ್ತು ದಿಕ್ಸೂಚಿಯಾಗಿದೆ.

ಒಟ್ಟಾರೆ ಕೂಹುಂಡಿನಾಡಿನ ಶಾಸನಗಳು ಪ್ರಾದೇಶಿಕವಾಗಿ ಕನ್ನಡನಾಡಿನ ಪ್ರಾಚೀನ ಹಾಗೂ ಮಧ್ಯಯುಗೀನ ಕಾಲಾವಧಿಯ ಚರಿತ್ರೆ ಮತ್ತು ಸಂಸ್ಕೃತಿಯ ವಿವಿಧ ಮುಖಗಳ ಅಧ್ಯಯನಕ್ಕೆ ಅಪಾರವಾದ ಕೊಡುಗೆಗಳನ್ನು ಸಲ್ಲಿಸಿರುವುದು ಈ ಮೇಲಿನ ಅವಲೋಕನದಿಂದ ದೃಢಪಡುತ್ತದೆ. ಅಂತಾಗಿ ಒಂದು ನಾಡು ಅಥವಾ ಪ್ರದೇಶದ ಸಮಕಾಲೀನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಕಟ್ಟಿಕೊಡಲು ಪ್ರಸ್ತುತ ಸಂಶೋಧನ ಅಧ್ಯಯನದ ರೀತಿಯಲ್ಲಿ ಪ್ರಾದೇಶಿಕ ಆಡಳಿತ ವಿಭಾಗಗಳ ಸಮಗ್ರ ಶಾಸನಗಳ ಸೂಕ್ಷ್ಮತರವಾದ ತಲಸ್ಪರ್ಶಿ ವಸ್ತುನಿಷ್ಠ ಅಧ್ಯಯನಗಳನ್ನು ಕೈಗೊಳ್ಳುವುದು ತುಂಬಾ ಅವಶ್ಯವೆಂಬುದು ಮನದಟ್ಟಾಗುತ್ತದೆ. ಪ್ರಸ್ತುತ ಅಧ್ಯಯನವು ಮೊಟ್ಟಮೊದಲ ಬಾರಿಗೆ ಕೂಹುಂಡಿನಾಡಿನ ವೈವಿಧ್ಯಮಯವಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಒಂದೆಡೆಗೆ ಒದಗಿಸುತ್ತದೆ. ಇಷ್ಟೆಲ್ಲ ಮಹತ್ವದ ವಿಚಾರಗಳನ್ನು ಹೊರಗೆಡುವುವ ಕೂಹುಂಡಿನಾಡಿನ ಕೆಲವು ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಸ್ಮಾರಕಗಲ್ಲುಗಳು ಇಂದು ವಿನಾಶದ ಅಂಚಿನಲ್ಲಿವೆ. ಮತ್ತೆ ಕೆಲವು ನೈಸರ್ಗಿಕ ವಿಕೋಪಗಳಿಗೆ ತುತ್ತಾಗಿ ಕಾಲಗರ್ಭದಲ್ಲಿ ಲೀನವಾಗುತ್ತಿವೆ. ಇನ್ನೂ ಕೆಲವು ಧನಲೋಭಿಗಳ ನಿಧಿ ಆಸೆಗೆ ಆಹುತಿಯಾಗುತ್ತಿವೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು ಈ ಅವಶೇಷಗಳ ಮಹತ್ವದ ಕುರಿತು ಜನಸಾಮಾನ್ಯರಲ್ಲಿ ಜಾಗೃತಿಯನ್ನು ಮೂಡಿಸಿ ಇವುಗಳ ಸಂರಕ್ಷಣೆಯೆಡೆಗೆ ಗಮನ ಹರಿಸುವುದು ತುಂಬಾ ಅವಶ್ಯವಿದೆ.

❖❖❖

ಅನುಬಂಧಗಳು

ಅನುಬಂಧ–ಒಂದು

ಕೂಹುಂಡಿ ನಾಡಿನ ಪ್ರಕಟಿತ ಮತ್ತು ಅಪ್ರಕಟಿತ ಶಾಸನಗಳ ಪಟ್ಟಿ.

ಅನಂ	ಗ್ರಾಮ.	ತಾಲೂಕು.	ಮನೆತನ	ಕಾಲ	ವರದಿ/ಪ್ರಕಟಣೆ
೦೧	ಏಣಗಿ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ.೧೧೮೨	ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್–ಪ್ಲೇಟ್ ಇನ್ಸ್‌ಕ್ರಿಪ್ಶನ್ಸ್ ಎಗ್ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦–೪೧ (೧೯೬೧), ಶಾ.ಸಂ. ೨೯, ಪು. ೫.
೦೨	ಕಲಬಾವಿ	ಬೈಲಹೊಂಗಲ	–	ಕ್ರಿ.ಶ.ಸು. ೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೦೩	ದೊಡವಾಡ	ಬೈಲಹೊಂಗಲ	–	ಕ್ರಿ.ಶ. ೧೦೭೯	ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ೩೭, ಪು. ೧೨.
೦೪	ನಾಗನೂರು	ಬೈಲಹೊಂಗಲ	ಸವದತ್ತಿ ರಟ್ಟರು	ಕ್ರಿ.ಶ.ಸು. ೧೩ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೦೫	ನೇಸರಗಿ	ಬೈಲಹೊಂಗಲ	ಸವದತ್ತಿ ರಟ್ಟರು	ಕ್ರಿ.ಶ. ೧೨೧೯	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೦೬	ನೇಸರಗಿ	ಬೈಲಹೊಂಗಲ	ಸವದತ್ತಿ ರಟ್ಟರು	ಕ್ರಿ.ಶ.ಸು ೧೧ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೦೭	ಬೆಳವಡಿ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ. ೧೦೭೦	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೦೮	ಬೆಳವಡಿ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ. ೧೦೭೫	ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ–೧೬೭೮–೧೯೭೮ (೧೯೭೯), ಪು. ೧೬–೧೮
೦೯	ಬೆಳವಡಿ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ.ಸು ೧೨ನೆಯ ಶತಮಾನ	ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಂಚಿಕೆ–೧೬೭೮–೧೯೭೮ (೧೯೭೯), ಪು. ೧೬–೧೮
೧೦	ಬೆಳವಡಿ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ.ಸು ೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೧೧	ಬೈಲಹೊಂಗಲ	ಬೈಲಹೊಂಗಲ	–	ಕ್ರಿ.ಶ.ಸು ೧೧ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೨	ಬೈಲಹೊಂಗಲ	ಬೈಲಹೊಂಗಲ	ಕಲ್ಯಾಣಿ ಚಾಲುಕ್ಯ	ಕ್ರಿ.ಶ.ಸು ೧೧ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೫೧–೫೨, ಶಾ.ಸಂ. ೩೩, ಪು. ೧೨.

೧೩	ಬೈಲಹೊಂಗಲ	ಬೈಲಹೊಂಗಲ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು. ೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೧೪	ಬೈಲಹೊಂಗಲ	ಬೈಲಹೊಂಗಲ	ಸವದತ್ತಿ ರಟ್ಟರು	ಕ್ರಿ.ಶ. ೧೧೬೪–೬೫	ಎ.ಆರ್.ಎಸ್.ಆಯ್.ಇ. ೧೯೪೫–೪೬, ಶಾ.ಸಂ. ೩೪೯, ಪು. ೪೦. ಆಯ್.ಎ. ಸಂ. IV, ಪು. ೧೧೫–೧೧೬.
೧೫	ಮುಗಟಖಾನ ಹುಬ್ಬಳ್ಳಿ	ಬೈಲಹೊಂಗಲ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೫೨	ನೇಗಿನಹಾಳ ಎಂ.ಬಿ., "ಒಂದನೆಯ ಸೋಮೇಶ್ವರನ ಮುಗಟಖಾನ ಹುಬ್ಬಳ್ಳಿ ಶಾಸನ", ನೇಗಿನಹಾಳ ಪ್ರಬಂಧಗಳು (೧೯೯೯), ಪು. ೪೪೧–೪೪೪.
೧೬	ಮುಗಟಖಾನ ಹುಬ್ಬಳ್ಳಿ	ಬೈಲಹೊಂಗಲ	–	ಕ್ರಿ.ಶ.ಸು.೧೨ನೆಯ ಶತಮಾನ	ನೇಗಿನಹಾಳ ಎಂ.ಬಿ., "ಒಂದನೆಯ ಸೋಮೇಶ್ವರನ ಮುಗಟಖಾನ ಹುಬ್ಬಳ್ಳಿ ಶಾಸನ", ನೇಗಿನಹಾಳ ಪ್ರಬಂಧಗಳು (೧೯೯೯), ಪು. ೪೪೧–೪೪೪.
೧೭	ಮುಗಟಖಾನ ಹುಬ್ಬಳ್ಳಿ	ಬೈಲಹೊಂಗಲ	ದೇವಗಿರಿಯ ಸೇವುಣ	ಕ್ರಿ.ಶ. ೧೨೪೯	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರಕಿದ ಶಾಸನ
೧೮	ವಕ್ಕುಂದ	ಬೈಲಹೊಂಗಲ	–	ಕ್ರಿ.ಶ.ಸು. ೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೪೫–೪೬, ಶಾ.ಸಂ. ೩೫೦,ಪು. ೪೦.
೧೯	ವಣ್ಣೂರು	ಬೈಲಹೊಂಗಲ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೧೪	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ
೨೦	ವಣ್ಣೂರು	ಬೈಲಹೊಂಗಲ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ
೨೧	ಹಣ್ಣಿಕೇರಿ	ಬೈಲಹೊಂಗಲ	ಸವದತ್ತಿ ರಟ್ಟರು	ಕ್ರಿ.ಶ. ೧೨೦೯	ಎ.ಆರ್.ಎಸ್.ಆಯ್.ಇ. ೧೯೭೩–೭೪, ಶಾ.ಸಂ. ೮೦ ಮತ್ತು ೮೧. ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯). ಶಾ.ಸಂ. ೨೨, ಪು. ೯೯–೧೦೪.
೨೨	ಹುಣಸಿಕಟ್ಟಿ	ಬೈಲಹೊಂಗಲ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೩೧	ಆಯ್.ಎ. ಸಂ. X, ಪು. ೧೩೧.
೨೩	ಅರಟಗಲ್ಲ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೦೦	ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೧, ಪು. ೨೪೦. ಪಾಡಿಗಾರ ಶ್ರೀನಿವಾಸ ವ್ಹಿ. ಮತ್ತು ಪಾಟೀಲ ಕರೆಪ್ಪಗೌಡ ಸಿ., "ಅರಟಗಲ್ಲಿನ ಸ್ಮಾರಕ ಶಿಲಾಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೧೭–೧೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೪	ಅಸುಂಡಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೯೩	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೨೫	ಅಸುಂಡಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು. ೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೪.
೨೬	ಇಂಚಲ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು. ೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೨೭	ಉಗರಗೋಳ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು. ೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೮೨, ಪು. ೨೪೨.
೨೮	ಉಗರಗೋಳ	ಸವದತ್ತಿ	–	ಕ್ರಿ.ಶ.ಸು. ೧೨ನೆಯ ಶತಮಾನ	ಹಂಜೆ ಅಪ್ಪಣ್ಣ ಎನ್., "ಉಗರಗೋಳದ ಜೈನ ಸಿಂಹಪೀಠ ಶಾಸನ", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೮-೮೯/೦೩-೦೪ ಮತ್ತು ೦೧-೧೨ (ಜುಲೈ/ಡಿಸೆಂಬರ್-೨೦೧೦ ಮತ್ತು ಜನೇವರಿ/ಜೂನ್-೨೦೧೧), ಪು. ೫೭-೬೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
೨೯	ಎಲ್ಲಮ್ಮಗುಡ್ಡ	ಸವದತ್ತಿ	–	ಕ್ರಿ.ಶ.ಸು. ೧೨ನೆಯ ಶತಮಾನ	ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪು.೭೩-೭೪.
೩೦	ಎಲ್ಲಮ್ಮಗುಡ್ಡ	ಸವದತ್ತಿ	–	ಕ್ರಿ.ಶ.ಸು. ೧೨ನೆಯ ಶತಮಾನ	ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯),ಪು.೭೩-೭೪.
೩೧	ಕೋಟೂರು	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೯ನೆಯ ಶತಮಾನ	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೫೭, ಪು. ೨೪೪. ಆಯ್.ಎ. ಸಂ. XX, ಶಾ.ಸಂ. ೧೯೪, ಪು. ೬೯.
೩೨	ಚಿಕ್ಕುಂಬಿ	ಸವದತ್ತಿ	–	ಕ್ರಿ.ಶ.ಸು. ೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೩೩	ಚುಳಕಿ	ಸವದತ್ತಿ	–	ಕ್ರಿ.ಶ.ಸು.೧೩ನೆಯ ಶತಮಾನ	ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೧೧), ಪು. ೯೬-೯೭, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
೩೪	ಚುಳಕಿ	ಸವದತ್ತಿ	–	ಕ್ರಿ.ಶ. ೧೨೭೨	ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೧೧), ಪು. ೯೬-೯೭, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
೩೫	ನವಿಲುತೀರ್ಥ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು. ೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೫.
೩೬	ಬಡ್ಲಿ	ಸವದತ್ತಿ	ಸವದತ್ತಿ ರಟ್ಟರು	ಕ್ರಿ.ಶ. ೧೨೧೯	ಕೆ.ಆಯ್.ಸಂ.I,ಶಾ.ಸಂ.೩೨, ಪು. ೫೫-೫೬. ಹಂಪ ನಾಗರಾಜಯ್ಯ, ಯಾಪನೀಯ

					ಸಂಘ(೧೯೯೯),ಅನುಬಂಧ-೨, ಶಾ.ಸಂ.೨೨,ಪು. ೧೪೮.
೩೭	ಬಡ್ಲಿ	ಸವದತ್ತಿ	ಸವದತ್ತಿ ರಟ್ಟರು	ಕ್ರಿ.ಶ. ೧೨೪೬	ಕೆ.ಆಯ್. ಸಂ. I, ಶಾ.ಸಂ. ೩೩, ಪು. ೭೬-೮೦.
೩೮	ಬಡ್ಲಿ	ಸವದತ್ತಿ	ದೋರಸಮುದ್ರದ ಹೊಯ್ಸಳ	ಕ್ರಿ.ಶ.ಸು.೧೩ನೆಯ ಶತಮಾನ	ಕೆ.ಆಯ್. ಸಂ. I, ಶಾ.ಸಂ. ೨೯, ಪು. ೬೩-೬೪.
೩೯	ಮದಲೂರು	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೯೨	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೫೮, ಪು. ೨೪೪.
೪೦	ಮುನವಳ್ಳಿ	ಸವದತ್ತಿ	–	ಕ್ರಿ.ಶ.ಸು.೧೩ನೆಯ ಶತಮಾನ	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೬೩, ಪು. ೨೪೫.
೪೧	ಮುನವಳ್ಳಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೬೪, ಪು. ೨೪೫.
೪೨	ಮುನವಳ್ಳಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ.೧೯೪೦-೪೧, ಶಾ.ಸಂ. ೬೫, ಪು. ೨೪೫.
೪೩	ಮುನವಳ್ಳಿ	ಸವದತ್ತಿ	ದೇವಗಿರಿಯ ಸೇವುಣ	ಕ್ರಿ.ಶ. ೧೨೨೨	ಕೆ.ಆಯ್. ಸಂ. I, ಶಾ.ಸಂ. ೩೦, ಪು. ೬೧-೭೧.
೪೪	ಮುನವಳ್ಳಿ	ಸವದತ್ತಿ	ದೇವಗಿರಿಯ ಸೇವುಣ	ಕ್ರಿ.ಶ. ೧೨೫೨	ಕೆ.ಆಯ್. ಸಂ. I, ಶಾ.ಸಂ. ೩೧, ಪು. ೯೧.
೪೫	ಯಡ್ರಾವಿ	ಸವದತ್ತಿ	–	ಕ್ರಿ.ಶ. ೯೭೯	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೬೬.
೪೬	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೪೭	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೭.
೪೮	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೭
೪೯	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೮.
೫೦	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ

				ಶತಮಾನ	ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೮.
೫೧	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೬೮.
೫೨	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೫೩	ಯಡ್ರಾವಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೯.
೫೪	ಯೆಕ್ಕೇರಿ	ಸವದತ್ತಿ	ಬಾದಾಮಿಯ ಚಲುಕ್ಯ	ಕ್ರಿ.ಶ. ೫೪೯ಅಥವಾ೫೯೯	ಆಯ್.ಎ. ಸಂ. V, ಶಾ.ಸಂ. ೨, ಪು. ೬-೯.
೫೫	ಸತ್ತಿಗೇರಿ	ಸವದತ್ತಿ	–	ಕ್ರಿ.ಶ.ಸು.೧೦ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೫೬	ಸವದತ್ತಿ	ಸವದತ್ತಿ	ಬಾದಾಮಿಯ ಚಲುಕ್ಯ	ಕ್ರಿ.ಶ. ೬೬೯	ಇ.ಆಯ್. ಸಂ. XLII, ಪು. ೧-೫.
೫೭	ಸವದತ್ತಿ	ಸವದತ್ತಿ	ಸವದತ್ತಿ ರಟ್ಟರು	ಕ್ರಿ.ಶ. ೮೭೫-೭೬	ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.
೫೮	ಸವದತ್ತಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೯೮೦	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೦೪.
೫೯	ಸವದತ್ತಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೪೮	ಕೆ.ಆಯ್. ಸಂ. V, ಶಾ.ಸಂ. ೫೧, ಪು. ೨೦೧.
೬೦	ಸವದತ್ತಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೮೭	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೭೩.
೬೧	ಸವದತ್ತಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೯೮	ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.
೬೨	ಸವದತ್ತಿ	ಸವದತ್ತಿ	–	ಕ್ರಿ.ಶ.ಸು.೧೧ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೬೩	ಸವದತ್ತಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೧೩.
೬೪	ಸವದತ್ತಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೭೦.
೬೫	ಸವದತ್ತಿ	ಸವದತ್ತಿ	ಸವದತ್ತಿ ರಟ್ಟರು	ಕ್ರಿ.ಶ. ೧೨೨೮	ಕೆ.ಆಯ್. ಸಂ. VI, ಶಾ.ಸಂ. ೭೩, ಪು. ೨೦೧-೨೧೫.

೬೬	ಸವದತ್ತಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೯೮೦	ಇ.ಆಯ್. ಸಂ. XVI, ಶಾ.ಸಂ. ೧, ಪು. ೧-೯.
೬೭	ಹಿರೇಕುಂಬಿ	ಸವದತ್ತಿ	–	ಕ್ರಿ.ಶ.ಸು.೧೨ನೆಯ ಶತಮಾನ	ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೧೧), ಪು. ೯೫, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
೬೮	ಉಮರಾಣಿ	ಚಿಕ್ಕೋಡಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೨೩	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.
೬೯	ಕಬ್ಬೂರು	ಚಿಕ್ಕೋಡಿ	ಸವದತ್ತಿ ರಟ್ಟರು	ಕ್ರಿ.ಶ. ೧೨೦೪	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೭೦	ಕರೋಶಿ	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೭೧	ಕೆರೂರು	ಚಿಕ್ಕೋಡಿ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೧೪೯	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.
೭೨	ಕೆರೂರು	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೭.
೭೩	ಕೆರೂರು	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೬೧-೬೨, ಶಾ.ಸಂ. ೪೮೭, ಪು. ೯೭
೭೪	ಖಡಕಲಾಟ	ಚಿಕ್ಕೋಡಿ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೧೪೭	ಎ.ಆರ್.ಎಸ್.ಆಯ್.ಇ. ೧೯೬೧-೬೨, ಪು. ೯೭.
೭೫	ಜಗನೂರು	ಚಿಕ್ಕೋಡಿ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೧೬೭	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೭೬	ಜಗನೂರು	ಚಿಕ್ಕೋಡಿ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೨೦೬	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೫೬
೭೭	ದೊನವಾಡ	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೫೭.
೭೮	ಪಟ್ಟಣಕೋಡಿ	ಚಿಕ್ಕೋಡಿ	ಶಿಲಾಹಾರ	ಕ್ರಿ.ಶ. ೯೮೮	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೬
೭೯	ಬೇಡಕಿಹಾಳ	ಚಿಕ್ಕೋಡಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೦೦	ಕೆ.ಆಯ್. ಸಂ. IV, ಶಾ.ಸಂ. ೫೫, ಪು. ೧೧೮-೧೨೬.
೮೦	ಬೋರಗಾಂವ	ಚಿಕ್ಕೋಡಿ	–	ಕ್ರಿ.ಶ.ಸು.೧೩ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೬೩-೬೪, ಶಾ.ಸಂ. ೧೭೫, ಪು. ೩೪೭.
೮೧	ಭೋಜ	ಚಿಕ್ಕೋಡಿ	–	ಕ್ರಿ.ಶ. ೧೨೩೬	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್‌ಸ್ಕ್ರಿಪ್‌ಶನ್ಸ್ :೧೯೪೭-೪೮ (೧೯೬೬), ಶಾ.ಸಂ.

					೧೪, ಪು. ೫೮–೫೯.
೮೨	ಯಕ್ಸಂಬಾ	ಚಿಕ್ಕೋಡಿ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೧೬೫	ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್–೧೯೭೮), ಪು. ೨೨–೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೮೩	ಯಕ್ಸಂಬಾ	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ್–೧೯೭೮), ಪು. ೩೩, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೮೪	ಯಕ್ಸಂಬಾ	ಚಿಕ್ಕೋಡಿ	ಶಿಲಾಹಾರ	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೫೯–೬೦, ಶಾ.ಸಂ. ೩೯೬, ಪು. ೮೭.
೮೫	ಯಕ್ಸಂಬಾ	ಚಿಕ್ಕೋಡಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೮೬	ಯಕ್ಸಂಬಾ	ಚಿಕ್ಕೋಡಿ	ಸವದತ್ತಿ ರಟ್ಟರು	ಕ್ರಿ.ಶ. ೧೨೩೫	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್‌ಶನ್ಸ್ :೧೯೪೭–೪೮ (೧೯೬೬), ಶಾ.ಸಂ. ೧೩, ಪು. ೫೮–೫೯.
೮೭	ಸದಲಗಾ	ಚಿಕ್ಕೋಡಿ	–	ಕ್ರಿ.ಶ.ಸು.೧೩ನೆಯ ಶತಮಾನ	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦),ಪು. ೧೫೭
೮೮	ಸೋಮನವಾಡಿ	ಚಿಕ್ಕೋಡಿ	–	ಕ್ರಿ.ಶ.ಸು.೧೩ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೬೩–೬೪, ಶಾ.ಸಂ. ೧೭೫, ಪು. ೩೫೦.
೮೯	ಸ್ತವನಿಧಿ	ಚಿಕ್ಕೋಡಿ	–	ಕ್ರಿ.ಶ.ಸು.೧೩ನೆಯ ಶತಮಾನ	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೯.
೯೦	ಸ್ತವನಿಧಿ	ಚಿಕ್ಕೋಡಿ	–	ಕ್ರಿ.ಶ. ೧೧೪೯	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.
೯೧	ಸ್ತವನಿಧಿ	ಚಿಕ್ಕೋಡಿ	ಸವದತ್ತಿ ರಟ್ಟರು	ಕ್ರಿ.ಶ.ಸು.೧೩ನೆಯ ಶತಮಾನ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೧೮, ಪು. ೧೬೩.
೯೨	ಅರ್ಜುನವಾಡ	ಹುಕ್ಕೇರಿ	ದೇವಗಿರಿಯ ಸೇವುಣ	ಕ್ರಿ.ಶ. ೧೨೬೦	ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧–೧೦೪.
೯೩	ಅಮ್ಮಣಗಿ	ಹುಕ್ಕೇರಿ	–	ಕ್ರಿ.ಶ. ೧೨೫೭	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦.

೯೪	ಅಮ್ಮಣಗಿ	ಹುಕ್ಕೇರಿ	–	ಕ್ರಿ.ಶ.ಸು.೧೩ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೯೫	ಅಮ್ಮಣಗಿ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೯೬	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಸವದತ್ತಿ ರಟ್ಟರು	ಕ್ರಿ.ಶ. ೧೧೨೯–೩೦	ನೇಗಿನಹಾಳ ಎಂ.ಬಿ.,"ಉಳ್ಳಾಗಡ್ಡಿ ಖಾನಾಪುರ ಶಾಸನಗಳು",ಕನ್ನಡ ಅಧ್ಯಯನ (ಚಳಿ ಸಂಚಿಕೆ–೨೦೦೨), ಶಾ.ಸಂ.೩,ಪು.೫೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೯೭	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೪೪	ನೇಗಿನಹಾಳ ಎಂ.ಬಿ.,"ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ(ಚಳಿ ಸಂಚಿಕೆ–೨೦೦೨),ಶಾ.ಸಂ. ೪,ಪು.೫೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೯೮	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ನೇಗಿನಹಾಳ ಎಂ.ಬಿ.,"ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ(ಚಳಿ ಸಂಚಿಕೆ–೨೦೦೨),ಶಾ.ಸಂ. ೨,ಪು.೫೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೯೯	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ನೇಗಿನಹಾಳ ಎಂ.ಬಿ.,"ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ(ಚಳಿ ಸಂಚಿಕೆ–೨೦೦೨),ಶಾ.ಸಂ. ೫,ಪು.೫೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೦೦	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ನೇಗಿನಹಾಳ ಎಂ.ಬಿ.,"ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ(ಚಳಿ ಸಂಚಿಕೆ–೨೦೦೨),ಶಾ.ಸಂ. ೬,ಪು.೫೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೦೧	ಉಳ್ಳಾಗಡ್ಡಿ ಖಾನಾಪುರ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ(ಚಳಿ ಸಂಚಿಕೆ–೨೦೦೨), ಶಾ.ಸಂ. ೧, ಪು. ೫೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೦೨	ಎಲಿಮುನವಳ್ಳಿ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೦೩	ಕಣಗಲಾ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೦೪	ಕೋಚರಿ	ಹುಕ್ಕೇರಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೫೬	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦.
೧೦೫	ಪಾಶ್ಚಾಪುರ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಹಂಜೆ ಅಪ್ಪಣ್ಣ ಎನ್., "ಪಾಶ್ಚಾಪುರದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ

					ಶಾಸನ", ಇತಿಹಾಸ ದರ್ಶನ ಸಂ. ೨೫ (೨೦೧೦),ಪು. ೭೩-೭೪, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
೧೦೬	ಬೆನಿವಾಡ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೧೨, ಪು. ೨೩.
೧೦೭	ಬೆಲ್ಲದ ಬಾಗೇವಾಡಿ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೦೮	ಬೆಳವಿ	ಹುಕ್ಕೇರಿ	ಸವದತ್ತಿ ರಟ್ಟರು	ಕ್ರಿ.ಶ. ೧೦೫೩	ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ.
೧೦೯	ಭೈರಾಪುರ	ಹುಕ್ಕೇರಿ	ಸವದತ್ತಿ ರಟ್ಟರು	ಕ್ರಿ.ಶ. ೧೨೩೭	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦.
೧೧೦	ಸಂಕೇಶ್ವರ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೨.
೧೧೧	ಸಂಕೇಶ್ವರ	ಹುಕ್ಕೇರಿ	ಸವದತ್ತಿ ರಟ್ಟರು	ಕ್ರಿ.ಶ.ಸು.೧೨ನೆಯ ಶತಮಾನ	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೨-೧೬೩.
೧೧೨	ಹುಕ್ಕೇರಿ	ಹುಕ್ಕೇರಿ	–	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೪೧-೪೨, ಶಾ.ಸಂ. ೬, ಪು. ೨೬೧.
೧೧೩	ನಂದಿಕುರಳಿ	ರಾಯಬಾಗ	–	ಕ್ರಿ.ಶ.ಸು.೧೨ನೆಯ ಶತಮಾನ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೨೯, ಪು. ೪೫.
೧೧೪	ಮುಗಳಖೋಡ	ರಾಯಬಾಗ	–	ಕ್ರಿ.ಶ.ಸು.೧೨ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೧೫	ರಾಯಬಾಗ	ರಾಯಬಾಗ	ಸವದತ್ತಿ ರಟ್ಟರು	ಕ್ರಿ.ಶ. ೧೦೪೦	ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್ಷನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.
೧೧೬	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೪೧	ಎ.ಆರ್.ಎಸ್.ಆಯ್.ಇ. ೧೯೫೬-೫೭, ಅಪೆಂಡಿಕ್ಸ್ ಬಿ, ಶಾ.ಸಂ. ೧೫೪.
೧೧೭	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೭೭	ಎ.ಆರ್.ಎಸ್.ಆಯ್.ಇ. ೧೯೫೬-೫೭, ಅಪೆಂಡಿಕ್ಸ್ ಬಿ, ಶಾ.ಸಂ. ೧೫೫.
೧೧೮	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೨೭	ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್ಷನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ದಿ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೬.
೧೧೯	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೩೯	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್‌ಕ್ರಿಪ್‌ಶನ್ಸ್:೧೯೪೫-೪೬ (೧೯೬೬), ಶಾ.ಸಂ.

					೧೮, ಪು. ೪೦-೪೧.
೧೨೦	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ೩೨, ಪು. ೫೪-೫೫.
೧೨೧	ರಾಯಬಾಗ	ರಾಯಬಾಗ	ಸವದತ್ತಿ ರಟ್ಟರು	ಕ್ರಿ.ಶ. ೧೨೦೨	ಎ.ಆರ್.ಎಸ್.ಆಯ್.ಇ. ೧೯೫೬-೫೭, ಶಾ.ಸಂ. ೨೪.
೧೨೨	ರಾಯಬಾಗ	ರಾಯಬಾಗ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೨೩	ರಾಯಬಾಗ	ರಾಯಬಾಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ., "ರಾಯಬಾಗದ ವೀರಗಲ್ಲು ಶಾಸನ", ಶಾಸನ ಅಧ್ಯಯನ ಸಂ. ೨/೨ (೨೦೦೫), ಪು. ೨೬-೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೨೪	ಕಲ್ಲೊಳೆ	ಗೋಕಾಕ	ಸವದತ್ತಿಯ ರಟ್ಟ	ಕ್ರಿ.ಶ. ೧೨೦೪	ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಲೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ-೧೯೭೪), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೨೫	ಕುಂದರಗಿ	ಗೋಕಾಕ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್‌ಕ್ರಿಪ್‌ಶನ್ಸ್ : ೧೯೪೭-೪೮ ೧೯೬೬), ಶಾ.ಸಂ. ೧, ಪು. ೫೬-೫೭.
೧೨೬	ಕೊಣ್ಣೂರು	ಗೋಕಾಕ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೩೭	ಕೆ.ಆಯ್. ಸಂ. V, ಶಾ.ಸಂ. ೬.
೧೨೭	ಕೊಣ್ಣೂರು	ಗೋಕಾಕ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೮೭	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.
೧೨೮	ಕೊಣ್ಣೂರು	ಗೋಕಾಕ	ಕಲ್ಯಾಣಿ ಚಾಳುಕ್ಯ	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೫.
೧೨೯	ಕೊಣ್ಣೂರು	ಗೋಕಾಕ	–	ಕ್ರಿ.ಶ.ಸು.೧೨ನೆಯ ಶತಮಾನ	ತಬೋಜಿ ಚಂದ್ರಶೇಖರ ಬಿ., "ಕೊಣ್ಣೂರಿನ ಜಿನಬಿಂಬ ಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೨೦-೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೩೦	ಕೊಣ್ಣೂರು	ಗೋಕಾಕ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೩೧	ಕೊಣ್ಣೂರು	ಗೋಕಾಕ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೩೨	ಗೋಕಾಕ	ಗೋಕಾಕ	ರಾಷ್ಟ್ರಕೂಟ	ಕ್ರಿ.ಶ.ಸು.೬ನೆಯ ಶತಮಾನ	ಇ.ಆಯ್. ಸಂ. XXI, ಶಾ.ಸಂ. ೪೩, ಪು. ೨೮೯-೨೯೨.
೧೩೩	ಗೋಕಾಕ	ಗೋಕಾಕ	ಸವದತ್ತಿ ರಟ್ಟರು	ಕ್ರಿ.ಶ.ಸು.೧೧ನೆಯ ಶತಮಾನ	ತಬೋಜಿ ಚಂದ್ರಶೇಖರ ಬಿ., "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್-VI (೨೦೦೬),ಪು. ೧೭೩.

೧೩೪	ಗೋಕಾಕ ಜಲಪಾತ	ಗೋಕಾಕ	ಕಲ್ಯಾಣಿ ಕಲಚೂರಿ	ಕ್ರಿ.ಶ. ೧೧೭೧	ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧.
೧೩೫	ಗೋಕಾಕ ಜಲಪಾತ	ಗೋಕಾಕ	ಕಲ್ಯಾಣಿ ಕಲಚೂರಿ	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೨.
೧೩೬	ಗೋಕಾಕ ಜಲಪಾತ	ಗೋಕಾಕ	ಕಲ್ಯಾಣಿ ಕಲಚೂರಿ	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೩.
೧೩೭	ಮಮದಾಪುರ	ಗೋಕಾಕ	ದೇವಗಿರಿಯ ಸೇವುಣ	ಕ್ರಿ.ಶ. ೧೨೪೬	ಇ.ಆಯ್. ಸಂ. XIX, ಪು. ೨೬.
೧೩೮	ಅಂಬೇವಾಡಿ	ಬೆಳಗಾವಿ	ಸವದತ್ತಿ ರಟ್ಟರು	ಕ್ರಿ.ಶ. ೧೧೮೫	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೩೯	ಕಡೋಳಿ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್ಶನ್ಸ್ : ೧೯೪೬-೪೭ (೧೯೬೬), ಶಾ.ಸಂ. ೨೪, ಪು. ೫೪-೫೫.
೧೪೦	ಗುತ್ತಿ	ಬೆಳಗಾವಿ	–	ಕ್ರಿ.ಶ.ಸು.೧೨ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್ಶನ್ಸ್ : ೧೯೪೭-೪೮ (೧೯೬೬), ಶಾ.ಸಂ. ೫, ಪು. ೫೬-೫೭.
೧೪೧	ಗುತ್ತಿ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್ಶನ್ಸ್ : ೧೯೪೭-೪೮ (೧೯೬೬), ಶಾ.ಸಂ. ೧೫, ಪು. ೫೮-೫೯.
೧೪೨	ಗೋಜಗ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೪೩	ಪಂತಬಾಳೇಕುಂದ್ರಿ	ಬೆಳಗಾವಿ	–	ಕ್ರಿ.ಶ.ಸು.೧೨ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್ಶನ್ಸ್ : ೧೯೪೬-೪೭(೧೯೬೬), ಶಾ.ಸಂ. ೨೦, ಪು. ೫೨-೫೩.
೧೪೪	ಬೆಳಗಾವಿ	ಬೆಳಗಾವಿ	ಸವದತ್ತಿಯ ರಟ್ಟ	ಕ್ರಿ.ಶ. ೧೧೯೯	ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್-ಪ್ಲೇಟ್ ಇನ್ಸ್ಕ್ರಿಪ್ಶನ್ಸ್ ಎಗ್ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೩೦, ಪು. ೬.
೧೪೫	ಬೆಳಗಾವಿ	ಬೆಳಗಾವಿ	ಸವದತ್ತಿಯ ರಟ್ಟ	ಕ್ರಿ.ಶ. ೧೨೦೪	ಇ.ಆಯ್. ಸಂ. XIII, ಶಾ.ಸಂ. ೩/ಎ, ಪು. ೧೫-೨೭
೧೪೬	ಬೆಳಗಾವಿ	ಬೆಳಗಾವಿ	ಸವದತ್ತಿಯ ರಟ್ಟ	ಕ್ರಿ.ಶ. ೧೨೦೪	ಇ.ಆಯ್. ಸಂ. XIII, ಶಾ.ಸಂ. ೩/ಬಿ, ಪು. ೨೭-೩೬.
೧೪೭	ಬೆಳಗಾವಿ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.

೧೪೮	ಬೆಳಗಾವಿ	ಬೆಳಗಾವಿ	–	ಕ್ರಿ.ಶ.ಸು.೧೨ನೆಯ ಶತಮಾನ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦),ಶಾ.ಸಂ. ೭೮, ಪು. ೧೦೯.
೧೪೯	ಬೆಳಗಾವಿ	ಬೆಳಗಾವಿ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೫೦	ಬೆಳಗಾವಿ	ಬೆಳಗಾವಿ	ದೇವಗಿರಿಯ ಸೇವುಣ	ಕ್ರಿ.ಶ. ೧೨೬೧	ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್–ಪ್ಲೇಟ್ ಇನ್ಸ್ಕ್ರಿಪ್‌ಶನ್ಸ್ ಎಗ್ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦–೪೧ (೧೯೬೧), ಶಾ.ಸಂ. ೪೦, ಪು. ೭.
೧೫೧	ಮಜ್ಜೆ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೪೨, ಪು. ೭೦.
೧೫೨	ಹೊನಗಾ	ಬೆಳಗಾವಿ	–	ಕ್ರಿ.ಶ.ಸು.೧೩ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್ಕ್ರಿಪ್‌ಶನ್ಸ್ : ೧೯೪೬–೪೭ (೧೯೬೬), ಶಾ.ಸಂ. ೨೫, ಪು. ೫೪–೫೫.
೧೫೩	ತೇರದಾಳ	ಜಮಖಂಡಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೨೩	ಕೆ.ಆಯ್. ಸಂ. V, ಶಾ.ಸಂ. ೨೧, ಪು. ೭೫–೮೩.
೧೫೪	ತೇರದಾಳ	ಜಮಖಂಡಿ	–	ಕ್ರಿ.ಶ. ೧೧೮೧	ಕೆ.ಆಯ್. ಸಂ. V, ಶಾ.ಸಂ. ೯೮, ಪು. ೨೯೬–೨೯೯.
೧೫೫	ತೇರದಾಳ	ಜಮಖಂಡಿ	ದೇವಗಿರಿಯ ಸೇವುಣ	ಕ್ರಿ.ಶ. ೧೧೮೭	ಕೆ.ಆಯ್. ಸಂ. V, ಶಾ.ಸಂ. ೯೯, ಪು. ೨೯೯–೩೦೨.
೧೫೬	ಬೆಳಗಲಿ	ಮುಧೋಳ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೭೬	ಎ.ಆರ್.ಎಸ್.ಆಯ್.ಇ. ೧೯೫೨–೫೩, ಶಾ.ಸಂ. ೯೨.
೧೫೭	ಬೆಳಗಲಿ	ಮುಧೋಳ	ಸವದತ್ತಿಯ ರಟ್ಟ	ಕ್ರಿ.ಶ. ೧೨೩೩	ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೨೧.
೧೫೮	ಮಂಟೂರು	ಮುಧೋಳ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೪೧	ಎಸ್.ಆಯ್.ಆಯ್. ಸಂ. XI-I, ಶಾ.ಸಂ. ೭೪.
೧೫೯	ಮಂಟೂರು	ಮುಧೋಳ	–	ಕ್ರಿ.ಶ.ಸು.೧೧ನೆಯ ಶತಮಾನ	ಎಸ್.ಆಯ್.ಆಯ್. ಸಂ. XV, ಶಾ.ಸಂ. ೫೩೬.
೧೬೦	ಮಂಟೂರು	ಮುಧೋಳ	–	ಕ್ರಿ.ಶ.ಸು.೧೨ನೆಯ ಶತಮಾನ	ಕ್ಷೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೬೧	ಮಂಟೂರು	ಮುಧೋಳ	–	ಕ್ರಿ.ಶ. ೧೦೩೩	ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೩೭.
೧೬೨	ಮುಧೋಳ	ಮುಧೋಳ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೨೩೩	ದೇವರಕೊಂಡಾರೆಡ್ಡಿ (ಸಂ.),ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೯ (ಬಾಗಲಕೋಟೆ ಜಿಲ್ಲೆ–೨೦೦೫), ಶಾ.ಸಂ. ೮, ಪು. ೧೩೬–೧೩೭.

೧೬೩	ಮುಧೋಳ	ಮುಧೋಳ	ಕಲ್ಯಾಣಿ ಕಲಚೂರಿ	ಕ್ರಿ.ಶ.ಸು.೧೨ನೆಯ ಶತಮಾನ	ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ. ೨೪.
೧೬೪	ರೂಗಿ	ಮುಧೋಳ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೧೦೮	ದೇವರಕೊಂಡಾರೆಡ್ಡಿ (ಸಂ.),ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: ೯ (ಬಾಗಲಕೋಟೆ ಜಿಲ್ಲೆ-೨೦೦೫), ಶಾ.ಸಂ. ೧, ಪು. ೧೩೧-೧೩೨.
೧೬೫	ರೂಗಿ	ಮುಧೋಳ	–	ಕ್ರಿ.ಶ. ೧೨೧೮	ಕೇತ್ರಕಾರ್ಯ ಕೈಕೊಂಡ ಸಂದರ್ಭದಲ್ಲಿ ದೊರೆತ ಶಾಸನ.
೧೬೬	ಕಿರಸೂರು	ಬಾಗಲಕೋಟ	–	ಕ್ರಿ.ಶ.ಸು.೧೧ನೆಯ ಶತಮಾನ	ಎಸ್.ಆಯ್.ಆಯ್. ಸಂ. XV, ಶಾ.ಸಂ. ೭೯.
೧೬೭	ಇಬ್ರಾಮಪುರ	ಚಂದಗಡ		ಕ್ರಿ.ಶ.ಸು.೧೨ನೆಯ ಶತಮಾನ	ದೇಸಾಯಿ ಪಿ.ಬಿ. (ಸಂ.), ಸಮರಿಸ್ ಆಫ್ ಇನ್ಸ್‌ಕ್ರಿಪ್‌ಶನ್ಸ್ : ೧೯೪೭-೪೮ (೧೯೬೬), ಶಾ.ಸಂ. ೪, ಪು. ೫೬-೫೭.
೧೬೮	ಗಡಹಿಂಗ್ಲಜ	ಗಡಹಿಂಗ್ಲಜ	–	ಕ್ರಿ.ಶ.ಸು.೧೨ನೆಯ ಶತಮಾನ	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.),ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ. ೪೦, ಪು. ೬೭-೬೮.
೧೬೯	ತೇರ್ಣಿ	ಗಡಹಿಂಗ್ಲಜ	–	ಕ್ರಿ.ಶ.ಸು.೧೨ನೆಯ ಶತಮಾನ	ಉಪಾಧ್ಯ ಜಿ.ಎನ್.ಮತ್ತು ದೇವರಕೊಂಡಾರೆಡ್ಡಿ (ಸಂ.),ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ :೬(ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧),ಶಾ.ಸಂ.೪೧, ಪು. ೬೮-೬೯.
೧೭೦	ತೇರ್ಣಿ	ಗಡಹಿಂಗ್ಲಜ	ಕಲ್ಯಾಣದ ಚಾಳುಕ್ಯ	ಕ್ರಿ.ಶ. ೧೦೬೨	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು-೨೦೦೧), ಶಾ.ಸಂ.೪೨, ಪು. ೬೯-೭೧.
೧೭೧	ಕೊಲ್ಲಾಪುರ	ಕೊಲ್ಲಾಪುರ	ಬಾದಾಮಿಯ ಚಲುಕ್ಯ	ಕ್ರಿ.ಶ. ೪೮೯-೪೯೦	ಆಯ್.ಎ. ಸಂ. VII, ಪು. ೨೦೯-೨೧೭.

ಅನುಬಂಧ : ಎರಡು

ಕೂಹುಂಡಿನಾಡಿನ ಪ್ರಸ್ತಾಪವಿರುವ ಇತರೆಡೆಯ ಶಾಸನಗಳು

ಅನಂ	ಗ್ರಾಮ.	ತಾಲೂಕು.	ಮನೆತನ	ಕಾಲ	ವರದಿ/ಪ್ರಕಟಣೆ
೦೧	ಚೋಳಚಗುಡ್ಡ	ಬಾದಾಮಿ	ಬಾದಾಮಿಯ ಚಲುಕ್ಯ	ಕ್ರಿ.ಶ. ೭೦೫	ಜೆ.ಕೆ.ಯು. ಸಂ. ೧/೨, ಪು. ೧೯೩–೨೨೭
೦೨	ಹೂಲಿ	ಸವದತ್ತಿ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೪೩	ಇ.ಆಯ್. ಸಂ. XVIII, ಶಾ.ಸಂ. ೨೨/ಬಿ, ಪು. ೧೭೨–೧೭೮.
೦೩	ಅರಸಿಬೀದಿ	ಹುನಗುಂದ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೪೭	ಇ.ಆಯ್. ಸಂ. VIII, ಪು. ೧೨೧.
೦೪	ನರಗುಂದ	ನರಗುಂದ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೭೪	ಎ.ಆರ್.ಎಸ್.ಆಯ್.ಇ. ೧೯೩೩–೩೪, ಶಾ.ಸಂ. ೭೦.
೦೫	ಚಿಕ್ಕಹಂದಿಗೋಳ	ಗದಗ	ಕಲ್ಯಾಣಿ ಚಾಳುಕ್ಯ	ಕ್ರಿ.ಶ. ೧೦೯೯	ಕೆ.ಆಯ್. ಸಂ. V, ಶಾ.ಸಂ. ೧೪, ಪು. ೪೭–೫೪.
೦೬	ನೇರೂರು	ಕುದಾಲ, (ಜಿ.ರತ್ನಾಗಿರಿ)	ಬಾದಾಮಿಯ ಚಲುಕ್ಯ	ಕ್ರಿ.ಶ.ಸು.೭ನೆಯ ಶತಮಾನ	ಜೆ.ಬಿ.ಬಿ.ಆರ್.ಎ.ಎಸ್. ಸಂ. III, ಭಾಗ II, ಪು. ೨೦೩.
೦೭	ಎಲಾಪುರ	ಸಾತಾರಾ	ಬಾದಾಮಿಯ ಚಲುಕ್ಯ	ಕ್ರಿ.ಶ. ೭೦೩	ಆಯ್.ಎಚ್.ಕ್ಯೂ. ಸಂ. IV, ಪು. ೬೨೫–೪೩೦.
೦೮	ಕೊಲ್ಲಾಪುರ	ಕೊಲ್ಲಾಪುರ	ಕೊಲ್ಲಾಪುರದ ಶಿಲಾಹಾರ	ಕ್ರಿ.ಶ. ೧೧೦೪	ಆಯ್.ಎಸ್. ಸಂ. VI, ಶಾ.ಸಂ. ೫೩.
೦೯	ಕೊಲ್ಲಾಪುರ	ಕೊಲ್ಲಾಪುರ	ಕೊಲ್ಲಾಪುರದ ಶಿಲಾಹಾರ	ಕ್ರಿ.ಶ. ೧೧೩೫	ಆಯ್.ಎಸ್. ಸಂ. VI, ಶಾ.ಸಂ. ೪೯.
೧೦	ಬಾಮಣಿ	ಕೊಲ್ಲಾಪುರ	ಕೊಲ್ಲಾಪುರದ ಶಿಲಾಹಾರ	ಕ್ರಿ.ಶ. ೧೧೫೦	ಆಯ್.ಎಸ್. ಸಂ. VI, ಶಾ.ಸಂ. ೪೪.
೧೧	ಮೀರಜ	ಸಾಂಗಲಿ	ಕೊಲ್ಲಾಪುರದ ಶಿಲಾಹಾರ	ಕ್ರಿ.ಶ. ೧೦೫೮	ಆಯ್.ಎಸ್. ಸಂ. VI, ಶಾ.ಸಂ. ೪೩.
೧೨	ಮೀರಜ	ಸಾಂಗಲಿ	ಕೊಲ್ಲಾಪುರದ ಶಿಲಾಹಾರ	ಕ್ರಿ.ಶ. ೧೧೪೨	ಆಯ್.ಎಸ್. ಸಂ. VI, ಶಾ.ಸಂ. ೫೨.

ಅನುಬಂಧ : ಮೂರು

ಕೂಹುಂಡಿನಾಡಿನ ಶಾಸನಗಳೋಕ್ತ ಕವಿಗಳು

ಅ. ಸಂ.	ಕವಿಗಳು	ಕಾಲಮಾನ	ಗ್ರಾಮಗಳು	ಆಕರಗಳು
೧	ಕಮಳಾದಿತ್ಯ	ಕ್ರಿ.ಶ. ೯೦೦	ಸೊಗಲ	ಎ.ಇ. ಸಂ. XX, ಶಾ.ಸಂ. ೧, ಪು. ೧.
೨	ಸೋರಿಗಾಂಕ	ಕ್ರಿ.ಶ ೧೦೮೮	ಕೊಣ್ಣೂರು	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೮.
೩	ಶ್ರುತಕೀರ್ತಿ	ಕ್ರಿ.ಶ. ೧೦೮೮	ಕೊಣ್ಣೂರು	ಅದೇ.
೪	ಲಕ್ಷ್ಮಣ	ಕ್ರಿ.ಶ. ೧೧೦೭	ಹೊಸೂರು	ಎ.ಆರ್.ಎಸ್.ಆಯ್.ಇ. ೧೯೪೦–೪೧, ಪು. ೧೬.
೫	ಇಮ್ಮಡಿ ಆಚಣ್ಣ	ಕ್ರಿ.ಶ. ೧೧೬೫	ಬೆಳಗಾವಿ	ಇಚ್ಚಂಗಿ ರಾಜಶೇಖರ, ಸವದತ್ತಿ ರಟ್ಟರು, ಪು. ೫೭.
೬	ಸಮತೋಜ	ಕ್ರಿ.ಶ. ೧೧೪೮	ಶಿರಸಂಗಿ	ಕೆ.ಆಯ್. ಸಂ. VI, ಪು. ೨೦೩.
೭	ಮುನಿಚಂದ್ರ	ಕ್ರಿ.ಶ. ೧೧೯೦	ಸವದತ್ತಿ	ಕೆ.ಆಯ್. ಸಂ. I, ಪು. ೭೪.
೮	ಬೊಮ್ಮರಸ	ಕ್ರಿ.ಶ. ೧೨೨೨	-	ಹಂದೂರ ಬಿ.ಆರ್., ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ (೨೦೦೩), ಪು. ೨೬೭.
೯	ಬಾಳಚಂದ್ರದೇವ	ಕ್ರಿ.ಶ. ೧೨೦೪	ಸವದತ್ತಿ	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೨೦.
೧೦	ಪಾರ್ಶ್ವಪಂಡಿತ	ಕ್ರಿ.ಶ. ೧೨೦೫	ಕಲ್ಹೊಳೆ	ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ–೧೯೭೪), ಪು. ೪೩–೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೧೧	ಮಾದಿರಾಜ	ಕ್ರಿ.ಶ. ೧೨೨೮	ಯಕ್ಕಂಬಾ	ಎ.ಇ. ಸಂ. XIII, ಪು. ೨೮/ಎ–ಬಿ.
೧೨	ರುದ್ರಭಟ್ಟ	ಕ್ರಿ.ಶ.ಸು. ೧೨ನೆಯ ಶತಮಾನ	ಬನಹಟ್ಟಿ	ಎಸ್.ಆಯ್.ಆಯ್. ಸಂ. XX, ಪು. ೩೦೫.

ಅನುಬಂಧ : ನಾಲ್ಕು

ಕೂಹುಂಡಿನಾಡಿನ ಶಾಸನಗಳೋಕ್ತ ಶೈವ, ವೈಷ್ಣವ, ಜೈನ ಆಚಾರ್ಯರು

ಅ.ಸಂ.	ಆಚಾರ್ಯರು	ಕಾಲಮಾನ	ಗ್ರಾಮಗಳು	ಶಾಸನಗಳು
		ಶೈವ ಆಚಾರ್ಯರು		
೧	ಮಲೆಯಾಳಪಂಡಿತದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಅಣ್ಣಿಗೇರಿ (ತಾ : ನವಲಗುಂದ)	ಕಲಬಾವಿಯ ಅಪ್ರಕಟಿತ ಶಾಸನ (ಅನುಬಂಧ ಒಂದು : ಶಾ.ಸಂ. ೨).
೨.	ತೇಜೋರಾಶಿಪಂಡಿತದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಮುಗಟಖಾನ ಹುಬ್ಬಳ್ಳಿ	ಅದೇ.
೩	ರುದ್ರಶಕ್ತಿ	ಕ್ರಿ.ಶ. ೧೨೧೯	ನೇಸರಗಿ	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಶಾ.ಸಂ. ೩೦, ಪು. ೨೪೧.
೪	ವಾಮಶಕ್ತಿ	ಕ್ರಿ.ಶ. ೧೨೧೯	ನೇಸರಗಿ	ಅದೇ.
೫	ಜ್ಞಾನಶಕ್ತಿ	ಕ್ರಿ.ಶ. ೧೨೧೯	ನೇಸರಗಿ	ಅದೇ.
೬	ನಾಗರಾಶಿಮುನಿ	ಕ್ರಿ.ಶ. ೧೨೧೯	ನೇಸರಗಿ	ಅದೇ.
೭	ಹೊನ್ನಯ್ಯ	ಕ್ರಿ.ಶ. ೧೨೧೯	ನೇಸರಗಿ	ಅದೇ.
೮	ಬಾಳಚಂದ್ರಪಂಡಿತದೇವ	ಕ್ರಿ.ಶ. ೧೧೧೪	ವಣ್ಣೂರು	ಅಪ್ರಕಟಿತ ಶಾಸನ (ಅನುಬಂಧ ಒಂದು : ಶಾ.ಸಂ. ೧೯).
೯	ಸರ್ವೇಶ್ವರಪಂಡಿತ	ಕ್ರಿ.ಶ. ೧೨೫೨	ಮುನವಳ್ಳಿ	ಕೆ.ಆಯ್. ಸಂ. I, ಶಾ.ಸಂ. ೩೧.
೧೦	ಸೋಮೇಶ್ವರಪಂಡಿತದೇವ	ಕ್ರಿ.ಶ. ೧೦೪೮	ಸವದತ್ತಿ	ಕೆ.ಆಯ್. ಸಂ. V, ಶಾ.ಸಂ. ೫೧.

೧೧	ತ್ರಿಭುವನಸಿಂಗಿಪಂಡಿತ	ಕ್ರಿ.ಶ. ೯೮೦	ಸೊಗಲ	ಇ.ಆಯ್. ಸಂ. XVI, ಶಾ.ಸಂ. ೧.
೧೨	ಪದ್ಮರಾಶಿಪಂಡಿತ	ಕ್ರಿ.ಶ. ೧೧೬೭	ಜಗನೂರು	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.
೧೩	ಅಮೃತರಾಶಿಪಂಡಿತ	ಕ್ರಿ.ಶ. ೧೧೭೧	ಕೊಣ್ಣೂರು	ಎ.ಆರ್.ಎಸ್.ಆಯ್.ಇ. ೧೯೫೨–೫೩, ಶಾ.ಸಂ. ೫೧.
೧೪	ವಿಮಳಶಿವಮುನಿ	ಕ್ರಿ.ಶ. ೧೨೪೬	ಲಕ್ಕ್ಮೇಶ್ವರ	ಇ.ಆಯ್. ಸಂ. XIX, ಪು. ೨೬. (ಮಮದಾಪುರ)
೧೫	ಮಾಳವೇಂದ್ರ	ಕ್ರಿ.ಶ. ೧೨೪೬	ಲಕ್ಕ್ಮೇಶ್ವರ	ಅದೇ.
		ವೈಷ್ಣವ ಆಚಾರ್ಯರು		
೧	ನಾಗವರ್ಧನ ಚಂದ್ರಾದಿತ್ಯ ಭಟ್ಟಾರಕ	ಕ್ರಿ.ಶ. ೬೬೯	ಸವದತ್ತಿ	ಪಾಡಿಗಾರ ಶ್ರೀನಿವಾಸ ವಿ. (ಸಂ.), ಇನ್‍ಸ್ಕ್ರಿಪ್‍ಶನ್ಸ್ ಆಫ್ ದಿ ಚಲುಕ್ಯಸ್ ಆಫ್ ಬಾದಾಮಿ (೨೦೧೦), ಶಾ.ಸಂ. ೪೭.
೨	ಲಕ್ಷ್ಮೀಧರ ಪಟ್ಟವರ್ಧನ	ಕ್ರಿ.ಶ. ೧೨೬೧	ಬೆಳಗಾವಿ	ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್‍ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್–ಪ್ಲೇಟ್ ಇನ್‍ಸ್ಕ್ರಿಪ್‍ಶನ್ಸ್ ಎಗ್‍ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‍ಸ್ಟಿಟ್ಯೂಟ್ ಡ್ಯೂರಿಂಗೆ ದಿ ಇಯರ್ಸ್ : ೧೯೪೦–೪೧ (೧೯೬೧), ಶಾ.ಸಂ. ೪೦, ಪು. ೭.
		ಜೈನ ಆಚಾರ್ಯರು		
೧	ಶ್ರೀಧರತ್ರೈವಿದ್ಯದೇವ	ಕಿ.ಶ.ಸು. ೧೨ನೆಯ ಶತಮಾನ	ಬೆನಿವಾಡ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೧), ಶಾ.ಸಂ. ೧೨.
೨	ಇಂದ್ರಕೀರ್ತಿಸ್ವಾಮಿ	ಕ್ರಿ.ಶ. ೮೭೫–೭೬	ಸವದತ್ತಿ	ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.
೩	ಬಾಹುಬಲಿದೇವ	ಕ್ರಿ.ಶ. ೯೮೦	ಸವದತ್ತಿ	ಅದೇ, ಶಾ.ಸಂ. ೧೮.
೪	ರವಿಚಂದ್ರಸ್ವಾಮಿ	ಕ್ರಿ.ಶ. ೯೮೦	ಸವದತ್ತಿ	ಅದೇ.
೫	ಅರ್ಹನಂದಿ (ಅರಹನಂದಿ)	ಕ್ರಿ.ಶ. ೯೮೦	ಸವದತ್ತಿ	ಅದೇ.

೬	ಪ್ರಭಾಚಂದ್ರದೇವ	ಕ್ರಿ.ಶ. ೯೮೦	ಸವದತ್ತಿ	ಅದೇ.
೭	ಶುಭಚಂದ್ರಸಿದ್ಧಾಂತದೇವ	ಕ್ರಿ.ಶ. ೯೮೦	ಸವದತ್ತಿ	ಅದೇ.
೮	ಕುಕ್ಕುಟಸೇನ	ಕ್ರಿ.ಶ. ೧೦೭೯	ದೊಡವಾಡ	ಎ.ಆರ್.ಎಸ್.ಆಯ್.ಇ. ೧೯೫೧-೫೨, ಶಾ.ಸಂ. ೩೭.
೯	ಪೂಜ್ಯಪಾದಮುನಿ	ಕ್ರಿ.ಶ.ಸು. ೧೨ನೆಯ ಶತಮಾನ	ಪಾಶ್ಚಾಪುರ	ಹಂಜ ಅಪ್ಪಣ್ಣ ಎನ್., "ಪಾಶ್ಚಾಪುರದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಮತ್ತು ಪಾದಪೀಠ ಶಾಸನ", ಇತಿಹಾಸ ದರ್ಶನ ಸಂ. ೨೫ (೨೦೧೦), ಪು. ೭೩-೭೪.
೧೦	ಕನಕಪ್ರಭಸಿದ್ಧಾಂತದೇವ	ಕ್ರಿ.ಶ. ೧೦೯೮	ಸವದತ್ತಿ	ಎಸ್.ಆಯ್.ಆಯ್. ಸಂ. XX, ಶಾ.ಸಂ. ೬೨.
೧೧	ಗುಣಕೀರ್ತಿ	ಕ್ರಿ.ಶ. ೧೦೯೮	ಸವದತ್ತಿ	ಅದೇ.
೧೨	ಕನಕಪ್ರಭಸಿದ್ಧಾಂತದೇವ	ಕ್ರಿ.ಶ. ೯೭೯	ಯಡ್ರಾವಿ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೬.
೧೩	ಅರ್ಹನಂದಿ	ಕ್ರಿ.ಶ.ಸು. ೧೨ನೆಯ ಶತಮಾನ	ಎಲಿಮುನವಳ್ಳಿ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೮.
೧೪	ಮುಳ್ಳಭಟ್ಟಾರಕ	ಕ್ರಿ.ಶ.ಸು. ೧೧ನೆಯ ಶತಮಾನ	ಬೈಲಹೊಂಗಲ	ಎ.ಆರ್.ಎಸ್.ಆಯ್.ಇ. ೧೯೫೧. ೫೨, ಶಾ.ಸಂ. ೩೩, ಪು. ೧೨.
೧೫	ಜಿನದೇವಸೂರಿ	ಕ್ರಿ.ಶ.ಸು. ೧೧ನೆಯ ಶತಮಾನ	ಬೈಲಹೊಂಗಲ	ಅದೇ.
೧೬	ಕುಮಾರಕೀರ್ತಿಪಂಡಿತ	ಕ್ರಿ.ಶ.ಸು. ೧೨ನೆಯ ಶತಮಾನ	ಯಕ್ಸಂಬಾ	ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೧೭	ವಿಜಯಕೀರ್ತಿಪಂಡಿತ	ಕ್ರಿ.ಶ.ಸು. ೧೨ನೆಯ ಶತಮಾನ	ಯಕ್ಸಂಬಾ	ಅದೇ.
೧೮	ಜಿನಸೇನ ಭಟ್ಟಾರಕ	ಕ್ರಿ.ಶ.ಸು. ೧೩ನೆಯ ಶತಮಾನ	ಸೋಮನವಾಡಿ	ಎ.ಆರ್.ಎಸ್.ಆಯ್.ಇ. ೧೯೬೩-೬೪, ಶಾ.ಸಂ. ೧೭೫, ಪು. ೩೫೦.
೧೯	ಕನಕಸ್ವಾಮಿಸಿದ್ಧಾಂತದೇವ		ಉಳಾಗಡ್ಡಿ ಖಾನಾಪುರ	ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨), ಶಾ.ಸಂ. ೪, ಪು. ೫೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೦	ಪದ್ಮನಂದಿ	ಕ್ರಿ.ಶ.ಸು. ೧೨ನೆಯ ಶತಮಾನ	ಉಳಾಗಡ್ಡಿ ಖಾನಾಪುರ	ಅದೇ, ಶಾ.ಸಂ. ೨, ಪು. ೫೬.
೨೧	ಶ್ರೀಧರದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಉಳಾಗಡ್ಡಿ ಖಾನಾಪುರ	ಅದೇ.
೨೨	ಮಾಘನಂದಿ	ಕ್ರಿ.ಶ.ಸು. ೧೨ನೆಯ ಶತಮಾನ	ಉಳಾಗಡ್ಡಿ ಖಾನಾಪುರ	ಅದೇ, ಶಾ.ಸಂ. ೫, ಪು. ೫೭.
೨೩	ಮಲಧಾರಿಮುನಿ	ಕ್ರಿ.ಶ. ೧೨೦೪	ಕಲ್ಹೊಳೆ	ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ–೧೯೭೪), ಪು. ೪೩–೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೨೪	ನೇಮಿಚಂದ್ರಮುನಿ	ಕ್ರಿ.ಶ. ೧೨೦೪	ಕಲ್ಹೊಳೆ	ಅದೇ.
೨೫	ಶುಭಚಂದ್ರ ಭಟ್ಟಾರಕ	ಕ್ರಿ.ಶ. ೧೨೦೪	ಕಲ್ಹೊಳೆ	ಅದೇ.
೨೬	ಗುಣಚಂದ್ರ	ಕ್ರಿ.ಶ. ೧೦೮೭	ಕೊಣ್ಣೂರು	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭–೨೯೨.
೨೭	ನಯನಂದಿ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೨೮	ಶ್ರೀಧರಾಚಾರ್ಯ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೨೯	ಚಂದ್ರಕೀರ್ತಿ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೦	ಧರಸೇನ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೧	ಶ್ರುತಕೀರ್ತಿ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೨	ಶ್ರೀಧರದೇವ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೩	ನೇಮಿಚಂದ್ರ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೪	ವಾಸುಪೂಜ್ಯ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೫	ಪದ್ಮಪ್ರಭ	ಕ್ರಿ.ಶ. ೧೦೮೭	ಕೊಣ್ಣೂರು	ಅದೇ.
೩೬	ಮಲಧಾರಿದೇವ	ಕ್ರಿ.ಶ. ೧೨೦೪	ಬೆಳಗಾವಿ	ಎ.ಇ. ಸಂ. XIII, ಶಾ.ಸಂ. ೩/ಎ–ಬಿ.
೩೭	ಶುಭಚಂದ್ರದೇವ ಭಟ್ಟಾರಕ	ಕ್ರಿ.ಶ. ೧೨೦೪	ಬೆಳಗಾವಿ	ಅದೇ.

೩೮	ಮಾಧವಚಂದ್ರ	ಕ್ರಿ.ಶ. ೧೨೦೪	ಬೆಳಗಾವಿ	ಅದೇ.
೩೯	ನೇಮಿಚಂದ್ರ	ಕ್ರಿ.ಶ. ೧೨೦೪	ಬೆಳಗಾವಿ	ಅದೇ.
೪೦	ಶ್ರುತಕೀರ್ತಿಸಿದ್ಧಾಂತದೇವ	ಕ್ರಿ.ಶ.ಸು. ೧೩ನೆಯ ಶತಮಾನ	ಬೆಳಗಾವಿ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೭೭.
೪೧	ವೀರಸ್ವಾಮಿ	ಕ್ರಿ.ಶ. ೧೨೦೯	ಹಣ್ಣಿಕೇರಿ	ಎ.ಆರ್.ಎಸ್.ಆಯ್.ಇ. ೧೯೭೩-೭೪, ಶಾ.ಸಂ. ೮೦ ಮತ್ತು ೮೧.
೪೨	ಕನಕಪ್ರಭ	ಕ್ರಿ.ಶ. ೧೨೦೯	ಹಣ್ಣಿಕೇರಿ	ಅದೇ.
೪೩	ಶ್ರೀಧರದೇವ	ಕ್ರಿ.ಶ. ೧೨೦೯	ಹಣ್ಣಿಕೇರಿ	ಅದೇ.
೪೪	ಕನಕಪ್ರಭಪಂಡಿತ	ಕ್ರಿ.ಶ. ೧೨೦೯	ಹಣ್ಣಿಕೇರಿ	ಅದೇ.
೪೫	ಮಾಧವಭಟ್ಟಾರಕ	ಕ್ರಿ.ಶ. ೧೨೦೯	ಬಡ್ಲಿ	ಕೆ.ಆಯ್. ಸಂ. I, ಶಾ.ಸಂ. ೩೨.
೪೬	ಕನಕಪ್ರಭ	ಕ್ರಿ.ಶ. ೧೨೦೯	ಬಡ್ಲಿ	ಅದೇ.
೪೭	ಮುನಿಚಂದ್ರ	ಕ್ರಿ.ಶ. ೧೨೦೯	ಬಡ್ಲಿ	ಅದೇ.
೪೮	ನಯದೇವ	ಕ್ರಿ.ಶ. ೧೨೦೯	ಬಡ್ಲಿ	ಅದೇ.
೪೯	ಕೀರ್ತಿಭಟ್ಟಾರಕ	ಕ್ರಿ.ಶ. ೧೨೦೯	ಬಡ್ಲಿ	ಅದೇ
೫೦	ಕುಮಾರಸೇನದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಕೊಣ್ಣೂರು	ತಮೋಜಿ ಚಂದ್ರಶೇಖರ ಬಿ., "ಕೊಣ್ಣೂರಿನ ಜಿನಬಿಂಬ ಶಾಸನ", ಶಾಸನ ಅಧ್ಯಯನ ಸಂ. ೨ (೨೦೦೪), ಪು. ೨೦-೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೫೧	ನಾಗಸೇನದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಕೊಣ್ಣೂರು	ಅದೇ.
೫೨	ಶಾಂತಿನಂದಿಮುನಿ	ಕ್ರಿ.ಶ.ಸು. ೧೨ನೆಯ ಶತಮಾನ	ಪಟಿತಬಾಳೇಕುಂದ್ರಿ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೯೫.
೫೩	ಚಂದ್ರಯತಿ	ಕ್ರಿ.ಶ.ಸು. ೧೨ನೆಯ ಶತಮಾನ	ಪಟಿತಬಾಳೇಕುಂದ್ರಿ	ಅದೇ.
೫೪	ಕನಕಚಂದ್ರಮುನಿ	ಕ್ರಿ.ಶ. ಸು. ೧೩ನೆಯ ಶತಮಾನ	ನಾಗನೂರು	ಎ.ಆರ್.ಎಸ್.ಆಯ್.ಇ. ೧೯೭೩-೭೪, ಶಾ.ಸಂ. ೯೨.

೫೫	ಗುಣಕೀರ್ತಿದೇವ	ಕ್ರಿ.ಶ. ೧೦೭೦	ಬೆಳವಡಿ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೦೦), ಶಾ.ಸಂ. ೩೬.
೫೬	ನಾಗಚಂದ್ರಸಿದ್ಧಾಂತದೇವ	ಕ್ರಿ.ಶ. ೧೦೭೫	ಬೆಳವಡಿ	ಗುರವ ಆರ್.ಎನ್., "ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ", ಕರ್ನಾಟಕ ಭಾರತಿ ಸಂ. ೧೧/೪ (೧೯೭೯), ಪು. ೨೯–೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೫೭	ಚಂದ್ರಕೀರ್ತಿದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಬೆಳವಡಿ	ರಿತ್ತಿ ಎಸ್.ಎಚ್., "ಬೆಳವಡಿಯಲ್ಲಿಯ ಶಿಲಾಲಿಪಿಗಳು", ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ ಸಚಿಚಿಕೆ : ೧೬೭೮–೧೯೭೮ (೧೯೭೯), ಪು. ೧೬–೧೮.
೫೮	ಮೋನಿಭಟ್ಟಾರಕ	ಕ್ರಿ.ಶ.ಸು. ೧೨ನೆಯ ಶತಮಾನ	ಉಗರಗೋಳ	ಹಂಜೆ ಅಪ್ಪಣ್ಣ ಎಸ್., "ಉಗರಗೋಳದ ಜೈನ ಸಿಂಹಪೀಠ ಶಾಸನ", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೮–೮೯/೦೩–೦೪ ಮತ್ತು ೦೧–೦೨ (ಜುಲೈ/ಡಿಸೆಂಬರ್–೨೦೦೦ ಮತ್ತು ಜನೇವರಿ/ಜೂನ್–೨೦೦೧), ಪು. ೫೭–೬೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
೫೯	ಚಂದ್ರಮತಿಕಂತಿ	ಕ್ರಿ.ಶ.ಸು. ೧೨ನೆಯ ಶತಮಾನ	ಉಗರಗೋಳ	ಅದೇ.
೬೦	ಸಕಳಚಂದ್ರಸಿದ್ಧಾಂತದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಎಲ್ಲಮ್ಮಗುಡ್ಡ	ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪು. ೭೩–೭೪.
೬೧	ಮುನಿಚಂದ್ರ	ಕ್ರಿ.ಶ.ಸು. ೧೨ನೆಯ ಶತಮಾನ	ಮುನವಳ್ಳಿ	ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩, ಪು. ೨೪೫.
೬೨	ಪಾಳ್ಯಕೀರ್ತಿದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಮುನವಳ್ಳಿ	ಅದೇ, ಶಾ.ಸಂ. ೬೪.
೬೩	ಪದ್ಮನಂದಿ	ಕ್ರಿ.ಶ.ಸು. ೧೨ನೆಯ ಶತಮಾನ	ಹಿರೇಕುಂಬಿ	ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೦೧), ಪು. ೯೫.
೬೪	ಗುಣಚಂದ್ರ ಭಟ್ಟಾರಕದೇವ	ಕ್ರಿ.ಶ.ಸು. ೧೩ನೆಯ ಶತಮಾನ	ಬೋರಗಾಂವ	ಎ.ಆರ್.ಎಸ್.ಆಯ್.ಇ. ೧೯೬೩–೬೪, ಶಾ.ಸಂ. ೧೭೫.
೬೫	ಸಕಲಚಂದ್ರದೇವ	ಕ್ರಿ.ಶ.ಸು. ೧೩ನೆಯ ಶತಮಾನ	ಬೋರಗಾಂವ	ಅದೇ.
೬೬	ವೀರನಂದಿಸಿದ್ಧಾಂತದೇವ	ಕ್ರಿ.ಶ.ಸು. ೧೩ನೆಯ ಶತಮಾನ	ಸ್ತವನಿಧಿ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೧೮.

೬೭	ತ್ರೈಕೀರ್ತಿಸಿದ್ಧಾಂತದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಹುಕ್ಕೇರಿ	ಎ.ಆರ್.ಎಸ್.ಆಯ್.ಇ. ೧೯೪೧–೪೨, ಶಾ.ಸಂ. ೬, ಪು. ೨೬೧.
೬೮	ಕುಮಾರಕೀರ್ತಿಪಂಡಿತ	ಕ್ರಿ.ಶ. ೧೧೩೯	ರಾಯಬಾಗ	ಕೆ.ಆಯ್. ಸಂ. V, ಶಾ.ಸಂ. ೨೫.
೬೯	ವಾಸುಪೂಜ್ಯಮುನಿ	ಕ್ರಿ.ಶ.ಸು. ೧೨ನೆಯ ಶತಮಾನ	ರಾಯಬಾಗ	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು–೨೦೧೦), ಶಾ.ಸಂ. ೩೨, ಪು. ೫೪–೫೫.
೭೦	ಮಾಘಣಂದಿಸಿದ್ಧಾಂತದೇವ	ಕ್ರಿ.ಶ.ಸು. ೧೩ನೆಯ ಶತಮಾನ	ಹೊನಗಾ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೬೩.
೭೧	ಮಾಘಣಂದಿಸಿದ್ಧಾಂತದೇವ	ಕ್ರಿ.ಶ. ೧೧೨೩	ತೇರದಾಳ	ಕೆ.ಆಯ್. ಸಂ. V, ಶಾ.ಸಂ. ೧.
೭೨	ಕನಕನಂದಿಪಂಡಿತದೇವ	ಕ್ರಿ.ಶ. ೧೧೨೩	ತೇರದಾಳ	ಅದೇ.
೭೩	ಶ್ರುತಕೀರ್ತಿತ್ರೈವಿದ್ಯಮುನಿ	ಕ್ರಿ.ಶ. ೧೧೨೩	ತೇರದಾಳ	ಅದೇ.
೭೪	ಚಂದ್ರಕೀರ್ತಿಪಂಡಿತ	ಕ್ರಿ.ಶ. ೧೧೨೩	ತೇರದಾಳ	ಅದೇ.
೭೫	ಪ್ರಭಾಚಂದ್ರಪಂಡಿತದೇವ	ಕ್ರಿ.ಶ. ೧೧೨೩	ತೇರದಾಳ	ಅದೇ.
೭೬	ವರ್ಧಮಾನತ್ರೈವಿದ್ಯದೇವ	ಕ್ರಿ.ಶ. ೧೧೨೩	ತೇರದಾಳ	ಅದೇ.
೭೭	...ಪಂಡಿತದೇವ	ಕ್ರಿ.ಶ.ಸು. ೧೨ನೆಯ ಶತಮಾನ	ಗಡಹಿಂಗ್ಲಜ	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಪೂರ್ವೋಕ್ತ, ಶಾ.ಸಂ. ೪೦, ಪು. ೬೭–೬೮.
೭೮	ಪಕ್ಷೋಪವಾಸಿ ಭಟ್ಟಾರಕ	ಕ್ರಿ.ಶ. ೧೦೬೨	ತೇರ್ಣಿ	ಅದೇ, ಶಾ.ಸಂ. ೪೨, ಪು. ೬೯–೭೧.
೭೯	ಶ್ರೀಧರದೇವ	ಕ್ರಿ.ಶ. ೧೦೬೨	ತೇರ್ಣಿ	ಅದೇ.
೮೦	ಸಿದ್ಧನಂದಿ	ಕ್ರಿ.ಶ. ೪೮೯–೯೦	ಕೊಲ್ಲಾಪುರ	ಪಾಡಿಗಾರ ಶ್ರೀನಿವಾಸ ವಿ. (ಸಂ.), ಪೂರ್ವೋಕ್ತ, ಶಾ.ಸಂ. ೪.
೮೧	ಚಿತಕಾಚಾರ್ಯ	ಕ್ರಿ.ಶ. ೪೮೯–೯೦	ಕೊಲ್ಲಾಪುರ	ಅದೇ.
೮೨	ನಾಗದೇವ	ಕ್ರಿ.ಶ. ೪೮೯–೯೦	ಕೊಲ್ಲಾಪುರ	ಅದೇ.
೮೩	ಜಿನನಂದಿ	ಕ್ರಿ.ಶ. ೪೮೯–೯೦	ಕೊಲ್ಲಾಪುರ	ಅದೇ.

ಅನುಬಂಧ : ಐದು

ಕೂಹುಂಡಿನಾಡಿನ ಶಾಸನಗಳೋಕ್ತ ಶೈವ, ವೈಷ್ಣವ ದೇವಾಲಯಗಳು ಮತ್ತು ಜೈನ ಬಸದಿಗಳು

ಅ.ಸಂ.	ದೇವಾಲಯಗಳು	ಗ್ರಾಮಗಳು	ಶಾಸನಗಳು
			ಶೈವ ದೇವಾಲಯಗಳು
೧	ಸೋಮೇಶ್ವರ	ಸೊಗಲ	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೧೯೬.
೨	ನಗರೇಶ್ವರ	ಅಣ್ಣಿಗೇರಿ	ಕಲಬಾವಿಯ ಅಪ್ರಕಟಿತ ಶಾಸನ (ಅನುಬಂಧ ಒಂದು : ಶಾ.ಸಂ. ೨).
೩	ನಗರೇಶ್ವರ	ಮುಗಟಖಾನ ಹುಬ್ಬಳ್ಳಿ	ಅದೇ.
೪	ಹಬ್ಬೇಶ್ವರ	ನೇಸರಗಿ	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೪೧.
೫	ಮಾಣಿಕೇಶ್ವರ	ನೇಸರಗಿ	ಅದೇ.
೬	ಸಿದ್ಧೇಶ್ವರ	ನೇಸರಗಿ	ಅದೇ.
೭	ಮಹಾಲಿಂಗೇಶ್ವರ	ಗೋಕಾಕ ಜಲಪಾತ	ಎ.ಆರ್.ಎಸ್.ಆಯ್.ಇ. ೧೯೭೪–೭೪, ಶಾ.ಸಂ. ೫೧.
೮	ಅಂಕೇಶ್ವರ	ಸವದತ್ತಿ	ಎಸ್.ಆಯ್.ಆಯ್. ಸಂ. XX, ಶಾ.ಸಂ. ೩೩.
೯	ಪಂಚಮಠ	ಹೂಲಿ	ಅದೇ, ಶಾ.ಸಂ. ೨೪೭.
೧೦	ಮಲ್ಲಿಕಾರ್ಜುನ	ಸವದತ್ತಿ	ಕೆ.ಆಯ್. ಸಂ. VI, ನಂ. ೭೩, ಪು. ೨೦೧–೨೧೫.
೧೧	ಮಾಚೇಶ್ವರ	ಬೈಲಹೊಂಗಲ	ಅಪ್ರಕಟಿತ ಶಾಸನ (ಅನುಬಂಧ ಒಂದು : ಶಾ.ಸಂ. ೧೧).
೧೨	ಜಯಸಿಂಘೇಶ್ವರ	ವಣ್ಣೂರು	ಅಪ್ರಕಟಿತ ಶಾಸನ (ಅನುಬಂಧ ಒಂದು : ಶಾ.ಸಂ. ೧೯).
೧೩	ಕಲಿದೇವ	ವಣ್ಣೂರು	ಅದೇ.

೧೪	ಶಂಕರನಾರಾಯಣ	ಅಸುಂಡಿ	ಎ.ಆರ್.ಎಸ್.ಆಯ್.ಇ. ೧೯೪೦-೪೧, ಶಾ.ಸಂ. ೨.
೧೫	ಕಲ್ಮೇಶ್ವರ	ಚುಳಕಿ	ಅಂಗಡಿ ಮಹೇಶ ಬ., "ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು", ಇತಿಹಾಸ ದರ್ಶನ ಸಂ. ೨೬ (೨೦೧೧), ಪು. ೯೫–೯೬.
೧೬	ಪಂಚಲಿಂಗೇಶ್ವರ	ಮುನವಳ್ಳಿ	ಕೆ.ಆಯ್. ಸಂ. I, ಶಾ.ಸಂ. ೩೦.
೧೭	ಜಗದೀಶ್ವರ	ಮುನವಳ್ಳಿ	ಅದೇ, ಶಾ.ಸಂ. ೩೧.
೧೮	ಕಲಿದೇವ	ಮುನವಳ್ಳಿ	ಅದೇ.
೧೯	ಬ್ರಹ್ಮೇಶ್ವರ	ಯಡ್ರಾವಿ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೭
೨೦	ಮಲ್ಲಿನಾಥ (ಮಲ್ಲಿಕಾರ್ಜುನ)	ಸವದತ್ತಿ	ಅದೇ, ಪು. ೧೬೮. ಕೆ.ಆಯ್. ಸಂ. VI, ಶಾ.ಸಂ. ೭೩.
೨೧	ಮಹಾದೇವ	ಯಕ್ಕೇರಿ	ಆಯ್.ಎ. ಸಂ. V, ಶಾ.ಸಂ. ೨.
೨೨	ಅಡಿಗೇಶ್ವರ	ಸೊಗಲ	ಕ.ಆಯ್. ಸಂ. ೬, ಶಾ.ಸಂ. ೭೩.
೨೩	ಹೆಮ್ಮೇಶ್ವರ	ಉಮರಾಣಿ	ರಮಾ ಜಿ. ಗುಂಡುರಾವ ಮತ್ತು ಮೇಲಕಾರ ಎಸ್.ಕೆ., "ಚಿಕ್ಕೋಡಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೫೨.
೨೪	ಕಲಿದೇವಸ್ವಾಮಿ	ಕಬ್ಬೂರು	ಅದೇ, ಪು. ೧೫೬.
೨೫	ದೇವಾಲಯ	ಕೆರೂರು	ಅದೇ, ಪು. ೧೫೨.
೨೬	ಹಂಚಿಕೇಶ್ವರ	ಖಡಕಲಾಟ	ಅದೇ, ಪು. ೧೫೭.
೨೭	ಸಿದ್ಧೇಶ್ವರ	ಜಗನೂರು	ಅದೇ, ಪು. ೧೫೨.
೨೮	ಕಲಿದೇವ	ದೊನವಾಡ	ಅದೇ, ಪು. ೧೫೭.
೨೯	ಕಲ್ಲಿನಾಥ	ಕವಿಳಾಸಪುರ	ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.), ಕನ್ನಡ ಶಾಸನ ಸಂಪದ (೧೯೬೮), ಪು. ೧೦೧–೧೦೪.
೩೦	ಮಲ್ಲಿಕಾರ್ಜುನ	ಕವಿಳಾಸಪುರ	ಅದೇ.
೩೧	ಸಂಗಮೇಶ್ವರ	ಕವಿಳಾಸಪುರ	ಅದೇ.
೩೨	ನಾಗೇಶ್ವರ	ಕವಿಳಾಸಪುರ	ಅದೇ.

೩೩	ಸೋಮನಾಥ	ಲಕ್ಷ್ಮೇಶ್ವರ	ಅದೇ.
೩೪	ದೇವಾಲಯ	ಅಮ್ಮಣಗಿ	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೦.
೩೫	ತ್ರಿಕೂಟೇಶ್ವರ	ಕೋಚರಿ	ಅದೇ.
೩೬	ಕಲಿದೇವಸ್ವಾಮಿ	ರಾಯಬಾಗ	ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.
೩೭	ಬ್ರಹ್ಮೇಶ್ವರ	ರಾಯಬಾಗ	ಅದೇ.
೩೮	ಅಷ್ಟೇಶ್ವರ	ರಾಯಬಾಗ	ಅದೇ.
೩೯	ಭಳಾರಿ	ರಾಯಬಾಗ	ಅದೇ.
೪೦	ವಿನಾಯಕ	ರಾಯಬಾಗ	ಅದೇ.
೪೧	ಕಯಮೇಶ್ವರ	ಕೊಣ್ಣೂರು	ಕೆ.ಆಯ್. ಸಂ. V, ಶಾ.ಸಂ. ೬.
೪೨	ತಟ್ಟೇಶ್ವರ	ಗೋಕಾಕ ಜಲಪಾತ	ಎ.ಆರ್.ಎಸ್.ಆಯ್.ಇ. ೧೯೫೨-೫೩, ಶಾ.ಸಂ. ೫೧.
೪೩	ತ್ರಿಕೂಟಪ್ರಾಸಾದ	ಮಮದಾಪುರ	ಇ.ಆಯ್. ಸಂ. XIX, ಪು. ೨೬.
೪೪	ಗಳಿಗೇಶ್ವರ	ಅಂಬೆವಾಡಿ	ಇತಿಹಾಸ ದರ್ಶನ ಸಂ. ೭.
೪೫	ಈಶ್ವರ	ಬೆಳಗಾವಿ	ಅಣ್ಣಿಗೇರಿ ಎ.ಎಂ. ಮತ್ತು ಜೋಶಿ ಬಿ.ಆರ್., ದ ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಅಂಡ್ ಕಾಪರ್-ಪ್ಲೇಟ್ ಇನ್ಸ್‌ಕ್ರಿಪ್‌ಶನ್ಸ್ ಎಗ್‌ಝಾಮಿನ್ಡ್ ಬಾಯ್ ದಿ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಡ್ಯೂರಿಂಗ್ ದಿ ಇಯರ್ಸ್ ೧೯೪೦-೪೧ (೧೯೬೧), ಶಾ.ಸಂ. ೩೦, ಪು. ೬.
೪೬	ಅಗಸ್ತ್ಯೇಶ್ವರ	ಕೊಲ್ಲಾಪುರ	ಕೆ.ಆಯ್. ಸಂ. V, ಶಾ.ಸಂ. ೯೮.
೪೭	ಕಣಗಿಲೇಶ್ವರ	ಕೊಲ್ಲಾಪುರ	ಅದೇ.
೪೮	ಮಹಾಲಕ್ಷ್ಮೀದೇವಿ	ಕೊಲ್ಲಾಪುರ	ಅದೇ.
೪೯	ಮಹಾಲಿಂಗದೇವ	ಗೋಕಾಕ	ಅದೇ.
೫೦	ದೇವಾಲಯ	ಮುಧೋಳ	ಎ.ಆರ್.ಎಸ್.ಆಯ್.ಇ. ೧೯೪೨-೪೩, ಶಾ.ಸಂ. ೧೩.

ವೈಷ್ಣವ ದೇವಾಲಯಗಳು			
೧	ಲಕ್ಷ್ಮೀನರಸಿಂಹ	ಸಂಕೇಶ್ವರ	ಗೋಗಿ ಹನುಮಾಕ್ಷಿ, "ಹುಕ್ಕೇರಿ ತಾಲ್ಲೂಕಿನ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೨-೧೬೩.
೨	ಜನಾರ್ಧನ	ಬಡ್ಲಿ	ಕೆ.ಆಯ್. ಸಂ. I, ಶಾ.ಸಂ. ೩೩.
೩	ಮಾಧವನಾರಾಯಣ	ಮುನವಳ್ಳಿ	ಅದೇ, ಶಾ.ಸಂ. ೩೦.
೪	ಕೇಶವೇಶ್ವರ	ರಾಯಬಾಗ	ಕುಂದಣಗಾರ ಕೆ.ಜಿ. (ಸಂ.), ಇನ್ಸ್ಕ್ರಿಪ್ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೬.
ಜೈನ ಬಸದಿಗಳು			
೧	ಜಿನೇಂದ್ರಭವನ	ಸವದತ್ತಿ	ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೩.
೨	ಬಸದಿ	ದೊಡವಾಡ	ಎ.ಆರ್.ಎಸ್.ಆಯ್.ಇ. ೧೯೫೧-೫೨, ಶಾ.ಸಂ. ೩೭.
೩	ರಟ್ಟರ ಪಟ್ಟಜಿನಾಲಯ	ಸವದತ್ತಿ	ಎಸ್.ಆಯ್.ಆಯ್. ಸಂ. XX, ಶಾ.ಸಂ. ೧೮.
೪	ಬಸದಿ	ಸವದತ್ತಿ	ಅದೇ, ಶಾ.ಸಂ. ೬೨.
೫	ಸಹಸ್ರಕೂಟ ಬಸದಿ	ಬೆಳವಡಿ	ಹಂದೂರ ಬಿ.ಆರ್. (ಸಂ.), ಬೆಳಗಾವಿ ಜಿಲ್ಲೆಯ ಜೈನ ಶಾಸನಗಳು (೨೦೧೦), ಶಾ.ಸಂ. ೩೬.
೬	ಬಸದಿ	ಉಳಾಗಡ್ಡಿ ಖಾನಾಪುರ	ನೇಗಿನಹಾಳ ಎಂ.ಬಿ., "ಉಳ್ಳಾಗಡ್ಡಿ ಖಾನಾಪುರದ ಶಾಸನಗಳು", ಕನ್ನಡ ಅಧ್ಯಯನ (ಚಳಿ ಸಂಚಿಕೆ-೨೦೦೨), ಶಾ.ಸಂ. ೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೭	ದೇಹಾರ (ಬಸದಿ)	ಉಳಾಗಡ್ಡಿ ಖಾನಾಪುರ	ಅದೇ, ಶಾ.ಸಂ. ೪.
೮	ಗೊಂಕ ಜಿನಾಲಯ	ತೇರದಾಳ	ಕೆ.ಆಯ್. ಸಂ. V, ಪು. ೮೨.

೯	ಬಸದಿ	ಕೊಣ್ಣೂರು	ಜೆ.ಬಿ.ಬಿ.ಆರ್.ಎ.ಎಸ್. ಸಂ. X, ಪು. ೨೮೭-೨೯೨.
೧೦	ನೇಮಿನಾಥ	ಯಕ್ಸಂಬಾ	ಗುರವ ಆರ್.ಎನ್., "ಎಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ", ಕರ್ನಾಟಕ ಭಾರತಿ ಸಂ. ೧೧/೨ (ನವೆಂಬರ-೧೯೭೮), ಪು. ೨೨-೪೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
೧೧	ಬಸದಿ	ಬೆನಿವಾಡ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೨.
೧೨	ಪಾರ್ಶ್ವಜಿನೇಂದ್ರಭವನ	ಹಣ್ಣಿಕೇರಿ	ಎ.ಆರ್.ಎಸ್.ಆಯ್.ಇ. ೧೯೭೩-೭೪, ಶಾ.ಸಂ. ೮೦ ಮತ್ತು ೮೧.
೧೩	ಬಸದಿ	ಬೈಲಹೊಂಗಲ	ಎ.ಆರ್.ಎಸ್.ಆಯ್.ಇ. ೧೯೫೧-೫೨, ಶಾ.ಸಂ. ೩೩.
೧೪	ಶಾಂತಿನಾಥ (ರಟ್ಟಜಿನಾಲಯ)	ಬೆಳಗಾವಿ	ಇ.ಆಯ್. ಸಂ. XIII, ಶಾ.ಸಂ. ೩/ಎ-ಬಿ, ಪು. ೧೫-೨೭ ಮತ್ತು ೨೭-೩೬
೧೫	ತ್ರಿಕೂಟಮಂಡಿತ ಶಾಂತಿನಾಥ ಬಸದಿ	ಕಲ್ಲೊಳಿ	ಗುರವ ಆರ್.ಎನ್., "ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ", ಕರ್ನಾಟಕ ಭಾರತಿ ಸಂ. ೬/೬ (ಜನೇವರಿ-೧೯೭೪), ಪು. ೪೩-೫೪, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
೧೬	ಬಸದಿ	ರಾಯಬಾಗ	ಕುಂದಣಗಾರ ಕೆ.ಜಿ. (ಸಂ.), ಇನ್ಸ್‌ಕ್ರಿಪ್‌ಶನ್ಸ್ ಇನ್ ನಾರ್ದರ್ನ್ ಕರ್ನಾಟಕ ಅಂಡ್ ಕೊಲ್ಲಾಪುರ ಸ್ಟೇಟ್ (೧೯೩೯), ಶಾ.ಸಂ. ೨೩.
೧೭	ಬಸದಿ	ರಾಯಬಾಗ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೩೩.
೧೮	ಮಾರಸಿಂಗಸೆಟ್ಟಿ ಬಸದಿ	ರಾಯಬಾಗ	ಕೆ.ಆಯ್. ಸಂ. V, ಶಾ.ಸಂ. ೨೫.
೧೯	ಮಾಣಿಕ್ಯದೇವ ಬಸದಿ (ಆದಿನಾಥ ಬಸದಿ)	ಹುಣಸಿಕಟ್ಟಿ	ಆಯ್.ಎ. ಸಂ. X, ಪು. ೧೩೧.
೨೦	ರಟ್ಟಜಿನಾಲಯ	ಎಲ್ಲಮ್ಮಗುಡ್ಡ	ಹಂಪ ನಾಗರಾಜಯ್ಯ, ಯಾಪನೀಯ ಸಂಘ (೧೯೯೯), ಪು. ೭೩-೭೪.
೨೧	ಗಂಗ ಕಂದರ್ಪ	ಬಡ್ಲಿ	ಕೆ.ಆಯ್. ಸಂ. I, ಶಾ.ಸಂ. ೨೯.

	ಬ್ರಹ್ಮಜಿನಾಲಯ		
೨೨	ಬಸದಿ	ಮುನವಳ್ಳಿ	ಎ.ಆರ್.ಎಸ್.ಆಯ್.ಇ. ೧೯೪೦–೪೧, ಶಾ.ಸಂ. ೬೩.
೨೩	ಬಸದಿ	ಯಡ್ರಾವಿ	ಗೋಗಿ ಹನುಮಾಕ್ಷಿ, "ಸವದತ್ತಿ ತಾಲ್ಲೂಕಿನ ಅಪ್ರಕಟಿತ ಶಾಸನಗಳು", ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (೨೦೧೦), ಪು. ೧೬೬.
೨೪	ಬಸದಿ	ಸ್ತವನಿಧಿ	ಹಂದೂರ ಬಿ.ಆರ್. (ಸಂ.), ಪೂರ್ವೋಕ್ತ, ಶಾ.ಸಂ. ೧೧೮.
೨೫	ಬಸದಿ	ಗೋಕಾಕ	ಇ.ಆಯ್. ಸಂ. XXI, ಶಾ.ಸಂ. ೪೩.
೨೬	ಬಸದಿ	ಗೋಕಾಕ	ತಬೋಜಿ ಚಂದ್ರಶೇಖರ ಬಿ., "ಗೋಕಾಕದ ಜಿನಬಿಂಬ ಶಾಸನ", ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್–೬ (೨೦೦೬), ಪು. ೧೭೩.
೨೭	ಗೊಂಕಜಿನಾಲಯ (ನೇಮಿನಾಥ ಬಸದಿ)	ತೇರದಾಳ	ಕೆ.ಆಯ್. ಸಂ. V, ಶಾ.ಸಂ. ೨೧.
೨೮	ರೂಪನಾರಾಯಣ ಬಸದಿ	ಕೊಲ್ಲಾಪುರ	ಅದೇ, ಶಾ.ಸಂ. ೯೮.
೨೯	ಬಸದಿ	ಬೆಳಗಲಿ	ಎ.ಆರ್.ಎಸ್.ಆಯ್.ಇ. ೧೯೪೨–೪೩, ಶಾ.ಸಂ. ೨೧.
೩೦	ಚಂದ್ರಪ್ರಭನಾಥ ಜಿನಾಲಯ	ಗಡಹಿಂಗ್ಲಜ	ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬ (ಮಹಾರಾಷ್ಟ್ರದ ಕನ್ನಡ ಶಾಸನಗಳು–೨೦೧೦), ಶಾ.ಸಂ. ೪೦, ಪು. ೬೭–೬೮.
೩೧	ರಟ್ಟಜಿನಾಲಯ	ತೇರ್ಣಿ	ಅದೇ, ಶಾ.ಸಂ. ೪೨, ಪು. ೬೯–೭೧.
೩೨	ತ್ರಿಭುವನತಿಲಕ ಜಿನಾಲಯ	ಅಲಕ್ತನಗರ	ಆಯ್.ಎ. ಸಂ. VII, ಪು. ೨೦೯–೨೧೭.
೩೩	ಬಸದಿ	ಹೂಲಿ	ಇ.ಆಯ್. ಸಂ. XVIII, ಶಾ.ಸಂ. ೨೨/ಬಿ, ಪು. ೧೭೨–೧೭೮.

ಅನುಬಂಧ : ಆರು

ಗ್ರಂಥಋಣ

ಕನ್ನಡ ಗ್ರಂಥಗಳು

ಲೇಖಕರು	ಪ್ರಕಟವಾದ ವರ್ಷ	ಕೃತಿಗಳು ಮತ್ತು ಪ್ರಕಾಶಕರು
ಅಪರ್ಣ ಕೂ.ಸ.	೧೯೯೯	*ದೇವಾಲಯ ವಾಸ್ತುಶಿಲ್ಪ ಪರಿಚಯ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಇಚ್ಚಂಗಿ ರಾಜಶೇಖರ	೨೦೦೦	*ಪಾರ್ಶ್ವನಾಥ ಪುರಾಣ : ಒಂದು ತೌಲನಿಕ* ಅಧ್ಯಯನ, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.
ಉಪಾಧ್ಯ ಜಿ.ಎನ್.	೨೦೦೯	*ಮಹಾರಾಷ್ಟ್ರ ಕರ್ನಾಟಕ ಆದಾನ ಪ್ರಧಾನ,* ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಮುಂಬಯಿ.
ಎಲಿಗಾರ ಚೆನ್ನಕ್ಕ	೧೯೯೦	*ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ,* ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಕಮಲಾ ಹಂಪನಾ	೨೦೦೩	*ಬದ್ದವಣ (ಜೈನ ಸಾಹಿತ್ಯ-ಸಂಸ್ಕೃತಿ ಶೋಧದ ಪ್ರಬಂಧಗಳು),* ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
ಕಲಬುರ್ಗಿ ಎಂ.ಎಂ.	೧೯೭೮	*ಶಾಸನ ವ್ಯಾಸಂಗ ಭಾಗ ೧-೨,* ಧಾರವಾಡ.
	೧೯೮೦	*ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು,* ಐಬಿಎಚ್ ಪ್ರಕಾಶನ ಬೆಂಗಳೂರು.
	(ಸಂ.) ೧೯೯೯	*ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ-೧,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಕಲಬುರ್ಗಿ ಎಂ.ಎಂ. ಮತ್ತು ಸುಂಕಾಪುರ ಎಂ.ಎಸ್. (ಸಂ.)	೧೯೮೧	*ಬೆಳ್ವಲ (ಡಾ. ಆರ್.ಸಿ. ಹಿರೇಮಠ ಅಭಿನಂದನಾ ಗ್ರಂಥ),* ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಕಲ್ಗುಡಿ ಬಸವರಾಜ	೧೯೮೫	*ಮಹಾಸತಿ ಆಚರಣೆ : ಒಂದು ಅಧ್ಯಯನ,* ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
ಕಾಟ್ಕರ ಸರಜೂ (ಸಂ.)	೨೦೧೧	*ಬೆಳಗಾವಿ ಸಂಸ್ಕೃತಿ (ವಿಶ್ವ ಕನ್ನಡ ಸಮ್ಮೇಳನ ಸಂಪುಟ),* ಬೆಳದಿಂಗಳ ಪ್ರಕಾಶನ ಬೆಳಗಾವಿ.
ಕಾತ್ರಾಳೆ ಕೆ.ಎನ್.	೧೯೯೯	*ಬೆಳಗಾವಿ ಜಿಲ್ಲೆ ಮತ್ತು ಜೈನಧರ್ಮ,* ಸ್ನೇಹ ಪ್ರಕಾಶನ ಧಾರವಾಡ.

ಕುಲಕರ್ಣಿ ಬಿ.ಎಸ್. (ಸಂ.) ೧೯೮೫ *ಬ್ರಹ್ಮಶಿವನ ಸಮಯಪರೀಕ್ಷೆ*, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಕೆಂಪಣ್ಣವರ ಪಿ.ಜಿ. ಮತ್ತು ಜೋಡಟ್ಟಿ ಟಿ.ಆರ್. (ಸಂ.) ೧೯೯೦ *ಜೈನ ಕ್ಷೇತ್ರಗಳ ಐತಿಹ್ಯ*, ಬಿ.ಬಿ. ಕರ್ಣವಾಡಿ ಮುದ್ರಣಾಲಯ ಹಾರೂಗೇರಿ.

ಕೆಂಪಣ್ಣವರ ಪಿ.ಜಿ. ೧೯೯೭ *ಸಿರಿಗಂಧ*, ಅಕ್ಷಯ ಪ್ರಕಾಶನ ಚಿಕ್ಕೋಡಿ.

ಕೊಪ್ಪಾ ಎಸ್.ಕೆ. ೧೯೯೦ *ತರ್ದವಾಡಿನಾಡು : ಒಂದು ಅಧ್ಯಯನ*, ಪ್ರತಿಭಾ ಪ್ರಕಾಶನ ಇಂಡಿ.

ಕೃಷ್ಣ ಕೊಲ್ಹಾರ ಕುಲಕರ್ಣಿ ೨೦೦೨ *ಬಿಜಾಪುರ ಆದಿಲಶಾಹಿ (ಕ್ರಿ.ಶ. ೧೪೮೯–೧೬೮೬)*, ಸಿಕ್ಯಾಬ ಆದಿಲಶಾಹಿ ಅಧ್ಯಯನ ಸಂಸ್ಥೆ ಬಿಜಾಪುರ.

ಗುಂಜಾಳ ಎಸ್.ಆರ್. (ಸಂ.) ೨೦೦೩ *ಬೆಳಗಾವಿ ಬೆಳಕು (ಅಖಿಲ ಭಾರತ ೭೦ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ)*, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ಗೋಗಿ ಹನುಮಾಕ್ಷಿ ೨೦೦೨ *ಅನುಶಾಸನ ಸಂ. ೧ (ಸಂಶೋಧನ ಲೇಖನಗಳ ಸಂಗ್ರಹ)*, ಮಹಿಳಾ ಸಾಹಿತ್ಯಿಕಾ ಹುಬ್ಬಳ್ಳಿ.

ಗೋಪಾಲ್ ಬಾ.ರಾ. ೧೯೮೩ *ಬನವಾಸಿ ಕದಂಬರು*, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ ಶಿರಸಿ.

ಗೋಪಾಲ್ ಆರ್. (ಸಂ.) ೨೦೧೦ *ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು.

ಗೋಪಾಲರಾವ್ ಎಚ್.ಎಸ್. ೧೯೯೩ *ಶಾಸನಗಳ ಹಿನ್ನಲೆಯಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳ ಒಂದು ಅಧ್ಯಯನ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಮೈಸೂರು.

ಚಿಂದಾನಂದಮೂರ್ತಿ ಎಂ. ೧೯೭೯ *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

ತಿಪ್ಪೇರುದ್ರಸ್ವಾಮಿ ಎಚ್. ೧೯೯೭ *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಡಿ.ವಿ.ಕೆ. ಮೂರ್ತಿ ಕೃಷ್ಣಮೂರ್ತಿಪುರಂ ಮೈಸೂರು.

ತೆಲಗಾವಿ ಲಕ್ಷ್ಮಣ್ ೨೦೦೪ *ಮೌರ್ಯ ಮತ್ತು ಶಾತವಾಹನ ಯುಗ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ದೇಸಾಯಿ ಪಾಂಡುರಂಗರಾವ್, ೧೯೭೩ ರಿತ್ತಿ ಶ್ರೀನಿವಾಸ ಮತ್ತು ಗೋಪಾಲ ಬಾ.ರಾ. — *ಪ್ರಾಚೀನ ಭಾರತದ ಚರಿತ್ರೆ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ದೇಸಾಯಿ ಪಾಂಡುರಂಗರಾವ್ ೧೯೮೧ — *ಕರ್ನಾಟಕದ ಕಲಚುರಿಗಳು*, ಆಲೂರು ವೆಂಕಟರಾವ್ ಪ್ರತಿಷ್ಠಾನ ಧಾರವಾಡ.

ದೇಸಾಯಿ ಪಿ.ಬಿ. ೧೯೮೭ — *ಕನ್ನಡ ನಾಡಿನ ಶಾಸನಗಳು*, ಧಾರವಾಡ.

ನರಸಿಂಹಮೂರ್ತಿ ಎ.ವಿ. ೧೯೭೧ — *ಕರ್ನಾಟಕದ ಸೇವುಣರ ಇತಿಹಾಸ*, ಮೈಸೂರು.

ನರಸಿಂಹಾಚಾರ ಆರ್. (ಸಂ.) ೨೦೦೫ — *ಕರ್ನಾಟಕ ಕವಿಚರಿತೆ ಸಂ. ೧,೨,೩*, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

ನಾಗಯ್ಯ ಜೆ.ಎಂ. ೧೯೯೨ — *ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ*, ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ.

ನೇಗಿನಹಾಳ ಎಂ.ಬಿ. ೧೯೯೯ — *ನೇಗಿನಹಾಳ ಪ್ರಬಂಧಗಳು (ಸಂಶೋಧನ ಲೇಖನಗಳ ಸಂಗ್ರಹ)*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರಭಾಕರ ಎಂ.ಎನ್. ೨೦೦೦ — *ದೇವಾಲಯ ವಾಸ್ತು ಚಂದ್ರಿಕೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪರಮಶಿವಮೂರ್ತಿ ಡಿ.ವಿ. ೧೯೯೯ — *ಕನ್ನಡ ಶಾಸನ ಶಿಲ್ಪ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಟೀಲ ಕೆ.ಎಸ್. ೨೦೧೦ — *ಹೂಲಿ ಮತ್ತು ಲಕ್ಕುಂಡಿ ದೇವಾಲಯಗಳು : ಒಂದು ತೌಲನಿಕ ಅಧ್ಯಯನ*, ಪ್ರತಿಭಾ ಪ್ರಕಾಶನ ಧಾರವಾಡ.

ಪಾಟೀಲ ಚನ್ನಬಸಪ್ಪ ೧೯೯೯ — *ಕರ್ನಾಟಕದ ಕೋಟೆಗಳು ಸಂ. ೧*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪಾಟೀಲ ಮನೋಜ ೧೯೮೭ — *ಬೆಳಗಾವಿ ಜಿಲ್ಲಾ ಮಾರ್ಗದರ್ಶಿ*, ಪವನ ಪ್ರಕಾಶನ ಬೆಳಗಾವಿ.

ಪಾಟೀಲ ಶಿ.ಬಾ. ೧೯೮೯ — *ಕೂಹೂಂಡಿನಾಡು*,ಕಮಲಬಸ್ತಿ ಪೂಜಾ ಕಮೀಟಿ ಬೆಳಗಾವಿ.

೧೯೯೫ — *ರಟ್ಟರ ಕಾಲದ ಸಾಂಸ್ಕೃತಿಕ ಅಧ್ಯಯನ*, ಬಸವಶ್ರೀ ಪ್ರಕಾಶನ ಸಂಕೇಶ್ವರ.

೧೯೯೮ — *ಶ್ರೀಕ್ಷೇತ್ರ ಸೊಗಲ ದರ್ಶನ*, ಶ್ರೀಕ್ಷೇತ್ರ ಸೊಗಲ ಜೀರ್ಣೋದ್ಧಾರ ಕಮೀಟಿ, ಸೊಗಲ.

ಪಾವಟೆ ಚೆನ್ನಕ್ಕ	೧೯೬೦	*ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಬೆಳಗಲಿ ದು.ನಿಂ.	೧೯೮೬	*ಜಮಖಂಡಿ ತಾಲ್ಲೂಕು ದರ್ಶನ*, ಐ.ಬಿ.ಎಚ್. ಪ್ರಕಾಶನ ಬೆಂಗಳೂರು.
ಮರಿಯಪ್ಪ ಭಟ್ಟ ಎಂ. (ಸಂ.)	೧೯೫೫	*ರಾಜಾದಿತ್ಯನ ವ್ಯವಹಾರ ಗಣಿತ*, ಸರಕಾರಿ ಓರಿಯೆಂಟಲ್ ಗ್ರಂಥಾಲಯ ಮದ್ರಾಸ.
ಮಲ್ಲಾಪುರ ಬಿ.ವಿ.	೧೯೭೮	*ನಯಸೇನ ಮತ್ತು ಅವನ ಕೃತಿಗಳು*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಮಹೀಷವಾಡಿ ಬಿ.ಬಿ.	೧೯೭೬	*ಪ್ರಬಂಧ ಶ್ರೀಗಂಧ*, ಜ್ಞಾನವಿಕಾಸ ಪ್ರಕಾಶನ ಧಾರವಾಡ.
	೧೯೭೭	*ಜೈನ ವಾಙ್ಮಯ ಪರಿಶೋಧನೆ (ಸಂಶೋಧನ ಲೇಖನಗಳ ಸಂಗ್ರಹ)*, ಜ್ಞಾನ ವಿಕಾಸ ಪ್ರಕಾಶನ ಧಾರವಾಡ.
ಮಾಲಗಿತ್ತಿ ವಿ.ಸಿ. (ಸಂ.)	೨೦೦೨	*ಬೆಳಗಾವಿ ಜಿಲ್ಲೆಯ ಭವ್ಯ ಪರಂಪರೆ*, ಮಾಲಗಿತ್ತಿ ಆಫ್‌ಸೆಟ್ ಪ್ರಿಂಟರ್ಸ್ ಬೆಳಗಾವಿ.
ಮಿರ್ಜಿ ಅಣ್ಣಾರಾಯ	೧೯೬೭	*ಜೈನಧರ್ಮ*, ಶಾಂತಿಸೇವಾ ಸದನ ಶೇಡಬಾಳ.
(ಅನು.)	೧೯೮೧	ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ, ಜೈನ ಸಂಸ್ಕೃತಿ ಸಂಘ ಸೊಲ್ಲಾಪುರ.
ಮುತಾಲೀಕ ಆರ್.ಆರ್.	೧೯೮೭	*ಹುಕ್ಕೇರಿ ತಾಲ್ಲೂಕು ದರ್ಶನ*, ಐ.ಬಿ.ಎಚ್. ಪ್ರಕಾಶನ ಬೆಂಗಳೂರು.
ಮೂಲಿಮನಿ ಶಿವಾನಂದ (ಸಂ.)	೨೦೦೩	ಬೆಳಗಾವಿ ಸಿರಿ (ಸ್ಮರಣ ಸಂಚಿಕೆ), ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
ಮೇವುಂಡಿ ಮಲ್ಲಾರಿ	೧೯೭೪	*ಕನ್ನಡನಾಡಿನ ಶಾಸನ ಕವಿಗಳು*, ಧಾರವಾಡ.
ರಾಮಚಂದ್ರರಾವ್ ಎಸ್.ಕೆ.	೧೯೭೫	*ಮೂರ್ತಿಶಿಲ್ಪ ನೆಲೆ-ಹಿನ್ನಲೆ*, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
ಲಕ್ಷ್ಮೀನಾರಾಯಣರಾಯ್ ಎಂ.ಎ., ಮತ್ತು ಪಂಚಮುಖಿ ರಾ.ಸ್ವಾ	೧೯೪೬	*ಕರ್ನಾಟಕ ಅರಸು ಮನೆತನಗಳು ಸಂ. ೧*, ಧಾರವಾಡ.
ವಸಂತರಾಜಯ್ಯ ಎಸ್.ಬಿ. (ಸಂ.)	೧೯೯೪	*ಕರ್ನಾಟಕದ ದಿಗಂಬರ ಜಿನಮಂದಿರಗಳು*, ಕರ್ನಾಟಕ ದಿಗಂಬರ ಮಹಾಮಂಡಲ (ರಿ.) ಬೆಂಗಳೂರು.
ಶಿವತಾರಕ್ ಕೆ.ಬಿ.	೨೦೦೧	*ಕರ್ನಾಟಕದ ಪುರಾತತ್ವ ನೆಲೆಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಶೆಟ್ಟಿ ಎಸ್.ಡಿ.	೧೯೯೯	*ಜೈನ ಬಸದಿಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಶೇತೆ ಬಿ.ಎಸ್.	೧೯೯೧	*ಕರ್ನಾಟಕದಲ್ಲಿ ಸತಿ ಪದ್ಧತಿ,* ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ.
ಶೇಷಶಾಸ್ತ್ರೀ ಆರ್.	೨೦೦೪	*ಕರ್ನಾಟಕದ ವೀರಗಲ್ಲುಗಳು,* ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
ಶ್ರೀಧರಮೂರ್ತಿ ಮ.	೧೯೮೧	*ದೇವತೆಗಳು ಮತ್ತು ಹಬ್ಬಗಳು,* ಪುನರ್ವಸು ಪ್ರಕಾಶನ ಬೆಂಗಳೂರು.
ಸಿಂದಗಿ ರಾಜಶೇಖರ	೧೯೮೮	*ಕರ್ನಾಟಕದ ವಾಸ್ತು, ಶಿಲ್ಪ ಮತ್ತು ಚಿತ್ರಕಲೆ,* ಸುಜಾತಾ ಪ್ರಕಾಶನ ಧಾರವಾಡ.
ಸುಂದರ ಅ. (ಸಂ.)	೧೯೯೭	*ಕರ್ನಾಟಕ ಚರಿತ್ರೆ ಸಂ. ೧,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಹಂಜೆ ಅಪ್ಪಣ್ಣ ಎನ್.	೨೦೦೫	*ಅರಟಾಳದ ಪಾರ್ಶ್ವನಾಥ ಜಿನಾಲಯ : ವಾಸ್ತು-ಶಿಲ್ಪ-ಶಾಸನ,* ದಿಗಂಬರ ಜೈನ ಸ್ಯಾದ್ವಾದ ಗ್ರಂಥಮಾಲೆ ಧಾರವಾಡ
	೨೦೦೮	*ಧಾರವಾಡ ಪರಿಸರದಲ್ಲಿ ಜೈನಧರ್ಮ,* ಭಾರತೀಯ ಜೈನ ಮಿಲನ್, ಬಾಣಸವಾಡಿ ಶಾಖೆ ಬೆಂಗಳೂರು.
ಹಂದೂರ ಬಿ.ಆರ್.	೨೦೦೩	*ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ,* ಶ್ರೀ ಅಜಿತ ಕುಚನೂರೆ ವಿಜಾಪುರ.
ಹಂಪ ನಾಗರಾಜಯ್ಯ	೧೯೯೭	*ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ),* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
	೧೯೯೮	*ಶಾಸನಗಳಲ್ಲಿ ಜೈನ ತೀರ್ಥಗಳು,* ಶಾಂತಿರಾಜಶಾಸ್ತ್ರೀ ಟ್ರಸ್ಟ್ ಬೆಂಗಳೂರು.
	೧೯೯೯	*ಯಾಪನೀಯ ಸಂಘ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಹಿರೇಮಠ ಬಿ.ಆರ್.	೧೯೮೬	*ಕರ್ನಾಟಕದ ಶಾಸನಗಳಲ್ಲಿ ವರ್ತಕರು,* ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಇಂಗ್ಲೀಷ್ ಗ್ರಂಥಗಳು

Altekar A.S.	1967	*Rastrakutas and their Times,* Oriental Book Agency, Poona.

Basavaraj K.R.	1983	*Administration under the Chalukyas of Kalyana,* New Era Publication Madras.
Desai Dinakar	1951	*The Mahamandaleshwaras under the Chalukyas of Kalyani,* Indian Historical Institute Bombay.
Desai P.B.	2001	*Jainism in South India and Some Jain Epi graphs,* Jaina Sanskriti Sanrakshak Sangh Solapur.
Desai P.B., Ritti S.H. and Gopal B.R. (Ed.)	1970	*A History of Karnataka,* Karnatak University Dharwad.
Dikshit G.S.	1964	*Local self Government in Medieval Karnataka,* Karnatak University Dharwad.
Fleet J.S.	1884	*The Dynasties of Kanararese District* (Bombay Gazetter Vol –1 part 2).
Gururaja Rao B.K.	1972	*Megalithic Culture in South India,* Prasaranga, University of Mysore.
Gururajachar.	1974	*Some aspects of Economic and Social life in Karnataka,* Mysore.
Gopal B.R.	1981	*The Chalukyas Kalyana and the Kalachuris,* Prasaranga Karnatak University Dharwad.
Govind Roa M.		Kannada Literature and the Ratta Kings, Annals of Oriental Research Inst.Madras.
Hampa Nagarajaiah	2007	*Morphology of Jaina Architecture,* National Institute of Prakrit Studies and Resrarch, Shravanabelagola.
James Burgess	1874	*Report of the First Seasons Operations in the Belgaum and Kaladagi Districtis,* Indological Book House Varanasi.
James M. Campbell (Ed.)	2004(Reprint)	*Gazetteer of Belgaum,* Govt. of Karnataka Bangalore.

Kalaghatagi T.G. (Ed.)	1977	*Jainism and Karnataka Culture,* Prasaranga Karnatak Univresity Dharwad.
Kamath Suryanath (Ed.)	1987	*Belgaum District Gazetteer,* Govt. of Karnataka Bangalore.
Leela S. Shantakumari	1989	*History of the Agraharas of Karnatak,* New Era Publication Madras.
Malathi Mahajan	1989	*Cultural History of Maharashtra and Goa,* Sandeep Prakashana Delhi.
Padigar S.V.	1996	*Vishnu Cult in Karnataka,* Directorate of Archaeology and Museums Mysore.
Ritti Shrinivas.	1973	*The Sevunas (The Yadavas of Devagiri),* Dharwad.
Saletore B.A.	1938	Medieval Janism, Karnatak Publishing House Bombay.
Sundara A.	1975	*Early Chamber Tombs of South India,* University Publishers, New Delhi.
Suryanath Kamath (Ed.)	1987	*Belgaum Districts Gazetteer,* Government of Karnataka Bangalore.

ಶಾಸನ ವರದಿಗಳು ಮತ್ತು ಸಂಪುಟಗಳು

Annual Reports on South Indian Epigraphy, 1926-27, 1940-41, 1941-42, 1942-43, 1945-46, 1951-52, 1952-53, 1956-57, 1959-60, 1963-64, 1973-74.

Indian Antiquary, Vol. No. V, VI, VII, X, XX.

Karnatak Inscriptions Vol. I, IV, V, VI.

South Indian Inscriptions Vol. XI-I, XI-II, XV, XX.

Epigraphica Indica Vol. VIII, XIII, XVI, XVIII, XIX, XXI, XLII.

Journal of the Bombay Branch of Royal Asiatic Society Vol. III-II, X.

Annigeri A.M. and Josi B.R.	1961	*The Discriptive List of Stone and Coper-Plate Inscriptions Examined by the Kannada Research Institute During the years 1940-41 to 1942-43,* Kannada Research Institute,Dharwad.

Desai P.B. (Ed.) 1966 *Summaries of Inscriptions (1943-44 to 1949-50)*, Kannada Research Institute, Karnatak University Dharwad.

Padigar Shrinivas V. (ed.) 2010 *Inscriptions of the CALUKYAS OF BADAMI*, Indian Council of History Research, Southern Regional Centre, Bengalore.

Kundanagar K.G. (Ed.) 1939 *Inscriptions of Northern Karnataka and Kolhapur State*, Kolhapur.

ಹಿರೇಮಠ ಆರ್.ಸಿ. ಮತ್ತು ಕಲಬುರ್ಗಿ ಎಂ.ಎಂ. (ಸಂ.) ೧೯೭೪ *ಕನ್ನಡ ಶಾಸನ ಸಂಪದ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

ಉಪಾಧ್ಯ ಜಿ.ಎನ್. ಮತ್ತು ದೇವರಕೊಂಡಾರೆಡ್ಡಿ (ಸಂ.) ೨೦೦೧ *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೬, ಮಹಾರಾಷ್ಟ್ರದ ಕನ್ನಡ ಶಾಸನಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಭಟ್‌ಸೂರಿ ಕೆ.ಜಿ., ಕಲವೀರ ಮನ್ವಾಚಾರ್ ಮತ್ತು ಪರಮಶಿವಮೂರ್ತಿ (ಸಂ.) ೨೦೦೬ *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೯, ಬಾಗಲಕೋಟೆ ಜಿಲ್ಲೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಕಲಬುರ್ಗಿ ಎಂ.ಎಂ. (ಸಂ.) ೧೯೭೬ *ವಿಜಾಪುರ ಜಿಲ್ಲೆಯ ಶಾಸನಸೂಚಿ*, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

(ಸಂ.) ೧೯೮೭ *ಮಹಾರಾಷ್ಟ್ರದ ಕನ್ನಡ ಶಾಸನಗಳು*, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಮುಂಬಯಿ.

ಸಂಶೋಧನ ಲೇಖನಗಳು

ಅಂಗಡಿ ಮಹೇಶ ಬ. ೨೦೧೧ *"ಸವದತ್ತಿ ಪ್ರದೇಶದ ಪ್ರಾಚ್ಯಾವಶೇಷಗಳು"*, ಇತಿಹಾಸ ದರ್ಶನ ಸಂ. ೨೬, ಪು. ೯೪-೯೯, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.

ಉಪಾಧ್ಯ ಜಿ.ಎನ್. ೧೯೯೬ *"ಮಹಾರಾಷ್ಟ್ರದ ಕನ್ನಡ ಶಾಸನಗಳಲ್ಲಿಯ ಸ್ಥಳನಾಮಗಳು : ಒಂದು ಅಧ್ಯಯನ"*, ಸಾಧನೆ ಸಂ. ೨೫/೩-೪, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

ಕುಲಕರ್ಣಿ ಶ್ರೀಧರ ವ್ಹಿ. ೨೦೦೩ *"ಸವದತ್ತಿ ಸುತ್ತಲಿನ ವೀರಗಲ್ಲುಗಳು"*, ಬೆಳಗಾವಿ

		ಬೆಳಕು (ಸ್ಮರಣ ಸಂಚಿಕೆ), ಬೆಳಗಾವಿ.
ಕೊಕಟನೂರ ಆರ್.ಬಿ.	೨೦೧೧	*ಪಾರ್ಶ್ವಪಂಡಿತನ ಕಲ್ಹೊಳೆಯ ಶಾಸನ :ಒಂದು ವಿವೇಚನೆ", ಇಂದ್ರವೇಣಿ, ಬೆಳುವಲಪ್ರಕಾಶನ, ಬಳೋಬಾಳ*
ಗುರವ ಆರ್.ಎನ್.	೯೭೮	*"ಏಕ್ಕಸಂಬುಗೆಯ ಕ್ರಿ.ಶ. ೧೧೬೫ರ ಶಾಸನ"*, ಕರ್ನಾಟಕ ಭಾರತಿ ಸಂ. ೧೧/೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
	೧೯೭೯	*"ಚಕ್ರವರ್ತಿ ಭುವನೈಕಮಲ್ಲದೇವನ ಬೆಳವಡಿ ಶಾಸನ"*, ಕರ್ನಾಟಕ ಭಾರತಿ ಸಂ. ೧೧/೪, ಪು. ೨೯–೩೫, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಗುರುರಾಜರಾವ ಬಿ.ಕೆ.	೧೯೮೦	*"ಭಾರತೀಯ ವಾಸ್ತು ಶೈಲಿಗಳು"*, ಅಧ್ಯಯನ (ಶಂ.ಬಾ. ಜೋಶಿ ಅಭಿನಂದನ ಗ್ರಂಥ), ಬೆಂಗಳೂರು.
ಚಲವಾದಿ ಎಸ್.ಜಿ.	೨೦೦೭	*"ಸಂಕೇಶ್ವರದ ಪಾರ್ಶ್ವನಾಥ ಬಸದಿಯ ವೈಶಿಷ್ಟ್ಯಗಳು"*, ಇತಿಹಾಸ ದರ್ಶನ ಸಂ. ೨೨, ಪು. ೫೪–೫೫, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
ತಬೋಜಿ ಚಂದ್ರಶೇಖರ ಬಿ.	೨೦೦೪	*"ಕೊಣ್ಣೂರಿನ ಜಿನಬಿಂಬ ಶಾಸನ"*,ಶಾಸನ ಅಧ್ಯಯನ ಸಂ. ೨, ಪು. ೨೦–೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
	೨೦೦೬	*"ಗೋಕಾಕದ ಜಿನಬಿಂಬ ಶಾಸನ"*, ಸ್ಟಡೀಜ್ ಇನ್ ಕರ್ನಾಟಕ ಹಿಸ್ಟ್ರಿ ಅಂಡ್ ಕಲ್ಚರ್ ಪ್ರೊಸಿಡಿಂಗ್ಸ್ ವಾಲ್ಯೂಮ್–೬, ಪು. ೧೭೫, ಬೆಂಗಳೂರು.
ನೇಗಿನಹಾಳ ಎಂ.ಬಿ.	೨೦೦೨	*"ಉಳ್ಳಾಗಡ್ಡಿ ಖಾನಾಪುರ ಶಾಸನಗಳು"*, ಕನ್ನಡ ಅಧ್ಯಯನ (ಚಳಿ ಸಂಚಿಕೆ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
ಪಾಟೀಲ ಕಲ್ಲನಗೌಡ ತಿ.	೧೯೯೫	*"ಪರಸಗಡದ ಪರಿಚಯ"*, ಇತಿಹಾಸ ದರ್ಶನ ಸಂ. ೧೦, ಪು. ೬೯–೭೦, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
ಪೋತದಾರ ವಿಠ್ಠಲ ಡಿ.	೧೯೯೩	*"ಮೇರೆಗಲ್ಲುಗಳು"*, ಇತಿಹಾಸ ದರ್ಶನ ಸಂ. ೯, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
ರಿತ್ತಿ ಎಸ್.ಎಚ್.	೧೯೭೯	*"ಬೆಳವಡಿಯಲ್ಲಿಯ ಶಿಲಾಲಿಪಿಗಳು"*, ಬೆಳವಡಿಯ ವೀರರಾಣಿ ಮಲ್ಲಮ್ಮನ ತ್ರಿಶತಮಾನೋತ್ಸವದ ಸ್ಮರಣ

		ಸಂಚಿಕೆ–೧೬೭೮ ರಿಂದ ೧೯೭೮, ಪು. ೧೬–೧೮, ಬೆಳವಡಿ.
ಸುಂದರ ಅ.	೧೯೭೮	*"ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧಗಳು"*, ಕರ್ನಾಟಕ ಭಾರತಿ ಸಂ. ೧೧/೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಸುರೇಬಾನಕರ ಸ್ಮೀತಾ	೨೦೦೭	*"ಕೊಣ್ಣೂರಿನ ಅಪರೂಪದ ಸ್ಮಾರಕ ಶಿಲ್ಪ"*, ಇತಿಹಾಸ ದರ್ಶನ ಸಂ. ೨೨, ಪು. ೧೦೨–೧೦೩, ಕರ್ನಾಟಕ ಇತಿಹಾಸ ಅಕಾದೆಮಿ ಬೆಂಗಳೂರು.
ಹಂಜೆ ಅಪ್ಪಣ್ಣ ಎನ್.	೨೦೦೮	*"ಸಾಹಿತ್ಯ ಮತ್ತು ಶಾಸನಗಳಲ್ಲಿ ಭದ್ರಬಾಹು ಭಟ್ಟಾರಕರು ಮತ್ತು ಚಂದ್ರಗುಪ್ತ"*, ಅರವಂಟಿಗೆ ಸಂ. ೧/೧, ಪು. ೧೦–೧೯, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.
	೨೦೧೦	*"ಉಗರಗೋಳದ ಜೈನ ಸಿಂಹಪೀಠ ಶಾಸನ"*, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೮–೮೯/೦೩–೦೪ ಮತ್ತು ೦೧–೦೨, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
	೨೦೧೧	*"ಬೆಳಗಾವಿ ಜಿಲ್ಲೆಯ ಬಸದಿಗಳು ಮತ್ತು ಶಿಲ್ಪಗಳು"*, ಶೋಧ (ಅರ್ಧವಾರ್ಷಿಕ ದ್ವಿಭಾಷಾ ಸಂಶೋಧನ ನಿಯತಕಾಲಿಕೆ), ಪು. ೬–೩೯, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.
	೨೦೧೨	*"ಗೋಕಾಕ ಪರಿಸರದ ಬಸದಿಗಳು"*,ಶೋಧ (ಅರ್ಧವಾರ್ಷಿಕ ದ್ವಿಭಾಷಾ ಸಂಶೋಧನ ನಿಯತಕಾಲಿಕೆ), ಪು. ೨೬–೩೬, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.
ಹಂಜೆ ಅಪ್ಪಣ್ಣ ಎನ್. ಮತ್ತು ಕೆಂಪಣ್ಣವರ ಪಿ.ಜಿ.	೨೦೦೫	*"ರಾಯಬಾಗದ ವೀರಗಲ್ಲು ಶಾಸನ"*, ಶಾಸನ ಅಧ್ಯಯನ ಸಂ. ೨/೨, ಪು. ೨೬–೨೮, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಎಂ.ಫಿಲ್. ಮತ್ತು ಪಿಎಚ್.ಡಿ. ಪ್ರಬಂಧಗಳು

ಕಲ್ಲೋಳಿಕರ ಅರುಣ ಕೆ.	೨೦೦೯	*ಬೆಳಗಾವಿ ಪ್ರದೇಶದ ಕೋಟೆ–ಕೊತ್ತಲಗಳು : ಒಂದು ಅಧ್ಯಯನ* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಕೋಳಿಗುಡ್ಡ ಸಿ.ಎನ್.	೨೦೦೫	*ಆರ್ಕಿಯಾಲಜಿ ಆಫ್ ಚಿಕ್ಕೋಡಿ ಅಂಡ್ ಗೋಕಾಕ್ ತಾಲೂಕ್ಸ್* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ),

		ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಚಲವಾದಿ ಎಸ್. ಜಿ.	೨೦೦೨	*ಬೆಳಗಾವಿ ಜಿಲ್ಲೆಯ ಜೈನ ವಾಸ್ತು ಶಿಲ್ಪಕಲೆ* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ),ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ತಬೋಜಿ ಚಂದ್ರಶೇಖರ ಬ.	೨೦೦೧	*ಗೋಕಾಕ ತಾಲ್ಲೂಕಿನ ದೇವಾಲಯಗಳು ಮತ್ತು ಶಾಸನಗಳು : ಒಂದು ಅಧ್ಯಯನ*(ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ನವಲಗುಂದ ಎಸ್.ಎಸ್.		*ತೊರಗಲ್ಲು : ಒಂದು ಅಧ್ಯಯನ*(ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ನಾಗಭೂಷಣ ಎಸ್.ಎಂ.		*ಹಿಸ್ಟ್ರಿ ಅಂಡ್ ಅಂಟಿಕ್ವಿಟಿಸ್ ಆಫ್ ಬೆಳ್ಗಮ್* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಪಾಟೀಲ ಕರೆಪ್ಪಗೌಡ ಸಿ.	೨೦೦೨	*ಸವದತ್ತಿ ತಾಲ್ಲೂಕಿನ ಪುರಾತತ್ವ ಅನ್ವೇಷಣೆ* (ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಸುರೇಬಾನಕರ ಸ್ಮೀತಾ	೨೦೦೫	*ಹಲಸಿ : ತ್ರು ದಿ ಏಜಸ್* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಹಂಜೆ ಸಂಜಯ ಎನ್.	೨೦೦೯	*ಗೋಕಾಕ ತಾಲ್ಲೂಕು ಮತ್ತು ಜೈನಧರ್ಮ*, (ಅಪ್ರಕಟಿತ ಎಂ.ಫಿಲ್. ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ ಹಂಪಿ.

ನಿಯತಕಾಲಿಕೆಗಳು

೧. *ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ*, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨. *ಕರ್ನಾಟಕ ಭಾರತಿ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೩. *ಸಾಧನೆ*, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

೪. *ಶಾಸನ ಅಧ್ಯಯನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೫. *ಮಾನವಿಕ ಕರ್ನಾಟಕ*, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೬. *ಅರವಂಟಿಗೆ*, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.

೭. *ಪ್ರಬುದ್ಧ ಕರ್ನಾಟಕ*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೮. *ಕನ್ನಡ ಅಧ್ಯಯನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಅನುಬಂಧ : ಏಳು

ಸಂಕೇತ ಸೂಚಿ


ಆಯ್.ಎ.	:	ಇಂಡಿಯನ್ ಆಂಟಿಕ್ವೆರಿ
ಆಯ್.ಎಸ್.	:	ಇನ್ಸ್ಕ್ರಿಪ್‌ಶನ್ಸ್ ಆಫ್ ಶಿಲಾಹಾರಸ್
ಆಯ್.ಎಚ್.ಕ್ಯೂ.	:	ಇಂಡಿಯನ್ ಹಿಸ್ಟೊರಿಕಲ್ ಕ್ವಾರ್ಟರ್ಲಿ ವಾಲ್ಯೂಮ್ಸ್
ಇ.ಆಯ್.	:	ಎಪಿಗ್ರಫಿಯ ಇಂಡಿಕ
ಎ.ಆರ್.ಆಯ್.ಇ.	:	ಎನ್ಯುವಲ್ ರಿಪೋರ್ಟ್ಸ್ ಆನ್ ಇಂಡಿಯನ್ ಎಪಿಗ್ರಫಿ
ಎ.ಆರ್.ಎಸ್.ಆಯ್.ಇ.	:	ಎನ್ಯುವಲ್ ರಿಪೋರ್ಟ್ಸ್ ಆನ್ ಸೌಥ್ ಇಂಡಿಯನ್ ಎಪಿಗ್ರಫಿ
ಎಸ್.ಆಯ್.ಆಯ್.	:	ಸೌಥ್ ಇಂಡಿಯನ್ ಇನ್ಸ್ಕ್ರಿಪ್‌ಶನ್ಸ್
ಕ.ವಿ.ಶಾ.ಸಂ.	:	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಜೆ.ಬಿ.ಬಿ.ಆರ್.ಎ.ಎಸ್.	:	ಜರ್ನಲ್ ಆಫ್ ಬಾಂಬೆ ಬ್ರ್ಯಾಂಚ್ ಆಫ್ ರಾಯಲ್ ಏಶಿಯಾಟಿಕ್ ಸೊಸೈಟಿ
ಜೆ.ಕೆ.ಯು.	:	ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ
ಜೆ.ಆರ್.ಎ.ಎಸ್.	:	ಜರ್ನಲ್ ಆಫ್ ರಾಯಲ್ ಏಶಿಯಾಟಿಕ್ ಸೊಸೈಟಿ
ಕ್ರಿ.ಪೂ.	:	ಕ್ರಿಸ್ತಪೂರ್ವ
ಕ್ರಿ.ಶ.	:	ಕ್ರಿಸ್ತಶಕ
ಕೆ.ಆಯ್.	:	ಕರ್ನಾಟಕ ಇನ್ಸ್ಕ್ರಿಪ್‌ಶನ್ಸ್
ಶಾ.ಸಂ.	:	ಶಾಸನ ಸಂಖ್ಯೆ
ಪ.ಸಂ.	:	ಪದ್ಯ ಸಂಖ್ಯೆ
ಅದೇ	:	ಮೇಲಿನ ಉಲ್ಲೇಖ
ಪೂರ್ವೋಕ್ತ	:	ಈ ಮೊದಲು ಉಲ್ಲೇಖಿಸಿರುವ ಕೃತಿ/ಲೇಖನ
ಸಂ.	:	ಸಂಪುಟ, ಸಂಚಿಕೆ
(ಸಂ.)	:	ಸಂಪಾದಕರು
(ಅನು.)	:	ಅನುವಾದಕರು
ಪು.	:	ಪುಟ


❖❖❖

ಅನುಬಂಧ : ಎಂಟು

ಕೂಹುಂಡಿನಾಡಿನ ನಕ್ಷೆ ಮತ್ತು ಶಾಸನಗಳು, ದೇವಾಲಯಗಳು, ಬಸದಿಗಳು, ಶಿಲ್ಪಗಳು, ಸ್ಮಾರಕಗಲ್ಲುಗಳ ಆಯ್ದ ಛಾಯಾಚಿತ್ರಗಳು

ಕೂಹುಂಡಿ ನಾಡಿನ ಪ್ರಸ್ತುತ ಪ್ರದೇಶ







ಗೋಕಾಕ ನಗರದಲ್ಲಿರುವ ಬಸದಿಯ ಪಾರ್ಶ್ವನಾಥನ ಮೂರ್ತಿ. ಕ್ರಿಶ. 9–10ನೆಯ ಶತಮಾನ. ಪಾದ ಪೀಠದಲ್ಲಿ ಶಾಸನವಿದೆ.



ಗೋಕಾಕ ತಾಲೂಕಿನ ಕೊಣ್ಣೂರಿನಲ್ಲಿರುವ ಇತ್ತೀಚೆಗೆ ದೊರೆತಿರುವ ಜೈನ ನಿಶಿಧಿ. ಕ್ರಿ.ಶ.ಸು. 10ನೆಯ ಶತಮಾನ.




ಹುಕ್ಕೇರಿ ತಾಲೂಕಿನ ಉಳ್ಳಾಗಡ್ಡಿ ಖಾನಾಪೂರದ ಬಾಹುಬಲಿಯ ಕ್ರಿಶ. 10 ನೆಯ ಶತಮಾನದ ಮೂರ್ತಿ. ಇದರ ಹಿಂಬದಿಯಲ್ಲಿ ಶಾಸನವಿದೆ.



ಹುಕ್ಕೇರಿ ತಾಲೂಕಿನ ಅಮ್ಮಣಗಿಯ ಪಾರ್ಶ್ವನಾಥನ ಬಸದಿ. ಕಾಲ ಕ್ರಿಶ. ಸುಮಾರು 10ನೆಯ ಶತಮಾನ.



ಗೋಕಾಕ ತಾಲೂಕನ ಕುಂದರಗಿಯ ಜೈನ ಬಸದಿಯು ನೆಲಸಮವಾಗಿರುವ ಒಂದು ದೃಶ್ಯ ಕ್ರಿಶ. ಸು.10ನೆಯ ಶತಮಾನ.




ಗಡಹಿಂಗ್ಲಜ ತಾಲೂಕಿನ ಆಜರಾದ ಪಾರ್ಶ್ವನಾಥನ ಬಸದಿ.ಕ್ರಿಶ. ಸು.11ನೆಯ ಶತಮಾನ.



ರಾಯಬಾಗದ ಚಂದ್ರಪ್ರಭಾ ಜಿನಾಲಯದಲ್ಲಿರುವ ಚಂದ್ರಪ್ರಭಾ ಮೂರ್ತಿ




ಹೂಲಿಯ ಪಂಚಲಿಂಗೇಶ್ವರ ದೇವಾಲಯ



ರಟ್ಟರ ಕಾಲದ ಅಂಕರಸನ ಶಾಸನ



ಸವದತ್ತಿಯ ಅಂಕೇಶ್ವರ ದೇವಾಲಯದ ಗರ್ಭಗೃಹ



ಮುಗಳಖೋಡದಲ್ಲಿರುವ ಮಹಾಸತಿಗಲ್ಲು



ಸವದತ್ತಿಯ ಆಧಿನಾಥ ಜಿನಾಲಯದ ಗರ್ಭಗೃಹ



ಹಳೆ ಹತ್ತರಗಿಯ ಮಹಾಸತಿಗಲ್ಲು



ಕೊಣ್ಣೂರಿನ ನಿಷಿಧಿಗಲ್ಲು



ಹುಕ್ಕೇರಿ ತಾಲೂಕಿನ ಶಿರೂರ ಗ್ರಾಮದ ವೀರಗಲ್ಲು



ತಲ್ಲೂರಿನ ಪಾರ್ಶ್ವನಾಥ ಮೂರ್ತಿ



ನೂಲೆ ನಾಡಿನ ನಿಷಿಧಿಗಲ್ಲು



ಗೋಕಾಕ ಪಾಲ್ವದಲ್ಲಿನ ಮಹಾಲಿಂಗೇಶ್ವರ ದೇವಾಲಯ



ಯಕ್ಸಂಬಾ ನೇಮಿನಾಥ ಬಸದಿಯ ಮಾನಸ್ತಂಭ



ಯಕ್ಸಂಬಾ ನೇಮಿನಾಥ ಬಸದಿ




ಹುಕ್ಕೇರಿ ತಾಲೂಕಿನ ಹಳೆ ಹತ್ತರಗಿಯ ಹಾಳೂರಿನ ಶೈವ ವೀರಗಲ್ಲಿನ ಮೇಲಿನ ಶಾಸನವು ಸವೆದಿದೆ.ಕ್ರಿ.ಶ. ಸುಮಾರು 12ನೆಯ ಶತಮಾನ.




ಚಂದಗಡ ತಾಲೂಕಿನ ಕಾನಡಿ ಗ್ರಾಮದಲ್ಲಿರುವ ಶೈವ ವೀರ ಗಲ್ಲು ಕ್ರಿ.ಶ. 12 ನೆಯ ಶತಮಾನ ಇದರಲ್ಲಿರುವ ಐದು ಪಟ್ಟಿಕೆಯಲ್ಲಿ ಶಾಸನವಿಲ್ಲ.



ರಾಯಬಾಗದ ಪಾರ್ಶ್ವನಾಥ ಜಿನಾಲಯದ ಬಲಭಾಗದ ಗೋಡೆಯಲ್ಲಿರುವ ನಾಲ್ಕನೇ ಕಾರ್ತ್ಯವಿರ್ಯನ 1202ರ ಶಾಸನ




ಬೆಳಗಾವಿಯ ಕೋಟೆಯಲ್ಲಿರವ ಪುರಾತನ ಬಸದಿಯ ಛಾಯಾಚಿತ್ರಕಾಲ ಕ್ರಿಶ. 12ನೆಯ ಶತಮಾನ.



ನಾಲ್ಕನೆಯ ಕಾರ್ತ್ಯವೀರ್ಯನ ಕಲ್ಲೋಳ್ಳಿಯ ಶಾಸನ



ಹಣ್ಣಿಕೇರಿ ತ್ರಿಕೂಟ ಬಸದಿ



ನಾಲ್ಕನೆಯ ಕಾರ್ತ್ತವೀರ್ಯನ ಹಣ್ಣಿಕೇರಿ ಶಾಸನ



ನೇಸರಗಿಯ ಹೆಬ್ಬೇಶ್ವರ ದೇವಾಲಯ



ತೇರದಾಳದ ಗೋಂಕ ಜಿನಾಲಯ

